॥ ಶ್ರೀಃ ॥

॥ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ ॥

ಶ್ರೀಮದ್ಭನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

॥ ೨೧ ನೆಯ ಅಧ್ಯಾಯವು ॥

ಓಂ ಜನಾರ್ದನಾಜ್ಞಯಾ ಮಯಸ್ಸಮಸ್ತಕೌತುಕೋತ್ತರಾಮ್ ।
ಸಭಾಂ ವಿಧಾಯ ಭೂಭೃತೇ ದದೌ ಗದಾಂ ವೃಕೋದರೇ ॥೧॥

ಮಯಃ – ಮಯಾಸುರನು, ಜನಾರ್ದನಾಜ್ಞಯಾ – ಶ್ರೀ ಕೃಷ್ಣಪರಮಾತ್ಮನ ಆಜ್ಞೆಯ ಪ್ರಕಾರ, ಸಮಸ್ತ ಕೌತುಕೋತ್ತರಾಂ – ಎಲ್ಲ ಆಶ್ಚರ್ಯಕರ ಸಭೆಗಳಿಗಿಂತಲೂ ಶ್ರೇಷ್ಠವಾದ, ಸಭಾಂ – ಸಭೆಯನ್ನು, ವಿಧಾಯ – ಮಾಡಿ, ಭೂಭೃತೇ - ಧರ್ಮರಾಜನಿಗೆ, ದದೌ – ಕೊಟ್ಟನು. ವೃಕೋದರೇ – ಭೀಮಸೇನದೇವರಿಗೆ, ಗದಾಂ - ಗದಾಯುಧವನ್ನು, ದದೌ – (ಮಯನು) ಕೊಟ್ಟನು. ॥೧॥

ಸ ವಾಯುಧಾರಿತಾಂ ಗದಾಂ ಹಿ ಯೌವನಾಶ್ವಭೂಭೃತಾ ।
ಪ್ರಸಾದತೋಽಸ್ಯ ಲಂಭಿತಾಮುವಾಹ್ಯ ಮೋದಮಾಪ ಹ ॥೨॥

ಸಃ - ಭೀಮಸೇನದೇವರು, ವಾಯುಧಾರಿತಾಂ - ವಾಯುದೇವರಿಂದ ಧರಿಸಲ್ಪಟ್ಟ, ಅಸ್ಯ ಪ್ರಸಾದತಃ – ವಾಯು ದೇವರ ಅನುಗ್ರಹದಿಂದ, ಯೌವನಾಶ್ವಭೂಭೃತಾ - ಮುಚಕುಂದ ರಾಜನಿಂದ, ಲಂಭಿತಾಂ - ಹೊಂದಲ್ಪಟ್ಟ, ಗದಾಂ-ಗದೆಯನ್ನು ಉವಾಹ್ಯ – ಹೊಂದಿ, ಮೋದಂ – ಸಂತೋಷವನ್ನು, ಆಪ ಹ – ಹೊಂದಿದರು. ॥೨॥

ಪುನಶ್ಚ ವತ್ಸರದ್ವಯಂ ಸಮುಷ್ಯ ಕೇಶವೋ ಯಯೌ ।
ಸಮರ್ಚಿತಶ್ಚ ಪಾಂಡವೈರ್ವಿಯೋಜನೇಽಸ್ಯ ಚಾಕ್ಷಮೈಃ ॥೩॥

ಕೇಶವಃ – ಶ್ರೀಕೃಷ್ಣನು, ಪುನಶ್ಚ – (ಇನ್ನೂ ಕೂಡ) ನಂತರವೂ ಕೂಡ, ವತ್ಸರದ್ವಯಂ – ಎರಡು ವರ್ಷ ಪರ್ಯಂತ, ಸಮುಷ್ಯ – ವಾಸಮಾಡಿ, ಅಸ್ಯ ವಿಯೋಜನೇ – ಈ ಶ್ರೀ ಕೃಷ್ಣನನ್ನು ಬೀಳ್ಕೊಡುವದರ ಬಗ್ಗೆ, ಅಕ್ಷಮೈಃ – ಅಶಕ್ತರಾದ, ಪಾಂಡವೈಃ ಚ – ಪಾಂಡವರಿಂದಲೂ, ಸಮರ್ಚಿತಃಸನ್ – ಪೂಜಿತನಾದವನಾಗಿ, ಯಯೌ – ಹೊರಟನು. ॥೩॥

ತತೋ ವಸನ್ ಸ್ವಪುರ್ಯಜಃ ಕ್ವಚಿದ್ರವಿಗ್ರಹೇ ಹರಿಃ ।
ಸದಾರಪುತ್ರಬಾಂಧವಃ ಸ್ಯಮಂತಪಂಚಕಂ ಯಯೌ ॥೪॥

ತತಃ – ಇಂದ್ರಪ್ರಸ್ಥದಿಂದ ಹೋದನಂತರ, ಸ್ವಪುರಿ – ತನ್ನ ದ್ವಾರಕೆಯಲ್ಲಿ, ವಸನ್ – ವಾಸಮಾಡುತ್ತಿದ್ದಂಥ, ಅಜಃ – ಉತ್ಪತ್ತಿ ನಾಶರಹಿತನಾದ, ಹರಿಃ – ಶ್ರೀಕೃಷ್ಣಪರಮಾತ್ಮನು, ಕ್ವಚಿತ್ ರವಿಗ್ರಹೇ – ಒಮ್ಮೆ ಸೂರ್ಯಗ್ರಹಣ ಪರ್ವಕಾಲದಲ್ಲಿ, ಸದಾರಪುತ್ರಬಾಂಧವಃಸನ್ – ಹೆಂಡತಿ ಮಕ್ಕಳು ಬಾಂಧವರಿಂದ ಸಹಿತನಾಗಿ, ಸ್ಯಮಂತ ಪಂಚಕಂ – ಸ್ಯಮಂತ ಪಂಚಕ ಕ್ಷೇತ್ರಕ್ಕೆ (ಕುರುಕ್ಷೇತ್ರಕ್ಕೆ) ಯಯೌ – ಹೋದನು. ॥೪॥

ಪೃಥಾಸುತಾಶ್ಚ ಸರ್ವಶಸ್ಸದಾರಪುತ್ರಮಾತೃಕಾಃ ।
ಕ್ಷಿತೀಶ್ವರಾಶ್ಚ ಸರ್ವಶಃ ಪ್ರಿಯಾಪ್ರಿಯಾ ಹರೇಶ್ಚ ಯೇ ॥೫॥
ತಥೈವ ನಂದಗೋಪಕಸ್ಸದಾರಗೋಪಗೋಪಿಕಃ ।
ಮುನೀಶ್ವರಾಶ್ಚ ಸರ್ವಶಸ್ಸಮೀಯುರತ್ರ ಚ ಪ್ರಜಾಃ ॥೬॥

ಸದಾರಪುತ್ರಮಾತೃಕಾಃ – ಪತ್ನಿ, ಪುತ್ರ, ತಾಯಿ ಎಲ್ಲರಿಂದ ಸಹಿತರಾದ, ಸರ್ವಶಃ ಪೃಥಾಸುತಾಃ – ಕುಂತೀಪುತ್ರರಾದ ಎಲ್ಲ ಪಾಂಡವರು, ಹರೇಃ – ಶ್ರೀಕೃಷ್ಣನಿಗೆ ಪ್ರಿಯಾಪ್ರಿಯಾಃ - ಪ್ರಿಯರಾದ ಅಪ್ರಿಯರಾದ, ಯೇ ಕ್ಷಿತೀಶ್ವರಾಃ - ಯಾವ ರಾಜರೋ; ತೇ ಸರ್ವಶಃ ಅವರು ಎಲ್ಲರೂ, ತಥಾಏವ – ಹಾಗೆಯೇ, ಸದಾರಗೋಪಗೋಪಿಕಃ – ಪತ್ನಿ, ಗೋಪಾಲಕರ್ಮ ಗೋಪಿಕಾಸ್ತ್ರೀಯರು ಇವರಿಂದ ಸಹಿತನಾದ, ನಂದಗೋಪಕಃ – ನಂದಗೋಪನು, ಸರ್ವಶಃ ಮುನೀಶ್ವರಾಃ ಚ–ಎಲ್ಲ ಮುನಿಶ್ರೇಷ್ಠರೂ, ಚ ಮತ್ತಾ ಪ್ರಜಾಃ – ಪ್ರಜೆಗಳು, ಅತ್ರ – ಇಲ್ಲಿಗೆ, ಸಮೀಯುಃ – ಬಂದು ಸೇರಿದರು. ॥೫–೬॥

ಪ್ರಿಯಾಶ್ಚಯೇ ರಮೇಶಿತುರ್ಹರಿಮ್ ತ್ರಿರೂಪಮೇತ್ಯ ತೇ ।
ವಸಿಷ್ಠವೃಷ್ಣಿನಂದನೌ ಭೃಗೂತ್ತಮಂ ತಥಾರ್ಚಯನ್ ॥೭॥

ಯೇ – ಯಾರು, ರಮೇಶಿತುಃ – ಶ್ರೀ ಲಕ್ಷ್ಮೀಪತಿಯಾದ ಹರಿಗೆ, ಪ್ರಿಯಾಃ – ಪ್ರಿಯರಾದವರೋ (ಭಕ್ತರೋ) ತೇ – ಅವರು, ವಸಿಷ್ಠವೃಷ್ಣಿನಂದನೌ – ವಸಿಷ್ಠವೃಷ್ಣಿ ಕುಲದಲ್ಲಿ ಮಕ್ಕಳಾಗಿ ಅವತರಿಸಿದ ಶ್ರೀಕೃಷ್ಣ, ಶ್ರೀ ವೇದವ್ಯಾಸ ಇವರಿಬ್ಬರನ್ನು, ತಥಾ – ಹಾಗೂ, ಭೃಗೂತ್ತಮಂ – ಭೃಗುಕುಲಶ್ರೇಷ್ಠನಾದ ಶ್ರೀ ಪರಶುರಾಮದೇವರನ್ನು, (ಹೀಗೆ) ತ್ರಿರೂಪಂ ಹರಿಂ – ಮೂರು ರೂಪವುಳ್ಳ ಶ್ರೀ ಹರಿಯನ್ನು, ಏತ್ಯ – ಹೊಂದಿ, ಅರ್ಚಯನ್ – ಪೂಜಿಸಿದರು. ॥೭॥

ಕೃತಾರ್ಥತಾಂ ಚ ತೇ ಯಯೂರಮೇಶಪಾದದರ್ಶನಾತ್ ।
ರವಿಗ್ರಹೇ ಸಮಾಪ್ಲುತಾ ಭೃಗೂದ್ವಹೋತ್ಥತೀರ್ಥಕೇ ।೮।

ತೇ – ಅವರು, ರಮೇಶಪಾದದರ್ಶನಾತ್ – ಶ್ರೀಹರಿಯ ಪಾದದರ್ಶನವಾದದ್ದರಿಂದ, ಕೃತಾರ್ಥತಾಂ – ಕೃತಕೃತ್ಯತೆಯನ್ನು, ಯಯುಃ – ಹೊಂದಿದರು, ರವಿಗ್ರಹೇ – ಸೂರ್ಯಗ್ರಹಣದ ಪರ್ವಕಾಲದಲ್ಲಿ, ಭೃಗೂದ್ವಹೋತ್ಥತೀರ್ಥಕೇ - ಭೃಗುಕುಲದಲ್ಲಿ ಅವತರಿಸಿದ ಶ್ರೀ ಪರಶುರಾಮದೇವರಿಂದ ನಿರ್ಮಿತವಾದ ಸ್ಯಮಂತಪಂಚಕ ತೀರ್ಥದಲ್ಲಿ, ಸಮಾಪ್ಲುತಾಃ – ಸ್ನಾನ ಮಾಡಿದರು. ॥೮॥

ಅನುಗ್ರಹಂ ವಿಧಾಯ ಸ ಸ್ವಕೇಷು ಕೇಶವಸ್ತ್ರಿವೃತ್ ।
ಅಯಾಜಯಚ್ಚ ಶೂರಜಂ ಮಖೈಸ್ಸಮಾಪ್ತದಕ್ಷಿಣೈ: ॥೯॥

ತ್ರಿವೃತ್ ಸ: ಕೇಶವ: – ಮೂರು ರೂಪಗಳಿಂದ ಕೂಡಿದ ಆ ಶ್ರೀಕೃಷ್ಣನು, ಸ್ವಕೇಷು – ತನ್ನ ಭಕ್ತರಲ್ಲಿ, ಅನುಗ್ರಹಂ – ಅನುಗ್ರಹವನ್ನು, ವಿಧಾಯ – ಮಾಡಿ, ಸಮಾಪ್ತದಕ್ಷಿಣೈ: – ತುಂಬಾ ದಾನ - ದಕ್ಷಿಣೆಗಳಿಂದ ಕೂಡಿದ, ಮಖೈ: – ಯಜ್ಞಗಳಿಂದ, ಶೂರಜಂ ಚ – ವಸುದೇವನನ್ನೂ ಕೂಡ, ಅಯಾಜಯತ್ - ಯಜ್ಞ ಮಾಡಿದವನನ್ನಾಗಿ ಮಾಡಿದನು. ॥೯॥

ಸಮಸ್ತಲೋಕಸಂಸ್ಥಿತಾತ್ಮಭಕ್ತಿಮಜ್ಜನಸ್ಯ ಸಃ ।
ಸುಕಾಲ ದರ್ಶನಾತ್ಪರಂ ವ್ಯಧಾದನುಗ್ರಹಂ ಹರಿಃ ॥೧೦॥

ಸ: ಹರಿ: - ಆ ಶ್ರೀ ಕೃಷ್ಣ ಪರಮಾತ್ಮನು, ಸಮಸ್ತಲೋಕಸಂಸ್ಥಿತಾತ್ಮಭಕ್ತಿಮಜ್ಜನಸ್ಯ - ಎಲ್ಲ ಲೋಕದಲ್ಲಿರುವ ತನ್ನನ್ನು ತಿಳಿದ ಭಕ್ತರಿಗೆ, ಸುಕಾಲದರ್ಶನಾತ್ - ಪರ್ವಕಾಲದಲ್ಲಿ ತನ್ನ ದರ್ಶನವನ್ನು ಕೊಡುವದರಿಂದ, ಪರಂ ಅನುಗ್ರಹಂ - ಮೋಕ್ಷಪ್ರಾಪಕವಾದ ಶ್ರೇಷ್ಠ ಅನುಗ್ರಹವನ್ನು, ವ್ಯಧಾತ್ - ಮಾಡಿದನು. ॥೧೦॥

ತತೋ ಯಯೌ ಸ್ವಕಾಂ ಪುರೀಮ್ ಪೃಥಾಸುತೈಸ್ಸಹಾಚ್ಯುತಃ ।
ಚಕಾರ ತತ್ರ ಚಾಹ್ನಿಕಂ ಕ್ರತುಂ ಮಹಾಶ್ವಮೇಧಕಮ್ ॥೧೧॥

ತತ: - ಗ್ರಹಣ ಪರ್ವ ಕಾಲದ ನಂತರ, ಅಚ್ಯುತ: - ಶ್ರೀ ಕೃಷ್ಣನು, ಪೃಥಾಸುತೈ: ಸಹ - ಪಾಂಡವರಿಂದ ಕೂಡಿಕೊಂಡು, ಸ್ವಕಾಂ ಪುರೀಂ – ತನ್ನ ದ್ವಾರಕಾ ಪಟ್ಟಣಕ್ಕೆ, ಯಯೌ - ಹೋದನು. ತತ್ರ – ಅಲ್ಲಿ ಆ ಸಮಯದಲ್ಲಿ ಆಹ್ನಿಕಂ - ಒಂದು ಹಗಲಿನಲ್ಲಿ ಮುಗಿಯುವಂಥ, ಮಹಾಶ್ವಮೇಧಕಂ ಕ್ರತುಂ – ಶ್ರೇಷ್ಠವಾದ ಅಶ್ವಮೇಧ ಯಾಗವನ್ನು, ಚಕಾರ - ಮಾಡಿದನು. ॥೧೧॥

ಭಾವಾನುವಾದ

೧ — ೧೧ : ಮಯನು ಶ್ರೀ ಕೃಷ್ಣನ ಅಪ್ಪಣೆಯ ಪ್ರಕಾರ, ಎಲ್ಲ ಅದ್ಭುತಗಳಿಗಿಂತಲೂ ಅದ್ಭುತವಾದ, ಶ್ರೇಷ್ಠ ಸಭಾಗೃಹವನ್ನು ನಿರ್ಮಿಸಿ ಧರ್ಮರಾಜನಿಗೆ ಒಪ್ಪಿಸಿದನು; ಹಾಗೂ ಮೂಲರೂಪೀ ವಾಯುದೇವರದಾದ, ಅವರ ಅನುಗ್ರಹದಿಂದ ಮುಚಕುಂದ ರಾಜನು ಸಂಪಾದಿಸಿದ ಗದಾವನ್ನು ಆ ರಾಜನಿಂದ ತಂದು ಯುವರಾಜರಾದ ಶ್ರೀಭೀಮಸೇನದೇವರಿಗೆ ಕೊಟ್ಟನು. ಆ ಗದೆಯನ್ನು ಪಡೆದ ಶ್ರೀ ಭೀಮಸೇನದೇವರು ತುಂಬಾ ಸಂತೋಷಪಟ್ಟರು. ಇಲ್ಲಿಯೇ ಶ್ರೀ ಕೃಷ್ಣನು ಪಾಂಡವರ ಜೊತೆಗೆ ಎರಡು ವರ್ಷ ವಾಸ ಮಾಡಿ, ದ್ವಾರಕೆಗೆ ಹೊರಟನು. ಅವನನ್ನು ಬೀಳ್ಕೊಡಲು ಮನಸ್ಸಿಲ್ಲದ ಪಾಂಡವರು (ನಿತ್ಯದಲ್ಲಿ ಪೂಜಿಸುತ್ತಾ ಇದ್ದರೂ) ಆಗ ಪುನಃ ವಿಶೇಷವಾಗಿ ಪೂಜಿಸಿದರು. ಅನಂತರ ದ್ವಾರಕೆಗೆ ಬಂದು ವಾಸಿಸಿದ ಶ್ರೀ ಕೃಷ್ಣನು ಒಮ್ಮೆ ಸೂರ್ಯಗ್ರಹಣ ಪರ್ವಕಾಲದಲ್ಲಿ, ಪತ್ನೀಪುತ್ರ ಬಾಂಧವರಿಂದ ಕೂಡಿದವನಾಗಿ ಸ್ಯಮಂತಪಂಚಕ (ಕುರುಕ್ಷೇತ್ರ) ಎಂಬ ಕ್ಷೇತ್ರಕ್ಕೆ ಬಂದನು. ಅಲ್ಲಿಗೆ ಪಾಂಡವರೂ ತಮ್ಮ ತಾಯಿ, ಪತ್ನಿ ಪುತ್ರರಿಂದ ಸಹಿತವಾಗಿ ಬಂದಿದ್ದರು; ಹಾಗೂ ಶ್ರೀ ಕೃಷ್ಣನಿಗೆ ಪ್ರಿಯರಾದ ರಾಜರು ಅಪ್ರಿಯರಾದ ರಾಜರೂ ಕೂಡ ಬಂದಿದ್ದರು. ನಂದಗೋಪನು ತನ್ನ ಗೋಪಾಲಕ ಗೋಪಿಕೆಯರಿಂದ ಕೂಡಿ ಬಂದಿದ್ದನು. ಪ್ರಾಯಃ ಎಲ್ಲ ಮುನಿಗಳೂ ಹಾಗೂ ಇತರ ಪ್ರಜೆಗಳೂ ಬಂದಿದ್ದರು. ಆಗ ಅಲ್ಲಿದ್ದ ಭಗವಂತನ ಮೂರು ಅವತಾರಗಳಾದ ಶ್ರೀ ಕೃಷ್ಣ, ಶ್ರೀ ವೇದವ್ಯಾಸ ಹಾಗೂ ಶ್ರೀ ಪರಶುರಾಮ ರೂಪಗಳನ್ನು

ದರ್ಶನಮಾಡಿದ ಶ್ರೀ ವಿಷ್ಣುಭಕ್ತರು ಸಂತೋಷದಿಂದ ಪೂಜಿಸಿ, ಕೃತಾರ್ಥತೆಯನ್ನು ಹೊಂದಿದರು. ಎಲ್ಲರೂ ಕೂಡ ಗ್ರಹಣ ಕಾಲದಲ್ಲಿ ಶ್ರೀ ಪರಶುರಾಮದೇವರಿಂದ ನಿರ್ಮಿತವಾದ ಸ್ಯಮಂತಪಂಚಕ ತೀರ್ಥದಲ್ಲಿ ಸ್ನಾನ ಮಾಡಿದರು. ಎಲ್ಲೂ ವ್ಯಾಪಿಸಿರುವ ಶ್ರೀ ಕೃಷ್ಣನು ಆ ಪರ್ವಕಾಲದಲ್ಲಿ ದರ್ಶನ ಮಾಡಿದ ತನ್ನ ಭಕ್ತಜನರಿಗೆ ಮೋಕ್ಷಪ್ರಾಪ್ತಿಯ ಅನುಗ್ರಹವನ್ನು ಮಾಡಿದರು. ವಸುದೇವನಿಂದ ಯಾಗಗಳನ್ನು ಮಾಡಿಸಿದನು; ಬಹುದಕ್ಷಿಣೆಗಳನ್ನು ಕೊಡಿಸಿದನು. ಅನಂತರ ಪಾಂಡವರಿಂದ ಸಹಿತವಾಗಿ ದ್ವಾರಕೆಗೆ ಬಂದ ಶ್ರೀಕೃಷ್ಣನು ಒಂದು ಹಗಲಿನಲ್ಲಿಯೇ (ಹನ್ನೆರಡು ಗಂಟೆಗಳಲ್ಲಿ) ಮುಗಿಯುವಂತಹ ಅಶ್ವಮೇಧ ಯಾಗವನ್ನು ಮಾಡಿದನು.

ಹಯಂ ಭೀಮಫಲ್ಗುನಾ ಹರೇ ರಥಂ ಸಮಾಸ್ಥಿತಾಃ ।
ವ್ಯಚಾರಯನ್ ಹರೇಸ್ಸುತಾ ದಿನಸ್ಯ ಪಾದಮಾತ್ರತಃ ॥ ೧೨ ॥

ಸಭೀಮ ಫಲ್ಗುನಾಃ - ಭೀಮಾರ್ಜುನರಿಂದ ಸಹಿತರಾದ, ಹರೇಃ ರಥಂ ಸಮಾಸ್ಥಿತಾಃ - ಶ್ರೀ ಕೃಷ್ಣನ ರಥವನ್ನು ಏರಿದ, ಹರೇಃಸುತಾಃ - ಶ್ರೀಕೃಷ್ಣನ ಮಕ್ಕಳು, ಹಯಂ - ಕುದುರೆಯನ್ನು, ದಿನಸ್ಯ ಪಾದಮಾತ್ರತಃ – ಕಾಲು ಹಗಲಿನೊಳಗೆ, (3 ತಾಸಿನೊಳಗೆ) ವ್ಯಚಾರಯನ್ - ಅಡ್ಡಾಡಿಸಿಕೊಂಡುಬಂದರು. ॥ ೧೨ ॥

ಜಿತಾಸ್ಸಮಸ್ತಭೂಭೃತೋ ಜರಾಸುತಾದಯಃ ಕ್ಷಣಾತ್ ।
ವೃಕೋದರಾದಿಭಿಸ್ತು ತೈರ್ಹಯಶ್ಚ ದಿವ್ಯ ಆಯಯೌ ॥೧೩॥

ವೃಕೋದರಾದಿಭಿಃ ತೈಃ - ಭೀಮಸೇನದೇವರೇ ಪ್ರಧಾನರಕ್ಷಕರಾಗಿಉಳ್ಳ, ಕೃಷ್ಣಪುತ್ರರಿಂದ, ಜರಾಸುತಾದಯಃ - ~~ಜರಾಸಂಧನೇ ಮೊದಲಾದ, ಸಮಸ್ತಭೂಭೃತಃ - ಎಲ್ಲ ರಾಜರು, ಕ್ಷಣಾತ್ - ಅಲ್ಪಸಮಯದಲ್ಲಿಯೇ, ಜಿತಾಃ - ಗೆಲ್ಲಲ್ಪಟ್ಟರು,~~ ದಿವ್ಯಃ ಹಯಶ್ಚ - ಶ್ರೇಷ್ಠವಾದ ಕುದುರೆಯೂ, ಆಯಯೌ - ಬಂದಿತು. ॥೧೩॥

ಹಯಸ್ಸ ಕೃಷ್ಣನಿರ್ಮಿತೋ ದಿನೇನ ಲಕ್ಷಯೋಜನಮ್ ।
ಕ್ಷಮೋ ಹಿ ಗಂತುಮಂಜಸಾದಿನಾಶ್ವಮೇಧಸಿದ್ಧಯೇ ॥೧೪॥

ದಿನೇನ - ಒಂದು ಹಗಲಿನ ಸಮಯದಲ್ಲಿ, ಲಕ್ಷಯೋಜನಂ - ಒಂದುಲಕ್ಷ ಯೋಜನಗಳಷ್ಟು ದೂರವನ್ನು, ಗಂತುಂ - ಹೋಗಲು, ಅಂಜಸಾಕ್ಷಮಃ - ಅತಿ ಸಮರ್ಥವಾದ, ಸಃ ಹಯಃ - ಆ ಕುದುರೆಯು, ದಿನಾಶ್ವಮೇಧಸಿದ್ಧಯೇ - ಒಂದು ಹಗಲಿನಲ್ಲಿ ಮುಗಿಯುವಂಥ ಅಶ್ವಮೇಧಯಾಗದ ಸಿದ್ಧಿಗಾಗಿ, ಕೃಷ್ಣನಿರ್ಮಿತಃ ಹಿ - ಶ್ರೀ ಕೃಷ್ಣನಿಂದಲೇ ನಿರ್ಮಿಸಲ್ಪಟ್ಟಿತ್ತು. ॥ ೧೪ ॥

ಪರಾಶರಾತ್ಮಜೋ ಹರಿರ್ಹರಿಂ ಯದಾ ತ್ವದೀಕ್ಷಯತ್ ।
ತದಾऽऽಸಸಾದ ಹಿ ದ್ವಿಜಸ್ತೃಣಾವಹೋ ರುರಾವ ಚ ॥ ೧೫ ॥

ಪರಾಶರಾತ್ಮಜಃ ಹರಿಃ - ಪರಾಶರ ಋಷಿಗಳ ಮಗನಾದ ವೇದವ್ಯಾಸ ರೂಪೀ ಪರಮಾತ್ಮನು, ಹರಿಂ - ಶ್ರೀಕೃಷ್ಣ ರೂಪೀ ಪರಮಾತ್ಮನನ್ನು, ಯದಾ - ಯಾವಾಗ, ಅದೀಕ್ಷಯತ್ - ಯಜ್ಞದೀಕ್ಷೆಯುಳ್ಳವನನ್ನಾಗಿ ಮಾಡಿದನೋ,

ಸದಾ ಹಿ - ಆಗಲೇ, ತೃಣಾವಹಃ - ತೃಣಾವಹ ಎಂಬ ಹೆಸರುಳ್ಳ, ದ್ವಿಜಃ - ಬ್ರಾಹ್ಮಣನು, ಆಸಸಾದ - ಬಂದನು, ಚ - ಮತ್ತು, ಸುರಾವ - ಅತ್ತನು ॥೧೫॥

ವ್ರಜಂತಿ ಜನ್ಮನೋಽನು ಮೇ ಸದಾ ಸುತಾ ಅದೃಶ್ಯತಾಮ್ ।
ಇತೀರಿತೇಽರ್ಜುನೋಽಬ್ರವೀದಹಂ ಹಿ ಪಾಮಿ ತೇ ಸುತಾನ್ ॥ ೧೬ ॥

ಮೇ ಸುತಾಃ - ನನ್ನ ಮಕ್ಕಳು, ಸದಾ - ಯಾವಾಗಲೂ (ಪ್ರತಿಯೊಂದು ಪ್ರಸವದಲ್ಲಿಯೂ), ಜನ್ಮನಃ ಅನು - ಹುಟ್ಟಿದ ಕ್ಷಣದಲ್ಲಿಯೇ, ಅದೃಶ್ಯತಾಂ ವ್ರಜಂತಿ - ಅದೃಶ್ಯತ್ವವನ್ನು ಹೊಂದುತ್ತವೆ, (ಕಾಣದಂತಾಗುತ್ತವೆ), ಇತಿ ಈರಿತೇಸತಿ- ಈ ರೀತಿ ಬ್ರಾಹ್ಮಣನಿಂದ ಹೇಳಲ್ಪಡುತ್ತಿರಲು, ಅರ್ಜುನಃ - ಅರ್ಜುನನು, ಅಹಂ - ನಾನು, ತೇ ಸುತಾನ್ – ನಿನ್ನ ಮಕ್ಕಳನ್ನು, ಪಾಮಿ ಹಿ – ನಿಶ್ಚಿತವಾಗಿ ರಕ್ಷಿಸುತ್ತೇನೆ, ಇತಿ – ಎಂದು, ಅಬ್ರವೀತ್ - ಹೇಳಿದನು. ॥೧೬॥

ಸಕೃಷ್ಣರಾಮಕಾಷ್ಣಿರ್ಭಿಸ್ಸುತಾ ನ ಮೇಽತ್ರ ಪಾಲಿತಾಃ ।
ಕ್ವ ತೇಽತ್ರ ಶಕ್ತಿರಿತ್ಯಮುಂ ಜಗಾದ ಸೋಽರ್ಜುನಂ ದ್ವಿಜಃ ॥೧೭॥

ಸಕೃಷ್ಣರಾಮಕಾಷ್ಣಿರ್ಭಿಃ - ಶ್ರೀಕೃಷ್ಣ ಬಲರಾಮರಿಂದ ಸಹಿತವಾಗಿ ಕೃಷ್ಣನ ಮಕ್ಕಳಿಂದಲೂ ಕೂಡ, ಮೇ ಸುತಾಃ- ನನ್ನ ಮಕ್ಕಳು, ನ ಪಾಲಿತಾಃ – ರಕ್ಷಿಸಲ್ಪಡಲಿಲ್ಲ, ಅತ್ರ – ಇಂಥ ಪರಿಸ್ಥಿತಿಯಲ್ಲಿ, ತೇ – ನಿನಗೆ, ಅತ್ರ – ಈ ಕಾರ್ಯದ ಬಗ್ಗೆ, ಶಕ್ತಿಃ ಕ್ವ ? – ಎಲ್ಲಿಯ ಶಕ್ತಿಯು ? ಇತಿ – ಎಂದು, ಸಃ ದ್ವಿಜಃ – ಆ ತೃಣಾವಹ ಬ್ರಾಹ್ಮಣನು, ಅಮುಂ ಅರ್ಜುನಂ – ಆ ಅರ್ಜುನನನ್ನು ಕುರಿತು, ಜಗಾದ – ಹೇಳಿದನು. ॥೧೭॥

ತದಾ ಜಗಾದ ಫಲ್ಗುನೋಽಸುರೈರ್ವಿದೂಷಿತಾತ್ಮನಾ ।
ನ ವಿಪ್ರ ತಾದೃಶೋಽಸ್ಮ್ಯಹಂ ಯಥೈವ ಕೇಶವಾದಯಃ ॥೧೮॥

ತದಾ – ಆಗ, ಫಲ್ಗುನಃ – ಅರ್ಜುನನು, ವಿಪ್ರ – ಎಲೋ ಬ್ರಾಹ್ಮಣನೇ, ಅಹಂ – ನಾನು, ಕೇಶವಾದಯಃ ಯಥಾ – ಶ್ರೀಕೃಷ್ಣನೇ ಮೊದಲಾದವರು ಹೇಗೋ, ತಾದೃಶಃ – ಅಂಥವನು, ನ ಅಸ್ಮಿ ಏವ – ಅಲ್ಲವೇ ಅಲ್ಲ. ಇತಿ - ಎಂದು, ಅಸುರೈಃ - ಅಸುರರಿಂದ, ವಿದೂಷಿತಾತ್ಮನಾ - ದೂಷಿತವಾದ ಮನಸ್ಸಿನಿಂದ, ಜಗಾದ - ಹೇಳಿದನು. ॥೧೮॥

ಮಯಾ ಜಿ[redacted] ಹಿ ಖಾಂಡವೇ ಸುರಾಸ್ತಥಾಽಸುರಾನಹಮ್ ।
ನಿವಾತವರ್ಮನಾಮಕಾನ್ವಿಜೇಷ್ಯ ಉತ್ತರತ್ರ ಹಿ ॥೧೯॥

ಹಿ – ಏಕೆಂದರೆ, ಮಯಾ – ನನ್ನಿಂದ, ಖಾಂಡವೇ – ಖಾಂಡವ ವನದಲ್ಲಿ, ಸುರಾಃ – ದೇವತೆಗಳು, ಜಿತಾಃ – ಗೆಲ್ಲಲ್ಪಟ್ಟಿದ್ದಾರೆ. ತಥಾ – ಹಾಗೂ, ಉತ್ತರತ್ರ – ಮುಂದೆ, ಅಹಂ – ನಾನು, ನಿವಾತವರ್ಮನಾಮಕಾನ್ – ನಿವಾತಕವಚ ಎಂಬ ಹೆಸರುಳ್ಳ, ಅಸುರಾನ್ – ರಾಕ್ಷಸರನ್ನು, ವಿಜೇಷ್ಯೇಹಿ – ಖಂಡಿತವಾಗಿ ಗೆಲ್ಲುವೆನು. ॥೧೯॥

ಉದೀರ್ಯ ಚೇತಿ ಕೇಶವಂ ಸ ಊಚಿವಾನ್ ವ್ರಜಾಮ್ಯಹಮ್ ।
ಇತೀರಿತೋಽವದದ್ಧರಿಸ್ತವಾತ್ರ ಶಕ್ಯತೇ ನು ಕಿಮ್ ॥೨೦॥

ಇತಿ – ಈ ರೀತಿ, ಉದೀರ್ಯ - (ಬ್ರಾಹ್ಮಣನಿಗೆ) ಹೇಳಿ, ಸಃ – ಆ ಅರ್ಜುನನು, ಕೇಶವಂ – ಶ್ರೀ ಕೃಷ್ಣನನು ಕುರಿತು, ಅಹಂ - ನಾನು, ವ್ರಜಾಮಿ - ಹೊರಡುತ್ತೇನೆ, ಇತಿ - ಎಂದು, ಊಚಿವಾನ್ - ಹೇಳಿದನು, ಇತಿ - ಹೀಗೆ ಈರಿತಃ - ಹೇಳಿಸಿಕೊಳ್ಳಲ್ಪಟ್ಟ, ಹರಿಃ - ಶ್ರೀಕೃಷ್ಣಪರಮಾತ್ಮನು, ಅತ್ರ - ಈ ಕಾರ್ಯದ ಬಗ್ಗೆ, ತವ - ನಿನಗೆ, ಕಿಂ ಶಕ್ಯತೇ ನು - ಶಕ್ಯವಾಗಬಹುದೇನು ? ಇತಿ - ಎಂದು, ಅವದತ್ - ಹೇಳಿದನು. ॥೨೦॥

ವಿಲಜ್ಜಮಾನಮೀಕ್ಷ್ಯ ತಂ ಜಗಾದ ಕೇಶವೋಽರಿಹಾ ।
ವ್ರಜೇತಿ ಸ ಪ್ರತಿಶ್ರವಂ ಚಕಾರಹಾಪ್ಯರಕ್ಷಣೇ ॥೨೧॥

ವಿಲಜ್ಜಮಾನಂ ತಂ - (ತಾನು ಮಾಡಿದ ಪ್ರತಿಜ್ಞೆಯು ಪೂರ್ಣವಾದೀತೋ ಇಲ್ಲವೋ ಎಂದು) ಲಜ್ಜಾಪಡತಕ್ಕ ಆ ಅರ್ಜುನನನ್ನು, ಈಕ್ಷ್ಯ - ನೋಡಿ, ಅರಿಹಾ ಕೇಶವಃ - ಶತ್ರು ಸಂಹಾರಕನಾದ ಶ್ರೀ ಕೃಷ್ಣನು, ವ್ರಜ ಇತಿ - ಹೊರಡು ಎಂದು, ಜಗಾದ - ಹೇಳಿದನು. ಸಃ ಅಪಿ - ಆ ಅರ್ಜುನನಾದರೂ, ಅರಕ್ಷಣೇ - ತನಗೆ ರಕ್ಷಣೆ ಮಾಡಲಾಗದ ಪಕ್ಷದಲ್ಲಿ, ಪ್ರತಿಶ್ರವಂ ಚ - (ಅಗ್ನಿಪ್ರವೇಶದ) ಪ್ರತಿಜ್ಞೆಯನ್ನೂ ಕೂಡ, ಚಕಾರ – ಮಾಡಿದನು. ॥೨೧॥

ಅವ : ಆ ಪ್ರತಿಜ್ಞೆಯನ್ನೇ ತೋರಿಸುತ್ತಾರೆ; ಮತ್ತು ಶ್ರೀಕೃಷ್ಣನು ಅರ್ಜುನನ ಜೊತೆಗೆ ಯಾರನ್ನು ಕಳಿಸಿದ ? ಯಾರನ್ನು ಕಳಿಸಲಿಲ್ಲ ? ಅದಕ್ಕೆಲ್ಲ ಏನು ಕಾರಣ ? ಇದಕ್ಕೆಲ್ಲ ಮುಂದಿನ ಏಳು ಶ್ಲೋಕಗಳಿಂದ ನಿರ್ಣಯ ಕೊಡುತ್ತಾರೆ.

ವಹ್ನಿಂ ಪ್ರವೇಷ್ಟ್ಯೇ ಶಕ್ತಶ್ಚೇದಿತ್ಯುಕ್ತ್ವಾ ಸರ್ವಯಾದವೈಃ ।
ಯಯೌ ನ ರಾಮಪ್ರದ್ಯುಮ್ನಾನಿರುದ್ಧಂ ಚ ಕೇಶವಃ ॥೨೨॥

ನ್ಯಯೋಜಯತ್ತತ್ಸಾಹಾಯ್ಯೇ ಯಶಸ್ತೇಷ್ವಭಿರಕ್ಷಿತುಮ್ ।
ಪ್ರಿಯೋ ಹಿ ನಿತರಾಂ ರಾಮಃ ಕೃಷ್ಣಸ್ಯಾನು ಚ ತಂ ಸುತಃ ॥೨೩॥

ಅನಿರುದ್ಧಃ ಕಾಷ್ಣ್ರ್ಯಮನು ಪ್ರದ್ಯುಮ್ನಾದ್ಯೋಽಜನಿಷ್ಟ ಹಿ ।
ರುಕ್ಮಿಪುತ್ರ್ಯಾಂ ರುಕ್ಮವತ್ಯಾಮೂಹೃತಾಯಾಂ ಸ್ವಯಂವರೇ ॥೨೪॥

ರತಿರೇವ ಹಿ ಯಾ ತಸ್ಯಾಂ ಜಾತೋಽಸೌ ಕಾಮನಂದನಃ ।
ಪೂರ್ವಮಪ್ಯನಿರುದ್ಧಾಖ್ಯೋ ವಿಷ್ಣೋಸ್ತನ್ನಾಮ್ನ ಏವ ಚ ॥೨೫॥

ಆವೇಶಯುಕ್ತೋ ಬಲವಾನ್ ರೂಪವಾನ್ಸರ್ವಶಾಸ್ತ್ರವಿತ್ ।
ತಸ್ಮಾತ್ತಾಂಸ್ತ್ರೀನೃತೇ ಕೃಷ್ಣಃ ಪಾರ್ಥಸಾಹಾಯ್ಯಕಾರಣಾತ್ ॥೨೬॥

ನ್ಯಯೋಜಯತ್ಪೌತಿಕಾಲೇ ಬ್ರಾಹ್ಮಣ್ಯಾಸ್ಸ ಚ ಫಲ್ಗುನಃ ।
ಅಸ್ಪೃಶ್ಚಕಾರ ದಿಗ್ಬಂಧಂ ಕುಮಾರೋಽಥಾಪಿ ತತ್ಕ್ಷಣಾತ್ ॥೨೭॥

ಅದರ್ಶನಂ ಯಯೌ ಪಾರ್ಥೋ ವಿಷಣ್ಣಸ್ಸಹ ಯಾದವೈಃ ।
ಅಧಿಕ್ಷಿಪ್ತೋ ಬ್ರಾಹ್ಮಣೇನ ಯಯೌ ಯತ್ರ ಶ್ರಿಯಃಪತಿಃ ॥೨೮॥

ಅಶಕ್ತಃ ಚೇತ್ - ಈ ಬ್ರಾಹ್ಮಣನ ಮಗುವನ್ನು ರಕ್ಷಿಸಲು ಅಸಮರ್ಥನಾದರೆ, ವಹ್ನಿಂಪ್ರವೇಕ್ಷ್ಯೇ - ಅಗ್ನಿಯನ್ನು ಪ್ರವೇಶಿಸುವೆನು, ಇತಿ ಉಕ್ತ್ವಾ - ಎಂದು ಪ್ರತಿಜ್ಞಾಪೂರ್ವಕ ಹೇಳಿ, ಸರ್ವಯಾದವೈಃ - ಎಲ್ಲ ಯಾದವರಿಂದ (ಮುಂದೆ ಹೇಳುವ ಕೆಲವರನ್ನು ಬಿಟ್ಟು), ಕೂಡಿಕೊಂಡು, ಯಯೌ - ಹೊರಟನು. ಕೇಶವಃ - ಶ್ರೀಕೃಷ್ಣನು, ರಾಮಪ್ರದ್ಯುಮ್ನೌ - ಬಲರಾಮ ಪ್ರದ್ಯುಮ್ನರನ್ನು, ಚ - ಮತ್ತು, ಅನಿರುದ್ಧಂ - ಅನಿರುದ್ಧನನ್ನು, ತೇಷು – ಅವರ ಬಗ್ಗೆ, ಯಶಃ - ಕೀರ್ತಿಯನ್ನು, ಅಭಿರಕ್ಷಿತುಂ – ರಕ್ಷಿಸುವದಕ್ಕಾಗಿ, ತತ್ಸಾಹಾಯ್ಯೇ – ಅರ್ಜುನನಿಗೆ ಸಹಾಯ ಮಾಡುವ ಕಾರ್ಯದಲ್ಲಿ, ನ ನ್ಯಯೋಜಯತ್ – ತೊಡಗಿಸಲಿಲ್ಲ, ಕೃಷ್ಣಸ್ಯ – ಶ್ರೀ ಕೃಷ್ಣನಿಗೆ, ರಾಮಃ – ಬಲರಾಮನು, ಹಿ – ಯಾವ ಕಾರಣದಿಂದ, ನಿತರಾಂ ಪ್ರಿಯಃ – ಅತ್ಯಂತ ಪ್ರೀತಿ ಪಾತ್ರನೋ, ತಂ ಅನು – ಆ ಬಲರಾಮನ ನಂತರ, ಸುತಃ–ಶ್ರೀಕೃಷ್ಣಪುತ್ರನಾದ ಪ್ರದ್ಯುಮ್ನನು ಪ್ರಿಯನೋ, ಯಃ – ಯಾವನು, ಸ್ವಯಂವರೇ – ಸ್ವಯಂವರದಲ್ಲಿ, ಆಹೃತಾಯಾಂ – ತರಲ್ಪಟ್ಟ, ರುಕ್ಮಿಪುತ್ರ್ಯಾಂ – ರುಕ್ಮಿಯ ಮಗಳಾದ, ರುಕ್ಮವತ್ಯಾಂ – ರುಕ್ಮವತೀಯಲ್ಲಿ, ಪ್ರದ್ಯುಮ್ನಾತ್ - ಶ್ರೀ ಕೃಷ್ಣ ಪುತ್ರನಾದ ಪ್ರದ್ಯುಮ್ನನಿಂದ, ಅಜನಿಷ್ಟ- ಅವತರಿಸಿದನೋ, ಸಃ ಅನಿರುದ್ಧಃ - ಆ ಅನಿರುದ್ಧನು, ಕಾಷ್ಣ್ರಿಂ ಅನು - ಪ್ರದ್ಯುಮ್ನನ ನಂತರದಲ್ಲಿ (ಶ್ರೀಕೃಷ್ಣನಿಗೆ ಪ್ರಿಯನೋ) ಯಾ – ಯಾವ ರುಕ್ಮವತಿಯು, ರತಿಃ ಏವ – ಕಾಮನ ಪತ್ನಿಯಾದ ರತಿಯ ಅವತಾರಳೇ ಆಗಿದ್ದಾಳೋ, ತಸ್ಯಾಂ – ಅವಳಲ್ಲಿ, ಪೂರ್ವಮಪಿ ಅನಿರುದ್ಧಾಖ್ಯಃ – ಮೊದಲೂ ಮೂಲರೂಪದಲ್ಲಿಯೂ ಅನಿರುದ್ಧ ಎಂಬ ಹೆಸರುಳ್ಳ, ಅಸೌ ಕಾಮ ನಂದನಃ – ಆ ಕಾಮಪುತ್ರನು, ಜಾತಃ - ಅವತರಿಸಿದನು, ಚ - ಮತ್ತು, ತನ್ನಾಮ್ನಃ ಏವ ವಿಷ್ಣೋಃ - ಅದೇ ಹೆಸರುಳ್ಳ (ಅನಿರುದ್ಧರೂಪೀ) ಪರಮಾತ್ಮನ, ಆವೇಶಯುಕ್ತಃ – ಆವೇಶದಿಂದ ಕೂಡಿದವನು, ಬಲವಾನ್ – ಬಲಿಷ್ಠನು, ರೂಪವಾನ್ - ಸುಂದರನು, ಸರ್ವಶಾಸ್ತ್ರವಿತ್ – ಎಲ್ಲ ಶಾಸ್ತ್ರಗಳನ್ನು ಬಲ್ಲವನು (ಆಗಿದ್ದನು), ತಸ್ಮಾತ್ – ಹೀಗೆ ಬಲರಾಮ, ಪ್ರದ್ಯುಮ್ನ, ಹಾಗೂ ಅನಿರುದ್ಧ ಇವರು ಶ್ರೀಕೃಷ್ಣನಿಗೆ ಪ್ರಿಯರಾದ್ದರಿಂದ, ಕೃಷ್ಣಃ – ಶ್ರೀ ಕೃಷ್ಣನು, ತಾನ್ ತ್ರೀನ್ ಋತೇ – ಆ ಮೂರು ಮಂದಿಯನ್ನು ಬಿಟ್ಟು ಉಳಿದವರನ್ನು, ಪಾರ್ಥಸಾಹಾಯ್ಯಕಾರಣಾತ್ – ಅರ್ಜುನನಿಗೆ ಸಹಾಯ ಮಾಡುವ ಕಾರಣದಿಂದ, ನ್ಯಯೋಜಯತ್ – ತೊಡಗಿಸಿದನು. ~~ಸ ಚ ಫಲ್ಗುನಃ – ಆ ಅರ್ಜುನನಾದರೂ, ಬ್ರಾಹ್ಮಣ್ಯಾಃ – ಬ್ರಾಹ್ಮಣ ಪತ್ನಿಯ,~~ ಸೂತಿಕಾಲೇ – ಪ್ರಸವ ಸಮಯದಲ್ಲಿ, ಅಸ್ತ್ರೈಃ – ಅಸ್ತ್ರಗಳಿಂದ, ದಿಗ್ಬಂಧಂ - ದಿಗ್ಬಂಧನವನ್ನು, ಚಕಾರ – ಮಾಡಿದನು, ಅಥಾಪಿ - ಆದರೂ ಕೂಡ, ಕುಮಾರಃ ಕುಮಾರನು, ತತ್ಕ್ಷಣಾತ್–ಅದೇ ಕ್ಷಣದಲ್ಲಿಯೇ, ಅದರ್ಶನಂ–ಕಾಣದಿರುವಿಕೆಯನ್ನು, ಯಯೌ – ಹೊಂದಿದನು, ಪಾರ್ಥಃ – ಅರ್ಜುನನು, ಬ್ರಾಹ್ಮಣೇನ ಅಧಿಕ್ಷಿಪ್ತಃ ಸನ್ – ಬ್ರಾಹ್ಮಣನಿಂದ ಬೈಯಿಸಿಕೊಳ್ಳಲ್ಪಟ್ಟವನಾಗಿ, ಯತ್ರ - ಯಾವಲ್ಲಿ, ಶ್ರಿಯಃ ಪತಿಃ – ಶ್ರೀಕೃಷ್ಣನು ಇರುವನೋ, (ತತ್ರ–ಅಲ್ಲಿಗೆ). ಯಯೌ – ಹೋದನು.

॥ ೨೨-೨೩-೨೪ ೨೫–೨೬-೨೭-೨೮ ॥

ವಹ್ನಿಂ ವಿವಕ್ಷಂತಮಮುಂ ನಿವಾರ್ಯ ಯಯೌ ಸವಿಪ್ರಸ್ಸಹಫಲ್ಗುನೋ ಹರಿಃ ॥
ಉದೀಮಮುದೀಚೀಂ ಬೃಹತಾ ರಥೇನ ಕ್ಷಣೇನ ತೀತ್ವೈವ ಚ ಸಪ್ತ ವಾರಿಧೀನ್ ॥೨೯॥

ಹರಿಃ – ಶ್ರೀ ಕೃಷ್ಣನು, ವಹ್ನಿಂ – ಅಗ್ನಿಯನ್ನು, ವಿವಕ್ಷಂತಂ – ಪ್ರವೇಶಿಸಲು ಇಚ್ಛಿಸುತಕ್ಕ, ಅಮುಂ – ಆ ಅರ್ಜುನನನ್ನು, ನಿವಾರ್ಯ – ತಡೆದು, ಸವಿಪ್ರಃ ಸಹಫಲ್ಗುನಃಸನ್ – ಆ ಬ್ರಾಹ್ಮಣ ಹಾಗೂ ಅರ್ಜುನನಿಂದ ಸಹಿತನಾಗಿ ಬೃಹತಾ ರಥೇನ – ದೊಡ್ಡದಾದ ರಥದಿಂದ, ಕ್ಷಣೇನ – ಅಲ್ಪಸಮಯದಲ್ಲಿಯೇ, ಸಪ್ತವಾರಿಧೀನ್ ತೀತ್ವಾ ಏವ – ಏಳು ಸಮುದ್ರಗಳನ್ನು ದಾಟಿಯೇ, ಉದೀಚೀಂ ಆಶಾಂ – ಉತ್ತರದಿಕ್ಕಿಗೆ, ಯಯೌ – ಹೋದನು. ॥೨೯॥

ದದುಶ್ಚ ಮಾರ್ಗಂ ಗಿರಯೋಽಬ್ಧಯಸ್ತಥಾ ವಿದಾರ್ಯ ಚಕ್ರೇಣ ತಮೋಂಽಧಮೀಶಃ ।
ಘನೋದಕಂ ಚಾಪ್ಯತಿತೀರ್ಯ ತತ್ರ ದದರ್ಶಧಾಮಸ್ವಮನಂತವೀರ್ಯಃ ॥೩೦॥

ಗಿರಯಃ – ಪರ್ವತಗಳು, ತಥಾ - ಹಾಗೂ, ಅಬ್ಧಯಃ ಚ – ಸಮುದ್ರಗಳೂ, ಮಾರ್ಗಂ – ಮಾರ್ಗವನ್ನು, ದದುಃ – ಕೊಟ್ಟವು. ಈಶಃ – ಸಮರ್ಥನಾದ, ಅನಂತವೀರ್ಯಃ – ಅಪರಿಮಿತ ಪರಾಕ್ರಮಿಯಾದ ಶ್ರೀಕೃಷ್ಣನು, ಚಕ್ರೇಣ – ಚಕ್ರದಿಂದ, ಅಂಧಂ ತಮಃ – ಗಾಢಾಂಧಕಾರವನ್ನು, ವಿದಾರ್ಯ – ಸೀಳಿ, (ನಾಶಮಾಡಿ), ಚ – ಮತ್ತು, ಘನೋದಕಂ ಚ – ಘನೋದಕವನ್ನೂ ಕೂಡ, ಅತಿತೀರ್ಯ ಅಪಿ – ದಾಟಿಯೇ, ತತ್ರ – ಅಲ್ಲಿ, ಸ್ವಂ ಧಾಮ – ತನ್ನ ಸ್ಥಾನವಾದ ಅನಂತಾಸನವನ್ನು, ದದರ್ಶ – ನೋಡಿದನು. ॥೩೦॥

ಸಂಸ್ಥಾಪ್ಯ ದೂರೇ ಸರಥಂ ಸವಿಪ್ರಂ ಪಾರ್ಥಂ ಸ್ವರೂಪೇ ದ್ವಿಚತುಷ್ಕಬಾಹೌ ।
ಸಮಸ್ತರತ್ನೋಜ್ವಲದಿವ್ಯಭೂಷಣೇ ವಿವೇಶ ನಿತ್ಯೋರುಗುಣಾರ್ಣವೇ ಪ್ರಭುಃ ॥೩೧॥

ಸಹಸ್ರಮೂರ್ಧನ್ಯುರುಶೇಷಭೋಗ ಆಸೀನರೂಪೇಽಮಿತಸೂರ್ಯದೀಧಿತೌ ।
ರಮಾಸಹಾಯೇ ತಟಿದುಜ್ವಲಾಂಬರೇ ಮುಕ್ತೈರ್ವಿರಿಂಚಾದಿಭಿರರ್ಚಿತೇಸದಾ ॥೩೨॥

(ತತ್ರ – ಅಲ್ಲಿ), ಪ್ರಭುಃ – ಸಮರ್ಥನಾದ ಶ್ರೀಕೃಷ್ಣನು, ಸರಥಂ – ರಥದಿಂದ ಸಹಿತನಾದ, ಸವಿಪ್ರಂ – ಬ್ರಾಹ್ಮಣನಿಂದ ಸಹಿತನಾದ, ಪಾರ್ಥಂ – ಅರ್ಜುನನನ್ನು, ದೂರೇ - ದೂರದಲ್ಲಿ, ಸಂಸ್ಥಾಪ್ಯ – ನಿಲ್ಲಿಸಿ, ದ್ವಿಚತುಷ್ಕ ಬಾಹೌ – ಎಪ್ಪತ್ತಭುಜಗಳುಳ್ಳ, ಸಮಸ್ತರತ್ನೋಜ್ವಲದಿವ್ಯಭೂಷಣೇ – ರತ್ನಗಳಿಂದ ಶೋಭಿಸುವ, ಶ್ರೇಷ್ಠವಾದ ಎಲ್ಲ ಆಭರಣಗಳುಳ್ಳ, ನಿತ್ಯೋರುಗುಣಾರ್ಣವೇ – ಯಾವಾಗಲೂ ಉತ್ಕೃಷ್ಟ ಗುಣಪೂರ್ಣವಾದ, ಸಹಸ್ರಮೂರ್ಧನಿ - ಸಹಸ್ರಫಣಗಳುಳ್ಳ, ಉರುಶೇಷಭೋಗೇ - ದೊಡ್ಡದಾದ ಶೇಷದೇವರ ಶರೀರದಲ್ಲಿ, ಆಸೀನರೂಪೇ – ವಿರಾಜಿಸುತಕ್ಕಂಥ, ಅಮಿತಸೂರ್ಯದೀಧಿತೌ - ಅಪರಿಮಿತ ಸೂರ್ಯಪ್ರಕಾಶದಂತೆ ಪ್ರಕಾಶವುಳ್ಳ, ರಮಾಸಹಾಯೇ–ಶ್ರೀ ಲಕ್ಷ್ಮೀದೇವಿಯಿಂದ ಸಹಿತವಾದ, ತಟಿದುಜ್ವಲಾಂಬರೇ- ಮಿಂಚಿನಂತೆ ಹೊಳೆಯುವ ಪೀತಾಂಬರವುಳ್ಳ, ಸದಾ - ಯಾವಾಗಲೂ, ಮುಕ್ತೈಃ ವಿರಿಂಚಾದಿಭಿಃ – ಮುಕ್ತರಾದ ಬ್ರಹ್ಮಾದಿ ದೇವತೆಗಳಿಂದ, ಅರ್ಚಿತೇ – ಪೂಜಿಸಲ್ಪಡತಕ್ಕ, ಸ್ವರೂಪೇ – ತನ್ನ ರೂಪದಲ್ಲಿ, ವಿವೇಶ – ಪ್ರವೇಶಿಸಿದನು. ॥೩೧-೩೨॥

ಸ್ಥಿತ್ವೈಕರೂಪೇಣ ಮುಹೂರ್ತಮೀಶ್ವರೋ ವಿನಿರ್ಯಯೌ ವಿಪ್ರಸುತಾನ್ಪ್ರಗೃಹ್ಯ ।
ಸುನಂದನಂದಾದಯ ಏವ ಪಾರ್ಷದಾಸ್ತೇ ವೈಷ್ಣವಾ ಭೂಮಿತಲೇ ಪ್ರಜಾತಾಃ ॥೩೩॥

ಈಶ್ವರಃ – ಸರ್ವನಿಯಾಮಕನಾದ ಶ್ರೀಕೃಷ್ಣನು, ಮುಹೂರ್ತಂ – ಎರಡು ಘಟಿಕಾಗಳಪರ್ಯಂತ, ಏಕರೂಪೇಣ– ಒಂದಾಗಿ, ಸ್ಥಿತ್ವಾ – ನಿಂತು, ವಿಪ್ರಸುತಾನ್ – ಬ್ರಾಹ್ಮಣನ ಮೃತಮಕ್ಕಳನ್ನು, ಪ್ರಗೃಹ್ಯ – ಕರೆದುಕೊಂಡು, ವಿನಿರ್ಯಯೌ– ಆ ರೂಪದಿಂದ ಹೊರಹೊರಟನು. ವೈಷ್ಣವಾಃ ಪಾರ್ಷದಾಃ – (ಶ್ರೀ ವಿಷ್ಣುಭಕ್ತರಾದ) ವಿಷ್ಣುಸಂಬಂಧಿಗಳಾದ, ಪಾರ್ಷದ (ಸೇವಕ) ರಾದ, ಸುನಂದನಂದಾದಯಃ ಏವ - ಸುನಂದ, ನಂದ ಮೊದಲಾದವರೇ, ಭೂಮಿತಲೇ - ಭೂಮಿಯಲ್ಲಿ, ಪ್ರಜಾತಾಃ– (ಬ್ರಾಹ್ಮಣಪುತ್ರರಾಗಿ) ಹುಟ್ಟಿದ್ದರು. ॥೩೩॥

ದರ್ಪಂ ನಿಹಂತುಂ ಹರಿರರ್ಜುನಸ್ಯ ಸಮಾನಯದ್ವಿಪ್ರಸುತಾನ್ಪರೇಶಃ ।
ಪ್ರೀತಿರ್ಮಹತ್ಯೇವ ಯತೋಽರ್ಜುನೇ ಹರೇಸ್ಸಂಶಿಕ್ಷಯಾಮಾಸ ತತಸ್ಸ ಏನಮ್ ॥೩೪॥

ಪರೇಶಃ - ಉತ್ತಮರಾದ ಶ್ರೀ ರಮಾ ಬ್ರಹ್ಮಾದಿಗಳಿಗೂ ನಿಯಾಮಕನಾದ, ಹರಿಃ- ಶ್ರೀ ಕೃಷ್ಣನು, ಅರ್ಜುನಸ್ಯ- ಅರ್ಜುನನ, ದರ್ಪಂ - ಅಹಂಕಾರವನ್ನು, ನಿಹಂತುಂ - ಖಂಡಿಸಲು, ವಿಪ್ರಸುತಾನ್ - ಬ್ರಾಹ್ಮಣನ ಮಕ್ಕಳನ್ನು, ಸಮಾನಯತ್ - ಕರೆದುಕೊಂಡು ಬಂದನು, ಯತಃ - ಯಾವ ಕಾರಣದಿಂದ, ಹರೇಃ - ಶ್ರೀ ಕೃಷ್ಣನಿಗೆ, ಅರ್ಜುನೇ - ಅರ್ಜುನನಲ್ಲಿ, ಮಹತೀ ಪ್ರೀತಿಃ - ಬಹಳ ಪ್ರೀತಿ ಇದೆಯೋ, ತತಃ ಏವ - ಆ ಕಾರಣದಿಂದಲೇ, (ಅಹಂಕಾರ ಬಂದು ಅರ್ಜುನನು ಅಮಾರ್ಗಿಯಾಗಬಾರದೆಂಬ) ಅನುಗ್ರಹ ಬುದ್ಧಿಯಿಂದಲೇ, ಸಃ - ಆ ಶ್ರೀಕೃಷ್ಣನು, ಏನಂ - ಈ ಅರ್ಜುನನನ್ನು, ಸಂಶಿಕ್ಷಯಾಮಾಸ - ಅಹಂಕಾರಪಡದಿರುವಂತೆ ಪಾಠ ಕಲಿಸಿದನು. ॥ ೩೪ ॥

ಅಪ್ರಾಕೃತಾತ್ಸದನಾದ್ವಾಸುದೇವೋ ನಿಸ್ಸೃತ್ಯ ಸೂರ್ಯಾಧಿಕಲಕ್ಷದೀಧಿತೇಃ ।
ರಥಂ ಸಮಾರುಹ್ಯ ಸಪಾರ್ಥವಿಪ್ರ ಆಗಾತ್ಸುತಾಂಶ್ಚೈವ ದದೌ ದ್ವಿಜಾಯ ॥೩೫॥

ಸೂರ್ಯಾಧಿಕಲಕ್ಷದೀಧಿತೇಃ – ಲಕ್ಷ ಸಂಖ್ಯೆ (ಯನ್ನೂ ಮೀರಿದ) ಗಿಂತಲೂ ಹೆಚ್ಚು ಸೂರ್ಯ ಪ್ರಕಾಶಕ್ಕಿಂತಲೂ ಹೆಚ್ಚು ಪ್ರಕಾಶವುಳ್ಳ, ಅಪ್ರಾಕೃತಾತ್ - ಪ್ರಕೃತಿ ನಿರ್ಮಿತವಲ್ಲದ, ಸದನಾತ್ - ಸ್ಥಾನದಿಂದ, ವಾಸುದೇವಃ - ಶ್ರೀ ಕೃಷ್ಣನು, ನಿಸ್ಸೃತ್ಯ – ಹೊರಬಂದು, ರಥಂ — ರಥವನ್ನು, ಸಮಾರುಹ್ಯ — ಏರಿ, ಸಪಾರ್ಥವಿಪ್ರಃ ಸನ್ — ಅರ್ಜುನ ಹಾಗೂ ಬ್ರಾಹ್ಮಣರಿಂದ ಸಹಿತನಾಗಿ, ಆಗಾತ್ – ಬಂದನು. ಚ – ಮತ್ತು, ಸುತಾನ್ – ಮಕ್ಕಳನ್ನು, ದ್ವಿಜಾಯ ಏವ-ಬ್ರಾಹ್ಮಣನಿಗೇ, ದದೌ — ಕೊಟ್ಟನು. ॥೩೫॥

ಲೋಕಶಿಕ್ಷಾರ್ಥಮೇವಾಸೌ ಪ್ರಾಯಶ್ಚಿತ್ತಂ ಚ ಚಾಲನೇ ।
ಚಕ್ರೇ ಸಾರ್ಧಮುಹೂರ್ತೇನ ಸಮಾಗಮ್ಯ ಪುನರ್ಮಖಮ್ ॥೩೬॥

ಅಸೌ – ಆ ಶ್ರೀ ಕೃಷ್ಣ ಪರಮಾತ್ಮನು, ಸಾರ್ಧಮುಹೂರ್ತೇನ – ಮೂರು ಘಟಿಕಾಗಳ ಸಮಯದಲ್ಲಿಯೇ, ಮಖಮ್ - ಯಜ್ಞಸ್ಥಳಕ್ಕೆ, ಪುನಃ ಸಮಾಗಮ್ಯ - ಮತ್ತೆ ಬಂದು, ಚಾಲನೇ - ಯಜ್ಞದೀಕ್ಷಿತನಾದಮೇಲೆ ಯಜ್ಞವನ್ನು ಬಿಟ್ಟು ಅಡ್ಡಾಡಿದ್ದಕ್ಕಾಗಿ, ಪ್ರಾಯಶ್ಚಿತ್ತಂ – ದೋಷಪರಿಹಾರಕವಾದ ಕರ್ಮವನ್ನು, ಲೋಕಶಿಕ್ಷಾರ್ಥಮೇವ – ಲೋಕದ ಜನರಿಗೆ ತಿಳಿಸುವದಕ್ಕಾಗಿಯೇ (ಹೊರತು ತನಗೆ ದೋಷ ಬಂದಿದೆ ಅದರ ಪರಿಹಾರಕ್ಕಾಗಿ ಎಂದು ಅಲ್ಲ. ಏಕೆಂದರೆ ವಿಧಿಬಂಧನಗಳಿಲ್ಲದ ಅವನಿಗೆ ದೋಷದ ಪ್ರಶ್ನೆಯೇ ಇಲ್ಲ.) ಚಕ್ರೇ – ಮಾಡಿದನು. ॥೩೬॥

ಭಾವಾನುವಾದ — (೧೨-೩೬)

ಆ ಅಶ್ವಮೇಧಯಾಗದ ಕುದುರೆಯನ್ನು ಭೀಮಾರ್ಜುನರಿಂದ ಸಹಿತರಾದ ಶ್ರೀಕೃಷ್ಣಪುತ್ರರು, ರಥಾರೂಢರಾಗಿ ಬೆನ್ನುಹತ್ತಿಹೋಗಿ ಮೂರು ಗಂಟೆಗಳಲ್ಲಿಯೇ ಸಂಚಾರ ಮಾಡಿಸಿಕೊಂಡು ಬಂದರು. ಶ್ರೀಕೃಷ್ಣಪರಮಾತ್ಮನು ತನ್ನ ಈ ದಿನಾಶ್ವಮೇಧಕ್ಕಾಗಿಯೇ ಒಂದು ಹಗಲಿನಲ್ಲಿ ಒಂದು ಲಕ್ಷ ಯೋಜನಗಳಷ್ಟು ದೂರ ಸಂಚರಿಸುವಂಥ ಆ ಕುದುರೆಯನ್ನು ನಿರ್ಮಿಸಿದ್ದನು. ಆ ಕುದುರೆಯನ್ನು ಬಂಧಿಸಿದ ಜರಾಸಂಧಾದಿಗಳನ್ನು ಶ್ರೀಭೀಮಸೇನಾದಿಗಳು ಗೆದ್ದರು. ಹೀಗೆ ಎಲ್ಲ ರಾಜರನ್ನು ಗೆದ್ದುಕೊಂಡು ಬಂದನಂತರ ಶ್ರೀ ವೇದವ್ಯಾಸರು ಶ್ರೀಕೃಷ್ಣನನ್ನು ಯಜ್ಞದೀಕ್ಷಿತನನ್ನಾಗಿ ಮಾಡಿದರು. ಅದೇ

ಸಮಯದಲ್ಲಿ ತೃಣಾವಹ ಎಂಬ ಬ್ರಾಹ್ಮಣನು ಅಲ್ಲಿಗೆ ಬಂದು 'ನನ್ನ ಮಕ್ಕಳು ಹುಟ್ಟುತ್ತಲೇ ಕಾಣದಂತಾಗುತ್ತಾರೆ, ಏನು ಮಾಡಲಿ'ಎಂದು ಗೋಳಿಡುತ್ತಾ ಅತ್ತನು. ಆಗ ಈ ಮಾತನ್ನು ಕೇಳಿದ ಅರ್ಜುನನು'ನಾನು ನಿನ್ನ ಮಕ್ಕಳನ್ನು ರಕ್ಷಿಸುತ್ತೇನೆ'ಎಂದು ಅಂದನು. ಆಗ ಆ ಬ್ರಾಹ್ಮಣನು 'ಶ್ರೀಕೃಷ್ಣ, ಬಲರಾಮ, ಪ್ರದ್ಯುಮ್ನ ಇವರಿಗೆ ನನ್ನ ಮಕ್ಕಳನ್ನು ರಕ್ಷಿಸಲಾಗಿಲ್ಲ; ಹೀಗಿರುವಾಗ ನಿನಗೆಲ್ಲಿಯ ಶಕ್ತಿಯು ' ಎಂದು ಅರ್ಜುನನಿಗೆ ಹೇಳಿದನು. ಆಗ ಆ ಅರ್ಜುನನು ಅಸುರಾವೇಶದಿಂದ ' ಎಲೋ ಬ್ರಾಹ್ಮಣನೇ ನಾನೆಂದರೆ ಏನು ಕೃಷ್ಣ ಬಲರಾಮಾದಿಗಳಂತೆ ಎಂದು ತಿಳಿದೆಯಾ ? ನಾನು ಖಾಂಡವ ವನದಲ್ಲಿ ದೇವಾಸುರರನ್ನು ಗೆದ್ದಿರುವೆನು. ಇನ್ನು ಮುಂದೆ ನಿವಾತಕವಚ ಎಂಬ ರಾಕ್ಷಸರನ್ನು ಗೆಲ್ಲುವವನಿದ್ದೇನೆ ' ಎಂದು ತೃಣಾವಹನಿಗೆ ಹೇಳಿ, " ನಾನು ಈ ಬ್ರಾಹ್ಮಣನ ಜೊತೆಗೆ ಹೋಗಿ ಅವನ ಮಗುವನ್ನು ರಕ್ಷಿಸಿ ಬರುವೆನು " ಎಂದು ಶ್ರೀಕೃಷ್ಣಪರಮಾತ್ಮನಿಗೆ ಹೇಳಿದನು. ಆಗ " ನಿನಗೆ ಸಾಧ್ಯವಾದೀತೇ " ಎಂದು ಶ್ರೀಕೃಷ್ಣನು ಅರ್ಜುನನನ್ನು ಕೇಳಿದನು. ಆಗ ಆ ಮಾತನ್ನು ಕೇಳಿದ ಅರ್ಜುನನು ನಾಚಿಕೆಪಟ್ಟು ಕೊಂಡನು. ಅದನ್ನು ಕಂಡ ಶ್ರೀಕೃಷ್ಣಪರಮಾತ್ಮನು " ಆಗಲಿ, ಹೋಗಿಬಾ " ಎಂದು ಹೇಳಿದನು. ಆಗ ಅರ್ಜುನನು "ನನಗೆ ಮಗುವಿನ ರಕ್ಷಣೆ ಮಾಡಲಾಗದಿದ್ದರೆ ಅಗ್ನಿಯನ್ನು ಪ್ರವೇಶಿಸುವೆನು" ಎಂದು ಪ್ರತಿಜ್ಞೆಮಾಡಿ ಬಲರಾಮ, ಪ್ರದ್ಯುಮ್ನ, ಅನಿರುದ್ಧ ಈ ಮೂವರನ್ನು ಬಿಟ್ಟು ಉಳಿದ ಯಾದವರಿಂದ ಸಹಿತನಾಗಿ ಹೋದನು. ಶ್ರೀಕೃಷ್ಣನು ಈ ಮೂವರನ್ನು ಮಾತ್ರ ಅರ್ಜುನನ ಸಹಾಯಕ್ಕಾಗಿ ತೊಡಗಿಸಲಿಲ್ಲ; ಏಕೆಂದರೆ ಅರ್ಜುನನಿಗೆ ಬ್ರಾಹ್ಮಣಪುತ್ರರನ್ನು ಬದುಕಿಸಲಂತೂ ಆಗುವದಿಲ್ಲ. ಇವರು ಹೋದರೆ ಇವರಿಗೆ ಅಪಕೀರ್ತಿ ಬರುವದು; ಆದ್ದರಿಂದ ಅಪಕೀರ್ತಿ ಬಾರದಿರಲಿ ಎಂಬ ಭಾವನೆಯಿಂದ ಕಳಿಸಲಿಲ್ಲ. ಶ್ರೀಕೃಷ್ಣನಿಗೆ ಬಲರಾಮದೇವನು ಅತಿಪ್ರಿಯನು, ಅವನ ನಂತರ ಪ್ರದ್ಯುಮ್ನನು ಪ್ರಿಯನು, ಅವನ ನಂತರ ಪ್ರದ್ಯುಮ್ನನಿಗೆ ರುಕ್ಮಿಪುತ್ರಿಯಾದ ರುಕ್ಮವತಿಯಲ್ಲಿ ಅವತರಿಸಿದ, ಅನಿರುದ್ಧರೂಪೀ ಪರಮಾತ್ಮನ ಆವೇಶವುಳ್ಳ ಅನಿರುದ್ಧನು ಪ್ರಿಯನು. ಆದ್ದರಿಂದ ಕಳಿಸಲಿಲ್ಲ. ಅರ್ಜುನನು ಬ್ರಾಹ್ಮಣನ ಜೊತೆಗೆ ಹೋಗಿ ಅವನ ಪತ್ನಿಗೆ ಪ್ರಸೂತಿಕಾಲ ಪ್ರಾರಂಭವಾದಾಗ ಅವಳ ವಾಸಸ್ಥಾನದ ಸುತ್ತಲೂ ಅಸ್ತ್ರ ಗಳಿಂದ ದಿಗ್ಬಂಧನ ಮಾಡಿದನು. ಆದರೂಕೂಡ ಹುಟ್ಟಿದ ಮಗುವು ಕೂಡಲೇ ಮೊದಲಿನಂತೆಯೇ ಕಾಣದಾಯಿತು. ಅರ್ಜುನನು

ಉಳಿದ ಯಾದವರು ಎಲ್ಲರೂ ದುಃಖಿತರಾದರು. ಬ್ರಾಹ್ಮಣನು ಅರ್ಜುನನನ್ನು ಬೈದನು, ಅರ್ಜುನನು ಶ್ರೀಕೃಷ್ಣನಿದ್ದಲ್ಲಿಗೆ ಬಂದು ಅಗ್ನಿಪ್ರವೇಶ ಮಾಡಲು ಸಿದ್ಧನಾದನು. ಆಗ ಶ್ರೀ ಹರಿಯು ಅವನನ್ನು ತಡೆದು, ಅವನಿಂದ ಹಾಗೂ ಬ್ರಾಹ್ಮಣನಿಂದ ಕೂಡಿಕೊಂಡು ರಥವನ್ನೇರಿ ಉತ್ತರದಿಕ್ಕಿಗೆ ಹೊರಟು, ಸಪ್ತಸಮುದ್ರಗಳನ್ನು ದಾಟಿ ಹೊರಟನು. ಮಾರ್ಗದಲ್ಲಿಯ ಪರ್ವತಗಳು, ಸಮುದ್ರಗಳು ತಾವಾಗಿಯೇಮಾರ್ಗಕೊಟ್ಟವು. ಮುಂದೆ ಹೋಗಿ ತನ್ನ ಸುದರ್ಶನ ಚಕ್ರದಿಂದ ಅಂಧಕಾರವನ್ನು ಸೀಳಿ, ಘನೋದಕ ವನ್ನು ದಾಟಿ ವಿಪ್ರಾರ್ಜುನರನ್ನು ನಿಲ್ಲಿಸಿ ತನ್ನ ಸ್ಥಾನವಾದ ಅನಂತಾಸನಕ್ಕೆ ಹೋಗಿ, ತನ್ನ ಮೂಲರೂಪಿಯಾದ ಸರ್ವಾಭರಣ ಭೂಷಿತನೂ, ಶೇಷಶಾಯಿಯೂ, ಶ್ರೀ ಲಕ್ಷ್ಮೀಸಮೇತನೂ ಆದ ನಾರಾಯಣನಲ್ಲಿ ಪ್ರವೇಶಮಾಡಿ ಸ್ವಲ್ಪಸಮಯ ಅವನೊಂದಿಗೆ ಏಕನಾಗಿದ್ದು, ಸುನಂದ, ನಂದ ಮೊದಲಾದ ಭಗವಂತನ ಪಾರ್ಷದ ಸ್ವರೂಪರಾದ ಬ್ರಾಹ್ಮಣಪುತ್ರರನ್ನು ಕರೆದುಕೊಂಡು ಬ್ರಾಹ್ಮಣ ಹಾಗೂ ಅರ್ಜುನರ ಸಮೀಪಕ್ಕೆ ಬಂದು ಅವರ ಜೊತೆಗೆ ರಥದಲ್ಲಿ ಪುನಃ ಯಜ್ಞದ ಸ್ಥಳಕ್ಕೆ 3 ಗಳಿಗೆಗಳಲ್ಲಿಯೇ ಬಂದು ಬ್ರಾಹ್ಮಣನಿಗೆ ಅವನ ಮಕ್ಕಳನ್ನು ಒಪ್ಪಿಸಿದನು. ಅರ್ಜುನನಿಗೆ ಅಹಂಕಾರ ಬಂದದ್ದರಿಂದ ಅದನ್ನು ಪರಿಹರಿಸುವ ದಕ್ಕಾಗಿಯೇ ಅವನಮೇಲಿನ ಪ್ರೀತಿಯಿಂದ ಇಷ್ಟೆಲ್ಲ ಕಾರ್ಯವನ್ನು ಭಗವಂತನು ಮಾಡಿದನು. ಅದಕ್ಕಾಗಿಯೇ ಸುನಂದಾದಿಗಳಿಗೆ ಬ್ರಾಹ್ಮಣಪುತ್ರರಾಗಿ ಜನಿಸಲು ಆಜ್ಞಾಪಿಸಿದ್ದನು. ಯಜ್ಞ ದೀಕ್ಷಿತರಾದವರು ಚಲಿಸಬಾರದು; ಚಲಿಸಿದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂಬುದನ್ನು ಲೋಕ ಜನರಿಗೆ ತಿಳಿಸುವದಕ್ಕಾಗಿ ಭಗವಂತನು ತಾನು ಪ್ರಾಯಶ್ಚಿತ್ತವನ್ನು ಮಾಡಿದನು.

ಬ್ರಹ್ಮಾದೀನಾಗತಾಂಶ್ಚೈವ ಸದಾ ಸ್ವಪರಿಚಾರಕಾನ್ ।
ಪೂಜಯಿತ್ವಾಽಭ್ಯನುಜ್ಞಾಯ ಬ್ರಾಹ್ಮಣಾನಪ್ಯಪೂಜಯತ್ ॥೩೭॥

ಸಸ್ನಾವವಭೃಥಂ ಕೃಷ್ಣಸ್ಸದಾರಸ್ಸಸುಹೃಜ್ಜನಃ ।
ಆಯಾಂತಂ ದ್ವಾರಕಾಂ ಕೃಷ್ಣಂ ದಂತವಕ್ರೋ ರುರೋಧ ಹ ॥೩೮॥

ಕೃಷ್ಣಃ - ಶ್ರೀ ಕೃಷ್ಣಪರಮಾತ್ಮನು, ಆಗತಾನ್ - ಯಜ್ಞಕ್ಕೆ ಬಂದಂಥ, ಸದಾ – ಯಾವಾಗಲೂ, ಸ್ವಪರಿಚಾರಕಾನ್ ಏವ-ತನ್ನ ಸೇವಕರೇ ಆದಂಥ, ಬ್ರಹ್ಮಾದೀನ್ - ಚತುರ್ಮುಖ ಬ್ರಹ್ಮದೇವರೇ ಮೊದಲಾದವರನ್ನು, ಪೂಜಯಿತ್ವಾ-ಪೂಜಿಸಿ, ಅಭ್ಯನುಜ್ಞಾಯ - ತಮ್ಮ ತಮ್ಮ ಲೋಕಗಳಿಗೆ ಹೋಗಲು ಅನುಮತಿಯನ್ನು ಅವರಿಗಿತ್ತು, ಬ್ರಾಹ್ಮಣಾನ್ಅಪಿ - ಬ್ರಾಹ್ಮಣರನ್ನೂ ಕೂಡ, ಅಪೂಜಯತ್ - ಪೂಜಿಸಿದನು. (ಅಥ - ನಂತರ) ಸದಾರಃಸನ್ - ಪತ್ನೀಸಹಿತನಾಗಿ, ಸಸುಹೃಜ್ಜನಃ ಸನ್ - ಬಾಂಧವರಿಂದ ಸಹಿತನಾಗಿ, ಅವಭೃಥಂ ಸಸ್ನೌ - ಅವಭೃಥ ಸ್ನಾನ ಮಾಡಿದನು. ದ್ವಾರಕಾಂ - ದ್ವಾರಕೆಗೆ, ಆಯಾಂತಂ - ಬರತಕ್ಕಂಥ, ಕೃಷ್ಣಂ - ಶ್ರೀ ಕೃಷ್ಣನನ್ನು, ದಂತವಕ್ರಃ – ದಂತವಕ್ರನೆಂಬ ಅಸುರನು, ರುರೋಧ ಹ - ತಡೆದನು. ॥೩೭-೩೮॥

ಜಘಾನ ಗದಯಾ ಕೃಷ್ಣಸ್ತಂ ಕ್ಷಣಾತ್ಸವಿಡೂರಥಮ್ ।
ವಿಡೂರಥಸ್ತಮೋಽಗಚ್ಛದ್ದಂತವಕ್ರೋ ಚ ಯೋಽಸುರಃ ॥೩೯॥

ಕೃಷ್ಣಃ – ಶ್ರೀಕೃಷ್ಣನು, ಸವಿಡೂರಥಂ – ವಿಡೂರಥನೆಂಬ ದೈತ್ಯನಿಂದ ಸಹಿತನಾದ, ತಂ – ಆ ದಂತವಕ್ರನನ್ನು ಕ್ಷಣಾತ್ – ಕೂಡಲೇ, ಗದಯಾ - ಗದೆಯಿಂದ, ಜಘಾನ – ಸಂಹರಿಸಿದನು. ವಿಡೂರಥಃ – ವಿಡೂರಥನೆಂಬವನು, ತಮಃ - ನರಕಕ್ಕೆ, ಅಗಚ್ಛತ್ – ಹೋದನು, ಚ - ಮತ್ತು ದಂತವಕ್ರೋ - ದಂತವಕ್ರನಲ್ಲಿ, ಯಃ ಅಸುರಃ – ಯಾವ ರಾಕ್ಷಸನಿದ್ದನೋ, ಸಃ ಚ - ಅವನೂ ಕೂಡ (ತಮಸ್ಸಿಗೆ ಹೋದನು.) ॥೩೯॥

ಹರೇಶ್ಚ ಪಾರ್ಷದಃ ಕ್ಷಿಪ್ರಂ ಹರಿಮೇವ ಸಮಾಶ್ರಿತಃ ।
ಕೃಷ್ಣೇ ಪ್ರಾಪ್ತೇ ಸ್ವಲೋಕಂ ಚ ನಿಸ್ಸೃತ್ಯಾಸ್ಮಾತ್ಸ್ವರೂಪತಃ ॥೪೦॥

ಏಕೀ ಭಾವಂ ಸ್ವರೂಪೇಣ ದ್ವಾರಪೇಣ ಗಮಿಷ್ಯತಿ ।
ತತಃ ಕೃಷ್ಣಃ ಪುರೀಮೇತ್ಯ ಬೋಧಯಾಮಾಸ ಫಲ್ಗುನಮ್ ॥೪೧॥

ಹರೇಃ ಪಾರ್ಷದಃ – (ದಂತವಕ್ರನಲ್ಲಿದ್ದ) ಶ್ರೀಹರಿಯ ದ್ವಾರಪಾಲಕನಾದ ವಿಜಯನು, ಕ್ಷಿಪ್ರಂ - ಕೂಡಲೇ, ಹರಿಮೇವ – ಶ್ರೀಕೃಷ್ಣನನ್ನೇ, ಸಮಾಶ್ರಿತಃ – ಆಶ್ರಯಿಸಿ (ಪ್ರವೇಶಿಸಿ)ದನು. ಕೃಷ್ಣೇ – ಶ್ರೀಕೃಷ್ಣನು, ಸ್ವಲೋಕಂ - ತನ್ನ ಲೋಕಕ್ಕೆ, ಪ್ರಾಪ್ತೇಸತಿ – ಬರುತ್ತಿರಲು (ಬಂದಾಗ), ಅಸ್ಮಾತ್ ಸ್ವರೂಪತಃ –ಈ ಶ್ರೀ ಕೃಷ್ಣನಿಂದ, ನಿಸ್ಸೃತ್ಯ – ಹೊರ ಹೊರಟು, ಸ್ವರೂಪೇಣ-ತನ್ನ ಮೂಲರೂಪವಾದ, ದ್ವಾರಪೇಣ-ದ್ವಾರಪಾಲಕ ರೂಪವಾದ ವಿಜಯರೂಪದಿಂದ, ಏಕೀಭಾವಂ-ಐಕ್ಯವನ್ನು, ಗಮಿಷ್ಯತಿ–ಹೊಂದುವನು. ತತಃ – ದಂತವಕ್ರಸಂಹಾರಾನಂತರ, ಕೃಷ್ಣಃ– ಶ್ರೀಕೃಷ್ಣನು, ಪುರೀಂ ದ್ವಾರಕೆಗೆ, ಏತ್ಯ-ಬಂದು, ಫಲ್ಗುನಂ-ಅರ್ಜುನನಿಗೆ, ಬೋಧಯಾಮಾಸ–ಅಹಂಭಾವ ಮಾಡಬಾರದು ಇತ್ಯಾದಿ ತಿಳಿಹೇಳಿದನು. ॥೪೦-೪೧॥

ಕಿಮೇತದ್ದೃಷ್ಟಮಿತ್ಯೇವ ತೇನ ಪೃಷ್ಟೋ ರಮಾಪತಿಃ ।
ಅಯಂ ದ್ವೀಪಸ್ಸಾಗರಶ್ಚ ಲಕ್ಷಯೋಜನ ವಿಸ್ತೃತೌ ॥೪೨॥

ದೃಷ್ಟಂ – ತನ್ನಿಂದ ನೋಡಲ್ಪಟ್ಟ ಪ್ರದೇಶವು, ಕಿಂ-ಯಾವದ್ಯಾವದು, ಇತಿ-ಎಂದು, ತೇನ-ಆ ಅರ್ಜುನನಿಂದ, ಪೃಷ್ಟಃ ರಮಾಪತಿಃ– ಕೇಳಿಸಿಕೊಂಡ ಶ್ರೀಕೃಷ್ಣನು, ಫಲ್ಗುನಂ - ಅರ್ಜುನನಿಗೆ, ಬೋಧಯಾಮಾಸ-ಅವುಗಳ ಬಗ್ಗೆ ಈ ಮುಂದಿನಂತೆ ತಿಳಿಸಿಕೊಟ್ಟನು. ಅಯಃ ದ್ವೀಪಃ ಅಯಂ ಸಾಗರಃ ಚ – ಈ ಜಂಬುದ್ವೀಪವು ಮತ್ತು ಈ ದ್ವೀಪದ ಸುತ್ತಲಿರುವ ಲವಣ ಸಮುದ್ರವೂ ಕೂಡ, ಲಕ್ಷಯೋಜನ ವಿಸ್ತೃತೌ–ಒಂದು ಲಕ್ಷ ಯೋಜನವಿಸ್ತಾರವುಳ್ಳವುಗಳು. ॥೪೨॥

ತದನ್ಯೇತು ಕ್ರಮೇಣೈವ ದ್ವಿಗುಣೇನೋತ್ತರೋತ್ತರಾಃ ।
ಅಂತ್ಯಾಧ್ಯರ್ಧಸ್ಥಲಂ ಹೈಮಂ ಬಾಹ್ಯತೋ ವಾಜ್ರಲೇಪಿಕಮ್ ॥೪೩॥

ತದನ್ಯೇ – ಅದಕ್ಕಿಂತ ಬೇರೆಯಾದ ಪ್ಲಕ್ಷ ಮೊದಲಾದ ಆರು ದ್ವೀಪ, ಇಕ್ಷು ಮೊದಲಾದ ಸಾಗರಗಳು; ದ್ವಿಗುಣೇನ ಉತ್ತರೋತ್ತರಾಃ – ಮುಂದೆಮುಂದಿನದು ಹಿಂದಿನದಕ್ಕಿಂತ ಎರಡುಪಟ್ಟು ಹೆಚ್ಚು ಪರಿಮಾಣವುಳ್ಳವುಗಳಾಗಿರುತ್ತವೆ. (ಎಲ್ಲ ದ್ವೀಪ ಸಮುದ್ರಗಳ ಒಟ್ಟು ಪರಿಮಾಣವು ಎರಡುಕೋಟಿ ಐವತ್ತನಾಲ್ಕು ಲಕ್ಷ ಯೋಜನಗಳು.) ಅಂತ್ಯಾಧ್ಯರ್ಧಸ್ಥಲಂ– ಅಂತ್ಯ – ಕೊನೆಯದಾದ ಶುದ್ಧೋದಕ ಸಮುದ್ರಕ್ಕಿಂತ, ಅಧ್ಯರ್ಧ (ಅರ್ಧದಿಂದ ಸಹಿತ ಅದರಷ್ಟು) ಒಂದುವರೆಪಟ್ಟು ವಿಸ್ತಾರವುಳ್ಳ, ಸ್ಥಲಂ – ಸ್ಥಳವು (ಶುದ್ಧೋದಕ ಸಮುದ್ರವು ೬ಳ ಲಕ್ಷ ಯೋಜನ ವಿಸ್ತೀರ್ಣವುಳ್ಳದ್ದು; ಆದ್ದರಿಂದ ೯೬ ಲಕ್ಷ ಯೋಜನ ವಿಸ್ತಾರವುಳ್ಳ ಪ್ರದೇಶವು), ಹೈಮಂ – ಭಂಗಾರಮಯವಾದದ್ದು, ಬಾಹ್ಯತಃ – ಹೊರಭಾಗದಲ್ಲಿ, ವಾಜ್ರಲೇಪಿಕಮ್ – ಬಹುವಜ್ರಗಳಿಂದ ಕೂಡಿದ್ದು ಆಗಿದೆ. ॥೪೩॥

ಏತತ್ಸರ್ವಂ ಲೋಕನಾಮುಹ್ಯೇತಸ್ಮಾದ್ದ್ವಿಗುಣಂ ತಮಃ ।
ಅಂಧಂ ಯತ್ರ ಪತಂತ್ಯುಗ್ರಾ ಮಿಥ್ಯಾಜ್ಞಾನಪರಾಯಣಾಃ ॥೪೪॥

ಏತತ್ಸರ್ವಂ – ಎರಡು ಕೋಟಿ ಐವತ್ತಾಲ್ಕು ಲಕ್ಷ ಯೋಜನ ವಿಸ್ತೃತ ಪ್ರದೇಶ ಹಾಗೂ ೯೬ ಲಕ್ಷ ಯೋಜನ ವಿಸ್ತೃತ ಪ್ರದೇಶ ಇದೆಲ್ಲ ಸೇರಿ ಒಟ್ಟು ಮೂರುವರಿಕೋಟಿ ಯೋಜನ ಸ್ಥಳವು. ಲೋಕನಾಮು ಹಿ – ಲೋಕ ಎಂದು ಹೆಸರುಳ್ಳದ್ದೆಂದೇ ಪುರಾಣದಲ್ಲಿ ಪ್ರಸಿದ್ಧವಾಗಿದೆ. ಏತಸ್ಮಾತ್ ದ್ವಿಗುಣಂ–ಇದಕ್ಕಿಂತ ಎರಡುಪಟ್ಟು ಹೆಚ್ಚು ಅಂದರೆ ಏಳು ಕೋಟಿ ಯೋಜನ ಅಳತೆವುಳ್ಳದ್ದು, ಅಂಧಂ ತಮಃ - ಅಂಧತಮಸ್ಸು, ಯತ್ರ - ಯಾವಲ್ಲಿ, ಮಿಥ್ಯಾಜ್ಞಾನಪರಾಯಣಾಃ-ಅಯಥಾರ್ಥ ಜ್ಞಾನವುಳ್ಳಂಥ, ಉಗ್ರಾಃ – ತಪೋಯೋಗ್ಯರು, ಪತಂತಿ – ಬೀಳುತ್ತಾರೆಯೋ ಅದು. ॥೪೪॥

ಘನೋದಕಂ ತದ್ದ್ವಿಗುಣಂ ತದಂತೇ ಧಾಮ ಮಾಮಕಮ್ । ಯತ್ತ್ವದ್ದೃಷ್ಟಂ ತ್ವಯಾ ಪಾರ್ಥ ತತ್ರ
ಮುಕ್ತೈರಜಾದಿಭಿಃ ॥೪೫॥ ಸೇವ್ಯಮಾನಃ ಸ್ಥಿತೋ ನಿತ್ಯಂ ಸರ್ವೈಃ ಪರಮಪೂರುಷಃ ।
ಲೋಕಾಲೋಕ ಪ್ರದೇಶಸ್ತು ಪಂಚಾಶಲ್ಲಕ್ಷ ವಿಸ್ತೃತಃ । ಸಪಂಚಾಶತ್ಸಹಸ್ರಶ್ಚ ತಸ್ಯಾಽಪಿ ಗಣನಂ ತಥಾ ॥೪೬॥

ತದ್ದ್ವಿಗುಣಂ – ಅದಕ್ಕಿಂತ (ತಮಸ್ಸಿಗಿಂತಲೂ), ದ್ವಿಗುಣಂ – ಎರಡುಪಟ್ಟು ಅಳತೆವುಳ್ಳದ್ದು (೧೪ ಕೋಟಿ ಯೋಜನ ವಿಸ್ತೃತವಾದುದು), ಘನೋದಕಂ – ಘನೋದಕವು, ಪಾರ್ಥ-ಎಲೋ ಅರ್ಜುನನೇ, ತದಂತೇ – ಅದರ ಕೊನೆಯಲ್ಲಿ, ಯತ್–ಯಾವುದು, ತ್ವಯಾ ದೃಷ್ಟಂ – ನಿನ್ನಿಂದ ನೋಡಲ್ಪಟ್ಟಿತೋ, ತತ್–ಅದು, ಮಾಮಕಂ ಧಾಮ-ನನ್ನ ಸ್ಥಾನವು, ತತ್ರ-ಅಲ್ಲಿ, ಮುಕ್ತೈಃ – ಮುಕ್ತರಾದ, ಅಜಾದಿಭಿಃ – ಬ್ರಹ್ಮದೇವರೇ ಮೊದಲಾದ, ಸರ್ವೈಃ – ಎಲ್ಲರಿಂದ, ನಿತ್ಯಂ – ಯಾವಾಗಲೂ, ಸೇವ್ಯಮಾನಃ-ಸೇವಿಸಲ್ಪಡುವ. ಪರಮಪೂರುಷಃ-ಪರಮಪುರುಷನಾದ ನಾರಾಯಣನು, ಸ್ಥಿತಃ-ಇರುತ್ತಾನೆ. ಸಃ ಅಹಂ-ಅವನೇ ನಾನು.ಲೋಕಾಲೋಕ ಪ್ರದೇಶಃ ತು-ಹೈಮ ಪ್ರದೇಶ ಹಾಗೂ ಲೋಕಪ್ರದೇಶಗಳ ಮಧ್ಯದಲ್ಲಿದ್ದ ಲೋಕಾಲೋಕ ಎಂಬ ಹೆಸರಿನ ಪರ್ವತ ಸ್ಥಳವು, ಪಂಚಾಶಲಕ್ಷ ವಿಸ್ತೃತಃ – ಐವತ್ತು ಲಕ್ಷ ವಿಸ್ತಾರವಾಗಿದೆ. ಅಪಿ – ಯದ್ಯಪಿ (ಲೋಕಾಲೋಕ ಪರ್ವತವು), ಸಪಂಚಾಶತ್ಸಹಸ್ರಃ – ಐವತ್ತು ಲಕ್ಷ ಐವತ್ತು ಸಾವಿರ ಯೋಜನ ವಿಸ್ತಾರವಾದದ್ದು, ತಥಾಪಿ – ಹಾಗಿದ್ದರೂ ಕೂಡ, ತಸ್ಯ ಗಣನಂ – ಅದರ ಅಳತೆಯು, ತಥಾ – ಐವತ್ತು ಲಕ್ಷ ಯೋಜನವೆಂದು (ಐವತ್ತು ಸಹಸ್ರವನ್ನು ಲೆಕ್ಕಕ್ಕೆ ಹಿಡಿಯದೇ ಪೂರ್ಣ ಅಂಕಿಯನ್ನು ಹೇಳುವ ತಾತ್ಪರ್ಯದಿಂದ) ಭಾಗವತಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ॥೪೫–೪೬॥

ಯೋಜನಾನಾಂ ಪಂಚವಿಂಶತ್ ಕೋಟಿಯೋ ಮೇರುಪರ್ವತಾತ್ ।
ಚತಸೃಷ್ವಪಿ ದಿಕ್ಷೂರ್ಧ್ವಮಧಶ್ಚಾಂಡಂ ಪ್ರಕೀರ್ತಿತಮ್ ॥೪೭॥

ಅಬಗ್ನೀರನಭೋs ಹಂಕೃನ್ಮಹತ್ತತ್ತ್ವಗುಣತ್ರಯೈಃ ॥
ಕೃಮಾ (ದ್ದ ಶೋತ್ತರೈ) ದ್ದಶಗುಣೈರೇತದಾವೃತಂ ಪರತಸ್ತತಃ ॥೪೮॥

ಮೇರುಪರ್ವತಾತ್ – (ಜಂಬೂದ್ವೀಪದ ಮಧ್ಯದಲ್ಲಿರುವ) ಮೇರುಪರ್ವತದಿಂದ, ಚತಸೃಷು ದಿಕ್ಷು ಅಪಿ – ನಾಲ್ಕು ದಿಕ್ಕುಗಳಲ್ಲಿಯೂ ಕೂಡ, ಊರ್ಧ್ವಂ ಅಧಶ್ಚ—ಮೇಲೆ ಕೆಳಗೆ ಕೂಡ, ಅಂಡಂ—ಬ್ರಹ್ಮಾಂಡವು, ಯೋಜನಾನಾಂ ಪಂಚವಿಂಶತ್ ಕೋಟಯಃ—ಇಪ್ಪತ್ತೈದು ಕೋಟಿ ಯೋಜನ ವಿಸ್ತಾರವುಳ್ಳದ್ದಾಗಿ, ಪ್ರಕೀರ್ತಿತಂ – ಹೇಳಲ್ಪಟ್ಟಿರುತ್ತದೆ,

ವಿಶೇಷಾಂಶ :– ಜಂಬೂದ್ವೀಪವು ಮೇರುಪರ್ವತದಿಂದ ನಾಲ್ಕು ದಿಕ್ಕುಗಳಲ್ಲಿ ಜಿವತ್ತೊಸಾವಿರ ಯೋಜನ ವಿಸ್ತೃತವಾಗಿದೆ, ಹೀಗಾಗಿ ಅಂಧಂತಮಸ್ಸಿನತನಕ ಲೋಕಾಲೋಕ ಪರ್ವತದ ಪರಿಮಾಣದಿಂದ ಸಹಿತವಾಗಿ ನಾಲ್ಕುಕೋಟಿ ಯೋಜನ ಗಳಾಗುವದು. ಅಂಧತಮಸ್ಸು ಅರುಕೋಟಿ ತೊಂಭತ್ತೊಂಭತ್ತು ಲಕ್ಷ ಯೋಜನ ವಿಸ್ತೃತವಾಗಿದೆ, ಘನೋದಕವು ಹದಿವೂರಕೋಟಿ ತೊಂಭತ್ತೆಂಟು ಲಕ್ಷ ಯೋಜನ ವಿಸ್ತೃತವಾಗಿದೆ. ಅನಂತಾಸನವು ಕೇವಲ ಮೂರು ಲಕ್ಷ ಯೋಜನ ವಿಸ್ತೃತವಾಗಿದೆ. ಹೀಗೆ ಮೇರುಪರ್ವತದಿಂದ ಆರಂಭಿಸಿ ಅಂಡಪರ್ಯಂತ ಇಪ್ಪತ್ತೈದು ಕೋಟಿ ಯೋಜನ ವಿಸ್ತೃತ ವಾಗುವದು. ॥೪೭॥

ಅವತಾರಿಕೆ :— ಬ್ರಹ್ಮಾಂಡಕ್ಕಿರುವ ಆವರಣವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. – ಕ್ರಮಶಾತ್ – ಕ್ರಮವಾಗಿ (ದಶೋತ್ತರೈಃ)ದಶಗುಣೈ:–ಹತ್ತು ಹತ್ತು ಪಟ್ಟು ಹೆಚ್ಚು ಅಳತೆಗಳುಳ್ಳ, ಅಬಗ್ನೀರಸನಭೋsಹಂಕೃನ್ಮಹತ್ತತ್ತ್ವಗುಣತ್ರಯೈಃ– ನೀರು, ಅಗ್ನಿ, ವಾಯು, ಆಕಾಶ, ಅಹಂಕಾರತತ್ತ್ವ, ಮಹತ್ತತ್ತ್ವ, ತಮೋಗುಣ, ರಜೋಗುಣ, ಸತ್ತ್ವಗುಣ ಈ ೯ ಆವರಣ ಗಳಿಂದ, ಏತತ್ – ಈ ಬ್ರಹ್ಮಾಂಡವು, ಆವೃತಂ—ಆವರಿಸಲ್ಪಟ್ಟಿದೆ.

ವಿಶೇಷಾಂಶ—ಬ್ರಹ್ಮಾಂಡದ ಪರಿಘವು ಭೂ ಎಂದು ಕರಿಸಿಕೊಳ್ಳುವದು. ॥೪೮॥

ವ್ಯಾಪ್ತೋsಹಂ ಸರ್ವಗೋs ನಂತೋsನಂತರೂಪೋನಿರಂತರಃ ॥೪೯॥

ತತಃ ಪರತಃ – ಆವರಣ ಸಹಿತವಾದ ಆ ಬ್ರಹ್ಮಾಂಡದ ಹೊರಗೂ, ಅಹಂ – ನಾನು, ವ್ಯಾಪ್ತಃ – ವ್ಯಾಪ್ತ ನಾಗಿರುವೆನು, ಸರ್ವಗಃ – ಸರ್ವಪ್ರದೇಶದಲ್ಲಿರುವೆನು, ಅನಂತಃ — ಅಂತರಹಿತನು, ಅನಂತರೂಪಃ — ಅನಂತರೂಪ ಗಳುಳ್ಳವನು, ನಿರಂತರಃ – ಎಲ್ಲರೂಪಗಳಲ್ಲಿಯೂ ಭೇದರಹಿತನು. ॥೪೯॥

ಅನಂತಶೀರ್ಷೋsನಂತಾಕ್ಷೋsನಂತಪಾದಕರೋರುಕ ಃ ।
ಅನಂತಗುಣಮಾಹಾತ್ಮ್ಯಃ ಚಿದಾನಂದಶರೀರಕಃ ॥೫೦॥

ಅನಂತಶೀರ್ಷ :—ಅನಂತ ಶಿರಸ್ಸುಳ್ಳವನು, ಅನಂತಾಕ್ಷಃ – ಅನಂತ ಕಣ್ಣುಳ್ಳವನು, ಅನಂತಪಾದಕರೋರುಕ:– ಅನಂತವಾದ ಪಾದ, ಕರ, ತೊಡೆಗಳುಳ್ಳವನು. ಅನಂತಗುಣಮಾಹಾತ್ಮ್ಯಃ—ಅನಂತಗುಣ ಹಾಗು ಮಾಹಾತ್ಮ್ಯವುಳ್ಳವನು, ಚಿದಾನಂದಶರೀರಕ ಃ – ಜ್ಞಾನಾನಂದಾತ್ಮಕ ಶರೀರವುಳ್ಳವನು ಆಗಿದ್ದೇನೆ. ॥೫೦॥

ಮದ್ಭಕ್ತಾ ಏವ ಸರ್ವೇsಪಿ ತ್ವಂ ಚಾನ್ಯೇsಪಿ ಧನಂಜಯ ।
ಮತ್ಪ್ರಸಾದಾದ್ಬಲಂ ಚೈವ ವಿಜಯಶ್ಚಾಖಿಲಾ ಗುಣಾಃ ॥೫೧॥

ಹೇ ಧನಂಜಯ—ಹೆ ಅರ್ಜುನನೇ, ತ್ವಂ—ನೀನು, ಚ—ಮತ್ತು, ಅನ್ಯೇ ಅಪಿ—ಬೇರೆಯವರು, ಸರ್ವೇ ಅಪಿ—ಎಲ್ಲರೂ ಕೂಡ, ಮದ್ವಶಾ: ಏವ—ನನ್ನ ವಶದಲ್ಲಿಯೇ ಇರುವರು, ಬಲಂ—ಸಾಮರ್ಥ್ಯವು, ವಿಜಯಃ—ಜಯವು, ಅಖಿಲಾ: ಗುಣಾ: ಅಪಿ—ಉಳಿದ ಎಲ್ಲ ಗುಣಗಳೂ ಕೂಡ, ಮತ್ಪ್ರಸಾದಾತ್ ಏವ—ನನ್ನ ಅನುಗ್ರಹದ ಆಧೀನಗಳೇ ಆಗಿವೆ ॥೫೧॥

ತಸ್ಮಾನ್ನ ವಿಸ್ಮಯಃ ಕಾರ್ಯೋ ನ ದರ್ಪಶ್ಚ ತ್ವಯಾऽನಘ।
ಮನ್ಮನಾಭವ ಮದ್ಭಕ್ತೋಮದ್ಯಾಜೀ ಮಾಂ ನಮಸ್ಕುರು ॥೫೨॥

ಅನಘ—ಹೇ ಸಾಧು ಸ್ವಭಾವದ ಅರ್ಜುನನೇ, ತಸ್ಮಾತ್—ಆದ್ದರಿಂದ (ಎಲ್ಲವೂ ನನ್ನ ವಶವಾದ್ದರಿಂದ), ತ್ವಯಾ—ನಿನ್ನಿಂದ ವಿಸ್ಮಯಃ—ಆಶ್ಚರ್ಯವಾಗಲೀ, (ಯಾರೇ ಮಾಡಿದ ಒಳ್ಳೆಯ ಕಾರ್ಯಗಳ ಬಗ್ಗೆ), ಚ—ಮತ್ತು, ದರ್ಪಃ—ನಾನು ಮಾಡಿದೆ ಎಂಬ ಅಹಂಕಾರವಾಗಲೀ, ನ ಕಾರ್ಯ :—ಮಾಡಲ್ಪಡಬಾರದು. (ತ್ವಂ—ನೀನು, ಮನ್ಮನಾಃ—ನನ್ನಲ್ಲಿ ಮನಸ್ಸುಳ್ಳವನು, ಮದ್ಭಕ್ತಃ—ನನ್ನ ಭಕ್ತನು, ಮದ್ಯಾಜೀ—ನನ್ನ ಪ್ರೀತಿಗಾಗಿ ಯಜ್ಞಾದಿ ವಿಹಿತಕರ್ಮಗಳನ್ನು ಮಾಡುವವನು, ಭವ—ಆಗು, ಮಾಂ—ನನಗೆ, ನಮಸ್ಕುರು—ನಮಸ್ಕರಿಸು. (ನನ್ನ ಬಗ್ಗೆ ಪ್ರಹ್ವನಾಗಿರು) ॥೫೨॥

ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋऽಸಿ ಮೇ।
ಇತ್ಯುಕ್ತ : ಪ್ರಣಿಪತ್ಯೈನಂ ಕ್ಷಮಸ್ವೇತ್ಯಾಹ ಫಲ್ಗುನ : ॥೫೩॥

(ಹಾಗೆ ಮಾಡಿದರೆ, ತ್ವಂ—ನೀನು), ಮಾಮೇವ—ನನ್ನನ್ನೇ, ಏಷ್ಯಸಿ—ಹೊಂದುತ್ತೀ, ಸತ್ಯಂ—ಇದು ಸತ್ಯವಾದ ಮಾತು - (ತ್ವಂ—ನೀನು) ಮೇ, ನನಗೆ, ಪ್ರಿಯಃ ಅಸಿ—ಪ್ರಿಯ ನಿರುತ್ತೀ. ತೇ ಪ್ರತಿಜಾನೇ—ನಾನು ಹೇಳಿದ್ದು ಸತ್ಯವೆಂದು ನಿನ್ನ ಆಣೆ ಇಟ್ಟು ಹೆಳುವೆನು, ಇತಿ—ಈ ರೀತಿ, ಉಕ್ತ : —ಶ್ರೀಕೃಷ್ಣಪರಮಾತ್ಮನಿಂದ ಹೇಳಿಸಿಕೊಳ್ಳಲ್ಪಟ್ಟ ಫಲ್ಗುನ : - ಅರ್ಜುನನು, ಏನಂ—ಈ ಶ್ರೀಕೃಷ್ಣಪರಮಾತ್ಮನನ್ನು, ಪ್ರಣಿಪತ್ಯ—ನಮಸ್ಕರಿಸಿ, ಕ್ಷಮಸ್ವ—ನನ್ನ ಅಹಂಕಾರಾದಿ ಅಪರಾಧವನ್ನು ಕ್ಷಮಸ್ವ-ಕ್ಷಮಿಸು, ಇತಿ—ಎಂದೂ, ಆಹ—ಹೇಳಿದನು. ॥೫೩॥

ಉಷಿತ್ವಾ ಕತಿಚಿನ್ಮಾಸಾನ್ಮಯ್ಯಾಸ್ಸವೇ೯ऽಪಿ ಪಾಂಡವಾಃ।
ಅನುಜ್ಞಾತಾ : ಕೇಶವೇನ ಭಕ್ತ್ಯನಮ್ರಧಿಯೋऽಚ್ಯುತೇ ॥೫೪॥

ಸಂಭಾವಿತಾಃ ಕೇಶವೇನ ಸೌಹಾರ್ದೇನಾಧಿಕೇನಚ ॥೫೫॥

ಅಚ್ಯುತೇ—ಶ್ರೀ ಕೃಷ್ಣನ ಬಗ್ಗೆ, ಭಕ್ತ್ಯನಮ್ರಧಿಯಂ : —ಭಕ್ತಿಯಿಂದ ನಮ್ರವಾದ ಮನಸ್ಸುಳ್ಳ, ಸರ್ವೇ ಪಾಂಡವಾ ಃ—ಅಪಿ ಎಲ್ಲ ಪಾಂಡವರೂ ಕೂಡ, ಕತಿಚಿತ್ ಮಾಸಾನ್—ಕೆಲವು ತಿಂಗಳವರೆಗೆ, ಉಷಿತ್ವಾ ದ್ವಾರಕೆಯಲ್ಲಿ ವಾಸಮಾಡಿ, ಕೇಶವೇನ ಶ್ರೀ ಕೃಷ್ಣನಿಂದ, ಅನುಜ್ಞಾತಾ : ಸಂತ ಃ—ಅಪ್ಪಣೆಯನ್ನು ಪಡೆದವರಾಗಿ, ಚ- ಮತ್ತು ಅಧಿಕೇನ ಸೌಹಾರ್ದೇನ—ವಿಶೇಷವಾದ ಪ್ರೀತಿಯಿಂದ, ಕೇಶವೇನ ಸಂಭಾವಿತಾ: ಸತ: ಶ್ರೀಕೃಷ್ಣನಿಂದ ಆದರಿಸಲ್ಪಟ್ಟವರಾಗಿ, ಯಯುಃ—(ಇಂದ್ರಪ್ರಸ್ಥಕ್ಕೆ) ಹೋದರು. ॥೫೪-೫೫॥

ತತಃ ಕದಾಚ್ಚಿತವರೇ ಸಭಾತಲೇ ಧವರ್ಮಾತ್ಮಜೋ ರಾಜಭಿರ್ಭ್ರಾತೃಭಿಶ್ಚ।
ವೃತೋ ನಿಶಮ್ಯೈವ ಸಭಾಸ್ಸುರಾಣಾಂ ಯಥಾಸ್ಥಿತಾ ನಾರದಮನ್ವಪೃಚ್ಛತ್ ॥೫೬॥

ತತಃ—ಅನಂತರ, ಕದಾಚಿತ್—ಒಮ್ಮೆ, ಪ್ರವರೇ ಸಭಾತಲೇ—ಶ್ರೇಷ್ಠವಾದ ಇಂದ್ರ ಪ್ರಸ್ಥದ ಸಭಾಂಗಣದಲ್ಲಿ, ರಾಜಭಿ: —ಅನೇಕ ರಾಜರಿಂದ, ಚ— ಮತ್ತು, ಭ್ರಾತೃಭಿಃ —ಸಹೋದರರಿಂದ, ವೃತ:—ಕೂಡಿದಂಥ, ಧವರ್ಮಾತ್ಮಜ:—

ಧರ್ಮರಾಜನು, (ನಾರದಾತ್ – ನಾರದರಮುಖದಿಂದ), ಸುರಾಣಾಂ ಸಭಾ :—ದೇವತೆಗಳ ಲೋಕಗಳ ಸಭೆಗಳ ಬಗ್ಗೆ (ಅವುಗಳ ವಿಸ್ತಾರ, ಅಲ್ಲಿ ಯಾರು ಯಾರು ಇದ್ದಾರೆ ಇತ್ಯಾದಿಗಳ ಬಗ್ಗೆ) ಯಥಾಸ್ಥಿತಾ ಃ ತಥಾ ಏವ- ಅವು ಹೇಗೆ ಇವೆಯೋ ಹಾಗೆಯೇ, ನಿಶಮ್ಯ – ಕೇಳಿ; ಶ್ರವಣ ಮಾಡಿ, ನಾರದಂ—ನಾರದರನ್ನು, ಅನ್ವಪೃಚ್ಛತ್—ಅವರು ಹೇಳಿದ್ದನ್ನು ಅನುವದಿಸಿ ಪ್ರಶ್ನೆ ಮಾಡಿದನು. ॥೫೬॥

ಅಂತರಿಕ್ಷಂ ತ್ವಯಾ ಪ್ರೋಕ್ತಂ ಲಕ್ಷಯೋಜನಮುಚ್ಛ್ರಿತಮ್ ।
ಅರ್ಧಕೋಟ್ಯುಚ್ಛ್ರಿತ ಃ ಸ್ವರ್ಗೋ ವಿಮಾನಾವಳಿಸಂಕುಲ: ॥೫೭॥

ತ್ವಯಾ – ನಿನ್ನಿಂದ, ಅಂತರಿಕ್ಷಂ – ಆಕಾಶವು, ಲಕ್ಷಯೋಜನಂ ಉಚ್ಛ್ರಿತಂ—ಒಂದು ಲಕ್ಷ ಯೋಜನ ಎತ್ತರವಾದದ್ದಾಗಿ, ಪ್ರೋಕ್ತಂ – ಹೇಳಲ್ಪಟ್ಟಿದೆ. ವಿಮಾನಾವಳಿಸಂಕುಲ: — ದೇವತಾ ವಿಮಾನಗಳಿಂದ ಕೂಡಿದ, ಸ್ವರ್ಗಃ— ಸ್ವರ್ಗಲೋಕವು. ಅರ್ಧಕೋಟ್ಯುಚ್ಛ್ರಿತ:—ಐವತ್ತುಲಕ್ಷ ಯೋಜನ ಎತ್ತರವುಳ್ಳದ್ದಾಗಿ, ಪ್ರೋಕ್ತ:—ಹೇಳಲ್ಪಟ್ಟಿದೆ. ॥೫೭॥

ಭುವ: ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪವಿಸ್ತೃತೌ ।
ಮಹರ್ಜನಸ್ತಪಶ್ಚೈವ ಕ್ರಮಾದರ್ಧಾರ್ಧಯೋಜನಾ: ॥೫೮॥

ಭುವಃ – ಅಂತರಿಕ್ಷಲೋಕವು, ಚ – ಮತ್ತು, ಸ್ವರ್ಗಃ — ಸ್ವರ್ಗಲೋಕವು, ಯೋಜನಾನಾಂ ಕೋಟ್ಯಾ— ಒಂದುಕೋಟಿ ಯೋಜನದಷ್ಟು, ಪ್ರವಿಸ್ತೃತೌ – ವಿಸ್ತಾರವಾಗಿರುವವು. ಮಹಃ – ಮಹ ರ್ಲೋಕವು. ಜನಃ — ಜನೋಲೋಕವು, ಚ – ಮತ್ತು, ತಪಃ —ತಪೋಲೋಕವು, ಕ್ರಮಾತ್ – ಕ್ರಮವಾಗಿ, ಅರ್ಧಾರ್ಧಯೋಜನಾ: ಮೊದಲಿನ ಲೋಕದ ಪ್ರಮಾಣಕ್ಕಿಂತಲೂ ಅರ್ಧದಷ್ಟು ಹೆಚ್ಚು ಪ್ರಮಾಣವುಳ್ಳವುಗಳು. (ಅಂದರೆ ಮಹರ್ಲೋಕವು ಸ್ವರ್ಗ ಲೋಕಕ್ಕಿಂತ ಒಂದುಕೋಟಿ ಎಪ್ಪತ್ತೈದು ಲಕ್ಷ ಯೋಜನ ಎತ್ತರವಿದೆ, ಜನೋಲೋಕವು ಮಹರ್ಲೋಕಕ್ಕಿಂತ ಒಂದು ಕೋಟಿ ಅರವತ್ತೆಂಟು ಲಕ್ಷ ಎಪ್ಪತ್ತೈದುಸಾವಿರ ಯೋಜನದಷ್ಟು ಎತ್ತರವಿದೆ ಎಂದು ಅರ್ಥ. ॥೫೯॥

ಪಂಚಾಶತ್ಕೋಟಿವಿಸ್ತಾರೋ ಯೋಜನಾನಾಂ ಸಮುಸ್ತಶ: ।
ಯಾವಂತ ಏತೇ ವಿಲಿತಾಸ್ತತ್ಪ್ರಮಾಣ ಉದೀರಿತ: ॥೫೯॥

ಸತ್ಯಾಖ್ಯೋ ಬ್ರಹ್ಮಲೋಕಸ್ತು ಯತ್ರ ಬ್ರಹ್ಮಾ ವಿರಾಜತೇ ।
ತತಶ್ಚ ದ್ವಿಗುಣ: ಪ್ರೋಕ್ತೋ ವಿಷ್ಣುಲೋಕಸ್ಸನಾತನ: ॥೬೦॥

ಸಮುಸ್ತಶ:—ಒಟ್ಟು ಮೂರು ಲೋಕಗಳ ಪ್ರಮಾಣವು, ಯೋಜನಾನಾಂ ಪಂಚಾಶತ್ಕೋಟಿವಿಸ್ತಾರ:— ಐವತ್ತು ಕೋಟಿ ಯೋಜನ ವಿಸ್ತಾರವಾಗುವದು. ಏತೇ – ಅಂತರಿಕ್ಷಲೋಕ ಮೊದಲಾದ ಈ ಎಲ್ಲ ಲೋಕಗಳು, ವಿಲಿತಾ ಒಟ್ಟು ಸೇರಿದಾಗ, ಯಾವಂತಃ – ಎಷ್ಟು ವಿಸ್ತಾರವಾಗುವದೋ, ತತ್ಪ್ರಮಾಣಃ— ಅಷ್ಟುವಿಸ್ತಾರವುಳ್ಳದ್ದಾಗಿ, ಸತ್ಯಾಖ್ಯಃ— ಸತ್ಯಲೋಕ ಎಂದು ಹೆಸರುಳ್ಳ. ಯತ್ರ – ಯಾವ ಲೋಕದಲ್ಲಿ, ಬ್ರಹ್ಮಾ – ಚತುರ್ಮುಖ ಬ್ರಹ್ಮದೇವರು, ವಿರಾಜತೇ — ಶೋಭಿಸುತ್ತಿರುವರೋ, ಸಃ – ಅಂತಹ, ಬ್ರಹ್ಮಲೋಕಃ – ಬ್ರಹ್ಮದೇವರ ಲೋಕವು. ಉದೀರಿತ: – ಹೇಳಿಸಿಕೊಳ್ಳಲ್ಪಡುತ್ತದೆ. ತತ: ಚ—ಆ ಸತ್ಯಲೋಕಕ್ಕಿಂತಲೂ, ದ್ವಿಗುಣ: – ಎರಡು ಪಟ್ಟು ವಿಸ್ತಾರವುಳ್ಳದ್ದಾಗಿ, ಸನಾತನ:—ಅನಾದ್ಯನಂತವಾದ, ವಿಷ್ಣುಲೋಕ: – ಶ್ರೀವಿಷ್ಣುದೇವರ ಲೋಕವಾದ ಶ್ರೀವೈಕುಂಠವು, ಪ್ರೋಕ್ತಃ – ಹೇಳಲ್ಪಡುವದು. ॥೫೯–೬೦॥

ಉತ್ತರೋತ್ತರತಸ್ಸರ್ವೇ ಸುಖೇಶತಗುಣೋತ್ತರಾ: ।
ಅನಂತಜನ ಸಂಪೂರ್ಣಾ ಅಪಿ ತೇ ಹೀಚ್ಛಯಾ ಹರೇ: ॥೬೧॥

ಅವಕಾಶವಂತೋ ದಿವ್ಯತ್ವಾತ್ಪೂರ್ಯಂತೇ ನ ಕದಾಚನ ।
ಸರ್ವಕಾಮಸುಖೈಃ ಪೂರ್ಣಾಃ ದಿವ್ಯಸ್ತ್ರೀಪುರುಷೋಜ್ವಲಾಃ ॥೬೨॥

ಸರ್ವೇ — ಎಲ್ಲ ಲೋಕಗಳು, ಉತ್ತರೋತ್ತರತಃ — ಒಂದಕ್ಕಿಂತ ಮುಂದಿನದು (ಮೇಲೆ ಮೇಲೆ ಹೋದಂತೆ) ಸುಖೇ — ಆನಂದದ ವಿಷಯದಲ್ಲಿ, ಶತಗುಣೋತ್ತರಾಃ — ನೂರ್ಮಡಿಸುಖವುಳ್ಳವುಗಳು. ತೇ — ಆ ಲೋಕಗಳು, ಅನಂತ ಜನಸಂಪೂರ್ಣಾಃಅಪಿ—ಅಸಂಖ್ಯ ಜನರಿಂದ ತುಂಬಿದವುಗಳಾದರೂಕೂಡ, ಹರೇಃ ಇಚ್ಛಯಾ ಹಿ—ಶ್ರೀಹರಿಯಇಚ್ಛೆಯಿಂದಲೇ ದಿವ್ಯತ್ವಾತ್ — ಈ ಲೋಕವಿಲಕ್ಷಣವಾದವುಗಳಾದ್ದರಿಂದ, ಅವಕಾಶವಂತಃ — ಇನ್ನೂ ಅವಕಾಶವುಳ್ಳವುಗಳೇ ಆಗಿರುವವು; ಕದಾಚನ — ಎಂದೂ, ನ ಪೂರ್ಯಂತೇ ತುಂಬುವದಿಲ್ಲ, ಸರ್ವಕಾಮಸಂಖ್ಯೈಃ — ಎಲ್ಲತರಹದ ವಿಷಯಭೋಗ ಸಂಖ್ಯೆಗಳಿಂದಲೂ, ಪೂರ್ಣಾಃ — ಪೂರ್ಣವಾಗಿರುವವು; ದಿವ್ಯ ಸ್ತ್ರೀ ಪುರುಷೋಜ್ವಲಾಃ — ಅಲೌಕಿಕ ಸ್ತ್ರೀ ಪುರುಷರಿಂದ ಶೋಭಿಸುವಂತಹವುಗಳು ಆಗಿರುವವು. ॥೬೧-೬೨॥

ದಿವ್ಯರತ್ನಸಮಾಕೀರ್ಣಂ ತಥಾ ಪಾತಾಳಸಪ್ತಕಮ್ ॥
ಅಧಸ್ತಾಚ್ಚೈಷ ದೇವೇನ ಬಲಿನಾ ಸಮುಧಿಷ್ಠಿತಮ್ ॥೬೩॥

ತಥಾ — ಹಾಗೆ, ಅಧಸ್ತಾತ್ — ಕೆಳಭಾಗದಲ್ಲಿ, ದಿವ್ಯ ರತ್ನಸಮಾಕೀರ್ಣಂ - ಶ್ರೇಷ್ಠ ರತ್ನಗಳಿಂದ ತುಂಬಿದಂಥ, ಪಾತಾಳ ಸಪ್ತಕಮ್—ಪಾತಾಳ ಮೊದಲಾದ ಏಳು ಲೋಕಗಳ ಸಮೂಹವು, ಬಲಿನಾ — ಬಲಿಷ್ಠರಾದ, ಶೇಷದೇವೇನ—ಶೇಷವದೇರಿಂದ, ಸಮುಧಿಷ್ಠಿತಂ — ಧರಿಸಲ್ಪಟ್ಟಿದೆ, ಇತ್ಯಪಿ ತ್ವಯಾ ಉಕ್ತಂ — ಎಂಬುದೂ ಹೇಳಲ್ಪಟ್ಟಿದೆ. ॥೬೩॥

ಕಾಮಭೋಗಸಮಾಯುಕ್ತಾ ಬಹುವರ್ಷಸಹಸ್ರಿಣಃ ।
ಸಪ್ತದ್ವೀಪೇಷು ಪುರುಷಾಃ ನಾರ್ಯಶ್ಚೋತ್ಕಾ ಸ್ವರೂಪಿಣಃ ॥೬೪॥

ಸಪ್ತದ್ವೀಪೇಷು — ಏಳು ಪಾತಾಳಾದಿ ಲೋಕಗಳಲ್ಲಿ, ಪುರುಷಾಃ - ಪುರುಷರು, ಚ — ಮತ್ತು, ನಾರ್ಯಃ — ಸ್ತ್ರೀಯರು, ಸುರೂಪಿಣಃ — ಸುಂದರರು, ಸುಂದರಿಯರು, ಕಾಮಭೋಗಸಮಾಯುಕ್ತಾಃ— ಸಮೃದ್ಧ ಭೋಗಪೂರ್ಣರು, ಬಹುವರ್ಷಸಹಸ್ರಿಣಃ— ಸಹಸ್ರಾರುವರ್ಷವಾಸವುಳ್ಳವರು. ಇತಿ — ಎಂಬುದಾಗಿ, ಉಕ್ತಾಃ — ಹೇಳಲ್ಪಟ್ಟಿದ್ದಾರೆ. ॥೬೪॥

ಏಷಾಂ ಚ ಸರ್ವಲೋಕಾನಾಂ ಧಾತಾ ನಾರಾಯಣಃ ಪರಃ ।
ವಿಷ್ಣುಲೋಕಸ್ಥಿತೋ ಮುಕ್ತೈಃ ಸದಾ ಸರ್ವೈರುಪಾಸ್ಯತೇ ॥೬೫॥

ಏಷಾಂ ಸರ್ವಲೋಕಾನಾಂ ಚ — ಈ ಎಲ್ಲ ಲೋಕಗಳಲ್ಲಿರುವ ಎಲ್ಲ ಚೇತನರಿಗೂ, ಧಾತಾ — ರಕ್ಷಕನಾದ, ಪರಃ = ಸರ್ವೋತ್ತಮನಾದ, ವಿಷ್ಣುಲೋಕಸ್ಥಿತಃ—ವಿಷ್ಣುಲೋಕದಲ್ಲಿರುವ, ನಾರಾಯಣಃ— ಶ್ರೀಮನ್ನಾರಾಯಣನು, ಸದಾ - ಯಾವಾಗಲೂ, ಮುಂಕ್ತೈಃ ಉಪಾಸ್ಯತೇ—ಮುಂಕ್ತಚೇತನರಿಂದ—ಸೇವಿಸಲ್ಪಡುತ್ತಾನೆ. ॥೬೫॥

ಸೇವಕಾ ಬ್ರಹ್ಮಣಶ್ಚೈವ ದೇವಾ ವೇದಾಶ್ಚ ಸರ್ವಶಃ ।
ಶಕ್ರಸ್ಯ ಮುನಯಸ್ಸರ್ವೇ ಹರಿಶ್ಚಂದ್ರಶ್ಚ ಭೂಮಿಪಃ ॥೬೬॥

ವೇದಾಃ — ವೇದಾಭಿಮಾನಿಗಳಾದವರು, ಸರ್ವಶಃ ದೇವಾಃಚ — ಎಲ್ಲ ದೇವತೆಗಳೂಕೂಡ, ಬ್ರಹ್ಮಣಃ —

ಸೇವಕಾ ಏವ – ಬ್ರಹ್ಮದೇವರ ಸೇವಕರೇ ಆಗಿರುವರು. ಸರ್ವೇ ಮುನಯಃ – ಎಲ್ಲ ಋಷಿಗಳು, ಭೂವಿಪಃ ಹರಿಶ್ಚಂದ್ರಃ ಚ – ಹರಿಶ್ಚಂದ್ರ ರಾಜನೂ ಕೂಡ, ಶಕ್ರಸ್ಯ ಸೇವಕಾಃ – ಇಂದ್ರನ ಸೇವಕರು. ॥೬೬॥

ಅಖಿಲಾ ಅಪಿ ರಾಜಾನಃ ಪಾಂಡುಶ್ಚಾಸ್ಮತ್ಪಿತಾ ಮುನೇ ॥
ಯಮಸ್ಯೈವಾನುಗಾಃ ಪ್ರೋಕ್ತಾ ರಾಜಭಿಸ್ತೈರ್ಯಮೇನ ಚ ॥೬೭॥
ಉಪಾಸ್ಯಮಾನೋ ಭಗವಾನ್ ರಾಮೋ ಯಮಸಭಾತಲೇ ।
ಉಕ್ತ ಇಂದ್ರೇಣ ಚೋಪಾಸ್ಯೋ ವಾಮನಾತ್ಮಾ ಜನಾರ್ದನಃ ॥೬೮॥

ಹೇ ಮುನೇ – ನಾರದಮುನಿಗಳೇ, ಅಖಿಲಾಃ ರಾಜಾನಃ ಅಪಿ—ಉಳಿದ ರಾಜರೆಲ್ಲರೂಕೂಡ, ಅಸ್ಮತ್ಪಿತಾ ಪಾಂಡುಃಚ – ನಮ್ಮ ತಂದೆಯಾದ ಪಾಂಡುರಾಜನೂಕೂಡ, ಯಮಸ್ಯ ಅನುಗಾಃ ಏವ – ಯಮದೇವರ ಸೇವಕರಾಗಿಯೇ, ಪ್ರೋಕ್ತಾಃ – ನಿಮ್ಮಿಂದ ಹೇಳಲ್ಪಟ್ಟಿದ್ದಾರೆ. ತೈಃ ರಾಜಭಿಃ – ಆ ರಾಜರಿಂದ, ಚ = ಮತ್ತು, ಯಮೇನ – ಯಮದೇವರಿಂದ, ಯಮಸಭಾತಲೇ – ಯಮಲೋಕದಲ್ಲಿ, ಭಗವಾನ್ ರಾಮಃ – ಶ್ರೀಸೀತಾಪತಿಯಾದ ಶ್ರೀ ರಾಮದೇವರು, ಉಪಾಸ್ಯಮಾನಃ – ಸೇವಿಸಲ್ಪಡುತ್ತಿದ್ದಾರೆ, (ಎಂದು) ಉಕ್ತಃ—ಹೇಳಲ್ಪಟ್ಟರು. ಚ – ಹಾಗು, ಇಂದ್ರೇಣ – ದೇವೇಂದ್ರನಿಂದ ವಾಮನಾತ್ಮಾ ಜನಾರ್ದನಃ – ವಾಮನರೂಪಿಯಾದ ನಾರಾಯಣನು, ಉಪಾಸ್ಯಃ ಉಕ್ತಃ ಸೇವಿಸಲ್ಪಡುವವನಾಗಿ ಹೇಳಲ್ಪಟ್ಟನು. ॥೬೭–೬೮॥

ಪ್ರಾದುರ್ಭಾವಾಶ್ಚ ನಿಖಿಲಾ ಬ್ರಹ್ಮಣೋಪಾಸಿತಾಸ್ಸದಾ ।
ವರುಣಸ್ಯಾನುಗಾ ನಾಗಾ ತತ್ರ ಮತ್ಸ್ಯಕೃತಿರ್ಹರಿಃ ॥೬೯॥

ನಿಖಿಲಾಃ ಪ್ರಾದುರ್ಭಾವಾಃಚ ಎಲ್ಲ ಭಗವದವತಾರಗಳೂ, ಬ್ರಹ್ಮಣಾ – ಚತುರ್ಮುಖಿ ಬ್ರಹ್ಮದೇವರಿಂದ, ಸದಾ ಉಪಾಸಿತಾಃ ಯಾವಾಗಲೂ ಸೇವಿಸಲ್ಪಡವು. ನಾಗಾಃ – ನಾಗಗಳು, ವರುಣಸ್ಯ—ವರುಣದೇವರ, ಅನುಗಾಃ – ಸೇವಕರು, ತತ್ರ – ಆ ವರುಣ ಲೋಕದಲ್ಲಿ, ಮತ್ಸ್ಯಕೃತಿಃ ಹರಿಃ – ಮತ್ಸ್ಯರೂಪಿಯಾದ ಶ್ರೀಹರಿಯು. (ಉಪಾಸ್ಯತೇ – ಉಪಾಸಿಸಲ್ಪಡುವನು). ॥೬೯॥

ಗಂಧರ್ವಾ ಧನದಸ್ಯಾಪಿ ತತ್ರ ಕಲ್ಕೀ ಹರಿಃ ಪ್ರಭುಃ ।
ರುದ್ರಸ್ಯೋಗ್ರಾಣಿ ಭೂತಾನಿ ನೃಸಿಂಹಾತ್ಮಾ ಶಿವೇನ ಚ ॥೭೦॥

ಉಪಾಸ್ಯತೇ ಸದಾ ವಿಷ್ಣುರಿತ್ಯಾದ್ಯುಕ್ತಂ ತ್ವಯಾऽನಘ ।
ಸರ್ವರತ್ನಸ್ಥಲಾನ್ದಿವ್ಯಾನ್ದೇವಲೋಕಾನ್ಪ್ರಭಾಷತಾ ॥೭೧॥

ಗಂಧರ್ವಾಃ ಅಪಿ – ಗಂಧರ್ವರೂ, ಧನದಸ್ಯ (ಅನುಗಾಃ) – ಕುಬೇರನ (ಸೇವಕರು), ತತ್ರ ಆ ಕುಬೇರನ ಲೋಕದಲ್ಲಿ, ಪ್ರಭುಃ – ಸರ್ವಸ್ವಾಮಿಯಾದ, ಕಲ್ಕೀ ಹರಿಃ – ಕಲ್ಕಿರೂಪನಾದ ಶ್ರೀಹರಿಯು (ಉಪಾಸ್ಯತೇ,–ಸೇವಿಸಲ್ಪಡುತ್ತಾನೆ) ಉಗ್ರಾಣಿ ಭೂತಾನಿ – ಭಯಂಕರವಾದ ಭೂತಗಣಗಳು, ರುದ್ರಸ್ಯ – ರುದ್ರದೇವರ. (ಅನುಗಾನಿ) – ಸೇವಕರು, ನೃಸಿಂಹಾತ್ಮಾ ವಿಷ್ಣುಃ — ಶ್ರೀ ನೃಸಿಂಹರೂಪಿಯಾದ ಶ್ರೀ ನಾರಾಯಣನು, ಶಿವೇನ – ಶ್ರೀ ರುದ್ರದೇವರಿಂದ, ಸದಾ— ಯಾವಾಗಲೂ, ಉಪಾಸ್ಯತೇ – ಸೇವಿಸಲ್ಪಡುತ್ತಾನೆ. ಇತ್ಯಾದಿ ಚ — ಇತ್ಯಾದಿ ವಿಷಯವೂ ಕೂಡ, ಅನಘ – ಪವಿತ್ರರಾದ ನಾರದರೇ, ದಿವ್ಯಾನ್ – ಕಾಂತಿಯುಕ್ತಗಳಾದ, ಸರ್ವರತ್ನಸ್ಥಲಾನ್ – ಎಲ್ಲರತ್ನಖಚಿತ ಪ್ರದೇಶಗಳುಳ್ಳ, ದೇವಲೋಕಾನ್– ದೇವಲೋಕಗಳ ಬಗ್ಗೆ, ಪ್ರಭಾಷತಾ—ಮಾತನಾಡತಕ್ಕಂಥ, ತ್ವಯಾ — ನಿಮ್ಮಿಂದ, ಉಕ್ತಃ – ಹೇಳಲ್ಪಟ್ಟಿದೆ. ॥೭೦–೭೧॥

ತತ್ರ ಮೇ ಸಂಶಯೋ ಭೂಯಾನ್ಹರಿಶ್ಚಂದ್ರಃ ಕಥಂ ನೃಪಃ ।
ಐಂದ್ರಂ ಸಭಾತಲಂ ಪ್ರಾಪ್ತಃ ಪಾಂಡುರ್ನಾಸ್ಮತ್ಪಿತಾ ಮುನೇ ॥೭೨॥

ಹೇ ಮುನೇ – ಎಲೋ ನಾರದಮುನಿಗಳೇ, ತತ್ರ — ನೀವು ಹೇಳಿದ ಆ ವಿಷಯಗಳ ಮಧ್ಯದಲ್ಲಿ, ಹರಿಶ್ಚಂದ್ರಃ ನೃಪಃ – ಹರಿಶ್ಚಂದ್ರರಾಜನು, ಕಥಂ – ಹೇಗೆ, ಐಂದ್ರಂ ಸಭಾತಲಂ – ಇಂದ್ರದೇವರ ಲೋಕದ ಸಭೆಯನ್ನು, ಪ್ರಾಪ್ತಃ — ಹೊಂದಿದನು, ಅಸ್ಮತ್ಪಿತಾ ಪಾಂಡುಃ – ನಮ್ಮ ತಂದೆಯಾದ, ಪಾಂಡುರಾಜನು, ಕಥಂ – ನ ಪ್ರಾಪ್ತಃ – ಹೇಗೆ ಹೊಂದಲಿಲ್ಲ, (ಇತಿ ಎಂದು) ಭೂಯಾನ್ ಸಂಶಯಃ – ಬಹಳ ಸಂಶಯವು, ಮೇ – ನನಗೆ, ಜಾತಃ – ಬಂದಿರುವದು. ॥೭೨॥

ಇತ್ಯುಕ್ತೋ ನಾರದಃ ಪ್ರಾಹ ರಾಜಸೂಯಕೃತೋನ್ನತಿಮ್ ।
ಹರಿಶ್ಚಂದ್ರಸ್ಯ ತಾಂ ದೃಷ್ಟ್ವಾ ಪಿತಾಯುಮುಸಭಾತಲೇ ।
ಸ್ಥಿತಸ್ತ್ವಾಮವದತ್ಪಾಂಡೂ ರಾಮದ್ವಯಸುದೈವತೇ ॥೭೩॥

ಕರೋತು ರಾಜಸೂಯಂ ಮೇ ಪುತ್ರೋಽಜೇಯಾನುಜಾರ್ಚಿತಃ ।
ಪಾಲಿತೋ ವಾಸುದೇವೇನ ಕಿಂ ತಸ್ಯಾಸಾಧ್ಯಮತ್ರ ಹಿ ॥೭೪॥

ಇತಿ ಉಕ್ತಃ — ಈ ರೀತಿ ಧರ್ಮರಾಜನಿಂದ ಕೇಳಲ್ಪಟ್ಟ ನಾರದಃ — ನಾರದ ಋಷಿಗಳು, ರಾಜಸೂಯಂ ಕೃತೋನ್ನತಿಂ — ರಾಜಸೂಯಯಾಗದಿಂದ ಆಗಿರುವ ಫಲದ ಉತ್ಕರ್ಷವನ್ನು, ಪ್ರಾಹ — ಹೇಳಿದರು. ರಾಮದ್ವಯಸುದೈವತೇ – ರಾಘವರಾಮ ಪರಶುರಾಮರೂಪವುಳ್ಳ ಯಮಸಭಾತಲೇ — ಯಮಲೋಕದ ಸಭೆಯಲ್ಲಿ ಸ್ಥಿತಃ – ಇರುವ, ಪಿತಾ – ನಿನ್ನ ತಂದೆಯಾದ, ಪಾಂಡುಃ – ಪಾಂಡುರಾಜನು ಹರಿಶ್ಚಂದ್ರಸ್ಯ — ಹರಿಶ್ಚಂದ್ರರಾಜನ, ತಾಂ – ಆ ಇಂದ್ರಲೋಕಪ್ರಾಪ್ತಿ ರೂಪವಾದ ರಾಜಸೂಯಯಾಗದ ಫಲವನ್ನು ದೃಷ್ಟ್ವಾ – ನೋಡಿ, ತ್ವಾಂ – ನಿನ್ನನ್ನು ಕುರಿತು ಹೇಳಲು, ಅಜೇಯಾನುಜಾರ್ಚಿತಃ — ಯಾರಿಗೂ ಸೋಲದಂಥ ತಮ್ಮಂದಿರಿಂದ ಸೇವಿತನಾದ ವಾಸುದೇವೇನ ಪಾಲಿತಃ – ಶ್ರೀಕೃಷ್ಣನಿಂದ ರಕ್ಷಿತನಾದ, ಮೇ ಪುತ್ರಃ – ನನ್ನ ಜ್ಯೇಷ್ಠಪುತ್ರನಾದ ಯುಧಿಷ್ಠಿರನು, ರಾಜಸೂಯಂ — ರಾಜಸೂಯಯಾಗವನ್ನು, ಕರೋತು — ಮಾಡಲಿ, ತಸ್ಯ – ಶ್ರೀಕೃಷ್ಣ ಪರಮಾತ್ಮನ ರಕ್ಷಣೆಯುಳ್ಳ ಅಜೇಯ ತಮ್ಮಂದಿರ ಸಹಕಾರವುಳ್ಳ ಆ ಯುಧಿಷ್ಠಿರನಿಗೆ, ಅತ್ರ — ಈ ಸಂದರ್ಭದಲ್ಲಿ, ಕಿಂ ಹಿ ಅಸಾಧ್ಯಂ — ಯಾವುದು ತಾನೇ ಅಸಾಧ್ಯವಾದದ್ದು ? (ಯಾವ ಕಾರ್ಯವೂ ಅಸಾಧ್ಯವಲ್ಲ) ಇತಿ — ಎಂದು, ಅವದತ್ — ನನಗೆ ಹೇಳಿರುವನು ಇತಿ ಚ — ಎಂದೂಕೂಡ, ಪ್ರಾಹ – (ನಾರದರು) ಹೇಳಿದರು. ॥೭೩-೭೪॥

ಏತತ್ ಶ್ರುತ್ವಾ ಧರ್ಮಸುತೋ ಭ್ರಾತೃಭಿಃ ಸಹಿತೋ ವಶೀ ।
ಅವಾಪ್ತಿಂ ರಾಜಸೂಯಸ್ಯ ಮುಂತ್ರಯಾಮಾಸ ಧರ್ಮವಿತ್ ॥೭೫॥

ವಶೀ – ಎಲ್ಲವನ್ನು ವಶದಲ್ಲಿಟ್ಟುಕೊಂಡಿರುವ, ಧರ್ಮವಿತ್ — ಧರ್ಮಜ್ಞನಿಯಾದ, ಧರ್ಮಸುತಃ – ಯಮಧರ್ಮನ (ಅವತಾರ) ಮಗನಾದ ಯುಧಿಷ್ಠಿರನು, ಏತತ್ – ನಾರದ ಮಹರ್ಷಿಗಳು ಹೇಳಿದ ಈ ವಿಷಯವನ್ನು, ಶ್ರುತ್ವಾ — ಕೇಳಿ, ಭ್ರಾತೃಭಿಃ ಸಹಿತಃ ಸನ್ — ತಮ್ಮಂದಿರಿಂದ ಕೂಡಿದವನಾಗಿ, ರಾಜಸೂಯಸ್ಯ – ರಾಜಸೂಯಯಾಗದ, ಅವಾಪ್ತಿಂ — ಸಂಪಾದನೆಯಬಗ್ಗೆ, (ಆಚರಣೆಯ ಬಗ್ಗೆ), ಮುಂತ್ರಯಾಮಾಸ — ಆಲೋಚಿಸಿದನು. ॥೭೫॥

ಸುಕಾರ್ಯಮೇತದಿತ್ಯಲಂ ನಿಶಮ್ಯ ಸೋದರೋದಿತವ್ ।
ಅಯಾತಯುತ್ಸ್ವಸಾರಥಿಂ ಸ ಕೇಶವಾಯ ಭೂಪತಿಃ ॥೭೬॥

ಏತತ್ — ಈ ರಾಜಸೂಯಯಾಗವು, ಅಲಂ — ಅವಶ್ಯವಾಗಿ, ಸುಕಾರ್ಯಂ – ಚೆನ್ನಾಗಿ ಮಾಡಲ್ಪಡಬೇಕು, ಇತಿ – ಎಂದು, ಸೋದರೋದಿತವ್ — ಸಹೋದರರು ಹೇಳಿದ್ದನ್ನು, ನಿಶಮ್ಯ — ಕೇಳಿ, ಸಃ ಭೂಪತಿಃ — ಆ ಧರ್ಮರಾಜನು, ಸ್ವಸಾರಥಿಂ – ತನ್ನ ಸಾರಥಿಯನ್ನು, ಕೇಶವಾಯ — ಶ್ರೀಕೃಷ್ಣನಿಗಾಗಿ, (ಶ್ರೀಕೃಷ್ಣನನ್ನು ಕರೆಯುವದಕ್ಕಾಗಿ), ಅಯಾತಯತ್ — ಕಳಿಸಿದನು. ॥೭೬॥

ಭಾವಾನುವಾದ (೩೭--೭೬)

ಶ್ರೀಕೃಷ್ಣ ಪರಮಾತ್ಮನು ಯಜ್ಞಕ್ಕೆ ಒಂದಂಥ, ಯಾವಾಗಲೂ ತನ್ನ ಸೇವಕರೇ ಆದಂಥ ಬ್ರಹ್ಮಾದಿದೇವತೆಗಳನ್ನು ಪೂಜಿಸಿ, ಬೀಳ್ಕೊಟ್ಟ, ಬ್ರಾಹ್ಮಣರನ್ನೂ ಪೂಜಿಸಿದನು. ಲೋಕ ಶಿಕ್ಷೆಗಾಗಿ ಪೂಜಿಸಿದನು, ಎಂದು ತಿಳಿಸುವದಕ್ಕಾಗಿ ಸ್ವಪರಿಚಾರಕಾನ್ ಎಂಬ ಪದಪ್ರಯೋಗವಾಡಿದ್ದಾರೆ. ಹಾಗೆ ಬ್ರಾಹ್ಮಣರನ್ನೂ ಪೂಜಿಸಿದನು. ಪರಿವಾರ ಸಮೇತನಾಗಿ ಅವಭೃಥ ಸ್ನಾನವನ್ನು ಮಾಡಿದನು. ದ್ವಾರಕೆಗೆ ಮರಳುತ್ತಿರುವಾಗ ದಂತವಕ್ರನು ಶ್ರೀಕೃಷ್ಣನನ್ನು ತಡೆದನು. ಆಗ ಅವನನ್ನು ಹಾಗು ಅವನ ಜೊತೆಗಿರುವ ವಿದೂರಥನೆಂಬ ದೈತ್ಯನನ್ನೂ ಗದೆಯಿಂದ ಸಂಹರಿಸಿದನು. ವಿಡೂರಥನು ಹಾಗೂ ದಂತವಕ್ರನಲ್ಲಿರುವ ಅಸುರನು ತಮಿಸ್ರಗೆ ಹೋಗುವರು. ನಿಶ್ಚಿತ ಹೋಗುವರು ಎಂಬ ಅರ್ಥ್ದಲ್ಲಿ 'ಹೋದರು' ಎಂದು ಭೂತಕಾಲ ಪ್ರಯೋಗ ಮಾಡಿರುವರು. ದಂತವಕ್ರನಲ್ಲಿರುವ ಶ್ರೀಹರಿಯ ದ್ವಾರಪಾಲಕನಾದ ವಿಜಯನು ಶ್ರೀಕೃಷ್ಣನಲ್ಲಿ ಪ್ರವೇಶಿಸಿದನು, ಶ್ರೀಕೃಷ್ಣನು ಭೂಲೋಕದಿಂದ ಪರಂಧಾಮಕ್ಕೆ ಬಂದಾಗ ಆ ವಿಜಯನು ಶ್ರೀಕೃಷ್ಣನಿಂದ ಹೊರಬಂದು ತನ್ನ ಮೂಲ ರೂಪವನ್ನು ಸೇರುವನು. ದಂತವಕ್ರನ ಸಂಹಾರಾನಂತರ ಶ್ರೀಕೃಷ್ಣನು ತನ್ನ ದ್ವಾರಕಾ ಪಟ್ಟಣಕ್ಕೆ ಬಂದು ಅರ್ಜುನನಿಗೆ ಉಪದೇಶಿಸಿದನು. ಮೃತನಾದ ವಿಪ್ರಕುಮಾರನನ್ನು ತರಲು ಹೋದಾಗ ಕಂಡವನ್ದಿ ಏನೇನು ಎಂದು ಅರ್ಜುನನು ಕೇಳಿದಾಗ ಶ್ರೀಕೃಷ್ಣನು ಅದರ ವಿವರವನ್ನು ಹೇಳಿದನು. ಮೊದಲಿನ ದ್ವೀಪ ಸಾಗರಗಳು ಒಂದೊಂದು ಲಕ್ಷ ಯೋಜನ ವಿಸ್ತೃತವಾಗಿರುತ್ತವೆ. ಉಳಿದ ದ್ವೀಪ ಸಾಗರಗಳು ಒಂದಕ್ಕಿಂತ ಮುಂದಿನದು ಎರಡು ಪಟ್ಟು ವಿಸ್ತೃತವಾಗಿರುವವು. ಕೊನೆಯದಾದ ಶುದ್ಧೋದಕ ಸಮುದ್ರವು ೬ಳ ಲಕ್ಷ ಯೋಜನ ವಿಸ್ತೃತವಾಗಿದೆ. ಅದರ ಹೊರಗೆ ಅದರ ಒಂದುವರೆ ಪಟ್ಟಿನಷ್ಟು ಅಂದರೆ ೯೬ ಲಕ್ಷ ಯೋಜನ ವಿಸ್ತೃತವಾದ ಪ್ರದೇಶವಿದ್ದು ಅದು ಭಂಗಾರಮಯವಾಗಿದೆ. ಹೊರಭಾಗ ವಜ್ರ ಲೇಪನದಿಂದ ಕೂಡಿದೆ. ಇದೆಲ್ಲ ಪ್ರದೇಶವು 'ಲೋಕ' ಎಂಬ ಹೆಸರುಳ್ಳದ್ದು. ಇದರ ದಟ್ಟಪಟ್ಟು ವಿಸ್ತೃತವಾದ, ಮಿಥ್ಯಾಜ್ಞಾನಿಗಳು ಬೀಳತಕ್ಕ ಅಂಧಂತಮಸ್ ಎಂಬ ಸ್ಥಳವಿದೆ. ಅದರ ದುಪ್ಪಟ್ಟು ಘನೋದಕವಿದ್ದು, ಅದರ ಕೊನೆಗೆ ನನ್ನ ಸ್ಥಾನವಿದೆ ಅದನ್ನು ನೀನು ಕಂಡಿರುವೆ. ಅಲ್ಲಿ ನಾನು ಮುಕ್ತರಾದ ಬ್ರಹ್ಮಾದಿ ದೇವತೆಗಳಿಂದ ಸೇವಿತನಾಗಿರುವೆನು. ಲೋಕಾಲೋಕ ಪ್ರದೇಶವು ಐವತ್ತೈದು ಲಕ್ಷ ಐವತ್ತು ಸಾವಿರ ಯೋಜನ ವಿಸ್ತೃತವಾಗಿದೆ. ಬ್ರಹ್ಮಾಂಡವು ಮೇರು ಪರ್ವತದಿಂದ ಇಪ್ಪತ್ತೈದು ಕೋಟಿ ಯೋಜನವಿಸ್ತಾರವಾಗಿದ್ದು, ನಾಲ್ಕು ದಿಕ್ಕುಗಳಲ್ಲಿ ಮೇಲೆ ಕೆಳಗೆ ಕೂಡ ಹಬ್ಬಿದೆ. ಇದರ ಸುತ್ತಲೂ ನೀರು, ಅಗ್ನಿ, ನಭಸ್, ಅಹಂಕಾರ, ಮಹತ್ತತ್ವ, ಸತ್ವ, ರಜಸ್, ತಮಸ್ ಇವುಗಳಿಂದ ಆವೃತವಾಗಿದೆ. ಅದೆಲ್ಲದರ ಹೊರಗೂ ನಾನು ವ್ಯಾಪ್ತನಾಗಿರುವೆನು. ನಾನು ಅನಂತನು, ಅನಂತ ರೂಪವುಳ್ಳವನು, ಯಾವದೇ ರೂಪಗಳಲ್ಲಿ ಭೇದರಹಿತನು, ಅನಂತ ತಲೆ, ಅನಂತ ಕಣ್ಣು ಅನಂತ ಪಾದ, ಅನಂತ ಕೈ, ಅನಂತ ತೊಡೆಗಳುಳ್ಳವನು. ಅನಂತ ಮಹಾತ್ಮ್ಯವು ನನ್ನದು. ಜ್ಞಾನಾನಂದ ಶರೀರವುಳ್ಳವನು. ನೀನು, ಉಳಿದವರು ಎಲ್ಲರೂ ನನ್ನ ವಶರೇ ಆಗಿರುವಿರಿ. ನನ್ನ ಅನುಗ್ರಹದಿಂದಲೇ ಎಲ್ಲರಿಗೂ ಸಾಮರ್ಥ್ಯ, ವಿಜಯ ಮೊದಲಾದ ಗುಣಗಳು ಬಂದಿರುತ್ತವೆ. ಆದ್ದರಿಂದ ಯಾರೇ ದೊಡ್ಡಕಾರ್ಯ ಮಾಡಿದಾಗ ಯಾರೂ ಆಶ್ಚರ್ಯ ಪಡಬೇಕಿಲ್ಲ. ಏಕೆಂದರೆ ಅಲ್ಲಿ ಕಾರ್ಯವಾದದ್ದು ನನ್ನಿಂದಲೇ ಆಗಿರುತ್ತದೆ. ಹಾಗೆ ದೊಡ್ಡ ಕಾರ್ಯವನ್ನು ಮಾಡಿದವನು ದರ್ಪ ಒಡಲೂಬಾರದು, ಅಹಂಕಾರ ಹೊಂದಬಾರದು. ಏಕೆಂದರೆ ಆ ಕಾರ್ಯವಾಗುವಲ್ಲಿ ಅವನು ದ್ವಾರ ಮಾತ್ರನಿದ್ದಂತೆ. ನಾನೇ ಮಾಡಿದವನು. ಆದ್ದರಿಂದ, ಅರ್ಜುನ, ನನ್ನಲ್ಲಿ ಮನಸ್ಸನ್ನಿಡು: ನನ್ನ ಭಕ್ತನಾಗು. ನನ್ನ ಉದ್ದೇಶವಾಗಿ ಯಜ್ಞ ಮಾಡು, ನನಗೆ ನಮಸ್ಕರಿಸು. ಅಂದರೆ ನನ್ನನ್ನೇ ಹೊಂದುವಿ. ಇದು ಸತ್ಯವಾದ ಮಾತು ಪ್ರಿಯನಾದ ನಿನ್ನ ಆಣೆಮಾಡಿ ಹೇಳುವೆನು ಎಂದು ಶ್ರೀಕೃಷ್ಣನು ಉಪದೇಶಿಸಿದನು. ಆಗ ಅರ್ಜುನನು ಶ್ರೀಕೃಷ್ಣನನ್ನು ಸಾಷ್ಟಾಂಗ ಪ್ರಣಮಿಸಿ ತನ್ನ ಅಪರಾಧವನ್ನು ಕ್ಷಮಿಸು ಎಂದು ಪ್ರಾರ್ಥಿಸಿದನು. ಎಲ್ಲ ಪಾಂಡವರು ಕೆಲವು ತಿಂಗಳುಗಳ ಪರ್ಯಂತ ಶ್ರೀಕೃಷ್ಣನ ಸನ್ನಿಧಾನದಲ್ಲಿ ವಾಸಮಾಡಿ ಶ್ರೀಕೃಷ್ಣ ಜ್ಞಾನವನ್ನು ಪಡೆದವರಾಗಿ, ಶ್ರೀಕೃಷ್ಣನಿಂದ ಅದೃಶರಾಗಿ ತಮ್ಮ ಸ್ಥಳಕ್ಕೆ (ಇಂದ್ರಪ್ರಸ್ಥಕ್ಕೆ) ಹೋದರು. ಅಲ್ಲಿ ಒಮ್ಮೆ ಸಭಾಸ್ಥಾನದಲ್ಲಿ ಧರ್ಮರಾಜನು ರಾಜರಿಂದ, ಸಹೋದರರಿಂದ ಸಹಿತನಾಗಿ ಕುಳಿತಿರುವಾಗ ನಾರದರ ಮುಖದಿಂದ ಅನೇಕ ದೇವತೆಗಳ ಲೋಕಗಳಹಾಗುಹೋಗುಗಳ ಬಗ್ಗೆ ವಿಚಾರವನ್ನು ತಿಳಿದನಂತರ, ಅವರು ಹೇಳಿದ್ದನ್ನು ಅನುಮೋದಿಸಿ ತಾನು ಒಂದು ಪ್ರಶ್ನೆಯನ್ನು ಮಾಡುವನು. ಅಲ್ಲಿ ಅದುವಾದ ಹೀಗಿದೆ. — ಅಂತರಿಕ್ಷ ಲೋಕವು ಒಂದು ಲಕ್ಷ ಯೋಜನ ಉಚ್ಛ್ರಿತವಾಗಿದೆ; ಸ್ವರ್ಗವು ಐವತ್ತು ಲಕ್ಷ ಯೋಜನ ಉಚ್ಛ್ರಿತವಾಗಿದೆ. ವಿಮಾನ ಸಮೂಹದಿಂದ

ಕೂಡಿದೆ. ಭೂವಲೋ೯ಕ, ಸ್ವರ್ಗಗಳು ಒಂದು ಕೋಟಿ ಯೋಜನ ವಿಸ್ತೃತವಾಗಿವೆ. ಮಹಲೋ೯ಕ, ಜನೋಲೋಕ, ತಪೋಲೋಕಗಳು ಕ್ರಮವಾಗಿ ಒಂದುವರಿ ಪಟ್ಟು ಹೆಚ್ಚು ಎತ್ತರವುಳ್ಳವುಗಳು. ಈ ಎಲ್ಲ ಲೋಕಗಳು ಸೇರಿ ಒಟ್ಟು ಜಿವತ್ತು ಕೋಟಿ ಯೋಜನವಾಗಿದ್ದರೆ, ಆಪ್ಟೇ ವಶಾನವುಳ್ಳದ್ದು ಸತ್ಯಲೋಕವು. ಅಲ್ಲಿ ಬ್ರಹ್ಮದೇವರು ಇದ್ದಾರೆ. ಅದಕ್ಕಿಂತ ದುಪ್ಪಟ್ಟು (ಎರಡು ಪಟ್ಟು) ನಿರ್ವಿಕಾರವಾದ ಭಗವಲ್ಲೋಕವಿದೆ. ಎಲ್ಲ ಲೋಕಗಳು ಒಂದಕ್ಕಿಂತ ಒಂದು ಹೆಚ್ಚು ಸುಖವುಳ್ಳವುಗಳು. ಅನಂತ ಜನರಿಂದ ತುಂಬಿದ್ದರೂ ಕೂಡ ಭಗವಂತನ ಇಚ್ಛೆಯಿಂದ ಇನ್ನೂ ಅವಕಾಶವುಳ್ಳವುಗಳೇ ಆಗಿವೆ; ಎಂದೂ ಕೂಡ ಅವಕಾಶವಿಲ್ಲದ ಹಾಗೆ ಆಗುವದಿಲ್ಲ. ಸರ್ವಭೋಗ ಸುಖಗಳಿಂದ ಕೂಡಿವೆ. ಸುಂದರ ಸ್ತ್ರೀ ಪುರುಷರಿಂದ ಕೂಡಿವೆ. ಹೀಗೆಯೇ ಭೂಲೋಕದ ಕೆಳಭಾಗದಲ್ಲಿ ಪಾತಾಳಾದಿ ಏಳು ಲೋಕಗಳು ಇವೆ. ಅವೆಲ್ಲರ ತ್ಪಭರಿತವಾದವುಗಳು. ಬಲಿಷ್ಠರಾದ ಶೇಷದೇವರು ಇವುಗಳನ್ನು ಧರಿಸಿದ್ದಾರೆ. ಸಪ್ತ ದ್ವೀಪಗಳಲ್ಲಿರುವ ನರ—ನಾರಿಯರೆಲ್ಲ ಬಹುವರ್ಷ ಆಯುಷ್ಯವುಳ್ಳವರು. ಬಹುಭೋಗಷ್ಠಳ್ಳವರು ಆಗಿರುವರು. ಹೀಗೆ ಇರುವ ಈ ಎಲ್ಲ ಲೋಕಗಳಿಗೂ ನಿಯಾಮಕನಾದ ಸರ್ವೋತ್ತಮನಾದ ಶ್ರೀಮನ್ನಾರಾಯಣನು ವಿಷ್ಣುಲೋಕದಲ್ಲಿದ್ದು ವುಕ್ತರಿಂದ ಸದಾ ಸೇವಿತನಾಗಿರುವನು. ಎಲ್ಲ ದೇವತೆಗಳು, ವೇದಾಭಿಮಾನಿಗಳು, ಎಲ್ಲರೂ ಬ್ರಹ್ಮದೇವರ ಸೇವಕರೇ ಆಗಿರುವರು. ವುನಿಗಳು, ಹರಿಶ್ಚಂದ್ರ ರಾಜನು ಇಂದ್ರನ ಸೇವಕರಾಗಿದ್ದದ್ದನ್ನು ಹೇಳಿದಿರಿ. ಆದರೆ ಉಳಿದ ರಾಜರು ನಮ್ಮ ತಂದೆಯಾದ ಪಾಂಡುರಾಜನೂ ಕೂಡ ಯಮನ ಅನುಗರಾಗಿ ಸೇವಕರಾಗಿದ್ದಾರೆಂದು ಹೇಳಿದಿರಿ. ಅಲ್ಲಿ ಆ ರಾಜರುಗಳು, ಯಾವುದಿಂದ ಶ್ರೀ ರಾಮದೇವರು ಉಪಾಸಿಸಲ್ಪಡುತ್ತಿದ್ದಾರೆಂದೂ, ಇಂದ್ರದೇವನಿಂದ ಸ್ವರ್ಗ ಸಭೆಯಲ್ಲಿ ಶ್ರೀ ವಾಮನರೂಪಿ ಪರಮಾತ್ಮನು ಉಪಾಸಿತನಾಗಿದ್ದಾನೆಂದೂ, ಬ್ರಹ್ಮದೇವರು ಎಲ್ಲ ಭಗವದ್ರೂಪಗಳನ್ನು ಉಪಾಸಿಸುತ್ತಾರೆಂದೂ ಹೇಳಿದಿರಿ. ವರುಣ ದೇವರು ತನ್ನ ಸೇವಕರಾದ ನಾಗಗಳಿಂದ ಸಹಿತನಾಗಿ ಮತ್ಸ್ಯರೂಪಿ ಭಗವಂತನನ್ನು ಸೇವಿಸುತ್ತಾನೆ ಎಂದೂ, ಕುಬೇರನು ತನ್ನ ಸೇವಕ ಪರಿವಾರರಾದ ಗಂಧರ್ವರಿಂದ ಸಹಿತನಾಗಿ ಕಲ್ಕಿರೂಪಿ ಶ್ರೀ ಹರಿಯನ್ನು ಪೂಜಿಸುತ್ತಾನೆಂದೂ, ರುದ್ರದೇವರು ತನ್ನ ಸೇವಕರಾದ ಭೂತಗಳಿಂದ ಕೂಡಿಕೊಂಡು ಶ್ರೀ ನೃಸಿಂಹರೂಪಿ ದೇವರನ್ನು ಸೇವಿಸುತ್ತಾರೆ ಎಂದೂ ಹೇಳಿದ್ದೀರಿ. ಹರಿಶ್ಚಂದ್ರರಾಜನು ಸ್ವರ್ಗಸಭೆಯನ್ನು ಹೇಗೆ ಹೊಂದಿದನು? ನಮ್ಮ ತಂದೆಯು ಏಕೆ ಹೋಗಲಿಲ್ಲ? ಎಂಬ ಸಂಶಯವು ನನಗೆ ಬಂದಿದೆ. ಹೀಗೆ ಧರ್ಮರಾಜನು ಪ್ರಶ್ನಿಸಿದಾಗ ನಾರದರು ರಾಜಸೂಯಯಾಗದ ಮಹತ್ವವನ್ನು, ಅದನ್ನು ಮಾಡಿದವರಿಗೆ ಬರುವ ಉತ್ಕರ್ಷವನ್ನು ಹೇಳಿ, ಪಾಂಡುರಾಜನು ಹರಿಶ್ಚಂದ್ರನಿಗೆ ರಾಜಸೂಯಯಾಗದಿಂದ ಬಂದ ಆ ಉನ್ನತಿಯನ್ನು ನೋಡಿ, ನಿನಗೆ ಹೇಳಲು ನನ್ನ ಮುಂದೆ ಹೇಳಿದ್ದಾನೆ. ಅದೇನೆಂದರೆ ನನ್ನ ಮಗನಾದ ಧರ್ಮರಾಜನು ರಾಜಸೂಯಯಾಗವನ್ನು ಮಾಡಲಿ. ಶ್ರೀಕೃಷ್ಣನ ದಯೆಯುಳ್ಳ, ಅಜೇಯರಾದ ತಮ್ಮಂದಿರ ಸಹಾಯವುಳ್ಳ ಅವನಿಗೆ ಯಾವದು ತಾನೇ ಅಸಾಧ್ಯವಿದೆ? ಎಂದು ಹೇಳಿರುವನು ಎಂದು ಹೇಳಿದರು. ಇದನ್ನು ಕೇಳಿದ ಧರ್ಮರಾಜನು ರಾಜಸೂಯಯಾಗ ಮಾಡುವದರ ಒಗ್ಗೆ ತಮ್ಮಂದಿರಿಂದ ಕೂಡಿಕೊಂಡು ವಿಚಾರಿಸಿದನು. ಎಲ್ಲರೂ ಅವಶ್ಯವಾಗಿ ಮಾಡಬೇಕೆಂದು ಹೇಳಿದ್ದನ್ನು ಕೇಳಿ ಶ್ರೀಕೃಷ್ಣ ಪರಮಾತ್ಮನನ್ನು ಕರೆಯಲು ತನ್ನ ಸಾರಥಿಯನ್ನು ಕಳಿಸಿದನು.

ತದೈವ ಕೇಶವಸ್ಯ ಯಾ ಸ್ತ್ರಿಯಸ್ತದೀಯ ತಾತಕೈ: ।
ಸಹೋದರೈಶ್ಚ ಯಾಪಿತಸ್ಸುದೂತ ಆಸ ಮಾಧವಮ್ ॥೭೭॥

ತದಾಪಿವ – ಅದೇ ಸಮಯದಲ್ಲಿ, ಕೇಶವಸ್ಯ - ಶ್ರೀಕೃಷ್ಣನ, ಯಾ: ಸ್ತ್ರಿಯ: – ನರಕಾಸುರನಿಂದ ತಂದ ಯಾವ ಹದಿನಾರುಸಾವಿರದಒಂದುನೂರು ಸ್ತ್ರೀಯರಲ್ಲಿಯ ರಾಜಕುಮಾರಿಯರೋ, ತದೀಯತಾತಕೈ:-ಅವರ ತಂದೆಗಳಿಂದ,(ತಾ ಸಾಂ) ಸಹೋದರೈ: ಚ – ಅವರ ಸಹೋದರರಿಂದಲೂ ಕೂಡ, ಯಾಪಿತ: – ಕಳಿಸಲ್ಪಟ್ಟ, ಸುದೂತ:–ಶ್ರೇಷ್ಠದೂತನು, ಮಾಧವಂ ಶ್ರೀಕೃಷ್ಣನನ್ನು ಕುರಿತು, ಆಪ—ಬಂದನು. ॥೭೭॥

ಪ್ರಣಮ್ಯ ಕೇಶವಂ ವಚಸ್ಸ ಆಹ ಮಾಗಧೇನ ತೇ ।
ವಿವಾಹಬಾಂಧವಾ ರಣೇ ವಿಜಿತ್ಯರೋಧಿತಾ ಗಿರೌ ॥೭೮॥

ಸಃ – ಅವನು, ಕೇಶವಂ – ಶ್ರೀಕೃಷ್ಣನನ್ನು, ಪ್ರಣಮ್ಯ – ನಮಸ್ಕರಿಸಿ, ವಚಃ – ಈ ಮುಂದೆ ಹೇಳುವ ಮಾತನ್ನು, ಆಹ – ಹೇಳಿದನು, ತೇ – ನಿನ್ನ, ವಿವಾಹ ಬಾಂಧವಾಃ – ವಿವಾಹ ಬಾಂಧವರು (ಅಂದರೆ ಬೀಗರು, ಮಾವ, ಭಾವ ಇತ್ಯಾದಿ ಜನರು) ರಣೇ – ಜರಾಸಂಧನ ಜೊತೆಗಿನ ಯುದ್ಧದಲ್ಲಿ, ಮಾಗಧೇನ ವಿಜಿತ್ಯ – ಗೆದ್ದು, (ಜರಾಸಂಧನಿಂದ ಗೆಲ್ಲಲ್ಪಟ್ಟು) ಗಿರೌ – ಪರ್ವತದಲ್ಲಿ, ರೋಧಿತಾಃ – ಬಂಧಿಸಲ್ಪಟ್ಟಿದ್ದಾರೆ. ॥೭೮॥

ನೃಪಾಯುತದ್ವಯೇನ ಸೋಽಷ್ಟವಿಂಶಕೈಶ್ಶತೈರಪಿ ।
ಯಿಯಕ್ಷುರುಗ್ರರೂಪಿಣಂ ತ್ರಿಲೋಚನಂ ತ್ವಯಿಸ್ಥಿತೇ ॥೭೯॥

ಸಃ – ಆ ಜರಾಸಂಧನು, ತ್ವಯಿ ಸ್ಥಿತೇಸತಿ – ನೀನು ಭೂಮಿಯಲ್ಲಿರುವಾಗಲೇ, ನೃಪಾಯುತದ್ವಯೇನ, ಅಷ್ಟವಿಂಶಕೈಃಶತೈಃಅಪಿ—ಇಪ್ಪತ್ತೆಂಟುಸಾವಿರ ರಾಜರಸಮೂಹದಿಂದ ಹಾಗೂ ಇಪ್ಪತ್ತೆಂಟುನೂರರಿಂದ (ಅಂದರೆ ಇಪ್ಪತ್ತೆರಡು ಸಾವಿರದ ಎಂಟುನೂರು ರಾಜರ ಸಮೂಹದಿಂದ—ಅವರನ್ನುಬಲಿಯುನ್ನಾಗಿ ಕೊಡುವದರಿಂದ), ಉಗ್ರರೂಪಿಣಂ—ಉಗ್ರ ನಾಮಕರಾದ, ದುಷ್ಟರಿಗೆ ಭಯಂಕರ ಸ್ವರೂಪವುಳ್ಳ, ತ್ರಿಲೋಚನಂ—ಶ್ರೀ ರುದ್ರದೇವರನ್ನು, ಯಿಯಕ್ಷುಃ—ಯಜ್ಞದಿಂದ ಆರಾಧಿಸಲು ಇಚ್ಛೆವುಳ್ಳವನು, ವರ್ತತೇ – ಆಗಿರುತ್ತಾನೆ. ॥೭೯॥

ವಿಮೋಚಯಸ್ವ ತಾನ್ಸರ್ವಾನ್ ನಿಹತ್ಯ ಮಾಗಧೇಶ್ವರಮ್ ।
ಅವೈದಿಕಂ ಮಖಂ ಚ ತಂ ವಿಲುಂಪ ಧರ್ಮಗುಪ್ತಯೇ ॥೮೦॥

ಹೇ ಪ್ರಭೋ – ಸರ್ವಸ್ವತಂತ್ರನಾದ ಶ್ರೀ ಕೃಷ್ಣನೇ, ಮಾಗಧೇಶ್ವರಂ—ಆ ಜರಾಸಂಧನನ್ನು ನಿಹತ್ಯ – ಕೊಂದು, ತಾನ್ – ಆ ರಾಜರನ್ನೆಲ್ಲ, ವಿಮೋಚಯಸ್ವ — ಬಿಡಿಸು. ಧರ್ಮಗುಪ್ತಯೇ – ಸರಿಯಾದ ಧರ್ಮದ ರಕ್ಷಣೆಗಾಗಿ. ಅವೈದಿಕಂ – ವೇದವಿರುದ್ಧವಾದ, ತಂ ಮಖಂ ಚ – ಆ ಯಜ್ಞವನ್ನೂ ಕೂಡ, ವಿಲುಂಪ – ಲೋಪಗೊಳಿಸು (ನಿಲ್ಲಿಸು, ತಪ್ಪಿಸು), (ಈ ರೀತಿಯಾಗಿ ಆ ದೂತನು ಹೇಳಿದನು.) ॥೮೦॥

ಇತೀರಿತೋಽಥ ಸಾರಥಿಂ ನಿಶಾಮ್ಯ ಧರ್ಮಜಸ್ಯ ಚ ।
ನಿಶಮ್ಯ ತದ್ವಚಸ್ತದಾ ಜಗಾಮ ಪಾಂಡವಾಲಯಮ್ ॥೮೧॥

ಇತಿ ಈ ರೀತಿಯಾಗಿ, ಈರಿತಃ – ಆ ರಾಜದೂತನಿಂದ ಪ್ರಾರ್ಥಿಸಲ್ಪಟ್ಟ, ಭಗವಾನ್- ಶ್ರೀ ಕೃಷ್ಣನು, ಅಥ ಅವೇ ಸಮಯದಲ್ಲಿಯೇ, ಧರ್ಮಜಸ್ಯ – ಯುಧಿಷ್ಠಿರನ, ಸಾರಥಿಂ ಚ – ಸಾರಥಿಯನ್ನೂ ಕೂಡ, ನಿಶಾಮ್ಯ – ನೋಡಿ, ತದ್ವಚಃ – (ಅವನದ್ವಾರ)ಪಾಂಡವರ ಪ್ರಾರ್ಥನೆಯನ್ನೂ ಕೂಡ, ನಿಶಮ್ಯ – ಕೇಳಿ ಪಾಂಡವಾಲಯಮ್ — ಪಾಂಡವರ ಗೃಹಕ್ಕೆ, ಜಗಾಮ – ಹೋದನು. ॥೮೧॥

ಸ ಪಾಂಡವೈಸ್ಸಮರ್ಚಿತೋ ಮುಖಾಯ ಧರ್ಮಜೇನ ಚ ।
ಪ್ರಪೃಷ್ಟ ಆಹ ಮಾಧವೋ ವಚೋ ಜಗತ್ಸುಖಾವಹಮ್ ॥೮೨॥

ಪಾಂಡವೈಃ ಸಮರ್ಚಿತಃ – ಪಾಂಡವರಿಂದ ಪೂಜಿತನಾದ, ಧರ್ಮಜೇನ, ಧರ್ಮರಾಜನಿಂದ, ಮುಖಾಯ – ರಾಜಸೂಯ ಯಜ್ಞದವಿಷಯವಾಗಿ, ಪ್ರಪೃಷ್ಟಃ – ಕೇಳಿಸಿಕೊಳ್ಳಲ್ಪಟ್ಟ, ಸಃ ಮಾಧವಃ – ಶ್ರೀ ಕೃಷ್ಣಪರಮಾತ್ಮನು, ಜಗತ್ಸುಖಾವಹಂ – ಜಗತ್ತಿಗೆ ಸುಖಕರವಾದ, ವಚಃ—ಮಾತನ್ನು, ಆಹ ಹೇಳಿದನು. ॥೮೨॥

ಕ್ರತುರ್ಯಥಾ ವಿಧಾನತಃ ಕೃತೋ ಹಿ ಸಾರಮೇಷ್ಯಕಮ್ ।
ಪದಂ ನಯೇತ ತತ್ಪದೇ ಸುಯೋಗ್ಯಮೇಷ ನಾನ್ಯಥಾ॥೮೩॥

ಏಷಃ ಕೃತುಃ – ಈ ರಾಜಸೂಯಯಾಗವನ್ನು, ಯಥಾವಿಧಾನತಃ – ಶಾಸ್ತ್ರವಿಧಾನಗಳಿಗೆ ಅನುಸಾರವಾಗಿ, ಕೃತಃ ಚೇತ್ – ಮಾಡಲ್ಪಟ್ಟರೆ, ಪಾರಮೇಷ್ಠ್ಯಕಂ ಪದಂ—ಚತುರ್ಮುಖಿ ಬ್ರಹ್ಮದೇವರ ಸಂಬಂಧಿಯಾದ ಪದವಿಯನ್ನು(ಬ್ರಹ್ಮ ಪಟ್ಟವನ್ನು), ತತ್ಪದೇ ಸಃಯೋಗ್ಯಂ ಹಿ – ಆ ಪದವಿಗೆ ಯೋಗ್ಯನಾದವನಿಗೇ (ಋಜುಜಂಗಣಸ್ಥ ಚೇತನನಿಗೇ), ನಯೇತ – ತಂದುಕೊಡುತ್ತದೆ. ಅನ್ಯಥಾ—(1) ಆ ಪದವಿಯು ಅರ್ಹತೆಯಿಲ್ಲದೇ ಇದ್ದರೆ, (2) ಅರ್ಹತೆಯಿದ್ದೂ ಈ ಯಾಗವನ್ನು ವಿಧಾನಾನುಸಾರ ಮಾಡದಿದ್ದರೆ, ನ ನಯೇತ – ತಂದುಕೊಡಲಾರದು. ॥೮೩॥

ಅಯೋಗ್ಯಕಾನ್ಮಹಾಪದೇ ವಿಧಾತುರೇಷ ಹಿ ಕ್ರತುಃ ।
ಸಮಾನಯೋಗ್ಯತಾಗಣಾತ್ಕರೋತಿ ಮುಕ್ತಿಗಂ ವರಮ್ ॥೮೪॥

ಏಷಃಕ್ರತುಃ- ಈ ರಾಜಸೂಯಯಾಗವು, ವಿಧಾತುಃ – ಚತುರ್ಮುಖಿ ಬ್ರಹ್ಮದೇವರ, ಮಹಾಪದೇ – ಶ್ರೇಷ್ಠ ಸ್ಥಾನಕ್ಕೆ (ಚತುರ್ಮುಖಿಬ್ರಹ್ಮಪದವಿಗೆ), ಅಯೋಗ್ಯಕಾತ್ – ಅಯೋಗ್ಯನಾದ ಚೇತನನನ್ನು ಯಜಮಾನನನ್ನಾಗಿ ಮಾಡಿ ಕೃತಃಚೇತ್ — ಮಾಡಲ್ಪಟ್ಟರೆ (ಋಜುಜಂಗಣಸ್ಥನಲ್ಲದವನು ಈ ಯಜ್ಞವನ್ನು ಮಾಡಿದರೆ), ತಂ—ಆ ಚೇತನನನ್ನು ಮುಕ್ತಿಗಂ ಸಂತಂ - ಮುಕ್ತಿಯಲ್ಲಿರುವಾಗ, ಸಮಾನಯೋಗ್ಯತಾಗಣಾತ್ – ಜ್ಞಾನಾದಿಗಳಲ್ಲಿ ಅವನಿಗೆ ಸಮಾನಯೋಗ್ಯತೆವುಳ್ಳ, ಆದರೆ ರಾಜಸೂಯಯಾಗ ಮಾಡುವ ಶಕ್ತಿಇಲ್ಲದ್ದರಿಂದಯಾಗಮಾಡದಿರುವ ಇತರ ಚೇತನರಸಮೂಹಕ್ಕಿಂತ,ವರಂ – ಶ್ರೇಷ್ಠನನ್ನಾಗಿ, ಕರೋತಿ—ಮಾಡುತ್ತದೆ ॥೮೪॥

ಪುರಾತು ಮುಕ್ತಿತೋಽಧಿಕಂ ಸ್ವಜಾತಿತಃ ಕರೋತಿ ಚ ।
ಅತಸ್ತ್ರಿಶಂಕುಪುತ್ರಕೋ ನೃಪಾನತೀತ್ಯ ವರ್ತತೇ ॥೮೫॥

ಚ—ಹಾಗೂ. ಮುಕ್ತಿತಃ ಪುರಾತು—ಮೋಕ್ಷಕ್ಕೆ ಹೋಗುವದಕ್ಕಿಂತ ಪೂರ್ವದಲ್ಲಿಮಾತ್ರ, (ತಂ – ರಾಜಸೂಯಯಾಗ ಮಾಡಿದವನನ್ನು), ಸ್ವಜಾತಿತಃ — ಅವನ ಜನಾಂಗದ (ಕ್ಷತ್ರಿಯರಾಜರ) ಇತರ ಜನರಿಗಿಂತ, ಅಧಿಕಂ — ಶ್ರೇಷ್ಠನನ್ನಾಗಿ ಕರೋತಿ – ಮಾಡುತ್ತದೆ. ಅತಃ – ಈ ಕಾರಣದಿಂದ, ತ್ರಿಶಂಕುಪುತ್ರಕಃ – ತ್ರಿಶಂಕುರಾಜನ ಮಗನಾದ ಹರಿಶ್ಚಂದ್ರನು, ನೃಪಾನ್ – ಇತರ ಎಲ್ಲ ರಾಜರನ್ನು, ಅತೀತ್ಯ—ಮೀರಿ (ಅವರಿಗಿಂತ ಹೆಚ್ಚಿನ ಸ್ಥಾನದಲ್ಲಿ), ವರ್ತತೇ – ಇರುತ್ತಾನೆ, ॥೮೫॥

ಸುರಾಂಶಕೋಽಪಿ ತೇ ಪಿತಾ ವಿನಾ ಹಿ ರಾಜಸೂಯತಃ ।
ನ ಶಕ್ನ್ಯತಿ ತ್ರಿಶಂಕುಜಾದ್ವರತ್ವಮಾಪ್ತುಮದ್ಯ ತು ॥೮೬॥

ತೇ ಪಿತಾ – ನಿನ್ನ ತಂದೆಯಾದ ಪಾಂಡುರಾಜನು, ಸುರಾಂಶಕಃ ಅಪಿ – ದೇವಾವತಾರಿಯಾದರೂ ಕೂಡ,ರಾಜಸೂಯತಃ ವಿನಾಹಿ—ನೀನು ರಾಜಸೂಯ ಯಾಗವನ್ನು ಮಾಡದ ಹೊರತು, ಅದ್ಯ—ಈಗ, ತ್ರಿಶಂಕುಜಾತ್–ಹರಿಶ್ಚಂದ್ರನಿಗಿಂತ, ವರತ್ವಂ—ಶ್ರೇಷ್ಠಸ್ಥಾನವನ್ನು, ಆಪ್ತುಂ—ಹೊಂದಲು, ನ ಶಕ್ನ್ಯತಿ ತು— ಸಮರ್ಥನಾಗಲಾರನು. ॥೮೬॥

ತಪಶ್ಚರನ್ನಮಾಗತೇ ಶಚೀಪತೌ ಪಿತಾ ತವ ।
ಮರುದ್ಗಣೋತ್ತಮಃ ಪುರಾನ ತೂತ್ಥಿತಶ್ಮಶಾಪ ಸಃ ॥೮೭॥

ಪುರಾ: – ಹಿಂದೆ, ತಪಶ್ಚರನ್ — ತಪಸ್ಸನ್ನು ಮಾಡುತ್ತಿದ್ದ, ತವ ಪಿತಾ — ನಿನ್ನ ತಂದೆಯಾದ ಪಾಂಡುವಿನ ಮೂಲರೂಪನಾದ, ಮರುದ್ಗಣೋತ್ತಮಃ:- ಮರುದ್ಗಣ ದೇವತೆಗಳಲ್ಲಿ ಶ್ರೇಷ್ಠನಾದ ಪರಾವಹ ಎಂಬ ಮರುತ್ತು, ಶಚೀಪತೌ ದೇವೇಂದ್ರನು, ಸಮಾಗತೇ ಸತಿ —ಬಂದಿರುತ್ತಿರಲು, ನತು ಉತ್ಥಿತಃ – ಎದ್ದು ನಿಲ್ಲಲಿಲ್ಲ, ಸಃ—ಆ ದೇವೇಂದ್ರನು, ಶಶಾಪ–ಶಪಿಸಿದನು. ॥೮೭॥

ಪ್ರಜಸ್ವಂಮಾನುಷೀಂ ತನುಂ ತತೋ ಮೃತಃ ಪುನರ್ದಿವಮ್ ।
ಗತೋಽಪಿ ನಃ ಸ್ವಕಾಂ ತನುಂ ಪ್ರವೇಷ್ಟುಮತ್ರನೇಶಸೇ ॥೮೮॥

ಮಾನುಷೀಂ ತನುಂ — ಮನುಷ್ಯ ಜನ್ಮವನ್ನು, ವ್ರಜಸ್ವ — ಹೊಂದು, ತತಃ — ಆ ಜನ್ಮದಿಂದ, ಮೃತಃ — ಮರಣಹೊಂದಿದವನಾಗಿ, ಸಮ್ಮ ದಿವಂ — ನಃಸ್ವರ್ಗಲೋಕವನ್ನು, ಪುನಃ ಗತಃ ಅಪಿ — ಮತ್ತೆ ಹೊಂದಿದರೂ ಕೂಡ, ಸ್ವಕಾಂ ತವಂ ನಿನ್ನ ಮೂಲರೂಪವನ್ನು ಪ್ರವೇಷ್ಟುಂ — ಪ್ರವೇಶಿಸಲು, ಅತ್ರ — ಈ ಸಂದರ್ಭದಲ್ಲಿ, ನ ಈಶಸೇ — ಸಮರ್ಥನಾಗುವದಿಲ್ಲ. ॥೮೮॥

ತದಾಽಧಿಕಸ್ತ್ರಿಶಂಕುಜೋ ಭವಿಷ್ಯತಿ ತ್ವದಿತ್ಯಥ ।
ಕ್ಷಮಾಪಿತಶ್ಚ ವಾಸವೋ ಜಗಾದ ರಾಜಸೂಯತಃ ॥೮೯॥

ತದಾ — ಆಗ, ತ್ರಿಶಂಕುಜಃ — ತ್ರಿಶಂಕುಪುತ್ರನಾದ ಹರಿಶ್ಚಂದ್ರನು, ತ್ವತ್ — ನಿನಗಿಂತ, ಅಧಿಕಃ — ಉತ್ತಮ ಸ್ಥಾನದಲ್ಲಿರುವವನು, ಭವಿಷ್ಯತಿ — ಆಗುವನು, ಇತಿ — ಎಂದು (ಸಃ — ಆ ಇಂದ್ರನು, ಶಶಾಪ — ಶಪಿಸಿದನು. ಎಂದು ೮೭ನೇ ಶ್ಲೋಕಕ್ಕೆ ಅನ್ವಯ) ಅಥ — ಹೀಗೆ ಶಾಪಕೊಟ್ಟ ನಂತರ, ಕ್ಷಮಾಪಿತಃ — ಆ ಪರಾವಹವಂರಂತ್ತಿನಿಂದ ಕ್ಷಮೆಂಗಾಗಿ ಪ್ರಾರ್ಥಿಸಲ್ಪಟ್ಟ. ವಾಸವಃ — ಇಂದ್ರದೇವರು, ಜಗಾದ — ಹೇಳಿದರು. ॥೮೯॥
(ಈ ಶ್ಲೋಕದಲ್ಲಿಯೂ ರಾಜಸೂಯತಃ ಎಂಬ ಪದವನ್ನು ಮುಂದಿನ ಶ್ಲೋಕಕ್ಕೆ ಅನ್ವಯಿಸಿಕೊಳ್ಳಬೇಕು)

ತ್ರಿಶಂಕುಜಾಧಿಕೋ ಭವಾನವಾಪ್ಸ್ಯಸಿ ಸ್ವಕಾಂತನುಮ್ ।
ಅತಸ್ತು ಕಾರ್ಯ ಏವ ತೇ ಯುಧಿಷ್ಠಿರ ಕ್ರತೂತ್ತಮಃ ।
ಭವದ್ಭಿರಪ್ಯವಾಪ್ಯತೇ ಸ್ವಯೋಗ್ಯತಾಽಮುನಾಽಖಿಲಾ ॥೯೦॥

ತ್ರಿಶಂಕುಜಾಧಿಕಃ — ತ್ರಿಶಂಕುಪುತ್ರನಾದ ಹರಿಶ್ಚಂದ್ರನಿಗಿಂತ ಸ್ವರೂಪ ಯೋಗ್ಯತೆಯಲ್ಲಿ ಉತ್ತಮನಾದ, ಭವಾನ್ ನೀನು, ರಾಜಸೂಯತಃ — ರಾಜಸೂಯಯಾಗದಿಂದ. ಸ್ವಕಾಂ ತನುಂ, ನಿನ್ನ ಮೂಲರೂಪವನ್ನು, ಅವಾಪ್ಸ್ಯಸಿ — ಹೊಂದುವಿ. (ಇತಿ — ಎಂದು ವಾಸವಃ ಜಗಾದ — ಇಂದ್ರದೇವರು ಹೇಳಿದರು. ಎಂದು ಅನ್ವಯ)

ಯುಧಿಷ್ಠಿರ — ಎಲೋ ಯುಧಿಷ್ಠಿರನೇ, ಅತಃ — ಈ ಕಾರಣದಿಂದ, ತೇ — ನಿನ್ನಿಂದ, ಕ್ರತೂತ್ತಮಃ — ಶ್ರೇಷ್ಠವಾದ ಆ ರಾಜಸೂಯಯಾಗವು, ಸುಕಾರ್ಯಃ ಏವ — ಚೆನ್ನಾಗಿ ಮಾಡಲ್ಪಡಲೇಬೇಕು. ಅಮುನಾ — ಆ ಯಾಗದ ಆಚರಣೆಯಿಂದ, ಭವದ್ಭಿಃ ಅಪಿ — ನಿಮ್ಮಿಂದಲೂ ಕೂಡ, ಅಖಿಲಾ ಸ್ವಯೋಗ್ಯತಾ — ಪೂರ್ಣವಾದ ನಿಮ್ಮ ಯೋಗ್ಯತಾನುಸಾರಿಯಿಂದ, ಭವದ್ಭಿಃ ಅಪಿ — ನಿಮ್ಮಿಂದಲೂ ಕೂಡ, ಅಖಿಲಾ ಸ್ವಯೋಗ್ಯತಾ — ಪೂರ್ಣವಾದ ನಿಮ್ಮ ಯೋಗ್ಯತಾನುಸಾರಿ ಫಲವು, ಅವಾಪ್ಯತೇ — ಹೊಂದಲ್ಪಡುತ್ತದೆ. ॥೯೦॥

ಭಾವಾನುವಾದ ೭೭-೯೦

ಧರ್ಮರಾಜನು ತನ್ನ ಸಾರಥಿಯನ್ನು ಶ್ರೀಕಷ್ಣಪರಮಾತ್ಮನ ಹತ್ತಿರ ಕಳಿಸಿದ ಸಮಯದಲ್ಲಿಯೇ, ಇನ್ನೊಬ್ಬ ದೂತನು ಬಂದನು. ಶ್ರೀಕೃಷ್ಣಪರಮಾತ್ಮನ ಹದಿನಾರು ಸಾವಿರದ ಒಂದು ನೂರು ಪತ್ನಿಯರಲ್ಲಿ ರಾಜಕುಮಾರಿಯರುಗಳ ತಂದೆಗಳಾದ ರಾಜರು ಜರಾಸಂಧನ ಬಂಧನದಲ್ಲಿದ್ದರು. ಅವರು ಮತ್ತು ಅವರ ಸಂಬಂಧಿಗಳು ಆ ದೂತನನ್ನು ಕಳುಹಿದ್ದರು. ಅವನು ಶ್ರೀಕೃಷ್ಣನಿಗೆ ನಮಸ್ಕರಿಸಿ ಮಾತನಾಡಿದನು. ಸ್ವಾಮಿಯೇ, ನಿನ್ನ ವಿವಾಹಬಾಂಧವರನ್ನು ಜರಾಸಂಧನು ಯುದ್ಧದಲ್ಲಿ ಗೆದ್ದು ಪರ್ವತದಲ್ಲಿ ಬಂಧಿಸಿಟ್ಟಿರುವನು. ಇಪ್ಪತ್ತೆರಡು ಸಾವಿರದ ಎಂಟುನೂರು ಮಂದಿಗಳನ್ನು ಬಂಧಿಸಿಟ್ಟಿದ್ದು ಅವರನ್ನು ಶ್ರೀರುದ್ರದೇವರ ಪ್ರೀತ್ಯರ್ಥವಾಗಿ ಹೋಮಿಸಬೇಕು ಎಂದು ಸಂಕಲ್ಪಿಸಿರುವನು. ಧರ್ಮರಕ್ಷಕನಾದ ನೀನು ಭೂಮಿಯಲ್ಲಿರು

ವಾಗಲೇ ಮಾಡಬೇಕೆಂದಿರುವ ಆ ಆವೈದಿಕ ಯಜ್ಞವನ್ನು ಧರ್ಮರಕ್ಷಣೆಗಾಗಿ ನಿಲ್ಲಿಸಬೇಕು. ಹೀಗೆ ಆ ದೂತನು ಹೇಳಿದಾಗ ಪಾಂಡವರ ದೂತನನ್ನು ನೋಡಿದ ಶ್ರೀಕೃಷ್ಣನು ಅವನ ಮಾತುಗಳನ್ನೂ ಕೇಳಿ ಪಾಂಡವರ ಮನೆಗೆ ಹೊರಟನು. ಅಲ್ಲಿಗೆ ಬಂದು ಪಾಂಡವರಿಂದ ಪೂಜಿತನಾಗಿ, ರಾಜಸೂಯಯಾಗ ಮಾಡುವದರ ಬಗ್ಗೆ ಧರ್ಮರಾಜನು ಕೇಳಿದಾಗ ಆ ಯಾಗದ ಮಹತ್ವದ ಬಗ್ಗೆ "ವಿಧ್ಯುಕ್ತವಾಗಿ ಆ ಯಾಗವನ್ನು ಮಾಡಿದರೆ ಬ್ರಹ್ಮಪದವಿಯು ಅರ್ಹತೆಯುಳ್ಳವನಿಗೆ ಬ್ರಹ್ಮಪದವಿಯನ್ನು ತಂದುಕೊಡುವದು. ಬೇರೆಯವನನ್ನು ಅವನ ಸಮಾನರ ಗುಂಪಿನಲ್ಲಿ ಶ್ರೇಷ್ಠನನ್ನಾಗಿ ಮಾಡುತ್ತದೆ. ವೋಕ್ಷದಲ್ಲಿಯೂ ಅವರಿಗಿಂತ ಶ್ರೇಷ್ಠನಾಗಿರುವನು. ಇದರಿಂದಾಗಿಯೇ ಹರಿಶ್ಚಂದ್ರ ರಾಜನು ಎಲ್ಲ ರಾಜರನ್ನು ಮೀರಿ ಇರುವನು, ನಿನ್ನ ತಂದೆಯಾದ ಪಾಂಡುವು ದೇವಾವತಾರಿಯಾಗಿದ್ದರೂ ಕೂಡ ರಾಜಸೂಯಯಾಗವನ್ನು" ನೀವು ಮಾಡದೆಯೇ ಹರಿಶ್ಚಂದ್ರನಿಗಿಂತ ಉತ್ತಮಸ್ಥಾನವನ್ನು ಹೊಂದುವಂತಿಲ್ಲ. ಹಿಂದೊಮ್ಮೆ ನ್ನ ತಂದೆಯು ತನ್ನ ಮೂಲರೂಪವಾದ ಪರಾವಹ ಮಾರು—ತ್ತಿನ ರೂಪದಲ್ಲಿರುವಾಗ ತಪಸ್ಸನ್ನು ಮಾಡುತ್ತಿರುವಾಗ ಇಂದ್ರದೇವರು ಬಂದರೂ ಎದ್ದುನಿಂತು ಗೌರವಿಸಲಿಲ್ಲ. ಆಗ ಇಂದ್ರದೇವರು "ನೀನು ಮಾನುಷ ಜನ್ಮವನ್ನು ಹೊಂದು; ಮೃತನಾದ ಮೇಲೆ ಸ್ವರ್ಗಕ್ಕೆ ಬಂದರೂ ಕೂಡ ನಿನ್ನ ರೂಪವನ್ನು ಪ್ರವೇಶಿಸಲು ಶಕ್ಯವಾಗದಿರಲಿ. ನಿನಗಿಂತ ಉಚ್ಚಸ್ಥಾನದಲ್ಲಿ "ಹರಿಶ್ಚಂದ್ರರಾಜನು ಇರಲಿ, ಎಂದು ಶಪಿಸಿದನು. ಆಗ ಪರಾವಹನು ಕ್ಷಮೆಯಾನ್ನು ಕೇಳಿದಾಗ ಇಂದ್ರದೇವನು ಹರಿಶ್ಚಂದ್ರನಿಗಿಂತ ನಿಜವಾಗಿಯೂ ಸ್ವರೂಪದಲ್ಲಿ ಉತ್ತಮನಾದ ನೀನು ರಾಜಸೂಯಯಾಗವನ್ನು ನಿನ್ನ ಮಕ್ಕಳು ಮಾಡಿದರೆ ನಿನ್ನ ಸ್ವರೂಪವನ್ನು ಹೊಂದುವಂತಾಗಲಿ. ಎಂದು ಅನುಗ್ರಹ ವಚನವನ್ನು ಹೇಳಿದನು. ಆದ್ದರಿಂದ ಯುಧಿಷ್ಠಿರ, ಅವಶ್ಯವಾಗಿ ರಾಜಸೂಯಯಾಗವನ್ನು ಮಾಡಲೇಬೇಕು. ಅದರಿಂದ ನೀವೂ ಕೂಡ ನಿಮ್ಮ ಯೋಗ್ಯತೆಯ ಪೂರ್ಣಫಲವನ್ನು ಹೊಂದುವಿರಿ" ಎಂದು ರಾಜಸೂಯಯಾಗದ ಮಹತ್ವವನ್ನು ತಿಳಿಸು-ವಂಥ, ಜಗತ್ತಿಗೇ ಕಲ್ಯಾಣಕರವಾದ ಮಾತನ್ನು ಹೇಳಿದನು.

ಉದೀರ್ಯ ಚೈವಮೀಶ್ವರ: ಕೃತೋರವುಷ್ಯ ಯೋಗ್ಯತಾ ।
ವೃಕೋದರೇ ಯತೋಽಖಿಲಾ ಚತುರ್ಮುಖತ್ವಯೋಗ್ಯತಾ ॥೯೧॥

ತತಸ್ಸಂಪೂರ್ಣಮುಷ್ಯ ತತ್ಫಲಂ ವಿಧಾತುಮುಂಜಸಾ ।
ಜಗಾದ ವಾಯುವಾಹನೋ ವಚೋ ಯುಧಿಷ್ಠಿರಂ ತ್ವಿದವ್ ॥೯೨॥

ವಾಯುಂವಾಹನ:--ವಾಯುಂವಾಹನನಾದ, ಈಶ್ವರ — ಶ್ರೀ ಕೃಷ್ಣಪರಮಾತ್ಮನು, ಏವಂ— ಈ ರೀತಿಯಲಾಗಿ ಉದೀರ್ಯ – ಹೇಳಿ, ಯತ: — ಯಾವಕಾರಣದಿಂದ, ಚತುರ್ಮುಖತ್ವಯೋಗ್ಯತಾ — ಚತುರ್ಮುಖಿ ಬ್ರಹ್ಮ ಪದವಿಯ ಯೋಗ್ಯತೆಯು, ವೃಕೋದರೇ — ಶ್ರೀ ಭೀಮಸೇನದೇವರಲ್ಲಿರುವದೋ, ಅಸ್ಯ — ಶ್ರೀ ಭೀಮಸೇನದೇವರಿಗೆ, ಸಂಪೂರ್ಣಂ ತತ್ಫಲಂ ಪರಿಪೂರ್ಣವಾದ ಯಾಗಫಲವನ್ನು, ಅಂಜಸಾ ವಿಧಾತುಂ — ಜನ್ಮಾಗಿ ಮಾಡುವದಕ್ಕಾಗಿ ಯುಧಿಷ್ಠಿರಂ — ಧರ್ಮರಾಜನನ್ನು ಕುರಿತು, ಇದಂ ವಚ: - ಈ ಮುಂದಿನ ಮಾತನ್ನು ಜಗಾದ ಹೇಳಿದನು. ॥೯೧–೯೨॥

ಕ್ವ ರಾಜಸೂಯಮದ್ಯ ತೇ ಜರಾಸುತೇ ತು ಜೀವತಿ ।
ಜಯೇತ್ಕ ಏವ ತಂ ಯುಧಾ ಮೃತೋ ನ ಯೋಽಪಿ ಸೀರಿಣಾ ॥೯೩॥

ಜರಾಸುತೇ — ಜರಾಸಂಧನು, ಜೀವತಿಸತಿ – ಬದುಕಿರುವಾಗ, ಅದ್ಯ - ಈ ಸಮಯದಲ್ಲಿ, ತೇ — ನಿನಗೆ (ನಿನ್ನಿಂದ), ರಾಜಸೂಯಂ — ರಾಜಸೂಯಯಾಗವು, ಕ್ವ—ಎಲ್ಲಿ? (ಹೇಗೆ ಸಾಧ್ಯ)? — ಯಾವ ಜರಾಸಂಧನು, ಸೀರಿಣಾ ಅಪಿ—ಬಲರಾಮದೇವರಿಂದಲೂ, ನ ಮೃತ:—ಸತ್ತಿಲ್ಲವೋ, ತಂ — ಅಂಥ ಜರಾಸಂಧನನ್ನು, ಯುಧಾ – ಯುದ್ಧದಿಂದ - ಕಃ ಏವ — ಯಾವನು ತಾನೇ, ಜಯೇತ್–ಜಯಿಸಿಯಾನು ? ॥೯೩॥

ವಿರಿಂಚಶರ್ವವಾಕ್ಕತಸ್ಸಮುಸ್ತಲೋಕಜಾಯಿನಿ ।
ಸ್ಥಿತೇ ತು ತೇ ಜರಾಸುತೇನ ಸೇತ್ಸ್ಯತಿ ಕ್ರತೂತ್ತಮಃ ॥೯೪॥

ವಿರಿಂಚಶರ್ವವಾಕ್ಯತಃ – ಶ್ರೀ ಬ್ರಹ್ಮರುದ್ರದೇವರವರದಿಂದ, ಸಮುಸ್ತಲೋಕಜಾಯಿನಿ—ಎಲ್ಲ ಲೋಕಗಳಮೇಲೆ ಸಯುವನ್ನು ಹೊಂದಿರುವ (ಹೊಂದುವಶಕ್ತಿವುಳ್ಳ), ಜರಾಸುತೇ – ಜರಾಸಂಧನು, ಸ್ಥಿತೇಸತಿ – ಬದುಕಿರುತ್ತಿರಲು, ತೇ – ನಿನಗೆ, ಕ್ರತೂತ್ತಮಃ – ಆ ಶ್ರೇಷ್ಠಯಾಗವು, ತೇ – ನಿನಗೆ, ನಸೇತ್ಸ್ಯತಿ ತದಾ – ಸಾಧ್ಯವಾಗುವದೇ ಇಲ್ಲ, ॥೯೪॥

ಇತೀರಿತೋ ರಥಾಂಗಿನಾ ಜಗಾದ ಧರ್ಮನಂದನಃ।
ನಿವರ್ತಿತಂ ಮನಃ ಕ್ರತೋರಲಂ ಮುಮೂಷುನಾ ಪ್ರಭೋ ॥೯೫॥

ರಥಾಂಗಿನಾ — ಚಕ್ರಧಾರಿಯಾದ ಶ್ರೀ ಕೃಷ್ಣಪರಮಾತ್ಮನಿಂದ, ಇತಿ – ಈ ರೀತಿಯಾದಿ, ಈರಿತಃ—ಹೇಳಿಸಿಕೊಳ್ಳಲ್ಪಟ್ಟ, ಧರ್ಮನಂದನಃ—ಯುಧಿಷ್ಠಿರನು, ಪ್ರಭೋ – ಸ್ವಾಮಿಯಾದ ಶ್ರೀ ಕೃಷ್ಣನೇ, ಅಮುನಾ – ಆ ಜರಾಸಂಧನ ಸಂಹಾರದ ಮಾತನ್ನು ಕೇಳಿದ್ದರಿಂದ, ಮಮ ಮನಃ – ನನ್ನ ಮನಸ್ಸು, ಕ್ರತೋಃ—ಆ ಯಾಗದಿಂದ, ನಿವರ್ತಿತಂ—ಹಿಂದೆಗೆಯಿತು. (ಹಿಂಜರಿಯಿತು.) ಅಲಂ – ಸಾಕು. ॥೯೫॥

ಬಭೂವುರೇವ ಭೂಭೃತೋ ನ ಚಾಧಿರಾಜ್ಯಮಾಪಿರೇ
ಯದಾ ಚ ಚಕ್ರವರ್ತಿನಸ್ತದೇದೃಶಾ ನ ಶತ್ರವಃ ॥೯೬॥

(ಪುರಾ – ಹಿಂದೆ), ಭೂಭೃತಃ – ರಾಜರು ಬಭೂವುಃ ಏನ್—ಆಗೇ ಆಗಿದ್ದಾರೆ, ಚ—ಆದರೆ, ಅಧಿರಾಜ್ಯಂ—ರಾಜಸೂಯಯಾಗ ಮಾಡಿ ರಾಜರಲ್ಲಿ ಅಧಿಕ್ಯವನ್ನು ನ ಆಪಿರೇ ಹೊಂದಿಲ್ಲ (ರಾಜಸೂಯಯಾಗವನ್ನು ಮಾಡಿಲ್ಲ) ಚ—ಆದರೆ

ಯದಾ – ಯಾವಕಾಲದಲ್ಲಿ, ಚಕ್ರವರ್ತಿನಃ ಆಪಿರೇ—ರಾಜರು ರಾಜಸೂಯ ಯಾಗಮಾಡಿ ಆದಿಕ್ಯ ಹೊಂದಿದರೋ, ತದಾ—ಆಗ, ಈದೃಶಾಃ ಶತ್ರವಃ – ಜರಾಸಂಧನಂಥ ವೈರಿಗಳು, ನ – ಇರಲಿಲ್ಲ ॥೯೬॥

ಇತೀರಿತೇऽಮುನಾವದತ್ಪ್ರಧಾನಮೂರುತಾತ್ಮಜಃ ।
ಪದಂ ಚತುರ್ಮುಖಸ್ಯ ವಾ ಸುಸಾಧ್ಯಮೇವ ಯತ್ನತಃ ॥೯೭॥

ನಿಜಾನುಭಾವವರ್ಜಿತಾ ಹರೇರನುಗ್ರಹೋಜ್ಝಿತಾಃ ॥
ಮಹಾಪ್ರಯತ್ನವರ್ಜಿತಾ ಜನಾನ ಜಗ್ಮುರುನ್ನತಿಮ್ ॥೯೮॥

ಸ್ಥಿರೋऽನುಭಾವ ಏವ ಮೇ ಮಹಾನನುಗ್ರಹೋ ಹರೇಃ ।
ಪ್ರಯತ್ನಮೇಕಮುಗ್ರತೋ ನಿಧಾಯ ಭೂತಿಮಾಪ್ನುಮಃ ॥೯೯॥

ಇತಿ – ಈ ರೀತಿಯಾಗಿ. ಅಮುನಾ ಈರಿತೇ ಸತಿ – ಆ ಧರ್ಮರಾಜನಿಂದ ಹೇಳಲ್ಪಡುತ್ತಿರಲು, ಪ್ರಧಾನ ವಾರುತಾತ್ಮಜಃ—ಮುಂಖ್ಯ ಪ್ರಾಣದೇವರ ವಂಗ (ಅವತಾರ) ರಾದ ಶ್ರೀ ಭೀಮಸೇನದೇವರು, ಚತುರ್ಮುಖಸ್ಯ ಪದಂ ವಾ—ಚತುರ್ಮುಖ ಬ್ರಹ್ಮದೇವರ ಪದವಿಯಾಗಲೀ, ಯತ್ನತಃ — ಪ್ರಯತ್ನವಾಡಿ, ಸುಸಾಧ್ಯಂ ಏವ — ಸಾಧಿಸಲು ಶಕ್ಯವೇ. (ಆದ್ದರಿಂದ ಪ್ರಯತ್ನವನ್ನು ವಾಡಲೇಬೇಕು). ನಿಜಾನುಭಾವವರ್ಜಿತಾಃ – ಸ್ವರೂಪಯೋಗ್ಯತೆಯಿಂದ ರಹಿತರಾದ, ಹರೇಃ – ಭಗವಂತನ, ಅನುಗ್ರಹೋಜ್ಝಿತಾಃ – ಅನುಗ್ರಹದಿಂದ ರಕ್ಷಿತರಾದವರು, ಮಹಾಪ್ರಯತ್ನವರ್ಜಿತಾಃ – ಶ್ರೇಷ್ಠ ಪ್ರಯತ್ನದಿಂದ

ರಹಿತರಾದ,ಜನಾ: — ಜನರು ಉನ್ನತಿಂ — ಯಾವದೇ ಉತ್ಕರ್ಷವನ್ನು (ಯಶಸ್ಸನ್ನು). ನ ಜಗ್ಮ — ಹೊಂದಿಲ್ಲ (ಎಂದೂ ಹೊಂದಲಾರರು ಎಂದು ಅರ್ಥ) ಮೇ—ನನಗೆ (ನಮಗೆ) ಅನುಭಾವ:-ಸ್ವರೂಪಯೋಗ್ಯತೆಯು. ಸ್ಥಿರ: ಏವ – ನಿಶ್ಚಿತವಾಗಿ ಇದ್ದೇ ಇದೆ. ಹರೇ: – ಶ್ರೀಹರಿಯ. ಮಹಾನ್ ಅನುಗ್ರಹ:(ಚ) ಶ್ರೇಷ್ಠವಾದ ಅನುಗ್ರಹವೂ ಕೂಡ ಸ್ಥಿರ: ಏವ – ನಿಶ್ಚಿತವಾಗಿ ಇದ್ದೇ ಇದೆ. ಏಕಂ ಪ್ರಯತ್ನಂ — ಉಳಿದಿರುವ ಪ್ರಯತ್ನವೊಂದನ್ನು, ಅಗ್ರತ: ನಿಧಾಯ – ಮುಂದೆ ಇಟ್ಟಿ ಕೂಡಲೇ ಮಾಡಿ, ಭೂತಿಂ —ರಾಜ್ಯ ಜಯ ಸಂಪತ್ತನ್ನು. (ಮೋಕ್ಷ ಸಂಪತ್ತನ್ನು) ಆಪ್ನುಮ; - ಹೊಂದೋಣ. ಇತಿ— ಎಂದು, ಅವದತ್ – ಹೇಳಿದರು, ॥೯೭-೯೮-೯೯॥

ಇತೀರಿತೇಽಮುನಾ ಹರಿಸ್ಸಮುದ್ಯಮಾತ್ ಪ್ರಧಾನತಃ ।
ಸ್ಥಿತೇ ಹಿ ಯಜ್ಞಕಾರಣೇ ವೃಕೋದರೇ ಜಗಾದಹ ॥೧೦೦॥

ಇತಿ — ಈ ರೀತಿಯಾಗಿ, ಅಮುನಾ – ಆ ಭೀಮಸೇನದೇವರಿಂದ, ಈರಿತೇಸತಿ – ಹೇಳಲ್ಪಡುತ್ತಿರಲು, ಪ್ರಧಾನತ: ಸಮುದ್ಯಮಾತ್—ಪ್ರಧಾನವಾದ ಪ್ರಯತ್ನ ಮಾಡುವದರಿಂದ, ಯಜ್ಞಕಾರಣೇ – ಯಜ್ಞಕ್ಕೆ ಉಳಿದ ಪಾಂಡವರಿಗಿಂತ ಪ್ರಧಾನಕಾರಣನಾದ, ವೃಕೋದರೇ – ಶ್ರೀಭೀಮಸೇನದೇವರು, ಸ್ಥಿತೇ ಹಿ — ಇರುವಾಗಲೇ – ಜಗಾದ ಹ – ಹೇಳಿದನು; ॥೧೦೦॥

ಸ ಏಕ ಏವ ಪುರುಷೋ ಜರಾಸುತೋಽದ್ಯ ವರ್ತತೇ ।
ಸಮಸ್ತಸದ್ವಿರೋಧಿನಾಂ ಬಲಂ ಕಲೇರನಂತರ: ॥೧೦೧॥

ಅದ್ಯ – ಈಗ, ಸಮಸ್ತಸದ್ವಿರೋಧಿನಾಂ — ಸಜ್ಜನದ್ವೇಷಿಗಳಾದ ಎಲ್ಲರಿಗೆ, ಬಲಂ – ಬಲಪ್ರದನಾದ, ಕಲೇ: ಅನಂತರ: — ಕಲಿಯುದೆಶೆಯಿಂದ ನಂತರದವನಾದ, ಜರಾಸುತ: ಏಕ ಏವ ವರ್ತತೇ — ಜರಾಸಂಧನೊಬ್ಬನೇ ಇರುವನು; ॥೧೦೧॥

ತಥಾ ಸತಾಂ ಸಮಾಶ್ರಯೋ ಯದುದ್ಭವಾಸ್ಸತಾಂ ಗುಣಾ: ।
ಸ ಏಕ ಏವ ತಾದೃಶಸ್ತ್ವಯಾ ವಿಚಿಂತ್ಯ ಯಾತ್ಮತಾಮ್ ॥೧೦೨॥

ತಥಾ — ಹಾಗೆಯೇ, ಸತಾಂ – ಎಲ್ಲ ಸಜ್ಜನರಿಗೆ, ಸಮಾಶ್ರಯ: – ಮುಂಖ್ಯ ಆಶ್ರಯವಾದ, ಸತಾಂ ಗುಣಾ: – ಎಲ್ಲ ಸಜ್ಜನರ ಸದ್ಗುಣಗಳು. ಯದುದ್ಭವಾ: — ಯಾವನದೆಶೆಯಿಂದ ಹುಟ್ಟಿದವುಗಳೋ (ಎಲ್ಲ ಸದ್ಗುಣಗಳಿಗೆ ಯಾವನು ಮುಂಖ್ಯ ಆಕರನೋ) ಸ:—ಅಂಥವನೂ ಕೂಡ, ಏಕ ಏವ – ಒಬ್ಬನೇ ಇದ್ದಾನೆ. ತಾದೃಶ: - ಅಂಥವ್ಯಕ್ತಿಯು, ತ್ವಯಾ – ನಿನ್ನಿಂದ, ವಿಚಿಂತ್ಯ – ವಿಚಾರಿಸಿ, ಯಾತ್ಮತಾಂ – ಕಳಿಸಲ್ಪಡಲಿ. ॥೧೦೨॥

ಯದಿ ಸ್ಮತೇನ ಮಾಗಧೋಃ ನಿಹನ್ಯತೇ ಸತಾಂ ಜಯಃ ।
ವಿಪರ್ಯಯೇಣ ಚಾಸತಾಮಿತಿ ಸ್ಮ ವಿದ್ಧಿ ನಾನ್ಯಥಾ ॥೧೦೩॥

ಯದಿ—ಒಂದುವೇಳೆ, ತೇನ – ಆ ವ್ಯಕ್ತಿಯಿಂದ ಮಾಗಧ: – ಜರಾಸಂಧನು. ನಿಹನ್ಯತೇ – ಚೇತ್ – ಕೊಲ್ಲಲ್ಪಡುತ್ತಾನೆಯಾದರೆ, (ತರ್ಹಿ – ಆ ಪಕ್ಷದಲ್ಲಿ), ಸತಾಂ-ಸರ್ವಸಜ್ಜನರಿಗೆ, ಜಯ:-ಜಯವಾದಂತೆಯೇ, ಚ–ಹಾಗೂ, ವಿಪರ್ಯಯೇಣ ಚೇತ್ – ವಿರುದ್ಧವಾದರೆ, ಅಸತಾಂ – ಸರ್ವದುರ್ಜನರಿಗೆ, ಜಯ: —ಜಯವಾದಂತೆಯೇ. ಇತಿ — ಎಂದು, ವಿದ್ಧಿ-ತಿಳಿ, ನ ಅನ್ಯಥಾಸ್ಮ — ಇದಕ್ಕೆ ವಿರುದ್ಧವಾಗಿ ತಿಳಿಯಬೇಡಾ ॥೧೦೩॥

ಸ ಪಾರಮೇಷ್ಯ್ಯಸತ್ಪದಂ ಪ್ರಯಾತ್ಯಸಂಶಯಂ ಯುಧಿ ।
ಯ ಏವ ಹಂತಿ ಮಾಗಧಂ ಸ ವೇದಧರ್ಮಪಾಲಕಃ ॥೧೦೪॥

ಯಃ—ಯಾವ ವ್ಯಕ್ತಿಯು, ಯುಧಿ—ಯುದ್ಧದಲ್ಲಿ, ಮಾಗಧಂ-ಜರಾಸಂಧನನ್ನು, ಹಂತಿ-ಕೊಲ್ಲುವನೋ, ಸಃ ಏವ – ಅವನೇ, ಅಸಂಶಯಂ – ನಿಸ್ಸಂಶಯವಾಗಿ, ಪಾರಮೇಷ್ಯ್ಯಸತ್ಪದಂ – ಬ್ರಹ್ಮಪದವಿಯನ್ನು, ಪ್ರಯಾತಿ–ಹೊಂದುವನು ಸಃ ಏವ – ಅವನೇ, ವೇದಧರ್ಮಪಾಲಕಃ – ವೇದ ಧರ್ಮಗಳರಕ್ಷಕನಾಗುವನು. ॥೧೦೪॥

ನಿಹಂತಿ ಮಾಗಧೇಶ್ವರಂ ಯ ಏಷ ವೈಷ್ಣವಂ ಜಗತ್ ।
ಕರೋತಿ ಶರ್ವಪಾಲಿತೋ ಯತಸ್ಸ ಬಾರುಹದ್ರಥಃ ॥೧೦೫॥

ಯತಃ – ಯಾವ ಕಾರಣದಿಂದ, ಸಃ ಬಾರುಹದ್ರಥಃ – ಆ ಜರಾಸಂಧನು, ಶರ್ವಪಾಲಿತಃ—ರುದ್ರದೇವರಿಂದ ರಕ್ಷಿತನಾದವನೋ, ತತಃ – ಆ ಕಾರಣದಿಂದ ಸಃ – ಆ ವ್ಯಕ್ತಿಯು, (ಜರಾಸಂಧನನ್ನು ಕೊಂದ ವ್ಯಕ್ತಿಯು) ಜಗತ್—ಎಲ್ಲ ಜಗತ್ತನ್ನು ವೈಷ್ಣವಂ – ವಿಷ್ಣುಭಕ್ತಿಯುಳ್ಳದ್ದನ್ನಾಗಿ ಕರೋತಿ – ಮಾಡುತ್ತಾನೆ. ॥೧೦೫॥

ನಿಹಂತಿ ಶೈವನಾಯಕಂ ಯ ಏವ ವೈಷ್ಣವಾಗ್ರಣೀಃ ।
ಇತಿ ಸ್ಮ ಭಾವಸಂಯುತೇ ವದತ್ಯಜೇಽಬಿಭೇನ್ನೃಪಃ ॥೧೦೬॥

ಯಃ– ಯಾವನು, ವೈಷ್ಣವಾಗ್ರಣೀಃ–ವಿಷ್ಣುಭಕ್ತರಲ್ಲಿ ಅಗ್ರೇಸರನೋ, ಸಃ ಏವ–ಅವನೇ, ಶೈವನಾಯಕಂ –ಶಿವ ಭಕ್ತರಲ್ಲಿ ಶ್ರೇಷ್ಠನಾದ ಜರಾಸಂಧನನ್ನು, ನಿಹಂತಿ–ಕೊಲ್ಲುತ್ತಾನೆ. ಇತಿ–ಎಂಬ, ಭಾವಸಂಯುತೇ–ಅಭಿಪ್ರಾಯದಿಂದ ಕೂಡಿದ ಅಜೇ – ಉತ್ಪತ್ತಿಶೂನ್ಯನಾದ ಶ್ರೀಕೃಷ್ಣನು, ವದತಿಸತಿ – ಹೇಳುತ್ತಿರಲು, ನೃಪಃ–ಧರ್ಮರಾಜನು, ಅಬಿಭೇತ್ – ಹೆದರಿದನು. ॥೧೦೬॥

ಯುಧಿಷ್ಠಿರೇ ಬ್ರುವತ್ಯಜಂ ಮಖೇನ ಮೇ ತ್ವಲಂ ತ್ವಿತಿ ।
ತದಾಹ ಮಾರುತಾತ್ಮಜೋ ನಿಹನ್ಮಿ ಮಾಗಧಂ ರಣೇ ॥೧೦೭॥

ಮೇ–ನನಗೆ, ಮಖೇನ–ಅಲಂ–ಯಜ್ಞಂ ಮಾಡುವದು ಸಾಕು, ಇತಿ–ಎಂದು, ಯುಧಿಷ್ಠಿರೇ ಬ್ರುವತಿ ತು–ಮಾತನಾಡುತ್ತಿರಲು, ತದಾ – ಆಗ, ಮಾರುತಾತ್ಮಜಃ – ವಾಯುಪುತ್ರರಾದ ಭೀಮಸೇನದೇವರು, ರಣೇ - ಯುದ್ಧದಲ್ಲಿ, ಮಾಗಧಂ ಜರಾಸಂಧನನ್ನು, ನಿಹನ್ಮಿ–ಕೊಲ್ಲುತ್ತೇನೆ. ಇತಿ–ಎಂದು, ಆಹ – ಹೇಳಿದರು ॥೧೦೭॥

ಇತೀರಿತೇಽ ವದದ್ಧರ್ವ್ಯಜಾವುರಿಮುಹೇ ವಯಂ ತ್ರಯಃ ।
ಅಹಂ ಚ ಭೀಮ ಫಲ್ಗುನೌ ನಿಹಂತಾವೇವ ಮಾಗಧಮ್ ॥೧೦೮॥

ಇತಿ–ಈ ರೀತಿ, ಈ ರಿತೇಸತಿ – (ಶ್ರೀಭೀಮಸೇನದೇವರು) ಹೇಳುತ್ತಿರಲು ಹರಿ: - ಶ್ರೀಕೃಷ್ಣನು, ಅಹಂ – ನಾನು, ಚ — ಮತ್ತು ಭೀಮಫಲ್ಗುನೌ — ಭೀಮಾರ್ಜುನರು ಇತಿ ವಯಂ ತ್ರಯಃ – ಈ ರೀತಿ ನಾವು ಮೂವರು, ಮಾಗಧಂ — ಜರಾಸಂಧನನ್ನು, ನಿಹಂತುಂ ಏವ — ಕೊಲ್ಲುವದಕ್ಕಾಗಿಯೇ, ವ್ರಜಾಮಹೇ – ಹೋಗುತ್ತೇವೆ, ಇತಿ — ಎಂದು, ಅವದತ್ — ಹೇಳಿದನು. ॥೧೦೮॥

ವೃಕೋದರೇಣ ಹನ್ಮತೇಯದಿ ಸ್ಮ ಮಾಗಧಾಧಿಪಃ ।
ಮುಖಚ್ಛಸೇತ್ಸ್ಮತೇ ಧ್ರುವಂ ಜಗಚ್ಛತೇ ವಶೇ ಭನೇತ್ ॥೧೦೯॥

ಯದಿ—ಒಂದುವೇಳೆ, ಮಾಗಧಾಧಿಪಃ—ಜರಾಸಂಧನು, ವೃಕೋದರೇಣ—ಭೀಮಸೇನನಿಂದ, ಹನ್ಯತೇ ಸ್ಮ—ಸಂಹರಿಸಲ್ಪಟ್ಟರೆ, ಮಖಃ—ಯಜ್ಞವು, ಧ್ರುವಂಸೇತ್ಸ್ಯತೇ—ಖಂಡಿತ ಸಾಧ್ಯವಾಗುವದು. ಚ—ಮತ್ತು, ಜಗತ್—ಜಗತ್ತು, ತೇ ವಶೇ—ನಿನ್ನ ಆಧೀನದಲ್ಲಿ, ಭವೇತ್—ಬರುವದು ॥೧೮೯॥

ಇತೀರಿತೇ ತು ಶೌರಿಣಾ ಜಗಾದ ಧರ್ಮನಂದನಃ ।
ಸಶೂರಸೇನಮಂಡಲಪ್ರಹಾಣತೋ ಹರೇಸ್ತ್ರಸನ್ ॥೧೯೦॥

ಇತಿ-ಈ ರೀತಿ, ಶೌರಿಣಾ—ಶ್ರೀಕೃಷ್ಣ ಪರಮಾತ್ಮನಿಂದ, ಈರಿತೇಸತಿ.ಹೇಳಲ್ಪಡುತ್ತಿರಲು, ಹರೇಃ-ಶ್ರೀಕೃಷ್ಣನ ಶೂರಸೇನಮಂಡಲಪ್ರಹಾಣತಃ—ಶೂರಸೇನರಾಜನ ದೇಶವಾದ ಮಥುರಾ ಪಟ್ಟಣದ ತ್ಯಾಗದಿಂದ, (ಮಥುರೆಯನ್ನು ಬಿಟ್ಟು ದ್ವಾರಕೆಗೆ ಹೋದದ್ದರಿಂದ), ತ್ರಸನ್—ಹೆದರಿದಂಥ, ಸಃ ಧರ್ಮನಂದನಃ—ಆ ಧರ್ಮರಾಜನು, ಜಗಾದ—ಹೇಳಿದನು ॥೧೯೦॥

ಭಯಾದ್ಧಿ ಯಸ್ಯ ಮಾಧುರಂ ವಿಹಾಯ ಮಂಡಲಂ ಗತಾಃ ।
ಭವಂತ ಏವ ಸಾಗರಂ ತತೋ ಬಿಭೇಮ್ಯಹಂ ರಿಪೋಃ ॥೧೯೧॥

ಭವಂತಃ ಏವ—(ನಿಮ್ಮಂಥವರೇ)ನೀವೇ ಯಸ್ಯ ಭಯಾತ್—ಯಾರ ಹೆದರಿಕೆಯಿಂದ, ಮಾಧುರಂ ಮಂಡಲಂ—ಮಥುರಾಪಟ್ಟಣವನ್ನು, ವಿಹಾಯ—ಬಿಟ್ಟು, ಸಾಗರಂ ಗತಾಃ—ಸಮುದ್ರಕ್ಕೆ (ಸಮುದ್ರ ಮಧ್ಯದಲ್ಲಿ ನಿರ್ಮಿಸಿದ ದ್ವಾರಕೆಗೆ) ಹೋಗಿರುವಿರೋ, ತತಃ ರಿಪೋಃ—ಅಂಥ ಪ್ರಬಲನಾದ, ವೈರಿಯಾದ ಜರಾಸಂಧನದೆಶೆಯಿಂದ, ಅಹಂ—ನಾನು, ಬಿಭೇಮಿ-ಹೆದರುತ್ತೇನೆ. ॥೧೯೧॥

ಇಮೌ ಹಿ ಭೀಮಫಲ್ಗುನೌ ಮಮಾಕ್ಷಿಣೇ ಸದಾ ಪ್ರಭೋ ।
ಮನೋನಿಭೋ ಭವಾನ್ಸದಾ ನ ವೋ ವಿನಾಽಸ್ಮ್ಯಹಂ ಪುಮಾನ್ ॥೧೯೨॥

ಹಿ—ಯಾವ ಕಾರಣದಿಂದ, ಇಮೌ ಭೀಮಫಲ್ಗುನೌ—ಈ ಭೀಮಾರ್ಜುನರು, ಸದಾ—ಯಾವಾಗಲೂ, ಮಮ—ನನ್ನ, ಅಕ್ಷಿಣೇ—ಕಣ್ಣುಗಳೋ(ಕಣ್ಣುಗಳಂತಿರುವರೋ)(ಚ—ಮತ್ತು), ಭವಾನ್—ನೀನು, ಸದಾ—ಯಾವಾಗಲೂ, ಮಮ—ನನ್ನ, ಮನೋನಿಭಃ—ಮನಸ್ಸಿನಂತಿರುವೆಯೋ. ಅತಃ—ಈ ಕಾರಣದಿಂದ, ಪ್ರಭೋ—ಸರ್ವಸ್ವಾಮಿಯಾದ ಶ್ರೀಕೃಷ್ಣನೇ, ವಃ ವಿನಾ—ನಿಮ್ಮನ್ನು ಬಿಟ್ಟು, ಅಹಂ—ನಾನು, ಪುರುಷಾನ್—ಪೌರುಷವುಳ್ಳವನು, ನ ಅಸ್ಮಿ—ಆಗುವದೇ ಇಲ್ಲ ॥೧೯೨॥

ಅತೋ ನ ಜೀವಿತಾತ್ಪ್ರಿಯಾನಹಂ ರಿಪೋರ್ಬಲೀಯಸಃ ।
ಸಕಾಶಮಾತ್ಮಹೇತಃತಃ ಪ್ರಯಾತಯಾಮಿ ವೋ ವಿಭೋ ॥೧೯೩॥

ಹೇ ವಿಭೋ—ಸರ್ವವ್ಯಾಪ್ತನಾದ ಭಗವಂತನೆ. ಅಹಂ—ನಾನು, ಜೀವಿತಾತ್—ನನ್ನ ಜೀವನಕ್ಕಿಂತಲೂ ಪ್ರಿಯತಾನ್—ಪ್ರಿಯರಾದ, ವಃ—ನಿಮ್ಮನ್ನು, ಆತ್ಮಹೆ ತಂತಃ—ನನ್ನ ಕಾರ್ಯದ ಕಾರಣಕ್ಕಾಗಿ, ಬಲೀಯಸಃ—ಬಲಿಷ್ಠನಾದ, ರಿಪೋಃ—ವೈರಿಯಾದ ಜರಾಸಂಧನ, ಸಕಾಶಂ—ಸಮೀಪಕ್ಕೆ, ನ ಪ್ರಯಾತಯಾಮಿ—(ಯುದ್ಧಕ್ಕೆ) ಕಳಿಸುವದಿಲ್ಲ. ॥೧೯೩॥

ಇತೀರಿತೇಽವದತ್ಪುನರ್ವೃಕೋದರೋಽರಿಕ್ಷಭುಕ್
ಯದೀಯನೇತೃಕಾ ರಮಾವಿರಿಂಚಶರ್ವಪೂರ್ವಕಾಃ ॥೧೯೪॥

ವಶೇ ಚ ಯಸ್ಯ ತದ್ಬಲಂ ಸುರಾಸುರೋರಗಾದಿನಾಮ್ ।
ಸ ಏವ ಕೇಶವಃ ಪ್ರಭುಃ ಕ್ವ ಚಾಸ್ಯ ಬಾರುಹದ್ರಥಃ ॥೧೧೫॥

ಇತಿ ಈರಿತೇ ಸತಿ – ಈ ರೀತಿ ಧರ್ಮರಾಜನಿಂದ ಹೇಳಲ್ಪಡುತ್ತಿರಲು, ಅರಿಕ್ಷಭಃ-ವೈರಿಗಳೆಂಬ ಶಪಾಕರಣ್ಯವನ್ನು ನಾಶಮಾಡುವ, ವೃಕೋದರಃ—ಶ್ರೀ ಭೀಮಸೇನದೇವರು, ಪುನಃ — ಮತ್ತೆ, ಅವದತ್ – (ಈ ರೀತಿ) ಹೇಳಿದರು. ರಮಾವಿರಿಂಚಶರ್ವಪೂರ್ವಕಾಃ – ರಮಾ, ಬ್ರಹ್ಮ, ರುದ್ರ ಇಂದ್ರಾದಿದೇವತೆಗಳು, ಯದೀಯನೇತೃಕಾಃ—ಯಾರ ಪ್ರೇರಣೆಯಂತೆ ಳ್ಳವರೋ, ಸುರಾಸುರೋರಗಾದಿನಾಮ್ – ದೇವತೆಗಳು, ಅಸುರರು, ನಾಗಗಳು ಇವರೇ ಮೊದಲಾದವರ, ತದ್ಬಲಂಚ– ಪ್ರಸಿದ್ಧವಾದ ಆ ಶಕ್ತಿಯೂ ಕೂಡ, ಯಸ್ಯವಶೇ – ಯಾರ ಅಧೀನವಾಗಿರುವದೋ, ಸಃ – ಅಂಥ ಪ್ರಭುಃ – ಸರ್ವಸ್ವಾಮಿ ಯಾದ ಭಗವಂತನೇ, ಕೇಶವಃ–ಈ ಶ್ರೀಕೃಷ್ಣನು, ಅಸ್ಯ,– ಅಂಥ ಈ ಶ್ರೀಕೃಷ್ಣನಿಗೆ, ಬಾರುಹದ್ರಥಃ–ಜರಾಸಂಧನು ಕ್ವ – ಎಲ್ಲಿಯವನು ? (ಎಷ್ಟರವನು ?) ಅಂದರೆ ಈ ಜರಾಸಂಧನನ್ನು ಕೊಲ್ಲಲು ಶ್ರೀಕೃಷ್ಣನಿಗೆ ಏನು ಕಷ್ಟ? ಎಂದು ಅರ್ಥ ॥೧೧೪-೧೧೫॥

ಅಧೃಷ್ಯಮಸ್ತಿ ಮೇ ಬಲಂ ಹರಿ ಪ್ರಣಾಯಕೋಽಸ್ಯ ಚ ॥
ಸಮಸ್ತಲೋಕನೇತರಿ ಪ್ರಭೌ ಹಿ ಸರ್ವಶಕ್ತತಾ ॥೧೧೬॥

ಮೇ – ನನಗೆ, ಅಧೃಷ್ಯಂ - ಯಾರಿಗೂ ತಡೆಯಲಾಗದ, ಬಲಂ –ಶಕ್ತಿಯಿದೆ, ಅಸ್ತಿ – ಇದೆ. ಅಸ್ಯ ಚ – ಈ ನನ್ನ ಶಕ್ತಿಗೂ ಕೂಡ, ಹರಿಃ—ಶ್ರೀಕೃಷ್ಣನು, ಪ್ರಣಾಯಕಃ - ಒಡೆಯನು. ಸಮಸ್ತಲೋಕನೇತರಿ - ಎಲ್ಲ ಜಗತ್ತಿನ ಒಡೆಯನಾದ, ಪ್ರಭೌ ಹಿ – ಸಮರ್ಥನಾದ ಶ್ರೀಹರಿಯಲ್ಲಿಯೇ, ಸರ್ವಶಕ್ತತಾ — ಸ್ವತಂತ್ರವಾದ, ಪೂರ್ಣವಾದ ಶಕ್ತಿಯು ಇರುವದು. ॥೧೧೬॥

ಅಜೇಯತಾ ತಥಾಽರ್ಜುನೇ ಹರೇರ್ವರೋದ್ಭವಾಽಸ್ತಿ ಹಿ ।
ಅತೋ ವಯಂ ತ್ರಯೋಽದ್ಯ ತಂ ಪ್ರಯಾಮ ಮಾಗಧಂ ರಿಪುಮ್ ॥೧೧೭॥

ತಥಾ – ಹಾಗು, ಅರ್ಜುನೇ – ಅರ್ಜುನನಲ್ಲಿ, ಹರೇಃ ವರೋದ್ಭವಾ — ಭಗವಂತನ ವರದಿಂದ ಬಂದಿರುವ, ಅಜೇಯತಾ – ಯಾರಿಗೂ ಸೋಲದಿರುವಿಕೆಯು, ಅಸ್ತಿ ಹಿ – ಇರುವದೋ, ಅತಃ; – ಈ ಕಾರಣದಿಂದ, ವಯಂ ತ್ರಯಃ — ನಾವು ಮೂವರು, ಅದ್ಯ – ಇಂದು, ತಂ ರಿಪುಂ ಮಾಗಧಂ – ವೈರಿಯಾದ ಆ ಜರಾಸಂಧನ ಹತ್ತಿರ, ಪ್ರಯಾಮಃ – ಹೋಗುವೆವು. ॥೧೧೭॥

ಹನಿಷ ಏವ ಮಾಗಧಂ ಹರೇಃ ಪುರೋ ನ ಸಂಶಯಃ ।
ಇತೀರಿತೋಽಮುನಾ ಹರ್ಜಗಾದ ಧರ್ಮನಂದನಮ್ ॥೧೧೮॥

ಹರೇಃ ಪುರಃ – ದೇವರ ಎದುರೇ, ಮಾಗಧಂ – ಜರಾಸಂಧನನ್ನು, ಹನಿಷ್ಯೇ ಏವ - ಕೊಂದೇತೀರುವೆನು, ಸಂಶಯಃ ನ – ಸಂಶಯವಿಲ್ಲ. (ಎಂದು ಶ್ರೀ ಭೀಮಸೇನ ದೇವರು ಹೇಳಿದರು) ಇತಿ-ಹೀಗೆ, ಅಮುನಾ - ಶ್ರೀಭೀಮಸೇನ ದೇವರಿಂದ: ಈರಿತ:—ಹೇಳಿಸಿಕೊಳ್ಳಲ್ಪಟ್ಟ, ಹರಿ:—ಶ್ರೀಕೃಷ್ಣನು, ಧರ್ಮನಂದನಂ–ಧರ್ಮರಾಜನನ್ನು ಕುರಿತು, ಜಗಾದ–ಹೇಳಿದನು. ॥೧೧೮॥

ವಯಂ ತ್ರಯಸ್ತ್ವನೇತ್ಯ ತಂ ಪ್ರಯಾತಯಾಮ ಮೃತ್ಯವೇ ।
ಹನಿಷ್ಯತಿ ಸ್ಫುಟಂ ರಣೇ ವೃಕೋದರೋ ಜರಾಸುತಮ್ ॥೧೧೯॥

ವಯಂ ತ್ರಯಃ;–ನಾವು ಮೂವರು, ಸಮೇತ್ಯ–(ಜರಾಸಂಧನ ಹತ್ತಿರ) ಹೋಗಿ, ತಂ – ಅವನನ್ನು, ಮೃತ್ಯವೇ ಪ್ರಯಾತಯಾಮ—ಮೃತ್ಯುಲೋಕಕ್ಕೆ ಕಳಿಸುವೆವು. (ಸರಹರಿಸುವೆವು). ವೃಕೋದರಃ – ಭೀಮಸೇನನು, ರಣೇ–ಯುದ್ಧದಲ್ಲಿ,

ಸ್ಫುಟಂ —ಎಲ್ಲರ ಸಮಕ್ಷಮದಲ್ಲಿ, ಜರಾಸುತಂ —ಜರಾಸಂಧನನ್ನು, ಹನಿಷ್ಯತಿ ಸಂಹರಿಸುತ್ತಾನೆ. ॥೧೦೯॥

ಭಯಂ ನ ಕಾರ್ಯಮೇವ ತೇ ಮಯಾ ಹತಸ್ಯ ನೇತಿ ಹ ।
ಮಯಾ ಹಿ ನೀತಿಹೇತುತಃ ಸ್ವಯಂ ನ ಹನ್ಯತೇ ರಿಪುಃ ॥೧೨೦॥

ಸಃ — ಆ ಜರಾಸಂಧನು, ಮಯಾ — ನನ್ನಿಂದ, ನ ಹತ ಇತಿಹ —ಸಂಹರಿಸಲ್ಪಟ್ಟಿಲ್ಲ ಎಂಬ ಕಾರಣದಿಂದ, ತೇ— ನಿನ್ನಿಂದ, ಭಯಂ ನ ಕಾರ್ಯಂ ಏವ — ಭಯವು ಮಾಡಲ್ಪಡಲೇಬಾರದು. ಹಿ — ಏಕೆಂದರೆ, ನೀತಿಹೇತುತಃ—ಲೋಕನೀತಿ ಪ್ರದರ್ಶನಕ್ಕಾಗಿ, ಸ್ವಯಂ ಮಯಾ — ಸ್ವತಃ ನನ್ನಿಂದ, ರಿಪುಃ—ವೈರಿಯು, ನ ಹನ್ಯತೇ — ಸಂಹರಿಸಲ್ಪಡುವದಿಲ್ಲ. ॥೧೨೦॥

ಸ ಶರ್ವಸಂಶ್ರಯಾಗ್ರಣೀರ್ಮದಾಶ್ರಯೋತ್ತಮೇನ ತು ।
ನಿಹನ್ಯತೇ ಯದಾ ತದಾ ಪ್ರಕಾಶಿತಂ ಹಿ ವೇ ಬಲಮ್ ॥೧೨೧॥

ಯದಾ — ಒಂದುವೇಳೆ, ಶರ್ವಸಂಶ್ರಯಾಗ್ರಣೀಃ—ರುದ್ರಭಕ್ತರಲ್ಲಿ ಅಗ್ರೇಸರನಾದ, ಸಃ — ಆ ಜರಾಸಂಧನು, ಮದಾಶ್ರಯೋತ್ತಮೇನ-ನನ್ನ ಭಕ್ತಾಗ್ರೇಸರನಿಂದ, ನಿಹನ್ಯತೇ (ಚೇತ್)-ಸಂಹರಿಸಲ್ಪಡುತ್ತಾನಾದರೆ, ತದಾ- ಆಗ, ವೇ ಬಲಂ ಹಿ—ನನ್ನ ಶಕ್ತಿಯೇ, ಪ್ರಕಾಶಿತಂ — ಪ್ರಕಟವಾಗುವದು. (ಈ ನೀತಿಯನ್ನು ನಾನು ತೋರಿಸುವದಕ್ಕಾಗಿ ಸಂಹರಿಸುವದನ್ನು ಬಿಟ್ಟಿದ್ದೇನೆ ಎಂದು ತಾತ್ಪರ್ಯ.) ॥೧೨೧॥

ಅತೋ ನ ಶಂಕಿತಂ ಮನಃ ಕುರುಷ್ವ ಭೂಪ ತೇ ಕ್ವಚಿತ್ ।
ಪ್ರದರ್ಶಯಾಮಿ ತೇಽನುಜೌ ನಿಹತ್ಯ ಮಾಗಧೇಶ್ವರಮ್ ॥೧೨೨॥

ಭೂಪ — ಎಲೋ ರಾಜನೇ, ಅತಃ—ಈ ರೀತಿ ಕಾರಣವಿರುವದರಿಂದ, ಕ್ವಚಿತ್ — ಯಾವದೇ ಸಮಯದಲ್ಲಿಯೂ, (ತ್ವಂ—ನೀನು) ಮನಃ — ಮನಸ್ಸನ್ನು, ಶಂಕಿತಂ — ಸಂಶಯದಿಂದ ಕೂಡಿದ್ದನ್ನು, ನ ಕುರುಷ್ವ — ಮಾಡಬೇಡ. ತೇ — ಅನುಜೌ —ನಿನ್ನ ತಮ್ಮಂದಿರನ್ನು, ಮಾಗಧೇಶ್ವರಂ — ಜರಾಸಂಧನನ್ನು, ನಿಹತ್ಯ — ಸಂಹರಿಸಿ, (ಸ್ಥಿತೌ—ಇರುವವರನ್ನಾಗಿ) ಪ್ರದರ್ಶಯಾಮಿ —ತೋರಿಸುವೆನು. ॥೧೨೨॥

ಭಾವಾನುವಾದ (೯೧.೧೨೨)

ಹೀಗೆ ಶ್ರೀ ಕೃಷ್ಣಪರಮಾತ್ಮನು ರಾಜಸೂಯದ ಮಹತ್ವವನ್ನು ತಿಳಿಸಿ ಈ ಯಾಗದ ಪೂರ್ಣ ಅರ್ಹತೆಯುಂ ಚತುರ್ಮುಖ ಬ್ರಹ್ಮ ಪದವಿಗೆ ಯೋಗ್ಯರಾದ ಶ್ರೀಭೀಮಸೇನದೇವರಲ್ಲಿಯೇ ಇರುವದರಿಂದ, ಅವರಿಗೇ ಆ ಯಜ್ಞದ ಪೂರ್ಣಫಲವುಂಟಾಗುವಂತೆ ಮಾಡಲು ವಾಯುದೇವರ ಮೇಲೆ ವಿಶೇಷ ಪ್ರೀತಿಯುಳ್ಳ ಭಗವಂತನು ಧರ್ಮರಾಜನಿಗೆ ಯುಧಿಷ್ಠಿರ· ಜರಾಸಂಧನು ಬದುಕಿರುವಾಗ ರಾಜಸೂಯವು ಹೇಗೆ ಶಕ್ಯವಾದೀತು ? ಯಾವನು ಬ್ರಹ್ಮನಿಂದಲೂ ಮೃತನಾಗಲಿಲ್ಲವೋ ಅಂಥ ಜರಾಸಂಧನನ್ನು ಯುದ್ಧದಲ್ಲಿ ಯಾವನು ತಾನೇ ಜಯಿಸಿಯಾನು ? ಬ್ರಹ್ಮರುದ್ರರ ವರದಿಂದ ಎಲ್ಲವನ್ನು ಜಯಿಸುವ ಸಾಮರ್ಥ್ಯವುಳ್ಳ ಅವನಿರುವಾಗ ಈ ಯಾಗವು ಸಾಧ್ಯವಾಗಲಾರದು ಎಂದು ಹೇಳಿದನು. ಆಗ ಧರ್ಮಜನು ಸ್ವಾಮೀ ಕೃಷ್ಣ, ನನ್ನ ಮನಸ್ಸು ಈ ಯಾಗದಿಂದ ಹಿಂದೆ ಸರಿಯಿತು. ಸಾಕು ಸಾಕು ಈ ಯಾಗ. ಅನೇಕ ರಾಜರಾಗಿರುವರು; ಅವರೆಲ್ಲರೂ ರಾಜಸೂಯ ಮಾಡಿ ಅಧಿಕ್ಯವನ್ನು ಹೊಂದಿದ್ದಾರೆಂದೇನೂ ಇಲ್ಲ ಯಾವ ಕೆಲವರು ರಾಜಸೂಯ ಯಾಗವನ್ನು ಮಾಡಿದ್ದರೋ ಅವರ ಕಾಲದಲ್ಲಿ ಈ ಜರಾಸಂಧನಂಥ ಪ್ರತಿಪಕ್ಷಿಗಳು ಇರಲಿಲ್ಲ ಎಂದು ಹೇಳಿದನು. ಆಗ ಶ್ರೀ ವಾಯುಪ್ರಾಣಾವತಾರಿಗಳಾದ ಶ್ರೀ ಭೀಮಸೇನದೇವರು ಪ್ರಯತ್ನವನ್ನು ಅವಶ್ಯವಾಗಿ ಮಾಡಲೇಬೇಕು. ಚತುರ್ಮುಖ ಪದವೇಆಗಲಿ ಅದನ್ನು ಪ್ರಯತ್ನದಿಂದ ಸಂಪಾದಿಸಬೇಕು. ಯಾವದೇ ಕಾರ್ಯ ಯಶಸ್ವಿಯಾಗಬೇಕಾದರೆ ಸ್ವರೂಪಯೋಗ್ಯತೆ, ಭಗವದನುಗ್ರಹ, ಹಾಗೂ ಮಹಾಪ್ರಯತ್ನ ಇವು ಮೂರೂ ಬೇಕೇಬೇಕು. ಯಾವದೊಂದಿಲ್ಲದಿದ್ದರೂ ಜನರು ಉನ್ನತಿಯನ್ನು ಹೊಂದಲಾರರು. ನಮಗೆ ಯೋಗ್ಯತೆ ಇದ್ದೇ ಇದೆ. ಭಗವದನುಗ್ರಹವೂ ಇದ್ದೇ ಇದೆ. ಪ್ರಧಾನ ಪ್ರಯತ್ನವನ್ನು ಮಾಡಿ ವಿಜಯವನ್ನ

ಹೊಂದುವಾ ಎಂದು ಹೇಳಿದರು. ಹೀಗೆ ಇವರು ಹೇಳಿದಾಗ ಶ್ರೀಕೃಷ್ಣಪರವಾತ್ಮನು ಪ್ರಯತ್ನಪೂರ್ವಕವಾಗಿ ಯಾಗಕ್ಕೆ ಪ್ರಧಾನ ಕಾರಣರಾಗತಕ್ಕಂಥ ಭೀಮಸೇನದೇವರು ಇರುವಾಗಲೇ(ಅವರ ಸಮಕ್ಷಮದಲ್ಲಿ)ಸಕಲ ಸಜ್ಜನರಿಗೂ ವಿರೋಧಿಯಾದ, ದುಷ್ಟರಿಗೆ ಕಲಿಯು ನಂತರದಲ್ಲಿ ಪ್ರಬಲನಾದವನು ಜರಾಸಂಧನೊಬ್ಬನಿರುವನು. ಅವನನ್ನು ಎದುರಿಸಲು ಸಕಲಸಜ್ಜನರಿಗೆ ಆಶ್ರಯನಾದ, ಸದ್ಗುಣಗಳ ಆಕರನಾದ ಒಬ್ಬನನ್ನು ವಿಚಾರಿಸಿ ಕಳಿಸು. ಒಂದು ವೇಳೆ ಅವನು ಬೃಹದ್ರಥನನ್ನು ಕೊಲ್ಲುತ್ತಾನೆಯಾದರೆ ಸಕಲಸಜ್ಜನರಿಗೆ ಜಯವು ಆದಂತೆ. ಬೃಹದ್ರಥನ ವಧೆ ಮಾಡುವವನು ನಿಸ್ಸಂಶಯವಾಗಿ ಬ್ರಹ್ಮಪದವಿಯನ್ನು ಹೊಂದುವನು; ಅವನೇ ವೇದಧರ್ಮರಕ್ಷಕನಾಗುವನು ಸಕಲ ಸಮಾಜವನ್ನು ವೈಷ್ಣವವನ್ನಾಗಿ ಮಾಡುತ್ತಾನೆ. ಆ ಬೃಹದ್ರಥನು ರುದ್ರಭಕ್ತಾಗ್ರೇಸರನೂ, ರುದ್ರರಕ್ಷಿತನೂ ಆದ್ದರಿಂದ ಅವನನ್ನು ಕೊಲ್ಲುವವನು ವಿಷ್ಣುಭಕ್ತಾಗ್ರೇಸರನೇ ಆಗಬೇಕು ಎಂಬ ಅಭಿಪ್ರಾಯದಿಂದ ಹೇಳಿದಾಗ ಧರ್ಮರಾಜನು ಹೆದರಿದನು, ಮತ್ತು ಯಜ್ಞವು ಬೇಡ ಎಂದು ಹೇಳಿದನು. ಆಗ ಶ್ರೀ ಭೀಮಸೇನದೇವರು ನಾನು ಜರಾಸಂಧನನ್ನು ಸಂಹರಿಸುವೆನು ಎಂದು ಹೇಳಿದರು ಆಗ ಸತ್ಯಸಂಕಲ್ಪನಾದ ಶ್ರೀ ಕೃಷ್ಣನು ನಾನು, ಭೀಮಾರ್ಜುನರು ಹೀಗೆ ಮೂವರೂ ಜರಾಸಂಧನನ್ನು ಕೊಲ್ಲುವದಕ್ಕಾಗಿಯೇ ಹೋಗುತ್ತೇವೆ. ಒಂದು ವೇಳೆ ಭೀಮಸೇನನಿಂದ ಬೃಹದ್ರಥವಧವಾದರೆ ಯಾಗವೂ ಸಾಧ್ಯವಾಗುವದು. ಜಗತ್ತು ನಿನ್ನ ವಶಕ್ಕೆ ಬರುವದು ಎಂದು ಹೇಳಿದನು. ಆಗ ಧರ್ಮರಾಜನು ಶ್ರೀಕೃಷ್ಣನು ಜರಾಸಂಧನ ಹೆದರಿಕೆಯಿಂದ ಮಥುರೆಯನ್ನು ಬಿಟ್ಟು ದ್ವಾರಕೆಯನ್ನು ಸೇರಿದವನು ಎಂದು ತಿಳಿದಿದ್ದು ಅದನ್ನೇ ಪ್ರಕಟಪಡಿಸಿ ಅದಕ್ಕಾಗಿಯೇ ನಾನು ಜರಾಸಂಧ ಎಂದರೆ ಹೆದರುವೆನು. ಭೀಮಾರ್ಜುನರು ನನ್ನ ಎರಡು ಕಣ್ಣುಗಳಂತೆ, ನೀನು ಎಂದರೆ ನನ್ನ ಮನಸ್ಸಿನಂತೆ. ಆದ್ದರಿಂದ ನೀವು ಮೂವರಿಲ್ಲದೇ ನಾನು ಜೀವಿಸಲಾರೆನು. ನನ್ನ ಜೀವಕ್ಕಿಂತಲೂ ಪ್ರಿಯರಾದ ನಿಮ್ಮನ್ನು ನನ್ನ ಸ್ವಾರ್ಥಕ್ಕಾಗಿ ಪ್ರಬಲ ವೈರಿಯೆಂಡೆಗೆ ಕಳೆಸಲಾರೆನು ಎಂದು ಹೇಳಿದನು. ಆಗ ಶ್ರೀಭೀಮಸೇನದೇವರು ಶ್ರೀಕೃಷ್ಣನೆಂದರೇನು ಸಾಮಾನ್ಯ ಮನುಷ್ಯನೆಂದು ತಿಳಿದಿಯಾ? ಶಿವಾಬ್ರಹ್ಮಾದಿಗಳಿಗೂ ಪ್ರೇರಕನಾದ,ದೇವಸುರಾದಿ ಸರ್ವರ ಬಲಕ್ಕೂ ನಿಯಾಮಕನಾದ ಸಾಕ್ಷಾತ್ ಶ್ರೀಹರಿಯೇ ಶ್ರೀಕೃಷ್ಣನು. ಅವನ ಎದುರು ಈ ಜರಾಸಂಧ ಯಾವನು ? ಹುಳವಿದ್ದಂತೆ. ನನ್ನಲ್ಲಿ ಯಾರಿಂದಲೂ ತಡೆಯಲಾಗದ ಶಕ್ತಿಯಿದೆ. ಅದೂ ಶ್ರೀಕೃಷ್ಣಾಧೀನವಾದದ್ದು. ಅವನೊಬ್ಬನೇ ಸ್ವತಂತ್ರವಾಗಿ ಶಕ್ತನು. ಅರ್ಜುನನೂ ಶ್ರೀಕೃಷ್ಣನ ಅನುಗ್ರಹದಿಂದ ಪರಾಜಯವೆದೂರನು. ಆದ್ದರಿಂದ ನಾವು ಮೂವರು ಹೋಗುವವು ನಾನು ಭಗವಂತನಾದ ಶ್ರೀಕೃಷ್ಣನೆದುರು ಆ ದುಷ್ಟ ಜರಾಸಂಧನನ್ನು ನಿಸ್ಸಂಶಯವಾಗಿ ಕೊಲ್ಲುವೆನು ಎಂದು ಹೇಳಿದರು. ಆಗ ಶ್ರೀಕೃಷ್ಣನು ನಾವು ಹೋಗಿ ಜರಾಸುತನನ್ನು ಯಮಲೋಕಕ್ಕೆ ಅಟ್ಟುವೆವು. ಶ್ರೀಭೀಮನು ಎಲ್ಲರ ಎದುರೇ ಅವನನ್ನು ಕೊಲ್ಲುವನು. ನನ್ನ ಭಕ್ತಾಗ್ರೇಸರನಾದ ಶ್ರೀಭೀಮನು ಅವನನ್ನುಕೊಂದು ಅವನ ಒಲವು, ಅದರ ದ್ವಾರಾ ನನ್ನ ಬಲವೂ ಪ್ರಕಟವಾಗಲಿ ಎಂಬ ಉದ್ದೇಶದಿಂದಲೇ ನಾನು ಈ ಹಿಂದೆ ಕೊಂದಿಲ್ಲ. ಆದ್ದರಿಂದ ನೀನು ಭಯಪಡಬೇಡ. ನಿನ್ನ ತಮ್ಮಂದಿರನ್ನು ಜರಾಸಂಧನ ವಧಮಾಡಿದವರನ್ನಾಗಿ ತೋರಿಸುತ್ತೇನೆ ಎಂದು ಹೇಳಿದನು.

ವಿಶೇಷಾಂಶ ೧) ಶ್ರೀಕೃಷ್ಣನ ಬಗ್ಗೆ ಧರ್ಮರಾಜನಿಗೆ ಇರುವ ತಪ್ಪು ತಿಳುವಳಿಕೆಯನ್ನು, ಶ್ರೀಭೀಮಸೇನದೇವರಿಗೆ ಅದಿಲ್ಲದಿರುವದನ್ನೂ ಈ ಕಥಾಭಾಗದಿಂದ ಗಮನಿಸಬೇಕು.

೨) ಜರಾಸಂಧನ ವಧವಾಡುವವನು ಜಗತ್ತನ್ನು ವೈಷ್ಣವವನ್ನಾಗಿ ಮಾಡುವನು, ವೇದರಕ್ಷಣೆ ಮಾಡುವನು ಎಂದು ಶ್ರೀಕೃಷ್ಣನು ಹೇಳಿದಾಗ ಶ್ರೀಭೀಮರು ನಾನು ಸಂಹರಿಸುವೆನು ಎಂದು ಹೇಳಿದ್ದನ್ನು ಗಮನಿಸಿದರೆ ಶ್ರೀಭೀಮರೇ ಶ್ರೀಮಧ್ವರಾಗಿ ಬರುವರೆಂಬುದನ್ನು ಶ್ರೀಕೃಷ್ಣನು ಆಗಲೇ ಸೂಚಿಸಿದ್ದಾನೆ ಎಂದೂ ಶ್ರೀಭೀಮರು ನಾನೇ ಬರುವೆನೆಂದು ಸೂಚಿಸಿದ್ದಾರೆಂದೂ ಮನಗಾಣಬಹುದು.

ಇತೀರಿತಸ್ಸ ವಿಷ್ಣುನಾ ವಿಚಾರ್ಯ ತದ್ಗುಣಾನ್ಪರಾನ್ ।
ತಥೇತಿ ಚಾಹ ತೇ ತ್ರಯಃ ಪ್ರತಸ್ಥುರಾಶು ಮಾಗಧಾನ್ ॥೧೨೩॥

ಇತಿ – ಹೀಗೆ. ವಿಷ್ಣುನಾ – ಶ್ರೀಕೃಷ್ಣನಿಂದ, ಈರಿತಃ ಸಃ – ಹೇಳಿಸಿಕೊಳ್ಳಲ್ಪಟ್ಟ ಆ ಧರ್ಮರಾಜನು, ಪರಾನ್-ಶ್ರೇಷ್ಠವಾದ, ತದ್ಗುಣಾನ್ – ಅವನ (ಶ್ರೀಕೃಷ್ಣನ) ಗುಣಗಳ ಬಗ್ಗೆ, ವಿಚಾರ್ಯ – ವಿಚಾರಿಸಿ, ತಥಾ ಇತಿ – ಹಾಗೆ ಆಗಲಿ,

ಎಂದು, ಆಹ – ಹೇಳಿದನು. ತೇ ತ್ರಯಃ – ಆ ಮೂವರೂ, ಆಶು – ಕೂಡಲೇ, ಮಾಗಧಾನ್ – ಮಗಧ ದೇಶಕ್ಕೆ, ಪ್ರತಸ್ಥಿರೇ – ಹೊರಟರು. ॥೧೨೩॥

ಸಮೇತ್ಯ ಮಾಗಧಾಂಸ್ತು ತೇ ಶಿವೋರುಲಿಂಗಮಿತ್ಯಲಮ್ ।
ಸುಮೂಲ್ಯವಸ್ತ್ರಭೂಷಣೈಸ್ಸಮರ್ಚಿತಂ ಗಿರಿಂ ಯಯುಃ ॥೧೨೪॥

ತೇ—ಅವರು, ಮಾಗಧಾನ್ – ಮಗಧದೇಶಕ್ಕೆ, ಸಮೇತ್ಯ—ಬಂದು, ಶಿವೋರುಲಿಂಗಂ – ಶಿವನ ದೊಡ್ಡ ಲಿಂಗವು, ಇತಿ ಎಂಬ ಭಾವದಿಂದ, ಸುಮೂಲ್ಯವಸ್ತ್ರಭೂಷಣೈಃ—ಬಲೆ, ವಸ್ತ್ರ ಆಭರಣಗಳಿಂದ, ಅಲಂ ಸಮರ್ಚಿತಂ—(ಜರಾಸಂಧನಿಂದ) ಚೆನ್ನಾಗಿ ಪೂಜಿತವಾದ, ಗಿರಿಂ – ಪರ್ವತಕ್ಕೆ, ಯಯುಃ – ಹೋದರು. ॥೧೨೪॥

ಸ್ವಶೀರ್ಷತೋಽಪಿ ಚಾದೃತಂ ಜರಾಸುತೇನ ತೇ ಗಿರಿಮ್ ।
ನ್ಯಪಾತಯಂತ ಬಾಹುಭಿಸ್ತಮುಸ್ಯ ಚೋತ್ತಮಾಂಗವತ್ ॥೧೨೫॥

ಜರಾಸುತೇನ – ಜರಾಸಂಧನಿಂದ, ಸ್ವಶೀರ್ಷತಃಽಪಿ - ತನ್ನ ತಲೆಯಿಂದಲೂ ಕೂಡ, ಆದೃತಂ–ಆದರಿಸಲ್ಪಟ್ಟ, ಶಿರ ಸಾಮಾನ್ಯವಾದ ತಂ ಗಿರಿಂ – ಆ ಪರ್ವತವನ್ನು, ಅಸ್ಯ ಉತ್ತಮಾಂಗವತ್—ಈ ಜರಾಸಂಧನ ತಲೆಯಂತೆ, ಬಾಹುಭಿ :— ಕೈಗಳಿಂದ, ನ್ಯಪಾತಯಂತ—ಕೆಡವಿದರು. ॥೧೨೫॥

ಅದ್ವಾರತಸ್ತೇ ನಗರಂ ಪ್ರವಿಶ್ಯಮೂಷಸ್ಯ ನಾಳೀನ ಕೃತಾಸ್ತ್ರಭೇರೀಃ ।
ಮುಷ್ಟಿಪ್ರಹಾರಾದ್ಬಿಭಿದುಸ್ತಸ್ಯ ಕೀರ್ತಿಶಾಸ್ತ್ರೋಪಮಾಃ ನ್ಯಕ್ಕೃತಮಾಗಧೇಶಾಃ ॥೧೨೬॥

ನ್ಯಕ್ಕೃತಮಾಗಧೇಶಾಃ — ತಿರಸ್ಕರಿಸಲ್ಪಟ್ಟ ಜರಾಸಂಧನುಳ್ಳ, (ಜರಾಸಂಧನ ತಿರಸ್ಕಾರವನ್ನು ತಮ್ಮ ಪ್ರವೇಶದಿಂದಲೇ ತೋರಿಸುವ ಇಚ್ಛೆಯುಳ್ಳ, ತೇ–ಶ್ರೀ ಕೃಷ್ಣಾದಿಗಳು, ಅದ್ವಾರತಃ–ಮಹಾದ್ವಾರವನ್ನು ಬಿಟ್ಟು ಹಿಂದಿನ ದ್ವಾರದಿಂದ, (ದ್ವಾರವನ್ನು ಬಿಟ್ಟು ಗೋಡೆಯನ್ನು ಒಡೆದು), ನಗರಂ — ಅವನ ನಗರವನ್ನು, ಪ್ರವಿಶ್ಯ — ಪ್ರವೇಶಿಸಿ, ಮೂಷಸ್ಯ – ಮೂಷಾಸುರನ, ನಾಳೀನ—ಕಂಠನಾಳದಿಂದ, ಕೃತಾಃ—ಮಾಡಲ್ಪಟ್ಟ, ತಸ್ಯ– ಆ ಜರಾಸಂಧನ, ಕೀರ್ತಿಶಾಸ್ತ್ರೋಪಮಾಃ – ಕೀರ್ತಿಯನ್ನು ತಿಳಿಸುವ ಗ್ರಂಥದಂತೆ ಧ್ವನಿಯಿಂದ ಕೀರ್ತಿಯನ್ನು ಪ್ರಸಿದ್ಧ ಮಾಡುವ, ತ್ರಿಭೇರೀಃ—ಮೂರು ನಗಾರಿಗಳನ್ನು, ಮುಷ್ಟಿಪ್ರಹಾರಾತ್ – ಮುಷ್ಟಿ ಹೊಡೆತದಿಂದ, ಬಿಭಿದುಃ – ಸೀಳಿದರು. ॥೧೨೬॥

ತಥಾ�ऽಪಣೇಭ್ಯೋ ಬಹುಮೂಲ್ಯಗಂಧಾನ್ ಪ್ರಸಹ್ಯ ಸಂಗೃಹ್ಯ ಶುಭಾಂಶ್ಚ ದಧ್ರುಃ ।
ಅದ್ವಾರತಸ್ತಸ್ಯ ಗೃಹಂ ಚ ಸಸ್ರುರ್ಭೋ ಶಬ್ದತಸ್ತಂ ಚ ನೃಪಂ ಪ್ರಸಸ್ರುಃ ॥೧೨೭॥

ತಥಾ – ಹಾಗೂ, ಆಪಣೇಭ್ಯಃ -ಅಂಗಡಿಗಳಿಂದ, ಶುಭಾನ್ ಬಹುಮೂಲ್ಯಗಂಧಾನ್ – ಶ್ರೇಷ್ಠವಾದ, ಬಹು ಗಂಧಪುಷ್ಪಾದಿಗಳನ್ನು, ಪ್ರಸಹ್ಯ ಸಂಗೃಹ್ಯ — ಬಲಾತ್ಕಾರದಿಂದ ತೆಗೆದುಕೊಂಡು, ದಧ್ರುಃ-ಧರಿಸಿದರು. ತಸ್ಯ ಗೃಹಂ ಚ-ಅವನ ಮನೆಯನ್ನೂ ಕೂಡ, ಅದ್ವಾರತ: ಸಸ್ರುಃ—ಗೋಡೆಯನ್ನು ಒಡೆದು ಪ್ರವೇಶಿಸಿದರು ಭೋಶಬ್ದತ : — ಎಲೋ ಜರಾಸಂಧನೇ ಎಂಬ ಶಬ್ದವನ್ನು ಹೇಳುತ್ತಾ, ತಂ ನೃಪಂ ಚ — ಆ ಜರಾಸಂಧನನ್ನೂ ಕೂಡ, ಪ್ರಸಸ್ರುಃ — ಹೊಂದಿದರು. ॥೧೨೭॥

ತಾನ್ವಿಪ್ರವೇಷಾನ್ಸ ನಿಶಾಮ್ಯ ರಾಜಾ ಮಹಾಭುಜಾನ್ ಸ್ನಾತಕವೇಷಯುಕ್ತಾನ್ ।
ದ್ವೀತಿಯವರ್ಣಾನ್ವವಿಚಿಂತ್ಯ ಬಾಹೂನ್ ಜ್ಯಾಕರ್ಕಶಾನ್ ವೀಕ್ಷ್ಯ ಬಭಾಷ ಏತಾನ್ ॥೧೨೮॥

ರಾಜಾ—ಜರಾಸಂಧನು, ವಿಪ್ರವೇಷಾನ್ — ಬ್ರಾಹ್ಮಣ ವೇಷವುಳ್ಳ, ಮಹಾಭುಜಾನ್ – ದೀರ್ಘಬಾಹುವುಳ್ಳ, ಸ್ನಾತಕವೇಷಯುಕ್ತಾನ್ — ತೀರ್ಥಯಾತ್ರಿಕರ ವೇಷವುಳ್ಳ, ತಾನ್ – ಅವರನ್ನು, ನಿಶಾಮ್ಯ—ನೋಡಿ, ಬಾಹೂನ್ — ಅವರ

ಭೂಪಗಳನ್ನು, ಜ್ಞಾಕರ್ಕಶಾನ್ — ಜ್ಞಾದ ಸಂಬಂಧದಿಂದ ದಪ್ಪ, ಬಿರುಸಾದವುಗಳನ್ನಾಗಿ, ವೀಕ್ಷ್ಯ — ನೋಡಿ, ದ್ವಿತೀಯವರ್ಣಾನ್ — ಕ್ಷತ್ರಿಯವರ್ಣದವರನ್ನಾಗಿ, ಪ್ರವಿಚಿಂತ್ಯ—ವಿಚಾರಿಸಿ, ಏತಾನ್— ಇವರನ್ನು ಕುರಿತು, ಉಭಾಷೇ— ವಾತನಾಡಿದನು, ॥೧೨೮॥

ಕೇ ಸ್ಥಾಥ ಕಿಂ ಹೇತುತ ಆಗತಾಶ್ಚ ಕುತಶ್ಚ ಮೇ ಪರ್ವತಲಿಂಗಭೇದನವ್ ।
ಕೃತಂ ಭವದ್ಭಿಃ ಕುತ ಏವ ದುರ್ನಯಾಃ ಕೃತಾಸ್ತಥಾಽನ್ಯೇ ದ್ವಿಜವರ್ಯವೇಷೈಃ ॥೧೨೯॥

(ಯೂಯಂ — ನೀವು), ಕೇ ಸ್ಥ — ಯಾರಿರುವಿರಿ? ಅಥ — ಹಾಗು, ಕಿಂಹೇತುತ ಃ ಆಗತಾ: — ಯಾವಕಾರಣದಿಂದ ಬಂದಿರುವಿರಿ ? ಚ–ಮತ್ತು, ಮೇ–ನನ್ನ, ಪರ್ವತಲಿಂಗಭೇದನಂ — ಲಿಂಗಾಕಾರ ಪರ್ವತದ ನಾಶವು, ಕುತ: — ಯಾವ ಕಾರಣದಿಂದ, ಭವದ್ಭಿಃ ಕೃತಂ — ನಿಮ್ಮಿಂದ ಮಾಡಲ್ಪಟ್ಟಿತು ? ತಥಾ — ಹಾಗೂ, ದ್ವಿಜವರ್ಯವೇಷೈ:— ಶ್ರೇಷ್ಠಬ್ರಾಹ್ಮಣರ ವೇಷವುಳ್ಳ ನಿಮ್ಮಿಂದ, ಅನ್ಯೇ ದುರ್ನಯಾ ಃ — ಬೇರೆ ದುಷ್ಟತ್ಯಗಳು, ಕುತ: ಕೃತಾಃ — ಏಕೆ ಮಾಡಲ್ಪಟ್ಟವು ? (ಎಂದೂ ಮಾತನಾಡಿದನು) ॥೧೨೯॥

ಇತಿ ಬ್ರುವಾಣಂ ಭಗವಾನುವಾಚ ಕಾರ್ಯಂ ಹಿ ಶತ್ರೋರಖಿಲಂ ಪ್ರತೀಪವ್ ।
ಇತ್ಯುಕ್ತ ಊಚೇ ನಹಿ ವಿಪ್ರಶತ್ರುರಹಂ ಕುತೋ ವೋ ಮಮ ಶತ್ರುತಾ ಭವೇತ್ ॥೧೩೦॥

ಇತಿ ಬ್ರುವಾಣಂ— ಈ ರೀತಿ ಮಾತನಾಡಿದ ಜರಾಸಂಧನನ್ನು ಕುರಿತು, ಭಗವಾನ್—ಶ್ರೀ ಕೃಷ್ಣನು, ಶತ್ರೋಃ- ವೈರಿಗೆ, ಅಖಿಲಂ ಪ್ರತೀಪಂ — ಎಲ್ಲ ತರಹದ ವಿರೋಧವು ಕಾರ್ಯಂ ಹಿ — ಯಾವಕಾರಣದಿಂದ ಮಾಡಲ್ಪಡಬೇಕೋ (ಆ ಕಾರಣದಿಂದ ಮಾಡಿದ್ದೇವೆ ಎಂದು ಭಾವ) ಇತಿ — ಎಂದು, ಉವಾಚ — ಹೇಳಿದನು.ಇತಿ ಉಕ್ತಃ, — ಹೀಗೆ ಹೇಳಿಸಿಕೊಂಡಂಥ- ಜರಾಸಂಧನು, ಅಹಂ—ನಾನು, ವಿಪ್ರಶತ್ರುಃ ನಹಿ — ಬ್ರಾಹ್ಮಣರವೈರಿಯಲ್ಲ. (ಆದ್ದರಿಂದ) ವಃ — ನಿಮಗೆ, ಮಮ ಶತ್ರುತಾ— ನನ್ನ ವೈರವು, ಕುತಃ ಭವೇತ್ — ಹೇಗೆ ಇದ್ದೀತು? ಇತಿ ಊಚೇ — ಎಂದು ಹೇಳಿದನು. ॥೧೩೦॥

~~ಇತ್ಯುಕ್ತವಾಕ್ಯಂ ನೃಪತಿಂ ಜಗಾದ ಜನಾರ್ದನೋ ನೈವಹಿ ತಾದೃಶಾ ದ್ವಿಜಾಃ ।~~
ಅಹಂ ರಿಪುಸ್ತೇಽಸ್ಮಿ ಹಿ ವಾಸುದೇವ ಇಮೌ ಚ ಭೀಮಾರ್ಜುನನಾಮಧೇಯೌ ॥೧೩೧॥

ಇತಿ — ಹೀಗೆ, ಉಕ್ತವಾಕ್ಯಂ — ಮಾತನ್ನು ಹೇಳಿದ, ನೃಪತಿಂ — ಜರಾಸಂಧನನ್ನು ಕುರಿತು, ಜನಾರ್ದನಃ- ಶ್ರೀಕೃಷ್ಣನು, ವಯಂ — ನಾವು, ತಾದೃಶಾ: - ದ್ವಿಜಾ:— ನಿನ್ನ ಶತ್ರುತ್ವವಿಲ್ಲದ ಬ್ರಾಹ್ಮಣರು, ನೈವ ಹಿ — ಅಲ್ಲವೇ ಅಲ್ಲ, ಅಹಂ—ನಾನು, ತೇ — ನಿನ್ನ, ರಿಪು:—ವೈರಿಯಾದ, ವಾಸುದೇವ:ಹಿ — ಶ್ರೀಕೃಷ್ಣನೇ, ಅಸ್ಮಿ—ಇರುವೆನು. ಇಮೌ ಚ — ಇವರಿಬ್ಬರು, ಭೀಮಾರ್ಜುನನಾಮಧೇಯೌ — ಭೀಮಅರ್ಜುನ ಎಂಬ ಹೆಸರುಳ್ಳವರು. ॥೧೩೧॥ (ಇಲ್ಲಿಯ 'ಜಗಾದ' ಎಂಬುದು ೧೩೩ ನೇಯ ಶ್ಲೋಕದ ಕೊನೆಗೆ ಅನ್ವಯಕ್ಕೆ ಬರುವದು.)

ಯದ್ಬಾಂಧವಾನ್ನ : ಪಿಶಿತಾಶಿಧರ್ಮತೋ ರೌದ್ರೇ ಮಖೇ ಕಲ್ಪಯಿತುಂ ಪಶುತ್ವೇ।
ಇಚ್ಛಸ್ಯರೇ ವೇದಪಥಂ ವಿಹಾಯ ತಂ ತ್ವಾಂ ಬಲಾಚ್ಛಾಸ್ತುಮಿಹಾಗತಾವಯಮ್ ॥೧೩೨॥

ಯತ್ —ಯಾವಕಾರಣದಿಂದ, ನ: ಬಾಂಧವಾನ್ —ನಮ್ಮ ವಿವಾಹಬಾಂಧವರನ್ನು, ಪಿಶಿತಾಶಿಧರ್ಮತ: — ಮಾಂಸಭಕ್ಷಕರಾದ ರಾಕ್ಷಸರ ಧರ್ಮಕ್ಕನುಸಾರವಾಗಿ, ವೇದಪಥಂ ವಿಹಾಯ– ವೈದಿಕ ಮಾರ್ಗವನ್ನು ಬಿಟ್ಟು, ರೌದ್ರೇ ಮಖೇ ರುದ್ರದೇವರ ಉದ್ದೇಶ್ಯವಾದ ಯಜ್ಞದಲ್ಲಿ, ಪಶುತ್ವೇ — ಪಶು ಸ್ಥಾನದಲ್ಲಿ, ಕಲ್ಪಯಿತುಂ— ತೊಡಗಿಸಲು, ಇಚ್ಛಸಿ — ಇಚ್ಛೆ ಮಾಡುತ್ತಿರುವಿ ಅಷ್ಟೇ, ಅರೇ—ಎಲೋ ಜರಾಸಂಧನೇ, ತಂ ತ್ವಾಂ — ಅಂಥ ನಿನ್ನನ್ನು, ಬಲಾತ್ ಶಾಸ್ತುಂ — ಬಲಾತ್ಕಾರವಾಗಿ ಶಾಸಿಸಲು (ಶಿಕ್ಷಿಸಲು.) ವಯಂ — ನಾವು, ಇಹ ಆಗತಾ — ಇಲ್ಲಿಗೆ ಬಂದಿರುವೆವು ॥೧೩೨॥

ವಿಮೋಕ್ಷಯಾವಃ ಸ್ವಜನಾನ್ಯದಿತ್ವಂ ನಮೋಚಯಸ್ಮದ್ಯ ನಿಗೃಹ್ಯ ಚ ತ್ವಾಮ್ ।
ಮುಂಚಾಥವಾ ತಾನಭಿಯಾಹಿ ವಾsಸ್ಮಾನ್ ರಣಾಯ ಮರ್ತುಂ ಕೃತ ನಿಶ್ಚಯೋsತ್ರ ॥೧೩೩॥

ಯದಿ – ಒಂದು ವೇಳೆ, ಸ್ವಜನಾನ್—ನಮ್ಮ ಬಂಧುಗಳನ್ನು, ಅದ್ಯ – ಈಗ, ನ ಮೋಚಯಸಿ—ಬಿಡುವದಿಲ್ಲವಾದರೆ. (ಮಯಂ-ನಾವು) ತ್ವಾಂ—ನಿನ್ನನ್ನು. ನಿಗೃಹ್ಯ – ನಿಗ್ರಹಿಸಿ, ವಿಮೋಕ್ಷಯಾವಃ – ಬಿಡಿಸಿಕೊಳ್ಳುತ್ತೇವೆ. ತಾನ್ – ಆ ಬಂಧುಗಳನ್ನು, ಮಂಚ – ಬಿಟ್ಟುಕೊಡು, ಅಥವಾ – ಅಥವಾ, ಮರ್ತುಂ ಸಾಯಲು, ಕೃತ ನಿಶ್ಚಯಃ ಸನ್–ನಿಶ್ಚಯವಾಡಿದವನಾಗಿ, ಅಸ್ಮಾನ್ – ನಮ್ಮನ್ನು ಕುರಿತು, ರಣಾಯ ಅಭಿಯಾಹಿ — ಯುದ್ಧಕ್ಕೆ ಬಾ, ಇತಿ-ಎಂದು, ಜಗಾದ – ಹೇಳಿದನು. ॥೧೩೩॥

ಇತೀರಿತೋsಸೌ ಮಗಧಾಧಿಪೋ ರುಷಾ ಜಗಾದ ನಾಹಂ ಶಿವಯಾಗಯುಕ್ತಾನ್ ।
ಮೋಕ್ಷ್ಯೇ ಪಶೂನ್ಮಗಪದಾ್ವ ಕ್ರಮೇಣ ಯೋತ್ಸ್ಯೇಚ್ಚ ವೋsಥಾಪಿಚಮೂ
ಸಹಾಯಾನ್ ॥೧೩೪॥

ಇತಿ ಈರಿತ;—ಹೀಗೆ ಆಹ್ವಾನಿತನಾದ. ಅಸೌ ಮಗಧಾಧಿಪಃ – ಮಗಧರಾಜನಾದ ಆ ಜರಾಸಂಧನು, ಅಹಂ–ನಾನು, ಶಿವಯಾಗಯುಕ್ತಾನ್ಪಶೂನ್ – ಶ್ರೀರುದ್ರನ ಉದ್ದೇಶ್ಯಕವಾದ ಯಜ್ಞದಲ್ಲಿ ಪಶುಗಳಂತೆ ತೊಡಗಿಸಲ್ಪಟ್ಟ ರಾಜರನ್ನು. ನ ಮೋಕ್ಷ್ಯೇ–ಬಿಡುವದಿಲ್ಲ. ವಃ-ನಿಮ್ಮ ಜೊತೆಗೆ, ಯುಗಪತ್ ಕ್ರಮೇಣ ವಾ—ಏಕಕಾಲದಲ್ಲಿಯಾಗಲಿ, ಕ್ರಮವಾಗಿ ಒಬ್ಬೊಬ್ಬರ ಜೊತೆಗೆ ಆಗಲಿ, ಅಥ ಚಮೂಸಹಾಯಾನ್ ಅಪಿ – ಸೈನ್ಯಸಹಿತರಾದ ನಿಮ್ಮ ಜೊತೆಗೂ ಕೂಡ, ಯೋತ್ಸ್ಯೇ-ಯುದ್ಧ ಮಾಡುವೆನು. ॥೧೩೪॥ (ಈ ಶ್ಲೋಕದಲ್ಲಿಯ 'ರುಷಾ' 'ಜಗಾದ' ಎಂಬ ಪದಗಳ ಅನ್ವಯವನ್ನು ಮುಂದಿನ ಶ್ಲೋಕದಲ್ಲಿ ಕಾಣಬೇಕು)

ನಿರಾಯುಧಸ್ಸಾಯುಧೋ ವಾ ಯುಷ್ಮದಿಷ್ಟಾಯುಧೇನ ವಾ ।
ಏಕೋsಪಿ ಸಕಲೈರ್ಯೋತ್ಸ್ಯೇ ಸಸೇನೋ ವಾ ಸಸೈನಿಕಾನ್ ॥೧೩೫॥

ನಿರಾಯುಧಃ ಸಾಯುಧಃ ವಾ–ಆಯುಧರಹಿತನಾಗಿಯಾಗಲೀ. ಆಯುಧಸಹಿತನಾಗಿಯಾಗಲೀ, ಏಕಃ ಅಪಿ–ಒಬ್ಬನೇ ಆದರೂ, ಸಕಲೈಃ ವಾ-ನಿಮ್ಮ ಎಲ್ಲರ ಜೊತೆಗೆ ಆಗಲಿ, ಸಸೇನಃ – ಸೈನ್ಯಸಹಿತನಾಗಿ, ಸಸೈನಿಕಾನ್ವಾ – ಸೈನ್ಯಸಹಿತರಾದ ನಿಮ್ಮ ಜೊತೆಗೆ ಆಗಲಿ. ಯುಷ್ಮದಿಷ್ಟಾಯುಧೇನ ವಾ – ನಿಮಗೆ ಇಷ್ಟವಾದ ಆಯುಧದಿಂದಾಗಲೀ, ಯೋತ್ಸ್ಯೇ – ಯುದ್ಧ ಮಾಡುವೆನು, ಇತಿ–ಎಂದು, ರುಷಾ–ಸಿಟ್ಟಿನಿಂದ, ಜಗಾದ–ಹೇಳಿದನು. ॥೧೩೫॥

ಇತ್ಯುಕ್ತವಂತಮವದಜಿತೋರುಬಲೋ ಹರಿಃ ।
ಏಹ್ಯೇಕಮೇಕೋ ವಾsಸ್ಮಾಸು ಸಸೈನ್ಯೋವಾ ರಣೇ ನೃಪ ॥೧೩೬॥

ಯೇನ ಕಾಮಯಸೇ ಯೋದ್ಧುಂ ತನ್ನ ಆಸಾದಯ ದ್ಯುತಮ್ ।
ನಿರಾಯುಧಸ್ಸಾಯುಧೋ ವಾ ತ್ವದಭೀಷ್ಟಾಯುಧೇನ ವಾ ॥೧೩೭॥

ಇತ್ಯಾಹ ಭಗವಾಞತ್ರುಂ ಯಶೋಭೀಮೇ ವಿವರ್ಧಯನ್।
ಘಾತಯಿತ್ವಾ ಸ್ವಶತ್ರುಂ ಚ ಭೀಮೇನಾನುಗ್ರಹಂ ಪರಮ್ ॥೧೩೮॥

ಇತಿ ಉಕ್ತವಂತಂ-ಹೀಗೆ ಹೇಳಿದ ಜರಾಸಂಧನನ್ನು ಕುರಿತು, ಅಜಿತೋರುಬಲಃ; – ಯಾರಿಂದಲೂ ಜಯಿಸಲಾಗದ, ಉತ್ಕೃಷ್ಟ ಸಾಮರ್ಥ್ಯವುಳ್ಳ, ಹರಿ:-ಶ್ರೀಕೃಷ್ಣನು, ನೃಪ–ರಾಜನೇ, ಅಸ್ಮಾಸು ಏಕಂ–ನಮ್ಮ ಮೂವರಲ್ಲಿ ಒಬ್ಬನನ್ನು ಕುರಿತು

ಏಕೋವಾ ಸಸೈನ್ಯೋವಾ — ಒಬ್ಬನಾಗಲೀ, ಸೈನ್ಯಸಹಿತನಾಗಲೀ, ರಣೇ-ಯುದ್ಧದಲ್ಲಿ, ಏಹಿ-ಬಾ, ಇತಿ ಆಹ-ಎಂದು ಹೇಳಿದನು. (ಚ-ಹಾಗೂ) ನಃ - ನಮ್ಮಲ್ಲಿ, ಯೇನ-ಯಾವನ ಜೊತೆಗೆ, ಯೋದ್ಧುಂ -ಯುದ್ಧ ಮಾಡಲು, ಕಾಮಯಸೇ-ಇಚ್ಛಿಸುವಿಯೋ, ತಂ-ಅವನನ್ನು, ಆದಾಯ-ಸ್ವೀಕರಿಸಿ, ನಿರಾಯುಧಃ ಸಾಯುಧಃ ವಾ—ಆಯುಧರಹಿತನಾಗಿಯಾಗಲೀ ಆಯುಧ ಸಹಿತನಾಗಿಯಾಗಲೀ ತ್ವದಭೀಷ್ಟಾಯುಧೇನ ವಾ - ನಿನಗೆ ಬೇಕಾದ ಆಯುಧದಿಂದಾಗಲಿ ದ್ರುತಂ ಆಸಾದಯ -ಬೇಗನೇ ಬಾ, ಇತಿ - ಎಂದು, ಭಗವಾನ್ - ಶ್ರೀಕೃಷ್ಣನು, ಭೀಮೇನ-ಭೀಮಸೇನನಿಂದ, ಸ್ವಶತ್ರುಂ-ತನ್ನ ಶತ್ರುವಾದ ಜರಾಸಂಧನನ್ನು, ಘಾತಯಿತ್ವಾ—ಕೊಲ್ಲಿಸಿ, ಭೀಮೇ-ಭೀಮನಲ್ಲಿ, ಯಶಃ—ಕೀರ್ತಿಯನ್ನು, ಪರಂ - ಶ್ರೇಷ್ಠವಾದ, ಅನುಗ್ರಹಂ ಚ - ತನ್ನ ಅನುಗ್ರಹವನ್ನೂ ಕೂಡ, ವಿವರ್ಧಯನ್ - ವೃದ್ಧಿಮಾಡುವವನಾಗಿ, ಆಹ-ಹೇಳಿದನು. ॥೧೩೬-೧೩೭-೧೩೮॥

ಭೀಮಸ್ಯ ಕರ್ತುಮಿಚ್ಛಂಶ್ಚ ಭಕ್ತಿಜ್ಞಾನಾದಿವರ್ಧನಮ್ ।
ತೃಣೀಕರ್ತುಂ ರಿಪುಂ ಚೈವ ನಿರಾಯುಧತಯಾಽಗಮತ್ ॥೧೩೯॥

ಭೀಮಸ್ಯ - ಭೀಮನಿಗೆ, ಭಕ್ತಿಜ್ಞಾನಾದಿವರ್ಧನಂ—ತನ್ನ ಅನುಗ್ರಹದಿಂದ ಭಕ್ತಿಜ್ಞಾನಾದಿಗುಣಗಳ ಅಭಿವೃದ್ಧಿಯನ್ನು, ಕರ್ತುಂ ಚ ಇಚ್ಛನ್-ಮಾಡಲೂ ಇಚ್ಛಿಸುವವನಾಗಿ, (ಹಾಗೆ ಹೇಳಿದನು). ಚ - ಮತ್ತು, ರಿಪುಂ - ಪ್ರಬಲವೈರಿಯಾದ ಜರಾಸಂಧನನ್ನು, ತೃಣೀಕರ್ತುಂ ಚ - ತೃಣಸದೃಶನನ್ನಾಗಿ ಮಾಡಲು, ನಿರಾಯುಧತಯಾ - ಆಯುಧರಹಿತನಾಗಿ, ಅಗಮತ್ —ಮಗಧದೇಶಕ್ಕೆ ಹೋದನು. ॥೧೩೯॥

ಕೃಷ್ಣಭೀಮಾರ್ಜುನಾಸ್ತೇನ ವಿಪ್ರವೇಷಾಶ್ಚ ತೇಽಭವನ್ ।
ನಿರಾಯುಧಃ ಕ್ಷತ್ರವೇಷೋನೈವ ಯೋಗ್ಯಃ ಕಥಂಚನ ॥೧೪೦॥

ಕ್ಷತ್ರವೇಷಃ—ಕ್ಷತ್ರಿಯನರೂಪವುಳ್ಳವನು, ನಿರಾಯುಧಃ— ಆಯುಧರಹಿತನಾಗುವದು, ಕಥಂಚನ—ಯಾವರೀತಿಯಿಂದಲೂ, ಯತಃ — ಯಾವ ಕಾರಣದಿಂದ, ನೈವ ಯೋಗ್ಯಃ —ಯೋಗ್ಯವಲ್ಲವೋ. ತೇನ—ಆ ಕಾರಣದಿಂದ, ತೇ ಕೃಷ್ಣ-ಭೀಮಾರ್ಜುನಾಃ — ಆ ಶ್ರೀಕೃಷ್ಣಭೀಮಾರ್ಜುನರು, ವಿಪ್ರವೇಷಾಃ ಅಭವನ್ - ಬ್ರಾಹ್ಮಣವೇಷವುಳ್ಳವರು ಆದರು. ॥೧೪೦॥

ತತೋ ಜಗ್ಮುರ್ವಿಪ್ರವೇಷಾಸ್ತ್ರಯೋ ಕರ್ತುಂ ಹಿ ಮಾಗಧಮ್ ।
ಮಾಗಧಸ್ಯ ಸಸೈನ್ಯಸ್ಯ ಸ್ವಗೃಹೇ ಸಂಸ್ಥಿತಸ್ಯ ಚ ॥೧೪೦॥

ನಿರಾಯುಧೇನ ಭೀಮೇನ ಸಮಾಹ್ವಾನೇ ಕೃತೇಽಮಿತಮ್ ।
ಧರ್ಮಂ ಯಶಶ್ಚ ಭೀಮಸ್ಯ ವರ್ಧಯಾಮಾಸ ಕೇಶವಃ ॥೧೪೧॥

ತತಃ — ನಿರಾಯುಧರಾಗಿ ಹೋಗುವದರಿಂದ, ಮಾಗಧಮ್ ತ್ರಯೋ ಹಿ—ಜರಾಸಂಧನನ್ನು ತಮಗೆ ತೃಣಪ್ರಾಯನನ್ನಾಗಿ ತೋರಿಸುವದಕ್ಕಾಗಿಯೇ. ವಿಪ್ರವೇಷಾಃ ಸಂತಃ ಜಗ್ಮುಃ — ಬ್ರಾಹ್ಮಣವೇಷವುಳ್ಳವರಾಗಿ ಹೋದರು, ಸಸೈನ್ಯಸ್ಯ - ಸೈನ್ಯಸಹಿತನಾದ, ಚ—ಹಾಗೂ, ಸ್ವಗೃಹೇ ಸಂಸ್ಥಿತಸ್ಯ — ತನ್ನ ಮನೆಯಲ್ಲಿಯೇ ಇರತಕ್ಕ, ಮಾಗಧಸ್ಯ — ಜರಾಸಂಧನ, ಸಮಾಹ್ವಾನೇ — ಯುದ್ಧಕ್ಕಾಗಿ ಆಹ್ವಾನವನ್ನು, ನಿರಾಯುಧೇನ ಭೀಮೇನ - ಆಯುಧವಿಲ್ಲದ ಭೀಮಸೇನದೇವರಿಂದ, ಕೃತೇಸತಿ —ಮಾಡಲ್ಪಡುತ್ತಿರಲು, ಕೇಶವಃ—ಶ್ರೀಕೃಷ್ಣನು, ಭೀಮಸ್ಯ—ಭೀಮಸೇನದೇವರಿಗೆ, ಧರ್ಮಂ — ಧರ್ಮವನ್ನು, ಯಶಃ ಚ —ಕೀರ್ತಿಯನ್ನೂ ಕೂಡ, ಅಮಿತಂ ವರ್ಧಯಾಮಾಸ—ಅಪರಿಮಿತವಾಗಿ ಅಭಿವೃದ್ಧಿಗೊಳಿಸಿದನು. ॥೧೪೧-೧೪೨॥

ಅವತಾರಿಕೆ — ಅರ್ಜುನನನ್ನು ಕರೆದುಕೊಂಡು ಹೊರಟಿರುವ ಶ್ರೀಕೃಷ್ಣನ ಅಭಿಪ್ರಾಯವನ್ನು ಈ ಶ್ಲೋಕದಲ್ಲಿ ತಿಳಿಸುತ್ತಾರೆ.

ತೃತೀಯಮರ್ಜುನಂ ಚೈವ ಸಮಾದಾಯ ಯಯೌ ರಿಪುಮ್ ।
ಹರಿಸ್ತಸ್ಮಾಚ್ಚ ಭೀಮಸ್ಯ ಮಹಾಧಿಕ್ಯಂ ಪ್ರಕಾಶಯನ್ ॥೧೪೩॥
ಮುಖೇನ ಮಾಗಧಸ್ಯೈವ ವೃಷ್ಣ್ಯೇಕಂ ನ ಇತಿ ಬ್ರುವನ್ ॥೧೪೪॥

ಹೇಳುವವನಾಗಿ ಹರಿಃ—ಶ್ರೀಕೃಷ್ಣನು, ತೃತೀಯಂ ಅರ್ಜುನಂ ಚ–ಮೂರನೆಯವನಾದ ಅರ್ಜುನನನ್ನೂ ಕೂಡ, ಸಮಾದಾಯ ಗತ್ವಾ-ಹೋಗಿಕರೆದುಕೊಂಡು, ನಃ (ಮಧ್ಯೇ) — ನಮ್ಮ ಮಧ್ಯದಲ್ಲಿ, ಏಕಂ — ಒಬ್ಬನನ್ನು, ವೃಣು--ಆರಿಸಿಕೊ, ಬ್ರುವನ್ — ಎಂದುತಸ್ಮಾತ್ ಚ — ಆ ಅರ್ಜುನನಿಗಿಂತಲೂ, ಭೀಮಸ್ಯ — ಭೀಮಸೇನದೇವರಿಗೆ, ಮಹಾಧಿಕ್ಯಂ-ಅತಿಶ್ರೇಷ್ಠತ್ವವನ್ನು, ಮಾಗಧಸ್ಯ ಮುಖೇನ ಏವ—ಜರಾಸಂಧನ ಮುಖದಿಂದಲೇ, ಪ್ರಕಾಶಯನ್—ಪ್ರಕಟಗೊಳಿಸುವವನಾಗಿ, ರಿಪುಂ — ಜರಾಸಂಧನನ್ನು ಕುರಿತು, ಅರ್ಜುನಂ ಸಮಾದಾಯ-ಅರ್ಜುನನ್ನು ಕರೆದುಕೊಂಡು ಯಃಯೌ —ಹೋದನು. ॥೧೪೩–೧೪೪॥

ಅವತಾರಿಕೆ : ಆಧಿಕ್ಯವು ಪ್ರಕಟವಾದ ರೀತಿಯನ್ನು ಈ ಶ್ಲೋಕದಿಂದ ತಿಳಿಸುತ್ತಾರೆ –

ವೃಷ್ಣ್ಯೇಕಮುಸ್ಮಾನ್ನಿತಿಸ: ಪ್ರೋಕ್ತ ಆಹ ಜರಾಸುತಃ ।
ಕುರ್ಯಾಂ ನೈವಾರ್ಜುನೇನಾಹಮುಬಲೇನೈವ ಸಂಗರಮ್ ।
ಪಂಚಪಂಚಾಶದಬ್ದೋsದ್ಯಹ್ಯಯಮೇವ ಚ ಬಾಲವತ್ ॥೧೪೫॥

ಅಬಲತ್ವಾದ್ಯುವಾs ಪ್ಯೇಷ ಬಾಲ ಏವಮತೋ ಮಮ ।
ಇತ್ಯುಕ್ತೋsಪ್ಯರ್ಜುನೋ ನಾssಹ ಕುರು ತರ್ಹಿ ಪರೀಕ್ಷಣಮ್ ॥೧೪೬॥

ಬಾಹುಭ್ಯಾಂ ಧನುಷಾ ವೇತಿ ಶಂಕಮಾನ: ಪರಾಜಯಮ್ ।
ಅತೋ ಭೀಮೋ ಬಲಾಧಿಕ್ಯಂ ಸುಪ್ರಸಿದ್ಧಮಭೂನ್ಮಹತ್ ॥೧೪೭॥

ಅಸ್ಮಾಸು ಏಕಂ — ನಮ್ಮಲ್ಲಿ ಒಬ್ಬನನ್ನು, ವೃಣು — ಆರಿಸು, ಇತಿ — ಎಂದು, ಪ್ರೋಕ್ತಃ ಹೇಳಿಸಿಕೊಳ್ಳಲ್ಪಟ್ಟ, ಜರಾಸುತ: — ಜರಾಸಂಧನು, ಅಬಲೇನ ಏವ ಅರ್ಜುನೇನ — ದುರ್ಬಲನೇ ಆದ ಅರ್ಜುನನ ಜೊತೆಗೆ, ಸಂಗರಂ ಯುದ್ಧ—ವನ್ನು, ನೈವಕುರ್ಯಾಂ—ಮಾಡುವದೇ ಇಲ್ಲ. ಅದ್ಯ—ಇಂದು, ಪಂಚಪಂಚಾಶದಬ್ದ: ಅಪಿ — ಐವತ್ತೈದು ವರ್ಷದವನಾದರೂ ಕೂಡ, ಯುವಾಪಿ — ತರುಣನಾದರೂ ಕೂಡ, ಅಯಂ—ಈ ಅರ್ಜುನನು, ಬಾಲವತ್ ಏವ — ಬಾಲಕನಂತೆಯೇ. ಅಬಲ-ತ್ವಾತ್ — ದುರ್ಬಲನಾದ್ದರಿಂದ, ಏಷ:- ಈ ಅರ್ಜುನನು, ಬಾಲ ಏವ — ಬಾಲಕನಾಗಿಯೇ, ಮಮ ಮಂತಃ — ನನಗೆ ಅಭಿಪ್ರೇತನು, ಇತಿ — ಈ ರೀತಿ, ಉಕ್ತಃ ಅಪಿ — ಜರಾಸಂಧನಿಂದ ಹೇಳಲ್ಪಟ್ಟವನಾದರೂ ಕೂಡ, ಅರ್ಜುನ:— ಅರ್ಜುನನು ತರ್ಹಿ-ನಾನು ಬಾಲಕನಾದರೆ, ಪರೀಕ್ಷಣಮ್ — ಬಲಪರೀಕ್ಷೆಯನ್ನು, ಬಾಹುಭ್ಯಾಂ — ಬಾಹುಯುದ್ಧದಿಂದಾಗಲೀ, ಧನುಷಾ ವಾ — ಧನುರ್ಯುದ್ಧದಿಂದಾಗಲೀ, ಕುರು — ಮಾಡು ನೋಡುವಾ, ಇತಿ — ಎಂದು, (ವಚಃ — ಮಾತನ್ನು), ಪರಾಜಯಂ ಶಂಕಮಾನಃ ಸನ್ — ತಾನು ಜರಾಸಂಧನೊಡನೆ ಯುದ್ಧ ಮಾಡಿದರೆ, ತನಗೆ ಪರಾಜಯವೇ ಬರಬಹುದೇನೋ ಎಂದು ಸಂಶಯಪಡುವವನಾಗಿ, ನ ಆಹ — ಹೇಳಲಿಲ್ಲ. ಅತಃ — ಈ ರೀತಿ ಜರಾಸಂಧಂ ಅರ್ಜುನನನ್ನು ದುರ್ಬಲನೆಂದಾಗ ಅದನ್ನು ಕೇಳಿಯೂ ಏನೂ ಹೇಳದ್ದರಿಂದ, ಭೀಮೇ — ಭೀಮಸೇನದೇವರಲ್ಲಿ, ಮಹತ್ ಬಲಾಧಿಕ್ಯಂ — ಅರ್ಜುನನಿಗಿಂತ ಹೆಚ್ಚಿ ಬಲಿಷ್ಠತೆಯು, ಸುಪ್ರಸಿದ್ಧಂ — ಅತ್ಯಂತ ಪ್ರಸಿದ್ಧವಾದದ್ದು, ಅಭೂತ್ — ಆಯಿತು. ॥೧೪೫–೧೪೬–೧೪೭॥

ಏತದರ್ಥಂ ಹಿ ಕೃಷ್ಣೇನ ಸಹಾನೀತಸ್ಯ ಫಲ್ಗುನಃ ।
ಜಾನನ್ ಕೃಷ್ಣೇ ಬಲಂ ಘೋರಮವಿಷಹ್ಯಂ ಸ ಮಾಗಧಃ ।
ಕುತ್ಸಯನ್ ಗೋಪ ಇತಿ ತಂ ಭಯಾನ್ನೈವಾಹ್ವಯತ್ಪ್ರಭುಮ್ ॥೧೪೮॥

ಏತದರ್ಥಂ ಹಿ —ಇದಕ್ಕಾಗಿಯೇ; ಸಃ ಫಲ್ಗುನಃ—ಆ ಅರ್ಜುನನು, ಕೃಷ್ಣೇನ—ಶ್ರೀಕೃಷ್ಣನಿಂದ, ಸಹಾನೀತಃ—ಒಟ್ಟಿಗೆ ಕರೆತರಲ್ಪಟ್ಟನು. ಕೃಷ್ಣೇ—ಶ್ರೀಕೃಷ್ಣನಲ್ಲಿ, ಘೋರಂ—ಭಯಂಕರವಾದ, ಅವಿಷಹ್ಯಂ—ತನಗೆ ಸಹಿಸಲು ಅಶಕ್ಯವಾದ, ಬಲಂ—ಸಾಮರ್ಥ್ಯವನ್ನು, ಜಾನನ್—ತಿಳಿದಿರುವ, ಸಃ ಮಾಗಧಃ—ಆ ಜರಾಸಂಧನು, ಪ್ರಭುಂ—ಸರ್ವಸಮರ್ಥನಾದ ಶ್ರೀಕೃಷ್ಣನನ್ನು, ಗೋಪಃ ಇತಿ—ಗೋಪಾಲಕನು ಎಂದೂ, ಕುತ್ಸಯನ್,—ನಿಂದಿಸುವವನಾಗಿ, ಭಯಾತ್ ಏವ—ಭಯದಿಂದಲೇ, ತಂ—ಆ ಶ್ರೀಕೃಷ್ಣನನ್ನು, ನ ಆಹ್ವಯಾಮಾಸ—ಕರೆಯಲಿಲ್ಲ. ॥೧೪೮॥

ಆಹ್ವಯಾಮಾಸ ಭೀಮಂ ತು ಸ್ಯಾದ್ವಾಮೇ ಜೀವನಂ ತ್ವಿತಿ ।
ಹನಿಷ್ಯತ್ಯೇವ ಮಾಂ ಕೃಷ್ಣ ಇತ್ಯಾಸೀನ್ನೃಪತೇರ್ಭಯಮ್ ॥೧೪೯॥
ತಸ್ಮಾತ್ತಂ ನಾಹ್ವಯಾಮಾಸ ವಾಸುದೇವಂ ಸ ಮಾಗಧಃ ॥೧೫೦॥

ತು-ಆದರೆ ಭೀಮಂ-ಭೀಮಸೇನದೇವರನ್ನು ವೇ—ನನಗೆ,-ಜೀವನಂ ಸ್ಯಾತ್ವಾ (ಅವರ ಜೊತೆಗೆ ಯುದ್ಧ-ಮಾಡಿದರೆ) ನನ್ನ ಜೀವನವು ಉಳಿದೀತು, ಇತಿ – ಎಂಬ ಅಭಿಪ್ರಾಯದಿಂದ, ಆಹ್ವಯಾಮಾಸ – ಕರೆದನು. ಕೃಷ್ಣಃ ತು—ಶ್ರೀಕೃಷ್ಣನು ಮಾತ್ರ ಮಾಂ – ನನ್ನನ್ನು, ಹನಿಷ್ಯತಿ ಏವ — ಸಂಹರಿಸಿಯೇ ಬಿಡುತ್ತಾನೆ. ಇತಿ — ಎಂದು, ನೃಪತೇಃ—ಜರಾಸಂಧನಿಗೆ, ಭಯಮ್-ಹೆದರಿಕೆಯು, ಆಸೀತ್ — ಇತ್ತು. ತಸ್ಮಾತ್ - ಆದ್ದರಿಂದ, ಸಃ ಮಾಗಧಃ – ಆ ಜರಾಸಂಧನು, ತಂ ವಾಸುದೇವಂ — ಆ ಶ್ರೀಕೃಷ್ಣನನ್ನು, ನ ಆಹ್ವಯಾಮಾಸ — ಕರೆಯಲಿಲ್ಲ. ॥೧೪೯-೧೫೦॥

ಅವತಾರಿಕೆ — ಅರ್ಜುನನನ್ನು ಕರೆದರೆ ತನಗೆ ಆಗುವ ಹಾನಿಯ ಬಗ್ಗೆ ಜರಾಸಂಧನು ವಿಚಾರಿಸಿದ್ದನ್ನು ಈ ಶ್ಲೋಕ-ದಿಂದ ತಿಳಿಸುತ್ತಾರೆ –

ಅರ್ಜುನೇ ತು ಜಿತೇ ಕೃಷ್ಣಭೀಮೌ ಮಾಂ ನಿಹನಿಷ್ಯತಃ ।
ತ್ರಯಾಣಾಂ ದುರ್ಬಲಾಹ್ವಾನಾನ್ನಶ್ಯೇತ್ಕೀರ್ತಿಶ್ಚ ಮೇ ಧ್ರುವಮ್ ॥೧೫೧॥

ತು—ಆದರೆ, ಅರ್ಜುನೇ ಜಿತೇ ಸತಿ ಅಪಿ – ಅರ್ಜುನನು ನನ್ನಿಂದ ಯುದ್ಧಕ್ಕೆ ಕರೆಯಲ್ಪಟ್ಟು ಸೋಲಿಸಲ್ಪಟ್ಟರೂ ಕೂಡ,(ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸಿ ಅವನ ಸಂಗಡ ಯುದ್ಧವಾಡಿ ಅವನನ್ನು ಸೋಲಿಸಿದರೂಕೂಡ) ಕೃಷ್ಣಭೀಮೌ ಶ್ರೀಕೃಷ್ಣಭೀಮರಿಬ್ಬರು, ಮಾಂ—ನನ್ನನ್ನು, ನಿಹನಿಷ್ಯತಃ —ಸಂಹರಿಸುತ್ತಾರೆ. ತ್ರಯಾಣಾಂ – ಮೂವರಲ್ಲಿ, ದುರ್ಬಲಾ-ಹ್ವಾನಾತ್—ದುರ್ಬಲನನ್ನು ಕರೆಯುವುದರಿಂದ, ಮೇ ಕೀರ್ತಿಃ ಚ – ನನ್ನ ಕೀರ್ತಿಯೂ ಕೂಡ, ಧ್ರುವಂ ನಶ್ಯೇತ್—ಖಂಡಿತ ನಾಶವಾದೀತು ॥೧೫೧॥

ಇತಿ ಮತ್ವಾSSಹ್ವಯಾಮಾಸ ಭೀಮಸೇನಂ ಸ ಮಾಗಧಃ ।
ಕಥಂಚಿಜ್ಜೀವಿತಂ ಮೇ ಸ್ಯಾನ್ನ ತು ನಶ್ಯತಿ ಮೇ ಯಶಃ ॥೧೫೨॥

ಕಥಂಚಿತ್ - ಭೀಮನನ್ನು ಕರೆದು ಅವನೊಟ್ಟಿಗೆ ಯುದ್ಧ ಮಾಡುವಾಗ ಹೇಗಾದರೂ ಪ್ರಯತ್ನವಮಾಡಿದರೆ, ಮೇ ಜೀವಿತಂ ಸ್ಯಾತ್-ನನ್ನಜೀವವು ಉಳಿದೀತು.(ಉಳಿಯುವ ನಿಶ್ಚಯವಿಲ್ಲ)ತು – ಆದರೆ, ಮೇ ಯಶಃ—ನನ್ನ ಕೀರ್ತಿಯು ಮಾತ್ರ, ನ ನಶ್ಯತಿ – ನಶಿಸುವದಿಲ್ಲ.) ಇತಿ – ಈ ರೀತಿ, ಮತ್ವಾ – ತಿಳಿದು, ಸಃ ಮಾಗಧಃ—ಆ ಜರಾಸಂಧನು, ಭೀಮ-ಸೇನಂ—ಭೀಮಸೇನದೇವರನ್ನು, ಆಹ್ವಯಾಮಾಸ—ಯುದ್ಧಕ್ಕೆ ಕರೆದನು. ॥೧೫೨॥

ಇತಿ ಸ್ಮ ಭೀಮಂ ಪ್ರತಿಯೋಧನಾಯ ಸಂಗೃಹ್ಯರಾಜಾ ಸ ಜರಾಸುತೋ ಬಲೀ ।
ರಾಜ್ಯೇ ನಿಜಂ ಚಾತ್ಮಜಮುಭ್ಷಿಂಚತ್ಪುರಾ ಖ್ಯಾತಂ ಪತ್ರತಾಪಾಖ್ಯ ರುದ್ರಮ್ ॥೧೫೩॥

ಇತಿ ಸ್ಮ—ಈ ರೀತಿ ವಿಚಾರದಿಂದ, ಬಲೀ-ಬಲಿಷ್ಠನಾದ, ಸಃ ರಾಜಾ ಜರಾಸುತಃ—ಮಾಗಧರಾಜನಾದ ಜರಾಸಂಧನು ಪ್ರತಿಯೋಧನಾಯ—ಯುದ್ಧಕ್ಕಾಗಿ, ಭೀಮಂ ಸಂಗೃಹ್ಯ – ಭೀಮಸೇನದೇವರನ್ನು ಆರಿಸಿಕೊಂಡು, ರಾಜ್ಯೇ – ತನ್ನ ರಾಜ್ಯ

ಸಿಂಹಾಸನದಲ್ಲಿ, ನಿಜಂ ಆತ್ಮಜಂ – ತನ್ನ ಮಗನಾದ, ಪುರಾ – ಇಲ್ಲಿ ಹಂಟ್ಟುವ ಪೂರ್ವದಲ್ಲಿ (ಮೂಲರೂಪದಲ್ಲಿ), ಪತ್ರತಾ-ಪಾಖ್ಯರುದ್ರಂ ಖ್ಯಾತಂ — ಏಕಾದಶ ರುದ್ರರಲ್ಲಿ ಪತ್ರತಾಪ ಎಂಬ ರುದ್ರನಾದ, ಪ್ರಸಿದ್ಧನಾದ, (ಸಹದೇವಂ –) ಸಹದೇವ ನೆಂಬುವನನ್ನು. ಅಭ್ಯಷಿಂಚತ್ – ಅಭಿಷೇಕಿಸಿದನು. ॥೧೫೩॥

ಆ ಬಲಂ ಭೀಮೇ ಮನ್ಯಮಾನೋಽಧಿಕಂ ತು ಗದಾಶಿಕ್ಷಾಮಾತ್ಮನಿ ಚಾಧಿಕಾಂ ನೃಪಃ।
ಭೀತೋ ನಿಯುದ್ಧೇಽಸ್ಯ ದದೌ ಗದಾಂ ಸ ಭೀಮಾಯ ಚಾನ್ಯಾಂ ಸ್ವಯಮುಗ್ರಹೀದ್ಬಲೀ ॥೧೫೪॥

ಬಲೀ ಸ: ನೃಪ:–ಬಲಿಷ್ಠನಾದ ಆ ಜರಾಸಂಧನು, ಭೀಮೇ–ಭೀಮಸೇನದೇವರಲ್ಲಿ, ಅಧಿಕಂ ಬಲಂ–ತನಗಿಂತಲೂ ಹೆಚ್ಚು ಸಾಮರ್ಥ್ಯವನ್ನು, ಮನ್ಯಮಾನಃ ತು – ತಿಳಿದವನು ಆದರೂ ಕೂಡ, ಆತ್ಮನಿ ತನ್ನಲ್ಲಿ, ಗದಾಶಿಕ್ಷಾಂ—ಗದಾಯುದ್ಧ ಪ್ರಾವೀಣ್ಯವನ್ನು, ಅಧಿಕಾಂ – ಶ್ರೀಭೀಮರಿಗಿಂತ ಹೆಚ್ಚಿದ್ದದ್ದನ್ನಾಗಿ, ಮನ್ಯಮಾನ: ಸನ್—ತಿಳಿದವನಾಗಿ ಅಸ್ಯ ನಿಯುದ್ಧೇ-ಈ ಭೀಮಸೇನದೇವರ ಸಂಗಡ ಮಲ್ಲಯುದ್ಧದ ಬಗ್ಗೆ, ಭೀತಃ ಸನ್—ಹೆದರಿದವನಾಗಿ, ಭೀಮಾಯ— ಭೀಮರಿಗೆ, ಗದಾಂ ದದೌ — ಗದಾಯುಧವನ್ನು ಕೊಟ್ಟನು, ಅನ್ಯಾಂ — ಇನ್ನೊಂದು ಗದೆಯನ್ನು, ಸ್ವಯಂ – ತಾನು, ಅಗ್ರಹೀತ್ – ಸ್ವೀಕರಿಸಿದನು. ॥೧೫೪॥

ತದರ್ಥಮೇವಾऽऽಶು ಗದಾಂ ಪ್ರಗೃಹ್ಯ ಭೀಮೋ ಯಯೌ ಮಾಗಧಸಂಯುತೋ ಬಹಿಃ।
ಪುರಾತ್ಸಕೃಷ್ಣಾರ್ಜುನ ಏವ ತತ್ರ ತ್ವಯುದ್ಧತಾಂ ಕೇಶವಪಾರ್ಥಯೋಃ ಪುರಃ ॥೧೫೫॥

ಭೀಮ:—ಶ್ರೀಭೀಮರು, ತದರ್ಥಮೇವ—ಗದಾಯುದ್ಧ ನೈಪುಣ್ಯ ಪ್ರದರ್ಶನಕ್ಕಾಗಿಯೇ, ಗದಾಂ ಪ್ರಗೃಹ್ಯ-ಗದೆಯನ್ನು ಹಿಡಿದುಕೊಂಡು, ಮಾಗಧಸಂಯುತ: ಸನ್ – ಜರಾಸಂಧನಿಂದ ಕೂಡಿದವರಾಗಿ, ಸಕೃಷ್ಣಾರ್ಜುನ: ಸನ್ ಏವ—ಶ್ರೀಕೃಷ್ಣಾರ್ಜುನರಿಂದ ಸಹಿತರಾಗಿಯೇ, ಪುರಾತ್ ಬಹಿಃ — ಊರಿನಿಂದ ಹೊರಗೆ, ಆಶು ಯಯೌ — ಬೇಗ ಹೋದರು, ತತ್ರ – ಅಲ್ಲಿ, ಕೇಶವಪಾರ್ಥಯೋಃ ಪುರ:–ಶ್ರೀಕೃಷ್ಣಾರ್ಜುನರ ಎದುರು, ಅಯುದ್ಧತಾಂ ಯುದ್ಧ ಮಾಡಿದರು. ॥೧೫೫॥

ವಾಚಾऽಜಯತ್ತಂ ಪ್ರಥಮಂ ವೃಕೋದರ: ಶಿವಾಶ್ರಯಂವಿಷ್ಣುಗುಣಪ್ರಕಾಶಯಾ।
ತತೋ ಗದಾಭ್ಯಾನುಭಿಪೇತತುಸ್ತೌ ವಿಚಿತ್ರಮಾರ್ಗಾನಭಿದರ್ಶಯಂತೌ ॥೧೫೬॥

ವೃಕೋದರ:—ಶ್ರೀಭೀಮಸೇನದೇವರು, ಪ್ರಥಮಂ – ಮೊದಲು, ಶಿವಾಶ್ರಯಂ ತಂ – ಶ್ರೀರುದ್ರದೇವರನ್ನು ಆಶ್ರಯಿಸಿದ ಜರಾಸಂದನನ್ನು, ವಿಷ್ಣುಗುಣಪ್ರಕಾಶಯಾ ವಾಚಾ– ಶ್ರೀವಿಷ್ಣುವಿನ ಗುಣ ಪ್ರತಿಪಾದಕವಾದ ವೇದವಾಕ್ಯದಿಂದ, ಅಜಯತ್ – ಗೆದ್ದರು, ತತಃ – ವಾಗ್ಯುದ್ಧದ ನಂತರ, ತೌ – ಅವರಿಬ್ಬರು, ವಿಚಿತ್ರಮಾರ್ಗಾನ್ – ಗದಾಯುದ್ಧದ ಅನೇಕ ರೀತಿಗಳನ್ನು, ಅಭಿದರ್ಶಯಂತೌ ಸಂತೌ – ಚೆನ್ನಾಗಿ ತೋರಿಸುವವರಾಗಿ, ಗದಾಭ್ಯಾಂ – ಗದೆಗಳಿಂದ, ಅಭಿಪೇತತು: – ಏರಿ ಬಂದರು. ॥೧೫೬॥

ತಯೋರ್ಗದೇ ತೇऽಶನಿಸನ್ನಿಕಾಶೇ ಚೂರ್ಣೀಕೃತೇ ದೇಹಮಹಾದೃಢಿಮ್ನಾ।
ಅನ್ಯೋನ್ಯಯೋರ್ವಕ್ಷಸಿ ಪಾತಿತೇ ರುಷಾ ಯಥಾಶ್ಮನೋಃ ಪಾಂಸುಪಿಂಡೌ ಸುಮುಕ್ತೌ ॥೧೫೭॥

ಅಶನಿಸನ್ನಿಕಾಶೇ – ವಜ್ರಾಯುಧ ಸದೃಶವಾದ, ಅನ್ಯೋನ್ಯಯೋಃ ವಕ್ಷಸಿ – ಪರಸ್ಪರರ ಎದೆಯಲ್ಲಿ, ರುಷಾ ಪಾತಿತೇ – ಸಿಟ್ಟಿನಿಂದ ಬೀಳಿಸಲ್ಪಟ್ಟ, ತೇ ಗದೇ – (ಅವರಿಬ್ಬರ) ಆ ಗದೆಗಳು, ತಯೋ: – ಅವರಿಬ್ಬರ, ದೇಹಮಹಾ ದೃಢಿಮ್ನಾ—ದೇಹದ ಬಹುಕಠಿಣತೆಯಿಂದ, ಅಶ್ಮನೋಃ — ಬಂಡೆಗಲ್ಲುಗಳಲ್ಲಿ, ಸಂಮುಕ್ತೌ—ಚೆನ್ನಾಗಿ ಒಗೆಯಲ್ಪಟ್ಟ, ಪಾಂಸುಪಿಂಡೌ ಯಥಾ—ಮಣ್ಣಿನ ಉಂಡೆಗಳು ಹೇಗೆ (ಒಡೆಯಬೇಕೊ) ಪುಡಿಯಾಗುವವೋ, (ತಥಾ – ಹಾಗೆ) ಚೂರ್ಣೀಕೃತೇ – ಪುಡಿಯಾದವು. ॥೧೫೭॥

ಸಂಚೂರ್ಣಿತಗದೌ ವೀರೌ ಜಘ್ನತುರ್ಮುಷ್ಟಿಭಿರ್ಮಿಥಃ ।
ಬ್ರಹ್ಮಾಂಡಸ್ಫೋಟಸಂಕಾಶೈರ್ಯಥಾ ಕೇಶವಕೈಟಭೌ ॥೧೫೬॥

ಸಂಚೂರ್ಣಿತಗದೌ — ಗದೆಗಳನ್ನೇ ಪುಡಿಮಾಡಿದ, ವೀರೌ — ಪರಾಕ್ರಮಿಗಳಾದ ಭೀಮಜರಾಸಂಧರು, ಬ್ರಹ್ಮಾಂಡಸ್ಫೋಟಸಂಕಾಶೈಃ — ಬ್ರಹ್ಮಾಂಡಸ್ಫೋಟವನ್ನೇ ಮಾಡುತ್ತವೆಯೋ ಏನೋ ಎಂಬಂತೆ ತೋರತಕ್ಕ, ಮುಷ್ಟಿಭಿಃ— ಮುಷ್ಟಿಗಳಿಂದ, ಕೇಶವಕೈಟಭೌಯಥಾ—ಶ್ರೀಮನ್ನಾರಾಯಣ ಕೈಟಭರು ಹೊಡೆದಾಡಿದಂತೆ, ಮಿಥಃಜಘ್ನತುಃ— ಪರಸ್ಪರ ಹೊಡೆದಾಡಿದರು. ॥೧೫೬॥

ಚಚಾಲ ಪೃಥ್ವೀ ಗಿರಯಶ್ಚ ಚೂರ್ಣಿತಾಃ ಕುಲಾಚಲಾಶ್ಚೇಲುರಲಂ ವಿಚುಕ್ಷುಭುಃ ।
ಸಮುಸ್ತವಾರಾಂಪತಯುಸ್ಸುರಾಸುರಾ ವಿರಿಂಚಶರ್ವಾದಯ ಆಸದನ್ನಭಃ ॥೧೫೯॥

ಪೃಥ್ವೀ — ಭೂಮಿಯು. ಚಚಾಲ — ನಡುಗಿತು. ಗಿರಯಃ—ಸಣ್ಣ ಪರ್ವತಗಳು, ಚೂರ್ಣಿತಾಃ — ಪುಡಿಯಾದವು. ಕುಲಾಚಲಾಃ — ದೊಡ್ಡ ಪರ್ವತಗಳು, ಅಲಂಚೇಲುಃ—ಬಹುವಾಗಿ ಅಲುಗಾಡಿದವು, ಸಮುಸ್ತ ವಾರಾಂಪತಯಃ: — ಎಲ್ಲ ಸಮುದ್ರಗಳು ,ವಿಚುಕ್ಷುಭುಃ — ಅಲ್ಲೋಲಕಲ್ಲೋಲವಾದವು, ವಿರಿಂಚಶರ್ವಾದಯಃ ಸುರಾಸುರಾಃ — ಬ್ರಹ್ಮರುದ್ರರೇ ಮೊದಲಾಗಿವುಳ್ಳದೇವತೆಗಳು ಅಸುರರು, ನಭಃ-ಆಕಾಶಕ್ಕೆ. ಆಸದನ್ — ಒಂದರು. ॥೧೫೯॥

ಸುರಾಸ್ತು ಭೀಮಸ್ಯ ಜಯಾಭಿಕಾಂಕ್ಷಿಣಸ್ತಥಾಽಸುರಾದ್ಯಾಮುಗಧಾಧಿಪಸ್ಯ ।
ಪಶ್ಯಂತಿ ಸರ್ವೇ ಕ್ರಮಶೋ ಬಲಂ ಸ್ವಂ ಸಮಾದದೇ ಮಾರುತನಂದನೋಽಪಿ ॥೧೬೦॥

ಭೀಮಸ್ಯ ತು ಜಯಾಭಿಕಾಂಕ್ಷಿಣಃ— ಶ್ರೀಭೀಮಸೇನರಿಗೇ ಜಯವನ್ನು ಆಪೇಕ್ಷಿಸುವ, ಸರ್ವೇಸುರಾಃ—ಎಲ್ಲ ದೇವತೆಗಳು, ತಥಾ — ಹಾಗು, ಮಗಧಾಧಿಪಸ್ಯ ಜಯಾಭಿಕಾಂಕ್ಷಿಣಃ — ಜರಾಸಂಧನಿಗೆ ಜಯವನ್ನು ಬಯಸುವ, ಸರ್ವೇ ಅಸುರಾದ್ಯಾಃ — ರಾಕ್ಷಸರೇ ಮೊದಲಾದ ಎಲ್ಲ ದುಷ್ಟರೂ, ಪಶ್ಯಂತಿ-ಯಂದ್ದವನ್ನು ನೋಡುತ್ತಾ ಇದ್ದಾರೆ. ಮಾರುತನಂದನಃ ಅಪಿ—ವಾಯುಪುತ್ರರಾದ ಶ್ರೀಭೀಮಸೇನದೇವರೂ ಕೂಡ, ಕ್ರಮಶಃ — ಕ್ರಮವಾಗಿ, ಸ್ವಂಬಲಂ— ತಮ್ಮ ಮೂಲರೂಪದ ಬಲವನ್ನು; ಸಮಾದದೇ — ಸ್ವೀಕರಿಸಿದರು (ಪ್ರಕಟಮಾಡಿಕೊಂಡರು). ॥೧೬೦॥

ಮಾನಯಿತ್ವಾ ವರಂ ಧಾತುರ್ದಿವಸಾನ್ ದಶ ಪಂಚ ಚ ।
ವಾಸುದೇವಾಜ್ಞಯಾಭೀಮಶ್ಶತ್ರುಂ ಹಂತುಂ ಮನೋ ದಧೇ ॥೧೬೧॥

ಭೀಮಃ — ಶ್ರೀಭೀಮರು, ದಶ ಪಂಚ ಚ ದಿವಸಾನ್ — ಹತ್ತು ಮತ್ತು ಐದು (ಹದಿನೈದು) ದಿನಗಳವರೆಗೆ, ಧಾತುಃ ವರಂ—ಚತುರ್ಮುಖಬ್ರಹ್ಮದೇವರ ವರವನ್ನು, ಮಾನಯಿತ್ವಾ — (ಜರಾಸಂಧನನ್ನು ಕೊಲ್ಲದಯೇ] ಮಾನ್ಯ ಮಾಡಿ, ವಾಸುದೇವಾಜ್ಞಯಾ — ಶ್ರೀಕೃಷ್ಣನ ಅಪ್ಪಣೆಯಂತೆ, ಶತ್ರುಂ — ವೈರಿಯಾದ ಜರಾಸಂಧನನ್ನು, ಹಂತುಂ—ಸಂಹರಿಸಲು, ಮನಃ ದಧೇ:—ಮನಸ್ಸನ್ನು ಮಾಡಿದರು. ॥೧೬೧॥

ಸ ಪ್ರಣಮ್ಯ ಹೃಷೀಕೇಶಂ ಹರ್ಷಾದಾಶ್ಲಿಷ್ಯ ಫಲ್ಗುನಮ್ ।
ರಿಪುಂ ಜಗ್ರಾಹ ಮುಕುಟೇ ವಾರಣಂ ಮೃಗರಾಡಿವ ॥೧೬೨॥

ಸಃ—ಆ ಭೀಮಸೇನದೇವರು, ಹೃಷೀಕೇಶಂ — ಶ್ರೀಕೃಷ್ಣನನ್ನು, ಹರ್ಷಾತ್ — [ದುಷ್ಟನಿಗ್ರಹರೂಪವಾದ ಶ್ರೇಷ್ಠ ಧರ್ಮವನ್ನು ಆಚರಿಸುವ ಸಮಯವು ಪ್ರಾಪ್ತವಾಯಿತು ಎಂಬ) ಸಂತೋಷದಿಂದ, ಪ್ರಣಮ್ಯ — ನಮಸ್ಕರಿಸಿ, ಫಲ್ಗುನಮ್ — ಅರ್ಜುನನನ್ನು, ಆಶ್ಲಿಷ್ಯ—ಆಲಿಂಗಿಸಿ, ರಿಪುಂ—ವೈರಿಯಾದ ಜರಾಸಂಧನನ್ನು, ಮೃಗರಾಟ್—ಮೃಗರಾಜನಾದ ಸಿಂಹವು, ವಾರಣಂಇವ — ಆನೆಯನ್ನು ಹೇಗೆ ಹಿಡಿಯುವೇಕೋ ಹಾಗೆ, ಮುಕುಟೇ — ಶಿರಸ್ಸಿನಲ್ಲಿ, (ಕಿರೀಟದಲ್ಲಿ] ಜಗ್ರಾಹ - ಹಿಡಿದರು. ॥೧೬೨॥

ಪೃಷ್ಠೇಽಸ್ಯ ಜಾನುಮಾಧಾಯ ಕೂರ್ಮದೇಶಂ ಬಭಂಜ ಹ ।
ಮೃತಿಕಾಲೇ ಪುನರ್ದೇಹಂ ವಿದದಾರ ಯಥಾ ಪುರಾ ॥೧೬೩॥

ಅಸ್ಯಪೃಷ್ಠೇ – ಈ ಜರಾಸಂಧನ ಬೆನ್ನಿನಲ್ಲಿ, ಜಾನುಂ – ಮೊಂಡೆಯನ್ನು, ಆಧಾಯ – ಇಟ್ಟು, ಕೂರ್ಮದೇಶಂ – ಕಟಿಮೂಲಪ್ರದೇಶವನ್ನು, ಬಭಂಜ ಹ – ಮುರಿದರು. ಪುನಃ – ಮತ್ತೂ, ಪುರಾ ಯಥಾ ತಥಾ – ಜರಾಸಂಧನ ಜನ್ಮಕಾಲದಲ್ಲಿ ಹೇಗೆ ಎರಡು ತುಂಡುಗಳಿದ್ದವೋ ಹಾಗೇ ಆಗುವಂತೆ, ದೇಹಂ-ಅವನ ದೇಹವನ್ನು, ವಿದದಾರ-ಸೀಳಿದರು. ॥೧೬೩॥

ಮರ್ಮಣ್ಯೇವ ನ ಹಂತವ್ಯೋ ಮಯಾಽಯಮಿತಿ ಮಾರುತಿಃ ।
ಸ್ವಪೌರುಷಪ್ರಕಾಶಾಯ ಬಭಂಜೈನಮುಮರ್ಮಣಿ ॥೧೬೪॥

ಮಾರುತಿ :– ಶ್ರೀ ಭೀಮಸೇನದೇವರು, ಸ್ವಪೌರುಷಪ್ರಕಾಶಾಯ – ತಮ್ಮ ಸಾಮರ್ಥ್ಯವನ್ನು ಪ್ರಕಟಿಸುವದಕ್ಕಾಗಿ. ಅಯಂ – ಈ ಜರಾಸಂಧನು. ಮಯಾ—ನನ್ನಿಂದ. ಮರ್ಮಣಿ – ಮರ್ಮಸ್ಥಾನದಲ್ಲಿ. ನ ಹಂತವ್ಯ:—ಹೊಡೆದು ಕೊಲ್ಲಲ್ಪಡಬಾರದು, ಇತಿವಿವ – ಎಂಬ ಅಭಿಪ್ರಾಯದಿಂದಲೇ. ಏನಂ – ಈ ಜರಾಸಂಧನನ್ನು, ಅಮರ್ಮಣಿ – ಮರ್ಮಸ್ಥಾನವಲ್ಲದ ಕೂರ್ಮದೇಶದಲ್ಲಿ, ಬಭಂಜ – ಹೊಡೆದು ಮುರಿದರು ॥೧೬೪॥

ಭಜ್ಯಮಾನೇ ಶರೀರೇಽಸ್ಯ ಬ್ರಹ್ಮಾಂಡಸ್ಫೋಟಸನ್ನಿಭಃ ।
ಬಭೂವ ರಾವೋ ಯೇನೈವ ತ್ರಸ್ತಮೇತಜ್ಜಗತ್ತ್ರಯಮ್ ॥೧೬೫॥

ಯೇನ – ಯಾವದರಿಂದ, ಏತತ್ ಜಗತ್ತ್ರಯಂ – ಈ ಮೂರುಲೋಕವು, ತ್ರಸ್ತಂ – ಹೆದರಿತೋ, ಸ: – ಅಂಥ, ಬ್ರಹ್ಮಾಂಡಸ್ಫೋಟಸನ್ನಿಭ:ರಾವ: – ಬ್ರಹ್ಮಾಂಡಸ್ಫೋಟವಾದಾಗ ಆಗುವ ಶಬ್ದಕ್ಕೆ ಸದೃಶವಾದ ಶಬ್ದವು, ಅಸ್ಯ ಶರೀರೇ ಭಜ್ಯಮಾನೇಸತಿ – ಈ ಜರಾಸಂಧನ ಶರೀರವು ಮುರಿಯಲ್ಪಡುತ್ತಿರುವಾಗ, ಬಭೂವ – ಆಯಿತು. ॥೧೬೫॥

ನಿಹತ್ಯ ಕೃಷ್ಣಸ್ಯ ರಿಪುಂ ಸ ಭೀಮಸ್ತಮರ್ಪಯಾಮಾಸ ತದರ್ಚನಂ ಹರೇ: ।
ಕೃತಾಂ ಹಿ ಭೀಮೇನ ಸಮರ್ಚನಾಂ ತಾಂ ಸಮಕ್ಷಮಾದಾತುಮಿಹಾಗತೋ ಹ್ಯಜ : ॥೧೬೬॥

ಸಃ ಭೀಮಂ : – ಆ ಭೀಮಸೇನದೇವರು, ಕೃಷ್ಣಸ್ಯ ರಿಪುಂ – ಶ್ರೀಕೃಷ್ಣನ ವೈರಿಯಾದ ಮಾಗಧನನ್ನು, ನಿಹತ್ಯ – ಕೊಂದು, ತತ್ – ಆ ದುಷ್ಟವಧಕಾರ್ಯವನ್ನು, ಹರೇ: — ಶ್ರೀಕೃಷ್ಣಪರಮಾತ್ಮನಿಗೆ, ಅರ್ಚನಂ ಸಮರ್ಪಯಾಮಾಸ – ಪೂಜೆಯಂಸ್ಕಾಗಿ ಸಮರ್ಪಿಸಿದರು. ಭೀಮೇನ ಹಿ ಕೃತಾಂ – ಶ್ರೀಭೀಮರಿಂದಲೇ ನಿಶ್ಚಿತವಾಗಿಮಾಡಲ್ಪಡತಕ್ಕ, ತಾಂ ಸಮರ್ಚನಾಂ – ಆ ಪೂಜೆಯನ್ನು, ಸಮಕ್ಷಂ ಆದಾತುಂ ಹಿ – ಪ್ರತ್ಯಕ್ಷವಾಗಿ ಸ್ವೀಕರಿಸುವದಕ್ಕಾಗಿಯೇ, ಅಜ: – ಜನನರಹಿತನಾದ ಶ್ರೀಕೃಷ್ಣನು, ಇಹ – ಇಲ್ಲಿಗೆ, ಆಗತ: – ಬಂದಿದ್ದನು. ॥೧೬೬॥

ಸ್ವೀಕೃತ್ಯಪೂಜಾಂಚ ವೃಕೋದರಸ್ಯ ದೃಢಂ ಸಮಾಶ್ಲಿಷ್ಯಚ ತಂಜನಾರ್ದನಃ ।
ಪ್ರೀತೋ ನಿತಾಂತಂ ಪುನರೇವ ಕೃಷ್ಣಂ ನನಾಮ ಭೀಮ: ಪ್ರಣತೋಽರ್ಜುನೇನ ॥೧೬೭॥

ಜನಾರ್ದನ :— ಶ್ರೀ ಕೃಷ್ಣಪರಮಾತ್ಮನು, ವೃಕೋದರಸ್ಯ ಪೂಜಾಂ ಚ – ಶ್ರೀ ಭೀಮರು ಮಾಡಿದ ಆ ಪೂಜೆಯನ್ನು, ಸ್ವೀಕೃತ್ಯ – ಸ್ವೀಕರಿಸಿ, ತಂ—ಆ ಭೀಮಸೇನದೇವರನ್ನು, ದೃಢಂ ಸಮಾಶ್ಲಿಷ್ಯ – ಗಟ್ಟಿಯಾಗಿ ಆಲಿಂಗಿಸಿ, ನಿತಾಂತಂ ಪ್ರೀತ: ಬಭೂವ-ಬಹಳ ಸಂತುಷ್ಟನಾದನು. ಅರ್ಜುನೇನಪ್ರಣತ:-ಅರ್ಜುನನಿಂದ ನಮಸ್ಕೃತರಾದ, ಭೀಮಂ:-ಶ್ರೀಭೀಮರು, ಕೃಷ್ಣಂ-ಶ್ರೀಕೃಷ್ಣಪರಮಾತ್ಮನನ್ನು, ಪುನರೇವ ನನಾಮ – ಮತ್ತೂ ಮತ್ತೂ ನಮಿಸಿದರು. ॥೧೬೭॥

ಜಗ್ಮುಸ್ಸುರಾಶ್ಚಾತಿತರಾಂ ಪ್ರಹೃಷ್ಟಾಬ್ರಹ್ಮಾದಯೋ ದೀನತರಾಶ್ಚ ದೈತ್ಯಾಃ ।
ಬಲಾದುಮೇಶಸ್ಯ ವರೇ ಪ್ರಭಗ್ನೇ ವೃಕೋದರೇಣಾಚ್ಯುತಸಂಶ್ರಯೇಣ ॥೧೬೮॥

ಅಚ್ಯುತಸಂಶ್ರಯೇಣ – ಶ್ರೀ ಕೃಷ್ಣನನ್ನು ಆಶ್ರಯಿಸಿದ, ವೃಕೋದರೇಣ-ಶ್ರೀಭೀಮರಿಂದ, ಬಲಾತ್–ಸಾಮರ್ಥ್ಯದಿಂದ, ಉಮೇಶಸ್ಯ ವರೇ-ರುದ್ರದೇವರ ವರವು, (ಬ್ರಹ್ಮದಂರ್ವಾಸರ ವರವೂ ಎಂದು ತಿಳಿಯಬೇಕು) ಪ್ರಭಗ್ನೇ ಸತಿ-ಮೀರಿಯಲ್ಪಡುತ್ತಿರಲು, ಬ್ರಹ್ಮಾದಯಃ : ಸುರಾಃ :–ಬ್ರಹ್ಮಾದಿದೇವತೆಗಳು. ಅತಿತರಾಂ ಪ್ರಹೃಷ್ಟಾಃ ಸಂತಃ:–ಅತ್ಯಂತ ಸಂತೋಷವನ್ನು ಹೊಂದಿದವರಾಗಿ, ಜಗ್ಮುಃ - ತಮ್ಮ ಸ್ಥಾನಕ್ಕೆ ಹೋದರು, ಚ –ಮತ್ತು, ದೈತ್ಯಾಃ - ದೈತ್ಯರು, ದೀನತರಾಃ – ಬಹಳ ದುಃಖಿಗಳಾಗಿ, ಜಗ್ಮುಃ - ಹೋದರು. ॥೧೬೮॥

ಭಾವಾನುವಾದ ೧೨೩-೧೬೮

ಶ್ರೀಕೃಷ್ಣಪರಮಾತ್ಮನು ಹಾಗೆ ಹೇಳಿದಾಗ ಧರ್ಮರಾಜನು ಭಗವಂತನ ಮಾಹಾತ್ಮ್ಯದ ಬಗ್ಗೆ ವಿಚಾರಮಾಡಿ ಹಾಗೇ ಆಗಲಿ ಎಂದು ಹೇಳಿದನು. ಮರುದಿನ ಪ್ರಾತಃಕಾಲದಲ್ಲಿ ಶ್ರೀಕೃಷ್ಣಪರಮಾತ್ಮನು ಭೀಮಾರ್ಜುನರಿಂದೊಡಗೂಡಿ ಮಗಧರಾಜ್ಯಕ್ಕೆ ಹೊರಟು ಬಂದನು. ಅಲ್ಲಿ ಲಿಂಗಾಕಾರದ ಪರ್ವತವಿತ್ತು. ಅದನ್ನು ಜರಾಸಂಧನು ರುದ್ರದೇವರ ದೊಡ್ಡ ಲಿಂಗ ಎಂಬ ಭಾವದಿಂದ ವಸ್ತ್ರ, ಮಾಲೆ, ಆಭರಣಗಳಿಂದ ಶಿರಸಾಮಾನ್ಯವಾಡಿ ಪೂಜಿಸುತ್ತಿದ್ದನು. ಅದನ್ನು ನೋಡಿದ ಈ ಮೂವರು ಅದನ್ನು ತಮ್ಮ ಬಾಹುಗಳಿಂದ ಅವನ ತಲೆಯನ್ನು ಕೆಡವುವಂತೆ ಕೆಡವಿದರು. ಅಲ್ಲಿಂದ ಜರಾಸಂಧನ ತಿರಸ್ಕಾರ ಮಾಡುವ ಉದ್ದೇಶದಿಂದಲೇ ಮಹಾದ್ವಾರದಿಂದ ಅವನ ಊರನ್ನು ಪ್ರವೇಶಿಸದೆಯೇ ಗೋಡೆಯನ್ನು ಒಡೆದು ಪ್ರವೇಶಿಸಿದರು. ಅಲ್ಲಿ ಒಳಗೆ ಒಂದು ಕಡೆಗಿರುವ, ಜರಾಸಂಧನ ವಿಜಯದ ಸಂದರ್ಭಗಳಲ್ಲಿ ಶಬ್ದಮಾಡಿ ಸೂಚಿಸುವ, ಮಾಪ ಎಂಬ ಅಸುರನ ಕಂಠನಾಳಗಳಿಂದ ಮಾಡಿದ ಮೂರು ನಗಾರಿಗಳನ್ನು ಹರಿದು ನಾಶ ಮಾಡಿದರು; ಅಂಗಡಿಗಳಲ್ಲಿರುವ ಬಹು ಕಿಮ್ಮತ್ತಿನ ಗಂಧ, ಮಾಲೆ ಇತ್ಯಾದಿ ಅಲಂಕಾರ ದ್ರವ್ಯಗಳನ್ನು ಬಲಾತ್ಕಾರದಿಂದ ಕಿತ್ತುಕೊಂಡು, ಧರಿಸಿಕೊಂಡು, ದ್ವಾರವನ್ನು ಬಿಟ್ಟೇ ಅವನ ಮನೆಯೊಳಗೆ ಪ್ರವೇಶಿಸುತ್ತಾ 'ಎಲೋ ಜರಾಸಂಧಾ' ಎಂದು ಧ್ವನಿಯನ್ನೂ ಮಾಡಿದರು ಆಗ ಬ್ರಾಹ್ಮಣವೇಷದಲ್ಲಿರುವ ಇವರನ್ನು ನೋಡಿ ಇವರಿಗಿರುವ ದೀರ್ಘಬಾಹುಗಳನ್ನು, ಬಾಹುಗಳಲ್ಲಿರುವ ಜ್ಯಾ ದ ಸಂಪರ್ಕದ ಗುರುತುಗಳನ್ನು

ನೋಡಿ ಯಾತ್ರಿಕ ಬ್ರಾಹ್ಮಣ ವೇಷದಲ್ಲಿರುವ ಇವರು ಕ್ಷತ್ರಿಯರೇ ಇರಬೇಕೆಂದು ಯೋಚಿಸಿ ನೀವು ಯಾರು? ಯಾಕೆ ಬಂದಿರಿ ಏರಿ ? ನನ್ನ ಲಿಂಗಪರ್ವತವನ್ನು ಏಕೆ ಕೆಡುವಿದಿರಿ ? ಇನ್ನು ಅನೇಕ ದುಷ್ಟಕಾರ್ಯಗಳನ್ನು ಏಕೆ ಮಾಡಿದಿರಿ? ಎಂದು ಕೇಳಿದನು. ಆಗ ಶ್ರೀಕೃಷ್ಣನು "ಶತ್ರುವಿಗೆ ಎಲ್ಲ ವಿಧದ ವಿರೋಧವನ್ನೂ ಮಾಡಬೇಕು" ಎಂದು ಒಂದೇ ಮಾತಿನಲ್ಲಿ ಅವನ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನಾಗಿ ಹೇಳಿದನು. ಜರಾಸಂಧನು ನಾನು ನಿಮ್ಮ ಶತ್ರುವಲ್ಲ ಎಂದಾಗ ನಿನ್ನ ಶತ್ರುವಲ್ಲದ ಬ್ರಾಹ್ಮಣರು ನಾವಲ್ಲ; ನಾನೇ ನಿನ್ನ ವೈರಿಯಾದ ಶ್ರೀಕೃಷ್ಣ. ಇವರು ಭೀಮಾರ್ಜುನರು. ನೀನು ನನ್ನ ಬಾಂಧವರಾದ ರಾಜರನ್ನು ಪಶುಗಳನ್ನಾಗಿ ಮಾಡಿ ವೇದವಿರುದ್ಧವಾದ ಯಜ್ಞವನ್ನು ರುದ್ರದೇವರ ಉದ್ದೇಶ್ಯವಾಗಿ ಮಾಡಲು ಪ್ರವೃತ್ತನಾಗಿರುವಿಯಷ್ಟೇ. ಆದ್ದರಿಂದ ನಿನ್ನನ್ನು ಶಿಕ್ಷಿಸುವದಕ್ಕಾಗಿ ನಾವು ಇಲ್ಲಿಗೆ ಬಂದಿರುವೆವು. ನೀನು ನಮ್ಮ ಬಂಧುಗಳನ್ನು ಬಿಟ್ಟುಕೊಟ್ಟರೆ ಕ್ಷೇಮ; ಇಲ್ಲವಾದರೆ ನಾವು ನಿನ್ನನ್ನು ನಿಗ್ರಹಿಸಿ ಬಿಡಿಸಿಕೊಂಡು ಹೋಗುತ್ತೇವೆ. ಆದ್ದರಿಂದ ಒಂದೋ ಅವರನ್ನು ಬಿಟ್ಟುಕೊಡು; ಅಥವಾ 'ಯಮನ್ಮನೆಗೆ ಬಾ' ಎಂದು ಶ್ರೀಕೃಷ್ಣಪರಮಾತ್ಮನು ಹೇಳಿದನು. ಆಗ ಜರಾಸಂಧನು ಶಿವಯಾಗಕ್ಕೆ ತೊಡಗಿಸಿರುವ ಅವರನ್ನು ನಾನು ಬಿಡುವದಿಲ್ಲ ನಿಮ್ಮಲ್ಲರ ಸಂಗಡ ಒಮ್ಮೆಲೆ ಆಗಲಿ, ಕ್ರಮವಾಗಿ ಒಬ್ಬೊಬ್ಬರ ಸಂಗಡವಾಗಲೀ, ಯುದ್ಧ ಮಾಡಲು ಸಿದ್ಧ. ಸೈನ್ಯಸಹಿತರಾಗಿ ನೀವು ಬಂದರೂ ನಾನು ಸಿದ್ಧ ಆಯುಧವಿಲ್ಲದೆಯೇ ಯುದ್ಧ ಮಾಡಲೂ, ಆಯುಧದಿಂದ ಮಾಡಲು, ನಿಮಗೆ ಇಷ್ಟವಾದ ಆಯುಧದಿಂದಲೂ ಯುದ್ಧಮಾಡಲು ಸಿದ್ಧನು ಇರುವೆನು. ಎಂದು ಹೇಳಿದನು. ಅದಕ್ಕೆ ಶ್ರೀಕೃಷ್ಣನು ನಮ್ಮ ಮೂವರಲ್ಲಿ ಯಾರಾದರೊಬ್ಬರ ಜೊತೆಗೆ ನೀನೊಬ್ಬನಾಗಲೀ ಅಥವಾ ಸೈನ್ಯಸಹಿತವಾಗಿಯಾಗಲೀ ಯುದ್ಧ ಮಾಡು. ಆಯುಧರಹಿತನಾಗಿಯಾಗಲೀ ಆಯುಧಸಹಿತನಾಗಿಯಾಗಲೀ, ಅಥವಾ ನಿನಗೆ ಬೇಕಾದ ಆಯುಧದಿಂದಾಗಲೀ ಯುದ್ಧಮಾಡು ಎಂದು ಹೇಳಿದನು. ಶ್ರೀಕೃಷ್ಣನು ಈ ರೀತಿ ಹೇಳುವಲ್ಲಿ ಭೀಮಸೇನದೇವರ ಯಶಸ್ಸು ಅಭಿವೃದ್ಧವಾಗಬೇಕೆಂಬ ಉದ್ದೇಶವಿತ್ತು. ಭೀಮಸೇನದೇವರಿಂದ ಇವನನ್ನು ಕೊಲ್ಲಿಸಿ ತನ್ನ ವಿಶೇಷವಾದ ಅನುಗ್ರಹವನ್ನು, ಜ್ಞಾನಭಕ್ತಿ ಮೊದಲಾದ ಗುಣಗಳ ಅಭಿವೃದ್ಧಿಯನ್ನು ಮಾಡಿಕೊಡಬೇಕೆಂದು ಉದ್ದೇಶವಿತ್ತು. ಅದಕ್ಕಾಗಿ ಹಾಗೆ ಹೇಳಿದನು. ಅದು

ಹೇಗೆ ಎಂದರೆ ತನ್ನ ಮನೆಯಲ್ಲಿಯೇ ಎಲ್ಲ ಅನುಕೂಲತೆಗಳಿಂದ, ಆಯುಧಗಳಿಂದ ಕೂಡಿದ ಜರಾಸಂಧನನ್ನು ಭೀಮಸೇನರು ಆಯುಧವಿಲ್ಲದೆ ಪರಸ್ಥಳದಲ್ಲಿ ಯುದ್ಧಕ್ಕೆ ಆಹ್ವಾನಿಸಿದಾಗ, ಅವರ ಶಕ್ತಿಯು ಪ್ರಕಟವಾಗುವದು. ಅಂಥವನನ್ನು ಎದುರಿಸುವ ಧೈರ್ಯ ಇವರಿಗಿದೆ; ಅಂಥವನನ್ನು ಇವರುಕೊಂದರು ಎಂದು ಕೀರ್ತಿಯು ಬರುವದು. ಅಂಥವನನ್ನು ಶಸ್ತ್ರ ಅಸ್ತ್ರರಹಿತವಾಗಿ ಕೇವಲ ಬಾಹುಬಲದಿಂದ ಸಂಹರಿಸುವದರಿಂದ ವಿಶೇಷ ಕೀರ್ತಿ, ವಿಶೇಷ ಧರ್ಮಪ್ರಾಪ್ತಿ.ಅದರಿಂದ ತನ್ನ ವಿಶೇಷ ಅನುಗ್ರಹವು ಆಗುವದು. ಮೂವರಲ್ಲಿ ಬೇಕಾದವನನ್ನು ಆರಿಸಿಕೋ ಎಂದು ಹೇಳಿದಾಗ ಅರ್ಜುನನನ್ನು ಬಿಟ್ಟು ಭೀಮನನ್ನು ಆರಿಸಿದಾಗ ಭೀಮನ ಬಲಿಷ್ಠತೆಯು ಪ್ರಕಟವಾಗುವದು. ಅರ್ಜುನನನ್ನು ತಾನು ಆರಿಸದಿದ್ದಕ್ಕೆ ಕಾರಣವನ್ನು ಕೊಡುತ್ತಾ ಜರಾಸಂಧನು ಇವನು ದುರ್ಬಲನಾದ್ದರಿಂದ ಬಾಲಕನೆಂದು ನನ್ನ ಅಭಿಪ್ರಾಯ. ಅದಕ್ಕಾಗಿ ಇವನ ಸಂಗಡ ಯುದ್ಧ ಮಾಡೆನು ಎಂದು ಹೇಳಿದಾಗ, ನನ್ನನ್ನೇನು ಬಾಲ ಎನ್ನುತ್ತಿ? ನೋಡುವಾ ನಮ್ಮಿಬ್ಬರ ಶಕ್ತಿಯನ್ನು. ಬಾ ಯುದ್ಧಕ್ಕೆ ಎಂದು ಪ್ರತೀಕಾರ ರೂಪ ಪ್ರತಿಕ್ರಿಯೆಯನ್ನು ತಾನು ಯುದ್ಧದಲ್ಲಿ ಸೋಲಬಹುದು ಎಂದಕೊಂಡು ತೋರಿಸವೇ ಇದ್ದದ್ದರಿಂದ ಅರ್ಜುನನಿಗಿಂತ ಭೀಮಸೇನದೇವರ ಅಧಿಕ್ಯವು ಪ್ರಕಟವಾಯಿತು. ಈ ರೀತಿ ಅರ್ಜುನನಿಗಿಂತ ಅಧಿಕ್ಯವನ್ನು ಜರಾಸಂಧನ ಬಾಯಿಯಿಂದಲೇ ಬರುವಂತಾಗಲಿ ಎಂಬ ಉದ್ದೇಶದಿಂದಲೇ ಶ್ರೀಕೃಷ್ಣನು ಅರ್ಜುನನನ್ನು ಒಟ್ಟಿಗೆ ಕರೆ ತಂದಿದ್ದನು. ಜರಾಸಂಧನನ್ನು ಸಂಹರಿಸಲು ನಮಗೆ ಏನೂ ಆಯಾಸವಿಲ್ಲ; ಅವನು ತೃಣಪ್ರಾಯ ಎಂದು ತಿಳಿಸಲು ಆಯುಧರಹಿತರಾಗಿ ಹೋಗಬೇಕು; ಆದರೆ ಕ್ಷತ್ರಿಯರು ಆಯುಧರಹಿತರಾಗಿ ಇರಬಾರದು. ಆದ್ದರಿಂದ ಬ್ರಾಹ್ಮಣವೇಷವನ್ನು ತಾಳಿ ಆಯುಧರಹಿತರಾಗಿ ಹೋಗಿ ಆಕಾರ್ಯವನ್ನು ಮಾಡಿದರು. ಶ್ರೀಕೃಷ್ಣನು ಮೂವರಲ್ಲಿ ಯಾರನ್ನಾದರೂ ಆರಿಸಿಕೊ ಎಂದರೆ ಜರಾಸುತನು ಅವನ ಶಕ್ತಿಯನ್ನು ಹಿಂದಿನ ಯುದ್ಧಗಳಲ್ಲಿ ಅನುಭವಿಸಿದವನಾದ್ದರಿಂದ ಹದರಿ ಗೋಪಾಲಕ ಎಂದು ಜರಿಯುತ್ತಾ ನೆಪಮಾಡಿ ಅವನ ಸಂಗಡ ಯುದ್ಧವನ್ನು ನಿಷೇಧಿಸಿಕೊಂಡನು. ಶ್ರೀಕೃಷ್ಣನನ್ನು ಆರಿಸಿದರೆ ಸತ್ತೇ ಹೋಗುವೆನು ಎಂಬ ಹೆದರಿಕೆ ಅವನಿಗಿತ್ತು. ಭೀಮನನ್ನು ಯುದ್ಧಕ್ಕೆ ಆರಿಸಿದರೆ ಬದುಕಿದರೂ ಬದುಕಬಹುದು ಎಂಬ ಆಶೆ ಇತ್ತು. ಅರ್ಜುನನನ್ನು ಆರಿಸಿದರೆ ಗೆದ್ದರೂ ಕೀರ್ತಿ ಇಲ್ಲ. ಏಕೆಂದರೆ ಅವನು ದುರ್ಬಲ ಅಷ್ಟೇ ಅಲ್ಲ ಅವನನ್ನು ಕರೆದದ್ದರಿಂದ ನನ್ನ ಇದ್ದ ಕೀರ್ತಿಯೂ ನಶಿಸುವದು; ಅಷ್ಟಲ್ಲದೇ ಪ್ರಯೋಜನವಿಲ್ಲ-ಕೃಷ್ಣಭೀಮರು ನನ್ನನ್ನು ಕೊಂದೇ ಬಿಡುತ್ತಾರೆ. ಹೀಗೆ ಗೆದ್ದೂ ಪ್ರಯೋಜನವಿಲ್ಲ. ಭೀಮಸೇನನನ್ನು ಕರೆದರೆ, ಜೀವವು ಉಳಿದೀತು. ಕೀರ್ತಿಯುಂತೂ ನಶಿಸುವದಿಲ್ಲ ಹೀಗೆ ವಿಚಾರಿಸಿ ಭೀಮಸೇನದೇವರನ್ನು ಕರೆದನು. ಯುದ್ಧಕ್ಕೆ ಬರುವಾಗ ಮಗನನ್ನು ರಾಜ್ಯಪಟ್ಟದಲ್ಲಿ ಕೂಡಿಸಿದನು. ಅವನು ಮೂಲರೂಪದಲ್ಲಿ ಪತ್ರತಾಪ ಎಂಬ ರುದ್ರನು. ಜರಾಸಂಧನು ಬಲದಲ್ಲಿ ಭೀಮನೇ ಶ್ರೇಷ್ಠನು: ಅವನ ಜೊತೆಗೆ ಮಲ್ಲಯುದ್ಧಕ್ಕಿಳಿದರೆ ನಾನು ಸೋಲುವದೇ ಖಂಡಿತ; ಗದಾಯುದ್ಧ ನೈಪುಣ್ಯವು ಅವನಿಗಿಂತ ಹೆಚ್ಚು ನನ್ನಲ್ಲಿದೆ: ಗದಾಯುದ್ಧ ಮಾಡಿದರೆ ಬದುಕಬಹುದು ಎಂದು ವಿಚಾರಿಸಿ ಮಲ್ಲಯುದ್ಧಕ್ಕೆ ಹೆದರಿ ಗದಾವನ್ನು ತೆಗೆದುಕೊಂಡು ಇನ್ನೊಂದನ್ನು ಭೀಮಸೇನದೇವರಿಗೆ ಕೊಟ್ಟನು. ಆಗ ಶ್ರೀಭೀಮರೂ ಕೂಡ ತಮ್ಮ ಗದಾಯುದ್ಧ ನೈಪುಣ್ಯಕ್ಕಾಗಿಯೇ (ಹೊರತು ಅವನನ್ನು ಕೊಲ್ಲುವದಕ್ಕಾಗಿ ಗದೆಯ ಅವಶ್ಯಕತೆಯೂ ಅವರಿಗಿರಲಿಲ್ಲ) ಗದಾವನ್ನು ಸ್ವೀಕರಿಸಿ ಶ್ರೀಕೃಷ್ಣಾರ್ಜುನ ಸಮೇತರಾಗಿ ಜರಾಸಂಧನಿಂದೊಡಗೂಡಿ ಊರ ಹೊರಕ್ಕೆ ಬಂದು ಅಲ್ಲಿ ಯುದ್ಧವನ್ನಾರಂಭಿಸಿದರು. ಮೊದಲು ವಾಗ್ಯುದ್ಧವನ್ನು ಮಾಡಿ ವಿಷ್ಣುಸರ್ವೋತ್ತಮತ್ವವನ್ನು ಸಿದ್ಧಮಾಡಿ ಶೈವಸರ್ವೋತ್ತಮತ್ವವನ್ನು ಹೇಳುವ ಆ ಮಾಗಧನನ್ನು ಗೆದ್ದು, ನಂತರ ಗದಾದಿಂದ ಯುದ್ಧವನ್ನಾಡುತ್ತಾ ಇಬ್ಬರೂ ಅದ್ಭುತವಾದ ತಮ್ಮ ತಮ್ಮ ನೈಪುಣ್ಯಗಳನ್ನು ತೋರಿಸುತ್ತಾ ಗದೆಗಳನ್ನು ಒಬ್ಬರಿಗೊಬ್ಬರು ದೇಹದಲ್ಲಿ ಹೊಡೆದರು. ವಜ್ರಾಯುಧದಂತೆ ಗಟ್ಟಿಯಾದ ಆ ಗದೆಗಳೂ ಕೂಡ ಅವರ ದೇಹಗಳ ದೃಢತೆಯಿಂದ ಕಲ್ಲು ಬಂಡೆಯಲ್ಲಿ ಬಿದ್ದ ಮಣ್ಣಿನ ಉಂಡೆ ಒಡೆಯುವಂತೆ ಒಡೆದುಹೋದವು. ಆಗ ಮಲ್ಲಿಯುದ್ಧವನ್ನಾಡಿದರು. ಮುಷ್ಟಿಗಳ ಪೆಟ್ಟು ಬೀಳುವಾಗ ಬ್ರಹ್ಮಾಂಡಭೇದನವಾಗುವಾಗಿನ ಶಬ್ದದ ಹಾಗೆ ಶಬ್ದವಾಗುತ್ತಿತ್ತು ಭೂಮಿ ನಡುಗಿತು; ಸಣ್ಣಪರ್ವತಗಳು ಪುಡಿಯಾದವು; ದೊಡ್ಡವು ಅಲುಗಾಡಿದವು; ಸಮುದ್ರಗಳು ಅಲ್ಲೋಲಕಲ್ಲೋಲವಾದವು: ಬ್ರಹ್ಮರುದ್ರಾದಿದೇವತೆಗಳು ಹಾಗು ಅಸುರರು ಆಕಾಶದಲ್ಲಿ ಬಂದು ನಿಂತು ಯುದ್ಧದ ಪ್ರೇಕ್ಷಕರಾದರು. ಬ್ರಹ್ಮರುದ್ರಾದಿದೇವತೆಗಳೆಲ್ಲ ಭೀಮರ ಜಯಾಪೇಕ್ಷಿಗಳು, ಆಸುರರು ಮಾಗಧಜಯಾಪೇಕ್ಷಿಗಳು ಆಗಿದ್ದರು ಶ್ರೀಭೀಮರು ಯುದ್ಧ ಮಾಡುತ್ತಾ. ಮಾಡುತ್ತಾ ಕ್ರಮವಾಗಿ ತಮ್ಮ ಮೂಲರೂಪದ ಬಲವನ್ನು ಪ್ರಕಟಮಾಡಿಕೊಳ್ಳುತ್ತಾ ಹದಿನೈದು ದಿನಗಳವರಗೆ ಬ್ರಹ್ಮದೇವರು ಜರಾಸಂಧನಿಗಿತ್ತ (ಅಜೇಯತ್ವ ವರ ಅವಧ್ಯತ್ವ) ವನ್ನು ಮಾನ್ಯಮಾಡಿ, ಅಂದು ಮಾತ್ರ ಶ್ರೀಕೃಷ್ಣನುಜ್ಞೆ— ಯಂತೆ ಅವನನ್ನು ಕೊಲ್ಲಲು ನಿಶ್ಚಯಿಸಿ, ಶ್ರೀಕೃಷ್ಣನನ್ನು ನಮಸ್ಕರಿಸಿ, ಅರ್ಜುನನ್ನು ಆಲಿಂಗಿಸಿ ಆನೆಯನ್ನು ಸಿಂಹವು

ಹಿಡಿಯುವಂತೆ ಅವನ ವಕ್ಷಸ್ಥಲದಲ್ಲಿ ಹಿಡಿದರು. ಜಗ್ಗಿ, ಕೆಡವಿ, ಬೆನ್ನಿನಲ್ಲಿ ತಮ್ಮ ಮೊಣಕಾಲನ್ನೂರಿ, ಟೊಂಕದ ಮೂಲ ಪ್ರದೇಶವನ್ನು ಮುರಿದು, ಹುಟ್ಟುವಾಗ ಎರಡು ಹೋಳುಗಳಿರುವಂತೆ ಈಗ ಮರಣ ಸಮಯದಲ್ಲಿಯೂ ಎರಡು ಹೋಳುಗಳನ್ನಾಗಿಯೇ ಮಾಡಿದರು. ಕಟಿಪ್ರದೇಶವು ಬಿರುಸುಪ್ರದೇಶವು, ಕೋಮಲವಾದ ಮರ್ಮಸ್ಥಾನಗಳನ್ನು ಬಿಟ್ಟು ಅಂಥ ಬಿರುಸು ಸ್ಥಾನದಲ್ಲಿ ಹೊಡೆದು ತಮ್ಮ ಅಮಿತಶಕ್ತಿಯನ್ನು ಪ್ರಕಟಪಡಿಸುವದಕ್ಕಾಗಿ ಹಾಗೆ ಮಾಡಿದರು. ಅವನ ಶರೀರವು ಮುರಿಯುತ್ತಿರುವಾಗ ಬ್ರಹ್ಮಾಂಡಸ್ಫೋಟವಾಗುತ್ತಿರುವಂತೆ ಧ್ವನಿಯಾಯಿತು. ಅದರಿಂದ ಎಲ್ಲ ಜಗತ್ತೇ ಭೀತವಾಯಿತು. ಹೀಗೆ ಶ್ರೀಭೀಮಸೇನದೇವರು ಶ್ರೀಕೃಷ್ಣದ್ವೇಷಿಯಾದ, ದುಷ್ಟನಾದ ಜರಾಸಂಧನನ್ನು ಶ್ರೀಕೃಷ್ಣನ ಎದುರೇ ಸಂಹರಿಸಿ, ಅವನ ಪಾದಕ್ಕೆ ನಮಿಸಿ ಆ ಪೂಜೆಯನ್ನರ್ಪಿಸಿದರು. ಆ ಪೂಜೆಯನ್ನು ಸ್ವೀಕರಿಸುವದಕ್ಕಾಗಿಯೇ ಶ್ರೀಕೃಷ್ಣನು ಸ್ವತಃ ಬಂದಿದ್ದನು. ಈ ಸಂದರ್ಭದಲ್ಲಿ ಅರ್ಜುನನು ತುಂಬಾ ಸಂತೋಷದಿಂದ ಅಣ್ಣನಿಗೆ ನಮಸ್ಕರಿಸಿದನು. ಸರ್ವ ದೇವತೆಗಳು ಬಹು ಸಂತೋಷದಿಂದ ತಮ್ಮ ಲೋಕಗಳಿಗೆ ಹೋದರು, ಅಸುರರು ಜೋಲು ಮುಖವಾಡಿಕೊಂಡು ಹೋದರು.

ಸುತೋ ಯಯೌ ಶರಣಂ ತಾನ್ಸಮೇಶಭೀಮಾರ್ಜುನಾನ್ ಸಹದೇವೋsಸ್ಯ ಧೀಮಾನ್ ।
ರಥಂ ಸ್ವಸಾರಂ ಚ ದದೌ ಸ ಮಾರುತೇ ರ್ನನಾಮ ಕೃಷ್ಣಂ ಪರಯಾ ಚ ಭಕ್ತ್ಯಾ ॥೧೮೯॥

ಅಸ್ಯ ಸುತಃ—ಈ ಜರಾಸಂಧನ ಮಗನಾದ, ಧೀಮಾನ್—ವಿವೇಕಿಯಾದ, ಸಹದೇವ: – ಸಹದೇವನು, ತಾನ್ ರಮೇಶಭೀಮಾರ್ಜುನಾನ್ – ಆ ಶ್ರೀಕೃಷ್ಣಭೀಮಾರ್ಜುನರನ್ನು, ಶರಣಂ ಯಯೌ — ಮೊರೆಹೊಂದಿದನು, ಸಃ – ಅವನು, ರಥಂ—ರಥವನ್ನು, ಸ್ವಸಾರಂ ಚ ತನ್ನ ಸೋದರಿಯನ್ನೂ ಕೂಡ, ಮಾರುತೇ: —ಶ್ರೀ ಭೀಮಸೇನದೇವರಿಗೆ, ದದೌ – ಕೊಟ್ಟನು. ಚ – ಮತ್ತು, ಕೃಷ್ಣಂ—ಶ್ರೀಕೃಷ್ಣನನ್ನು, ಪರಯಾ ಭಕ್ತ್ಯಾ – ಶ್ರೇಷ್ಠಭಕ್ತಿಯಿಂದ, ನನಾಮ – ನಮಸ್ಕರಿಸಿದನು. ॥೧೮೯॥

ಅವತಾರಿಕೆ: — ಆ ರಥವು ಯಾರದು? ಎಲ್ಲಿಗೆ ಹೇಗೆ ಬಂದಿತ್ತು? ಅದನ್ನು ಶ್ರೀಭೀಮರು ಏನು ಮಾಡಿದರು?

ಎಂಬುದನ್ನು ತಿಳಿಸುತ್ತಾರೆ.

ರಥೋ ಹ್ಯಸೌ ವಸುನಾ ವಾಸುದೇವಾಚ್ಛಕ್ರಾಂತರಾಪ್ತೋ ವಸುವಂಶಜತ್ವಾತ್ ।
ಜರಾಸುತಸ್ಯಾಸ ವೃಕೋದರಸ್ತಂ ಹರೇ ರಥಂ ಪ್ರಾರ್ಪಯಾಮಾಸ ತಸ್ಮೈ ॥೧೯೦॥

ಅಸೌ ರಥಃ—ಆ ರಥವು, ವಾಸುದೇವಾತ್ — ಶ್ರೀನಾರಾಯಣದೇವರ ದೆಸೆಯಿಂದ, ಶಕ್ರಾಂತರಾ – ದೇವೇಂದ್ರನ ದ್ವಾರಾ, ವಸುನಾ ಆಪ್ತ: – ವಸುರಾಜನಿಂದ ಹೊಂದಲ್ಪಟ್ಟಿತ್ತು. ವಸು.ವಂಶಜತ್ವಾತ್ – ವಸುವಂಶದಲ್ಲಿ ಹುಟ್ಟಿದವನಾದ್ದರಿಂದ, ಜರಾಸುತಸ್ಯ ಆಸ—ಜರಾಸಂಧನಿಗೆ ಇತ್ತು. ತಂ ಹರೇಃ ರಥಂ – ಹಾಗೆ ಜರಾಸಂಧನಿಗೆ ಬಂದಂಥ ಆ ಶ್ರೀಹರಿಯ ರಥವನ್ನು, ವೃಕೋದರಃ – ಭೀಮಸೇನದೇವರು, ತಸ್ಮೈ — ಶ್ರೀಕೃಷ್ಣಪರಮಾತ್ಮನಿಗೆ, ಪ್ರಾರ್ಪಯಾಮಾಸ – ಸಮರ್ಪಿಸಿದರು. ॥೧೯೦॥

ಕೃಷ್ಣೋsಸ್ಮರದ್ಗರುಡಂ ಸ ಧ್ವಜೇsಭೂದ್ರಥಂ ಕೃಷ್ಣೋsಥಾರುಹತ್ಪಾಂಡವಾಭ್ಯಾಮ್ ।
ಭೀಮಃ ಕನ್ಯಾಂ ಸಹದೇವಸ್ಯ ಹೇತೋರ್ಜಗ್ರಾಹೇದನುಜಸ್ಯಾsತ್ಮನಸ್ಸಃ ॥೧೯೧॥

ಕೃಷ್ಣಃ—ಶ್ರೀಕೃಷ್ಣನು, ಗರುಡಂ – ಗರುಡನನ್ನು, ಅಸ್ಮರತ್—ಸ್ಮರಿಸಿದನು, ಸ: – ಆ ಗರುಡನು, ಧ್ವಜೇ—ರಥದ ಧ್ವಜದಲ್ಲಿ. ಅಭೂತ್ – ಸೇರಿದನು ಅಥ – ನಂತರ, ಕೃಷ್ಣ:—ಶ್ರೀಕೃಷ್ಣನು, ಪಾಂಡವಾಭ್ಯಾಂ (ಸಹಿತಃಸನ್)—ಭೀಮಾರ್ಜುನರಿಂದ (ಸಹಿತನಾಗಿ). ರಥಂ ರಥವನ್ನು, ಅರುಹತ್ – ಏರಿದನು, ಸ: ಭೀಮಃ—

ಆ ಭೀಮಸೇನದೇವರು, ಕನ್ಯಾಂ — (ಜರಾಸಂಧನ ಮಗಳಾದ) ಆ ಕನ್ಯೆಯನ್ನು, ಆತ್ಮನಃ — ತನ್ನ, ಅನುಜಸ್ಯ ಸಹದೇವಸ್ಯ ಹೇತೋಃ — ತಮ್ಮನಾದ ಸಹದೇವನ ಕಾರಣಕ್ಕಾಗಿ, ಸಮಗ್ರಹೀತ್ — ಸ್ವೀಕರಿಸಿದನು. ॥೧೭೧॥

ನಕುಲಸ್ಯಾದಾನ್ಮದ್ರ ರಾಜೋ ಹಿ ಪೂರ್ವಂ ಸ್ವೀಯಾಂ ಕನ್ಯಾಂ ಸಾ ತಥೈಷಾಪ್ಯುಷಾ ಹಿ ।
ಏಕಾ ಪೂರ್ವಂ ತೇऽಶ್ವಿನೋಶ್ಚೈವ ಭಾರ್ಯಾ ಯಮೌ ರೇವಾತೇ ಯದುಷಾ
ಅಶ್ವಿಭಾರ್ಯಾ ॥೧೭೨॥

ಪೂರ್ವಂ — ಈ ಮೊದಲು: ಮದ್ರರಾಜಃ ಶಲ್ಯರಾಜನು, ಸ್ವೀಯಾಂ ಕನ್ಯಾಂ — ತನ್ನ ಮಗಳನ್ನು, ನಕುಲಸ್ಯ — ನಕುಲನಿಗೆ, ಅದಾತ್ ಹಿ — ಕೊಟ್ಟಿದ್ದನು. ಸಾ — ಅವಳು, ತಥಾ — ಹಾಗು, ಏಷಾ ಅಪಿ — ಸಹದೇವನಿಗಾಗಿ ಭೀಮಸೇನದೇವರು ಸ್ವೀಕರಿಸಿದ ಜರಾಸಂಧನ ಮಗಳು, ಇತಿ ತೇ ಉಭೇ — ಈ ರೀತಿ ಅವರಿಬ್ಬರು. ಪೂರ್ವಂ — ಮೂಲ ರೂಪದಲ್ಲಿ, ಅಶ್ವಿನೋಃ ಭಾರ್ಯಾ — ಅಶ್ವಿನೀ ದೇವತೆಗಳ ಪತ್ನಿಯಾದ, ಏಕಾ ಉಷಾಃ ಹಿ — ಒಬ್ಬಳಾದ (ಉಷಸ್ಸೇ) ಉಷೆಯೇ ಆಗಿರುವರು, ತಾಭ್ಯಾಂ — ಅಂಥ ಅವರಿಬ್ಬರಿಂದ ಕೂಡಿಕೊಂಡು, ಯಮೌ — ಯಮಳರಾದ ನಕುಲಸಹದೇವರು, ರೇವಾತೇ — ವಿಹರಿಸುತ್ತಿದ್ದರು, ಯತ್ — ಯಾವ ಕಾರಣದಿಂದ, ಉಷಾಃ — ಉಷಸ್ ಎಂಬ ಹೆಸರುಳ್ಳವಳು. ಅಶ್ವಿಭಾರ್ಯಾ — ಅಶ್ವಿನಿ ದೇವತೆಗಳ ಹೆಂಡತಿಯೋ, (ತತ್ — ಆದ್ದರಿಂದ) ದ್ವಿರೂಪಾ ಜಾತಾ — ಎರಡು ರೂಪಳಾದಿ ಹುಟ್ಟಿದಳು. ॥೧೭೨॥

ತತಃ ಕೃಷ್ಣಾಯಾಮಗ್ರ ಜಭ್ರಾತೃಭಾರ್ಯಾವೃತ್ತಿಂ ಹಿ ತೌ ಚಕ್ರತುರ್ಮಾದ್ರಿಪುತ್ರೌ ।
ಜರಾಸುತಸ್ಯಾತ್ಮಜಃ ಕೇಶವಾದೀನ್ ರತ್ನೈಸ್ಸಮಭ್ಯರ್ಚ್ಯ ಯಯಾವನುಜ್ಞಯಾ ॥೧೭೩॥

ತತಃ — ಸಹದೇವನು ಈ ಜರಾಸಂಧಪುತ್ರಿಯನ್ನು ಹೊಂದಿದನಂತರ, ತೌ ಮಾದ್ರಿಪುತ್ರೌ — ಮಾದ್ರಿತನಯರಾದ ಆ ನಕುಲಸಹದೇವರು, ಕೃಷ್ಣಾಯಾಂ — ದ್ರೌಪದೀದೇವಿಯ ಬಗ್ಗೆ, ಅಗ್ರಜಭಾರ್ಯಾವೃತ್ತಿಂ ಹಿ — ಅಣ್ಣನ ಹೆಂಡತಿಯಂತೆ ನಡತೆಯನ್ನೇ, ಚಕ್ರತುಃ — ಮಾಡಿದರು, ಜರಾಸುತಸ್ಯ ಆತ್ಮಜಃ — ಜರಾಸಂಧನ ಮಗನಾದ ಸಹದೇವನು, ಕೇಶವಾದೀನ್ — ಶ್ರೀಕೃಷ್ಣ ಮೊದಲಾದ ಮೂವರನ್ನು, ರತ್ನೈಃ ಸಮಭ್ಯರ್ಚ್ಯ — ರತ್ನಗಳಿಂದ ಪೂಜಿಸಿ, (ತೇಷಾಂ — ಅವರ), ಅನುಜ್ಞಯಾ — ಅಪ್ಪಣೆಯಂತೆ, (ಗೃಹಂ — (ರಣಭೂಮಿಯಿಂದ)ಮನೆಗೆ), ಯಯೌ — ಹೋದನು, ॥೧೭೩॥

ತದಾಜ್ಞಯಾ ಪಿತೃಕಾರ್ಯಾಣಿ ಕೃತ್ವಾ ತದಾಜ್ಞಯೈವಾऽऽ (ಮುಚತ್ತಾ)
ದಿಶತ್ತಾನ್ನೃಪಾಂಶ್ಚ ।
ತೈ ಸ್ಸಂಸ್ತುತಃ ಕೇಶವೋ ಭೀಮಪಾರ್ಥಯುಕ್ತೋ(ದೃಷ್ಟ್ವಾ) ಭಕ್ತಿನಮ್ರೈ-
ರ್ಯಥಾವತ್ ॥೧೭೪॥

(ಸಹದೇವಃ — ಆ ಸಹದೇವನು), ತದಾಜ್ಞಯಾ — ಶ್ರೀಕೃಷ್ಣನ ಆಜ್ಞೆಯಿಂದ, ಪಿತೃಕಾರ್ಯಾಣಿ — ಪಿತೃಕಾರ್ಯಗಳನ್ನು, ಕೃತ್ವಾ — ಮಾಡಿ, ತದಾಜ್ಞಯಾ ಏವ — ಆ ಶ್ರೀಕೃಷ್ಣನ ಅಪ್ಪಣೆಯಂತೆಯೇ, ತಾನ್ ನೃಪಾನ್ ಚ — ಜರಾಸಂಧನು ಶೈವಯಾಗಕ್ಕಾಗಿ ಪಶುಗಳನ್ನಾಗಿಟ್ಟುಕೊಂಡಿದ್ದ ಆ ರಾಜರನ್ನೂ ಕೂಡ (ಅಮುಂಚತ್ — ಬಂಧನದಿಂದ ಬಿಡಿಸಿದನು,) ಅದಿಶತ್ — ಶ್ರೀಕೃಷ್ಣನಿಗೆ ಒಪ್ಪಿಸಿದನು, ಭಕ್ತಿನಮ್ರೈಃ ತೈಃ ಸಂಸ್ತುತಃ — ಆ ಭಕ್ತಿ ನಮ್ರರಾದ ರಾಜರಿಂದ (ದೃಷ್ಟ್ವಾ — ನೋಡಿ) ಭೀಮಪಾರ್ಥಯುಕ್ತಃ ಕೇಶವಃ — ಭೀಮಾರ್ಜುನರಿಂದ ಸಹಿತನಾದ ಶ್ರೀಕೃಷ್ಣನು, ಯಥಾವತ್-ಸಂಸ್ತುತಃ — (ಚೆನ್ನಾಗಿ ಯಥಾಯೋಗ್ಯವಾಗಿ ಸ್ತುತಿಸಲ್ಪಟ್ಟನು,) ಚೆನ್ನಾಗಿ ಸ್ತುತಿಸಲ್ಪಟ್ಟವನಾಗಿ, ಯಯೌ — ಹೊರಟಿನು ॥೧೭೪॥

ಸಂಭಾವಿತಾಸ್ತೇ ಸಹದೇವೇನ ಸಮ್ಯಕ್ಪ್ರಶಸ್ಯಕೃಷ್ಣಂ ಭೀಮಸೇನಂ ಚ ಸರ್ವೇ ।
ಯಯುರ್ಗೃಹಾನ್ ಸ್ವಾನಪತತ್ಕೇಶವದ್ವಿಟ್ ಜರಾಸುತೋಽಂಧೇ ತಮಸಿ ಕ್ರಮೇಣ ॥೧೭೫॥

ಸಹದೇವೇನ—ಮಾಗಧಸಹದೇವನಿಂದ, ಸಂಭಾವಿತಾಃ—ಮರ್ಯಾದಿಸಲ್ಪಟ್ಟ, ತೇ ಸರ್ವೇ—ಆ ಎಲ್ಲ ರಾಜರೂ, ಕೃಷ್ಣಂ ಭೀಮಸೇನಂ ಚ-ಶ್ರೀಕೃಷ್ಣನನ್ನೂ ಹಾಗು ಭೀಮಸೇನನನ್ನೂ ಕೂಡ, ಸಮ್ಯಕ್ ಪ್ರಶಸ್ಯ-ಚೆನ್ನಾಗಿ ಪ್ರಶಂಸಿಸಿ, ಸ್ವಾನ್ ಗೃಹಾನ್—ತಮ್ಮ ಮನೆಗಳಿಗೆ, ಯಯುಃ—ಹೋದರು. ಕೇಶವದ್ವಿಟ್ ಜರಾಸುತಃ—ಶ್ರೀಕೃಷ್ಣ ದ್ವೇಷಿಯಾದ ಜರಾಸಂಧನು, ಕ್ರಮೇಣ ಕ್ರಮವಾಗಿ ನರಕಗಳನ್ನು ಭೋಗಿಸಿ, ಅಂಧೇ ತಮಸಿ—ಅಂಧತಮಸ್ಸಿನಲ್ಲಿ, ಅಪತತ್—ಬಿದ್ದನು. ॥೧೭೫॥

ಕೃಷ್ಣಶ್ಚ ಪಾರ್ಥೌ ಚ ತಥೈಕಯಾನಂ ಸಮಾಸ್ಥಿತಾ ಧರ್ಮಜಮಭ್ಯಗಚ್ಛನ್ ।
ತೇಷಾಂ ಶಂಖಧ್ವನಿಸಂಬೋಧಿತಾತ್ಮಾ ರಾಜಾ ಪ್ರೀತಶ್ಚಾತಿತರಾಂ ಬಭೂವ ॥೧೭೬॥

ಕೃಷ್ಣಃ—ಶ್ರೀಕೃಷ್ಣನು, ಚ—ಮತ್ತು ಪಾರ್ಥೌ ಚ—ಭೀಮಾರ್ಜುನರೂ ಕೂಡ, ಏಕಯಾನಂ—ಒಂದೇ ರಥವನ್ನು ಸಮಾಸ್ಥಿತಾಃ ಸಂತಃ—ಏರಿದವರಾಗಿ, ಧರ್ಮಜಂ-ಧರ್ಮರಾಜನ ಹತ್ತಿರ, ಅಭ್ಯಗಚ್ಛನ್ ಹೋದರು. ತೇಷಾಂ-ಆವೀರವರ-ಶಂಖಧ್ವನಿಸಂಬೋಧಿತಾತ್ಮಾ—ಶಂಖಧ್ವನಿಯಿಂದ (ಜರಾಸಂಧನನ್ನು ಸಂಹರಿಸಿಕೊಂಡು ಬಂದಿದ್ದಾರೆ, ಎಂದು) ನಿಶ್ಚಯವಾಗಿ ತಿಳಿಸಲ್ಪಟ್ಟ ಮನಸ್ಸುಳ್ಳಂಥ, ರಾಜಾ-ಧರ್ಮರಾಜನು, ಅತಿತರಾಂ ಪ್ರೀತಃ-ಅತ್ಯಂತಸಂತುಷ್ಟನು, ಬಭೂವ-ಆದನು. ॥೧೭೬॥

ದ್ವೈಪಾಯನೋಽಥ ಭಗವಾನಭಿಗಮ್ಯ ಪಾರ್ಥಾನಾಜ್ಞಾಪಯತ್ಸಕಲಸಂಭೃತಿಸಾಧನಾಯ।
ತಂ ರಾಜಸೂಯಸಹಿತಂ ಪರಮಾಶ್ವಮೇಧಯಜ್ಞಂಸಮಾದಿಶದನನ್ಯಕೃತಂ ವಿರಿಂಚಾತ್ ॥೧೭೭॥

ಅಥ—ಇವರು ಮೂವರು ಬಂದನಂತರ, ಭಗವಾನ್ ದ್ವೈಪಾಯನಃ—ಭಗವಂತನಾದ ವೇದವ್ಯಾಸದೇವರು, ಪಾರ್ಥಾನ್ ಅಭಿಗಮ್ಯ—ಪಾಂಡವರ ಹತ್ತಿರಬಂದು, ಸಕಲಸಂಭೃತಿಸಾಧನಾಯ—ಯಜ್ಞದ ಎಲ್ಲಸಂಭಾರ (ಸಾಮಗ್ರಿ)ಗಳ ಸಂಪಾದನೆಗಾಗಿ ಆಜ್ಞಾಪಯತ್—ಆಜ್ಞಾಪಿಸಿದರು. ವಿರಿಂಚಾತ್ ಅನನ್ಯಕೃತಂ—ಬ್ರಹ್ಮದೇವರಿಂದ ಬೇರೆಯವರಿಂದ ಮಾಡಲ್ಪಡದೇ ಇದ್ದ, ರಾಜಸೂಯಸಹಿತಂ—ರಾಜಸೂಯಯಾಗದಿಂದ ಸಹಿತವಾದ, ತಂ—ಚತುರ್ಮುಖಪದವಿ ಹೊಂದುವದರಿಂದ ಮಾಡಲು ಯೋಗ್ಯವಾದ, ಪರಮಾಶ್ವಮೇಧಂ—ಶ್ರೇಷ್ಠವಾದ ಉತ್ತಮಕಲ್ಪದ ಅಶ್ವಮೇಧಯಾಗವನ್ನು, ಆದಿಶತ್—ಮಾಡಲು ಆಜ್ಞಾಪಿಸಿದರು. ॥೧೭೭॥

ಕರ್ತಾಹಿತಸ್ಯ ಪರಮೇಷ್ಠಿಪದಂ ಪ್ರಯಾತಿಯದ್ಮನ್ಯಸುದ್ಗುಣವರ್ಯೈಃ ಪರಮೇಷ್ಠಿತುಲ್ಯಃ ।
ಭೀಮೋ ಮಖಸ್ಯ ಫಲಮುಪ್ಯಧಿಕಂ ವಿಧಾತುಂ ವ್ಯಾಸಃಕ್ರತುಂ ತಮುದಿಶದ್ಗುರುರಬ್ಜಜಸ್ಯ॥೧೭೮॥

ತಸ್ಯಕರ್ತಾ — ಆ ಯಾಗವನ್ನುಮಾಡಿದವನು, ಯದಿ—ಒಂದುವೇಳೆ, ಅನ್ಯಸದ್ಗುಣವರ್ಯೈಃ— ಜ್ಞಾನಭಕ್ತಿ ಮೊದಲಾದ ಬೇರೆ ಸದ್ಗುಣಗಳದೃಷ್ಟಿಯಿಂದ, ಪರಮೇಷ್ಠಿತುಲ್ಯಃ—ಬ್ರಹ್ಮದೇವರಸದೃಶನಾಗಿದ್ದರೆ, ಹಿ-ಯಾವಕಾರಣದಿಂದ, ಪರಮೇಷ್ಠಿಪದಂ—ಬ್ರಹ್ಮಪದವಿಯನ್ನು ಪ್ರಯಾತಿ—ಹೊಂದುವನೋ (ತಸ್ಮಾತ್—ಆ ಕಾರಣದಿಂದ, ಭೀಮೋ—ಉಳಿದ ಗುಣಗಳಿಂದ ಪರಮೇಷ್ಠಿಸದೃಶರಾದ ಭೀಮಸೇನದೇವರಿಗೆ, ಮಖಸ್ಯ—ರಾಜಸೂಯಾಶ್ವಮೇಧಯಾಗದ, ಅಧಿಕ ಫಲಂ—ಪೂರ್ಣವಾದ ಚತುರ್ಮುಖಬ್ರಹ್ಮಪದವಿಯ ಪ್ರಾಪ್ತಿಯನ್ನು, ವಿಧಾತುಂ—ಮಾಡಲು ತಂ ಕ್ರತುಂ—ಆ ಯಾಗಮಾಡುವದನ್ನು ಅಬ್ಜಜಸ್ಯಗುರುಃ ವ್ಯಾಸಃ—ಬ್ರಹ್ಮದೇವರ ಗುರುಗಳಾದ ವೇದವ್ಯಾಸರು, ಆದಿಶತ್—ಆಜ್ಞಾಪಿಸಿದರು ॥೧೭೮॥

ಅಸಾಧಾರಣಹೇತುರ್ಯಃ ಕರ್ಮಣೋ ಯಸ್ಯ ಚೇತನಃ ।
ಸ ಏವ ತತ್ಫಲಂ ಪೂರ್ಣಂಭುಂಕ್ತೇ ನ್ಯೋಽಲ್ಪಮಿತಿ ಸ್ಥಿತಿಃ ॥೧೭೯॥

ಯಸ್ಯಕರ್ಮಣಃ — ಯಾವಕರ್ಮಕ್ಕೆ ಯಃ - ಯಾವನು, ಅಸಾಧಾರಣಹೇತುಃ—ಮುಖ್ಯ (ಅಸಾಧಾರಣ) ಕಾರಣನಾಗುವನೋ ಸಃ ಚೇತನ:ಏವ—ಆ ಚೇತನನೇ, ತತ್ಫಲಂ ಆ ಕರ್ಮಫಲವನ್ನು, ಪೂರ್ಣಂ ಭುಂಕ್ತೇ — ಪೂರ್ಣವಾಗಿ ಹೊಂದುವನು. ಅನ್ಯಃ —ಮುಖ್ಯಕಾರಣನಲ್ಲದವನು, ಅಲ್ಪಂ — ಅಲ್ಪಫಲವನ್ನು ಭುಂಕ್ತೇ— ಹೊಂದುವನು, ಇತಿ—ಎಂದು ಸ್ಥಿತಿಃ—(ವಸ್ತುಸ್ಥಿತಿಯು) ಶಾಸ್ತ್ರದ ನಿರ್ಣಯವು ॥೧೭೯॥

ಅವತಾರಿಕೆ — ಹಾಗಾದರೆ ವಿಷ್ಣುವೇ ಸರ್ವಕರ್ಮಗಳ ಮುಖ್ಯಪ್ರೇರಕನಾಗಿ ಮುಖ್ಯಕಾರಣನಾದ್ದರಿಂದ, ಆ ಕರ್ಮಗಳಫಲ ಮುಖ್ಯವಾಗಿ ಆ ವಿಷ್ಣುವಿಗೆ ಬರಬೇಕಲ್ಲ? ಎಂಬಪ್ರಶ್ನೆಗೆ ಉತ್ತರ ಈ ಶ್ಲೋಕವಾಗಿದೆ—

ವಿನಾ ವಿಷ್ಣುಂ ನಿರ್ಣಯೋಽಯಂ ಸ ಹಿ ಕರ್ಮಫಲೋಜ್ಝಿತಃ ।
ಹೇತವೋಽಪಿ ಹಿ ಪಾಪಸ್ಯ ನ ಪ್ರಾಯಃ ಫಲಭಾಗಿನಃ ॥೧೮೦॥

ದೇವಾಃ ಪುಣ್ಯಸ್ಯ ದೈತ್ಯಾಶ್ಚ ಮಾನುಷಾಸ್ತ್ವಿಭಾಗಿನಃ ।
ಅಸಾಧಾರಣಹೇತುಶ್ಚ ಭೀಮ ಏವ ಪ್ರಕೀರ್ತಿತಃ ॥೧೮೧॥

ಯಜ್ಞಸ್ಯಾಸ್ಯ ಜರಾಸಂಧವಧಾತ್ಕರ್ಣಜಯಾದಪಿ ।
ಜಯಾಚ್ಚ ಕೀಚಕಾದೀನಾಮನ್ಯೈರ್ಜೇತುಮಶಕ್ಯತಃ ॥೧೮೨॥

ದ್ವಿತೀಯಃ ಫಲ್ಗುನಶ್ಚೈವ ತೃತೀಯಸ್ತು ಯುಧಿಷ್ಠಿರಃ ।
ತಸ್ಮಾದ್ಬ್ರಹ್ಮಪದಾವಾಪ್ತ್ಯೈ ವ್ಯಾಸೋ ಭೀಮಸ್ಯ ತಂ ಕ್ರತುಮ್।
ಅನನ್ಯಕೃತಮಾದಿಶ್ಯ ದಿಶಾಂ ವಿಜಯಮಾದಿಶತ್ ॥೧೮೩॥

ಅಮುಂನಿರ್ಣಯಂ:-ಮೇಲೆ ಹೇಳಿದ ನಿರ್ಣಯವು, ವಿಷ್ಣುಂವಿನಾ—ವಿಷ್ಣುವನ್ನು ಬಿಟ್ಟು ಉಳಿದವರಿಗೆ ಅನ್ವಯಿಸುವದು ವಿಷ್ಣುವಿಗೆ ಸಂಬದ್ಧವಲ್ಲ. ಹಿ — ಏಕೆಂದರೆ, ಸಃ — ಅವನು, ಕರ್ಮಫಲೋಜ್ಝಿತಃ:—ಕರ್ಮಫಲದೂರನು ದೇವಾ ;— ದೇವತೆಗಳು, ಪಾಪಸ್ಯ — ಪಾಪಕ್ಕೆ, ಹೇತವಃ — ಅಪಿ — ಪ್ರೇರಕರಾದಿ ಕಾರಣರಾದರೂಕೂಡ, ನ ಪ್ರಾಯಃಫಲಭಾಗಿನ:—ಬಹು ಪಾಪಫಲಭಾಗಿಗಳ. ದೈತ್ಯಾಃಚ — ದೈತ್ಯರೂಕೂಡ, ಪುಣ್ಯಸ್ಯ — ಪುಣ್ಯಕಾರ್ಯ ಮಾಡಿದಾಗ ಅದರಫಲವನ್ನು ಪೂರ್ಣ ಹೊಂದುವದಿಲ್ಲ. ಮಾನುಷಾ:ತು — ಮಧ್ಯಮ ಮನುಷ್ಯರುದ್ವಿಭಾಗಿನಃ — ಪುಣ್ಯಪಾಪ ಎರಡರ ಫಲವುಳ್ಳವರು, ಜರಾಸಂಧವಧಾತ್ — ಜರಾಸಂಧವಧವನ್ನುಮಾಡಿದ್ದರಿಂದ, ಕರ್ಣ ಜಯಾದಪಿ—ಕರ್ಣನ ಮೇಲೆ ಜಯ ಸಂಪಾದಿಸಿದ್ದರಿಂದಲೂ ಕೀಚಕಾದೀನಾಂ—ಕೀಚಕಾದಿಗಳ ಮೇಲೆ, ಜಯಾತ್ — ಜಯಸಂಪಾದನೆಯಿಂದಲೂ. ಅನ್ಯೈಃ—ಭೀಮಸೇನದೇವರಿಗಿಂತ ಬೇರೆಯವರಿಂದ, ಜೇತುಂ ಅಶಕ್ಯತಃ—ಇವರೆಲ್ಲರ ಮೇಲಿನ ಜಯ ಅಶಕ್ಯವಾದ್ದರಿಂದಲೂ, ಅಸ್ಯ ಯಜ್ಞಸ್ಯ — ಈ ರಾಜಸೂಯಾಶ್ವಮೇಧಯಾಗಕ್ಕೆ, ಅಸಾಧಾರಣಹೇತುಃ ಚ — ಅಸಾಧಾರಣಕಾರಣರು ಅತ್ರ (ಮುಖ್ಯಕಾರಣರು), ಭೀಮಃಏವ — ಭೀಮಸೇನದೇವರೇ ಎಂಬುದಾಗಿ, ಪ್ರಕೀರ್ತಿತಃ-ಹೇಳಲ್ಪಟ್ಟರುತ್ತಾರೆ. ದ್ವಿತೀಯಃ—ಎರಡನೆಯ ಕಾರಣರು, ಫಲ್ಗುನಃ—ಅರ್ಜುನರು, ತು —ಹಾಗು ತೃತೀಯಃ— ಮೂರನೆಯಕಾರಣರು, ಯುಧಿಷ್ಠಿರಃ — ಧರ್ಮರಾಜರು, ತಸ್ಮಾತ್ — ಹೀಗೆ ಭೀಮರೇ ಮುಖ್ಯಕಾರಣರಾದ್ದರಿಂದ, ಭೀಮಸ್ಯ - ಭೀಮಸೇನರಿಗೆ ಬ್ರಹ್ಮಪದಾವಾಪ್ತ್ಯೈ, — ಬ್ರಹ್ಮಪದಪ್ರಾಪ್ತಿ

ಗಾಂ, ವ್ಯಾಸಃ — ವೇದವ್ಯಾಸದೇವರು, ಅನನ್ಯಕೃತಂ — ಬ್ರಹ್ಮದೇವರಿಗಿಂದ ಬೇರೆಯವರಿಂದ ಮಾಡಲ್ಪಡದಿದ್ದಂಥ ತಂ ಕ್ರತುಂ —ಆ ಯಾಗವನ್ನು ಆದಿಶ್ಯ — ಮಾಡಲು ಆಪ್ಪಣೆಮಾಡಿ, ದಿಶಾಂವಿಜಯಂ-ದಿಗ್ವಿಜಯವನ್ನು (ಮಾಡಲು), ಆದಿಶತ್-ಆಜ್ಞಾಪಿಸಿದನು, ॥೧೪೦।೧೪೧॥೧೪೨॥೧೪೩॥

ಅಥಾಬ್ರವೀದ್ಧನಂಜಯೋ ಧನುರ್ಧ್ವಜೋ ರಥೋ ವರಃ ॥
ಮಮಾಸ್ತಿ ತದ್ದಿಶಾಂ ಜಯೋ ಮಮೈವ ವಾಂಛಿತಃ ಪ್ರಭೋ ॥೧೪೪॥

ಅಥ — ಹೀಗೆ ಶ್ರೀವೇದವ್ಯಾಸದೇವರು ಆಜ್ಞಾಪಿಸಿದ ನಂತರ, ಧನಂಜಯಃ — ಅರ್ಜುನನು, ಮಂ— ನನಗೆ, ಧನುಃಅಸ್ತಿ — ಶ್ರೇಷ್ಠ ಗಾಂಡೀವ ಧನುಸ್ಸು ಇದೆ, ವರ: ಧ್ವಜಃ ಅಸ್ತಿರಥಃ ಚ — ಶ್ರೇಷ್ಠವಾದ ಧ್ವಜ ರಥಗಳೂ ಕೂಡ ಇವೆ, ತತ್—ಆದ್ದರಿಂದ, ಪ್ರಭೋ — ಸ್ವಾಮಿಯಾದ ಶ್ರೀವ್ಯಾಸದೇವರೇ, ದಿಶಾಂವಿಜಯಃ — ದಿಗ್ವಿಜಯ ಮಮವಿವ ವಾಂಛಿತಃ — ನಾನೇ ಮಾಡಬೇಕೆಂದು ಆಪೇಕ್ಷಿಸಲ್ಪಟ್ಟಿದೆ. ಇತಿ ಅಬ್ರವೀತ್ —ಎಂದು ಹೇಳಿದನು. ॥೧೪೪॥

ಇತೀರಿತೋಖಿಲಪ್ರಭುರ್ಜಗಾದ ಸತ್ಯಮುಸ್ತಿ ತೇ ।
ಸಮಸ್ತ ಸಾಧನೋನ್ನತಿರ್ಮಹಚ್ಚ ವೀರ್ಯಮುಸ್ತಿ ತೇ ॥೧೪೫॥

ಇತಿ ಈರಿತಃ ಅಖಿಲಪ್ರಭುಃ — ಹೀಗೆ ಅರ್ಜುನನಿಂದ ಪ್ರಾರ್ಥಿಸಲ್ಪಟ್ಟ ಜಗತ್ಸ್ವಾಮಿಯಾದ ಶ್ರೀವೇದವ್ಯಾಸದೇವರು, ಸತ್ಯಂ — ನಿಜ, ತೇ — ನಿನಗೆ, ಸಮಸ್ತಸಾಧನೋನ್ನತಿಃ ಅಸ್ತಿ — ಎಲ್ಲ ಸಾಧನ ಸಾಮಗ್ರಿಗಳ ಉತ್ಕೃಷ್ಟತೆಯೂ ಇದೆ ಚ — ಮತ್ತು, ತೇ — ನಿನಗೆ, ಮಹತ್ವೀರ್ಯಂ—ಶ್ರೇಷ್ಠವಾದ ಪರಾಕ್ರಮವೂ, ಅಸ್ತಿ — ಇದೆ ॥೧೪೫॥

ತಥಾಽಪಿ ಕೀಚಕಾದಯೋ ವೃಕೋದರಾದೃತೇ ವಶಮ್ ।
ನ ಯಾಂತಿ ನಾಪಿ ತೇ ವಶಂ ಪ್ರಯಾತಿ ಕರ್ಣ ಏವ ಚ ॥೧೪೬॥

ತಥಾ ಅಪಿ - ಹಾಗಿದ್ದರೂ ಕೂಡ, ಕೀಚಕಾದಯಃ — ಕೀಚಕ ಮೊದಲಾದವರು, ವೃಕೋದರಾದೃತೇ — ಭೀಮಸೇನನನ್ನು ಬಿಟ್ಟು, ತೇ ವಶಂ ನ ಯಾಂತಿ — ನಿನ್ನ ಆಧೀನರಾಗುವದಿಲ್ಲ. ನಿನಗೆ ಸೋಲುವದಿಲ್ಲ, ಚ — ಹಾಗೂ, ಕರ್ಣಃ ಅಪಿ - ಕರ್ಣನೂ ಕೂಡ, ತೇ ವಶಂ ನ ಪ್ರಯಾತಿ ಏವ—ನಿನ್ನ ಆಧೀನತೆಯನ್ನು ಹೊಂದುವದೇ ಇಲ್ಲ ॥೧೪೬॥

ಬಲಾಧಿಕೋಽಸಿ ಕರ್ಣತಸ್ತಥಾಽಪಿ ನಾಮೃತಃ ಕರಮ್ ।
ದದಾತಿ ತೇ ಹ್ಯತಿಸ್ಪೃಧಾ ನ ವಧ್ಯ ಏಷ ತೇಽದ್ಯ ಚ ॥೧೪೭॥

(ತ್ವಂ - ನೀನು,) ಕರ್ಣತಃ — ಕರ್ಣನಿಗಿಂತ, ಬಲಾಧಿಕಃ ಅಸಿ — ಬಲಿಷ್ಠನಿರುವಿ, ತಥಾಪಿ — ಆದರೂಕೂಡ ಅಮೃತಃ - ಸಾಯದ, ಜೀವಿಸಿರುವ ಕರ್ಣನು, ಅತಿಸ್ಪೃಧಾ — ಸ್ಪರ್ಧಾತಿಶಯದಿಂದ. ತೇ—ನಿನಗೆ. ಕರಮ್ - ಕರವನ್ನು, ನ ದದಾತಿ — ಕೊಡುವದಿಲ್ಲ. ಹಾಗಾದರೆ ಅವನನ್ನು ಸಂಹರಿಸಿಬಿಡುವೆನು ಎಂದು ಅರ್ಜುನನು ಶಂಕಿಸಿದರೆ ಅದಕ್ಕೆ ಹೇಳುತ್ತಾರೆ — ಏಷಃ — ಈ ಕರ್ಣನು, ಅದ್ಯ — ಇಂದು, ಈಗ ಸಧ್ಯಕ್ಕೆ, ತೇ — ನಿನ್ನಿಂದ, ವಧ್ಯಃ ಚ ನ — ಸಂಹರಿಸಲು ಯೋಗ್ಯನೂ ಅಲ್ಲ. ॥೧೪೭॥

ಸವರ್ಮಕುಂಡಲತ್ವತೋ ನ ವಧ್ಯ ಏಷ ಯುತ್ತ್ವಯಾ ।
ತತೋ ವೃಕೋದರೋ ದಿಶಂ ಪ್ರಯಾತು ತೇ ಪಿತುಃ ಪ್ರಿಯಾವಹ್ ॥೧೪೮॥

ಯತ್ – ಯಾವ ಕಾರಣದಿಂದ, ಸವರ್ಮಕುಂಡಲತ್ವತ: – ಕವಚ ಕುಂಡಲ ಸಹಿತನಾದ್ದರಿಂದ, ಏಷ:— ಈ ಕರ್ಣನು, ತ್ವಯಾ ನ ವಧ್ಯ:—ನಿನ್ನಿಂದ ಸಂಹಾರ್ಯನಾಗುವದಿಲ್ಲವೋ, ತತ್—ಆ ಕಾರಣದಿಂದ, ವೃಕೋದರ:— ಭೀಮಸೇನನು, ತೇ ಪಿತು: –ನಿನ್ನ ತಂದೆ (ಮೂಲರೂಪಿ)ಯಾವ ಇಂದ್ರನಿಗೆ, ಪ್ರಿಯಾಂ ದಿಶಂ – ಪ್ರಿಯವಾದ ಪೂರ್ವ ದಿಕ್ಕಿಗೆ. ಪ್ರಯಾತು – (ದಿಗ್ವಿಜಯಕ್ಕಾಗಿ]ಹೋಗಲಿ. ॥೧೮೬॥

ಜೀವಗ್ರಾಹಭಯಾತ್ಕರ್ಣೋ ದದಾತಿ ಕರಮಂಜಸಾ ।
ಭೀಮಾಯ ನಾತ್ರ ಸಂದೇಹೋ ಜಿತೋsನೇನ ಚ ಸಂಯುಗೇ ॥೧೮೯॥

ಕರ್ಣ:—ಕರ್ಣನು, ಅನೇನ – ಈ ಭೀಮನಿಂದ, ಸಂಯುಗೇ – ಯುದ್ಧದಲ್ಲಿ, ಜಿತಃ ಸನ್ – ಸೋತವನಾಗಿ, ಜೀವಗ್ರಾಹಭಯಾತ್ – ಜೀವಂತ ಬಂಧಿಸುವನೋ ಎಂಬ ಭಯದಿಂದ, ಕರಂ – ಕರವನ್ನು, ಭೀಮಾಯ – ಭೀಮನಿಗೆ ಅಂಜಸಾ – ಅವಶ್ಯವಾಗಿ, ದದಾತಿ – ಕೊಡುವನು, ಅತ್ರ — ಈ ವಿಷಯದಲ್ಲಿ, ನ ಸಂದೇಹಃ – ಸಂಶಯವಿಲ್ಲ. ॥೧೮೯॥

ಅಜೇಯೌ ಶರ್ವವಚನಾದ್ರಣೇ ಕೀಚಕಪೌಂಡ್ರಕೌ ।
ವಶಂ ಪ್ರಯಾತೋ ಭೀಮಸ್ಯ ತಥಾsವಧ್ಯೋಪಿ ಚೇದಿಪ: ॥೧೯೦॥

ಶರ್ವವಚನಾತ್ – ರುದ್ರದೇವರ ವರದಿಂದ ರಣೇ ಅಜೇಯೌ—ಯುದ್ಧದಲ್ಲಿ ಯಾರಿಗೂ ಸೋಲದಂಥ, ಕೀಚಕಪೌಂಡ್ರಕೌ – ಕೀಚಕ ಹಾಗೂ ಪೌಂಡ್ರಕವಾಸುದೇವ ಇವರು, ಭೀಮಸ್ಯ ವಶಂ ಪ್ರಯಾತಃ – ಭೀಮನಿಗೆ ವಶರಾಗು ತ್ತಾರೆ, ತಥಾ – ಹಾಗು, ಅವಧ್ಯಃ ಚೇದಿಪಃ ಅಪಿ—ಭಗವಂತನ ವರದಿಂದ ಅವಧ್ಯನಾದ ಶಿಶುಪಾಲನೂ ಕೂಡ, ತಥಾ– ಕೀಚಕಾದಿಗಳ ಹಾಗೆ ಭೀಮವಶನಾಗುವನು. ॥೧೯೦॥

ಜೀವಗ್ರಾಹಭಯಂ ಹ್ಯೇಷಾಂ ಭೀಮಾನ್ಮಾಗಧಪಾತನಾತ್ ॥
ತಸ್ಮಾತ್ಕರಂ ಪ್ರಯಚ್ಛಂತಿ ಜಿತಾ ವಾ ಪೂರ್ವಮೇವ ವಾ ॥೧೯೧॥

ಹಿ—ಯಾವ ಕಾರಣದಿಂದ, ಏಷಾಂ—ಇವರೆಲ್ಲರಿಗೆ, ಮಾಗಧಪಾತನಾತ್—ಜರಾಸಂಧನ ಸಂಹಾರವನ್ನು ಮಾಡಿದ್ದ ರಿಂದ, ಭೀಮಾತ್ ಜೀವಗ್ರಾಹಭಯಂ – ಭೀಮನಿಂದ ಜೀವಂತ ಬಂಧಿತರಾಗುವೆವೋ ಎಂಬ ಭಯವಿದೆಯೋ, ತಸ್ಮಾತ್– ಆದ್ದರಿಂದ, ಜಿತಾಃ ವಾ – ಗೆಲ್ಲಲ್ಪಟ್ಟ (ಸೋತ)ವರಾಗಿ, ಪೂರ್ವಮೇವ ವಾ—ಅಥವಾ ಮೊದಲಿಗೇನೇ, ಕರಂಪ್ರಯಚ್ಛಂತಿ– ಕರವನ್ನು ಕೊಡುತ್ತಾರೆ. ॥೧೯೧॥

೧೬೯–೧೯೧ ಭಾವಾನುವಾದ

ಜರಾಸಂಧನ ಮಂಗನಾದ ಸಹದೇವನು ಶ್ರೀಕೃಷ್ಣಾದಿಗಳಿಗೆ ಶರಣಾಗತನಾಗಿ ಬಂದು, ತನ್ನ ಅಪ್ಪನ ಅಪರಾಧಕ್ಕೆ ತಾನು ಕ್ಷಮೆ ಕೇಳಿ, ಶ್ರೀಕೃಷ್ಣನನ್ನು ಬಹು ಭಕ್ತಿಯಿಂದ ನಮಿಸಿ ಭೀಮಸೇನದೇವರಿಗೆ ರಥವನ್ನು ಹಾಗೂ ತನ್ನ ತಂಗಿ ಯನ್ನು ಅರ್ಪಿಸಿದನು ಆ ರಥವು ಶ್ರೀನಾರಾಯಣದೇವರದೇ. ಇಂದ್ರದೇವರ ದ್ವಾರಾ ವಸುರಾಜನಿಗೆ ಬಂದಿತ್ತು. ಆ ಕುಲದಲ್ಲಿ ಹುಟ್ಟಿದ್ದರಿಂದ ಜರಾಸಂಧನಿಗೆ ಬಂದಿತ್ತು. ಅಂಥ ಆ ರಥವನ್ನು ಶ್ರೀಭೀಮಸೇನದೇವರು ಶ್ರೀಕೃಷ್ಣನಿಗೆ ಸಮ- ರ್ಪಿಸಿದರು. ಶ್ರೀಕೃಷ್ಣನು ಗರುಡನನ್ನು ಸ್ಮರಿಸಿದಾಗ ಅವನು ರಥದ ಧ್ವಜದಲ್ಲಿ ನೆಲೆಸಿದನು. ಆ ಕನ್ಯೆಯನ್ನು ಭೀಮರು

ತಮ್ಮ ತಪ್ಮನಾದ ಸಹದೇವನಿಗಾಗಿ ಸ್ವೀಕರಿಸಿದರು. ಅಶ್ವಿನೀದೇವತೆಗಳ ಪತ್ನಿಯಾದ ಉಷಸ್ ಎಂಬುವಳು ಈ ಭೂಮಿಯಲ್ಲಿ ಎರಡು ರೂಪದಿಂದ ಅವತರಿಸಿದ್ದಳು. ಅದರಲ್ಲಿ ಮದ್ರರಾಜನಾದ ಶಲ್ಯನ ಮಗಳಾಗಿ ಅವತರಿಸಿದ ಒಂದು ರೂಪವನ್ನು ಈ ಮೊದಲೇ ಶಲ್ಯನು ನಕುಲನಿಗೆ ಕೊಟ್ಟಿದ್ದನು. ಎರಡನೆಯ ರೂಪವು ಈ ಜರಾಸಂಧನ ಮಗಳು. ಇವಳನ್ನು ಸಹದೇವನು ಸ್ವೀಕರಿಸಿದನು. ಹೀಗೆ ತಮ್ಮ ಪತ್ನಿಯನ್ನು ಪ್ರತ್ಯೇಕವಾಗಿ ಹೊಂದಿದವಳೆ ಅವರಿಬ್ಬರು ದ್ರೌಪದೀದೇವಿಯನ್ನು ತಮ್ಮ ಹೆಂಡತಿಯೆಂದು ತಿಳಿಯದೇ ಅಣ್ಣನ ಹೆಂಡತಿ (ಅತ್ತಿಗೆ) ಎಂದು ತಿಳಿದು ಅದೇ ರೀತಿ ನಡೆಯುತ್ತಿದ್ದರು. ಮಾಗಧ ಸಹದೇವನು ಶ್ರೀಕೃಷ್ಣಾದಿಗಳನ್ನು ರತ್ನಗಳಿಂದ ಪೂಜಿಸಿ, ಅವರ ಅನುಜ್ಞೆಯಂತೆ ತನ್ನ ಊರಿನೊಳಗೆ ಬಂದು ಪಿತೃಕಾರ್ಯವನ್ನು ಮಾಡಿ, ತಂದೆಯಿಂದ ಬಂಧಿತರಾದ ರಾಜರನ್ನೆಲ್ಲ ಬಿಡಿಸಿದನು. ಸತ್ಕರಿಸಿದನು. ಅವರೆಲ್ಲರು ಬಂದು ಶ್ರೀಕೃಷ್ಣನನ್ನು, ಹಾಗು ಭೀಮಾರ್ಜುನರನ್ನು ಯಥಾಯೋಗ್ಯವಾಗಿ ಸ್ತುತಿಸಿ, ನಮಸ್ಕರಿಸಿ ತಮ್ಮ ರಾಜ್ಯಗಳಿಗೆ ಹೋದರು. ಶ್ರೀಕೃಷ್ಣದ್ವೇಷಿಯಾದ ಜರಾಸಂಧನು ಅನೇಕ ನರಕಗಳನ್ನು ಹೊಂದಿ ಕೊನೆಗೆ ಅಂಧತಮಿಸ್ರಕ್ಕೆ ಹೋಗುವನು. ಶ್ರೀಕೃಷ್ಣಭೀಮಾರ್ಜುನರು ಆ ರಥದಲ್ಲಿ ಆರೂಢರಾಗಿ ಇಂದ್ರಪ್ರಸ್ಥಕ್ಕೆ ಬಂದು ಶಂಖಧ್ವನಿಯನ್ನು ಮಾಡಿದಾಗ ಅದನ್ನು ಕೇಳಿದ ಯುಧಿಷ್ಠಿರನು ಇವರು ಮಾಗಧನನ್ನು ಕೊಂದು ಬಂದಿದ್ದಾರೆ ಎಂದು ನಿಶ್ಚಿತವಾಗಿ ತಿಳಿದು ಬಹಳ ಸಂತುಷ್ಟನಾದನು. ಅನಂತರ ಶ್ರೀವೇದವ್ಯಾಸದೇವರು ಬಂದು ಚತುರ್ಮುಖ ಬ್ರಹ್ಮಪದವಿಗೆ ಅರ್ಹನಾದವನನ್ನು ಆ ಪದವಿಯಲ್ಲಿಡತಕ್ಕ, ಬ್ರಹ್ಮದೇವರನ್ನು ಅವರಂಥವರನ್ನು ಬಿಟ್ಟು ಬೇರೆಯವರಿಗೆ ಮಾಡಲಶಕ್ಯವಾದ ರಾಜಸೂಯಾಶ್ವಮೇಧವನ್ನು ಆಜ್ಞಾಪಿಸಿ ಅದಕ್ಕೆ ಬೇಕಾದ ಸಾಧನ ಸಾಮಗ್ರಿಗಳನ್ನು ತಿಳಿಸಿ ಅವುಗಳ ಸಂಪಾದನೆ ಮಾಡಲು ಆಜ್ಞಾಪಿಸಿದರು. ಈ ಯಜ್ಞವನ್ನು ಮಾಡಿ ಭೀಮಸೇನದೇವರು ಆ ಬ್ರಹ್ಮಪದವಿಯನ್ನು ಹೊಂದಬೇಕು ಎಂಬ ಉದ್ದೇಶ ಶ್ರೀವ್ಯಾಸದೇವರಿಗಿತ್ತು. ಆ ಫಲವು ಶ್ರೀ ಭೀಮರಿಗೆ ಮಾತ್ರಸಿಗಲು ಶಕ್ಯವು. ಏಕೆಂದರೆ ಒಂದು ಕರ್ಮದ ಪ್ರಧಾನ ಕಾರಣರಾದವರು ಅದರ ಪೂರ್ಣಫಲವನ್ನು ಹೊಂದುವರು. ದೇವರನ್ನು ಬಿಟ್ಟು ಉಳಿದವರಿಗೆ ಈ ನಿಯಮವು. ಏಕೆಂದರೆ ಭಗವಂತನು ಪ್ರಧಾನ ಪ್ರೇರಕನಾಗಿ ಪ್ರಧಾನ ಕಾರಣನಾದರೂ ಕೂಡ ಅವನು 'ಅಸಂಗೋಹ್ಯಯಂ ಪುರುಷಃ' ಎಂಬ ಶ್ರುತಿಯಂತೆ ಕರ್ಮಫಲದೂರನು. ಪ್ರಕೃತ ಈ ಯಜ್ಞಕ್ಕೆ ಪ್ರಧಾನ ಕಾರಣರಾದವರು ಶ್ರೀಭೀಮಸೇನದೇವರು. ಏಕೆಂದರೆ ಈ ಯಜ್ಞವಾಡಲು ಮೊದಲು ಎಲ್ಲ ರಾಜರನ್ನು ಜಯಿಸಬೇಕು. ಅವರಲ್ಲಿ ಉಳಿದವರಿಗಾರಿಗೂ ಜಯಿಸಲಾಗದ ಜರಾಸಂಧನ ವಧೆ, ಕರ್ಣನ ಜಯ, ಕೀಚಕಾದಿಗಳ ಜಯವನ್ನು ಸಂಪಾದಿಸಿದ್ದರಿಂದ ಪಾಂಡವರೆಲ್ಲರಲ್ಲಿ ಪ್ರಧಾನರು ಭೀಮರು. ಇದೇ ರೀತಿ ಎರಡನೆಯ ಕಾರಣನು ಅರ್ಜುನನಾದರೆ, ಧರ್ಮರಾಜನು ಮೂರನೆಯ ಕಾರಣನು. ಇಷ್ಟು ಉದ್ದೇಶದಿಂದ ಆ ಯಜ್ಞದ ಆಚರಣೆಗಾಗಿ ಆಜ್ಞಾಪಿಸಿದ ಶ್ರೀ ವೇದವ್ಯಾಸರು ದಿಕ್ಕುಗಳನ್ನು ಜಯಿಸಿಬರಲು ಆಜ್ಞಾಪಿಸಿದರು. ಆಗ ಅರ್ಜುನನು ನನಗೆ ದಿವ್ಯಧನುಸ್ಸು ರಥ ಇವೆ. ಎಲ್ಲ ದಿಗ್ವಿಜಯ ನಾನೇ ಮಾಡುವೆನು ಎಂದು ಅಪೇಕ್ಷಿಸಿದನು. ಆಗ ಶ್ರೀವೇದವ್ಯಾಸದೇವರು ಅರ್ಜುನ, ಹೌದು ಎಲ್ಲ ಶ್ರೇಷ್ಠ ಸಾಮಗ್ರಿ ನಿನ್ನಲ್ಲಿವೆ. ಮಹತ್ತಾದ ಪರಾಕ್ರಮವಿದೆ. ಆದರೂ ಕೀಚಕ, ಕರ್ಣ, ಶಿಶುಪಾಲ, ಪೌಂಡ್ರಕವಾಸುದೇವ ಇವರನ್ನು ಸೋಲಿಸಲು ನಿನಗೆ ಆಗದು. ಕರ್ಣನಿಗಿಂತ ಹೆಚ್ಚು ಬಲವಿದೆಯಾದರೂ ಕವಚ ಕರ್ಣಕುಂಡಲವಿರುವವರೆಗೂ ಅವನನ್ನು ಕೊಲ್ಲಲು ನಿನಗಾಗದು. ಬದುಕಿರುವಾಗ ಅವನು ನಿನಗೆ ಕರವನ್ನು ಕೊಡುವದಿಲ್ಲ. ನಿನ್ನ ಬಗ್ಗೆ ತುಂಬಾ ಸ್ಪರ್ಧೆ ಇದೆ. ಕೀಚಕ ಪೌಂಡ್ರಕರು ರುದ್ರದೇವರ ವರದಿಂದ ಅವಧ್ಯರು ಆಜೇಯರು. ಆದರೆ ಇವರೆಲ್ಲರಿಗೂ ಭೀಮಸೇನನರ ಪ್ರಬಲನಾದ ಜರಾಸಂಧನನ್ನು ಕೊಂದದ್ದರಿಂದ ನಾವು ಎಲ್ಲಿ ಇವನಿಂದ ಸಾಯುವೆವೋ ಅಥವಾ ನಮ್ಮನ್ನು ಜೀವಂತ ಬಂಧಿಸುವನೋ ಎಂಬ ಹೆದರಿಕೆಯಿದೆ. ಹೀಗಾಗಿ ಭೀಮನಿಗೆ ಕರವನ್ನು ಅವಶ್ಯವಾಗಿ ಕೊಡುವರು. ಆದ್ದರಿಂದ ಅವರೆಲ್ಲರ ಹತ್ತಿರ ಹಾಗು ಪೂರ್ವದಿಕ್ಕಿಗೆ ಭೀಮನೇ ಹೋಗಲಿ ಎಂದು ಹೇಳಿದರು.

ಪ್ರಯಾಹಿ ಚ ತ್ವಂ ಧನದಪ್ರಪಾಲಿತಾಂ ದಿಶಂ ದ್ವೀಪಾನ್ಸಪ್ತ ಚಾಶೇಷದಿಕ್ಷು ।
ಸ್ಥಿತಾಂಶ್ಚ ದೈತ್ಯಾಂಶ್ಚ ತಥಾಽಧರಸ್ಥಾನ್ವಿಜಿತ್ಯ ಶೀಘ್ರಂ ಪುನರೇಹಿ ಚಾತ್ರ ॥೧೯೨॥

ತ್ವಂ ನೀನು, ಧನದಪ್ರಪಾಲಿತಾಂ ದಿಶಂ – ಕುಬೇರನಿಂದ ರಕ್ಷಿತವಾದ ಉತ್ತರ ದಿಕ್ಕಿಗೆ, ಚ – ಹಾಗೂ, ಅಶೇಷದಿಕ್ಷು – ಎಲ್ಲ ದಿಕ್ಕುಗಳಲ್ಲಿ, ಸ್ಥಿತಾನ್ ಸಪ್ತದ್ವೀಪಾನ್ – ಇರುವ ಸಪ್ತದ್ವೀಪಗಳಿಗೆ, ಪ್ರಯಾಹಿ – ಹೋಗು, ತಥಾ – ಹಾಗೂ, ವಿಜಿತ್ಯ – ಅಲ್ಲಿರುವವರನ್ನು ಗೆದ್ದು, ಇ-ಪುನಃ – ಮತ್ತೆ, ಅಧರಸ್ಥಾನ್ – ಪಾತಾಲಾದಿಸಪ್ತಲೋಕಗಳಲ್ಲಿ

ರಂವ. ನಾಗಾನ್ ದೈತ್ಯಾನ್ ಚ –ನಾಗಗಳನ್ನು, ದೈತ್ಯರನ್ನೂ ಕೂಡ, ವಿಜಿತ್ಯ – ಗೆದ್ದು, ಅತ್ರ – ಈ ಯಜ್ಞ ಭೂವಿಗೆ, ಶೀಘ್ರಂ ವಿಹಿ —ಬೇಗ ಬಾ ॥೧೯೨॥

ಅವ—ಬಹುಲಕ್ಷಯೋಜನ ದೂರವಾದಿರುವ ಸಪ್ತಸಮುದ್ರದಗಳನ್ನು ಕುರಿತು ಅರ್ಜುನನು ಹೇಗೆ ಹೋಗ ಬೇಕು ? ಎಂಬ ಶಂಕೆಗೆ ಉತ್ತರವನ್ನು ಹೇಳುವರು. –

ರಥೋ ಹಿ ದಿವ್ಯೋಽಂಬರಗಸ್ತವಾಸ್ತಿ ದಿವ್ಯಾನಿ ಚಾಸ್ತ್ರಾಣಿ ಧನುಶ್ಚ ದಿವ್ಯಮ್ ।
ಯೇಽನ್ಯೇ ಚ ಬಾಣಪ್ರಮುಖಾ ಅಜೇಯಾಶ್ಚರ್ವಾಶ್ರಯಾಸ್ತಾನಪಿ ಭೀಮ ಏತು ॥೧೯೩॥

ತವ – ನಿನಗೆ, ದಿವ್ಯಃ ಆಂಬರಗಃ ರಥಃ ಅಸ್ತಿ—ಶ್ರೇಷ್ಠವಾದ, ಆಕಾಶಗಾಮಿಯಾದ, ರಥವಿದೆ; ದಿವ್ಯಾನಿ ಅಸ್ತ್ರಾಣಿ (ಸಂತಿ)—ಶ್ರೇಷ್ಠವಾದ ಅಸ್ತ್ರಗಳಿವೆ. ಚ—ಹಾಗೂ, ದಿವ್ಯಂ ಧನುಃ (ಅಸ್ತಿ) – ಶ್ರೇಷ್ಠವಾದ ಧನುಸ್ಸು ಇದೆ. (ಆದ್ದರಿಂದ ನಿನಗೆ ದೂರಕ್ಕೆ ಹೋಗಿ ಜಯಸಂಪಾದನೆಯಂ ಶಕ್ಯವಿದೆ.) ಯೇ – ಯಾವ, ಬಾಣಪ್ರಮುಖಾಃ— ಬಾಣಾಸುರನೇ ಮೊದಲಾದ, ಶರ್ವಾಶ್ರಯಾಃ—ರುದ್ರಭಕ್ತರಾದ, ಅಜೇಯಾಃ— ಅವರ ವರದಿಂದ ಪರಾಜಯವಿಲ್ಲದ, ಅನ್ಯೇ – ಕೀಚಕ, ಪೌಂಡ್ರಕ ಮೊದಲಾದ ಮೇಲೆ ಹೇಳಿದವರಿಗಿಂತ ಬೇರೆಯಾದವರು ಇರುತ್ತಾರೆಯೋ ತಾನ್ ಅಪಿ – ಅವರನ್ನು ಕುರಿತೂ ಕೂಡ, ಭೀಮಃ— ಭೀಮಸೇನದೇವರೇ, ಏತು – ಹೋಗಲಿ, (ಅಂದರೆ ಅವರೂ ಕೂಡ ನಿನಗೆ ವಶರಾಗರು, ಭೀಮನಿಗೇ ಕರ ಕೊಡುವರು ಎಂದು ಭಾವ). ॥೧೯೩॥

ತಥಾ ಸುರಾಶ್ಚಾಪಿ ಸಮಸ್ತಶೋಽಸ್ಯ ಬಲಿಂ ಪ್ರಯಚ್ಛಂತಿ ಮದಾಜ್ಞಯೇತರೇ ।
ದಿಶಂ ಪ್ರತೀಚೀಮಥ ದಕ್ಷಿಣಾಂ ಚ ಯಾತಾಂ ಯಮೌ ಕ್ರಮಶೋ ಹ್ಯಧ್ವರಾರ್ಥೇ ॥೧೯೪॥

ತಥಾ – ಹಾಗೂ, ಸಮಸ್ತಶಃ ಸುರಾಃ ಅಪಿ – ಎಲ್ಲ ದೇವತೆಗಳೂ ಕೂಡ, ಅಸ್ಯ – ಈ ಭೀಮನಿಗೆ, ಬಲಿಂ– ಕರವನ್ನು, ಪ್ರಯಚ್ಛಂತಿ – ಕೊಡುವರು. ಇತರೇ – ಉಳಿದವರು, ಮದಾಜ್ಞಯಾ—ನನ್ನ ಆಜ್ಞೆಯಂತೆ. (ತೇ – ನಿನಗೆ ಕೊಡುವರು ಎಂದು ಭಾವ). ಅಥ-ಹಾಗೂ, ಪ್ರತೀಚೀಂ ದಿಶಂ–ಪಶ್ಚಿಮ ದಿಕ್ಕಿಗೆ, ಚ-ಮತ್ತು. ದಕ್ಷಿಣಾಂ ದಿಶಂ – ದಕ್ಷಿಣ ದಿಕ್ಕನ್ನು ಕುರಿತು, ಕ್ರಮಶಃ – ಕ್ರಮವಾಗಿ, ಯಮೌ – ಯಮಳರಾದ ನಕುಲ ಸಹದೇವರು, ಅಧ್ವರಾರ್ಥ– ಯಜ್ಞದ ಸಲುವಾಗಿ, (ದಿಗ್ವಿಜಯಕ್ಕಾಗಿ) ಯಾತಾಂ—ಹೋಗಲಿ. ॥೧೯೪॥

ಯಶಶ್ಚ ಧರ್ಮಶ್ಚ ತಯೋರಪಿ ಸ್ಯಾದಿತಿ ಸ್ಮ ಕೃಷ್ಣೇನ ಸುತೇನ ಕಾಲ್ಯಾಃ ।
ಉಕ್ತೇ ಯಯುಸ್ತೇ ತಮಭಿಪ್ರಣಮ್ಯ ದಿಶೋ ಯಥೋಕ್ತಾಃ ಪರಮೋರುಸದ್ಗುಣಾಃ ॥೧೯೫॥

ತಯೋಃ ಅಪಿ – ಆ ಯಮಳರಿಗೂ ಕೂಡ, ಯಶಃ ಸ್ಯಾತ್ ಧರ್ಮಃ ಚ – ಕೀರ್ತಿಯಂ ಹಾಗು ಧರ್ಮವೂ ಕೂಡ ಲಭಿಸುತ್ತವೆ. ಇತಿ – ಈ ರೀತಿ, ಕಾಲ್ಯಾಃ ಸುತೇನ ಕೃಷ್ಣೇನ – ಸತ್ಯವತೀದೇವಿಯಂ ಮಗನಾಗಿ ಅವತರಿಸಿದ ಶ್ರೀಮನ್ನಾರಾಯಣ ಸ್ವರೂಪಿಯಾದ ಶ್ರೀ ವೇದವ್ಯಾಸದೇವರಿಂದ, ಉಕ್ತೇ – ಆಜ್ಞಾಪಿಸಲ್ಪಡುತ್ತಿರಲು, ಪರಮೋರು– ಸದ್ಗುಣಾಃ ಶ್ರೇಷ್ಠವಾದ ಬಹುಸದ್ಗುಣಗಳುಳ್ಳ, ತೇ – ಆ ಭೀಮಾದಿ ಪಾಂಡವ ಚತುಷ್ಟಯರು, ತಂ – ಆ ಶ್ರೀವ್ಯಾಸ ದೇವರಿಗೆ, ಅಭಿಪ್ರಣಮ್ಯ – ಭಕ್ತಿಯಿಂದ ಸಾಷ್ಟಾಂಗ ಪ್ರಣಾಮ ಮಾಡಿ. ಯಥಾ ಉಕ್ತಾಃ ದಿಶಃ – ಅವರಿಂದ ಹೇಗೆ ಹೇಳಲ್ಪಟ್ಟಿದ್ದವೋ ಹಾಗೆ ಆಯಾ ದಿಕ್ಕುಗಳಿಗೆ, ಯಯುಃ – ಹೋದರು ॥೧೯೫॥

ನೃಕೋದರೋಜಯನ್ನೃಪಾನ್ವಿರಾಟವಾಸಸಾದ ಹ ।
ಜಿತೇಽತ್ರ ಕೀಚಕೇ ರಣೇ ಸಮಾದದೇ ಕರಂ ತತಃ ॥೧೯೬॥

ವೃಕೋದರ: – ಶ್ರೀಭೀಮಸೇನದೇವರು, ನೃಪಾನ್ – ರಾಜರನ್ನು, ಜಯನ್ –ಗೆಲ್ಲುವವರಾಗಿ; (ಕ್ರಮದಿಂದ,) ವಿರಾಟಂ – ವಿರಾಟರಾಜ್ಯವನ್ನು, ಆಸಸಾದ ಹ – ಹೊಂದಿದರು, ಅತ್ರ – ಇಲ್ಲಿ, ರಣೇ – ಯುದ್ಧದಲ್ಲಿ, ಕೀಚಕೇ – ಕೀಚಕನು, ಜಿತೇ ಸತಿ—ಗೆಲ್ಲಲ್ಪಡುತ್ತಿರಲು, ಸೋಲುತ್ತಿರಲು, ತತಃ - ಆ ವಿರಾಟ ರಾಜನಿಂದ, ಕರಂ– ಸಮೂದದೇ – ಕಪ್ಪಕಾಣಿಕೆಯನ್ನು ತೆಗೆದುಕೊಂಡರು; ॥೧೯೬॥

ತತಃ ಕ್ರಮಾನ್ನೃಪಾನ್ ಜಿತ್ವಾ ಚೇದೀನಾಂ ವಿಷಯಂ ಗತಃ ।
ಮಾತೃವಾಕ್ಯಾದ್ಭಯಾಚ್ಚೈವ ಶಿಶುಪಾಲೇನ ಪೂಜಿತಃ ॥೧೯೭॥

ತತಃ—ಅನಂತರ, ಕ್ರಮಾತ್—ಕ್ರಮವಾಗಿ, ನೃಪಾನ್—ರಾಜರನ್ನು, ಜಿತ್ವಾ—ಗೆದ್ದು, ಚೇದೀನಾಂ–ವಿಷಯಂ—ಚೇದಿ ದೇಶಕ್ಕೆ, ಗತಃ – ಹೋದರು. ತತ್ರ—ಅಲ್ಲಿ, ಶಿಶುಪಾಲೇನ – ಶಿಶುಪಾಲನಿಂದ, ಮಾತೃವಾಕ್ಯಾತ್—ಅವನ ತಾಯಿಯ ಮಾತಿನಂತೆ, ಭಯಾತ್ ಚ - (ಭೀಮನ) ಭಯದಿಂದಲೂ, ಪೂಜಿತಃ ಏವ: —ಪೂಜಿತರೇ ಆದರು. [ಶಿಶುಪಾಲನ ತಾಯಿ, ಶ್ರುತಿದೇವಿ ಇಬ್ಬರು ಸಹೋದರಿಯರು. ಹೀಗಾಗಿ ಶಿಶುಪಾಲನ ತಾಯಿ ಪಾಂಡವರಿಗೆ ಮಾತೃಷ್ವಸಾ ದೊಡ್ಡಮ್ಮ-ಚಿಕ್ಕಮ್ಮ) ॥೧೯೭॥

ಮಾತೃಷ್ವಸುಃ ಗೃಹೇ ಚೋಷ್ಯ ದಿವಸಾನ್ಕತಿಚಿತ್ಸುಖಮ್ ।
ಕರಂ ಸುಮಹದಾದಾಯ ತತಃ ಪೂರ್ವಾಂ ದಿಶಂ ಯಯೌ ॥೧೯೮॥

ಮಾತೃಷ್ವಸುಃ ಗೃಹೇ - ಅಬಚಿಯ (ದೊಡ್ಡಮ್ಮ ಅಥವಾ ಚಿಕ್ಕಮ್ಮನ) ತಾಯಿಯಂಸಹೋದರಿಯ ಮನೆಯಲ್ಲಿ ಕತಿಚಿತ್ ದಿವಸಾನ್ – ಕೆಲವು ದಿನಗಳವರೆಗೆ, ಸುಖಂಚ ಉಷ್ಯ – ಸುಖವಾಗಿ ವಾಸಮಾಡಿ, ಸುಮಹತ್ ಕರಂ – ಬಹು ಕರವನ್ನು, ತತಃ – ಆ ಶಿಶುಪಾಲನಿಂದ, ಆದಾಯ – ತೆಗೆದುಕೊಂಡರು, ತತಃ – ಆ ಚೇದಿದೇಶದಿಂದ, ಪೂರ್ವಾ ದಿಶಂ – ಪೂರ್ವದಿಕ್ಕಿಗೆ, ಯಯೌ – ಹೋದರು. ॥೧೯೮॥

ಕ್ರಮೇಣ ಸರ್ವಾನ್ನಿರ್ಜಿತ್ಯ ಪೌಂಡ್ರಕಂ ಚ ಮಹಾಬಲಮ್ ।
ವಿರಥೀಕೃತ್ಯ ಕರ್ಣಂ ಚ ಕರಮಾದಾಯ ಸರ್ವತಃ ॥೧೯೯॥

ಹಿಮವಚ್ಛಿಖರೇ ದೇವಾನ್ ಜಿತ್ವಾ ಶಕ್ರಪುರೋಗಮಾನ್ ।
ಕ್ರೀಡಾರ್ಥಂ ಯುದ್ಧ್ಯತಸ್ತೇಭ್ಯಃ ಸುಷ್ಟೇಭ್ಯೋ ರತ್ನಸಂಚಯಾನ್ ॥೨೦೦॥

ಬಾಹುದ್ವಯೇನ ಶೇಷಂ ಚ ಗರುಡಂ ಚ ಮಹಾಬಲಮ್ ।
ಕ್ರೀಡಮಾನೌ ವಿನಿರ್ಜಿತ್ಯ ಭೂಷಣಾನ್ಯಾಪ ತೋಷತಃ ।
ತಾಭ್ಯಾಂ ಚ ದೃಢಮಾಶ್ಲಿಷ್ಟ : ಸ್ನೇಹವಿಕ್ಲಿನ್ನಯಾಧಿಯಾ ॥೨೦೧॥

ಕ್ರಮೇಣ – ಕ್ರಮವಾಗಿ, ಸರ್ವಾನ್ — ಪೂರ್ವದಿಕ್ಕಿನಲ್ಲಿರುವ ಎಲ್ಲರನ್ನು, ನಿರ್ಜಿತ್ಯ—ಗೆದ್ದು, ಮಹಾಬಲಂ ಪೌಂಡ್ರಕಂ ಚ – ಮಹಾಬಲಿಷ್ಠನಾದ ಪೌಂಡ್ರಕ ವಾಸುದೇವನನ್ನೂ ಕೂಡ, ಕರ್ಣಂ ಚ ವಿರಥೀಕೃತ್ಯ —ಕರ್ಣನನ್ನೂ ಕೂಡ, ರಥರಹಿತನನ್ನಾಗಿ ಮಾಡಿ ಸೋಲಿಸಿ, ಸರ್ವತಃ – ಎಲ್ಲರಿಂದ, ಕರಂ ಆದಾಯ – ಕರವನ್ನು ತೆಗೆದುಕೊಂಡು, ಹಿಮವಚ್ಛಿಖರೇ – ಹಿಮಾಲಯದ ಶಿಖರಗಳಲ್ಲಿ, ಕ್ರೀಡಾರ್ಥಂ ಯುಧ್ಯತಃ—ಇವರು ವಾಯುದೇವರ ಅವತಾರಿಯಾದ ಭೀಮರು ಎಂದು ತಿಳಿದೂಕೂಡ ಅವರ ಸಾಮರ್ಥ್ಯ ಪ್ರಕಟವಾಗಬೇಕೆಂಬ ಇಚ್ಛೆಯಿಂದ ಯುದ್ಧ ಮಾಡತಕ್ಕಂಥ, ಶಕ್ರಪುರೋಗ

ವೈನ್ – ದೇವೇಂದ್ರನೇ ದೊದಲಾದಂಥ, ದೇವಾನ್—ದೇವತೆಗಳನ್ನು, ಜಿತ್ವಾ – ಗೆದ್ದು, ತಂಷ್ಟೇಭ್ಯಃ — ಈ ಭೀಮಸೇನ ದೇವರ ಯುದ್ಧವನ್ನು ನೋಡಿ ಸಂತುಷ್ಟರಾದ, ತೇಭ್ಯಃ—ಆ ದೇವತೆಗಳಿಂದ, ರತ್ನಸಂಚಯಾನ್ – ರತ್ನರಾಶಿಗಳನ್ನು ಆದಾಯಃ—ಕಪ್ಪ ಕಾಣಿಕೆಯನ್ನಾಗಿ ತೆಗೆದುಕೊಂಡು, ಮಹಾಬಲಂ — ಮಹಾಬಲಿಷ್ಠರಾದ, ಕ್ರೀಡವೈನೌ – ಇವರ ಶಕ್ತಿ ಪ್ರಕಟತೆಗಾಗಿ ಯುದ್ಧ ಮಾಡತಕ್ಕ. ಶೇಷಂ ಗರುಡಂ ಚ – ಶೇಷದೇವರನ್ನು ಗರುಡದೇವರನ್ನೂ ಕೂಡ, ಬಾಹು-ದ್ವಯೇನ—ಬಾಹುಯುದ್ಧದಿಂದ, ವಿನಿರ್ಜಿತ್ಯ – ಗೆದ್ದು, (ತಯೋಃ – ಅವರ), ತೋಷತಃ – ಸಂತೋಷದಿಂದ, ಭೂಷಣಾನಿ– ಆಭರಣಗಳನ್ನು ಆಪ – ಹೊಂದಿದರು, ಚ – ಮತ್ತು, ತಾಭ್ಯಾಂ – ಅವರಿಬ್ಬರಿಂದಲೂ, ಸ್ನೇಹವಿಕ್ಲಿನ್ನಯಾ ಧಿಯಾ – ಪ್ರೀತಿಪೂರ್ವಕವಾದ ಮನಸ್ಸಿನಿಂದ, ದೃಢಂ ಆಶ್ಲಿಷ್ಟಃ – ಗಟ್ಟಿಯಾಗಿ ಆಲಿಂಗಿಸಲ್ಪಟ್ಟರು. ॥೧೯೯–೨೦೦–೨೦೧॥

ಪೋಪ್ಲೂಯಮಾನಸ್ಸ ತತೋಽಂಬುಧೌ ಬಲೀ ಜಗಾಮು ಬಾಣಸ್ಯ ಪುರಂ ಹರಂ ಚ ।
ರಣೇ ಜಯದ್ವಾರಣರೂಪಮಾಸ್ಥಿತಂ ಕ್ರೀಡಂತಮೇತೇನ ಚ ತೋಷಿತೋ ಹರಃ ॥೨೦೨॥

ತತಃ – ಅನಂತರ, ಅಂಬುಧೌ ಪೋಪ್ಲೂಯಮಾನಃ – ಸಮುದ್ರದಲ್ಲಿ ಈಸಾಡುತ್ತಾ ಹೋದಂಥ, ಬಲೀ— ಬಲಿಷ್ಠರಾದ, ಸಃ – ಆ ಭೀಮರು, ಬಾಣಸ್ಯ ಪುರಂ – ಬಾಣಾಸುರನ ಪಟ್ಟಣಕ್ಕೆ, ಜಗಾಮು – ಹೋದರು, ಚ–ಮತ್ತು, ರಣೇ – ಯುದ್ಧದಲ್ಲಿ, ವಾರಣರೂಪಂ ಆಸ್ಥಿತಂ – ಆನೆಯ ರೂಪವನ್ನು ತೆಗೆದುಕೊಂಡಂಥ, ಕ್ರೀಡಂತಂ – ಕ್ರೀಡೆಗಾಗಿ ಭೀಮರಬಲಪ್ರಕಟಣೆಗಾಗಿ ಯುದ್ಧ ಮಾಡತಕ್ಕ, ಹರಂ—ರುದ್ರದೇವರನ್ನು, ಅಜಯತ್ – ಗೆದ್ದರು, ಹರಃ – ರುದ್ರ ದೇವರು, ಏತೇನ – ಭೀಮರು ಮಾಡಿದ ಯುದ್ಧದಿಂದ, ತೋಷಿತಃ—ಸಂತುಷ್ಟರಾದರು, ॥೨೦೨॥

ಪೃಷ್ಟಶ್ಚ ಗಿರಿಶೇನಾಸೌ ವಿಸ್ತರಂ ದಿಗ್ಜಯಸ್ಯ ಚ ।
ಸಿಂಹವ್ಯಾಘ್ರಾದಿ ರೂಪಾಶ್ಚ ಆತ್ಮನಾ ವಿಜಿತಾ ಯಥಾ ॥೨೦೩॥
ಗರುತ್ಮಚ್ಛೇಷಶಕ್ರಾದ್ಯಾ ದೇವಾಸ್ಸರ್ವೇ ತದಬ್ರವೀತ್ ॥೨೦೪॥

ಚ ಮತ್ತು, ಗಿರೀಶೇನ ಪೃಷ್ಟಃ – ರುದ್ರದೇವರಿಂದ ಕೇಳಲ್ಪಟ್ಟ, ಅಸೌ—ಆ ಭೀಮಸೇನದೇವರು, ದಿಗ್ವಿ-ಜಯಸ್ಯ ವಿಸ್ತರಂ ದಿಗ್ವಿಜಯದ ವಿಸ್ತಾರವನ್ನು, ಚ – ಮತ್ತು, ಸಿಂಹವ್ಯಾಘ್ರಾದಿರೂಪಾಃ—ಸಿಂಹ ಹುಲಿರೂಪ ಧರಿಸಿ ಬಂದಂಥ ಗರುತ್ಮಚ್ಛೇಷಶಕ್ರಾದ್ಯಾಃ – ಗರುಡಶೇಷ ಇಂದ್ರರೇ ಮೊದಲಾದ, ಸರ್ವೇ ದೇವಾಃ – ಎಲ್ಲ ದೇವತೆಗಳು, ಆತ್ಮನಾ – ತನ್ನಿಂದ, ಯಥಾ—ಹೇಗೆ, ವಿಜಿತಾಃ—ಗೆಲ್ಲಲ್ಪಟ್ಟರೋ, ತತ್ ಚ—ಆ ವಿಷಯವನ್ನೂ ಕೂಡ, ಅಬ್ರ-ವೀತ್—ಹೇಳಿದರು ॥೨೦೩–೨೦೪॥

ನಿಶಮ್ಯ ಶಂಕರೋಽಖಿಲಂ ಮುಖಸ್ಯ ಚ ಪ್ರಸಾಧಕವತ್ ।
ಹರಿಂ ತತೋ ಬಲೇಸ್ಸುತಾದ್ದದೌ ಚ ರತ್ನಸಂಚಯಮ್ ॥೨೦೫॥

ಶಂಕರ:—ಶಂಕರನು, ಅಖಿಲಂ – ಎಲ್ಲ ವೃತ್ತಾಂತವನ್ನು, ಚ—ಮತ್ತು, ಹರಿಂ—ಶ್ರೀಕೃಷ್ಣ, ವ್ಯಾಸರೂಪಿ ಯಾದ ಶ್ರೀಹರಿಯನ್ನು, ಮುಖಸ್ಯ – ಯಜ್ಞದ, ಪ್ರಸಾಧಕವತ್—ಪ್ರಧಾನ ಸಾಧಕನನ್ನಾಗಿ, ನಿಶಮ್ಯ—ಕೇಳಿ, ತತಃ—ಅನಂತರ, ಬಲೇ: ಸುತಾತ್ – ಬಲಿಯ ಮಗನಾದ ಬಾಣಾಸುರನಿಂದ, ರತ್ನಸಂಚಯಮ್ – ರತ್ನಸಮೂಹ ವನ್ನು, ದದೌ – ಕೊಡಿಸಿದನು. ॥೨೦೫॥

ಸ ಬಾಣದೈತ್ಯತೋ ಮುಹಚ್ಛಿವೇನ ದತ್ತಮುತ್ತಮಮ್ ।
ಪ್ರಗೃಹ್ಯ ರತ್ನಸಂಚಯಂ ಸ್ವಕಂ ಪುರಂ ಸಮಾಯಯೌ ॥೨೦೬॥

ಸಃ – ಆ ಭೀಮಸೇನದೇವರು, ಶಿವೇನ – ರುದ್ರದೇವರಿಂದ, ಬಾಣದೈತ್ಯತಃ ಬಾಣಸುರನ ದೆಸೆಯಿಂದ, ದತ್ತಂ – ಕೊಡಲ್ಪಟ್ಟ, ಮಹತ್ – ದೊಡ್ಡ, ಉತ್ತಮಾರ್ – ಉತ್ತಮವಾದಂತಹ, ರತ್ನಸಂಚಯಂ – ರತ್ನ ಸಮೂಹವನ್ನು, ಪ್ರಗೃಹ್ಯ – ತೆಗೆದುಕೊಂಡು, ಸ್ವಕಂ – ತಮ್ಮ, ಪುರಂ – ಪಟ್ಟಣವನ್ನು ಕುರಿತು, ಸಹಾಯಯೌ – ಬಂದರು. ॥೨೦೬॥

ಸ ವಿಪ್ರಯೂಾದವೇಶ್ವರಂ ದ್ವಿಧಾ ಸ್ಥಿತಂ ಜನಾರ್ದನಮ್ ।
ಪುರೋ ನಿಧಾಯ ತದ್ವಸು ಪ್ರಭೂತಮೂನಮುತ್ತದಾ ॥೨೦೭॥

ಸಃ – ಆ ಭೀಮಸೇನದೇವರು, ಪ್ರಭೂತಂ – ಮಹತ್ ಪ್ರಮಾಣವ, ತತ್ ವಸು – ಆ ಸಂಪತ್ತನ್ನು, ಪುರಃ – ಎದುರುಗಡೆ, ನಿಧಾಯ – ಇಟ್ಟು ತದಾ – ಆಗ, ವಿಪ್ರಯೂಾದವೇಶ್ವರಂ – ಬ್ರಾಹ್ಮಣ ಯೂಾದವ ಶ್ರೇಷ್ಠರೆಂಬ ದ್ವಿಧಾ – ಎರಡು ರೂಪಗಳಲ್ಲಿ, (ವೇದವ್ಯಾಸ ಹಾಗೂ ಕೃಷ್ಣರ ರೂಪದಲ್ಲಿ) ಸ್ಥಿತಂ – ಇರತಕ್ಕ, ಜನಾರ್ದನಮ್ – ನಾರಾಯಣನನ್ನು, ಅನಮತ್ – ನಮಸ್ಕರಿಸಿದರು. ॥೨೦೭॥

ಸೋಽಭಿವಾದ್ಯಾಗ್ರಜಂ ಚೈವ ಯುಥಾವೃತ್ತಂ ನ್ಯವೇದಯತ್ ।
ಆತ್ಮನಃ ಕೃಷ್ಣಯೋಸ್ಸರ್ವಂ ಧರ್ಮರಾಜಾಗ್ರತೋ ಮುದಾ ॥೨೦೮॥

ಸಃ – ಆ ಭೀಮಸೇನದೇವರು ಅಗ್ರಜಂ ತಂ ಚ – ಅಣ್ಣನಾದ ಧರ್ಮರಾಜನನ್ನೂ ಕೂಡ ಅಭಿವಾದ್ಯ – ನಮಸ್ಕರಿಸಿ ಆತ್ಮನಃ – ತಮ್ಮ, ಸರ್ವಂ – ಎಲ್ಲವನ್ನು ದಿಗ್ವಿಜಯದ ಸಮಾಚಾರವನ್ನು, ಯಥಾವೃತ್ತಂ – ನಡೆದಂತೆಯೇ ಕೃಷ್ಣಯೋಃ – ವೇದವ್ಯಾಸ ಹಾಗೂ ಕೃಷ್ಣರಿಗೆ, ಚ – ಹಾಗೂ, ಧರ್ಮರಾಜಾಗ್ರತಃ ಧರ್ಮರಾಜನ ಮುಂದೆ, ಮುದಾ – ಸಂತೊಷದಿಂದ ನ್ಯವೇದಯತ್ – ಹೇಳಿದರು. ॥೨೦೮॥

ಯಥಾ ಜಿತಾಃ ಕೀಚಕಾದ್ಯಾ ಏಕಲವ್ಯಸಹಾಯವಾನ್ ।
ಯಥಾ ಜಿತಃ ಪೌಂಡ್ರಕಶ್ಚ ಕರ್ಣಾದ್ಯಾಶ್ಚ ತಥಾ ಪರೇ ॥೨೦೯॥
ಯಥಾ ಸಿಂಹಾದಿತನವಶ್ಶೇಷ ವೀಂದ್ರೇಂದ್ರಪೂರ್ವಕಾಃ ।
ಯಥಾ ಗಜತನುಶ್ಶರ್ವಸ್ತಚ್ಚ ಸರ್ವಮುನರ್ಣಯತ್ ॥೨೧೦॥

ಯಥಾ – ಯಾವ ರೀತಿಯಾಗಿ, ಕೀಚಕಾದ್ಯಾಃ – ಕೀಚಕರೇ ಮೊದಲಾದವರು, ಜಿತಾಃ – ಸೋಲಿಸಲ್ಪಟ್ಟರೋ ಯಥಾ – ಯಾವ ರೀತಿಯಾಗಿ, ಏಕಲವ್ಯಸಹಾಯವಾನ್ – ಏಕಲವ್ಯನ ಸಹಾಯವುಳ್ಳವನಂತಹ, ಪೌಂಡ್ರಕಃ – ಪೌಂಡ್ರಕ ವಾಸುದೇವನು, ಜಿತಃ – ಗೆಲ್ಲಲ್ಪಟ್ಟನೋ, ಚ – ಮತ್ತು, ತಥಾ – ಅದೇ ಪ್ರಕಾರವಾಗಿ, ಕರ್ಣಾದ್ಯಾಃ ಚ – ಕರ್ಣನೇ ಮೊದಲಾದ ಪರೇ – ಇತರರು, ಜಿತಾಃ – ಸೋಲಿಸಲ್ಪಟ್ಟರೋ, ಯಥಾ – ಯಾವರೀತಿಯಾಗಿ, ಸಿಂಹಾದಿತನವಃ – ಸಿಂಹವೇ ಮೊದಲಾದ, ರೂಪಗಳನ್ನು ಹೊಂದಿದಂತಹ, ಶೇಷವೀಂದ್ರೇಂದ್ರಪೂರ್ವಕಾಃ – ಶೇಷ ಗರುಡ ಇಂದ್ರರೇ ಮೊದಲಾದಂಥವರು, (ಜಿತಾಃ) ಸೋಲಿಸಲ್ಪಟ್ಟರೋ, ಯಥಾ – ಯಾವ ರೀತಿಯಾಗಿ, ಗಜತನುಃ – ಆನೆ ರೂಪದಲ್ಲಿ ಬಂದಿರತಕ್ಕ ಶರ್ವಃ – ರುದ್ರನು, (ಜಿತಃ) – ಸೋಲಿಸಲ್ಪಟ್ಟನೋ, ತತ್ ಸರ್ವಮ್ – ಆ ಎಲ್ಲವನ್ನೂ, ಅವರ್ಣಯತ್ – ವರ್ಣಿಸಿದರು. ॥೨೦೯-೨೧೦॥

ಸಂಭಾವಿತಶ್ಚ ಕೃಷ್ಣಾಭ್ಯಾಂ ರಾಜ್ಞಾ ಚ ಸುಮಹಾಬಲಃ ।
ಆಜ್ಞಯಾ ವ್ಯಾಸದೇವಸ್ಯ ಯಜ್ಞಾಂಗಾನಿ ಸಮಾರ್ಜಯತ್ ॥೨೧೧॥

ಕೃಷ್ಣಾಭ್ಯಾಂ – ವೇದವ್ಯಾಸ ಹಾಗೂ ಕೃಷ್ಣರಿಂದ, ಚ – ಮತ್ತು, ರಾಜ್ಞಾ – ರಾಜನಾದ ಧರ್ಮರಾಜನಿಂದ ಸಂಭಾವಿತಃ – ಆದರಿಸಲ್ಪಟ್ಟ, ಸುಮಹಾಬಲಃ—ಮಹಾ ಪರಾಕ್ರಮಿಯಾದ ಭೀಮಸೇನದೇವರು, ವೇದವ್ಯಾಸಸ್ಯ—ವೇದವ್ಯಾಸದೇವರ, ಆಜ್ಞಯಾ—ಆಜ್ಞೆಯಿಂದ, ಯಜ್ಞಾಂಗಾನಿ – ಯಜ್ಞದ ಸಾಮಗ್ರಿಗಳನ್ನು, ಸಮಹಾರ್ಜಯತ್—ಸಂಪಾದಿಸಿದರು. ॥೨೧೧॥

ಊಚೇ ತಂ ಭಗವಾನ್ ವ್ಯಾಸೋ ಜಿತಂ ಸರ್ವಂ ತ್ವಯಾರಿಹನ್ ।
ಜಯೇ ಸರ್ವಸ್ಯ ಯಜ್ಞೋಽಯಂ ಪೂರ್ಣೋ ಭವತಿನಾನ್ಯಥಾ ॥೨೧೨॥

ತಂ – ಆ ಭೀಮಸೇನದೇವರನ್ನು ಕುರಿತು, ಭಗವ ನ್-ಷಡ್ಗುಣೈಶ್ವರ್ಯ ಸಂಪನ್ನರಾದ, ವ್ಯಾಸ: – ವೇದವ್ಯಾಸರು, ಊಚೇ—ಹೇಳಿದರು. ಅರಿಹನ್—ಹೇ ಶತ್ರುಗಳ ನಾಶಕನೇ, ತ್ವಯಾ – ನಿನ್ನಿಂದ, ಸರ್ವಂ – ಎಲ್ಲವೂ, ಜಿತಂ – ಗೆಲ್ಲಲ್ಪಟ್ಟಿದೆ. ಅಯಂ – ಈ, ಯಜ್ಞ: —ಯಜ್ಞವು, ಸರ್ವಸ್ಯ – ಎಲ್ಲರ ಜಯೇ – ಜಯದಿಂದಲೇ, ಪೂರ್ಣ: – ಪೂರ್ಣವು, ಭವತಿ – ಆಗುತ್ತದೆ. ಅನ್ಯಥಾ – ಎಲ್ಲರನ್ನೂ ಗೆಲ್ಲದೇ ಹೋದರೆ, ನ—ಆಗಲಾರದು. ॥೨೧೨॥

ವಿರಿಂಚಸ್ಸರ್ವಜಿತ್ಪೂರ್ವಂ ದ್ವಿತೀಯಸ್ತ್ವಮಿಹಾಭವಃ ।
ಇತ್ಯುಕ್ತ್ವೈನಂ ಸಮಾಶ್ಲಿಷ್ಯ ಯಜ್ಞಾಂಗಾನಿ ಸಮಾದಿಶತ್ ।
ತದೈವಾನ್ಯದಿಶೋ ಜಿತ್ವಾ ಸಮೀಯುಸ್ತಸ್ಯ ಯೇಽನುಜಾಃ ॥೨೧೩॥

ಪೂರ್ವಂ – ಹಿಂದೆ ವಿರಿಂಚಃ—ಬ್ರಹ್ಮದೇವರು, ಸರ್ವಜಿತ್ – ಎಲ್ಲರನ್ನೂ ಗೆದ್ದವರಾಗಿದ್ದರು. ದ್ವಿತೀಯ:– ಎರಡನೆಯವನು, ತ್ವಂ=ನೀನು, ಇಹ – ಈಗ, ಅಭವ: —ಆಗಿರುತ್ತೀದಿ, ಇತಿ – ಎಂದು, ಉಕ್ತ್ವಾ—ಹೇಳಿ, ಏನಂ– ಈ ಭೀಮಸೇನದೇವರನ್ನು, ಸಮಾಶ್ಲಿಷ್ಯ—ಚೆನ್ನಾಗಿ ಆಲಿಂಗಿಸಿ, ಯಜ್ಞಾಂಗಾನಿ – ಯಜ್ಞಕ್ಕೆ ಬೇಕಾದ ಪಾತ್ರಾದಿಗಳನ್ನು (ಸಂಗ್ರಹಿಸುವದಕ್ಕೆ), ಸಮಾದಿಶತ್ – ಆದೇಶಿಸಿದರು. ಯೇ—ಯಾರು, ತಸ್ಯ – ಆ ಭೀಮರ, ಅನುಜಾಃ – ತಮ್ಮಂದಿರೋ ತೇ—ಅವರು, ಅನ್ಯದಿಶ: – ಬೇರೆ ದಿಕ್ಕುಗಳನ್ನು, ಜಿತ್ವಾ – ಗೆದ್ದು, ತದಾ ಏವ—ಅದೇ ಸಮಯದಲ್ಲಿ, ಪುರಃ—ಊರಿಗೆ, ಸಮೀಯುಃ—ಬಂದರು. ॥೨೧೩॥

ಭಾವಾನುವಾದ ೧೯೨ - ೨೧೩

ಶ್ರೀವೇದವ್ಯಾಸದೇವರು ಅರ್ಜುನನಿಗೆ 'ಭೀಮಸೇನದೇವರು ಪೂರ್ವದಿಕ್ಕಿಗೆ ಜಯ ಕ್ಕಾಗಿ ಹೋಗಲಿ' ಎಂಬುದನ್ನು ಆಜ್ಞಾಪಿಸಿ, ನೀನು ಉತ್ತರದಿಕ್ಕಿಗೆ ಹೋಗು, ಎಲ್ಲದಿಕ್ಕುಗಳಲ್ಲಿರುವ ಸಪ್ತದ್ವೀಪಗಳಿಗೆ ಹೋಗು. ಪಾತಾಳಾದಿ ಕೆಳಲೋಕ ಗಳಲ್ಲಿರುವ ನಾಗ,, ದೈತ್ಯರ ಹತ್ತಿರವೂ ಹೋಗು. ಅಲ್ಲೆಲ್ಲ ಕಡೆಗೆ ಗೆದ್ದು ಕರಸಂಪಾದನೆ ಮಾಡಿ ಬೇಗ ಇಲ್ಲಿಗೆ ಬಾ ನಿನಗೆ ಶ್ರೇಷ್ಠವಾದ, ಆಕಾಶದಲ್ಲಿ ಹೋಗಬಲ್ಲ ರಥವಿದೆ. ಹೀಗಾಗಿ ನಿನಗೆ ಅಲ್ಲೆಲ್ಲ ಹೋಗಲು ಶಕ್ಯವಿದೆ. ದಿವ್ಯ ಧನುಸ್ಸು, ದಿವ್ಯ ಅಸ್ತ್ರಗಳು ನಿನಗಿವೆ. ಆದ್ದರಿಂದ ಜಯವೂ ಶಕ್ಯವಾಗುವದು. ಆದರೆ ಬಲಿರಾಜನ ಮಗನಾದ ರುದ್ರದೇವರ ವರ ರಕ್ಷಿತ ನಾದ ಬಾಣಾಸುರ ಹಾಗೂ ಅಂಥವರು ಕೆಲವರು ಇರುವರು. ಅವರು ಏನ್ನವಶರಾಗಲಾರದ್ದರಿಂದ ಅವರ ಹತ್ತಿರ ಭೀಮನೇ ಹೋಗಲಿ, ಗರುಡಶೇಷಾದಿ ದೇವತೆಗಳೂ ಕೂಡ ಆ ಭೀಮನಿಗೆ ಕರವನ್ನು ಕೊಡುವರು. ಅಲ್ಲಿಗೂ ಅವನೇ ಹೋಗಲಿ; ಪಶ್ಚಿಮದಿಕ್ಕಿಗೆ ನಕುಲನು, ದಕ್ಷಿಣಕ್ಕೆ ಸಹದೇವನು ಹೋಗಲಿ. ಅವರು ಜಯಿಸಿ, ಕರಸಂಪಾದಿಸಿ ಯಶಸ್ಸು ಧರ್ಮಗಳನ್ನು ಹೊಂದಲಿ? ಎಂದು ಆಜ್ಞಾಪಿಸಿದರು. ಅವರ ಆಜ್ಞಾಪ್ರಕಾರ ಎಲ್ಲರೂ ಶ್ರವ್ಯಾಸದೇವರಿಗೆ

ನಮಸ್ಕರಿಸಿ ಆಯಾ ದಿಕ್ಕುಗಳಿಗೆ ಹೋದರು. ಶ್ರೀಭೀಮಸೇನದೆ ವರು ವಿರಾಟನಗರಕ್ಕೆ ಬಂದು ಕೀಚಕನನ್ನು ಗೆದ್ದು ಕಪ್ಪ-ಕಾಣಿಕೆಯನ್ನು ಸ್ವೀಕರಿಸಿ, ಅಲ್ಲಿಂದ ಚೇದಿರಾಜ್ಯಕ್ಕೆ ಬಂದು ಅಲ್ಲಿ ತಮ್ಮ ಅಬಚಿಯು ಮಗನಾದ ಶಿಶುಪಾಲ-ನಿಂದ ಅವನ ಅವ್ವನ ವಂಶಾತಿನಂತೆ ಪೂಜಿತರಾದರು. ಚಿಕ್ಕಮ್ಮನ ಮನೆಯಲ್ಲಿ ಕೆಲವುದಿನ ಸುಖವಾಗಿ ಇದ್ದು, ಭಾರಿ ಕರವನ್ನು ಹೊಂದಿ ಅಲ್ಲಿಂದ ಪೂರ್ವಕ್ಕೆ ಹೋದರು. ಅಲ್ಲಿ ಎಲ್ಲರನ್ನೂ ಗೆಲ್ಲುತ್ತಾ ಬಲಿಷ್ಠನಾದ ಪೌಂಡ್ರಕ ವಾಸುದೇವ ಅವನ ಸಹಾಯಕನಾದ ಏಕಲವ್ಯ ಇವರನ್ನು ವಿರಥರನ್ನಾಗಿಸಿ ಸೋಲಿಸಿ ಕರವನ್ನು, ಪಡೆದು ಕರ್ಣನನ್ನೂ ಸೋಲಿಸಿ, ಕರವನ್ನು ತೆಗೆದುಕೊಂಡು, ಹಿಮವತ್ಪರ್ವತದ ಶಿಖರಕ್ಕೆ ಬಂದು ಅಲ್ಲಿರುವ ಇಂದ್ರಾದಿದೇವತೆಗಳು ಶ್ರೀಭೀಮರ ಶಕ್ತಿಯನ್ನು ಲೋಕಕ್ಕೆ ತೋರಿಸಲೆಂದೂ ಯುದ್ಧ ಮಾಡಿದಾಗ ಅವರನ್ನೆಲ್ಲ ಗೆದ್ದು, ಇವರ ಯುದ್ಧ ದಿಂದ ಸಂತೋಷಗೊಂಡ ಅವರಿಂದ ರತ್ನರಾಶಿಗಳನ್ನು ಕರವನ್ನಾಗಿ ತೆಗೆದುಕೊಂಡು, ಪ್ರಾ ಅದರಂತೆ ಬಾಹುಯುದ್ಧವನ್ನು ಮಾಡಲು ಬಂದ ಗರುಡಶೇಷರನ್ನು ಸೋಲಿಸಿ ಸಂತೋಷಪಡಿಸಿ ಆಲಿಂಗಿತರಾಗಿ ಅವರಿಂದ ಆಭರಣಗಳ ಕಾಣಿಕೆಯನ್ನು ಹೊಂದಿದರು. ಅಲ್ಲಿಂದ ಸಮುದ್ರದಲ್ಲಿ ಈಸುತ್ತಾ ಬಾಣಾಸುರನ ಊರಿಗೆ ಬಂದು ಅಲ್ಲಿ ಅವನನ್ನು, ಅವನ ಸಹಾಯಕ್ಕೆ ಎಂಬಂತೆ, ಆದರೆ ಶ್ರೀಭೀಮರ ಶಕ್ತಿ ಪ್ರಕಟಮಾಡುವ ಉದ್ದೇಶದಿಂದ ಯುದ್ಧಕ್ಕೆ ಬಂದ ಆನೆಯ ರೂಪದಲ್ಲಿರುವ ಶ್ರೀ ರುದ್ರದೇವರನ್ನು ಗೆದ್ದರು; ಸಂತುಷ್ಟರಾದ ರುದ್ರದೇವರು ಯಾಕೆ ಯುದ್ಧ, ಎಂದು ಕೇಳಿ ರಾಜಸೂಯಯಾಗ ಪ್ರವೃತ್ತಿಯನ್ನು ಅದಕ್ಕಾಗಿ ತಾನು ದಿಗ್ವಿಜಯ ಮಾಡುತ್ತಿದ್ದದ್ದನ್ನು, ಹಿಮವತ್ಪರ್ವತದಲ್ಲಿ ಗರುಡಶೇಷಾದಿಗಳು ಹುಲಿ ಸಿಂಹರೂಪರಾಗಿ ಯುದ್ಧಕ್ಕೆ ಬಂದಾಗ ಅವರನ್ನೂ ಗೆದ್ದದ್ದನ್ನು ಎಲ್ಲ ಹೇಳಿ ಅದನ್ನು ಕೇಳಿ ಸಂತುಷ್ಟರಾದ ರುದ್ರ ದೇವರು ಬಾಣಾಸುರನಿಂದ ಕೊಡಿಸಿದ ರತ್ನರಾಶಿಯು ಕರವನ್ನು ತೆಗೆದುಕೊಂಡು ತಮ್ಮ ಪಟ್ಟಣಕ್ಕೆ ಬಂದರು. ತಂದ ಸಂಪತ್ತನ್ನು ಶ್ರೀಕೃಷ್ಣ ಶ್ರೀವ್ಯಾಸ ಎರಡು ರೂಪಗಳ ಸಮಕ್ಷದಲ್ಲಿ ಸಮರ್ಪಿಸಿ ನಮಸ್ಕರಿಸಿದರು. ಅಣ್ಣನಿಗೆ ನಮಸ್ಕರಿಸಿ ದರು. ತಾನು ಜಯಿಸಿದ ಎಲ್ಲ ವೃತ್ತವನ್ನೂ ತಿಳಿಸಿದರು. ಆಗ ಶ್ರೀಕೃಷ್ಣವೇದವ್ಯಾಸರು ಹಾಗೂ ಅಣ್ಣ ಇವರಿಂದ ಪ್ರಶಂಸಿತರಾದರು. ಶ್ರೀವ್ಯಾಸದೇವರು ಶ್ರೀಭೀಮರಿಗೆ 'ನೀನು ಎಲ್ಲವನ್ನೂ ಗೆದ್ದಿರುವಿ, ಎಲ್ಲವನ್ನು ಗೆದ್ದಾಗಲೇ, ರಾಜಸೂಯ ಯಾಗವು ಸಾರ್ಥಕವೂ ಪೂರ್ಣವೂ ಆಗುವದು. ಇಲ್ಲವಾದರೆ ಆಗುವದಿಲ್ಲ. ಈ ರೀತಿ ಪೂರ್ಣವಾಗಿ ಗೆದ್ದು ರಾಜ ಸೂಯ ಮಾಡಿದವರು ಈ ಮೊದಲು ಬ್ರಹ್ಮದೇವರೊಬ್ಬರು. ಆದರ ನಂತರ ನೀನೇ ಎರಡನೆಯವನು. ದೊಡ್ಡ ಕಾರ್ಯ ಮಾಡಿರುವಿ.' ಎಂದು ಪ್ರಶಂಸಿಸಿ ದೃಢವಾಗಿ ಆಲಿಂಗಿಸಿ ಯಜ್ಞದ ಸಾಧನಸಾಮಗ್ರಿಗಳನ್ನು ತರಲು ಆದೇಶಿಸಿದರು.

ಸಹದೇವೋದಕ್ಷಿಣಾಶಾಂ ಜಿತ್ವಾ ರತ್ನಾನ್ಯುಪಾಹರತ್ ॥೨೧೪॥
ತತ್ರ ರುಕ್ಮೀನ ಯುಯುಧೇ ಸಹದೇವೇನ ವೀರ್ಯವಾನ್ ।
ಜಿತಃ ಕೃಷ್ಣೇನ ಪೂರ್ವಂ ತು ಶರ್ವಾದಾಪ ಧನುರ್ವರಮ್ ॥೨೧೫॥
ತಪಸಾ ತೋಷಿತಾತ್ ಕೃಷ್ಣಾದನ್ಯಾನೇವಾಮುನಾऽಖಿಲಾನ್ ।
ವಿಜೇಷ್ಯತಿ ಯದಾ ಕೃಷ್ಣವಿರೋಧಸ್ತೇ ತದಾ ಧನುಃ ॥೨೧೬॥
ವಾಮೇಷ್ಯತೀತಿ ತೇನೋಕ್ತೋ ನ ವ್ಯರುಧ್ಯತ ಕೇಶವೇ ।
ಸ್ವಸುಃ ಸ್ನೇಹಾತ್ ಕೃಷ್ಣಸ್ಯ ಯಜ್ಞಕಾರಯಿತೃತ್ವತಃ ॥೨೧೭॥
ಭೀಮಾರ್ಜುನಬಲಾಚ್ಚೈವ ಮಾದ್ರೇಯಾಯ ದದೌ ಕರಮ್ ।
ಜಿಗ್ಯೇಬಲೇನಾನ್ಯನೃಪಾನ್ ಸಹದೇವಃ ಪ್ರತಾಪವಾನ್ ॥೨೧೮॥

ಸಹದೇವಃ – ಸಹದೇವನು, ದಕ್ಷಿಣಾಶಾಂ - ದಕ್ಷಿಣದಿಕ್ಕನ್ನು, ಜಿತ್ವಾ—ಗೆದ್ದು, ರತ್ನಾನಿ ಉಪಾಹರತ್—

ರತ್ನಗಳನ್ನು ತಂದನು, ತತ್ರ – ಆ ದಕ್ಷಿಣದಿಕ್ಕಿನಲ್ಲಿ, ವೀರ್ಯವಾನ್ ರುಕ್ಮೀ – ಪರಾಕ್ರಮಿಯಾದ ರುಕ್ಮಿಯು, ಸಹದೇವೇನ – ಸಹದೇವನೊಡನೆ, ನ ಯುಯುಧೇ—ಯುದ್ಧ ಮಾಡಲಿಲ್ಲ ಏಕೆಂದರೆ, ಪೂರ್ವಂ – ಈ ಹಿಂದೆ,(ರುಕ್ಮಿಣೀ ಸ್ವಯಂವರ ಸಭೆಯಲ್ಲಿ) ಕೃಷ್ಣೇನ ಜಿತಃ – ಕೃಷ್ಣನಿಂದ ಸೋತಂಥ ರುಕ್ಮಿಯು, ತಪಸಾ—ತಾನು ಮಾಡಿದ ತಪಸ್ಸಿನಿಂದ ತೋಷಿತಾತ್—ಸಂತುಷ್ಟರಾದ, ಶರ್ವಾತ್—ರುದ್ರದೇವರದೆಸೆಯಿಂದ, ಧನುರ್ವರಮ್ – ಶ್ರೇಷ್ಠವಾದ ಧನುಸ್ಸನ್ನು, ಆಪ – ಹೊಂದಿದನು ಅಮುನಾ— ಈ ಧನುಸ್ಸಿನಿಂದ, ಕೃಷ್ಣಾತ್ ಅನ್ಯಾನ್ ಅಖಿಲಾನ್ ಏವ—ಕೃಷ್ಣನಿಂದ ಬೇರೆಯಾದ ಎಲ್ಲರನ್ನೇ, ವಿಜೇಷ್ಯಸಿ –ಗೆಲ್ಲುವಿ, ಯದಾ–ಯಾವಾಗ, ತ್ವೇ – ನಿನಗೆ, ಕೃಷ್ಣವಿರೋಧಿ–ಶ್ರೀಕೃಷ್ಣವೈರವು, (ಶ್ರೀಕೃಷ್ಣ ವಿರೋಧಿಕಾರ್ಯವು), ಘಟಿಸುವದೋ, ತದಾ – ಆಗ, ಧನುಃ – ಈ ಧನುಸ್ಸು, ಮಾಂ – ನನ್ನನ್ನು, ಏಷ್ಯತಿ—ಹೊಂದುತ್ತದೆ, ಇತಿ—ಎಂದು, ತೇನ—ಆ ರುದ್ರದೇವರಿಂದ ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ ಆ ರುಕ್ಮಿಯು, ಕೇಶವೇ – ಶ್ರೀಕೃಷ್ಣನಬಗ್ಗೆ, ನ ವ್ಯರುಧ್ಯತ – ವಿರೋಧ ಮಾಡಲಿಲ್ಲ. ಸ್ವಸುಃಸ್ನೇಹಾತ್—ಸಹೋದರಿಯಾದ ಶ್ರೀರುಕ್ಮಿಣೀದೇವಿಯ ಬಗ್ಗೆ ಸ್ನೇಹದಿಂದ ಕೂಡ, ನ ವ್ಯರುಧ್ಯತ —ಶ್ರೀಕೃಷ್ಣನ ವಿರೋಧವಮಾಡಲಿಲ್ಲ ಕೃಷ್ಣಸ್ಯ ಯಜ್ಞಕಾರಯಿತೃತ್ವತಃ – ಶ್ರೀಕೃಷ್ಣನಿಗೆ ಯಜ್ಞಪ್ರವರ್ತಕತ್ವವಿದ್ದದ್ದರಿಂದ, ಶ್ರೀಕೃಷ್ಣನೇ ಈ ರಾಜಸೂಯ್ಯ ಯಾಗದ ಪ್ರವರ್ತಕನಾದ್ದರಿಂದ,) ಭೀಮಾರ್ಜುನ ಬಲಾತ್ ಏವ ಚ – ಭೀಮಾರ್ಜುನರ ಸಾಮರ್ಥ್ಯದಿಂದಲೂ ಕೂಡ, ಮಾದ್ರೇಯಾಯ – ಸಹದೇವನಿಗೆ, ಕರಂ ದದೌ – ಕಪ್ಪಕಾಣಿಕೆಯನ್ನು ಕೊಟ್ಟನು, ಪ್ರತಾಪವಾನ್ – ಪರಾಕ್ರಮಿಯಾದ, ಸಹದೇವಃ – ಸಹದೇವನು, ಬಲೇನ – ತನ್ನಸಾಮರ್ಥ್ಯದಿಂದ, ಅನ್ಯನೃಪಾನ್ – ಬೇರರಾಜರನ್ನು, ಜಿಗ್ಯೇ –ಗೆದ್ದನು. ॥೨೧೪–೨೧೫–೨೧೬–೨೧೭–೨೧೮॥

ತಥಾ ಸ್ಮೃತಂ ಸಮಾಗತಂ ಘಟೋತ್ಕಚಂ ವಿಭೀಷಣೇ ।
ಸಮಾದಿಶದ್ಯಯೌ ಚ ಸೋಽಪಿ ಸೋದದಾನ್ಮಹಾಕರಮ್ ॥೨೧೯॥

ತಥಾ – ಹಾಗೂ, ಸ್ಮೃತಂ – ತನ್ನಿಂದ ನೆನೆಸಲ್ಪಟ್ಟ, ಸಮಾಗತಂ – ಹರ್ಷದಿಂದ ಬಂದಂಥ, ಘಟೋತ್ಕಚಂ—ಘಟೋತ್ಕಚನನ್ನು; (ಸಃ—ಆ ಸಹದೇವನು), ವಿಭೀಷಣೇ—ವಿಭೀಷಣನನ್ನು ಗೆಲ್ಲುವದಕ್ಕಾಗಿ, ಸಮಾದಿಶತ್—ಕಳಿಸಿದನು. ಸಃಅಪಿ – ಅವನೂ (ಸಹದೇವನೂ) ಕೂಡ ಯಯೌ ಹೋದನು. ಸಃ ಚ—ಆ ವಿಭೀಷಣನಾದರೂ, ಮಹಾಕರಂ–ಬಹಳ ಕರವನ್ನು, ಅದದಾತ್ – ಕೊಟ್ಟನು. ॥೨೧೯॥

ಅವತಾರಿಕೆ : ವಿಭೀಷಣನು ಯುದ್ಧ ಮಾಡದೇ ಕರವನ್ನು ಕೊಡಲು ಕಾರಣವನ್ನು ತಿಳಿಸುತ್ತಾರೆ.—

ಪುರಾ ಹಿ ರಾಘವೋದಿತಂ ತದಸ್ಯ ಸೋಽಖಿಲಂ ತದಾ ।
ವಿಚಾರ್ಯ ಕೇಶವಂ ಚ ತಂ ಬಲಂ ಚ ಭೀಮಪಾರ್ಥಯೋಃ ॥೨೨೦॥

ದಿವೌಕಸಶ್ಚ ಪಾಂಡವಾನವೇತ್ಯ ಸೋಽದದಾತ್ಕರಮ್ ॥೨೨೧॥

ಪುರಾ – ಶ್ರೀರಾಮದೇವರ ಕಾಲದಲ್ಲಿ, ಅಸ್ಯ—ಈ ವಿಭೀಷಣನಿಗೆ, ರಾಘವೋದಿತಂ ಅಖಿಲಂ—ಶ್ರೀರಾಮದೇವರಿಂದ ಹೇಳಲ್ಪಟ್ಟ ಎಲ್ಲವನ್ನು, (ಮುಂದೆ ದ್ವಾಪರದಲ್ಲಿ ನಾನು ಶ್ರೀಕೃಷ್ಣನಾದಿ ಅವತರಿಸಿದಾಗ, ನನ್ನ ಭಕ್ತರಾದ ಪಾಂಡವರು ರಾಜಸೂಯಯಾಗ ಮಾಡುವರು. ಆಗ ಅವರ ಮಗನಾದ ಘಟೋತ್ಕಚನು ನಿನ್ನ ಕಡೆಗೆ ಕರಸ್ವೀಕಾರಕ್ಕಾದಿ ಬರುವನು. ಅವನಿಗೆ ಕರವನ್ನು ಕೊಡು ಎಂದು ಹೇಳಿದ್ದನ್ನು), ತದಾ—ಆ ಘಟೋತ್ಕಚನು ಬಂದ ಸಮಯದಲ್ಲಿ; ಸಃ – ಆ ವಿಭೀಷಣನು, (ಅಸ್ಮರತ್—ಸ್ಮರಿಸಿಕೊಂಡನು.) ಚ ಕೇಶವಂ— ಶ್ರೀಕೃಷ್ಣನನ್ನು, ವಿಚಾರ್ಯ—ಶ್ರೀರಾಮದೇವರನ್ನಾದಿಯೇ ವಿಚಾರಿಸಿ, ಚ – ಹಾಗೂ, ಪಾಂಡವಾನ್—ಪಾಂಡವರನ್ನು, ದಿವೌಕಸಃ – ದೇವಾವತಾರಿಗಳನ್ನಾದಿ, ಅವೇತ್ಯ—ತಿಳಿದು, ಸಃ – ವಿಭೀಷಣನು, ಕರಂ—ಕರವನ್ನು ಅದದಾತ್ – ಕೊಟ್ಟನು ॥೨೨೦-೨೨೧॥

ಮಹೌಘರತ್ನಸಂಚಯಂ ಸ ಆಪ್ಯ ಭೀಮಸೇನಜಃ ।
ಯಯೌ ಚ ವಾದ್ರಿನಂದನಂ ಸ ಚಾಯಯೌ ಸ್ವಕಂ ಪುರಂ ॥೨೨೨॥

ಸಃ ಭೀಮಸೇನಜಃ – ಭೀಮಸೇನಪುತ್ರನಾದ ಆ ಘಟೋತ್ಕಚನು, ಮಹೌಘರತ್ನಸಂಚಯಂ – ಬಹುರತ್ನ ರಾಶಿಯನ್ನು, ಆಪ್ಯ – ಹೊಂದಿ, ವಾದ್ರಿನಂದನಂ – ವಾದ್ರಿಪುತ್ರನಾದ ಸಹದೇವನಹತ್ತಿರಕ್ಕೆ, ಯಯೌ – ಹೋದನು, ಸಃ ಚ—ಆ ಸಹದೇವನೂ ಕೂಡ, ಸ್ವಕಂ ಪುರಂ—ತನ್ನ ಪಟ್ಟಣಕ್ಕೆ, ಆಯಯೌ – ಬಂದನು. ॥೨೨೨॥

ನಕುಲಃ ಪಶ್ಚಿಮಾಶಾಯಾಂ ವಿಜಿಗ್ಯೇಽಖಿಲಭೂಭೃತಃ ।
ಕರಮಾಪ ಚ ವೀರೋಽಸೌ ಸೌಹಾರ್ದಾದೇವ ಮಾತುಲಾತ್ ।
ಆಯಯೌ ಚ ಮಹಾರತ್ನಸಂಚಯೇನ ಸ್ವಕಂ ಪುರಂ ॥೨೨೩॥

ನಕುಲಃ—ನಕುಲನು, ಪಶ್ಚಿಮಾಶಾಯಾಂ—ಪಶ್ಚಿಮದಿಕ್ಕಿನಲ್ಲಿ, ಅಖಿಲಭೂಭೃತಃ — ಎಲ್ಲರಾಜರನ್ನು, ವಿಜಿಗ್ಯೇ—ಗೆದ್ದನು, ವೀರಃ ಚ ಅಸೌ – ಆ ನಕುಲನು ಪರಾಕ್ರಮಿಯಾದರೂ ಕೂಡ, ಮಾತುಲಾತ್–ಸೋದರಮಾವ ಶಲ್ಯರಾಜನಿಂದ, ಸೌಹಾರ್ದಾದೇವ—ಸ್ನೇಹದಿಂದಲೇ, (ಪರಾಕ್ರಮ ಯುದ್ಧಗಳಿಂದ ಅಲ್ಲ) , ಕರಂ – ಕರವನ್ನು ಆಪ–ಹೊಂದಿದನು, ಚ–ಮತ್ತು, ಮಹಾರತ್ನಸಂಚಯೇನ – ಬಹುರತ್ನ ಸಮೂಹದಿಂದ [ಸಹಿತಃಸನ್ – ಕೂಡಿದವನಾಗಿ], ಸ್ವಕಂ ಪುರಂ—ತನ್ನ ಇಂದ್ರ ಪ್ರಸ್ಥಕ್ಕೆ, ಆಯಯೌ—ಬಂದನು. ॥೨೨೩॥

ಭಾವಾನುವಾದ ೨೧೪ – ೨೨೩

ಸಹದೇವನು ದಕ್ಷಿಣದಿಕ್ಕಿನಲ್ಲಿಯ ರಾಜರ ಮೇಲೆ ವಿಜಯ ಸಂಪಾದಿಸಲು ಹೋಗಿದ್ದನು. ಅಲ್ಲಿರುವ ರಾಜರೆಲ್ಲರನ್ನು ಗೆದ್ದುಬಂದನು. ಅನೇಕ ರತ್ನಕಾಣಿಕೆಗಳನ್ನು ತಂದನು. ಆದರೆ ಆ ದಿಕ್ಕಿನಲ್ಲಿ ಕುಂಡಿನಪುರಕ್ಕೆ ಹೋದಾಗ ಅಲ್ಲಿರುವ ರುಕ್ಮಿಯು ಯುದ್ಧಮಾಡಲಿಲ್ಲ. ಏಕೆಂದರೆ, ಹಿಂದೆ ರುಕ್ಮಿಣೀಸ್ವಯಂವರದ ಕಾಲದಲ್ಲಿ ಶ್ರೀಕೃಷ್ಣನಿಂದ ಅವಮಾನಿತನಾಗಿ ಊರನ್ನು ಪ್ರವೇಶಿಸುವದಿಲ್ಲ ಎಂದು ಪ್ರತಿಜ್ಞೆಮಾಡಿ ಹೋದ ರುಕ್ಮಿಯು ಶ್ರೀಕೃಷ್ಣನ ಮೇಲಿನ ಕ್ರೋಧದಿಂದ ಅವನನ್ನೇ ಗೆಲ್ಲುವ—ಸಂಹರಿಸುವ ಉದ್ದೇಶದಿಂದ ಅದಕ್ಕಾಗಿ ಶ್ರೇಷ್ಠವಾದ ಒಂದು ಆಯುಧದ ಸಂಪಾದನೆ ಮಾಡಬೇಕೆಂಬ ಉದ್ದೇಶದಿಂದ ಶ್ರೀರುದ್ರದೇವರನ್ನು ಕುರಿತು ತಪಸ್ಸು ಮಾಡಿದನು. ಅದರಿಂದ ತುಷ್ಟರಾದ ಶ್ರೀರುದ್ರದೇವರು ಒಂದು ಧನುಸ್ಸನ್ನು ಕೊಟ್ಟರು. ಇದರಿಂದ ನೀನು ಎಲ್ಲ ರಾಜರನ್ನೂ ಜಯಿಸುವಿ; ಶ್ರೀಕೃಷ್ಣನನ್ನು ಜಯಿಸಲಾಗುವದಿಲ್ಲ; ಅಷ್ಟೇ ಅಲ್ಲ. ಶ್ರೀಕೃಷ್ಣವಿರೋಧವನ್ನು ನೀನು ಮಾಡಿದರೆ ಆಗ ಈ ಧನುಸ್ಸು ನನಗೆ ವಾಪಸ್ ಬಂದು ಸೇರುವದು, ಎಂದು ಹೇಳಿದರು. ಹೀಗಾಗಿ ಅವನಿಂದ ಧನುಸ್ಸು ಹೋಗುವ ಭಯದಿಂದ ಶ್ರೀಕೃಷ್ಣನ ವಿರೋಧಿಕಾರ್ಯಗಳನ್ನು ಮಾಡುತ್ತಿದ್ದಿಲ್ಲ. ಶ್ರೀಕೃಷ್ಣನು ಈ ರಾಜಸೂಯವನ್ನು ಮಾಡಿಸುತ್ತಿದ್ದದ್ದರಿಂದ, ಈ ಯಜ್ಞಕ್ಕೆ ವಿರುದ್ಧವಾಗಿ ತಾನು ಯುದ್ಧಕ್ಕೆ ನಿಂತರೆ ಶ್ರೀಕೃಷ್ಣನ ವಿರೋಧವಾಗಿ ಧನುಸ್ಸು ಹೋದೀತೆಂಬ ಭಯದಿಂದ ಮತ್ತು ಸಹೋದರಿ ಶ್ರೀರುಕ್ಮಿಣಿಯ ಮೇಲಿನ ಸ್ನೇಹದಿಂದಲೂ, ಭೀಮಾರ್ಜುನರ ಸಾಮರ್ಥ್ಯವನ್ನು ತಿಳಿದವನಾದ್ದರಿಂದಲೂ ರುಕ್ಮಿಯು ಸಹದೇವನ ಜೊತೆಗೆ ಯುದ್ಧ ಮಾಡಲಿಲ್ಲ. ಕಪ್ಪ–ಕಾಣಿಕೆಯನ್ನು ಒಪ್ಪಿಸಿದನು. ಸಹದೇವನು ಲಂಕೆಯಲ್ಲಿರುವ ವಿಭೀಷಣನಿಂದ ಕರವನ್ನು ತರುವದಕ್ಕಾಗಿ ಘಟೋತ್ಕಚನನ್ನು ಕಳಿಸುವ ಉದ್ದೇಶದಿಂದ ಅವನನ್ನು ಸ್ಮರಿಸಿದನು. ಆ ಘಟೋತ್ಕಚನ ತಾಯಿ ಹಿಡಿಂಬೆಯು ಪಾಂಡವರಿಗೆ ನೀವು ಸ್ಮರಿಸಿದಾಗ ನಾವು ಬರುವವು, ಎಂದು

ವಚನಕೊಟ್ಟದರಿಂದ, ಘಟೋತ್ಕಚನುಕೂಡಲೇ ಬಂದನು ಅವನನ್ನು ಲಂಕೆಗೆ ಕಳುಹಿದನು. ಅಲ್ಲಿಗೆ ಬಂದಾಗ ವಿಭೀಷಣನು ಶ್ರೀರಾಮದೇವರು ತನಗೆ ಮುಂದೆ ದ್ವಾಪರಯುಗದಲ್ಲಿ ಪಾಂಡವರು ರಾಜಸೂಯ ಯಾಗವಮಾಡುವರು. ಅದಕ್ಕಾಗಿ ಕರವನ್ನು ಕೇಳಲು ನಿನ್ನ ಹತ್ತಿರ ಘಟೋತ್ಕಚನು ಬರುವನು. ನೀನು ಕರವನ್ನುಕೊಡಬೇಕು ಎಂದು ಹೇಳಿದ್ದನ್ನು ಸ್ಮರಿಸಿಕೊಂಡು, ಸಾಕ್ಷಾತ್ ಶ್ರೀರಾಮನೇ ಶ್ರೀಕೃಷ್ಣಪ್ರಭುವಾಗಿದ್ದು ಅವನೇ ಯಜ್ಞಪ್ರವರ್ತನಾಗಿದ್ದದ್ದನ್ನು ತಿಳಿದು, ಪಾಂಡವರು ದೇವಾವತಾರಿಗಳು ಎಂಬುದನ್ನೂ ತಿಳಿದು, ಭೀಮಾರ್ಜುನರ ಸಾಮರ್ಥ್ಯದ ಬಗ್ಗೆಯೂ ತಿಳಿದು ಮಹಾರತ್ನರಾಶಿಯನ್ನು ಕರವನ್ನಾಗಿಕೊಟ್ಟನು. ಅದನ್ನು ತೆಗೆದುಕೊಂಡು ಬಂದು ಸಹದೇವನಿಗೆ ಒಪ್ಪಿಸಿದನು. ಸಹದೇವನಾದರು ಅದೆಲ್ಲದರಿಂದ ಸಹಿತನಾಗಿ ಇಂದ್ರಪ್ರಸ್ಥಕ್ಕೆ ಬಂದನು ಪಶ್ಚಿಮ ದಿಕ್ಕಿಗೆ ವಿಜಯಕ್ಕಾಗಿ ಹೋದ ನಕುಲನು ಆ ದಿಕ್ಕಿನಲ್ಲಿಯು ಶಲ್ಯರಾಜನೊಬ್ಬನನ್ನು ಬಿಟ್ಟು ಉಳಿದೆಲ್ಲ ರಾಜರನ್ನೂ ಗೆದ್ದು ಕಪ್ಪವನ್ನು ಸಂಪಾದಿಸಿ ತಂದನು ಶಲ್ಯರಾಜನು ಮಾವನಾದ್ದರಿಂದ ಸ್ನೇಹದಿಂದಲೇ ಕರವನ್ನು ಇತ್ತನು. ಅದನ್ನು ತೆಗೆದುಕೊಂಡು ಇಂದ್ರಪ್ರಸ್ಥಕ್ಕೆ ಬಂದನು

ಆರ್ಜುನ: ಕಪಿವರೋಚ್ಛ್ರಿತಧ್ವಜಂ ಸ್ಯಂದನಂ ಸಮುಧಿರುಹ್ಯಗಾಂಡಿವೀ।
ಯಾತ ಏವ ದಿಶಮುತ್ತರಾಂ ತದಾ ಪಾರ್ವತೀಯಕನೃಪಾಸ್ಸಮಾಯಯುಃ ॥೨೨೪॥

ಗಾಂಡಿವೀ – ಗಾಂಡೀವಧನುರ್ಧಾರಿಯಾದ, ಆರ್ಜುನಃ—ಅರ್ಜುನನು, ಕಪಿವರೋಚ್ಛ್ರಿತಧ್ವಜಂ ಸ್ಯಂದನಂ ಕಪಿಶ್ರೇಷ್ಠರಾದ ಹನುಮಂತದೇವರ ಸಾನ್ನಿಧ್ಯದಿಂದಾಗಿ ಉತ್ಕೃಷ್ಟವಾದ ಧ್ವಜದಿಂದ ಕೂಡಿದ ರಥವನ್ನು, ಸಮಾಧಿರುಹ್ಯ – ಏರಿ ಯಂದಾ — ಯಶಾವಾಗ, ಉತ್ತರಾಂ ದಿಶಂ – ಉತ್ತರದಿಕ್ಕಿಗೆ, ಯಾತಃ - ಹೋದನೋ, ತದಾಏವ – ಆಗಲೇ ಪಾರ್ವತೀಯ ಕನೃಪಾಃ—ಪಾರ್ವತೇಯ ಗಣದನಿಷಾದಾದಿಕುಲದ ದೊಪ್ಪರಾಜರು, ಸಮಾಯಯುಃ :—ಯುದ್ಧಕ್ಕಾಗಿ ಬಂದರು ॥೨೨೪॥

ತ್ರೈಗರ್ತಾ:ಪಾರ್ವತೇಯಾಶ್ಚ ಸಹಿತಾಃ ಪಾಂಡುನಂದನವ್ ।
ಅಭ್ಯೇತ್ಯಯೋಧಯಾಮಾಸುರ್ಜಾನಂತಸ್ತಚ್ಚಿ ಕೀರ್ಷಿತವ್ ॥೨೨೫॥

ತ್ರೈಗರ್ತಾ:—ತ್ರಿಗರ್ತಗಣದವರು, ಪಾರ್ವತೇಯಾ;—ಪಾರ್ವತೇಯಗಣದವರು, ಸಹಿತಾಃ ಸಂತಃ - ಒಟ್ಟಾಗಿ, ಅಭ್ಯೇತ್ಯ – ಬಂದು, ತಚ್ಚಿಕೀರ್ಷಿತಂ – ಅರ್ಜುನನಿಗೆಪಾಡಲು ಇಷ್ಟವಾದ ರಾಜಸೂಯಯಾಗವನ್ನು (ಅರ್ಜುನನು ರಾಜಸೂಯಯಾಗ ಮಾಡುವದಕ್ಕಾಗಿ ಈ ದಿಗ್ವಿಜಯಕ್ಕೆ ಪ್ರವೃತ್ತನಾಗಿದ್ದಾನೆ ಎಂಬುದನ್ನು), ಜಾನಂತಃಅಪಿ —ತಿಳಿದವರಾಗಿಯೂ ಕೂಡ, ಯೋಧಯಾಮಾಸುಃ – ಯುದ್ಧಮಾಡಿದರು. ॥೨೨೫॥

ತಾನ್ವಿಜಿತ್ಯಯುಗಪತ್ಸ ಪಾಂಡವ ಸ್ಸಂಜಯನ್ ಕ್ರಮುಶ ಏವ ತಾಂ ದಿಶಮ್।
ಪ್ರಾವ್ರಜಚ್ಚ ಭಗದತ್ತ ಮೂರ್ಜಿತಂ ತೇನ ಚಾಸ್ಯ ಸಮಭೂನ್ಮಹಾರಣಃ ॥೨೨೬॥

ಸಃ ಪಾಂಡವಃ – ಆ ಅರ್ಜುನನು, ತಾನ್ – ತ್ರೈಗರ್ತರನ್ನು, ಪಾರ್ವತೇಯರನ್ನು, ಯುಗಪತ್–ಏಕಕಾಲದಲ್ಲಿ ವಿಜಿತ್ಯ–ಗೆದ್ದು, ತಾಂ ದಿಶಂ – ಆ ಉತ್ತರದಿಕ್ಕನ್ನು, ಕ್ರಮಶಃ ಏವ–ಕ್ರಮವಾಗಿ, ಸಂಜಯನ್ ಸನ್ – ಗೆಲ್ಲುವವನಾದಿ, ಊರ್ಜಿತಂ – (ಬಲಾದಿಗುಣಗಳಿಂದ) ಶ್ರೇಷ್ಠನಾದಂಥ, ಭಗದತ್ತಂ–ಭಗದತ್ತನನ್ನುಕುರಿತು ಪ್ರಾವ್ರಜತ್ – ಬಂದನು. ಅಸ್ಯ–ಈ ಅರ್ಜುನನಿಗೆ, ತೇನ – ಆ ಭಗದತ್ತನಿಂದ, ಮಹಾರಣಃ – ಮಹಾಯುದ್ಧವು, ಸಮಭೂತ್ – ಆಯಿತು, ॥೨೨೬॥

ಸೋಽಭಿಯುಧ್ಯ ಸಗಜೋ ದಿನಾಷ್ಟಕಂ ಶ್ರಾಂತ ಆಹ ಪುರುಹೂತನಂದನವ್।
ಬ್ರೂಹಿ ತೇ ಸಮರಕಾರಣಂ ತ್ವಿತಿ ಪ್ರಾಹ ದೇಹಿ ಕರಮಿತ್ಯಥಾರ್ಜುನಃ ॥೨೨೭॥

ಸಃ ಆ ಭಗದತ್ತನು, ಸಗಜಃ – ತನ್ನ ಸಂಪ್ರತೀಕ ಆನೆಯಿಂದಸಹಿತನಾಗಿ, ದಿನಾಷ್ಟಕಂ–ಎಂಟು ದಿನಗಳವರೆಗೆ, ಅಭಿಯುಂಧ್ಯ – ಚೆನ್ನಾಗಿಯುದ್ಧಮಾಡಿ, ಶ್ರಾಂತಃ — ಶ್ರಮಹೊಂದಿದವನಾಗಿ, ಪುರುಹೂತನಂದನಂ — ಇಂದ್ರಪುತ್ರನಾದ ಅರ್ಜುನನನ್ನು ಕುರಿತು, ತೇ – ನಿನ್ನ, ಸಮರಕಾರಣಂ — ಯುದ್ಧದಕಾರಣವನ್ನು, ಬ್ರೂಹಿ — ಹೇಳು, ಇತಿ ಅಹ — ಎಂದು ಹೇಳಿದನು ಅಥ—ಹಾಗೆ ಕೇಳಿದನಂತರ, ಅರ್ಜುನಃ—ಅರ್ಜುನನು, ತಂ–ವಿಶೇಷವಾಗಿ, ಕರಂ ಕರವನ್ನು ದೇಹಿ–ಕೊಡು, ಇತಿ ಪ್ರಾಹ—ಎಂದು ಹೇಳಿದನು. ॥೨೨॥

ಸೋಽಪ್ಯದಾತ್ಕರಮುಷ್ಯ ವಾಸವೋ ಮದ್ಗುರುಸ್ತವ ಪಿತೇತಿ ಸಾದರಮ್।
ನೈವ ಜೇತುಮಿಹ ಶಕ್ಷ್ಯಸಿತ್ವಮಿತ್ಯಾವದದ್ಧರಿವರಾಸ್ತ್ರತೇಜಸಾ ॥೨೨೪॥

ಸಃ ಅಪಿ – ಆ ಭಗದತ್ತನೂಕೂಡ, ತವ ಪಿತಾ ವಾಸವಃ—ನಿನ್ನ ತಂದೆಯಾದ ಇಂದ್ರನು, ಮದ್ಗುರುಃ:–ನನ್ನ ಗುರುವಾಗಿರುವನು. (ಆದ್ದರಿಂದ ಗುರುಪುತ್ರನಾದ ನೀನು ಗುರುವಿನಂತೆ ಗೌರವಾರ್ಹನು) ಇತಿ – ಎಂದು, ಉಕ್ತ್ವಾ–ಹೇಳಿ, ಕರಂ —ಕರಕಾಣಿಕೆಯನ್ನು, ಸಾದರಂ—ಆದರಸಹಿತವಾಗಿ, ಅದಾತ್ – ಕೊಟ್ಟನು. ಚ ಮತ್ತು, ತ್ವಂ— ನೀನು, ಇಹ–ಈ ಸಮಯದಲ್ಲಿ (ಅಂದರೆ ವರಾಹರೂಪಿಪರಮಾತ್ಮನು ನಮ್ಮ ತಂದೆಯಾದ ನರಕನಿಗೆಕೊಟ್ಟ ಅಸ್ತ್ರವು ನನ್ನ ಹತ್ತಿರವಿರುವ ಸಮಯದಲ್ಲಿ), ಹರಿವರಾಸ್ತ್ರತೇಜಸಾ—ಭಗವಂತನ ಅಸ್ತ್ರಸಾಮರ್ಥ್ಯ ನನ್ನಲ್ಲಿ ಇರುವದರಿಂದಾಗಿ, (ಮಾಂ – ನನ್ನನ್ನು), ಜೇತುಂ – ಗೆಲ್ಲಲು, ನ ಶಕ್ಷ್ಯಸಿ ಏವ—ಸಮರ್ಥನಲ್ಲವೇ ಅಲ್ಲ, ಇತಿ – ಎಂದು, ಅವದತ್ – ಹೇಳಿದನು. ॥೨೨೪॥

ಸ್ನೇಹಪೂರ್ವಂ ಪ್ರದತ್ತೇ ತು ಕರೇ ನೈವಾಹ ಚೋತ್ತರಮ್ ।
ಅರ್ಜುನೋ ವ್ಯರ್ಥಕಲಹ ಮನಿಚ್ಛನ್ ಸ್ನೇಹಯುಂತ್ರಿತಃ ॥೨೨೯॥

ಕರೇ ತು – ಕಪ್ಪಕಾಣಿಕೆಯೇ, ಸ್ನೇಹಪೂರ್ವಂ – ಪ್ರೀತಿಪೂರ್ವಕವಾಗಿ, ಪ್ರದತ್ತೇ ಸತಿ—ಭಗದತ್ತನಿಂದ ಕೊಡಲ್ಪಟ್ಟರುವಾಗ, ವ್ಯರ್ಥಕಲಹಂ — ಪ್ರಯೋಜನವಿಲ್ಲದ ಜಗಳ (ಯುದ್ಧ) ವನ್ನು, ಅನಿಚ್ಛನ್ – ಅಪೇಕ್ಷಿಸದಿರುವ, ಸ್ನೇಹಯುಂತ್ರಿತಃ—ಸ್ನೇಹಕ್ಕೊಳಗಾದ. ಅರ್ಜುನಃ – ಅರ್ಜುನನು, ಉತ್ತರಂ— ಭಗದತ್ತನು ಹೇಳಿದ 'ನನ್ನನ್ನುಗೆಲ್ಲಲು ಸಮರ್ಥನಾಗಲಾರಿ' ಎಂಬ ಮಾತಿಗೆ 'ಹಾಗಾದರೆ ಪರೀಕ್ಷೆಮಾಡೋಣ, ಬಾ ಯುದ್ಧಕ್ಕೆ' ಎಂಬ ಉತ್ತರರೂಪವಾದ ಮಾತನ್ನು ನೈವ ಅಹ—ಹೇಳಲೇಇಲ್ಲ. ॥೨೨೯॥

ಸಾರ್ಥೋ ಜಿತ್ವಾಽಷ್ಟವರ್ಷಾಣಿ ಷಡ್ದ್ವೀಪಾನಪರಾನಪಿ।
ಆಜಯಚ್ಚತುರ್ದಿಶಮಪಿ ಸರ್ವಶಸ್ತ್ರತೇಜಸಾ ॥೨೩೦॥

ಪಾರ್ಥಃ — ಅರ್ಜುನನು, ಅಷ್ಟವರ್ಷಾಣಿ — ಭಾರತವರ್ಷವನ್ನು ಬಿಟ್ಟು ಉಳಿದ ಎಂಟುವರ್ಷಗಳನ್ನು, ಅಪರಾನ್ — ಜಂಬೂದ್ವೀಪಕ್ಕಿಂತ ಬೇರೆಯಾದ, ಷಡ್ದ್ವೀಪಾನ್ ಅಪಿ—ಆರುದ್ವೀಪಗಳನ್ನೂ ಕೂಡ, ಅಪಿ—ಹಾಗೂ, ಚತುರ್ದಿಶಂ ಯಂಥಾಭವತಿತಥಾ—ನಾಲ್ಕೂ ದಿಕ್ಕುಗಳನ್ನು ಗೆದ್ದಂತೆ ಹೇಗೆ ಆಗಬೇಕೋ ಹಾಗೆ, ಸರ್ವಶಃ – ಎಲ್ಲವನ್ನು, ಶಸ್ತ್ರತೇಜಸಾ—ಆಯುಧಸಾಮರ್ಥ್ಯದಿಂದ, ಅಜಯತ್—ಗೆದ್ದನು. ॥೨೩೦॥

ಸಾತಾಲಸಪ್ತಕಂ ಗತ್ವಾ ಜಿತ್ವಾ ದೈತೇಯದಾನವಾನ್ ।
ಬಲೇಶ್ಚ ವಿಷ್ಣುವಚನಾತ್ಕರಂ ಜಗ್ರಾಹ ಸಾಮತಃ ॥೨೩೧॥

(ಅರ್ಜುನನು) ಪಾತಾಲಸಪ್ತಕಂ ಗತ್ವಾ – ಪಾತಾಳಾದಿಸಪ್ತಲೋಕಗಳಿಗೆ ಹೋಗಿ. ದೈತೇಯದಾನವಾನ್–ದೈತ್ಯ ದಾನವರನ್ನು, ಜಿತ್ವಾ – ಗೆದ್ದು ವಿಷ್ಣುವಚನಾತ್ – ಬಲಿರಾಜನದ್ವಾರಪಾಲಕನಾಗಿ ಇರುವ ಕಪಿಲರೂಪಿಪರಮಾತ್ಮನಮಾತಿನ ಪ್ರಕಾರ, ಬಲೇಃ – ಬಲಿರಾಜನದೆಶೆಯಿಂದ, ಕರಂ–ಕರವನ್ನು, ಸಾಮತಃ – ಸಾಮೋಪಾಯದಿಂದಲೇ, ಜಗ್ರಾಹ – ಸ್ವೀಕರಿಸಿದನು. ॥೨೩೧॥

ಜಿತ್ವಾ ಚ ವಾಸುಕಿಂ ಭೂರಿರತ್ನಮಾದಾಯ ಸತ್ವರಃ ।
ಆಜಗಾಮ ಪುರಂ ಸ್ವೀಯಂ ವೀರೋ ವತ್ಸರಮಾತ್ರತಃ ॥೨೩೨॥

ವೀರಃ – ಪರಾಕ್ರಮಿಯಾದ ಅರ್ಜುನನು, ವಾಸುಕಿಂ ಚ—ವಾಸುಕಿಯನ್ನೂಕೂಡ, ಜಿತ್ವಾ–ಗೆದ್ದು, ಭೂರಿರತ್ನಂ—ಬಹುರತ್ನರಾಶಿಯನ್ನು, ಆದಾಯ, ತೆಗೆದುಕೊಂಡು, ಸತ್ವರಃಸನ್ ವೇಗದಿಂದಸಹಿತನಾದವನಾಗಿ, ವತ್ಸರ ಮಾತ್ರತಃ – ಒಂದು ವರ್ಷದೊಳಗೆ, ಸ್ವೀಯಂ ಪುರಂ – ತನ್ನ ಪಟ್ಟಣವಾದಇಂದ್ರಪ್ರಸ್ಥಕ್ಕೆ, ಆಜಗಾಮ–ಬಂದನು. ॥೨೩೨॥

ಸುವರ್ಣರತ್ನಗಿರಯಶ್ಚತುರ್ಭಿಃತೈಸ್ಸಮಾರ್ಜಿತಾಃ ।
ಚತ್ವಾರೋ ಯೋಜನಾನಾಂ ಹಿ ದಶ ವಿಂಶಚ್ಛತಂ ತಥಾ ।
ಚತುಶ್ಶತಂ ಚ ಕ್ರಮುಶ ಉಚ್ಛ್ರಿತಾ ದಿಗ್ಜಯಾರ್ಜಿತಾಃ ॥೨೩೩॥

ಪ್ರತೀಚ್ಯಾದ್ಯಪಸವ್ಯೇನ ಕ್ರಮಾದ್ದಿಗ್ಭಿಸ್ಸಮಾರ್ಜಿತಾಃ ।
ವಿಶ್ವಕರ್ಮಕೃತತ್ವಾತ್ತು ಪುರಸ್ಯಾಲ್ಪೇಽಪಿ ಚ ಸ್ಥಲೇ ॥೨೩೪॥

ಆಂತರ್ಗತಾಸ್ತೇ ಗಿರಯಸ್ತದದ್ಭುತಮಿವಾಭವತ್ ।
ತತೋ ಯಜ್ಞಃಪ್ರವವೃತೇ ಕೃಷ್ಣದ್ವೈಪಾಯನೇರಿತಃ ॥೨೩೫॥

ತೈಃ ಚತುರ್ಭಿಃ—ಆ ನಾಲ್ಕು ಜನಪಾಂಡವರಿಂದ, ಚತ್ವಾರಃಸುವರ್ಣರತ್ನಗಿರಯಃ—ನಾಲ್ಕು ಭಂಗಾರ ಹಾಗು ರತ್ನದ ಪರ್ವತಗಳು, ಸಮಾರ್ಜಿತಾಃ ಸಂಪಾದಿಸಲ್ಪಟ್ಟಿದ್ದವು. ಕ್ರಮಶಃ – ಕ್ರಮವಾಗಿ, ಯೋಜನಾನಾಂ ಚತ್ವಾರಃ–ನಾಲ್ಕು ಯೋಜನಗಳಷ್ಟು, ಯೋಜನಾನಾಂ ವಿಂಶತ್–ಇಪ್ಪತ್ತುಯೋಜನಗಳಷ್ಟು ಯೋಜನಾನಾಂ ಶತಂ – ಒಂದು ನೂರು ಯೋಜನಗಳಷ್ಟು. ತಥಾ – ಹಾಗು, ಯೋಜನಾನಾಂ ಚತುಶ್ಶತಂ – ನಾಲ್ಕುನೂರುಯೋಜನಗಳಷ್ಟು, ಉಚ್ಛ್ರಿತಾಃ–ವಿಸ್ತಾರವಾದಂಥ (ವಿಶಾಲವಾದಂಥ), ದಿಗ್ಜಯಾರ್ಜಿತಾಃ—ದಿಗ್ವಿಜಯಕಾಲದಲ್ಲಿ ಸಂಪಾದಿಸಲ್ಪಟ್ಟಂಥ, ತೇ – ಆ ಪರ್ವತಾಕಾರದ ಸುವರ್ಣರತ್ನರಾಶಿಗಳು, ಕ್ರಮಾತ್ ಪ್ರತೀಚ್ಯಾದ್ಯಪಸವ್ಯೇನ – ಪಶ್ಚಿಮ ದಿಕ್ಕನ್ನುಪ್ರಾರಂಭಿಸಿ ಎಡಕ್ಕೆತಿರುಗುವಕ್ರಮದಲ್ಲಿ ಬರುವದಿಕ್ಕುಗಳಕ್ರಮವಾಗಿ, ದಿಗ್ಭಿಃ – ದಿಕ್ಕುಗಳದೆಶೆಯಿಂದ, ಸಮಾರ್ಜಿತಾಃ – ಸಂಪಾದಿಸಲ್ಪಟ್ಟಿದ್ದವು ತು — ಆದರೆ (ಆ ರಾಶಿ ಅಷ್ಟದೊಡ್ಡದಾದರೂ ಇಂದ್ರಪ್ರಸ್ಥ ಸ್ಥಳಸಣ್ಣದಾದರೂ, ವಿಶ್ವಕರ್ಮಕೃತತ್ವಾತ್ — ಆ ಇಂದ್ರಪ್ರಸ್ಥಪ್ರದೇಶವು ವಿಶ್ವಕರ್ಮನಿಂದ ರಚಿಸಲ್ಪಟ್ಟದ್ದರಿಂದ,ಅಲ್ಪೇ ಅಪಿ ಸ್ಥಲೇ – ಸಣ್ಣದಾದ ಆ ಸ್ಥಳದಲ್ಲಿಯಾಕೂಡ, ತೇ ಗಿರಯಃ – ಆ ಪರ್ವತಗಳು, ಆಂತರ್ಗತಾಃ—ಒಳಗೆಸೇರಿದವು. ತತ್ – ಅದು, ಅಷ್ಟೂ ದೊಡ್ಡರಾಶಿಗಳು ಆ ಸ್ಥಳದಲ್ಲಿ ಹಿಡಿಸುವಂತಾದದ್ದು, ಅದ್ಭುತಮಿವ – ಬಹಳ ಆಶ್ಚರ್ಯಕರವೆಂಬಂತೆ, ಅಭವತ್ – ಆಯಿತು. ತತಃ–ಆ ರೀತಿ ದಿಗ್ವಿಜಯದನಂತರ, ಕೃಷ್ಣದ್ವೈಪಾಯನೇರಿತಃ – ಶ್ರೀವೇದವ್ಯಾಸದೇವರಿಂದ ಪ್ರೇರಿತವಾದ, ಯಜ್ಞಃ–ರಾಜಸೂಯಾಶ್ವಮೇಧಯಾಗವು, ಪ್ರವವೃತೇ—ಪ್ರವೃತ್ತವಾಯಿತು. ॥೨೩೩॥೨೩೪॥೨೩೫॥

ಋತ್ವಿಜೋ ಮುನಯೋ ತ್ರಾಸನ್ಸರ್ವವಿದ್ಯಾಸು ನಿಷ್ಠಿತಾಃ ।
ದ್ವೈಪಾಯನೋಕ್ತವಿಧಿನಾ ದೀಕ್ಷಯಾಂಚಕ್ರೇ ನೃಪಮ್ ॥೨೩೬॥

ಸರ್ವವಿದ್ಯಾಸು ನಿಷ್ಠಿತಾಃ—ಎಲ್ಲ ವಿದ್ಯೆಗಳಲ್ಲಿ ವಿಶಾರದರಾದ ಮುನಯಃ ಮುನಿಗಳು, ಅತ್ರ – ಈ ಯಾಗದಲ್ಲಿ, ಋತ್ವಿಜಃ ಆಸನ್–ಋತ್ವಿಜರಾಗಿದ್ದರು ದ್ವೈಪಾಯನೋಕ್ತವಿಧಿನಾ—ಶ್ರೀವೇದವ್ಯಾಸದೇವರಿಂದ ಹೇಳಲ್ಪಟ್ಟ ಕ್ರಮದಿಂದ, ನೃಪಂ—ಧರ್ಮರಾಜನನ್ನು, ದೀಕ್ಷಯಾಂಚಕ್ರೇ–ಯಾಗದಲ್ಲಿ ದೀಕ್ಷಿತನನ್ನಾಗಿ ಮಾಡಿದರು. ॥೨೩೬॥

ಜ್ಯೇಷ್ಠತ್ವಾದ್ಭೀಮಯಾಜ್ಯಂ ತು ಪ್ರಣಿಧಾಯ ಯುಧಿಷ್ಠಿರೇ ।
ಭೀಮಾರ್ಜುನಾದಯಸ್ಸರ್ವೇ ಸಹ ತೇನ ಸಮಾಸಿರೇ ॥೨೩೭॥

ಭೀಮಾರ್ಜುನಾದಯಃ ಸರ್ವೇ – ಭೀಮಾರ್ಜುನರೇ ಮೊದಲಾದ ಎಲ್ಲರೂ, ಜ್ಯೇಷ್ಠತ್ವಾತ್—ಧರ್ಮರಾಜನು ಹಿರಿಯನಾದ್ದರಿಂದ, ಯಾಜಮಾನ್ಯಂ ತು–ಯಾಜಮಾನನ ಸ್ಥಾನವನ್ನು, ಯುಧಿಷ್ಠಿರೇ–ಧರ್ಮರಾಜನಲ್ಲಿ, ಪ್ರಣಿಧಾಯ—ಇಟ್ಟು ತೇನ ಸಹ – ಧರ್ಮಜನ ಜೊತೆಗೆ, ಸಮಾಸಿರೇ—ಕುಳಿತರು ॥೨೩೭॥

ಬ್ರಹ್ಮಾಣೀಪದಯೋಗ್ಯತ್ವಾತ್ಕೃಷ್ಣೈಕಾ ಯಜ್ಞಪತ್ನ್ಯಭೂತ್ ।
ಪದಯೋಗ್ಯತಯಾ ನಾನ್ಯಾಃ ಪತ್ನ್ಯಸ್ತೇಷಾಂ ಸಹಾಸಿರೇ ॥೨೩೮॥

ಕೃಷ್ಣೈಕಾ – ದ್ರೌಪದೀದೇವಿಯೊಬ್ಬಳು, ಬ್ರಹ್ಮಾಣೀಪದಯೋಗ್ಯತ್ವಾತ್ – ಸರಸ್ವತೀ ಪಟ್ಟಕ್ಕೆ ಯೋಗ್ಯಳಾದ್ದರಿಂದ, ಯಜ್ಞಪತ್ನೀ – ಯಜ್ಞಾಧಿಷ್ಠಾನಿಯಾಗಿ, ಅಭೂತ್—ಆದಳು. ತೇಷಾಂ–ಆ ಪಾಂಡವರ, ಅನ್ಯಾಃ ಪತ್ನ್ಯಃ – ಇತರ ಪತ್ನಿಯರು ತೇಷಾಂ ಸಹ–ಆ ಪಾಂಡವರ ಜೊತೆಗೆ, ನ ಆಸರೇ—ಕೂಡಲಿಲ್ಲ. ॥೨೩೮॥

ಆಜ್ಞಯೈವ ಜಗದ್ಧಾತುರ್ವ್ಯಾಸಸ್ಯಾನಂತತೇಜಸಃ ।
ಸ್ಥಲಮುಪತ್ರ ಸರ್ವಂ ಹಿ ರತ್ನಹೇಮಮಯಂ ತ್ವಭೂತ್
ಕಿಮು ಪಾತ್ರಾದಿಕಂ ಸರ್ವಂಶಿಬಿರಾಣಿ ಚ ಸರ್ವಶಃ ॥೨೩೯॥

ಜಗದ್ಧಾತುಃ – ಜಗದ್ಧಾರಕನಾದ, ಅನಂತತೇಜಸಃ—ಅಪರಿಮಿತ ತೇಜಸ್ಸಾಮರ್ಥ್ಯವುಳ್ಳ ವ್ಯಾಸಸ್ಯ – ಶ್ರೀವೇದವ್ಯಾಸದೇವರ, ಆಜ್ಞಯೈವ—ಇಚ್ಛೆಯಂತೆಯೇ, ಅತ್ರ – ಈ ಯಜ್ಞಪ್ರದೇಶದಲ್ಲಿ, ಸರ್ವಂಸ್ಥಲಂ ಹಿ—ಎಲ್ಲ ಸ್ಥಳವೂ ಕೂಡ, ರತ್ನಹೇಮಮಯಂತು—ರತ್ನಭಂಗಾರವಯವಾದದ್ದೇ, – ಅಭೂತ್ – ಆಗಿತ್ತು. ಹಾಗಿರುವಾಗ. ಸರ್ವಂ ಪಾತ್ರಾದಿಕಂ—ಎಲ್ಲ ಪಾತ್ರೆಮೊದಲಾದದ್ದು, ಸರ್ವಶಃಶಿಬಿರಾಣಿಚ—ಎಲ್ಲ ಶಿಬಿರಗಳೂಕೂಡ, ಕಿಮು—ರತ್ನಹೇಮಮಯ ಗಳಾಗಿದ್ದವು, ಎಂದು ಏನು ಹೇಳುವದು ? ರತ್ನಹೇಮಮಯಗಳೇ ಆಗಿದ್ದವು. ॥೨೩೯॥

ಆಹೂತಂ ದಿಗ್ಜಯೇ ಪಾರ್ಥೈಸ್ತದಾ ಲೋಕದ್ವಿಸಪ್ತಕಮ್ ॥೨೪೦॥
ಸರ್ವಮತ್ರಾಗಮದ್ಬ್ರಹ್ಮ ಶರ್ವಶಕ್ರಾದಿ ಪೂರ್ವಕಮ್ ।

ಭೀಷ್ಮೋ ದ್ರೋಣಶ್ಚ ವಿದುರೋ ಧೃತರಾಷ್ಟ್ರಸ್ಸಹಾತ್ಮಜಃ ।

ಸಸ್ತ್ರೀಕಾ ಆಯಯುಸ್ತತ್ರ ಬಾಹ್ಲೀಕಶ್ಚ ಸಹಾತ್ಮಜಃ ॥೨೪೧॥
ತಥೈವಯಾದವಾಸ್ಸರ್ವೇ ಬಲಭದ್ರಪುರೋಗಮಾಃ ।
ರುಕ್ಮಿಣೀಸತ್ಯಭಾಮಾದ್ಯಾಃ ಮಹಿಷ್ಯಃ ಕೇಶವಸ್ಯಚ ೨೪೨॥

ದಿಗ್ಜಯೇ—ದ್ವಿಗ್ವಿಜಯ ಕಾಲದಲ್ಲಿ, ಪಾರ್ಥೈಃ – ಪಾಂಡವರಿಂದ, ಆಹೂತಂ – ಆಮಂತ್ರಿಸಲ್ಪಟ್ಟ, ಬ್ರಹ್ಮಶರ್ವಶಕ್ರಾದಿಪೂರ್ವಕಂ – ಬ್ರಹ್ಮರುದ್ರೇಂದ್ರ ದೇವತೆಗಳೇ ಮೊದಲಾದ, ಸರ್ವಂ—ಎಲ್ಲ, ಲೋಕದ್ವಿಸಪ್ತಕಮ್– ಹದಿನಾಲ್ಕು ಲೋಕಗಳ ಸಮೂಹವು, ತದಾ—ಆಗ, ಅತ್ರ – ಯಜ್ಞಸ್ಥಳಕ್ಕೆ, ಆಗಮತ್ - ಬಂದಿತು ಭೀಷ್ಮಃ – ಭೀಷ್ಮಾಚಾರ್ಯರು, ಚ – ಮತ್ತು ಸಸ್ತ್ರೀಕಾಃ – ಪತ್ನೀಸಹಿತರಾದ, ದ್ರೋಣಃ—ದ್ರೋಣಾಚಾರ್ಯರು, ವಿದುರ:—ವಿದುರರಾಜರು, ಸಹಾತ್ಮಜಃ ಧೃತರಾಷ್ಟ್ರಃ – ಮಕ್ಕಳಿಂದ ಸಹಿತನಾದ ಧೃತರಾಷ್ಟ್ರನು, ಚ – ಹಾಗು ಸಹಾತ್ಮಜಃ – ಪುತ್ರರಿಂದ ಸಹಿತನಾದ, ಬಾಹ್ಲೀಕಃ - ಬಾಹ್ಲೀಕರಾಜನು, ತಥಾ - ಹಾಗೂ, ಬಲಭದ್ರಪುರೋಗಮಾಃ — ಬಲರಾಮದೇವರೇ ಮೊದಲಾದ, ಸರ್ವೇ ಯಾದವಾಃ – ಎಲ್ಲ ಯಾದವರು, ಚ – ಮತ್ತು, ರುಕ್ಮಿಣೀಸತ್ಯಭಾಮಾದ್ಯಾಃ ರುಕ್ಮಿಣಿಸತ್ಯಭಾಮಾದೇವಿಯರೇ ಮೊದಲಾದ, ಕೇಶವಸ್ಯ ಮಹಿಷ್ಯಃ – ಶ್ರೀಕೃಷ್ಣನ ಪತ್ನಿಯರು, (ಹದಿನಾರು ಸಾವಿರ ಒಂದು ನೂರಾ ಎಂಟು ಜನರು), ಸರ್ವೇ—ಹೀಗೆ ಎಲ್ಲರೂ; ತತ್ರ—ಆ ಯಜ್ಞ ಸ್ಥಳಕ್ಕೆ, ಆಯಯುಃ:—ಬಂದರು, ॥೨೩೮–೨೪೦-೨೪೨॥

ತತ್ರ ಸರ್ವಜಗದೇಕಸಂಗಮೇ ತತ್ತ್ವ ನಿರ್ಣಯ ಕಥಾ ಬಭೂವಿರೇ ।
ಪ್ರಾಶ್ನಿಕೋಽತ್ರ ಪರಿಪೂರ್ಣಚಿದ್ಘನೋ ವ್ಯಾಸ ಏವ ಭಗವಾನ್ಬಭೂವ ಹ ॥೨೪೩॥

ಸರ್ವಜಗದೇಕಸಂಗಮೇ—ಎಲ್ಲ ಲೋಕಗಳಮೇಲನದಿಂದ ಕೂಡಿದ, ತತ್ರ – ಆ ಯಜ್ಞಸ್ಥಳದಲ್ಲಿ, ತತ್ತ್ವ ನಿರ್ಣಯಕಥಾಃ – ತತ್ತ್ವನಿರ್ಣಯಕ್ಕಾಗಿ ಚರ್ಚೆಗಳು ಬಭೂವಿರೇ—ನಡೆದವು, ಅತ್ರ—ಈ ಚರ್ಚೆಗಳಲ್ಲಿ, ಪರಿಪೂರ್ಣ-ಚಿದ್ಘನಃ – ಪೂರ್ಣಜ್ಞಾನಸ್ವರೂಪರಾದ, ಭಗವಾನ್ – ಷಡ್ಗುಣಪೂರ್ಣರಾದ, ವ್ಯಾಸಃ ಏವ – ಶ್ರೀವೇದವ್ಯಾಸದೇವರೇ, ಪ್ರಾಶ್ನಿಕಃ – ನಿರ್ಣಾಯಕರು, ಬಭೂವ ಹ—ಆಗಿದ್ದರು. ॥೨೪೩॥

ತತ್ತ್ವನಿರ್ಣಯಕಥಾಸು ನಿರ್ಣಯೋ ವಾಸುದೇವಗುಣವಿಸ್ತರೋಽಭವತ್ ।
ನಾಸ್ತಿ ತತ್ಸದೃಶ ಉತ್ತಮಃ ಕುತಃ ಪಾರ ಏಷ ನ ತತೋಽನ್ಯ ಇತ್ಯಪಿ ॥೨೪೪॥

ತತ್ತ್ವನಿರ್ಣಯಕಥಾಸು – ತತ್ತ್ವನಿರ್ಣಯಕ್ಕಾಗಿ ನಡೆದ ಕಥೆಗಳಲ್ಲಿ, ವಾಸುದೇವಗುಣವಿಸ್ತರಃ – ಶ್ರೀನಾರಾಯಣನ ಗುಣಗಳ ಪ್ರಚಾರಕವಾದ, ತತ್ಸದೃಶಃ—ಆ ನಾರಾಯಣನಿಗೆ ಸದೃಶನಾದವನು, ನಾಸ್ತಿ–ಇರುವದಿಲ್ಲ, ಉತ್ತಮಃ ಕುತಃ—ಅವನಿಗಿಂತ ಉತ್ತಮನು ಇರಲು ಹೇಗೆ ಶಕ್ಯ ?(ಇಲ್ಲವೇ ಇಲ್ಲ) ಏಷಃ—ಶ್ರೀ ಮನ್ನಾರಾಯಣನೇ, ಪಾರಃ:—ಇವನಿಗಿಂತ ಇವನು ಉತ್ತಮ ಎಂದು ಹೇಳುವ ತಾರತಮ್ಯ ಕ್ರಮದಲ್ಲಿ ಕೊನೆಯ ಸ್ಥಾನದಲ್ಲಿರುವವನು, ತತಃ ಅನ್ಯಃ ನ—ಅವನಿಗಿಂತ ಬೇರೆಯಾದ ಅಂಥವರು ಇಲ್ಲ, ಇತ್ಯಪಿ—ಎಂದೂ ಕೂಡ, ನಿರ್ಣಯಃ ಅಭವತ್ – ನಿರ್ಣಯವು ಆಯಿತು. ॥೨೪೪॥

ಭಾವಾನುವಾದ ೨೩೪ - ೨೪೪

ಅರ್ಜುನನು ಶ್ರೀ ಹನುಮಂತದೇವರಿಂದ ಕೂಡಿದ ಧ್ವಜವುಳ್ಳ ರಥವನ್ನೇರಿ, ಶ್ರೀವ್ಯಾಸರ ಆದೇಶದಂತೆ ಉತ್ತರದಿಕ್ಕಿಗೆ ವಿಜಯಕ್ಕಾಗಿ ಹೊರಟನು. ಪಾರ್ವತೇಯ ಗಣದ ಅಂದರೆ ನಿಷಾದ, ಆಭಿರ ಇತ್ಯಾದಿ ಗಣದ ರಾಜರು

ತ್ರಿಗರ್ತರಿಂದ ಸಹಿತರಾಗಿ ಯಾದ್ದಕ್ಕಾಗಿ ಬಂದರು. ಅವರಿಗೆ ಅರ್ಜುನನು ರಾಜಸೂಯಯಾಗಕ್ಕಾಗಿ ವಿಜಯ ಹಾಗು ಕಪ್ಪಕಾಣಿಕೆ ಸಂಗ್ರಹ ಮಾಡುತ್ತಿದ್ದಾನೆ ಎಂಬುದು ಗೊತ್ತಿತ್ತು. ಆದರೂ ಕೂಡ ವಿರೋಧಿಸಿದರು. ಅವರನ್ನು ಜಯಿಸಿ ಹೊರಟು ಕ್ರಮದಿಂದ ಪ್ರಾಗ್ಜ್ಯೋತಿಷಪುರಕ್ಕೆ ಬಂದನು. ಆಲ್ಲಿ ನರಕಾಸುರನ ಮಗನಾದ ಭಗದತ್ತನು ಅರ್ಜುನನನ್ನು ಎದುರಿಸಿದನು. ಆಗ ಇಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ಭಗದತ್ತನು ತನ್ನ ಸಾಂಪ್ರತೀಕ ಆನೆಯಿಂದ ಸಹಿತವಾಗಿ ಎಂಟುದಿನಗಳವರೆಗೆ ಯುದ್ಧ ಮಾಡುತ್ತಾ ಶ್ರಮಹೊಂದಿ. ಏಕೆ ನೀನು ಯಾದ್ದಕ್ಕಾಗಿ ಬಂದಿರುವಿ ? ಕಾರಣವೇನು? ಎಂದು ಅರ್ಜುನನ್ನು ಕೇಳಿದನು. ಅದಕ್ಕೆ ಅರ್ಜುನನು ಕರವನ್ನು ಕೊಡು ಎಂದು ಹೇಳಿದನು. ಆಗ ಭಗದತ್ತನು ಅರ್ಜುನನಿಗೆ 'ನಿನ್ನ ತಂದೆಯಾದ ಇಂದ್ರನು ನನ್ನ ಗುರುವು ನಿನಗೆ ನನ್ನನ್ನು ಗೆಲ್ಲಲು ಆಗುವದಿಲ್ಲ. ಏಕೆಂದರೆ ನನಗೆ ಶ್ರೀವರಾಹ ರೂಪೀ ಪರಮಾತ್ಮನ ಅಸ್ತ್ರ ಬಲವಿದೆ: ಆದ್ದರಿಂದ ಗೆಲ್ಲಲಾಗದು. ಆದರೂ ನಿನಗೆ ಕರವನ್ನು ಸ್ನೇಹಪೂರ್ವಕವಾಗಿ ಕೊಡುವೆನು' ಎಂದು ಹೇಳಿ ಸ್ನೇಹದಿಂದ ಕರವನ್ನು ಕೊಟ್ಟನು ಆಗ ಅರ್ಜುನನು ಕರವೇ ಸಿಕ್ಕಿರುವಾಗ ಇನ್ನು ವ್ಯರ್ಥ ಯುದ್ಧ ಏಕೆ ಮಾಡಬೇಕು ? ನನಗೆ ಆ ತರದ ಮಾತುಗಳನ್ನು ಹೇಳಿಕೊಳ್ಳಲಿ. ಎಂದುಕೊಂಡು ಉತ್ತರವನ್ನು ಹೇಳದೇ ಮುಂದೆ ಹೊರಟು ಜಂಬು ದ್ವೀಪದಲ್ಲಿಯು ಭಾರತವರ್ಷದಿಂದ ಬೇರೆಯಾದ ಕಿಂಪುರುಷ ಮೊದಲಾದ ಎಂಟು ವರ್ಷಗಳಿಗೂ ಪ್ಲಕ್ಷಮೊದಲಾದ ಉಳಿದ ಆರು ದ್ವೀಪಗಳಿಗೂ ಹೋಗಿ ಅಲ್ಲಿರುವವರಿಂದ ಕರವನ್ನು ಸಂಪಾದಿಸಿ. ಪಾತಾಲಾದಿ ಏಳು ಲೋಕಗಳಿಗೆ ಹೋಗಿ, ದೈತ್ಯದಾನವರನ್ನು ಗದ್ದು, ಬಲಿರಾಜನ ಹತ್ತಿರಕ್ಕೆ ಬಂದನು. ಬಲಿರಾಜನ ಮೇಲೆ ಅನುಗ್ರಹ ಮಾಡಿ ದ್ವಾರಪಾಲಕನಾಗಿ ನಿಂತಂಥ ವಾಮನ ರೂಪಿಯಾದ ಭಗವಂತ ಕಪಿಲ ರೂಪದಲ್ಲಿ ಅಲ್ಲಿರುವನು. ಅವನು ಬಲಿರಾಜನಿಗೆ 'ಅರ್ಜುನನಿಗೆ ಕರವನ್ನು ಕೊಡು.' ಎಂದು ಹೇಳಿದ ಪ್ರಕಾರ ಬಲಿರಾಜನು ಕೊಟ್ಟನು. ಹೀಗೆ ಸಾಮೋಪಾಯದಿಂದಲೇ ಕರವನ್ನು ಸಂಗ್ರಹಿಸಿ ವಾಸುಕಿ ನಾಗನನ್ನು ಗೆದ್ದು ಬಹುರತ್ನರಾಶಿಯನ್ನು ಕಾಣಿಕೆಯನ್ನಾಗಿ ಪಡೆದು ಒಂದು ವರ್ಷದೊಳಗೆ ಇಂದ್ರಪ್ರಸ್ಥಕ್ಕೆ ಬಂದನು. ಹೀಗೆ ಆ ನಾಲ್ಕು ಜನ ಸಹೋದರರು ದಿಗ್ವಿಜಯ ಮಾಡಿ ತಂದ ಹೇಮರತ್ನರಾಶಿಗಳು ಪರ್ವತ ಪ್ರಾಯವಾಗಿದ್ದವು. ನಕುಲನು ಪಶ್ಚಿಮ ದಿಕ್ಕಿನಿಂದ ತಂದ ಸಂಪ್ರದಾಶಿಯು ಹತ್ತುಯೋಜನ ವಿಸ್ತಾರ ಹಾಗು ಎತ್ತರವಿತ್ತಿದ್ದು: ದಕ್ಷಿಣದಿಂದ ಸಹದೇವನು ತಂದದ್ದು ಮೂವತ್ತು ಯೋಜನ: ಪೂರ್ವದಿಂದ ಭೀಮಸೇನದೇವರು ತಂದದ್ದು ಒಂದು ನೂರು ಯೋಜನ: ಹಾಗು ಅರ್ಜುನನು ಉತ್ತರದಿಕ್ಕಿನಿಂದ ತಂದದ್ದು ನಾಲ್ಕು ನೂರು ಯೋಜನ ಇದ್ದವು ಈ ಪರ್ವತಗಳು ಹಿಡಿಸುವಷ್ಟು ವಿಸ್ತಾರ ಆ ಇಂದ್ರ ಪ್ರಸ್ಥಪ್ರದೇಶಕ್ಕೆ ವಾಸ್ತವಿಕವಾಗಿ ಇರಲಿಲ್ಲ. ಆದರೆ ಅದು ವಿಶ್ವಕರ್ಮನಿಂದ ರಚಿತವಾದದ್ದರಿಂದ ಅಲ್ಪವಾದ ಪ್ರದೇಶದಲ್ಲಿಯ ಎ ಕೂಡ ಇವುಗಳು ಹಿಡಿಸುವಂತಾದವು. ಅದೊಂದು ಆಶ್ಚರ್ಯಕರ ಸಂಗತಿಯೇ ಆಗಿತ್ತು. ಈ ರೀತಿ ದಿಗ್ವಿಜಯ ಮಾಡಿಕೊಂಡು ಬಂದನಂತರ ಯಜ್ಞಾರಂಭವಾಯಿತು. ಸರ್ವವಿದ್ಯಾನಿಷ್ಣಾತರಾದ ಋಷಿಶ್ರೇಷ್ಠರು ಇಲ್ಲಿ ಋತ್ವಿಜರಾಗಿದ್ದರು. ಅವರು ಧರ್ಮರಾಜನನ್ನು ಜ್ಯೇಷ್ಠನಾದ್ದರಿಂದ ಯಾಗದೀಕ್ಷಿತನನ್ನಾಗಿ ಯಜಮಾನನನ್ನಾಗಿ ಮಾಡಿದರು. ಉಳಿದ ಸಹೋದರರು ಅವನ ಜೊತೆಗೆ ಆಸೀನರಾದರು. ಚತುರ್ಥಿ ಬ್ರಹ್ಮಪತ್ನಿಯಾದ ಸರಸ್ವತೀ ಪಟ್ಟಕ್ಕೆ ಅರ್ಹಳಾದ ದ್ರೌಪದಿದೇವಿಯು ಮಾತ್ರ 'ಯಜಮಾನಿ' ಸ್ಥಾನದಲ್ಲಿ ಕುಳಿತಳು. ಪಾಂಡವರ ಉಳಿದ ಪತ್ನಿಯರಾರೂ ಅಲ್ಲಿ ಕೂಡಲಿಲ್ಲ' ಶ್ರೀವೇದವ್ಯಾಸ ದೇವರು ಆಜ್ಞಾಪಿಸಿದಂತೆ ಯಜ್ಞಸ್ಥಲದ ನೆಲವೂ ಕೂಡ ಬಂಗಾರ ರತ್ನ ಖಚಿತವಾಗಿತ್ತು. ಪಾತ್ರಗಳು, ಶಿಬಿರಗಳು. ಅಶ್ವ ಶಾಲು, ಗಜಶಾಲು ಇತ್ಯಾದಿಗಳೆಲ್ಲವೂ, ಬಂಗಾರ ರತ್ನಮಯಗಳೇ ಆಗಿದ್ದವು. ಪಾಂಡವರು ದಿಗ್ವಿಜಯಕ್ಕೆ ಹೋದಾಗ ಹದಿನಾಲ್ಕು ಲೋಕವನ್ನೇ ಆಮಂತ್ರಿಸಿ ಬಂದಿದ್ದರು. ಆ ಪ್ರಕಾರ ಈ ಯಜ್ಞಕ್ಕೆ ಬ್ರಹ್ಮರುದ್ರಾದಿದೇವತೆ ಗಳೆಲ್ಲರೂ ಬಂದರು: ಪಾತಾಳಾದಿಗಳಿಂದ ನಾಗಾದಿಗಳೆಲ್ಲರೂ ಬಂದರು. ಭೀಷ್ಮಾಚಾರ್ಯರು, ಪತ್ನೀಸಹಿತರಾದ ದ್ರೋಣರು ಏದುರರು, ಧೃತರಾಷ್ಟ್ರ, ಅವನ ಮಕ್ಕಳಾದ ದುರ್ಯೋಧನಾದಿಗಳು ಬಂದರು ಹಾಗೆ ಬಾಹ್ಲೀಕರಾಜನು. ಅವನ ಮಗನು ಬಂದರು. ಬಲರಾಮದೇವರು ಮೊದಲಾಗಿ ಎಲ್ಲ ಯಾದವರೂ ಬಂದರು. ರುಕ್ಮಿಣಿ ಸತ್ಯಭಾಮಾ ಮೊದಲಾದ ಶ್ರೀಕೃಷ್ಣಪತ್ನಿಯರೆಲ್ಲರೂ ಬಂದರು. ಹೀಗೆ ಇಡೀ ಜಗತ್ತೇ ಅಲ್ಲಿ ಸೇರಿತ್ತು. ಆಗ ಜ್ಞಾನಿಗಳಿಗೆ ಚರ್ಚೆಯು ಜನರಿಗೆ ತತ್ವನಿರ್ಣಯ ಮಾಡಿಕೊಡುವ ಉದ್ದೇಶದಿಂದ ನಡೆಯಿತು. ಈ ಚರ್ಚೆಯ ನಿರ್ಣಾಯಕರು ಶ್ರೀ ವೇದವ್ಯಾಸದೇವರಾಗಿದ್ದರು, ಆ ಚರ್ಚೆಯಲ್ಲಿ – ಶ್ರೀಹರಿಯೇ ಸರ್ವೋತ್ತಮನು. ಅವನಿಗೆ ಸದೃಶರಾದವರೇ ಇಲ್ಲ- ಅವನಿಂತ ಉತ್ತಮರು

ಇರಲಂ ಹೇಗ ಶಕ್ಯ? ಇಲ್ಲವೇ ಇಲ್ಲ. ಉತ್ತಮಂತ್ವ ತಾರತಮ್ಯದಲ್ಲಿ ಇವನೇ ಕೂನೆ (ಶ್ರೀಹರಿಗಿಂತ ಇವನಂ ಉತ್ತಮಂ ಎಂದುಂ ಹೇಳಲು ಬರುವಂತೆ ಇಲ್ಲವೇ ಇಲ್ಲ) ಎಂಬ ನಿರ್ಣಯವು ಆಯಿತು. ಈ ಚರ್ಚೆಯನ್ನು ಶ್ರೀಪರಶುರಾಮರೂಪಿಯಾದ ಭಗವಂತ ಹಾಗೂ ಶ್ರೀಬಾದರಾಯಣರೂಪಿಯಾದ ಭಗವಂತ ಸ್ವಯಂ ಕೇಳ್ತಲಿದ್ದರು. ಆ ನಿರ್ಣಯವನ್ನ ಕೇಳಿ ಎಲ್ಲ ಜನರು ಸಂತೋಷಪಟ್ಟರು.

ಬಾದರಾಯಣಭೃಗೂತ್ತರಾಮಯೋಃ ಶೃಣ್ವತೋಃ ಪರಮನಿರ್ಣಯೇ ಕೃತೇ ।
ಮೋದಮಾನಜನತಾ ಸಮಾಗಮೇಽಪೃಚ್ಛದತ್ರ ನೃಪತಿರ್ಯತವ್ರತಮ್ ॥೨೪೫॥

ಬಾದರಾಯಣಭೃಗೂತ್ತರಾಮಯೋಃ—ಬಾದರಾಯಣದೇವರು ಹಾಗು ಶ್ರೀಪರಶುರಾಮದೇವರು, ಶೃಣ್ವತೋಃ ಸತೋಃ—ಕೇಳುತ್ತಿರುವಾಗ, ಪರಮನಿರ್ಣಯೇ ಸರ್ವೋತ್ತಮ ತತ್ವದ ಬಗೆಗಿನ ಶ್ರೇಷ್ಠ ನಿರ್ಣಯವು, ಕೃತೇ ಸತಿ—ಮಾಡಲ್ಪಡುತ್ತಿರಲು, ಮೋದಮಾನಜನತಾಸಮಾಗಮೇ ಸತಿ—ಸಂತೋಷದಿಂದ ಕೂಡಿದ ಜನರ ಸಮೂಹವಿರುತ್ತಿರಲು, ಅತ್ರ—ಈ ಸಭೆಯಲ್ಲಿ ನೃಪತಿಃ—ಧರ್ಮರಾಜನು, ಯತವ್ರತಮ್ ಬ್ರಹ್ಮಚರ್ಯ ವ್ರತದಿಂದ ಕೂಡಿದ ಶ್ರೀಭೀಷ್ಮರನ್ನು, ಅಪೃಚ್ಛತ್ ಪ್ರಶ್ನಿಸಿದನು. ॥೨೪೫॥

ಜಾನವಾನೋಽಪಿ ನೃಪತಿಸ್ಸರ್ವಪೂಜ್ಯತಮಂ ಹರಿಮ್ ।
ಸಂಶಯಂ ಭೂಭೃತಾಂ ಭೇತ್ತುಂ ಭೀಷ್ಮಂ ಪಪ್ರಚ್ಛ ಧರ್ಮವಿತ್ ॥೨೪೬॥

ಧರ್ಮವಿತ್ ನೃಪತಿಃ—ಧರ್ಮಜ್ಞನಾದ ಧರ್ಮರಾಜನು, ಹರಿಂ—ಶ್ರೀಹರಿಯನ್ನು, ಸರ್ವಪೂಜ್ಯತಮಂ—ಎಲ್ಲರಿಂದಲೂ ಅತ್ಯಂತ ಪೂಜ್ಯ (ಸರ್ವೋತ್ತಮನನ್ನಾಗಿ), ಜಾನವಾನಃ ಅಪಿ: ತಿಳಿದವನಾದರೂ ಕೂಡ, ಭೂಭೃತಾಂ—ರಾಜರ, ಸಂಶಯಂ—ಸಂದೇಹವನ್ನು, ಭೇತ್ತುಂ—ಪರಿಹರಿಸಲು, ಭೀಷ್ಮಂ ಪಪ್ರಚ್ಛ—ಭೀಷ್ಮರನ್ನು ಪ್ರಶ್ನಿಸಿದನು ॥೨೪೬॥

ನಾಸ್ತಿ ನಾರಾಯಣಸಮಮಿತಿ ವಾದೇನ ನಿರ್ಣಯೇ ।
ಕೃತೇ ಬ್ರಹ್ಮಾದಿಭಿರಪಿ ಕೃಷ್ಣಂ ಮರ್ತ್ಯಂ ಹೀ ಮೇನಿರೇ ॥೨೪೭॥

ನೃಪಾಸ್ತತ್ಕಾರಣಂ ಕೃಷ್ಣೋ ನಾರಾಯಣ ಇತಿ ಸ್ಮ ಹ ।
ಸಮ್ಯಕ್ ಜ್ಞಾಪಯಿತುಂ ಧರ್ಮಸೂನುರ್ಭೀಷ್ಮಮಪೃಚ್ಛತ ॥೨೪೮॥

ಬ್ರಹ್ಮಾದಿಭಿಃ-ಬ್ರಹ್ಮಾದಿದೇವೇಶರಿಂದ, ವಾದೇನ—ಚರ್ಚೆಯಿಂದ, ನಾರಾಯಣಸಮಂ-ನಾರಾಯಣನಿಗೆ ಸಮವಾದದ್ದು ನಾಸ್ತಿ—ಇಲ್ಲ, ಇತಿ - ಎಂಬ ನಿರ್ಣಯೇ ಕೃತೇಸತಿ ಅಪಿ - ನಿರ್ಣಯವು ಮಾಡಲ್ಪಟ್ಟರೂ ಕೂಡ, ಹಿ—ಯಾವ ಕಾರಣದಿಂದ, ನೃಪಾಃ—ರಾಜರು, ಕೃಷ್ಣಂ—ಶ್ರೀಕೃಷ್ಣನನ್ನು, ಮರ್ತ್ಯಂ—ಮನುಷ್ಯನನ್ನಾಗಿ, ಮೇನಿರೇ—ತಿಳಿದಿದ್ದರೋ, ತಸ್ಮಾತ್—ಆದ್ದರಿಂದ, ಅಯಂ ಕೃಷ್ಣಃ—ಈ ಶ್ರೀಕೃಷ್ಣನು, ನಾರಾಯಣಃ—ಶ್ರೀನಾರಾಯಣನೇ, ಇತಿ ಸ್ಮ - ಎಂಬುದಾಗಿಯೇ, ಸಮ್ಯಕ್—ಚೆನ್ನಾಗಿ, ಜ್ಞಾಪಯಿತುಂ—ರಾಜರೆಲ್ಲರಿಗೆ ತಿಳಿಸುವುದಕ್ಕಾಗಿಯೇ, ಧರ್ಮಸೂನುಃ—ಧರ್ಮರಾಜನು, ಭೀಷ್ಮಂ—ಭೀಷ್ಮಾಚಾರ್ಯರನ್ನು, ಅಪೃಚ್ಛತ - ಪ್ರಶ್ನಿಸಿದನು. ॥೨೪೭-೨೪೮॥

ಅವತಾರಿಕೆ :— ಆ ಯಜ್ಞಕ್ಕೆ ಬ್ರಹ್ಮಾದಿದೇವತೆಗಳು ಮುನಿಗಳು ಬಂದಿದ್ದರೆಂದ ಮೇಲೆ, ಅವರನ್ನು ಪ್ರಶ್ನಿಸಬಹುದಿತ್ತು, ಹಾಗೆ ಮಾಡದೆ ಧರ್ಮರಾಜನು ಭೀಷ್ಮರನ್ನು ಪ್ರಶ್ನಿಸಿದ ಕಾರಣವನ್ನು ಹೇಳುತ್ತಾರೆ.

ಬ್ರಹ್ಮಾದಯಃ ಸುರಾ ಯಸ್ಮಾದ್ದೃಶ್ಯಂತೇ ಮರ್ತ್ಯವನ್ನೃಭಿಃ ।
ನ ಚೈವಾತಿತರಾಭ್ಯಾಸೋ ನೃಣಾಮುಸ್ತಿ ಮುನಿಷ್ವಪಿ ॥೨೪೯॥

ಸರ್ವಶಾಸ್ತ್ರವಿದಂ ಭೀಷ್ಮಂ ಜಾನಂತ್ಯೇತೇ ನೃಪಾ ಅಪಿ ।
ತಸ್ಮಾದ್ಭೀಷ್ಮಮುಪೃಚ್ಛನ್ನ ಕುಲವೃದ್ಧತ್ವತಸ್ತಥಾ ॥೨೫೦॥

ಯಸ್ಮಾತ್—ಯಾವ ಕಾರಣದಿಂದ, ನೃಭಿಃ—ಮನುಷ್ಯರಿಂದ, ಬ್ರಹ್ಮಾದಯಃ ಸುರಾಃ—ಬ್ರಹ್ಮಾದಿ ದೇವತೆಗಳು, ಮರ್ತ್ಯವತ್—ಮನುಷ್ಯರಂತೆ, ದೃಶ್ಯಂತೇ—ಕಾಣಲ್ಪಡುತ್ತಾರೆಯೋ, ಚ—ಮತ್ತು, ಮುನಿಷು-ಅಪಿ—ಮುನಿಗಳ ಬಗ್ಗೆಯೂ ಕೂಡ, ನೃಣಾಂ—ಮನುಷ್ಯರಿಗೆ, ಅತಿಶರಾಭ್ಯಾಸಃ—ಅಷ್ಟು ವಿಶೇಷ ಪರಿಚಯವು, ನ ಏವ—ಇಲ್ಲವೇ ಇಲ್ಲವೋ (ಆದರೆ) ಏತೇ ನೃಪಾಃ—ಈ ರಾಜರೆಲ್ಲರೂ ಕೂಡ, ಭೀಷ್ಮಂ—ಶ್ರೀಭೀಷ್ಮಾಚಾರ್ಯರನ್ನು, ಸರ್ವಶಾಸ್ತ್ರವಿದಂ—ಸರ್ವಶಾಸ್ತ್ರಜ್ಞರನ್ನಾಗಿ, ಜಾನಂತಿ—ತಿಳಿದಿರುತ್ತಾರೋ, ತಸ್ಮಾತ್—ಆ ಕಾರಣದಿಂದ, ತಥಾ—ಹಾಗೂ, ಕುಲವೃದ್ಧತ್ವತಃ—ಕುಲಹಿರಿಯರಾದ್ದರಿಂದಲೂ, ಸಃ—ಆ ಧರ್ಮರಾಜನು, ಭೀಷ್ಮಂ—ಭೀಷ್ಮಾಚಾರ್ಯರನ್ನು, ಅಪೃಚ್ಛತ್—ಪ್ರಶ್ನಿಸಿದನು. ॥೨೪೯-೨೫೦॥

ಪಿತಾಮಹಾಗ್ರಪೂಜಾರ್ಹಃ ಕೋಽತ್ರ ಲೋಕಸಮಾಗಮೇ ।
ಬ್ರಹ್ಮಶರ್ವಾದಯಶ್ಚಾತ್ರ ಸಂತಿ ರಾಜಾನ ಏವ ಚ ।
ಇತಿ ಪೃಷ್ಟೋಽಬ್ರವೀದ್ಭೀಷ್ಮಃ ಕೃಷ್ಣಂ ಪೂಜ್ಯತಮಂ ಪ್ರಭುಯ್ ॥೨೫೧॥

ಪಿತಾಮಹ - ಅಜ್ಜರಾದ ಭೀಷ್ಮರೇ, ಅತ್ರ ಲೋಕಸಮಾಗಮೇ—ಎಲ್ಲ ಲೋಕಗಳ ಮೇಲನ ವಾಗಿರುವ ಈ ಸಭೆಯಲ್ಲಿ, ಬ್ರಹ್ಮಶರ್ವಾದಯಃ—ಬ್ರಹ್ಮರುದ್ರ ಮೊದಲಾದ ದೇವತೆಗಳು, ಚ—ಮತ್ತು, ರಾಜಾನಃ ಚ—ರಾಜರೂ ಕೂಡ, ಸಂತಿ—ಇರುವರು. ಅತ್ರ—ಇವರೆಲ್ಲರಲ್ಲೂ, ಅಗ್ರಪೂಜಾರ್ಹಃ—ಮೊದಲ ಸತ್ಕಾರಕ್ಕೆ ಅರ್ಹನಾದವನು, ಕಃ—ಯಾರು ? (ಎಂದು ಕೇಳಿದನು) ಇತಿ ಪೃಷ್ಟಃ—ಈ ರೀತಿ ಕೇಳಲ್ಪಟ್ಟ ಭೀಷ್ಮರು, ಪ್ರಭುಂ—ಸ್ವಾಮಿಯಾದ, ಕೃಷ್ಣಂ—ಶ್ರೀಕೃಷ್ಣನನ್ನು, ಪೂಜ್ಯತಮಂ—ಅತ್ಯಂತ ಪೂಜ್ಯನನ್ನಾಗಿ: ಅಬ್ರವೀತ್—ಹೇಳಿದರು. ॥೨೫೧॥

ಅವತಾರಿಕೆ—ಭಗವದವತಾರರಾದ ಶ್ರೀಪರಶುರಾಮದೇವರು, ಶ್ರೀವ್ಯಾಸದೇವರು ಇರುವಾಗ, ಅವರನ್ನು ಪೂಜಾರ್ಹರನ್ನಾಗಿ ಹೇಳದೇ, ಶ್ರೀಕೃಷ್ಣನನ್ನು ಹೇಳುವದರಲ್ಲಿ ಶ್ರೀಭೀಷ್ಮರ ಉದ್ದೇಶವನ್ನು ತಿಳಿಸುತ್ತಾರೆ.

ಯದ್ಯಪ್ಯೇಕಸ್ಮಿಧಾ ವಿಷ್ಣುರ್ವಶಿಷ್ಠ ಭೃಗುವೃಷ್ಣಿಷು ।
ಪ್ರಾದುರ್ಭೂತಸ್ತಥಾಪ್ಯೇತೇ ನೃಪಾ ಹಿ ವ್ಯಾಸರಾಮಯೋಃ ॥೨೫೨॥
ವಿಪ್ರತ್ವಾನ್ನ ವಿರುಧ್ಯಂತೇ ತತ ಏವ ಚ ಯುಕ್ತತಾಮ್ ॥೨೫೩॥

ಮನ್ಯಂತೇ ನ ವಿರೋಧಶ್ಚ ತೇಷಾಂ ತತ್ರಹಿ ತಾದೃಶಃ ।
ಅವಿವಾದೇ ಪ್ರಸಿದ್ಧಿಶ್ಚ ಸೈವಾಸ್ಮ ಭವಿತಾ ಕ್ವಚಿತ್ ॥೨೫೪॥

ತಸ್ಮಾತ್ಕೃಷ್ಣಾಯ ದಾತವ್ಯಮಿತಿ ಭೀಷ್ಮೇಣ ಚಿಂತಿತಮ್ ।
ಕೃಷ್ಣಾಯ ದತ್ತೇ ರಾಜಾನೋ ವಿವಾದಂ ಕುರ್ಯುರಂಜಸಾ ॥೨೫೫॥

ವಿವಾದೇನ ಚ ಕೀರ್ತಿಃ ಸ್ಯಾದ್ವಾಸುದೇವಸ್ಯ ವಿಸ್ತೃತಾ ।
ತತಃ ಕೃಷ್ಣಾಯಾಗ್ರಪೂಜಾ ದತ್ತಾ ಪಾರ್ಥೈರ್ಜಗತ್ಪರಃ ॥೨೫೬॥

ವ್ಯಾಸಭಾರ್ಗವಯೋಸ್ಸಾಕ್ಷಾತ್ ತದೈಕ್ಯಾತ್ತದನಂತರಮ್ ।
ಅಗ್ರ್ಯಂ ಪೂಜಾಂ ದದುಶ್ಚಾನ್ಯಾನ್ಯಥಾಯೋಗ್ಯಮುಪೂಜಯನ್ ॥೨೫೭॥

ಯದ್ಯಪಿ – ವಾಸ್ತವಿಕವಾಗಿ. ವಿಷ್ಣುಃ – ಶ್ರೀಹರಿಯಂ, ವಶಿಷ್ಠಭೃಗುವೃಷ್ಣಿಷು – ವಶಿಷ್ಠ, ಭೃಗು, ಯಾದವ ಕುಲಗಳಲ್ಲಿ, ತ್ರಿಧಾ – ವ್ಯಾಸ, ಭಾರ್ಗವರಾಮ, ಶ್ರೀಕೃಷ್ಣ ಈ ಮೂರು ರೂಪಗಳಿಂದ, ಪ್ರಾದುರ್ಭೂತಃ – ಅವತರಿಸಿರುವನು. ತಥಾಪಿ – ಆದರೂ. ಏತೇ ನೃಪಾಃ – ಈ ರಾಜರಲ್ಲಿ ದುಷ್ಟರಾದ ಕೆಲವರು, ವ್ಯಾಸರಾಮಯೋಃ ವಿಪ್ರತ್ವಾತ್ – ಶ್ರೀವೇದವ್ಯಾಸ ಪರಶುರಾಮದೇವರಿಗೆ ಬ್ರಾಹ್ಮಣ್ಯವಿದ್ದರಿಂದ, (ಅವರು ಬ್ರಾಹ್ಮಣರಾದ್ದರಿಂದ), ನ ವಿರುಧ್ಯಂತೇ – ಅವರ ಅಗ್ರಪೂಜೆಯನ್ನು ವಿರೋಧಿಸುವದಿಲ್ಲ. ತತಃ ಏವ – ಅವರು ಬ್ರಾಹ್ಮಣರಾದ್ದರಿಂದಲೇ, ಯುಕ್ತತಾಂ – ಅವರ ಅಗ್ರಪೂಜೆಯ ಯೋಗ್ಯತ್ವವನ್ನು (ಅವರ ಅಗ್ರಪೂಜೆಯೋಗ್ಯ ಎಂಬುದನ್ನು), ಮನ್ಯಂತೇ – ಒಪ್ಪುತ್ತಾರೆ. ತೇಷಾಂ – ಆ ರಾಜರಿಗೆ, ತತ್ರ – ಆ ಎರಡು ರೂಪಗಳ ಬಗ್ಗೆ, ತಾದೃಶಃ ವಿರೋಧಃ ಚ – ಶ್ರೀಕೃಷ್ಣನ ಬಗ್ಗೆ ಇರುವ ವಿರೋಧದಂಥ ವಿರೋಧವೂ ಕೂಡ ನ – ಇಲ್ಲ. ಅವಿವಾದೇ – ವಿವಾದವು ನಡೆಯದೇ ಹೋದರೆ. ಅಸ್ಯ – ಶ್ರೀಕೃಷ್ಣ ಪಾರಮ್ಯದ, ಶ್ರೀಕೃಷ್ಣನು ನಾರಾಯಣನೇ ಎಂಬುದರ ಪ್ರಸಿದ್ಧಿಃ – ಪ್ರಸಿದ್ಧಿಯು, ಕ್ವಚಿತ್ – ಎಂದೂ, ನೈವಭವಿತಾ – ಆಗುವದೇ ಇಲ್ಲವೋ, ತಸ್ಮಾತ್ – ಆದ್ದರಿಂದ, (ವಿವಾದವು ನಡೆದು ವಿಶೇಷ ಪ್ರಚಾರವಾಗುವಂತಾಗಲಿ ಎಂಬ ಕಾರಣದಿಂದ) ಕೃಷ್ಣಾಯ – ಶ್ರೀಕೃಷ್ಣನಿಗೆ, ದಾತವ್ಯಂ – ಅಗ್ರ ಮರ್ಯಾದೆಯು ಕೊಡಲ್ಪಡತಕ್ಕದ್ದು, ಇತಿ – ಎಂದು, ಭೀಷ್ಮೇಣ ಚಿಂತಿತಂ – ಶ್ರೀಭೀಷ್ಮರಿಂದ ಪರಿಚಾರಿಸಲ್ಪಟ್ಟಿತ್ತು. ಕೃಷ್ಣಾಯ ದತ್ತೇಸತಿ – ಕೃಷ್ಣನಿಗೆ ಅಗ್ರಪೂಜೆಯು ಕೊಡಲ್ಪಡುತ್ತಿರಲು, ರಾಜಾನಃ – ರಾಜರು, ಅಂಜಸಾ – ಅವಶ್ಯವಾಗಿ, ವಿವಾದಂ ಕುರ್ಯುರ್ಯಃ – ವಿವಾದವನ್ನು ಮಾಡುತ್ತಾರೆ. ವಿವಾದೇನ ಚ – ವಾದದಿಂದಾದರೂ, ವಾಸುದೇವಸ್ಯ – ಶ್ರೀಕೃಷ್ಣನ, ವಿಸ್ತೃತಾ ಕೀರ್ತಿಃ – ವಿಸ್ತೃತವಾದ ಕೀರ್ತಿಯು, ಸ್ಯಾತ್ – ಆದೀತು. (ಎಂದು ಭಾವವಿತ್ತು.). ತತಃ – ಆ ಅಭಿಪ್ರಾಯದಿಂದ ಭೀಷ್ಮರು ಹೇಳಿದ್ದರಿಂದ, ಪಾರ್ಥೈಃ – ಪಾಂಡವರಿಂದ, ಜಗತ್ಪರಃ – ಎಲ್ಲ ಜಗತ್ತಿನೆದುರು, ಕೃಷ್ಣಾಯ – ಶ್ರೀಕೃಷ್ಣನಿಗೆ, ಅಗ್ರಪೂಜಾ – ಪ್ರಥಮಪೂಜೆಯು, ದತ್ತಾ – ಕೊಡಲ್ಪಟ್ಟಿತು, ಮಾಡಲ್ಪಟ್ಟಿತು. ವ್ಯಾಸಭಾರ್ಗವಯೋಃ ಶ್ರೀವ್ಯಾಸಪರಶುರಾಮರಿಗೆ, ಸಾಕ್ಷಾತ್ ತದೈಕ್ಯಾತ್ – ಶ್ರೀಕೃಷ್ಣನ ಐಕ್ಯವಿದ್ದದ್ದರಿಂದ, ತದನಂತರಮ್ – ಶ್ರೀಕೃಷ್ಣ ಪೂಜೆಯನಂತರ, (ಉಳಿದವರಿಗಿಂತ ಮೊದಲು), ಪೂಜಾಂ ದದುಃ – ಅಗ್ರಪೂಜೆಯನ್ನು ಮಾಡಿದರು. ತದನಂತರಮ್ – ಆದರನಂತರ, ಅನ್ಯಾನ್ – ಉಳಿದವರನ್ನು, ಯಥಾಯೋಗ್ಯಂ – ಅವರವರಿಗೆ ಯೋಗ್ಯವಾಗಿ, ಅಪೂಜಯನ್ – ಪೂಜಿಸಿದರು. ॥೨೫೨-೨೫೩-೨೫೪-೨೫೫-೨೫೬-೨೫೭॥

ಭಾವಾನುವಾದ ೨೪೫- ೨೫೭

ಆ ರಾಜಸೂಯ ಸಭೆಯಲ್ಲಿ ಶ್ರೀ ವೇದವ್ಯಾಸದೇವರು ಹಾಗು ಪರುಶರಾಮದೇವರು ಕೇಳುತ್ತಿರುವ ಹಾಗೆ ಶ್ರೀ ವಿಷ್ಣು ಸರ್ವೋತ್ತಮತ್ವದ ಶ್ರೇಷ್ಠ ನಿರ್ಣಯವಾದಾಗ ಎಲ್ಲ ಸಜ್ಜನರೂ ತುಂಬುಸಂತಸದಲ್ಲಿರುವಾಗ ಧರ್ಮರಾಜನು ಲೋಕಕ್ಕೆ ಶ್ರೀಕೃಷ್ಣನ ಸರ್ವೋತ್ತಮತ್ವವನ್ನು ತಿಳಿಸಬೇಕು ಎಂಬ ಇಚ್ಛೆಯಿಂದ ತನಗೆ ಗೊತ್ತಿದ್ದರೂಕೂಡ ಈಗ ಅಗ್ರ ಪೂಜಾರ್ಹರು ಯಾರು ? ಎಂದು ಭೀಷ್ಮಾಚಾರ್ಯರನ್ನು ಪ್ರಶ್ನೆ ಮಾಡಿದನು. ಇದರ ಮೇಲೆ ಅಲ್ಲಿ ವಾದನಡೆದು ಶ್ರೀ ವಿಷ್ಣು ಸರ್ವೋ

ತ್ತಮತ್ವದನಿರ್ಣಯವಾಗಿರುವಾಗ ಪುನಃ ಪ್ರಶ್ನೆಮಾಡುವ ಪ್ರಸಂಗವೆಲ್ಲಿ ? ಕೇಳಿದರೂಕೂಡ ಅಲ್ಲಿ ಬ್ರಹ್ಮಾದಿದೇವತೆಗಳು ಮುನಿಗಳೂ ಇರುವಾಗ ಅವರನ್ನು ಕೇಳುವದನ್ನು ಬಿಟ್ಟು. ಭೀಷ್ಮರನ್ನು ಪ್ರಶ್ನಿಸಿದ್ದು ಏಕೆ? ಎಂದು ಸಂಶಯಗಳು ಬರುವವು; ಇದಕ್ಕೆ ಶ್ರೀಮಧ್ವಾಚ್ಯ ಸರ್ವಜ್ಞಾಚಾರ್ಯರು ಈ ರೀತಿ ನಿರ್ಣಯಕೊಡುತ್ತಾರೆ. ವಿಷ್ಣುಸರ್ವೋತ್ತಮತ್ವ ನಿರ್ಣಯವಾದರೂಕೂಡ ಶ್ರೀ ಕೃಷ್ಣನನ್ನು ಮನುಷ್ಯ ಎಂದೇ ರಾಜರು ತಿಳಿದಿದ್ದರು. ಅವನು ಸರ್ವೋತ್ತಮನಾದ ಶ್ರೀ ನಾರಾಯಣನ ಅವತಾರನೇ ಎಂದು ಸ್ಪಷ್ಟ ತಿಳಿಸುವದಕ್ಕೋಸ್ಕರ ಪ್ರಶ್ನೆಮಾಡಿದನು. ಬ್ರಹ್ಮಾದಿದೇವತೆಗಳು ಆ ಸಭೆಯಲ್ಲಿದ್ದರೂ ಕೂಡ ಮನುಷ್ಯರಿಗೆಲ್ಲ ಅವರು ಮನುಷ್ಯರಂತೆ ಕಾಣುತ್ತಿದ್ದರಾದ್ದರಿಂದ ಅವರು ಹೇಳುವ ನಿರ್ಣಯದಲ್ಲಿ ವಿಶ್ವಾಸಬರಲಾರದು. ಮುನಿಗಳ ಪರಿಚಯವೂ ಅಷ್ಟೊಂದು ಈ ಜನರಿಗೆಲ್ಲ ಇರದಿರುವದರಿಂದ ಅವರು ಕೊಡುವ ನಿರ್ಣಯದ ಬಗ್ಗೆಯೂ ವಿಶ್ವಾಸ ಬರಲಾರದು. ಆದರೆ ಭೀಷ್ಮಾಚಾರ್ಯರನ್ನು ಎಲ್ಲ ರಾಜರೂಕೂಡ ಸರ್ವಶಾಸ್ತ್ರಜ್ಞರನ್ನಾಗಿ ತಿಳಿದಿದ್ದಾರೆ; ಅವರು ಕೊಡುವ ನಿರ್ಣಯದ ಬಗ್ಗೆ ಈ ರಾಜರಿಗೂ ವಿಶ್ವಾಸವಿದೆ ಎಂಬ ಕಾರಣದಿಂದಲೂ, ತನ್ನ ಕುಲವೃದ್ಧರಾದ್ದರಿಂದಲೂ ಅವರನ್ನು ಪ್ರಶ್ನಿಸಿದನು. ಭೀಷ್ಮಾಚಾರ್ಯರೇ, ಈ ಸಭೆಯಲ್ಲಿ ಬ್ರಹ್ಮಾದಿದೇವತೆಗಳೂ ಮಹಾರಾಜರೂ ಇದ್ದಾರೆ. ಅಗ್ರಪೂಜೆಯನ್ನು ಯಾರಿಗೆ ಸಲ್ಲಿಸಬೇಕು ? ಎಂದು ಪ್ರಶ್ನಿಸಿದಾಗ ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಸಲ್ಲಿಸಬೇಕು ಎಂದು ಶ್ರೀಭೀಷ್ಮರು ನಿರ್ಣಯವನ್ನು ಕೊಟ್ಟರು; ಅಲ್ಲಿ ಭಗವಂತನ ಅವತಾರರೇ ಆದ ಶ್ರೀ ವ್ಯಾಸ ಶ್ರೀಪರಶುರಾಮರಿದ್ದರೂ ಅವರಿಗೆ ಅಗ್ರ ಪೂಜೆಯನ್ನು ಸಲ್ಲಿಸಲು ಹೇಳಿದರೆ ಅವರು ಬ್ರಾಹ್ಮಣರಾದ್ದರಿಂದ ಅವರ ಅಗ್ರಪೂಜೆಯನ್ನು ಯಾರೂ ವಿರೋಧಿಸುವದಿಲ್ಲ. ಬ್ರಾಹ್ಮಣರಾದ್ದರಿಂದ ಅಗ್ರಪೂಜೆಮಾಡಿದ್ದು ಸರಿಯೇಎಂಬ ಅಭಿಪ್ರಾಯದಿಂದ ಸುಮ್ಮನೆಯೇ ಇರುತ್ತಾರೆ ವಿವಾದವಾಗುವಾದಿಲ್ಲ ವಿವಾದವಾಗದಿದ್ದರೆ ಶ್ರೀಕೃಷ್ಣನು ನಾರಾಯಣನೇ ಎಂಬ ಕೀರ್ತಿ ವಿಸ್ತಾರವಾಗಿ ಪ್ರಚಾರವಾಗುವದಿಲ್ಲ. ಅದಾಗಲಿ ವಿವಾದವಾಗಬೆಕು; ಅದಾಗಲೂ ಶ್ರೀ ಕೃಷ್ಣನಿಗೆ ಅಗ್ರಪೂಜೆಯಾಗಬೇಕು. ಶ್ರೀಕೃಷ್ಣನ ಒಗ್ಗೆ ಈ ರಾಜರಿಗೆಲ್ಲ ಕೋಪ, ವಿಮನಸ್ಕತೆ ವಿರೋಧವಿದ್ದದ್ದರಿಂದ ವಿರೋಧಿಸುವರು, ವಿವಾದನಡೆದು ತತ್ವನಿರ್ಣಯ ಪ್ರಚಾರವಾಗುವದು ಎಂಬ ಉದ್ದೇಶದಿಂದ ಆ ರೀತಿ ನಿರ್ಣಯವನ್ನು ಭೀಷ್ಮಾಚಾರ್ಯರು ಕೊಟ್ಟರು. ಅದೇ ಉದ್ದೇಶದಿಂದ ಧರ್ಮರಾಜನು ಸಕಲಜಗತ್ತೇ ಆ ಸಭೆಯಲ್ಲಿರುವಾಗ ಅವರೆದುರು ಶ್ರೀ ಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿದನು. ಅದರ ನಂತರ ಶ್ರೀ ವೇದವ್ಯಾಸ ಶ್ರೀ ಪರಶುರಾಮ ರೂಪಗಳಿಗೆ ಪೂಜೆಯನ್ನು ಸಲ್ಲಿಸಿದರು. ಅನಂತರ ಉಳಿದವರಿಗೆ ಅವರ ಯೋಗ್ಯತೆಗಳಿಗನುಸಾರವಾಗಿ ಪೂಜಿಸಿದರು.

ಅಗ್ರ್ಯೋಪಹಾರಮುಪಯೂಪಿತ ಏವ ಕೃಷ್ಣೇ ಕೋಪಾದನಿಂದದಮುಮಾಶು ಚ
ಚೇದಿರಾಜಃ ।
ಶ್ರುತ್ವೈವ ತತ್ಪವನಜೋಽಭಿಯಯೌ ನೃಪಂ ತಂ ಹಂತುಂ ಜಗದ್ಗುರುವಿನಿಂದಕ
ಮೃದ್ಧಮನ್ಯುಃ ॥೨೫॥

ಕೃಷ್ಣೇ— ಶ್ರೀಕೃಷ್ಣನು ಅಗ್ರ್ಯೋಪಹಾರಂ – ಅಗ್ರಪೂಜೆಯನ್ನು' ಉಪಯೂಪಿತೇಸತಿ ಏವ—ಹೊಂದುತ್ತಿರುವ (ಧರ್ಮರಾಜನಿಂದ ಹೊಂದಿಸಲ್ಪಡುತ್ತಿರುವ) ಹಾಗೆಯೇ, ಚೇದಿರಾಜಃ – ಶಿಶುಪಾಲನು, ಆಶು – ಕೂಡಲೇ, ಕೋಪಾತ್ – ಸಿಟ್ಟಿನಿಂದ, ಏವಂಭೂ – ಆ ಶ್ರೀಕೃಷ್ಣನನ್ನು, ಅನಿಂದತ್ - ನಿಂದಿಸಿದನು, ತತ್ – ಆ ನಿಂದೆಯನ್ನು ಶ್ರುತ್ವಾಏವ—ಕೇಳಿಯೇ(ಕೇಳಿದ ಕೂಡಲೇ), ಪವನಜಃ— ವಾಯುಪುತ್ರರ ದ ಶ್ರೀಭೀಮಸೇನದೇವರು, ಋದ್ಧಮನ್ಯುಃ ಸನ್—ಅಭಿವೃದ್ಧವಾದ ಕೋಪವುಳ್ಳವರಾಗಿ.(ಬಹಳ ಕೋಪವುಳ್ಳವರಾಗಿ), ಜಗದ್ಗುರುವಿನಿಂದ ಂ ತಂ ನೃಪಂ – ಜಗದ್ದೊಡೆಯನಾದ ಶ್ರೀಕೃಷ್ಣನನ್ನು ನಿಂದಿಸಿದಕ್ಕಾಗಿ, ಆ ಚೇದಿರಾಜನನ್ನು, ಹಂತುಂ - ಕೊಲ್ಲಲು, ಅಭಿಯಯೌ - ಬರಿ ಹೋದರು. ॥೨೫॥

ದೂರೇಽಪಿ ಕೇಶವ ವಿನಿಂದನಕಾರಿ ಜಿಹ್ವಾಮುಚ್ಚೈಶ್ಚಕರ್ತ ಇತ್ಯುರುತರಾಸ್ಯ ಸದಾ ಪ್ರತಿಜ್ಞಾ ।
ಭೀಮಸ್ಯ ತಂ ತು ಜಗೃಹೇ ಸರಿದಾತ್ಮಜೋಽಥ ಸಂಪ್ರೋಚ್ಯ ಕೇಶವವಚೋ ನಿಜ–
ಯೋರ್ವಧಾಯ ॥೨೫॥

ದೂರೇಅಪಿ – ನನ್ನ ಅಪ್ರತ್ಯಕ್ಷದಲ್ಲಿಯೂ, ನನ್ನಿಂದ ದೂರದಲ್ಲಿಯೂ, ಕೇಶವ ವಿನಿಂದನಕಾರಿಜಿಹ್ವಾಂ-ಭಗವನ್ನಿಂದೆಯನ್ನು ಮಾಡುವವನ ಜಿಹ್ವೆ (ನಾಲಿಗೆ)ಯನ್ನು, ಉಚ್ಛೇತ್ಸ್ಯೇ –ಕತ್ತರಿಸುತ್ತೇನೆ. ಇತಿ—ಎಂದೂ, ಅಸ್ಯ ಭೀಮಸ್ಯ – ಈ ಶ್ರೀ ಭೀಮರ. ಉರುತರಾ ಪ್ರತಿಜ್ಞಾ—ಅತಿಶ್ರೇಷ್ಠವಾದ ಪ್ರತಿಜ್ಞೆಯೂ, ಸದಾ—ಯಾವಾಗಲೂ ಇದೆ. (ಆದ್ದರಿಂದ ಅವರನ್ನು ಸಂಹರಿಸಲೂ ಪ್ರವೃತ್ತರಾದರು) ತು–ಆದರೆ ಅಥ – ಶ್ರೀ ಭೀಮರು ಹಾಗೆಮಾಡಿದ ನಂತರ, ಸರಿದಾತ್ಮಜಃ—ಗಂಗಾಪುತ್ರರಾದ ಭೀಷ್ಮರು, ನಿಜಯೋಃವಧಾಯ – ತನ್ನ ದ್ವಾರಪಾಲರಾದ ಜಯ-ವಿಜಯರ ರೂಪರಾದ ಶಿಶುಪಾಲದಂತವಕ್ರರ ವಧಕ್ಕಾಗಿ (ಇರುವ) ಕೇಶವವಚಃ – ಭಗವಂತನ ಮಾತನ್ನು, ಸಂಪ್ರೋಚ್ಯ –ಹೇಳಿ, ತಂ—ಆ ಭೀಮರನ್ನು ಜಗೃಹೇ – ಹಿಡಿದರು. ॥೨೫೯॥

ಮಯೈವ ವಧ್ಯಾವಿತಿ ತಾವಾಹ ಯತ್ಕೇಶವಃ ಪುರಾ ।
ತತ್ ಶ್ರುತ್ವಾ ಭೀಮಸೇನಸ್ತು ಸ್ಥಿತೋ ಭೀಷ್ಮಕರಗ್ರಹಾತ್ ॥೨೬೦॥

ಪುರಾ—ಹಿಂದೆ (ಸನಕಸನಂದನಾದಿಗಳು ಜಯವಿಜಯರಿಗೆ ಶಾಪಕೊಟ್ಟಸಂದರ್ಭದಲ್ಲಿ), ಕೇಶವಃ – ಶ್ರೀ ನಾರಾಯಣನು, ಮಯೈವ ವಧ್ಯೌ – (ಮೂರು ಆಸುರೀ ಜನ್ಮಗಳಲ್ಲಿಯೂ ಕೂಡ) ನನ್ನಿಂದಲೇ ಸಂಹರಿಸಲ್ಪಡುವವರು ಆಗಿರಿ, ಇತಿ—ಎಂಬ, ಯತ್–ಯಾವ ಮಾತನ್ನು, ಪ್ರಾಹ – ಹೇಳಿದ್ದನೋ, ತತ್ – ಆ ಮಾತನ್ನು ಭೀಷ್ಮರು ಈಗ ಹೇಳಿದ್ದನ್ನು, ಶ್ರುತ್ವಾ—ಕೇಳಿ, ಭೀಮಸೇನಃತು – ಭೀಮರೂ ಕೂಡ, ಭೀಷ್ಮಕರಗ್ರಹಾತ್ – ಭೀಷ್ಮರು ಕೈಹಿಡಿದದ್ದರಿಂದ ಸ್ಥಿತಃ – ಈ ವಧಕ್ಕೆ ಪ್ರವೃತ್ತರಾಗದೇ ನಿಂತರು. ॥೨೬೦॥

ಜಾನನ್ನಪಿ ಹರೇರಿಷ್ಟಂ ಸ್ವಕರ್ತವ್ಯತಯೋತ್ಥಿತಃ ।
ಭೀಮ ಏತಾವದುಚಿತಮಿತಿ ಮತ್ವಾ ಸ್ಥಿತಃ ಪುನಃ ॥೨೬೧॥

ಹರೇಃ ಇಷ್ಟಂ – ಭಗವಂತನಿಗೆ ಶಿಶುಪಾಲವಧವು ತಾನೇಮಾಡಲು ಇಚ್ಛಿತವಾಗಿದೆ ಎಂಬುದನ್ನು, ಜಾನನ್ಅಪಿ—ತಿಳಿದವರಾದರೂ ಕೂಡ, ಭೀಮಃ:—ಭೀಮರು, ಸ್ವಕರ್ತವ್ಯತಯಾ – ತನ್ನ ಕರ್ತವ್ಯ ಆಚರಣೆಯನ್ನು ಮಾಡುವದೃಷ್ಟಿಯಿಂದ ಉತ್ಥಿತಃ – ಎದ್ದರು. ಪುನಃ – ಮತ್ತೆ, ಏತಾವತ್ ಉಚಿತಂ - (ಭಗವಂತನಿಂದ ಕೊಲ್ಲಲ್ಪಡಬೇಕಾದ ಇವನ ಬಗ್ಗೆ) ನನ್ನ ಪ್ರತಿಕ್ರಿಯೆಯು ಇಷ್ಟೇ ಯೋಗ್ಯವು, ಇತಿ ಮತ್ವಾ— ಎಂದೂ ತಿಳಿದು, ವಿಚಾರಿಸಿ, ಸ್ಥಿತಃ – ನಿಂತರು. ॥೨೬೧॥

ದೇವಸಂಘಭವಿನಾಂ ಮಹಾನಭೂದ್ವೀಕ್ಷ್ಯ ತೋಷ ಇಹ ಕೇಶವೇಽಧಿಕಾಮ್।
ಅರ್ಚನಾಂ ಯ ಇಹ ಮಾನುಷೋ ಜನೋ ಮಧ್ಯ ಏವ ಸತು ಸಂಸ್ಥಿತೋಽಭವತ್ ॥೨೬೨॥

ಕೇಶವೇ – ಶ್ರೀಕೃಷ್ಣನಬಗ್ಗೆ, ಅಧಿಕಾಂ ಅರ್ಚನಾಂ —ಆದ ಅಗ್ರ ಪೂಜೆಯನ್ನು. ವೀಕ್ಷ್ಯ—ನೋಡಿ, ಇಹ-ಯಾಗ ಸಭೆಯಲ್ಲಿರುವ ಜನರಮಧ್ಯದಲ್ಲಿ, ದೇವಸಂಘಭವಿನಾಂ—ದೇವಸ್ವಭಾವ (ಮೋಕ್ಷಯೋಗ್ಯ ಸಾತ್ವಿಕ ಸ್ವಭಾವ) ಆ ಸಜ್ಜನರಿಗೆ, ಮಹಾನ್ತೋಷಃ ಅಭೂತ್ ಮಹಾಸಂತೋಷವಾಯಿತು ಇಹ – ಈ ಸಭೆಯಲ್ಲಿಯೇ —ಯಾರು, ಮಹಾನಮಷಃ ಜನಃ—ರಾಜಸೀ (ನಿತ್ಯ ಸಂಸಾರಿ) ಸ್ವಭಾವದ ಚೇತನರೋ, ಸಃತು—ಅವರು ಮಾತ್ರ, ಮಧ್ಯೇಏವ – ಆನಂದ-ತಾಪಗಳ ಮಧ್ಯದಲ್ಲಿ, ಉದಾಸೀನತೆಯಲ್ಲಿ, ಸಂಸ್ಥಿತಃ ಅಭವತ್ – ಇರುವವರು ಆಗಿದ್ದರು. ॥೨೬೨॥

ಆಸುರಾ ಇಹ ಸುಯೋಧನಾದಯಃ ತತ್ರ ತೇ ವಿಮನಸೋ ಬಭೂವಿರೇ!
ದುರ್ವಚೋಭಿರಧಿಕಂ ಚ ಚೇದಿಪಃ ಕೃಷ್ಣಮಾರ್ಚದುರು ಸದ್ಗುಣಾರ್ಣವಮ್ ॥೨೬೩॥

ಇಹ – ಈ ಸಭೆಯಲ್ಲಿ, ಯೇ–ಯಾರು, ಆಸುರಾಃ – ತಾಮಸೀ (ತಮೋಯೋಗ್ಯ)ಸ್ವಭಾವದವರೋ, ತೇ-ಅಂಥ ಸುಯೋಧನಾದಯಃ – ದುರ್ಯೋಧನಾದಿಗಳು, ವಿಮನಸಃ – ದುಃಖದಿಂದ ಕೋಪದಿಂದ ಕೂಡಿದಮನಸ್ಸುಳ್ಳವರು, ಬಭೂವಿರೆ ಆದರು. ಚೇದಿಪಃ ಚ—ಶಿಶುಪಾಲನಾದರೂಕೂಡ, ಉರುಸದ್ಗುಣಾರ್ಣವಂ – ಉತ್ಕೃಷ್ಟಗುಣಪೂರ್ಣನಾದ, ಕೃಷ್ಣಂ–ಶ್ರೀ ಕೃಷ್ಣನನ್ನು, ದುರ್ವಚೋಭಿಃ ಅಧಿಕಂ ಆರ್ಛತ್ –ನಿಂದಾವಾಕ್ಯಗಳಿಂದ ಹೆಚ್ಚು ಹೊಂದಿಸಿದನು – ನಿಂದಾವಾಕ್ಯಗಳಿಂದ ಕೂಡಿದವನನ್ನಾಗಿ ಮಾಡಿದನು – ಅಂದರೆ ಅಚ್ಚು ಹೆಚ್ಚು ನಿಂದಿಸಿದನು. ॥೨೬೩॥

ಸಮಾಹ್ವಯಚ್ಚ ಕೇಶವಂ ಯುಧೇ ತಮಾಶು ಕೇಶವಃ ।
ನಿವಾರ್ಯತಸ್ಯ ಸಾಯಕಾನ್ ಜಘಾನ ಚಾರಿಣಾ ಪ್ರಭುಃ ॥೨೬೪॥

ಚ – ಮತ್ತು, ಕೇಶವಂ — ಶ್ರೀಕೃಷ್ಣನನ್ನು, ಯುಧೇ – ಯುದ್ಧಕ್ಕೆ, ಸಮಾಹ್ವಯತ್ - ಕರೆದನು ಪ್ರಭುಃ ಕೇಶವಃ – ಸಮರ್ಥನಾದ ಕೃಷ್ಣನು, ಆಶು - ಕೂಡಲೇ, ತಸ್ಯ ಸಾಯಕಾನ್—ಆ ಶಿಶುಪಾಲನಬಾಣಗಳನ್ನು, ನಿವಾರ್ಯ-ತಡೆದು ತಂ—ಆ ಶಿಶುಪಾಲನನ್ನು, ಅರಿಣಾ – ಚಕ್ರದಿಂದ, ಜಘಾನ – ಸಂಹರಿಸಿದನು. ॥೨೬೪॥

ನಿಕೃತ್ತಮಾನಕಂಧರಃ ಸಭಕ್ತಿಮಾನಭೂದ್ಧರೌ ।
ತಮಾಶ್ರಿತಶ್ಚ ಯೋಽಸುರೋ ಮಹಾತಮಃ ಪ್ರಪೇದಿವಾನ್ ॥೨೬೫॥

ನಿಕೃತ್ತಮಾನಕಂಧರಃ—ಕುತ್ತರಿಸ್ಪಟ್ಟಕಂಠವುಳ್ಳ. ಸಃ—ಶಿಶುಪಾಲನು (ಜಯಂಜೇತನನು) (ಆ ಸಮಯದಲ್ಲಿ) ಹರೌ –ಭಗವಂತನಬಗ್ಗೆ, ಭಕ್ತಿಮಾನ್–ಭಕ್ತಿಯುಳ್ಳವನು, ಅಭೂತ್–ಆಗಿದ್ದನು. ತಂ ಆಶ್ರಿತಃ – ಆ ಜಯನನ್ನು ಆಶ್ರಯಿಸಿದ, ಯಃ ಅಸುರಃ – ಯಾವ, ಆಸುರನೋ, ಸಃ – ಅವನು, ಮಹತಮಃ—ಅಂಧಂ ತಮಸ್ಸನ್ನು, ಪ್ರಪೇದಿವಾನ್–ಹೊಂದಿದನು. ॥೨೬೫॥

ಜಯಃ ಪ್ರವಿಶ್ಯ ಕೇಶವಂ ಪುನಶ್ಚ ಪಾರ್ಷದೋಽಭವತ್ ।
ಅಸೌ ಚ ಪಾಂಡವಕ್ರತುಃ ಪ್ರವರ್ತಿತೋ ಯಥೋದಿತಃ ॥೨೬೬॥

ಜಯಃ–ಭಕ್ತನಾದ ಜಯನು, ಕೇಶವಂ—ಶ್ರೀಕೃಷ್ಣನನ್ನು, ಪ್ರವಿಶ್ಯ – ಈಗ ಪ್ರವೇಶಿಸಿ, ಪುನಃ – ಮತ್ತೆ (ಶ್ರೀ ಕೃಷ್ಣನು ತನ್ನ ಮೂಲ ರೂಪವನ್ನು ಸೇರುವಾಗ), ಪಾರ್ಷದಃ – ದ್ವಾರಪಾಲಕನು, ಅಭವತ್ – ಆದನು. ಅಸೌ ಪಾಂಡವ ಕ್ರತುಃ ಚ – ಆ ಪಾಂಡವರ ರಾಜಸೂಯಯಾಗವಾದರೂ, ಯಥಾಉದಿತಃ—ಯಾವ ವಿಧಿಪೂರ್ವಕವಾಗಿ ಮಾಡಲು ಹೇಳಲ್ಪಟ್ಟಿತ್ತೋ, ತಥಾ – ಹಾಗೆ, ಪ್ರವರ್ತಿತಃ – ನಡೆಯಿತು. ॥೨೬೬॥

ಸುವರ್ಣರತ್ನಭಾರಕಾನ್ ಬಹೂನ್ನೃಪಾ ಉಪಾನಯನ್ ।
ಉಪಾಯನಂ ಸುಯೋಧನಂನೃಪೋಽದಿಶದ್ಗ್ರಹೇಽಸ್ಯ ಚ ॥೨೬೭॥

ನೃಪಾಃ – ರಾಜರು, ಬಹೂನ್ ಸುವರ್ಣರತ್ನಭಾರಕಾನ್ - ಬಹುವಾದ ಚಿನ್ನ, ರತ್ನಗಳರಾಶಿಗಳನ್ನು, ಉಪಾಯನಂ—ಪಾಂಡವರಿಗೆ ಕಾಣಿಕೆಯನ್ನಾಗಿ, ಉಪಾನಯನ್ – ತಂದಿದ್ದರು. ಅಸ್ಯ ಗ್ರಹೇ—ಈ ಕಾಣಿಕೆಯನ್ನು ತೆಗೆದು ಇಡುವವರಬಗ್ಗೆ, ನೃಪಃ – ಧರ್ಮರಾಜನು, ಸುಯೋಧನಂ – ದುರ್ಯೋಧನನನ್ನು ಅದಿಶತ್ – ನಿಯಮಿಸಿದ್ದನು. ॥೨೬೭॥

ಅಭೋಜಯಂಸ್ತಥಾ ದ್ವಿಜಾನ್ ಯಥೇಷ್ಟಭಕ್ಷ್ಯಭೋಜ್ಯಕೈಃ ।
ಸುವರ್ಣರತ್ನಭಾರಕಾನ್ ಬಹೂಂಶ್ಚ ದಕ್ಷಿಣಾ ದದುಃ ॥೨೬೮॥

ತಥಾ – ಹಾಗು (ಪಾಂಡವಾಃ – ಪಾಂಡವರು), ದ್ವಿಜಾನ್ – ಬ್ರಾಹ್ಮಣರನ್ನು. ಯಥೇಷ್ಟಭಕ್ಷ್ಯಭೋಜ್ಯಕೈಃ ಯಥೇಚ್ಛಭಕ್ಷ್ಯಭೋಜ್ಯಗಳಿಂದ. ಆಭೋಜಯನ್ –ಊಟವಮಾಡಿಸಿದರು. ಚ–ಮಂತ್ತು, ಬಹೂನ್ ಸುವರ್ಣರತ್ನಭಾರಾನ್—ಬಹುಸುವರ್ಣರತ್ನರಾಶಿಗಳನ್ನು, ದಕ್ಷಿಣಾಃ—ದಕ್ಷಿಣೆರೂಪವಾಗಿ ದದುಃ – ಕೊಟ್ಟರು. ॥೨೬೮॥

ಯದಿಷ್ಟಮಾಸ ಯಸ್ಮೈ ಚ ಪ್ರದತ್ತ ಮೇವ ಪಾಂಡವೈಃ ।
ಸಮಸ್ತಮತ್ರ ಸರ್ವಶೋಽಥಸಸ್ನುರುದ್ಧೃತಾಮುದಾ ॥೨೬೯॥

ಅತ್ರ – ಈ ಯಜ್ಞದಲ್ಲಿ, ಯಸ್ಮೈ–ಯಾವ ಅತಿಥಿಗೆ, ಯತ್ ಯತ್ – ಯಾವದು ಯಾವದೂ, ಇಷ್ಟಂ ಆಸ–ಅಪೇಕ್ಷಿತವಾಗಿತ್ತೋ, ತತ್ಸಮಸ್ತಂ – ಅದೆಲ್ಲವು. ತಸ್ಮೈ—ಅವನಿಗೆ, ಪಾಂಡವೈ – ಪಾಂಡವರಿಂದ ಪ್ರದತ್ತಂ ಏವ–ಕೊಡಲ್ಪಟ್ಟೇ ಬಿಟ್ಟಿತು, ಅಥ – ಯಜ್ಞ ಸಮಾಪ್ತಿಯನಂತರ, ಸರ್ವಶಃ – ಎಲ್ಲರೂ, ಮುದಾಉದ್ಧೃತಾಃ ಸಂತಃ– ಆನಂದದಿಂದ ಭರಿತರಾಗಿ, ಸಸ್ನುಃ—ಅವಭೃತಸ್ನಾನಮಾಡಿದರು. ॥೨೬೯॥

ನದತ್ಸುರೋರುದುಂದುಭಿಪ್ರಗೀತದೇವಗಾಯಕಾಃ।
ಪ್ರನೃತ್ತದಿವ್ಯಯೋಷಿತಸ್ಸುರಾಪಗಾಂ ವ್ಯಗಾಹಯನ್ ॥೨೭೦॥

ನದತ್ಸುರೋರುದುಂದುಭಿಪ್ರಗೀತದೇವಗಾಯಕಾಃ – ದೇವತಾವಾದ್ಯಗಳಾದದುಂದುಭಿಗಳನ್ನು ಬಾರಿಸತಕ್ಕ, ಉತ್ಕೃಷ್ಟಗಾಯನವನ್ನು ಮಾಡತಕ್ಕ ಗಂಧರ್ವರಿಂದ ಕೂಡಿದ. ಪ್ರನೃತ್ತದಿವ್ಯಯೋಷಿತಃ—ಉತ್ಕೃಷ್ಟನರ್ತನವನ್ನು ಮಾಡುವ ಅಪ್ಸರೆಯರಿಂದ ಕೂಡಿದ ಪಾಂಡವರು, ಸುರಾಪಗಾಂ ವ್ಯಗಾಹಯನ್—ಗಂಗೆಯಲ್ಲಿ ಅವಗಾಹನ ಮಾಡಿದರು. ॥೨೭೦॥

ಸಮಸ್ತರಾಜಸಂಯುತಾ ವಿಗಾಹ್ಯ ಜಹ್ನವೀ ಜಲೇ ।
ಪುರಂ ಯಯುಃ ಪುನಶ್ಚ ತೇ ಸ್ವ ಸದ್ಮ ಚಾಗಮನ್ಸುರಾಃ ॥೨೭೧॥

ಸಮಸ್ತರಾಜಸಂಯುತಾಃ ತೇ—ಎಲ್ಲ ರಾಜರಿಂದ ಕೂಡಿದ ಆ ಪಾಂಡವರು,. ಜಾಹ್ನವೀಜಲೇ—ಗಂಗೋದಕದಲ್ಲಿ, ವಿಗಾಹ್ಯ – ಅವಗಾಹನ ಮಾಡಿ. ಪುನಃ—ಪುನಃ. ಪುರಂ – ಇಂದ್ರಪ್ರಸ್ಥಕ್ಕೆ, ಯಯುಃ – ಹೋದರು, ಚ—ಹಾಗೂ, ಸುರಾಃ – ದೇವತೆಗಳು, ಸ್ವ ಸದ್ಮ—ತಮ್ಮ ಗೃಹಕ್ಕೆ, ಅಗಮನ್ – ಹೋದರು. ॥೨೭೧॥

ಗತೇಷು ಸರ್ವರಾಜಸು ಸ್ವಕಂ ಪುರಂ ಸ್ವಕೇಷು ಚ ।
ಸಭೀಷ್ಮಕೇಷು ಸರ್ವಶಸ್ಸಹಾಂಬಿಕೇಯ ಕೇಷು ಚ ॥೨೭೨॥

ವಿಚಿತ್ರರತ್ನನಿರ್ಮಿತೇ ರವಿಪ್ರಭೇ ಸಭಾತಲೇ ।
ಸಕೇಶವೋ ವರಾಸನೇ ವಿವೇಶ ಧರ್ಮನಂದನಃ ॥೨೭೩॥

ಸರ್ವರಾಜಸು—ಎಲ್ಲ ರಾಜರು, ಸ್ವಕಂ ಪುರಂ—ತಮ್ಮ ತಮ್ಮ ಪಟ್ಟಣಕ್ಕೆ. ಗತೇಷು ಸತ್ಸು – ಹೋಗುತ್ತಿರಲು, ಸಭೀಷ್ಮಕೇಷು ಸಹಾಂಬಿಕೇಯಂಕೇಷು ಸರ್ವಶಃ ಸ್ವಕೇಷಂ ಚ –ಭೀಷ್ಮರಿಂದ ಸಹಿತರಾದ, ಧೃತರಾಷ್ಟ್ರನಿಂದ ಸಹಿತರಾದ ತಮ್ಮ ಎಲ್ಲ ಬಂಧುಗಳೂ ತಮ್ಮ ಊರಿಗೆ ಹೋಗುತ್ತಿರಲು, ವಿಚಿತ್ರರತ್ನನಿರ್ಮಿತೇ—ಅನೇಕ ಅದ್ಭುತರತ್ನಗಳಿಂದ (ಮಯನಿಂದ) ನಿರ್ಮಿತವಾದ, ರವಿಪ್ರಭೇ – ಸೂರ್ಯ ಪ್ರಕಾಶದಂತೆ ಪ್ರಕಾಶವುಳ್ಳ, ಸಭಾತಲೇ – ಸಭಾಸ್ಥಾನದಲ್ಲಿ, ವರಾಸನೇ – ಶ್ರೇಷ್ಠವಾದ ಸಿಂಹಾಸನದಲ್ಲಿ, ಸಕೇಶವಃ ಧರ್ಮನಂದನಃ ಶ್ರೀಕೃಷ್ಣನಿಂದ ಸಹಿತನಾದ ಧರ್ಮರಾಜನು, ವಿವೇಶ – ಪ್ರವೇಶಿಸಿದನು (ಆಸೀನನಾದನು) ॥೨೭೨–೨೭೩॥

ತಥೈವರುಕ್ಮಿಣೀಮುಖಾ: ಪರಿಗ್ರಹಾ ರಮೇಶಿತುಃ ।
ತಥೈವ ಭೀಮಫಲ್ಗುನಾವುಪಾವಿಶನ್ಹರೇರುಪ ॥೨೭೪॥

ತಥಾ ಏವ— ಹಾಗೆಯೇ, ರುಕ್ಮಿಣೀಮುಖ್ಯಾ: - ರುಕ್ಮಿಣಿದೇವಿಯೇ ಮೊದಲಾಗಿವುಳ್ಳ, ರಮೇಶಿತುಃ ಪರಿಗ್ರಹಾ: – ಶ್ರೀಕೃಷ್ಣನ ಪತ್ನಿಯರು, ತಥಾ ಏವ — ಹಾಗೆಯೇ, ಭೀಮಫಲ್ಗುನೌ – ಭೀಮಾರ್ಜುನರು, ಹರೇ: ಉಪ— ಶ್ರೀಕೃಷ್ಣನ ಸಮೀಪದಲ್ಲಿ, ಉಪಾವಿಶನ್ – ಕುಳಿತರು ॥೨೭೪॥

ಸಹೈವ ವಾಯುಸೂನುನಾ ತಥೈವ ಪಾರ್ಷತಾತ್ಮಜಾ ।
ಸಹೈವ ರುಕ್ಮಿಣೀಂ ಶುಭಾಂ ತಥೈವ ಸತ್ಯಭಾಮಿನೀಮ್ ॥೨೭೫॥

ತಥಾ ಏವ – ಹಾಗೆಯೇ, ಪಾರ್ಷತಾತ್ಮಜಾ— ದ್ರೌಪದೀದೇವಿಯು, ವಾಯುಸೂನುನಾ ಸಹ ಏವ – ಭೀಮದೇವರಿಂದ ಸಹಿತವಾಗಿಯೇ, ಶುಭಾಂ ರುಕ್ಮಿಣೀಂಉಪ— ನಿರ್ದುಷ್ಟಳಾದ ರುಕ್ಮಿಣದೇವಿಯ ಸಮೀಪದಲ್ಲಿ, ತಥಾ – ಹಾಗೆಯೇ, ಶುಭಾಂ ಸತ್ಯಭಾಮಿನೀಂ ಉಪ – ನಿರ್ದುಷ್ಟಳಾದ ಸತ್ಯಭಾವರಾದೆ ವಿಯ ಸಮೀಪದಲ್ಲಿ, ಉಪವಿಷ್ಟಾ — ಕುಳಿತಳು, ॥೨೭೫॥

ಯಮೌ ಚ ಪಾರ್ಷತಾದಯೋ ಧನಂಜಯಾಂತಿಕೇsವಿಶನ್ ।
ತಥೈವ ರಾಮಸಾತ್ಯಕೀ ಸಮೀಪ ಏವ ಭೂಭೃತಃ ॥೨೭೬॥

ಸಮಾಸತಾಂ ತು ಸಾ ಸಭಾ ವ್ಯರಾಜತಾಧಿಕಂ ತದಾ ।
ಯಥಾ ಸಭಾ ಸ್ವಯಂಭುವಸ್ಸಮಾಸ್ಥಿತಾ ಚ ವಿಷ್ಣುನಾ ॥೨೭೭॥

ಯಮೌ—ಯಮಾಮಳ (ಅವಳಿಗಳಾ)ರಾದ, ನಕುಲಸಹದೇವರು, ಚ —ಮತ್ತು, ಪಾರ್ಷತಾದಯಃ — ಧೃಷ್ಟದ್ಯುಮ್ನ ಮೊದಲಾದ ಬಾಂಧವರು, ಧನಂಜಯಾಂತಿಕೇ - ಅರ್ಜುನನ ಸನಿಹದಲ್ಲಿ, ಅವಿಶನ್ – ಕುಳಿತರು, ತಥಾ ಏವ – ಹಾಗೆಯೇ, ರಾಮಸಾತ್ಯಕೀ — ಬಲರಾಮದೇವರು ಸಾತ್ಯಕಿ ಇವರಿಬ್ಬರು, ಭೂಭೃತ: – ಧರ್ಮರಾಜನ, ಸಮೀಪೇ ಏವ – ಸಮೀಪದಲ್ಲಿಯೇ ಸಮಾಸತಾಂ – ಕುಳಿತರು, ತದಾ – ಆಗ, ಸಾ ಸಭಾ— ಆ ಪಾಂಡವರ ಸಭೆಯು, ವಿಷ್ಣುನಾ — ಶ್ರೀಮನ್ನಾರಾಯಣನಿಂದ, ಸಮಾಸ್ಥಿತಾ – ಅಲಂಕರಿಸಲ್ಪಟ್ಟ, ಸ್ವಯಂಭುವಃ ಸಭಾ ಯಥಾ— ಬ್ರಹ್ಮದೇವರಸಭೆಯು ಹೇಗೆ ಶೋಭಿಸಬೇಕೋ, ತಥಾ — ಹಾಗೆಯೇ, ಅಧಿಕಂ ವ್ಯರಾಜತ – ಒಹಳವಾಗಿ ಶೋಭಿಸಿತು ॥೨೭೬ – ೨೭೭॥

ವಿಚಿತ್ರಹೇಮಮಾಲಿನಶ್ಶುಭಾಂಬರಾಶ್ಚ ತೇsಧಿಕಮ್ ।
ಸ್ಫುರತ್ಕಿರೀಟಕುಂಡಲಾ ವಿರೇಜುರತ್ರ ತೇನೃಪಾ: ॥೨೭೮॥

ವಿಚಿತ್ರ ಹೇಮಮಾಲಿನಃ —ನಾನಾ ತರಹ ಬಂಗಾರದ ಮಾಲೆಗಳನ್ನು ಧರಿಸಿದ. ಶುಭಾಂಬರಾ: – ಸುಂದರ ಪೀತಾಂಬರಧಾರಿಗಳಾದ, ಸ್ಫುರತ್ಕಿರೀಟಕುಂಡಲಾಃ – ಹೊಳೆಯುವ ಕಿರೀಟ ಹಾಗೂ ಕರ್ಣಕುಂಡಲಗಳುಳ್ಳ, ತೇನೃಪಾ: – ಅಲ್ಲಿ ಆಸೀನರಾದ ರಾಜರು, ಅಧಿಕಂ ಯಥಾಭವತಿ ತಥಾ ವಿರೇಜು: – ಅತಿ ಹೆಚ್ಚಾಗಿ ಹೇಗೆ ಶೋಭಿಸಬೇಕೋ ಹಾಗೆ ಶೋಭಿಸಿದರು, ॥೨೭೮॥

ವಿಶೇಷತೋ ಜನಾರ್ದನಸ್ಸಭಾರ್ಯಕೋ ಜಗತ್ಪ್ರಭುಃ ।
ಯಥಾ ದಿವೌಕಸಾಂ ಸದಸ್ಯನಂತಸದ್ಗುಣಾರ್ಣವಃ ॥೨೭೯॥

ಅನಂತಸದ್ಗುಣಾರ್ಣವಃ—ಅನಂತಸದ್ಗುಣಗಳಿಂದ ಸಮುದ್ರದಂತಿರುವ, ಜಗತ್ಪತಿಃ – ಜಗತ್ತಿನ್ನೆವೀಯಾದ ಸಭಾಯರ್ಯಕಃ – ರುಕ್ಮಿಣ್ಯಾದಿ ಪತ್ನಿಯರಿಂದ ಕೂಡಿದ, ಜನಾರ್ದನಃ – ಶ್ರೀಕೃಷ್ಣ ಪರಮಾತ್ಮನು, ದಿವೌಕಸಾಂ ಸದಸಿ ಯಂಥಾ – ದೇವತೆಗಳ ಸಭೆಯಲ್ಲಿ ಹೇಗೆ ಶೋಭಿಸಬೇಕೋ ಹಾಗೆ, ವಿಶೇಷತಃ—ವಿಶೇಷವಾಗಿ, ರೇಜೇ – ಶೋಭಿಸಿದನು. ॥೨೭೯॥

ಉಪಾಸಿರೇ ಚ ತಂ ನೃಪಾಸ್ಸಮುಸ್ತಶಸ್ಸುಹೃದ್ಗಣಾಃ ।
ತದಾಜಗಾಮ ಖಡ್ಗಭೃತ್ಸಹಾನುಜಸ್ಸುಯೋಧನಃ ॥೨೮೦॥

ಸಮಸ್ತಶಃ ನೃಪಾಃ – ಎಲ್ಲ ರಾಜರೂ, ಸುಹೃದ್ಗಣಾಃ ಚ – ಬಾಂಧವರೂ ಸಹ, ತಂ – ಆ ಶ್ರೀಕೃಷ್ಣಪರಮಾತ್ಮನನ್ನು, ಉಪಾಸಿರೇ – ಸೇವಿಸಿದರು, ತದಾ – ಆಗ, ಸಹಾನುಜಃ—ತಮ್ಮಂದಿರಿಂದ ಸಹಿತನಾದ, ಖಡ್ಗ—ಭೃತ್—ಖಡ್ಗಧಾರಿಯಾದ, ಸುಯೋಧನಃ – ದುರ್ಯೋಧನನು, ಆಜಗಾಮ – ಬಂದನು॥ ॥೨೮೦॥

ಭಾವಾನುವಾದ ೨೫೮ - ೨೮೦

ರಾಜಸೂಯ ಸಭೆಯಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿದಾಗ ಅದನ್ನು ಕಂಡು ಸಿಟ್ಟಿಗೆದ್ದ ಶಿಶುಪಾಲನು ಶ್ರೀಕೃಷ್ಣನನ್ನು ಬಹುವಾಗಿ ನಿಂದಿಸಲಾರಂಭಿಸಿದನು. ಶ್ರೀಕೃಷ್ಣನ ಅಗ್ರಪೂಜೆಯಿಂದ ಆ ಸಭೆಯಲ್ಲಿದ್ದ ಮುಕ್ಕಾಲುಪಾಲು ಜನರಲ್ಲರೂ ಬಹುವಾಗಿ ಸಂತೋಷಪಟ್ಟರು; ನಿತ್ಯಸಂಸಾರಿ ಜನರು ಉದಾಸೀನರಾಗಿದ್ದರು; ತಮೋಯೋಗ್ಯರಾದಂಥ ದುರ್ಯೋಧನಾದಿಗಳು ವಿಮನಸ್ಕರಾಗಿ ದುಃಖಿಸಿದರು. ಶಿಶುಪಾಲನಲ್ಲಿ ಜಯ ಎಂಬ ಸಚ್ಚೇತನವೂ ಅವನ ಜೊತೆಗೆ ಇನ್ನೊಬ್ಬ ದುಷ್ಟ ಚೇತನನೂ ಇದ್ದದ್ದರಿಂದ ಅವನು ಈಗ ಬಹುವಾಗಿ ನಿಂದಿಸಲಾರಂಭಿಸಿದನು. ಅದನ್ನು ಕೇಳಿದ ಕೂಡಲೇ, ಶ್ರೀಭೀಮಸೇನದೇವರು, ಅವನನ್ನು ಸಂಹರಿಸಲೆಂದಂತೆ ಪ್ರವೃತ್ತರಾದರು. ಶ್ರೀಭೀಷ್ಮರು ಭೀಮಸೇನದೇವರ ಕೈಹಿಡಿದು ಎಳೆದಂ ಬೆ ಡ, ಬೇಡ. ಇವನನ್ನು ಶ್ರೀಕೃಷ್ಣನೇ ಸಂಹರಿಸುವನು ಮೂರು ಜನ್ಮಗಳಲ್ಲಿ ತಾನೇ ಕೊಲ್ಲುವದಾಗಿ ವರ ಕೊಟ್ಟಿದ್ದಾನೆ, ಎಂದು ಹೇಳಿ ತಡೆದರು. ಅದೆಲ್ಲವನ್ನೂ ಭೀಮಸೇನದೇವರು ತಿಳಿದಿದ್ದರೂ ಕೂಡ ಈ ಸಂದರ್ಭದಲ್ಲಿ ಅಂಥ ದ್ವೇಷಿಗಳನ್ನು ಸಂಹರಿಸಲು ಪ್ರವೃತ್ತರಾಗುವದು ನನ್ನ ಕರ್ತವ್ಯ; ಬೇಡ ಎಂದು ತಡೆದಾಗ ಬಿಡಲೇಕು ಎಂಬ ದೃಷ್ಟಿಯಿಂದಲೇ ಪ್ರವೃತ್ತರಾದರು. ತಮ್ಮ ಹಿಂಬದಿಯಲ್ಲಿ ಭಗವನ್ನಿಂದೆಯನ್ನು ಮಾಡಿದವನ ಜಿಹ್ವಾಚ್ಛೇದ ಮಾಡುವೆನೆಂದೂ. ಹಾಗು ತಪ್ಪಿ ಎದುರಿಗೆ ಭಗವನ್ನಿಂದೆ ಮಾಡಿದವನನ್ನು ಸಂಹರಿಸಿಯೇ ಬಿಡುವೆನೆಂದೂ ಇವರದು ಸದಾ ಪ್ರತಿಜ್ಞೆಯಿದೆ. ಅದಕ್ಕನುಗುಣವಾಗಿ ಈಗ ಪ್ರವೃತ್ತರಾದರು. ಹಾಗು ತಡೆದಾಗ ನಿಂತರು; ನಿಂದೆಮಾಡುತ್ತಾ ಆ ಶಿಶುಪಾಲನು ಶ್ರೀಕೃಷ್ಣನನ್ನು ಯುದ್ಧಕ್ಕೆ ಕರೆದನು. ಶ್ರೀಕೃಷ್ಣಪರಮಾತ್ಮನು ಆ ದುಷ್ಟನು ಪ್ರಯೋಗಿಸಿದ ಬಾಣಗಳನ್ನೆಲ್ಲ ತಡೆದು, ತಾನು ಸುದರ್ಶನ ಚಕ್ರವನ್ನು ಅವನ ಮೇಲೆ ಪ್ರಯೋಗಿಸಿ ಅವನ ಶಿರಸ್ಸನ್ನೇ ಕತ್ತರಿಸಿ ಸಂಹರಿಸಿದನು. ಆಗ ಅವನೊಳಗಿರುವ ಜಯ ಸಚ್ಚೇತನನು ಆ ಕೊನೆಯ ಸಮಯದಲ್ಲಿ ತನ್ನ ಸ್ವಭಾವವಾದ ಭಕ್ತಿಯನ್ನೇ ಮಾಡುವವನಾಗಿ ಶ್ರೀಕೃಷ್ಣನೊಳಗೆ ಪ್ರವೇಶಿಸಿದನು. ಶ್ರೀಕೃಷ್ಣನು ಮೂಲರೂಪಕ್ಕೆ ಹೋದಾಗ ಅವನು ಜಯ ರೂಪಕ್ಕೆ ಸೇರಿದನು. ಆ ಶಿಶುಪಾಲನೊಳಗಿದ್ದ ಅಸುರಚೇತನನು ಅಂಧಂತಮಸ್ಸನ್ನು ಹೊಂದಲು ಸಿದ್ಧನಾದನು. ನಂತರ ಆ ರಾಜಸೂಯಯಾಗವು ಯಥಾಪ್ರಕಾರವಾಗಿ ಪ್ರವೃತ್ತವಾಯಿತು. ರಾಜರೆಲ್ಲರೂ ಧರ್ಮರಾಜನಿಗೆ ಪಾಂಡವರಿಗೆ ಕೊಡಲು ಕಪ್ಪ-ಕಾಣಿಕೆಗಳನ್ನಾಗಿ ಭಂಗಾರ ರತ್ನರಾಶಿಗಳನ್ನೇ ತಂದಿದ್ದರು. ಅದನ್ನೆಲ್ಲ ತೆಗೆದುಕೊಂಡು ಇಡುವ ಕಾರ್ಯವನ್ನು

ದುರ್ಯೋಧನನಿಗೆ ವಹಿಸಿಕೊಟ್ಟಿದ್ದರು. ಬ್ರಾಹ್ಮಣರಿಗೆ ಸಮೃದ್ಧವಾಗಿ ಇಷ್ಟಭೋಜನವನ್ನು ಮಾಡಿಸಿದರು, ಸುವರ್ಣ ರತ್ನರಾಶಿಗಳನ್ನು ದಕ್ಷಿಣೆಯನ್ನಾಗಿ ಇತ್ತರು. ಯಾವನ್ಯಾವನು ಏನೇನನ್ನು ಅಪೇಕ್ಷಿಸುತ್ತಿದ್ದನೋ ಅದೆಲ್ಲವನ್ನೂ ಕೊಟ್ಟರು-ಹೀಗೆ ವೈಭವದಿಂದ ಅತ್ಯುತ್ತಮ ಕಲ್ಪದ ರಾಜಸೂಯಯಾಗವು ಮುಗಿದಾಗ, ಪಾಂಡವರು ಎಲ್ಲ ರಾಜರಿಂದ, ಗಾಯನ ಮಾಡುವ, ದೇವವಾದ್ಯಗಳನ್ನು ಬಾರಿಸುವ ಗಂಧರ್ವರಿಂದ, ನರ್ತನಮಾಡುತ್ತಿರುವ ಅಪ್ಸರೆಯರಿಂದ ಕೂಡಿಕೊಂಡು ವೈಭವದಿಂದ ಗಂಗೆಗೆ ಹೋಗಿ ಅವಭೃಥ ಸ್ನಾನವನ್ನೂ ಮಾಡಿದರು, ಅದಾದನಂತರ ದೇವತೆಗಳು ತಮ್ಮ ಲೋಕಗಳಿಗೆ ನಡೆದರು, ತಮ್ಮ ರಾಜ್ಯಗಳಿಗೆ ರಾಜರು ಹೋದರು. ಧೃತರಾಷ್ಟ್ರ, ಭೀಷ್ಮರು ಮೊದಲಾಗಿ ಪಾಂಡವರ ಬಂಧುಗಳೂ ಹಸ್ತಿನಾವತಿಗೆ ಹೋದರು. ಸಾನುಜ ದುರ್ಯೋಧನ, ಶಕುನಿ ಕೆಲವರು ಇದ್ದರು. ಆಗ ಮಯನಿರ್ಮಿತವಾದ ರತ್ನ ಖಚಿತವಾದ ಆ ಇಂದ್ರ ಪ್ರಸ್ಥದ ಸಭೆಯಲ್ಲಿ, ರತ್ನ ಖಚಿತವಾದ ಸಿಂಹಾಸನದದಲ್ಲಿ ಧರ್ಮರಾಜನು ಶ್ರೀಕೃಷ್ಣಪರಮಾತ್ಮನಿಂದ ಸಹಿತನಾಗಿ ಆಸೀನನಾಗಿದ್ದನು. ಶ್ರೀಕೃಷ್ಣಪರಮಾತ್ಮನ ಸನಿಹದಲ್ಲಿ ರುಕ್ಮಿಣೀದೇವಿಯೇ ಮೊದಲಾದ ಶ್ರೀಕೃಷ್ಣಪತ್ನಿಯರು ಕುಳಿತಿದ್ದರು. ಭೀಮಾರ್ಜುನರೂ ಕೂಡ ಭಗವಂತನ ಸಮೀಪದಲ್ಲಿ ಆಸೀನರಾಗಿದ್ದರು. ದ್ರೌಪದೀದೇವಿಯು ಭೀಮಸೇನದೇವರಿಂದ ಸಹಿತಳಾಗಿ ಶ್ರೀ ರುಕ್ಮಿಣೀಸತ್ಯಭಾಮಾದೇವಿಯರಿಗೆ ಸಮೀಪದಲ್ಲಿರುವಂತೆ ಕುಳಿತಿದ್ದಳು. ನಕುಲ ಸಹದೇವರು, ಧೃಷ್ಟದ್ಯುಮ್ನ ಮೊದಲಾದವರು ಅರ್ಜುನನ ಸಮೀಪದಲ್ಲಿ ಕುಳಿತ್ತಿದ್ದರು. ಬಲರಾಮಸಾತ್ಯಕಿಯರು ಧರ್ಮರಾಜನ ಸಮೀಪದಲ್ಲಿ ಆಸನವನ್ನು ಹೊಂದಿದ್ದರು. ಇವರೆಲ್ಲರಿಂದ ಕೂಡಿದ ಆ ಸಭೆಯು ಶ್ರೀಮನ್ನಾರಾಯಣನು ಇರುವ ಶ್ರೀಬ್ರಹ್ಮದೇವರ ಸಭೆಯಂತೆ ಅಧಿಕವಾಗಿ ಶೋಭಿಸುತ್ತಿತ್ತು. ಪೀತಾಂಬರಧಾರಿಗಳಾದ, ಕಿರೀಟಕುಂಡಲ ಹೇಮಮಾಲಾದಿ ಆಭರಣ ಭೂಷಿತರಾದ ಆ ರಾಜರೆಲ್ಲರೂ ಹೊಳೆಯುತ್ತಿದ್ದರು. ವಿಶೇಷವಾಗಿ ಪತ್ನೀಸಮೇತನಾದ ಶ್ರೀಕೃಷ್ಣಪರಮಾತ್ಮನು ದೇವಸಭೆಯಲ್ಲಿ ಪರಮಾತ್ಮನಂತೆಯೇ ಶೋಭಿಸಿದನು. ಎಲ್ಲರೂ ಆ ಭಗವಂತನ ತೇಜಸ್ಸನ್ನು ಸೌಂದರ್ಯವನ್ನು ಆಸ್ವಾದಿರುತ್ತಿದ್ದರು. ಆಗ ದುರ್ಯೋಧನನು ತನ್ನ ತಮ್ಮಂದಿರಿಂದ ಸಹಿತನಾಗಿ ಬಂದನು.

ದ್ವಾರಂ ಸಭಾಯಾ ಹರಿನೀಲರಶ್ಮಿವ್ಯೂಢಂ ನಜಾನನ್ ಸ ವಿಹಾಯ ಭಿತ್ತಿಮ್ ।
ಅಭ್ಯಂತರಾಣಾಂ ದೃಶಿ ನೋ ವಿಘಾತಿನೀಂ ಸಂಸ್ಫಾಟಿಕಾಮಾಶು ದೃಢಂ ಚುಚುಂಬೇ ॥೨೮೧॥

ಹರಿನೀಲರಶ್ಮಿವ್ಯೂಢಂ – ಇಂದ್ರನೀಲಮಣಿಗಳ ನೀಲಕಾಂತಿಯಲ್ಲಿ ಮುಚ್ಚಿದ, ಸಭಾಯಾಃ ದ್ವಾರಂ – ಸಭೆಯ ದ್ವಾರವನ್ನು, ನ ಜಾನನ್ ಸನ್ – ತಿಳಿಯದವನಾಗಿ, ವಿಹಾಯ – ಬಿಟ್ಟು, ಅಭ್ಯಂತರಾಣಾಂ – ಒಳಗಿನ ಹಾಗು ಹೊರಗಿನ ಪದಾರ್ಥಗಳ, ದೃಶಿ-ಜ್ಞಾನದ ಬಗ್ಗೆ, ನೋ ವಿಘಾತಿನೀಂ – ಪ್ರತಿಬಂಧಕವಾಗದಿರುವ, ಸಂಸ್ಫಾಟಿಕಾಂ – ಸ್ಫಟಿಕಮಯವಾದ, ಭಿತ್ತಿಂ – ಗೋಡೆಯನ್ನು, ಆಶು–ಕೂಡಲೇ, ದೃಢಂ ಚುಚುಂಬೇ – ಜೋರಾಗಿ ಬಡಿಸಿಕೊಂಡನು ॥೨೮೧॥

ಪ್ರವೇಶಯೇತಾಂ ಚ ಯಮೌ ತಮಾಶು ಸಭಾಂ ಭುಜೌ ಗೃಹ್ಯ ನೃಪೋಪದಿಷ್ಟೌ ।
ತತ್ರೋಪವಿಷ್ಟಃ ಕ್ಷಣಮನ್ಯತೋಽಗಾದಮೃಷ್ಯಮಾಣಃ ಶ್ರಿಯಮೇಷು ದಿವ್ಯಾಮ್ ॥೨೮೨॥

ತಂ – ಅಂಥ ದುರ್ಯೋಧನನನ್ನು, ಆಶು–ಕೂಡಲೇ, ನೃಪೋಪದಿಷ್ಟೌ ಯಮೌ – ರಾಜಯುಧಿಷ್ಠಿರನಿಂದ ಆಜ್ಞಪ್ತರಾದ ನಕುಲ ಸಹದೇವರು, ಭುಜೌ ಗೃಹ್ಯ – ಅವನ ಭುಜಗಳನ್ನು ಹಿಡಿದು, ಸಭಾಂ ಪ್ರವೇಶಯೇತಾಂ – ಸಭೆಗೆ ಪ್ರವೇಶ ಮಾಡಿಸಿದರು. ತತ್ರ – ಆ ಸಭೆಯಲ್ಲಿ, ಕ್ಷಣಂ ಉಪವಿಷ್ಟಃ – ಸ್ವಲ್ಪೇ ಸಮಯ ಪರ್ಯಂತ ಕುಳಿತಂಥ ದುರ್ಯೋಧನನು, ಏಷು – ಈ ಪಾಂಡವರ ಹತ್ತಿರವಿರುವ, ದಿವ್ಯಾಂ ಶ್ರಿಯಂ – ಶ್ರೇಷ್ಠವಾದ ಸಂಪತ್ತನ್ನು ಅಮೃಷ್ಯಮಾಣಃ ಸನ್ – ಸಹಿಸದವನಾಗಿ, ಅನ್ಯತಃ – ಆ ಸ್ಥಳದಿಂದ ಬೇರೆಕಡೆಗೆ, ಅಗಾತ್ – ಹೋದನು. ॥೨೮೨॥

ತತ್ರೇಂದ್ರನೀಲಭುವಿ ರತ್ನಮಯಾನಿ ದೃಷ್ಟ್ವಾ ಪದ್ಮಾನಿ ನೀರಮನಸಾ ಜಗೃಹೇ ಸ್ವವಸ್ತ್ರಮ್ ।
ರತ್ನೋರುದೀಧಿತಿನಿಗೂಢಜಲಂಸ್ಥಲಂ ಚ ಮತ್ವಾ ಪಪಾತ ಸಹಿತೋಽವರಜೈರ್ಜಲೌಘೇ ॥೨೮೩॥

ತತ್ರ – ಆ ಮಾರ್ಗದಲ್ಲಿ ಇಂದ್ರನೀಲಭೂವಿ—ಇಂದ್ರನೀಲಮಣಿಗಳಿಂದ ಖಚಿತವಾದ (ಅದ್ದರಿಂದಲೇ ನೀರಿನಂತೆ ತೋರುವ) ಭೂಮಿಯಲ್ಲಿ, ರತ್ನಮಯಾನಿ ಪದ್ಮಾನಿ – ರತ್ನನಿರ್ಮಿತವಾದ ಕಮಲಗಳನ್ನು, ದೃಷ್ಟ್ವಾ – ನೋಡಿ (ದುರ್ಯೋಧನಃ —ದುರ್ಯೋಧನನು). ನೀರಮನಸಾ – ಇದು ಜಲಾಶಯವು ಎಂಬ ಬುದ್ಧಿಯಿಂದ, ಸ್ವವಸ್ತ್ರಂ – ತನ್ನ ವಸ್ತ್ರವನ್ನು, ಜಗೃಹೇ - ಮೇಲೆ ಎತ್ತಿ ಹಿಡಿದನು, ಚ—ಹಾಗು ರತ್ನೋದ್ಗಾದೀಧಿತಿನಿಗೂಢಜಲಂ – ಒಹರತ್ನಗಳಿಂದ ಕೂಡಿದ ಜಲವನ್ನು, ಸ್ಥಲಂ ಮತ್ವಾ– ನೆಲವನ್ನಾಗಿ ತಿಳಿದು, ಅವರಜೈಃ ಸಹಿತ; ಸನ್ – ತಮ್ಮಂದಿರಿಂದ ಸಹಿತನಾಗಿ, ಜಲೇ ಪಪಾತ—ಜಲಾಶಯದಲ್ಲಿ ಬಿದ್ದನು. ॥೨೮೩॥

ತಂ ಪ್ರಾಹಸದ್ಭಗವತಾಕ್ಷಿತಿಭಾರನಾಶಹೇತೋಸ್ಸುಸೂಚಿತ ಉರುಸ್ವರತೋತ್ರ ಭೀಮಃ ।
ಪಾಂಚಾಲರಾಜಸುತಯಾ ಚ ಸಮಂ ತಥಾನ್ಯೈಃ ಸ್ವೀಯೈಸ್ತಥಾಸೌ ಜಹಸುರ್ಭಗ-
ವನ್ಮಹಿಷ್ಮಃ ॥೨೮೪॥

ಕ್ಷಿತಿಭಾರನಾಶಹೇತೋಃ–ಭೂಭಾರನಾಶಕ್ಕೆ ನಿಮಿತ್ತವಾಗಲಿ ಎಂಬ ಕಾರಣದಿಂದ, ಭಗವತಾ – ಶ್ರೀಕೃಷ್ಣನಿಂದ, ಸುಸೂಚಿತಃ – ಸನ್ನೆಗಳಿಂದ ಸೂಚಿತರಾದ. ಭೀಮಃ – ಭೀಮರು, ಅತ್ರ – ಈ ಸಂದರ್ಭದಲ್ಲಿ, ತಂ—ನೀರಿನಲ್ಲಿ ಬಿದ್ದ ದುರ್ಯೋಧನನ ಬಗ್ಗೆ, ಪಾಂಚಾಲರಾಜಸುತಯಾ ದ್ರೌಪದಿದೇವಿಯಿಂದ, ತಥಾ- ಹಾಗೂ, ಅನ್ಯೈ– ೈೀಯೈಃ – ಬೇರೆ ತಮ್ಮವರಾದ ಸಾತ್ಯಕಿ ಧೃಷ್ಟದ್ಯುಮ್ನ ಮೊದಲಾದವರಿಂದ ಸಹಿತರಾಗಿ. ಉರುಸ್ವರತಃ – ಗಟ್ಟಿಧ್ವನಿಯಿಂದ, ಪ್ರಾಹಸತ್ – ನಕ್ಕರು. ಆನು ನಂತರ, ಭಗವನ್ಮಹಿಷ್ಮಃ - ಭಗವಂತನ ಪತ್ನಿಯರಾದ ರುಕ್ಮಿಣೀ ಮೊದಲಾದವರು, ತಥಾ ಜಹಸುಃ—ಹಾಗೆಯೇ ನಕ್ಕರು. ॥೨೮೫॥

ಮುಂದಸ್ಮಿತೇನ ವಿಲಸದ್ವದನೇಂದುಬಿಂಬೋ ನಾರಾಯಣಸ್ತು ಮುಖಮೀಕ್ಷ್ಯ ಮರುತ್ಸು ತಸ್ಯ ।
ಸೋವಾಚ ಕಿಂಚಿದಥ ಧರ್ಮಸುತೋ ನಿವಾರ್ಯ ಪ್ರಾಸ್ಥಾಪಯದ್ವಸನಭೂಷ್ಯ
ವಿಲೇಪನಾನಿ ॥೨೮೬॥

ವಿಲಸದ್ವದನೇಂದುಬಿಂಬಃ—ಶೋಭಿಸುವ ಮುಖಚಂದ್ರಮಂಡಲದಿಂದ ಕೂಡಿದ. ನಾರಾಯಣಃ ತಂ – ಶ್ರೀಕೃಷ್ಣನು ಮಾತ್ರ. ಮರುತ್ಸು ತಸ್ಯ— ಭೀಮಸೇನನ. ಮುಖಂ—ಮುಖವನ್ನು, ಮುಂದಸ್ಮಿತೇನ – ಮುಂಗೂಳ್ನಗೆಯಿಂದ ಈಕ್ಷ್ಯ – ನೋಡಿ, ಕಿಂಚಿತ್ — ಏನನ್ನೂ, ನ ಉವಾಚ – ಮಾತಾಡಲಿಲ್ಲ. ಅಥ—ನಂತರ. ಧರ್ಮಸುತಃ — ಧರ್ಮರಾಜನು. ನಿವಾರ್ಯ - ನಗುವದನ್ನು ತಡೆದು, ವಸನಭೂಷ್ಯವಿಲೇಪನಾನಿ–ವಸ್ತ್ರ ಮಾಲೆ ಲೇಪನ ದ್ರವ್ಯಗಳನ್ನು, ಪ್ರಾಸ್ಥಾಪಯತ್ — ಕಳಿಸಿದನು. ॥೨೮೬॥

ಕೃಷ್ಣಾವೃಕೋದರಗತಂ ಬಹುಲಂ ವಿಧಾಯ ಕ್ರೋಧಂ
ಯಯೌ ಸಶಕುನಿಃ ಧೃತರಾಷ್ಟ್ರ ಪುತ್ರಃ ।
ಸುವ್ರೀಳಿತೋ ನೃಪತಿದತ್ತವರಾಂಬರಾಂಬದೀನ್ ನ್ಯಕ್ಕೃತ್ಯ
ಮಾರ್ಗಗತ ಆಹ ಸ ಮಾತುಲಂ ಸ್ವಮ್ ॥೨೮೭॥

ಸುವ್ರೀಳಿತಃ – ಒಹಾನಾಚಿಕೆಯನ್ನು ಹೊಂದಿದಂತೆ, ಸಶಕುನಿಃ – ಶಕುನಿಯಿಂದ ಸಹಿತನಾದ, ಧೃತರಾಷ್ಟ್ರ ಪುತ್ರಃ: ದುರ್ಯೋಧನನು, ಕೃಷ್ಣಾವೃಕೋದರಗತಂ — ದ್ರೌಪದಿಭೀಮರ ಬಗೆಗೆನಿರುವ, ಕ್ರೋಧಂ – ಸಿಟ್ಟನ್ನು, ಬಹುಲಂ ವಿಧಾಯ—ಹೆಚ್ಚಾಗಿ ಮಾಡಿಕೊಂಡು, ನೃಪತಿದತ್ತವರಾಂಬರಾ ದೀನ್-ಧರ್ಮರಾಜನು ಕಳುಹಿಸಿದ ಶ್ರೇಷ್ಠ ವಸ್ತ್ರ ಮೊದಲಾದವಗಳನ್ನು ನ್ಯಕ್ಕೃತ್ಯ— ತಿರಸ್ಕರಿಸಿ. ಸ್ವಪುರಂ)(ಯಯೌ — (ತನ್ನ ಪುರಕ್ಕೆ) ಹೊರಟನು. ಮಾರ್ಗಗತಃ – ದಾರಿಯಲ್ಲಿರುವ. ಸಃ – ಆ ದುರ್ಯೋಧನನು, ಸ್ವಂ ಮಾತುಲಂ—ತನ್ನ ಸೋದರಮಾವನನ್ನು ಕುರಿತು, ಆಹ—ಹೇಳಿದನು. ॥೨೮೭॥

ಭಾವಾನುವಾದ ೨೪೧- ೨೪೬

ಶ್ರೀಕೃಷ್ಣ – ಪಾಂಡವರು ಮೊದಲಾದವರಿರುವ ಹೊಳೆಯುವ ಆ ಸಭೆಗೆ ಬಂದ ದುರ್ಯೋಧನನು ಇಂದ್ರನೀಲ ಮಣಿಗಳ ಕಾಂತಿಯಲ್ಲಿ ಮುಚ್ಚಿಹೋದಬಾಗಿಲನ್ನು ಕಾಣದೇ ತಿಳಿಯದೇ ಅದನ್ನು ಬಿಟ್ಟು, ಒಳಗಿನ ಹೊರಗಿನ ಎರಡೂ ಪದಾರ್ಥಗಳೂ ಕಾಣಿಸುವಂತೆ ಸ್ಫಟಿಕನಿರ್ಮಿತವಾದ ಗೋಡೆಯಂಭಾಗವನ್ನು ನೋಡಿ ಆ ಕಡೆಯ ಪದಾರ್ಥಗಳೆಲ್ಲ ಕಾಣುತ್ತಿದ್ದದ್ದರಿಂದ ಅದೇ ದ್ವಾರವೆಂದು ತಿಳಿದು ಅಲ್ಲಿಪ್ರವೇಶಿಸಲು ಪ್ರವೃತ್ತನಾಗಿ ಆ ಗೋಡೆಯನ್ನು ಮುಂಖಕ್ಕೆ ಗಟ್ಟಿಯಾಗಿ ಒಡಿಸಿಕೊಂಡನು. ಅದನ್ನು ನೋಡಿ ಅವನಿಗೆ ದ್ವಾರವುಯಾವದು ಎಂದುಗೊತ್ತಾಗದೇಕಷ್ಟಪಡುತ್ತಿದ್ದಾನೆಂದು ತಿಳಿದು ಧರ್ಮರಾಜನು ನಕುಲಸಹದೇವ ರಿಂದ ಅವನನ್ನು ಒಳಗೆ ಕರಿಸಿದನು.ಅವರೇ ಕೈಹಿಡಿದು ಕರಕೊಂಡು ಬಂದು ಸಭೆಯಲ್ಲಿ ಕೂರಿಸಿದರು.ಅಲ್ಲಿ ಕೂತ ಅವನು ಪಾಂಡವರ ಮಹೈಶ್ವರ್ಯವನ್ನು ನೋಡಿ ಸಹಿಸಲಾಗಿದೇ ಅಲ್ಲಿಂದ ಎದ್ದು ಹೊರಹೋದನು. ಹೋಗುವಾಗ ದಾರಿಯಲ್ಲಿ ಒಂದು ಕಡೆ ಇಂದ್ರನೀಲಮಣಿಗಳನ್ನು ನೆಲಕ್ಕೆ ಖಚಿಸಿದ್ದರಿಂದ ಅದುನೀರಿನಂತೆ, ಕೆಂಪುರತ್ನಗಳಿಂದ ಕಮಲದ ಆಕಾರಗಳನ್ನು ರಚಿಸಿದ್ದರಿಂದ ಅವು ಕಮಲ ಎಂದು ತಿಳಿದು ಆದು ಜಲಾಶಯವೆಂದು ಭ್ರಾಂತಿಯನ್ನು ಹೊಂದಿ ವಸ್ತ್ರವುತೊಯ್ಯುವದು ಎಂಬ ಭಾವದಿಂದ ವಸ್ತ್ರವನ್ನು ಮೇಲಕ್ಕೆ ಎತ್ತಿಕೊಂಡುಹೊರಟನು. ಆದರೆ ಅಲ್ಲಿ ನೀರಿಲ್ಲದೇ ನೆಲವೇ ಇದ್ದದ್ದರಿಂದ ವಸ್ತ್ರವನ್ನು ಯಥಾಪ್ರಕಾರ ಬಿಟ್ಟುಕೊಂಡು ಮುಂದೆ ಹೊರಟನು. ಅಲ್ಲಿ ಮುಂದಿನಭಾಗದಲ್ಲಿ ನಿಜವಾಗಿ ನೀರೇಇತ್ತು. ಅಲ್ಲಿ ತುಂಬಾ ರತ್ನಗಳನ್ನು ಸುತ್ತವುಂತ್ತ ಹೆಣೆದದ್ದರಿಂದ ಅವುಗಳ ಕೆಂಪುಕಾಂತಿಯಲ್ಲಿ ನೀರಿನ ಬಣ್ಣವು ಕಾಣದೇ ನೀರು ಇದು ಎಂದು ತಿಳಿಯುದೇ ಇಲ್ಲಿ ಕೆಂಪು ಭೂಮಿ ಇವೆ ಎಂದು ತಿಳಿದು ಸರಸರ ಹಾಗೆ ಹೋದಾಗ ತಮ್ಮಂದಿರಿಂದ ಸಹಿತವಾಗಿ ಜಲಾಶಯದಲ್ಲಿ ಬಿದ್ದನು. ಆಗ ಶ್ರೀಕೃಷ್ಣಪರಮಾತ್ಮನು ತನ್ನ ಭೂಭಾರನಾಶಕಾರ್ಯಕ್ಕೆ ಭಿಮಾದಿಗಳು ನಗುವದು ನುಂದಿಯಾಗಲಿ ಎಂಬ ಸಂಕಲ್ಪದಿಂದ, ಕಣ್ಸನ್ನೆಗಳಿಂದ ಭೀಮಸೇನದೇವರಿಗೆ ಸೂಚಿಸಿದನು. ಆಗ ಶ್ರೀಭೀಮರು ಜೋರಾಗಿ ಅಪಹಾಸ ಮಾಡಿ ನಕ್ಕರು; ದ್ರೌಪದೀದೇವಿಯರು ನಕ್ಕರು; ಧೃಷ್ಟದ್ಯುಮ್ನ ಮೊದಲಾದವರೂ ನಕ್ಕರು; ರುಕ್ಮಿಣೀ ಸತ್ಯಭಾಮಾದಿ ಶ್ರೀಕೃಷ್ಣ ಪತ್ನಿಯರೂ ನಕ್ಕರು ಶ್ರೀಕೃಷ್ಣನು ಮಾತ್ರ ಮುಂಗುಳಿ ನಗೆಯಿಂದ ಕೂಡಿಕೊಂಡು ಶ್ರೀಭೀಮರ ಮುಖವನ್ನು ನೋಡುತ್ತಾ ಯಾವ ಮಾತನ್ನೂ ಆಡದೇ ಸುಮ್ಮನೇ ಇದ್ದನು. ಧರ್ಮರಾಜನು ಇವರೆಲ್ಲರೂ ನಗುವದನ್ನು ತಡೆದು ಅವನಿಗೆ ವಸ್ತ್ರಾದಿಗಳನ್ನು ಕಳುಹಿದನು. ದುರ್ಯೋಧನನು ಮಾತ್ರ ಶ್ರೀಭೀಮ ದ್ರೌಪದೀದೇವಿಯರ ಬಗ್ಗೆ ವಿಶೇಷ ಕ್ರೋಧವನ್ನುಮಾಡಿಕೊಂಡು ಲಜ್ಜಿತನಾಗಿ, ಇವರುಕೊಡುತ್ತಿದ್ದ ವಸ್ತ್ರಾದಿಗಳನ್ನು ಧಿಕ್ಕರಿಸಿ ಹೊರಟನು. ದಾರಿಯಲ್ಲಿ ತನ್ನ ಸೋದರ ಮಾವನಾದ ಶಕುನಿಯಂ ಹತ್ತಿರ ಮಾತನಾಡಿದನು.

ಯೌ ಮಾಮುಹಸತಾಂ ಕೃಷ್ಣಾಭೀಮೌ ಕೃಷ್ಣಸ್ಯ ಸನ್ನಿಧೌ ।
ತಯೋರಕೃತ್ವಾ ಸಂತಾಪಂ ನಾಹಂ ಜೀವಿತು ಮುತ್ಸಹೇ ॥೨೪೭॥

ಯೌ – ಯಾವ, ಕೃಷ್ಣಾಭೀಮೌ – ದ್ರೌಪದೀಭೀಮರು, ಕೃಷ್ಣಸ್ಯ ಸನ್ನಿಧೌ – ಶ್ರೀಕೃಷ್ಣನ ಎದುರಿಗೆ, ಮಾಂ-ನನ್ನ ಬಗ್ಗೆ, ಅಹಸತಾಂ—ನಕ್ಕರೋ ತಯೋಃ—ಅವರಿಗೆ, ಸಂತಾಪಂ – ದುಃಖವನ್ನು, ಅಕೃತ್ವಾ–ಮಾಡದೆಯೇ, ಅಹಂ-ನಾನು ಜೀವಿತುಂ—ಬದುಕಲು, ನ ಉತ್ಸಹೇ – ಇಚ್ಛಿಸುವದಿಲ್ಲ. ॥೨೪೭॥

ಯದಿ ಮೇ ಶಕ್ತಿರತ್ರ ಸ್ಯಾದ್ಧತಯೋರಯಂ ವೃಕೋದರವತ್,
ಅಗ್ರಪೂಜಾಂ ಚ ಕೃಷ್ಣಸ್ಯ ವಿಲುಂಪೇಯಂನ ಸಂಶಯಃ ॥೨೪೮॥

ಯದಿ—ಒಂದುವೇಳೆ, ಮೇ –ನನಗೆ, ಶಕ್ತಿಃಸ್ಯಾತ್—ಶಕ್ತಿಇದ್ದರೆ, ಅತ್ರ—ಈಗ, ನಗುತ್ತಿರುವಾಗಲೇ,

ವೃಕೋದರಂ – ಭೀಮನನ್ನು, ಘಾತಯೇಯಂ —ಕೊಂದುಬಿಡುತ್ತಿದ್ದೆನು. ಚ—ಮತ್ತು. (ಅಗ್ರ ಪೂಜೆಯು ಸಮಂಜಸದಲ್ಲಿ) ಕೃಷ್ಣಸ್ಯ ಅಗ್ರಪೂಜಾಂ—ಕೃಷ್ಣನ ಅಗ್ರಪೂಜೆಯನ್ನು, ವಿಲಂಬೇಯಂ – ನಿಲ್ಲಿಸುತ್ತಿದ್ದೆನು. ನ ಸಂಶಯಃ – ಸಂಶಯವಿಲ್ಲ. ॥೨೬೮॥

ಈದೃಶಂ ಪಾಂಡವೈಶ್ವರ್ಯಂ ದೃಷ್ಟ್ವಾ ಕೋ ನಾಮ ಜೀವಿತಮ್ ।
ಇಚ್ಛೇತ ಕರದಾ ಯೇಷಾಂ ವೈಶ್ಯವತ್ಸರ್ವಭೂಮಿಪಾಃ ॥೨೬೯॥

ಯೇಷಾಂ—ಯಾವ ಪಾಂಡವರಿಗೆ, ಸರ್ವಭೂಮಿಪಾಃ–ಎಲ್ಲರಾಜರೂ, ವೈಶ್ಯವತ್ ಕರದಾಃ– ವೈಶ್ಯರಂತೆಕರವನ್ನು ಕೊಡುತ್ತಿರುವರೋ ಈದೃಶಂ ಪಾಂಡವೈಶ್ವರ್ಯಂ—ಈ ರೀತಿಯಹಾವ ಪಾಂಡವರ ಮಹಾಐಶ್ವರ್ಯವನ್ನು ದೃಷ್ಟ್ವಾ — ನೋಡಿ ಕಃ ನಾಮ—ಯಾವನು ತಾನೇ, ಜೀವಿತಂ ಇಚ್ಛೇತ—ಬದುಕನ್ನು ಇಚ್ಛಿಸಿಯಾನು? ॥೨೬೯॥

ಇತ್ಯುಕ್ತಶ್ಶಕುನಿರ್ವೈರಂ ದೃಢೀಕರ್ತುಂ ವಚೋಽಬ್ರವೀತ್ ।
ಕಂ ತೇ ವೈರೇಣ ರಾಜೇಂದ್ರ ಬಲಿಭಿರ್ಭ್ರಾತೃಭಿಃ ಪುನಃ ॥೨೭೦॥

ಅನುಜೀವಸ್ಥ ತಾನ್ವೀರಾನ್ಗುಣಜ್ಯೇಷ್ಠಾನ್ಬಲಾಧಿಕಾನ್ ।
ಇತೀರಿತೋಽತಿಸಂವೃದ್ಧಕೋಪ ಆಹ ಸುಯೋಧನಃ ॥೨೭೧॥

ಇತಿ ಉಕ್ತಃ ಶಕುನಿಃ – ಈ ರೀತಿ ಹೇಳಲ್ಪಟ್ಟ ಶಕುನಿಯು, ವೈರಂ ದೃಢೀಕರ್ತುಂ—ದುರ್ಯೋಧನನಿಗೆ (ಪಾಂಡವರ) ಕೃಷ್ಣಾಭೀಮರ ಬಗೆಗಿರುವ ದ್ವೇಷವನ್ನು ಗಟ್ಟಿಮಾಡಲು, ರಾಜೇಂದ್ರ – ದುರ್ಯೋಧನನೇ ಬಲಿಭಿಃಭ್ರಾತೃಭಿಃ – ಬಲಿಷ್ಠರಾದ ಸಹೋದರರಾದ ಪಾಂಡವರಿಂದ, ವೈರೇಣ – ದ್ವೇಷದಿಂದ, ತೇ – ನಿನಗೆ, ಕಂ—ಏನು ಪ್ರಯೋಜನವು? ಪುನಃ – ಆದರೆ, ವೀರಾನ್–ವೀರರಾದ, ಗುಣಜ್ಯೇಷ್ಠಾನ್ – ಗುಣಗಳಿಂದ ಶ್ರೇಷ್ಠರಾದ, ಬಲಾಧಿಕಾನ್ – ಅಧಿಕಬಲಿಷ್ಠರಾದ, ತಾನ್—ಆ ಪಾಂಡವರನ್ನು, ಅನುಜೀವಸ್ಥ–ಅನುಸರಿಸಿ ಬದುಕಿಕೊಂಡಿರು. ಇತಿ ವಚಃ—ಈ ರೀತಿ ಮಾತನ್ನು, ಅಬ್ರವೀತ್–ಹೇಳಿದನು ಇತಿ ಈರಿತಃ; – ಹೀಗೆ ಹೇಳಲ್ಪಟ್ಟ, ಅತಿಸಂವೃದ್ಧಕೋಪಃ ಸುಯೋಧನಃ—ಅತಿಹೆಚ್ಚಾದ ಸಿಟ್ಟನ್ನು ಹೊಂದಿದ ದುರ್ಯೋಧನನು, ಆಹ—(ಮುಂದೆಹೇಳುವಂತೆ) ಹೇಳಿದನು. ॥೨೭೦॥೨೭೧॥

ಯದಿ ತೇಷಾಂ ತದೈಶ್ವರ್ಯಂ ನ ಮಾಂ ಗಚ್ಛೇದಶೇಷತಃ ।
ಸರ್ವಥಾ ನೈವ ಜೀವೇಯಮಿತಿ ಸತ್ಯಂ ಬ್ರವೀಮಿ ತೇ ॥೨೭೨॥

ಯದಿ – ಒಂದುವೇಳೆ, ತೇಷಾಂ – ಆ ಪಾಂಡವರ, ತತ್ ಐಶ್ವರ್ಯಂ–ಅಂಥ ಮಹದೈಶ್ವರವು,ಅಶೇಷತಃ–ಪೂರ್ಣವಾಗಿ, ಮಾಂ ನನ್ನನ್ನು ನ ಗಚ್ಛೇತ್–ಹೋದುವದಿಲ್ಲವಾದರೆ,ಅಹಂ—ನಾನು, ಸರ್ವಥಾ ನೈವ ಜೀವೇಯಂ–ಸರ್ವಥಾ ಬದುಕಲಾರೆನು. ಇತಿ – ಎಂಬ, ಸತ್ಯಂ – ಸತ್ಯವಾದ ಮಾತನ್ನು, ತೇ ನಿನಗೆ, ಬ್ರವೀಮಿ—ಹೇಳುತ್ತಿದ್ದೇನೆ. ॥೨೭೨॥

ನ ಚ ಬಾಹುಬಲಾಚ್ಛಕ್ಯ ಆದಾತುಂ ತಾಂ ಶ್ರಿಯಂ ಕ್ವಚಿತ್ ।
ನೇಂದ್ರೋಽಪಿ ಸಮರೇ ಶಕ್ತಸ್ತಾನ್ಜೇತುಂ ಕಿಮು ಮಾನುಷಾಃ ॥೨೭೩॥

ತಾಂ ಶ್ರಿಯಂ – ಆ ಸಂಪತ್ತನ್ನು, ಬಾಹುಬಲಾತ್ – ಬಾಹುಸಾಮರ್ಥ್ಯದಿಂದ ಆದಾತುಂ–ಸಂಪಾದಿಸಲು, ಕ್ವಚಿತ್ - ಎಂದೂ, ನ ಚ ಶಕ್ಯೇ—ಸಮರ್ಥನಾಗಲಾರೆನು. ಏಕೆಂದರೆ, ತಾನ್ – ಆ ಪಾಂಡವರನ್ನು, ಸಮರೇ ಯುದ್ಧದಲ್ಲಿ, ಜೇತುಂ – ಗೆಲ್ಲಲು, ಇಂದ್ರಃಅಪಿ – ಇಂದ್ರದೇವನೂಕೂಡ, ನ ಶಕ್ತಃ—ಸಮರ್ಥನಲ್ಲ, ಹಾಗಿರುವಾಗ ಮಾನುಷಾಃ

ಕಿಮು—ಮನುಷ್ಯರು ಸರ್ವರೆಲ್ಲ ಎಂದು ಏನು ಹೇಳುವದು? ಸರ್ವರೆಲ್ಲವೇ ಅಲ್ಲ ಹೀಗೆ ದುರ್ಯೋಧನನು ಹೇಳಿದನು. (ಎಂದು ೨೯೧ನೆಯ ಶ್ಲೋಕಕ್ಕೆ ಅನ್ವಯ) ॥೨೯೩॥

ಇತೀರಿತಃ ಪಾಪತಮ ಆಹ ಗಾಂಧಾರಕೋ ನೃಪಃ ।
ಪಾಪಾನಾಮಖಿಲಾನಾಂ ಚ ಪ್ರಧಾನಂ ಚಕ್ರವರ್ತಿನಮ್ ॥೨೯೪॥

ಯಾಂ ತಾಂ ಶ್ರಿಯಂ ಪ್ರದೀಪ್ತಾಂ ತ್ವಂ ಪಾಂಡವೇಷು ಪ್ರಪಶ್ಯಸಿ ।
ತಾಮಕ್ಲೇಶತ ಆದಾಸ್ಯೇ ಕ್ರೀಡನ್ನಕ್ಷೈಸ್ತ್ವದಂತಿಕೇ ॥೨೯೫॥

ಇತಿ ಈರಿತಃ—ಹೀಗೆ ದುರ್ಯೋಧನನಿಂದ ಹೇಳಲ್ಪಟ್ಟ, ಪಾಪತಮಃ – ಅತಿಪಾಪಿಯಾದ, ಗಾಂಧಾರಕಃನೃಪ—ಗಾಂಧಾರದೇಶದ ರಾಜನಾದ ಶಕುನಿಯು, ಅಖಿಲಾನಾಂ ಪಾಪಾನಾಂ—ಎಲ್ಲ ಪಾಪಿಷ್ಠರಿಗೆ, ಪ್ರಧಾನಂಚಕ್ರವರ್ತಿನಂ – ಮುಖ್ಯ ಚಕ್ರವರ್ತಿಯಾದ ಕಲಿಯ ಸ್ವರೂಪಿಯಾದ ದುರ್ಯೋಧನನನ್ನು ಕುರಿತು, ತ್ವಂ – ನೀನು, ಪಾಂಡವೇಷು—ಪಾಂಡವರ ಹತ್ತಿರ, ಯಾಂ ಪ್ರದೀಪ್ತಾಂ, ಶ್ರಿಯಂ—ಯಾವಶೋಭಿಸುವ ಸಂಪತ್ತನ್ನು, ಪ್ರಪಶ್ಯಸಿ-ನೋಡುತ್ತಿರುವಯೋ, ತಾಂ ತಾಂ – ಆ ಎಲ್ಲ ಸಂಪತ್ತನ್ನೂ, ಪ್ರಪಶ್ಯಶಿ—ಅಕ್ಷೈಃಕ್ರೀಡನ್ ಸನ್ – ಅಕ್ಷೆಗಳಿಂದ ಆಡುವವನಾಗಿ (ದ್ಯೂತವನ್ನು ಆಡುವವನ ಗಿ) ಅಕ್ಲೇಶತಃಏವ—ಕಷ್ಟ ವಿಲ್ಲದೇಯೇ, ತ್ವದಂತಿಕೇ-ನಿನ್ನ ಸಮೀಪಕ್ಕೆ, ಆದಾಸ್ಯೇ—ತರುತ್ತೇನೆ. ಇತಿ—ಎಂದು, ಆಹ – ಹೇಳಿದನು. ॥೨೯೪॥೨೯೫॥

ಇತೀರಿತಃ ಪ್ರಸನ್ನಧೀಸ್ಸುಯೋಧನೋ ಬಭೂವ ಹ ।
ಪ್ರಜಗ್ಮತುಶ್ಚ ತಾವುಭೌ ವಿಚಿತ್ರವೀರ್ಯಜಂ ನೃಪಮ್ ॥೨೯೬॥

ಇತಿ ಈರಿತಃ – ಹೀಗೆ ಶಕುನಿಯಿಂದ ಹೇಳಿಸಿಕೊಳ್ಳಲ್ಪಟ್ಟ, ಸುಯೋಧನಃ – ದುರ್ಯೋಧನನು, ಪ್ರಸನ್ನಧೀಃ ಬಭೂವ ಹ – ಸಂತೋಷ್ಟನಾದನು—ಚ ಹಾಗು ತೌ ಉಭೌ – ಅವರಿಬ್ಬರೂ, ವಿಚಿತ್ರವೀರ್ಯಜಂ ನೃಪಂ – ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನ ಸಮೀಪಕ್ಕೆ, ಪ್ರಜಗ್ಮತುಃ – ಹೋದರು. ॥೨೯೬॥

ಧೃತರಾಷ್ಟ್ರಮುಥೋವಾಚ ದ್ವಾಪರಾಂಶೋಽತಿಪಾಪಕೃತ್ ।
ನಾಸ್ತಿಕ್ಯರೂಪಶಕುನಿರ್ವಿವರ್ಣಂ ಹರಿಣಂ ಕೃಶಮ್ ॥೨೯೭॥

ದುರ್ಯೋಧನಂ ತತ್ ಶ್ರುತ್ವಾ ಕುತ ಇತ್ಯಾಹ ದುರ್ಮನಾಃ ।
ಅಬ್ರೂತಾಂ ತೌ ನೃಪಾಯಾಶು ದ್ವಾಭ್ಯಾಂ ಯನ್ಮಂತ್ರಿತಂಪಥಿ ॥೨೯೮॥

ಅಥ – ಅಲ್ಲಿಗೆ ಬಂದ ನಂತರ, ನಾಸ್ತಿಕ್ಯರೂಪಃ—ನಾಸ್ತಿಕ್ಯ ಬುದ್ಧಿಗೆ ಅಭಿಮಾನಿಯಾದ, ಅತಿಪಾಪಕೃತ್–ಪಾಪಕಾರ್ಯ ಮಾಡುವವರಲ್ಲಿ ಶ್ರೇಷ್ಠನಾದ, ಶಕುನಿಃ–ಶಕುನಿಯು, ಧೃತರಾಷ್ಟ್ರಂ–ಧೃತರಾಷ್ಟ್ರನ ಎದುರು ದುರ್ಯೋಧನಂ–ದುರ್ಯೋಧನನನ್ನು ವಿವರ್ಣಂ – ಮೊದಲಿನ ಬಣ್ಣವಿಲ್ಲದವನನ್ನಾಗಿ, ಹರಿಣಂ – ಕಾಮಣ್ಣೇಜಡ್ಡು ಬಂದಾಗ ಆಗುವಂತೆ ಹಳದಿಬಣ್ಣವುಳ್ಳವನನ್ನಾಗಿ ಕೃಶಂ–ಸೊರಗಿದವನ್ನಾಗಿ, ಉವಾಚ – ಹೇಳಿದನು ತತ್—ಆ ಮಾತನ್ನು ಶ್ರುತ್ವಾ – ಕೇಳಿ, ದುರ್ಮನಾಃ – ದುಃಖದಿಂದ ಕೂಡಿದ ಮನಸ್ಸುಳ್ಳವನಾದ, ಧೃತರಾಷ್ಟ್ರನು, ಕುತಃ – ಏಕೆ ಹಾಗಾಗಿದ್ದಾನೆ ? ಇತಿ – ಎಂದು, ಆಹ – ಹೇಳಿ (ಕೇಳಿ)ದನು. (ತದಾ – ಆಗ), ತೌ—ಅವರಿಬ್ಬರು, ದ್ವಾಭ್ಯಾಂ—ತಮ್ಮಿಬ್ಬರಿಂದ, ಪಥಿ–ಮಾರ್ಗದಲ್ಲಿ, ಯತ್ – ಯಾವ ವಿಷಯವು ಮಂತ್ರಿತಂ—ವಿಚಾರಿಸಲ್ಪಟ್ಟಿತ್ತೋ, ತತ್ ಅದನ್ನು, ಆಶು – ಕೂಡಲೇ, ನೃಪಾಯ – ಧೃತರಾಷ್ಟ್ರರಾಜನಿಗೆ, ಅಬ್ರೂತಾಂ – ಹೇಳಿದರು. ॥೨೯೭॥೨೯೮॥

ಶ್ರುತ್ವೈವ ತನ್ನೇತ್ಯ ವದತ್ಸ ಭೂಪತಿರ್ವಿರೋಧಿ ಧರ್ಮಸ್ಯ ವಿನಾಶಕಾರಣಮ್ ।
ಕುಮಂತ್ರಿತಂ ವೋ ನ ಮಮೈತದಿಷ್ಟಂ ಸ್ವಬಾಹುವೀರ್ಯಾಪ್ತಮಹಾಶ್ರಿಯೋಹಿತೇ ॥೨೯॥

ತ್ವಯಾಽಪಿ ನಿರ್ಜಿತ್ಯ ದಿಶೋ ಮಖಾಗ್ರ್ಯಾಃ ಕಾರ್ಯಾಃ ಸ್ಪೃಧೋ ಮಾ ಗುಣವತ್ತಮೈಸ್ತೈಃ ।
ವಿಶೇಷತೋ ಭ್ರಾತೃಭಿರಗ್ರ್ಯಪೌರುಷೈರಿತ್ಯುಕ್ತ ಆಹಾಶು ಸುಯೋಧನಸ್ತಮ್ ॥೩೦॥

ತತ್ – ಆ ಮಾತನ್ನು, ಶ್ರುತ್ವಾ ಏವ – ಕೇಳಿಯೇ, ಸಃ ಭೂಪತಿಃ – ಆ ಧೃತರಾಷ್ಟ್ರನು, ನ – ಆಗದು, ಧರ್ಮಸ್ಯ ವಿರೋಧಿ — ಧರ್ಮವಿರುದ್ಧವಾದ, ವಿನಾಶಕಾರಣಂ – (ನಿಮ್ಮ) ವಿನಾಶಕ್ಕೆ ಕಾರಣವಾದ, ವಃ ಏತತ್ ಕುಮಂತ್ರಿತಂ – ನಿಮ್ಮ ಈ ದುರ್ವಿಚಾರವು, ಮಮ – ನನಗೆ, ನ ಇಷ್ಟಂ – ಸಮ್ಮತವಲ್ಲ. ತೇ – ಆ ಪಾಂಡವರಾದರೂ ಸ್ವಬಾಹುವೀರ್ಯಾಪ್ತಮಹಾಶ್ರಿಯಃ ಹಿ — ತಮ್ಮ ಬಾಹುಬಲದಿಂದ ಹೊಂದಿದ ಮಹಾ ಸಂಪತ್ತುಳ್ಳವರೇ ಆಗಿರುವರು, ನಿಮ್ಮ ಹಾಗೇ ದುರ್ಮಾರ್ಗದಿಂದ ಹೊಂದಿದವರಲ್ಲ, ತ್ವಯಾ ಅಪಿ – ನಿನ್ನಿಂದಲೂ ಕೂಡ, ದಿಶಃ ನಿರ್ಜಿತ್ಯ — ದಿಕ್ಕು ಗಳನ್ನು ಗೆದ್ದು, ಮಖಾಗ್ರ್ಯಾಃ ಕಾರ್ಯಾಃ – ಶ್ರೇಷ್ಠಯಜ್ಞಾದಿಕಾರ್ಯಗಳು ಮಾಡಲ್ಪಡಬೇಕು, ಗುಣವತ್ತಮೈಃ – ಗುಣ ಶ್ರೇಷ್ಠರಾದ, ಅಗ್ರ್ಯಪೌರುಷೈಃ—ಶ್ರೇಷ್ಠ ಪರಾಕ್ರಮವುಳ್ಳ, ವಿಶೇಷತಃ—ಭ್ರಾತೃಭಿಃ – ಅದರಲ್ಲೂ ವಿಶೇಷವಾಗಿ ಸಹೋದರರಾಗಿರುವ, ತೈಃ—ಆ ಪಾಂಡವರಿಂದ (ಆ ಪಾಂಡವರ ಬಗ್ಗೆ) ಮಾಸ್ಪೃಧಃ— ಸ್ಪರ್ಧೆ (ಮಾತ್ಸರ್ಯ)ಪಡಬೇಡ, ಇತಿ–ಎಂದು ಅವದತ್ – ಹೇಳಿದನು, ಇತಿ ಉಕ್ತಃ – ಈ ರೀತಿ ಹೇಳಿಸಿಕೊಳ್ಳಲ್ಪಟ್ಟ, ಸುಯೋಧನಃ – ದುರ್ಯೋಧನನು, ಆಶು–ಕೂಡಲೇ ತಮ್ – ಧೃತರಾಷ್ಟ್ರನನ್ನು ಕುರಿತು, ಆಹ—ಹೇಳಿದನು. ॥೨೯-೩೦॥

ಯದಿ ಶ್ರಿಯಂ ಪಾಂಡವಾನಾಂ ನಾಕ್ಷ್ಣೈರಾದಾತುಮಿಚ್ಛಸಿ ।
ಮೃತ ಮೇವಾದ್ಯ ಮಾಂ ವಿದ್ಧಿ ಪಾಂಡವೈಸ್ತ್ವಂ ಸುಖೀ ಭವ ॥೩೦॥

ಯದಿ – ಒಂದು ವೇಳೆ, ಪಾಂಡವಾನಾಂ ಶ್ರಿಯಂ— ಪಾಂಡವರ ಸಂಪತ್ತನ್ನು, ಅಕ್ಷ್ಣೈಃ – ಲೆತ್ತಗಳಿಂದ (ದ್ಯೂತದಿಂದ), ಆದಾತುಂ – ತೆಗೆದುಕೊಳ್ಳಲು, ನ ಇಚ್ಛಸಿ ಚೇತ್ – ಸಮ್ಮತಿಸುವದಿಲ್ಲವಾದರೆ, ಮಾಂ – ನನ್ನನ್ನು, ಅದ್ಯ—ಇಂದೇ, ಮೃತಂ – ಸತ್ತವನನ್ನಾಗಿ, ವಿದ್ಧಿ—ತಿಳಿ, ತ್ವಂ – ನೀನು, ಪಾಂಡವೈಃ ಸಹ – ಪಾಂಡವರಿಂದ ಕೂಡಿ ಕೊಂಡು, ಸುಖೀಭವ – ಸುಖಿಯಾಗಿರು. ॥೩೦॥

ಯದಿ ಮಜ್ಜೀವಿತಾರ್ಥೀ ತ್ವಮಾನಯಾಶ್ವಿಹ ಪಾಂಡವಾನ್ ।
ಸಭಾರ್ಯಾನ್ದೇವನಾಯೈವ ನ ಚಾಧರ್ಮೋಽತ್ರ ಕಶ್ಚನ ॥೩೧॥

ಯದಿ—ಒಂದು ವೇಳೆ, ತ್ವಂ – ನೀನು, ಮಜ್ಜೀವಿತಾರ್ಥೀಚೇತ್ – ನನ್ನ ಬದುಕನ್ನು ಅಪೇಕ್ಷಿಸುವವನಾದರೆ, ಆಶು— ಕೂಡಲೇ, ಇಹ – ಇಲ್ಲಿಗೆ. ಸಭಾರ್ಯಾನ್—ಪತ್ನಿಸಮೇತರಾದ, ಪಾಂಡವಾನ್ – ಪಾಂಡವರನ್ನು, ದೇವ–ನಾಯ ಏವ – ದ್ಯೂತದಾಟಕ್ಕಾಗಿಯೇ, ಆನಯ—ಕರೆಯಿಸು, ಅತ್ರ – ಕರೆಯಿಸುವದರಲ್ಲಿ, ಕಶ್ಚನ ಅಧರ್ಮಃ ನಚ – ಯಾವ ಅಧರ್ಮವೂ ಇಲ್ಲ. ॥೩೧॥

ವೇದಾನುಜೀವಿನೋ ವಿಪ್ರಾಃ ಕ್ಷತ್ರಿಯಾಶ್ಚಾಸ್ಯ ಜೀವಿನಃ ।
ತೃಟ್ಯತೇ ಯೇನ ಶತ್ರುಶ್ಚ ತಚ್ಚಸ್ತ್ರಂ ನೈವ ಚೇತರತ್ ॥೩೨॥

ವಿಪ್ರಾಃ — ಬ್ರಾಹ್ಮಣರು, ವೇದಾನುಜೀವಿನಃ – ವೇದವನ್ನು ಅನುಸರಿಸಿಕೊಂಡು ಜೀವಿಸುವವರು,

ಕ್ಷತ್ರಿಯಾಃ – ಕ್ಷತ್ರಿಯರು, ಶಸ್ತ್ರಜೀವಿನಃ—ಶಸ್ತ್ರ(ಆಯುಧ)ದಿಂದ ಬದುಕುವವರು, ಯೇನ – ಯಾವದರಿಂದ, ಶತ್ರುಃ—ವೈರಿಯು, ತೃಟ್ಯತೇ – ಛೇದಿಸಲ್ಪಡುವನೋ (ಸಂಹರಿಸಲ್ಪಡುವನೋ), ತತ್ – ಅದು, ಶಸ್ತ್ರಂ—ಶಸ್ತ್ರ ಎಂದು ಹೆಸರುಳ್ಳದ್ದು, ಇತರತ್—ಬೇರೆಯಂದು, ನೈವ ಚ=ಶಸ್ತ್ರವೆಂದು ಹೆಸರುಳ್ಳದ್ದು ಅಲ್ಲವೇ ಅಲ್ಲ. ॥೩೦೩॥

ಅತಃ ಸ್ವಧರ್ಮ ಏವಾಯಂ ತವಾಪಿ ಸ್ಯಾತ್ಫಲಂ ಮಹತ್ ।
ಇತ್ಯುಕ್ತೋ ಮಾ ಫಲಂ ಮೋಽಸ್ತು ತವೈವಾಸ್ತ್ವಿತಿ ಸೋಽಬ್ರವೀತ್ ॥೩೦೪॥

ಅತಃ—ಈ ವ್ಯುತ್ಪತ್ತಿಯಲ್ಲಿ ಕೆತ್ತವೂ ಕೂಡ ಶಸ್ತ್ರವೇ ಆದ್ದರಿಂದ, ಅಯಂ—ಪಾಂಡವರನ್ನು ಕರೆದು ಲೆತ್ತದಿಂದ ಆಡುವದು, ಸ್ವಧರ್ಮಃ ಏವ – ಕ್ಷತ್ರಿಯರಾದ ನಮಗೆ ಯೋಗ್ಯವಾದ ಧರ್ಮವೇ ಆಗಿದೆ. ತವಅಪಿ – ಈ ಧರ್ಮವನ್ನು ಆಚರಿಸಲು ಅನುಕೂಲವಾಗುವ ನಿನಗೂ, ಮಹತ್ ಫಲಂ ಸ್ಯಾತ್—ಶ್ರೇಷ್ಠ ಫಲವು ಬರುವದು, (ಎಂದು ದುರ್ಯೋಧನನು ಹೇಳಿದನು ಎಂದು 300 ನೇ ಶ್ಲೋಕಕ್ಕೆ ಅನ್ವಯ), ಇತಿ ಉಕ್ತಃ ಸಃ – ಈ ರೀತಿ ಹೇಳಲ್ಪಟ್ಟ ಆ ಧೃತರಾಷ್ಟ್ರನು, ಮೋ—ನನಗೆ, ಫಲಂ, ಆ ಫಲವು, ಮಾ ಅಸ್ತು – ಬೇಡ, ತವ ಏವ ಅಸ್ತು—ನಿನಗೇ ಇರಲಿ, ಇತಿ – ಎಂದು ಅಬ್ರವೀತ್ – ಹೇಳಿದನು. ॥೩೦೪॥

ಏವ ಬ್ರುವನ್ನಪಿ ನೃಪ ಆವಿಷ್ಟಃ ಕಲಿನಾ ಸ್ವಯಮ್ ।
ಪುತ್ರಸ್ನೇಹಾಚ್ಚ ವಿದುರಮಾದಿಶತ್ಪಾಂಡವಾನ್ಪ್ರತಿ ॥೩೦೫॥

ಏವಂ ಬ್ರುವನ್ ಅಪಿ – ಈ ರೀತಿ ದುರ್ಯೋಧನನಿಗೆ ವಿರುದ್ಧವಾಗಿ ಹೇಳಿದವನಾಗಿದ್ದರೂಕೂಡ, ನೃಪಃ – ಧೃತರಾಷ್ಟ್ರನು, ಸ್ವಯಂ – ತಾನು, ಕಲಿನಾ—ಕಲಿಯಿಂದ, ಆವಿಷ್ಟಃ – ಪ್ರವಿಷ್ಟನು (ಆದ್ದರಿಂದ), ಪುತ್ರ-ಸ್ನೇಹಾತ್ ಚ—ಮಗನೆಂಬ ಮೋಹದಿಂದಲೂ ಕೂಡ, ವಿದುರಂ–ವಿದುರರನ್ನು ಪಾಂಡವಾನ್ ಪ್ರತಿ – ಪಾಂಡವರ ಹತ್ತಿರಕ್ಕೆ (ಅವರನ್ನು ಕರೆತರಲು) ಆದಿಶತ್ – ಕಳಿಸಿದನು ॥೩೦೫॥

ಅವತಾರಿಕೆ : ಕಲಿಯ ಆವೇಶ ಎಂದಿನಿಂದ ಎಲ್ಲಿಯವರೆಗೆ ಧೃತರಾಷ್ಟ್ರನಲ್ಲಿತ್ತು ಎಂಬುದನ್ನು ತಿಳಿಸುವರು

ಆವಿವೇಶ ಕಲಿಸ್ತಂ ಪುತ್ರತ್ವಸಿದ್ಧಯೇ ।
ಆಂಶೇನ ತತ ಆರಭ್ಯ ನೈವಾಸ್ಮಾದ ಪಜಗ್ಮಿವಾನ್ ॥೩೦೬॥

ಯದಾ–ಎಂದು, ಕಲಿಃ – ಕಲಿಯು, ಪುತ್ರತ್ವಸಿದ್ಧಯೇ – ತಾನು ಧೃತರಾಷ್ಟ್ರನ ಮಗ (ದುರ್ಯೋಧನ)ನಾಗಿ ಹುಟ್ಟುವದಕ್ಕಾಗಿ, ತಂ – ಆ ಧೃತರಾಷ್ಟ್ರನನ್ನು, ಆವಿವೇಶ ಹಿ—ಪ್ರವೇಶಿಸಿದನೋ, ತತಃಆರಭ್ಯ—ಅಂದಿನಿಂದ ಆರಂಭಿಸಿ ಆಂಶೇನ—ಒಂದು ಅಂಶದಿಂದ, ಅಸ್ಮಾತ್—ಈ ಧೃತರಾಷ್ಟ್ರನಿಂದ, ನೈವ ಅಪಜಗ್ಮಿವಾನ್–ಹೊರಗೆ ಹೋಗಲೇ ಇಲ್ಲ ॥೩೦೬॥

ಯಾವತ್ಪುರಂ ಪರಿತ್ಯಜ್ಯ ವನಮೇವ ವಿವೇಶ ಹ ।
ತದಂತರಾ ತತಸ್ತಸ್ಯ ಪಾಪಯುಕ್ತಂ ಮನೋಽಭವತ್ ॥೩೦೭॥

ಯಾವತ್—ಯಾವಾಗ, ಪುರಂ—ಹಸ್ತಿನಾವತಿಯನ್ನು, ಪರಿತ್ಯಜ್ಯ – ಬಿಟ್ಟು, ವನಂ ಏವ–ಅಡವಿಯನ್ನೇ, ವಿವೇಶ ಹ – ಪ್ರವೇಶಿಸಿದನೋ, ತಾವತ್ – ಅಲ್ಲಿಯವರೆಗೆ, ಕಲಿಯು ಅಂಶದಿಂದ ಧೃತರಾಷ್ಟ್ರನೊಳಗೆ ಇದ್ದನು ತತಃ-ಅದ್ದರಿಂದ, ತದಂತರಾ—ಆ ಎರಡು ಸಮಯಗಳ ಮಧ್ಯದ ಸಮಯದಲ್ಲಿ, ತಸ್ಯ ಮನಃ – ಆ ಧೃತರಾಷ್ಟ್ರರಾಜನ ಮನಸ್ಸು, ಪಾಪಯುಕ್ತಂ ಅಭವತ್ – ಪಾಪಯುಕ್ತವಾಗಿತ್ತು. ॥೩೦೭॥

ನ್ಯವಾರಯತ್ತಂ ವಿದುರೋ ಮಹತ್ತೇ ಪಾಪಂ ಕುಲಸ್ಯಾಪಿ ವಿನಾಶಕೋಽಯನುಂ,
ಸಮುದ್ಯಮೋ ನಾತ್ರ ವಿಚಾರ್ಯಮಸ್ತಿ ಕೃಷ್ಣಾ ನ ತಸ್ಮಾದಯಶಶ್ಚ ತೇ ಸ್ಯಾತ್ ॥೩೦೪॥

ವಿದುರಃ—ವಿದುರರು, ತಂ – ಧೃತರಾಷ್ಟ್ರನನ್ನು ಕುರಿತು ಅಯಂ ಸಮುದ್ಯಮಃ – ಈ ಉದ್ಯೋಗವು, ತೇ ಮಹತ್ ಪಾಪಂ ಸ್ಯಾತ್–ನಿನಗೆ ಹೆಚ್ಚು ಪಾಪ ಸಾಧನವಾಗುವದು, ಕುಲಸ್ಯವಿನಾಶಕಃ ಅಪಿ—ಕುಲನಾಶಕವೂಕೂಡ, ಸ್ಯಾತ್–ಆದೀತು. ಅತ್ರ ವಿಚಾರ್ಯಂ ನಾಸ್ತಿ—ಇದರಲ್ಲಿ ವಿಚಾರಣೀಯವಾದದ್ದು ಇಲ. ತಸ್ಮಾತ್ ಆದ್ದರಿಂದ ನ ಕೃಷ್ಣಾಃ – ಹೀಗೆ ಮಾಡಬೇಡಾ. ತೇ ನಿನಗೆ ಅಯಶಃ ಚ – ಇವನು ಕುಲನಾಶ ಮಾಡಿದನು ಎಂಬ ಅಪಕೀರ್ತಿಯೂ, ಸ್ಯಾತ್ – ಬರುವದು (ಇತಿ – ಎಂದು ಉಕ್ತ್ವಾ—ಹೇಳಿ), ನ್ಯವಾರಯತ್—ತಡೆದರು. ॥೩೦೪॥

ಇತಿ ಬ್ರುವಾಣಂ ಕಲಹೋತ್ರ ನಸ್ಯಾನ್ನಿವಾರಯಾವೋ ವಯಮೇವ ಯಸ್ಮಾತ್ ।
ದ್ರಷ್ಟುಂ ಸುತಾನ್ಕ್ರೀಡತ ಏಕಸಂಸ್ಥಾನಿಚ್ಛಾವಿ ಪಾರ್ಥಾಂಶ್ಚ ಸುಯೋಧನಾದೀನ್ ॥೩೦೯॥
ಅತಃ ಕ್ಷಿಪ್ರಮುಪಾನೇಯಾಃ ಪಾರ್ಥಾ ಇತಿ ಬಲೋದಿತಃ।
ಯಯೌ ಸ ವಿದುರಃ ಪಾರ್ಥಾನ್ದ್ವಾರಕಾಂ ಕೇಶವೇ ಗತೇ ॥೩೧೦॥

ಇತಿ ಬ್ರುವಾಣಂ – ಈ ರೀತಿ ವಿಶಾತನಾಡಿದ್ದಂಥ, ವಿದುರರನ್ನು ಕುರಿತು, (ನೃಪಃ—ಧೃತರಾಷ್ಟ್ರರಾಜನು) ಯಸ್ಮಾತ್ – ಯಾವ ಕಾರಣದಿಂದ, ವಯಂಏವ – ನಾವೇ ನಿವಾರಯಾಮಃ – ಕಲಹವಾಗುವ ಪ್ರಸಂಗದಲ್ಲಿ ತಡೆಯುವೆವೋ, ತಸ್ಮಾತ್ ಆದ್ದರಿಂದ, ಅತ್ರ–ದ್ಯೂತಾಟದಲ್ಲಿ, ಕಲಹಃ ನಸ್ಯಾತ್–ಕಲಹವಾಗಲಾರದು, ಅಹಂ–ನಾನು, ಸುತಾನ್–ಮಕ್ಕಳಾದ ಪಾರ್ಥಾನ್ – ಪಾಂಡವರನ್ನು ಚ—ಮತ್ತು, ಸುಯೋಧನಾದೀನ್ – ದುರ್ಯೋಧನಾದಿಗಳನ್ನು, ಏಕಸಂಸ್ಥಾನ್ – ಒಂದು ಕಡೆಸೇರಿದವರನ್ನಾಗಿ, ಕ್ರೀಡತಃ – ಆಡುವವರನ್ನಾಗಿ, ದ್ರಷ್ಟುಂ ನೋಡಲು, ಇಚ್ಛಾವಿ—ಅಪೇಕ್ಷಿಸುವನು, ಅತಃ – ಆದ್ದರಿಂದ, ಪಾರ್ಥಾಃ–ಪಾಂಡವರು, ಕ್ಷಿಪ್ರಂ—ಬೇಗನೇ, ಉಪಾನೇಯಾಃ – ಕರೆತರಲ್ಪಡಬೇಕು. (ಇತಿ ಅಬ್ರವೀತ್—ಎಂದು ಹೇಳಿದನು) ಬಲೋದಿತಃ - ಧೃತರಾಷ್ಟ್ರನಿಂದ ಬಲಾತ್ಕಾರಮಾಡಿ ಹೇಳಲ್ಪಟ್ಟ, ಸಃ ವಿದುರಃ – ಆ ವಿದುರರು, ಕೇಶವೇ – ಶ್ರೀಕೃಷ್ಣನು, ದ್ವಾರಕಾಂ ಗತೇ ಸತಿ—ದ್ವಾರಕಾಕ್ಕೆ ಹೋಗಿರುತ್ತಿರಲು ಪಾರ್ಥಾನ್–ಪಾಂಡವರಹತ್ತಿರ, ಯಯೌ–ಹೋದರು. ॥೩೧೦॥

ಅವತಾರಿಕೆ :– ಶ್ರೀ ಕೃಷ್ಣನು ಪಾಂಡವರನ್ನು ಬಿಟ್ಟು ದ್ವಾರಕೆಗೆ ಹೋದಕಾರಣವನ್ನು ಹೇಳುವರು. –

ಗತೇ ಹಿ ಪಾರ್ಥಸನ್ನಿಧೇಃ ಸುಯೋಧನೇ ತು ನಾರದಃ।
ಶಶಂಸ ಧರ್ಮಸೂನುನಾ ಪ್ರಚೋದಿತೋಽರಿಮಾಗತಮ್ ॥೩೧೧॥

ಸುಯೋಧನೇ–ದುರ್ಯೋಧನನು, ಪಾರ್ಥಸನ್ನಿಧೇಃ–ಪಾಂಡವರ ಸಭೆಯ ಸ್ಥಳದಿಂದ ಗತೇ ಸತಿ – (ಅವಮಾನಿತನಾಗಿ ಲಜ್ಜೆಯಿಂದ) ಹೋಗುತ್ತಿರಲು (ಆಗತಃ – ಬಂದಂಥ) ನಾರದಃ—ನಾರದರು ಧರ್ಮಸೂನುನಾ ಪ್ರಚೋದಿತಃ ಸನ್ – ಧರ್ಮರಾಜನಿಂದ ಪ್ರೇರಿತರಾಗಿ (ಏನಾದರೂ ವಾರ್ತೆ ಇದ್ದರೆ ಹೇಳಿರಿ ಎಂದು ಕೇಳಲ್ಪಟ್ಟವರಾಗಿ) ಆಗತಂ–ದ್ವಾರಕೆಗೆ ಬಂದ್ಹಕ್ಕಾಗಿಬಂದಂಥ, ಅರಿಂ–ವೈರಿಯಾದ ಸಾಲ್ವನ ಬಗ್ಗೆ, ಶಶಂಸ – ಹೇಳಿದರು. ॥೩೧೧॥

ಅವತಾರಿಕೆಃ – ಧರ್ಮರಾಜನು ಕೇಳಿದ್ದನ್ನು ತಿಳಿಸುವರು.

ಕ ಉದ್ಯಮೀ ನೃಪೇಷ್ವಿತಿ ಪ್ರಪೃಷ್ಟ ಆಹ ನಾರದಃ
ಸ ಸೌಭರಾಡ್ವರಂ ಶಿವಾದವಾಪ ವೃಷ್ಣಿನಿರ್ಜಯಂವಮ್ ॥೩೧೨॥

ಪಾಂಸುಮುಷ್ಟಿಂ ಸಕೃದ್ಗ್ರಾಸೀ ಬಹೂನಬ್ದಾಂಸ್ತಪಶ್ಚರನ್ ।
ಆಜಗಾಮ ಹರಾದಾಪ್ಯ ವರಂ ಕೃಷ್ಣಜಯೇ ಪುನಃ ॥೩೧೩॥

ನೃಪೇಷು—ರಾಜರಲ್ಲಿ, ಉದ್ಯಮೇ—ವಿಜಯಕ್ಕಾಗಿ ಪ್ರವೃತ್ತಿಯಃಳ್ಳವನಂ, ಕಃ—ಯಾರಂ? ಇತಿ—ಎಂದು, ಪುಪೃಷ್ಟಃ—ಪ್ರಶ್ನೆಮಾಡಿಸಿಕೊಳ್ಳಲ್ಪಟ್ಟ, ನಾರದಃ—ನಾರದರಂ, ಆಹ—(ಹಿಂದಿನಂತೆ) ಹೇಳಿದರಂ, ಅದರ ವಿವರವನ್ನು ಹೇಳಂವರಂ. ಸ ಸೌಭರಾಟ್—ಆ ಸಾಲ್ವನು ಶಿವಾತ್-ರುದ್ರದೇವರಿಂದ, ವೃಷ್ಣಿನಿರ್ಜಯಂ—ಯಾದವರ ಮೇಲೆ ಜಯವನ್ನು, ವರಂ—ವರವನ್ನಾಗಿ (ಪೂರ್ವಂ-ಹಿಂದೆ) ಅವಾಪ-ಹೊಂದಿದ್ದನಂ. (ರುಕ್ಮಿಣೀ ಸ್ವಯಂವರಸಂದರ್ಭದಲ್ಲಿ, ಶ್ರೀಕೃಷ್ಣನಿಂದ ಪರಾಜಿತನಾಗಿ) ಪುನಃ—ಮತ್ತೆ, ಸಕೃತ್—ಒಮ್ಮೆ, ಪಾಂಸುಮುಷ್ಟಿಂ—ಒಂದಂ ಮುಷ್ಟಿ ಮಣ್ಣನ್ನು, ಗ್ರಾಸೀ-ತಿನ್ನುವವನಾಗಿ, ಬಹೂನ್ ಅಬ್ದಾನ್—ಬಹುವರ್ಷಗಳವರೆಗೆ, ತಪಃ ಚರನ್—ತಪಸ್ಸನ್ನು ಮಾಡುವವನಾಗಿ, ಕೃಷ್ಣಜಯೇ—ಶ್ರೀ ಕೃಷ್ಣನನ್ನು ಜಯಿಸುವವರ ಬಗ್ಗೆ, ಹರಾತ್—ರುದ್ರದೇವರಿಂದ, ವರಂ ಆಪ್ಯ—ವರವನ್ನು ಹೊಂದಿ, ಆಜಗಾಮ—(ತನ್ನ ಊರಿಗೆ) ಬಂದನಂ. ॥೩೧೨॥೩೧೩॥

ಸ ಶ್ರುತ್ವಾ ಮಾಗಧವಧಂ ದಿಶಾಂ ವಿಜಯಮೇವ ಚ ।
ರಾಜಸೂಯಂ ಕ್ರತುಂ ಚೈವ ಶಿಶುಪಾಲವಧಂ ತಥಾ ॥೩೧೪॥
ಯದೂನ್ಪ್ರತ್ಯುದ್ಯಮಂ ತೂರ್ಣಂ ಕರೋತೀತಿ ನಿಶಮ್ಯ ತತ್ ।
ಸಮೈಕ್ಷದ್ಧರ್ಮಜಃ ಕೃಷ್ಣಮುಖಶೀತಾಂಶುಮಂಡಲಮ್ ॥೩೧೫॥

ಸಃ—ಆ ಸಾಲ್ವನು, ಮಾಗಧವಧಂ—ಜರಾಸಂಧನವಧದ ಬಗ್ಗೆ, ಚ—ಮತ್ತು ದಿಶಾಂ ವಿಜಯಂ ಚ—ಪಾಂಡವರಂ ಮಾಡಿದ ದಿಗ್ವಿಜಯದಬಗ್ಗೆಯೂಕೂಡ, ರಾಜಸೂಯಂ ಕ್ರತುಂ ಚ—ರಾಜಸೂಯಯಾಗದ ಬಗೆಗೂಕೂಡ, ತಥಾ—ಹಾಗೂ, ಶಿಶುಪಾಲವಧಂ—ಶಿಶುಪಾಲನ ಸಂಹಾರದಬಗ್ಗೆ, ಶ್ರುತ್ವಾ—ಕೇಳಿ, ಯದೂನ್ ಪ್ರತಿ-ಯಾದವರ ಮೇಲೆ, ಉದ್ಯಮಂ—ಯತ್ನಿಸಿದ್ದ ಪ್ರವೃತ್ತಿಯನ್ನು, ತೂರ್ಣಂ—ಬೇಗನೇ, ಕರೋತಿ—ಮಾಡುತ್ತಿದ್ದಾನೆ. (ಎಂದು ನಾರದರು ಹೇಳಿದರು ಎಂದು ಅನ್ವಯ) ಇತಿ ತತ್—ಈ ರೀತಿಯ ನಾರದರ ವಚನವನ್ನು, ನಿಶಮ್ಯ—ಕೇಳಿ, ಧರ್ಮಜಃ-ಧರ್ಮರಾಜನು, ಕೃಷ್ಣಮುಖಶೀತಾಂಶುಮಂಡಲಂ—ಶ್ರೀಕೃಷ್ಣನ ಮುಖವೆಂಬ ಚಂದ್ರಮಂಡಲವನ್ನು, ಸಮೈಕ್ಷತ್—ನೋಡಿದನಂ. ॥೩೧೪ ೩೧೫॥

ಅಸ್ತ್ವಿತ್ಯುಕ್ತ್ವಾ ಸ ಗೋವಿಂದಃ ಪ್ರೇಷಯಾಮಾಸ ಯಾದವಾನ್,
ಪ್ರದ್ಯುಮ್ನಾದೀನ್ದಿನೈಃ ಕೈಶ್ಚಿತ್ಸ್ವಯಂ ಚಾಗಾತ್ಸಹಾಗ್ರಜಃ ॥೩೧೬॥

ಸಃ ಗೋವಿಂದಃ—ಆ ಶ್ರೀಕೃಷ್ಣಪರಮಾತ್ಮನಂ, ಅಸ್ತು ಇತಿ—ಇರಲಿ (ಬರಲಿ ಏನುಮಾಡುವನು?) ಇತಿ-ಎಂದು ಉಕ್ತ್ವಾ—ಹೇಳಿ, ಪ್ರದ್ಯುಮ್ನಾದೀನ್ ಯಾದವಾನ್—ಪ್ರದ್ಯುಮ್ನನೇ ಮೊದಲಾದ ಯಾದವರನ್ನು, ಪ್ರೇಷಯಾಮಾಸ—ಕಳಿಸಿದನು, ಕೈಶ್ಚಿತ್ ದಿನೈಃ-ಕೆಲವುದಿನಗಳ ನಂತರ, ಸಹಾಗ್ರಜಃ ಸ್ವಯಂ ಚ—ಅಣ್ಣನಾದ ಬಲರಾಮದೇವರಿಂದ ಸಹಿತನಾಗಿ ತಾನೂಕೂಡ, ಅಗಾತ್—ಹೊರಟನಂ. ॥೩೧೬॥

ವಿದುರಸ್ತು ತತೋ ಗತ್ವಾ ಧರ್ಮರಾಜಮುವಾಹ್ವಯತ್,
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚ ಸ ಧರ್ಮರಾಟ್ ॥೩೧೭॥

ಸಾರ್ಧಂ ಮಾತ್ರಾ ಭ್ರಾತೃಭಿಶ್ಚ ಕೃಷ್ಣಯಾ ಚ ಯಯೌ ದ್ಯುತಮ್ ॥೩೧೮॥

ವಿದುರಃತು—ವಿದುರರೂಕೂಡ, ತತಃ—ಅನಂತರ, ಗತ್ವಾ—ಹೋಗಿ, ಧರ್ಮರಾಜಂ—ಧರ್ಮರ ಜನನ್ನು, ಆಹ್ವಯತ್—(ದ್ಯೂತಕ್ಕೆ) ಕರೆದರಂ. ಅಥ—ಅವರು ಕರೆದನಂತರ, ಸಃ ಧರ್ಮರಾಟ್ ಚ—ಯುಧಿಷ್ಠಿರ (ಧರ್ಮರಾಜ)

ನಾದರೂ, ಕೃಷ್ಣಯಾ ಭ್ರಾತೃಭಿ: —ದ್ರೌಪದೀದೇವಿಯಿಂದ, ಸಹೋದರರಿಂದ. ವಾಕ್ಯವಶಾಣಃ ಅಪಿ – ನಿಷೇಧಿಸಲ್ಪಟ್ಟರೂ ಕೂಡ, ಮಾತ್ರಾ —ತಾಯಿಯಿಂದ, ಚ —ಮತ್ತು. ಭ್ರಾತೃಭಿ: —ಸಹೋದರರಿಂದ, ಚ—ಮತ್ತು. ಕೃಷ್ಣಯಾ ಚ-ದ್ರೌಪದೀದೇವಿಯಿಂದಲೂ, ಸಾರ್ಧಂ – ಕೂಡಿಕೊಂಡು, ದ್ರುತಂ – ಬೇಗನೇ, ಯಯೌ — ದ್ಯೂತಕ್ಕಾಗಿ ಹೋದನು. ॥೩೧೭-೩೧೮॥

ಅವತಾರಿಕ ೩ — ವಿದುರರು ಧರ್ಮಜ್ಞಾನಿಗಳು. ದ್ಯೂತವು ಅಧರ್ಮವೆಂದು ತೀರ್ಮಾನಿಸಿದ್ದು ಹೇಗೆ ಕರೆದರೂ ಎಂಬುದಕ್ಕೆ ಉತ್ತರವನ್ನು ಕೊಡುತ್ತಾರೆ.

ಜ್ಯೇಷ್ಠಾಜ್ಞಯೈವ ವಿದುರ ಆಹ್ವಯನ್ನಪಿ ಧರ್ಮಜಮ್ ।
ನಾಗಂತವ್ಯಮಿತಿ ಪ್ರಾಹ ದೋಷಾನುಕ್ತ್ವಾಽಕ್ಷಜಾನ್ಬಹೂನ್ ॥೩೧೯॥

ವಿದುರಃ —ವಿದುರರು. ಜ್ಯೇಷ್ಠಾಜ್ಞಯಾ ಏವ – ಅಣ್ಣನಾದ ಧೃತರಾಷ್ಟ್ರನ ಅಪ್ಪಣೆಯಿಂದಲೇ, ಧರ್ಮಜಂ— ಧರ್ಮರಾಜನನ್ನು. ಆಹ್ವಯಂನ್ ಅಪಿ–ಕರೆಯುವವರಾದರೂ ಕೂಡ. ಅಕ್ಷಜಾನ್ ಬಹೂನ್ ದೋಷಾನ್ ಉಕ್ತ್ವಾ— ದ್ಯೂತದಿಂದ ಬರುವ ಬಹುದೋಷಗಳನ್ನು ಹೇಳಿ, ನ ಆಗಂತವ್ಯಂ – ದ್ಯೂತಕ್ಕೆ ಬರಕೂಡದು, ಇತಿ ಅಪಿ - ಎಂದೂಕೂಡ, ಪ್ರಾಹ—ಹೇಳಿದರು. ॥೩೧೯॥

ಇತೀಹ ದೋಷಸಂಚಯಸ್ತಥಾಽಪಿ ತೇ ಪಿತುರ್ವಚಃ ।
ಸಮೀಕ್ಷ್ಯ ತದ್ದ್ವಯಂ ಸ್ವಯಂ ಕುರುಷ್ವ ಕಾರ್ಯಮಾತ್ಮನಃ ॥೩೨೦॥

ಇತಿ – ಈ ರೀತಿ, ಇಹ - ದ್ಯೂತದಲ್ಲಿ, ದೋಷಸಂಚಯಃ — ದೋಷರಾಶಿಯಂ ಇದೆ, ತಥಾಪಿ — ಆದರೂ ಕೂಡ, ತೇ ಪಿತುಃ – ನಿನ್ನ ದೊಡ್ಡಪ್ಪನಾದ ಧೃತರಾಷ್ಟ್ರನ, ವಚಃ - ದ್ಯೂತಕ್ಕೆ ಬರಬೇಕು ಎಂಬ ಮಾತು, ಇದೆ. ತದ್ದ್ವಯಂ – ಆವೆರಡನ್ನು, ಸ್ವಯಂ ಸಮೀಕ್ಷ್ಯ – ನೀನೇ ಯೋಗ್ಯವು ಯಾವುದು ? ಅಯೋಗ್ಯವು ಯಾವುದು? ಎಂದು ವಿಚಾರಿಸಿ, ಆತ್ಮನಃ ಕಾರ್ಯಂ—ನಿನಗೆ ಯೋಗ್ಯವಾದ ಕಾರ್ಯವನ್ನು, ಕುರುಷ್ವ - ಮಾಡು ಎಂದು ವಿದುರರು ಹೇಳಿದರು ಎಂಬುದು ಅನ್ವಯ. ॥೩೨೦॥

ಇತೀರಿತೋಽಪಿ ಪಾಂಡವೋ ಯಯೌ ಕಲಿಪ್ರವೇಶತಃ ।
ವಿಚಿತ್ರವೀರ್ಯಜಂ ಚ ತಂ ಸಮಾಸದತ್ಸಸೈನಿಕಃ ॥೩೨೧॥

ಇತಿ ಈರಿತಃ ಅಪಿ – ಈ ರೀತಿ ನಿಷೇಧಪೂರ್ವಕವಾಗಿ ಹೇಳಲ್ಪಟ್ಟರೂ ಕೂಡ, ಪಾಂಡವಃ—ಧರ್ಮರಾಜನು ಕಲಿಪ್ರವೇಶತಃ – ಕಲಿಪ್ರವೇಶವಿದ್ದದ್ದರಿಂದ, ಯಯೌ – ಹೊರಟನು ಸಸೈನಿಕಃ – ಸೈನಿಕಸಮೇತನಾಗಿ, ವಿಚಿತ್ರವೀರ್ಯಜಂ ತಂ – ವಿಚಿತ್ರವೀರ್ಯನ ಪುತ್ರನಾದ ಧೃತರಾಷ್ಟ್ರನ ಸಮೀಪಕ್ಕೆ, ಸಮಾಸದತ್— ಬಂದನು. ॥೩೨೧॥

ಅವತಾರಿಕೆ ೪ ದ್ಯೂತಕ್ಕೆ ಹೊರಡಲು ಕಾರಣಾಂತರವನ್ನು ಹೇಳುತ್ತಾರೆ. –

ಕಲ್ಯಾವೇಶಾನ್ನೃಪತಿಃ ಪ್ರತಿಜಜ್ಞೇ ಪೂರ್ವಮೇವ ಧರ್ಮಾತ್ಮಾ ।
ಆಹೂತೋ ದ್ಯೂತಕರಣಾನ್ನಿವರ್ತೇಯಂ ನೈವ ವಾರಿತೋಽಪೀತಿ ॥೩೨೨॥

ಧರ್ಮಾತ್ಮಾ – ಧರ್ಮಾಭಿಮಾನಿಯಾದ ಯಮಧರ್ಮನ ಅವತಾರನಾದ, ನೃಪತಿಃ – ಯುಧಿಷ್ಠಿರನು,

ಕಲ್ಯಾವೇಶಾತ್ – ಕಲಿಯ ಆವೇಶದಿಂದ, (ದ್ಯೂತಕ್ಕಾಗಿ) ಆಹೂತಃ ಚೇತ್ – ಆಮಂತ್ರಿಸಲ್ಪಟ್ಟರೆ, ವಾರಿತಃ ಅಪಿ – ಬೇರೆಯವರಿಂದ ತಡೆಯಲ್ಪಟ್ಟರೂ ಕೂಡ, ದ್ಯೂತಕರಣಾತ್–ದ್ಯೂತದ ಆಟದಿಂದ, ನೈವ ನಿವರ್ತೇಯಂ–ಹಿಂದೆ ಸರಿಯುವದಿಲ್ಲ ಇತಿ—ಎಂದು, ಪೂರ್ವಮೇವ –ಶಸ್ತ್ರಾಭ್ಯಾಸ ಸಮಯದಲ್ಲಿಯೇ, ಪ್ರತಿಜಜ್ಞೇ—ಪ್ರತಿಜ್ಞೆಮಾಡಿದ್ದನು ॥೩೨೨॥

ತೇನಾಯಾತ್ಸ್ವಸುಹೃದ್ಭಿರ್ನಿವಾರ್ಯಮಾಣೋಽಪಿ ನಾಗಪುರಮಾಶು ।
ನ ಹಿ ಧರ್ಮೋ ದ್ಯೂತಕೃತೋ ವಿಶೇಷತಃ ಕ್ಷತ್ರಿಯಸ್ಯ ಲೋಕಗುರೋಃ ॥೩೨೩॥

ತೇನ –ಆ ರೀತಿ ಪ್ರತಿಜ್ಞೆ ಇದ್ದದ್ದರಿಂದ, ಸ್ವ ಸುಹೃದ್ಭಿ: –ತನ್ನ ಹಿತೈಷಿಗಳಿಂದ, ನಿವಾರ್ಯಮಾಣ: ಅಪಿ – ನಿಷೇಧಿಸಲ್ಪಟ್ಟರೂ ಕೂಡ, (ಧರ್ಮರಾಜನು], ಆಶು—ಕೂಡಲೇ, ನಾಗಪುರಂ—ಹಸ್ತಿನಾವತಿಗೆ, ಆಯಾತ್–ಬಂದನು ಎಲ್ಲರೂ ನಿಷೇಧಿಸಲು ಕಾರಣವನ್ನು ಹೇಳುವರು. – ಹಿ—ಯಾವ ಕಾರಣದಿಂದ, ಕ್ಷತ್ರಿಯಸ್ಯ—ಕ್ಷತ್ರಿಯನಿಗೆ, ವಿಶೇಷತ: – ಲೋಕಗುರೋ: —ವಿಶೇಷವಾಗಿ ತತ್ರಾಪಿ ಲೋಕಕ್ಕೆ ಪ್ರವರ್ತಕನಾದವನಿಗೆ, ದ್ಯೂತ ಕೃತಃ – ದ್ಯೂತದಿಂದ ಆಗುವದು, ಧರ್ಮ: ನ--ಧರ್ಮವಲ್ಲವೋ (ಅಧರ್ಮವೇ ಆಗುವದೋ) ಆದ್ದರಿಂದ ನಿಷೇಧಿಸಿದರು ॥೩೨೩॥

ವೈಚಿತ್ರವೀರ್ಯತನಯೇನ ತು ಪಾಂಡುಪುತ್ರಾಸ್ತಂಭಾವಿತಾಸ್ತಮುಪ
ಚ ನ್ಯವಸನ್ನಿಶಾಂ ತಾಮ್ ।
ಪ್ರಾತಸ್ತು ಭೀಷ್ಮಮುಖರಾಸ್ತಕಲಾಶ್ಚ ಭೂಪಾ ಆಸೇದುರಾಶು ಚ ಸಭಾಂ
ಸಹ ಪಾಂಡುಪುತ್ರೈಃ ॥೩೨೪॥

ಪಾಂಡುಪುತ್ರಾಃ – ಪಾಂಡವರು, ವೈಚಿತ್ರವೀರ್ಯತನಯೇನ – ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನಿಂದ, ಸಂಭಾವಿತಾ: ಸಂತ: – ಮಾರ್ಯದಿಸಲ್ಪಟ್ಟವರಾಗಿ, ತಾಂ ನಿಶಾಂ– ಆ ದಿನದ ರಾತ್ರಿಯಲ್ಲಿ, ತಂ ಉಪ— ಆ ಧೃತರಾಷ್ಟ್ರನ ಹತ್ತಿರವೇ, ನ್ಯವಸನ್ – ವಾಸಿಸಿದರು, ಪ್ರಾತ: ತು–ಬೆಳಿಗ್ಗೆ, ಭೀಷ್ಮಮುಖರಾಃ ಸಕಲಾಃ ಚ ಭೂಪಾಃ—ಭೀಷ್ಮಾಚಾರ್ಯರೇ ಮೊದಲಾದ ಎಲ್ಲ ರಾಜರು, ಪಾಂಡುಪುತ್ರೈ: ಸಹ—ಪಾಂಡವರಿಂದ ಕೂಡಿಕೊಂಡು, ಆಶು—ಕೂಡಲೇ, ಸಭಾಂ – ದ್ಯೂತಕ್ಕಾಗಿ ಏರ್ಪಡಿಸಿದ ಸಭೆಗೆ, ಆಸೇದುಃ–ಬಂದು ಸೇರಿದರು. ॥೩೨೪॥

ಭಾವಾನುವಾದ ೨೬೭ – ೩೨೪

"ಮಾವ, ನಾನು ನೀರಿನಲ್ಲಿ ಬಿದ್ದಾಗ ಆಕೃಷ್ಣನಎದುರಿನಲ್ಲಿ ಆ ಕೃಷ್ಣಾ(ದ್ರೌಪದಿ) ಭೀಮರಿಬ್ಬರೂ ಏನು ನಕ್ಕರಲ್ಲವೋ ಅವರಿಬ್ಬರಿಗೆ ದುಃಖವನ್ನುಂಟು ಮಾಡದೇ ನಾನು ಬದುಕುವದಿಲ್ಲ. ನನಗೆ ಶಕ್ತಿ ಇದ್ದದ್ದಾಗಿದ್ದರೆ ನಗುವಾಗಲೇ ಆ ಭೀಮನನ್ನು ಕೊಲ್ಲುತ್ತಿದ್ದೆ: ಕೃಷ್ಣನ ಅಗ್ರಪೂಜೆಯನ್ನು ನಿಲ್ಲಿಸುತ್ತಿದ್ದೆ. ಆ ಪಾಂಡವರಲ್ಲಿ ಎಷ್ಟು ಸಂಪತ್ತಿದೆ. ಎಲ್ಲ ರಾಜರೂ ಕೂಡ ವ್ಯಾಪಾರಿಗಳು ಕರವನ್ನು ಕೊಡುವಂತೆ ಕರವನ್ನು ಕೊಟ್ಟಿದ್ದಾರೆ. ಅಂಥ ಅಪಾರ ಸಂಪತ್ತನ್ನು ಅವರ ಗೌರವವನ್ನುನೋಡಿ ನನಗೆ ಬದುಕೇ ಬೇಡವಾಗಿದೆ. ಎಂದು ದುರ್ಯೋಧನನು ಮಾತ್ಸರ್ಯದಿಂದ ಶಕುನಿಗೆ ಹೇಳಿದಾಗ, ಶಕುನಿಯು ದುರ್ಯೋಧನನಿಗೆ ಪಾಂಡವರ ಬಗೆಗಿನ ದ್ವೇಷವನ್ನು ದೃಢವಾಗಿಸುವದಕ್ಕೋಸ್ಕರ "ರಾಜಾ ದುರ್ಯೋಧನ, ಬಲಿಷ್ಠರಾದ ಸಹೋದರರ ಜೊತೆಗೆ ದ್ವೇಷ ಮಾಡಿ ಏನು ಪ್ರಯೋಜನ? ಅವರು ಪರಾಕ್ರಮಿಗಳೂ ಎಲ್ಲ ಗುಣಗಳಿಂದ ಶ್ರೇಷ್ಠರೂ ಇದ್ದಾರೆ ಆದ್ದರಿಂದ ಅವರನ್ನು ಅನುಸರಿಸಿಕೊಂಡು ಇರು" ಎಂದು ಹೇಳಿದನು ಅದನ್ನು ಕೇಳಿದ ದುರ್ಯೋಧನನು ಅತಿ ಕೋಪದಿಂದ ಕಿಡಿಕಿಡಿಯಾಗಿ ಅವರ ಐಶ್ವರ್ಯವೆಲ್ಲವೂ ನನ್ನ ಬಳಿಗೆ ಬರುವಂತಾಗದಿದ್ದರೆ, ನಾನು ಬದುಕುವದೇ ಇಲ್ಲ. ಇದು

ಸತ್ಯವಾದ ವಿಷಯ. ಬಾಹುಸಾಮರ್ಥ್ಯದಿಂದ ಅವರ ಜೊತೆಗೆ ಯುದ್ಧ ಮಾಡಿ ಗೆದ್ದು ಆ ಸಂಪತ್ತನ್ನು ಸಂಪಾದಿಸಲಂತೂ ಶಕ್ಯವಿಲ್ಲ; ಏಕೆಂದರೆ ಇಂದ್ರನೂ ಕೂಡ ಅವರನ್ನು ಗೆಲ್ಲಲಾರನು. ಹಾಗಿರುವಾಗ ಮನುಷ್ಯರನ್ನು ಗೆಲ್ಲಲು ಹೇಗೆ ಸಾಧ್ಯ ? ಆದ್ದರಿಂದ ಯಾವುದಾದರೂ (ಕಪಟ) ಉಪಾಯದಿಂದ ಆ ಸಂಪತ್ತನ್ನು ನಾವು ಸಂಪಾದಿಸಬೇಕು." ಎಂದು ಹೇಳಿದನು. ಆಗ ನೀಚನಾದ ಶಕುನಿಯು ನೀಚತಮನಾದ ಆ ದುರ್ಯೋಧನನಿಗೆ "ನೀನೇನೂ ವಿಚಾರ ಮಾಡಬೇಡಾ; ಶ್ರಮವಿಲ್ಲದೆಯೇ ಅವರ ಎಲ್ಲ ಸಂಪತ್ತನ್ನು ದ್ಯೂತದ ಕ್ರೀಡೆಯಲ್ಲಿ ಗೆದ್ದು ಕೊಡುವೆನು." ಎಂದು ಹೇಳಿದನು. ಆಗ ದುರ್ಯೋಧನನು ಅತೀವ ಸಂತೋಷಗೊಂಡು ಮಾವನಿಂದ ಕೂಡಿಕೊಂಡು ಧೃತರಾಷ್ಟ್ರನ ಬಳಿಗೆ ಹೋದನು. ಶಕುನಿಯು 'ಧೃತರಾಷ್ಟ್ರನೆಂಬುವ ದುರ್ಯೋಧನನು ತುಂಬಾ ಸೊರಗಿದ್ದಾನೆ; ಅಶಕ್ತನಾಗಿದ್ದಾನೆ, ಮೊದಲಿನ ಹಾಗೆ ಬಣ್ಣವೂ ಇಲ್ಲ, ಒಂದು ತರಹ ಹಳದೀ ಬಣ್ಣದವನಾಗಿದ್ದಾನೆ.' ಎಂದು ಹೇಳಿದನು. ಅದನ್ನು ಕೇಳಿದ ಧೃತರಾಷ್ಟ್ರನು ದುಃಖದಿಂದ ಕಾರಣ ಕೇಳಿದನು. ಆಗ ಇಬ್ಬರು ತಾವು ದಾರಿಯಲ್ಲಿ ವಿಚಾರಿಸಿದ ದುರ್ವಿಚಾರವನ್ನು (ದ್ಯೂತ ಆಡುವದನ್ನು ಹೇಳಿದರು.) ಆದರೆ ಅದನ್ನು ಕೇಳಿದ ಧೃತರಾಷ್ಟ್ರನು ಕೂಡಲೇ 'ಇದು ಸರಿಯಲ್ಲ. ತಮ್ಮ ಸಾಮರ್ಥ್ಯ ಪರಾಕ್ರಮಗಳಿಂದ ಇಂಥ ಐಶ್ವರ್ಯವನ್ನು ಸಂಪಾದಿಸಿದ ಆ ಪಾಂಡವರ ಬಗ್ಗೆ ಹೀಗೆ ಮಾತ್ಸರ್ಯ ಪಡುವದು; ದ್ಯೂತ ದಂಥ ದುಷ್ಟ ಕಾರ್ಯದಿಂದ ಅವರ ಸಂಪತ್ತನ್ನು ಕಸಿಯಲು ಇಚ್ಛಿಸುವದು ಧರ್ಮವಿರುದ್ಧವಾದದ್ದು; ನಿಮ್ಮ ನಾಶಕ್ಕೇ ಕಾರಣವಾಗುವದು. ನೀನೂ ದಿಕ್ಕುಗಳ ಮೇಲೆ ವಿಜಯ ಸಂಪಾದಿಸಿ ಅವರು ಮಾಡಿದಂತೆ ಶ್ರೇಷ್ಠ ಯಜ್ಞಗಳನ್ನು ಮಾಡು, ಎಂದು ಹೇಳಿದನು, ಅದಕ್ಕೆ ಕಲಿ ಸ್ವರೂಪಿ ದುರ್ಯೋಧನನು-- 'ಒಂದು ವೇಳೆ ನಾವು ವಿಚಾರಿಸಿದ ಉಪಾಯವು ನಿನ್ನ ಮನಸ್ಸಿಗೆ ಬಾರದಿದ್ದರೆ,' ನಾನು ಇಂದೇ ಈ ದೇಹವನ್ನು ತ್ಯಜಿಸುವೆನು. ನೀನು ಪಾಂಡವರಿಂದ ಕೂಡಿ ಸುಖವಾಗಿರು. ನಾನು ಬದುಕಿರಬೇಕೆಂದರೆ ಆ ಪತ್ನಿ ಸಮೇತ ಪಾಂಡವರನ್ನು ಕರೆಯಿಸು. ಅವರನ್ನು ಕರೆಯಿಸುವದರಲ್ಲಿ ಅನ್ಯಾಯವೇನೂ ಇಲ್ಲ. ಏಕೆಂದರೆ ಕ್ಷತ್ರಿಯರು ಶಸ್ತ್ರದಿಂದ ಜೀವಿಸುವವರು. ಶಸ್ತ್ರವೆಂದರೆ ಶತ್ರುವನ್ನು ಹಾಳುಮಾಡುವದಕ್ಕೆ ಸಾಧನ ಎಂದು ಅರ್ಥ. ಆ ಅರ್ಥದಲ್ಲಿ ಲೆತ್ತವೂ ಶಸ್ತ್ರವೇ. ಆದ್ದರಿಂದ ಅಂಥ ಶಸ್ತ್ರದಿಂದ ಆಡುವದು ಕ್ಷತ್ರಿಯರಾದ ನಮಗೆ ಧರ್ಮವೇ. ಅವರನ್ನು ಕರೆಯಿಸಿ ಅನುಕೂಲ ಮಾಡಿಕೊಟ್ಟರೆ ನಿನಗೂ ಪುಣ್ಯ ಫಲವಿದೆ ಎಂದನು. ಆ ಫಲ ನನಗೆ ಬೇಡ ನಿನಗೆ ಇರಲಿ ಎಂದು ಧೃತರಾಷ್ಟ್ರನು ಹೇಳಿದನು. ಈ ರೀತಿ ವಿರೋಧವನ್ನೇನೋ ಮಾಡಿದನು. ನಿಜ. ಆದರೆ ಅವನೊಳಗೆ ಕಲಿಯು ಆವೇಶವಿದ್ದುದರಿಂದ ಪುತ್ರವ್ಯಾಮೋಹದಿಂದಲೂ ಪಾಂಡವರನ್ನು ಕರೆಯಲು ವಿದುರರನ್ನು ಕಳಿಸಿದನು. ದುರ್ಯೋಧನನಾಗಿ ಹುಟ್ಟಲು ಕಲಿಯು ಎಂದು ಧೃತರಾಷ್ಟ್ರನನ್ನು ಪ್ರವೇಶಿಸಿದನೋ ಅಂದಿನಿಂದ ಒಂದು ಅರ್ಥದಿಂದ ಧೃತರಾಷ್ಟ್ರನಲ್ಲಿ ಇದ್ದೇ ಇದ್ದನು. ಮಹಾಭಾರತ ಯುದ್ಧದ ನಂತರ ಧೃತರಾಷ್ಟ್ರನು ಮನೆಯನ್ನು ಬಿಟ್ಟು ವನಕ್ಕೆ ಹೊರಡುವ ತನಕ ಈ ಕಲಿಯು ಅರ್ಥದಿಂದ ಕೂಡಿದವನಾಗಿಯೇ ಇದ್ದನು. ಹೀಗಾಗಿ ಅವನ ಮನಸ್ಸು ಅಲ್ಲಿಯವರೆಗೆ ಪಾಪಯುಕ್ತವೇ ಆಗಿತ್ತು.

ವಿಶೇಷಾಂಶ :— ಅಧರ್ಮಮಾಡುವದು ತಪ್ಪು; ಸಜ್ಜನರಾದವರು ತಾವು ಮಾಡುವ ತಪ್ಪನ್ನು ಒಪ್ಪುವ ಸೌಜನ್ಯವನ್ನಾದರೂ ಹೊಂದಿರುವರು. ದುಷ್ಟರು ತಾವು ಮಾಡುವ ಅಧರ್ಮವನ್ನು ಧರ್ಮವನ್ನಾಗಿಯೇ ಹಟದಿಂದ ಸಾಧಿಸುತ್ತಾರೆ. ಅವರು ಮಾಡಿದ್ದು ಅಧರ್ಮ ಎಂಬುದಕ್ಕೆ ಶಾಸ್ತ್ರದ ಆಧಾರ ಹೇಳಿದರೆ ಆ ಶಾಸ್ತ್ರಕ್ಕೂ ತಮಗೆ ಅನುಕೂಲ ವಾಗುವಂತೆ ಅಪವ್ಯಾಖ್ಯಾನಮಾಡುತ್ತಾರೆ ಎಂಬುದಕ್ಕೆ ದುರ್ಯೋಧನನು ದ್ಯೂತವಾಟವು ಧರ್ಮವೆಂದು ಹೇಳಿಕೊಂಡದ್ದು ಶಸ್ತ್ರ ಶಬ್ದಕ್ಕೆ ಅರ್ಥಮಾಡಿದ್ದು, ಲೆತ್ತವನ್ನೂ ಶಸ್ತ್ರವೆಂದು ಹೇಳುವದು ನಿದರ್ಶನ.

ಧೃತರಾಷ್ಟ್ರನು ವಿದುರರಿಗೆ ಹೇಳಿದಾಗ ವಿದುರರು 'ನಿನ್ನ ಈ ಕಾರ್ಯವು ನಿನಗೆ ಮಹಾಪಾಪ ಸಾಧನವೂ, ಕುಲ ನಾಶಕವೂ ಆಗುವದು. ನೀನು ಅಪಕೀರ್ತಿಯನ್ನು ಹೊಂದುವಿ. ಆದ್ದರಿಂದ ಇಂಥ ಕಾರ್ಯಕ್ಕೆ ಕೈಹಾಕಬೇಡಾ ಎಂದು ಹೇಳಿದರು. ಅದಕ್ಕೆ ಧೃತರಾಷ್ಟ್ರನು ಕಡೆಗೆ ಮಾತ್ರ ಒಂದು ಸೇರಿ ಆಟ ಆಡುವದನ್ನು ನೋಡಬೇಕೆಂಬುದಷ್ಟೇ ನನ್ನ ಇಚ್ಛೆ ಅವರು ಆಡಲಿ. ಜಗಳ ಪ್ರಸಂಗ ಬಂದರೆ ನಾನೇ ತಡೆಯುವೆನು. ನೀವೂ ಇರುವಿರಿ. ಎಲ್ಲರೂ ತಡೆಯೋಣ. ಆದ್ದರಿಂದ ಬೇಗ ಕರೆದುಕೊಂಡುಬಾ ಎಂದು ಬಲಾತ್ಕಾರ ಮಾಡಿದಾಗ ವಿದುರರು ಪಾಂಡವರ ಸಮೀಪಕ್ಕೆ ಬಂದರು ಇವರು ಬರುವಾಗ ಶ್ರೀಕೃಷ್ಣಪರಮಾತ್ಮನು ಅಲ್ಲಿಂದ ಹೋಗಿಯಾಗಿತ್ತು. ಏಕೆಂದರೆ ದುರ್ಯೋಧನನು ಅವಮಾನಿತನಾಗಿ ಹೋದನಂತರ ಪಾಂಡವರ

ಸಭೆಗೆ ದೇವರ್ಷಿನಾರದರು ಬಂದರು. ಅವರನ್ನು ಧರ್ಮರಾಜನು ಲೋಕದ ವೃತ್ತಾಂತದ ಬಗ್ಗೆ ಯಾರಾದರೂ ಯುದ್ಧ ಜಯ ಇತ್ಯಾದಿಗಳ ಬಗ್ಗೆ ಪ್ರವೃತ್ತಿಯುಳ್ಳವರಿದ್ದಾರೋ ಎಂದು ಕೇಳಿದ್ದಕ್ಕೆ ನಾರದರು ಸಾಲ್ವನು ಶ್ರೀರುಕ್ಮಿಣೀ ದೇವಿಯರಿ ಸ್ವಯಂವರದಲ್ಲಿ ಶ್ರೀಕೃಷ್ಣ ಪರಮಾತ್ಮನಿಂದ ಸೋತು ಹೋಗಿ ರುದ್ರದೇವರ ಉದ್ದೇಶವಾಗಿ ಬಹುವರ್ಷಗಳವರೆಗೆ ತಪಸ್ಸನ್ನು ಮಾಡಿದನು, ದಿನಕ್ಕೊಮ್ಮೆ ಒಂದು ಮುಷ್ಟಿ ಮಣ್ಣನ್ನು ಮಾತ್ರ ತಿಂದು ತಪಸ್ಸನ್ನುಮಾಡಿ ರುದ್ರದೇವರಿಂದ ಶ್ರೀಕೃಷ್ಣನ ಮೇಲೆ ಜಯಿಸಿಗುವಂತೆ ವರವನ್ನು ಪಡೆದು ಈಗ ದ್ವಾರಕೆಯ ಮೇಲೆ ಏರಿ ಬಂದಿದ್ದಾನೆ. ಜರಾಸಂಧನ ಸಂಹಾರ, ನೀವೆಲ್ಲ ಎಲ್ಲ ರಾಜರ ಮೇಲೆ ಜಯಸಂಪಾದಿಸಿದ್ದು, ರಾಜಸೂಯಯಾಗಮಾಡಿದ್ದು, ಆ ಯಾಗದಲ್ಲಿ ಶಿಶುಪಾಲನವಧ ಆಗಿದ್ದು ಎಲ್ಲವನ್ನುಕೇಳಿ ಯಾದವರ ಮೇಲೆ ಏರಿ ಬಂದಿರುವನು ಎಂದು ಹೇಳಿದರು. ಅದನ್ನು ಕೇಳಿದ ಧರ್ಮರಾಜನು ಗಾಬರಿಯಿಂದ ಶ್ರೀಕೃಷ್ಣನ ಮುಖವನ್ನು ನೋಡಿದನು. ಶ್ರೀಕೃಷ್ಣಪರಮಾತ್ಮನು ಮಾತ್ರ ಯಾವ ಉದ್ವೇಗ, ಗಾಬರಿಗಳಿಲ್ಲದೇ ಮುಗುಳು ನಗೆಯಿಂದ ನಗುತ್ತಲೇ ಇದ್ದನು. ಅವನ ಮುಖ ಚಂದ್ರನ ಹಾಗೆ ಶಾಂತವಾಗಿಯೇ ಆನಂದದಿಂದ ಕೂಡಿದ್ದೇ ಆಗಿತ್ತು. ಏರಿ ಬಂದರೆ ಬರಲಿ, ಅವನೇನು ಮಾಡುವನು? ಎಂದು ಹೇಳಿದನು. ಇದರಿಂದ ಶ್ರೀಕೃಷ್ಣಪರಮಾತ್ಮನ ಆನಂದಪೂರ್ಣತ್ವ ಭಯಾದಿದೋಷರಾಹಿತ್ಯಗಳು ಸ್ಪಷ್ಟವಾಗುವವು. ತನ್ನ ಎದುರು ಎಲ್ಲರೂ ತೃಣಪ್ರಾಯರು ಏನ್ನುವದನ್ನು ರುದ್ರವರದಿಂದ ಕೂಡಿದ ಸಾಲ್ವನನ್ನು ಉದಾಸೀನವಾಡಿದ್ದರಿಂದ ತೋರಿಸಿದನು. ಪ್ರದ್ಯುಮ್ನ ಮೊದಲಾದ ಯಾದವರನ್ನು ಸಾಲ್ವನನ್ನು ಎದುರಿಸುವದಕ್ಕಾಗಿ ಕಳುಹಿದನು. ನಂತರ ಕೆಲದಿನಗಳಲ್ಲಿ ತಾನೂ ಆ ಕಡೆಗೆ ಹೊರಟನು. ಹೀಗೆ ಶ್ರೀಕೃಷ್ಣನು ಹೋದ ಮೇಲೆ ವಿದುರರು ಬಂದರು. ಬಂದು ಧರ್ಮರಾಜನಿಗೆ ಧೃತರಾಷ್ಟ್ರನ ಅಪೇಕ್ಷೆಯನ್ನು ತಿಳಿಸಿ ಅವನ ಆಜ್ಞೆಯಂತೆ ಪ್ರಕಾರ ದ್ಯೂತಕ್ಕೆ ಆವಂತ್ರಿಸಿದರು. ಆಗ ಸಹೋದರರು ದ್ರೌಪದೀದೇವಿ, ಕುಂತೀದೇವಿ ಎಲ್ಲರೂ ನಿಷೇಧಿಸಿದರು. ಅಷ್ಟೇ ಅಲ್ಲ; ಧೃತರಾಷ್ಟ್ರರಾಜನಆಜ್ಞೆಯಿಂದ ಕರೆಯಲು ಬಂದ ವಿದುರರು ತಮ್ಮ ಕರೆಯುವ ಕರ್ತವ್ಯವನ್ನು ರಾಜನದೂತನಾಗಿ ನಿರ್ವಹಿಸಿದರೂ ಕೂಡ ತಮ್ಮ ವೈಯಕ್ತಿಕಕರ್ತವ್ಯವನ್ನು ಮಾತ ವದಕ್ಕಾಗಿ 'ದ್ಯೂತವು ಅಧರ್ಮವು ಅದರಲ್ಲಿಯು, ಲೋಕ ಧರ್ಮ ಪ್ರವರ್ತಕರು ಮಾರ್ಗದರ್ಶಕರು ಆವವರು ಅಂತೂ ದ್ಯೂತವಾಡುವದು ಮಹಾಅಪರಾಧವು. ದ್ಯೂತದಿಂದ ಮಹಾದೋಷ ಗಳಿವೆ ಎಂದು ಹೇಳಿ ದ್ಯೂತಕ್ಕೆ ಬರಬೇಡ' ಎಂದೂ ಹೇಳಿದರು. ಈ ರೀತಿ ದ್ಯೂತವು ಅಧರ್ಮವು ಆಡಬಾರದು ಎಂಬುದು ಒಂದು, ದೊಡ್ಡಪ್ಪ ಕರೆಯುತ್ತಿದ್ದಾನೆ, ಅವನ ಮಾತ್ತುನಡೆಸಬೇಕು ಎಂಬುದು ಇನ್ನೊಂದು. ಹೀಗೆ ಈ ಎರಡರಲ್ಲಿ ಯಾವದು ನಿನಗೆ ಕರ್ತವ್ಯ ಯಾವದು ಅಲ್ಲ ಎನ್ನುವದನ್ನು ಸ್ವತಃ ವಿಚಾರಿಸಿ ಹಾಗೆ ಮಾಡು ಎಂದೂ ಹೇಳಿದರು. ಇಷ್ಟೆಲ್ಲರೂ ಹೇಳಿದರೂ ಕೂಡ ಧರ್ಮರಾಜನು ಹೊರಟೇ ಬಿಟ್ಟನು. ಏಕೆಂದರೆ ಅವನಲ್ಲಿಯೂ ಆಗ ಕಲ್ಯಾವೇಶವಿತ್ತು. ಅಷ್ಟೇ ಅಲ್ಲ ದ್ರೋಣಾಚಾರ್ಯರ ಹತ್ತಿರ ಶಸ್ತ್ರಾಭ್ಯಾಸಮಾಡುವಾಗ ಗುರುಗಳ ಹತ್ತಿರ ಒಂದು ಪ್ರತಿಜ್ಞೆಯನ್ನು ಮಾಡಬೇಕು ಎಂಬ ನಿಯಮದ ಪ್ರಕಾರ ದ್ಯೂತಕ್ಕೆ ಯಾರಾದರೂ ಕರೆದರೆ ಯಾರೇ ನಿಷೇಧಿಸಿದರೂ ಕೂಡ ದ್ಯೂತಕ್ಕೆ ಹೋಗುತ್ತೇನೆ ಎಂಬ ಪ್ರತಿಜ್ಞೆಯನ್ನು ಕಲ್ಯಾವೇಶದಿಂದಲೇ ಮಾಡಿದ್ದನು. ಅದರಿಂದ ಧರ್ಮರಾಜನು ಎಲ್ಲರೂ ನಿಷೇಧಿಸಿದರೂಕೂಡ ತಾಯಿ, ಸಹೋದರರು ಹಾಗೂ ಪತ್ನೀದ್ರೌಪದೀದೇವಿಯರಿಂದ ಸಹಿತನಾಗಿ ಹಸ್ತಿನಾವತಿಗೆ ಹೋದನು. ಅಲ್ಲಿ ಧೃತರಾಷ್ಟ್ರನು ಸ್ವಾಗತಿಸಿದನು. ಆ ದಿನ ರಾತ್ರಿಯನ್ನು ಧೃತರಾಷ್ಟ್ರನೊಡನೆ ಕಳೆದರು ಪ್ರಾತಃಕಾಲದಲ್ಲಿ ಭೀಷ್ಮಾಚಾರ್ಯರೇ ಆದಿಯಾಗಿ ಎಲ್ಲರೂ ಪಾಂಡವರೊಡನೆ ದ್ಯೂತಕ್ಕಾಗಿ ಕ್ಲೃಪ್ತವಾದ ಸಭಾಸ್ಥಾನಕ್ಕೆ ಬಂದು ಸೇರಿದರು.

ವೈಚಿತ್ರವೀರ್ಯನೃಪತಿರ್ವಿದುರಾನ್ವಿತೋಽಸ್ಯ ಗಾಂಧಾರರಾಜಸಹಿತಾಸ್ತನಯಾಸ್ಸಕರ್ಣಾ:।
ಪ್ರಾಪ್ತಾಸ್ಸಭಾತಲಮಥಾಹ್ವಯದತ್ರ ಧರ್ಮರಾಜಂ ಸುತಸ್ಸುಬಲಕಸ್ಯ ಸ ದೇವನಾಯ ॥೩೨೫॥

ವಿದುರಾನ್ವಿತ: – ವಿದುರರಿಂದ ಕೂಡಿದ, ವೈಚಿತ್ರವೀರ್ಯನೃಪತಿ: – ಧೃತರಾಷ್ಟ್ರರಾಜನು, ಗಾಂಧಾರರಾಜ ಸಹಿತ : ಸಕರ್ಣಾ: – ಶಕುನಿಯಿಂದ ಸಹಿತರಾದ, ಕರ್ಣನಿಂದ ಕೂಡಿದ ಅಸ್ಯ ತನಯಾ:—ಈ ಧೃತರಾಷ್ಟ್ರನ ಮಕ್ಕಳು, ಸಭಾತಲಂ ಪ್ರಾಪ್ತಾಃ – ಸಭೆಗೆ ಬಂದರು. ಅಥ – ನಂತರ ಅತ್ರ – ಈ ಸಭೆಯಲ್ಲಿ, ಸುಬಲಕಸ್ಯ ಸುತಃ ಸ: – ಗಾಂಧಾರ ದೇಶದ ಸುಬಲರಾಜನ ಮಗನಾದ ಆ ಶಕುನಿಯು, ದೇವನಾಯ – ದ್ಯೂತಕ್ರೀಡೆಗಾಗಿ, ಅಹ್ವಯತ್ – ಕರೆದನು. ॥೩೨೫॥

ಸರ್ವಾಂಶ್ಚ ತತ್ರ ಕಲಿರಾವಿಶದೇವ ಭೀಮಪೂರ್ವಾನ್ ವಿನೈವ ಚತುರಸ್ಸಪೃಥಾಂ ಚ ಕೃಷ್ಣಾಮ್ ।
ಕ್ಷತ್ತಾರಮೇವ ಚ ತತೋ ನ ಹಿ ಭೀಷ್ಮಮುಖ್ಯೈಸ್ತೇ ವಾರಿತಾಃ ಕುಲವಿನಾಶನಕರ್ಮವೃತ್ತಾಃ ॥೩೨೬॥

ತತ್ರ – ಆ ಸಭೆಯಲ್ಲಿ, ಭೀಮಪೂರ್ವಾನ್ ಚತುರಃ—ಭೀಮಸೇನದೇವರೇ ಮೊದಲಾದ ನಾಲ್ಕು ಸಹೋದರರನ್ನು, ಸಪೃಥಾಂ ಕೃಷ್ಣಾಂ ಚ— ಕುಂತೀದೇವಿಯಿಂದ ಸಹಿತಳಾದ ದ್ರೌಪದಿದೇವಿಯರನ್ನು, ಚ—ಹಾಗೂ, ಕ್ಷತ್ತಾರಂ—ವಿದುರರನ್ನು, ವಿನಾ – ಬಿಟ್ಟು, ಸರ್ವಾನ್ ಚ – ಎಲ್ಲರನ್ನೂ ಕೂಡ, ಹಿ – ಯಾವಕಾರಣದಿಂದ, ಕಲಿಃ—ಕಲಿಯು, ಆವಿಶತ್ ಏವ – ಪ್ರವೇಶಿಸಿಯೇ ಬಿಟ್ಟಿದ್ದನೋ, ತತಃ – ಆದ್ದರಿಂದ, ಕುಲವಿನಾಶನಕರ್ಮವೃತ್ತಾಃ ತೇ – ಕುಲನಾಶಕರದ್ಯೂತ – ಕಾರ್ಯದಲ್ಲಿ ಪ್ರವೃತ್ತರಾದ, ಆ ದುರ್ಯೋಧನಾದಿಗಳು, ಭೀಷ್ಮಮುಖ್ಯೈಃ – ಭೀಷ್ಮಮೊದಲಾದವರಿಂದ, ನೈವ ವಾರಿತಾಃ – ತಡೆಯಲ್ಪಡಲಿಲ್ಲ. ॥೩೨೬॥

ಭೀಮಾದಿಭಿಸ್ಸ ವಿದುರೇಣ ಚ ವಾರ್ಯಮಾಣೋ ದ್ಯೂತೇ ನಿಧಾಯ
ಪಣಮಪ್ಯಖಿಲಂ ಸ್ವವಿತ್ತಮ್ ।
ಗಾಂಧಾರಕೇಣ ವಿದಿತಾಕ್ಷೃಹೃದಾ ಜಿತೋ ದ್ರಾಕ್ಪಾಂಡೋಸ್ಸುತೋಽಥ
ನಕುಲಂ ನ್ಯದಧಾತ್ಪಣಾಯ ॥೩೨೭॥

ಭೀಮಾದಿಭಿಃ ವಿದುರೇಣ ಚ – ಭೀಮಸೇನ ಮೊದಲಾದ ಸಹೋದರರಿಂದ, ವಿದುರರಿಂದಲೂ ಕೂಡ, ವಾರ್ಯಮಾಣಃ – ನಿಷೇಧಿಸಲ್ಪಟ್ಟ, ಸಃ ಪಾಂಡೋಃ ಸುತಃ – ಆ ಪಾಂಡುರಾಜನ ಪುತ್ರನಾದ ಧರ್ಮರಾಜನು, ಅಖಿಲಂ ಸ್ವವಿತ್ತಂ – ತನ್ನ ಎಲ್ಲ ಸಂಪತ್ತನ್ನೂ, ಪಣಂ ನಿಧಾಯ – ಪಣವನ್ನಾಗಿಇಟ್ಟು, ವಿದಿತಾಕ್ಷಹೃದಾ – ಲೆತ್ತದ ಗುಟ್ಟನ್ನು ತಿಳಿದ ಗಾಂಧಾರಕೇಣ – ಶಕುನಿಯಿಂದ, ದ್ರಾಕ್ – ಶೀಘ್ರವಾಗಿ, ಜಿತಃ ಸನ್—ಗೆಲ್ಲಲ್ಪಟ್ಟವನಾಗಿ (ಸೋತವನಾಗಿ), ಪಣಾಯ—ಪಣಕ್ಕೆ, ನಕುಲಂ ನ್ಯದಧಾತ್—ನಕುಲನನ್ನು ಇಟ್ಟನು. ॥೩೨೭॥

ತಸ್ಮಿನ್ ಜಿತೇಽಥ ಸಹದೇವಮಥಾರ್ಜುನಂ ಚ ಭೀಮಂ ಚ
ಸೋಮಕಸುತಾಂ ಸ್ವಮಪಿ ಕ್ರಮೇಣ ।
ರಾಜಾ ನಿಧಾಯವಿಜಿತೋಽಥ ಸುಯೋಧನಃ ಸ್ವಂ ಸೂತಂ ದಿದೇಶ
ಪೃಷತಾತ್ಮಜ ಪುತ್ರಿಕಾಯಾಃ ॥೩೨೮॥

ತಸ್ಮಿನ್—ನಕುಲನು, ಜಿತೇ ಸತಿ – ಗೆಲ್ಲಲ್ಪಡುತ್ತಿರಲು, ಅಥ ನಂತರ, ರಾಜಾ – ಧರ್ಮರಾಜನು, ಸಹದೇವಂ—ಸಹದೇವನನ್ನು, ಅಥ – ಅದರ ನಂತರ, ಅರ್ಜುನಂ—ಅರ್ಜುನನನ್ನು, ಚ – ಹಾಗೂ, ಭೀಮಂ-ಭೀಮಭೀಮಸೇನದೇವರನ್ನು, ಸೋಮಕಸುತಾಂ – ದ್ರೌಪದೀದೇವಿಯನ್ನು, ಸ್ವಂ ಅಪಿ – ತನ್ನನ್ನೂ ಕೂಡ ಕ್ರಮೇಣ, ನಿಧಾಯ – ಕ್ರಮವಾಗಿ ಇಟ್ಟು, ವಿಜಿತಃ—ಗೆಲ್ಲಲ್ಪಟ್ಟನು, ಅಥ – ಧರ್ಮರಾಜನು ಸೋತನಂತರ, ಸುಯೋಧನಃ – ದುರ್ಯೋಧನನು, ಪೃಷತಾತ್ಮಜಪುತ್ರಿಕಾಯಾಃ – ದ್ರೌಪದೀದೇವಿಯ (ಆನಯನಕ್ಕಾಗಿ)ನ್ನು ಕರೆತರುವದಕ್ಕಾಗಿ, ಸ್ವಂ ಸೂತಂ—ತನ್ನ ಸಾರಥಿಯನ್ನು, ದಿದೇಶ – ಕಳಿಸಿದನು. ॥೩೨೮॥

ಸೂತೋ ಗತ್ವಾ ತದಂತಂ ಸಮಕಥಯದಿಮಾಂ ದ್ಯೂತಮಧ್ಯೇ ಜಿತಾಽಸಿ
ಕ್ಷಿಪ್ರಂಚಾಯಾಹಿರಾಜ್ಞಾಂ ಸಮಿತಿಮುರುತರಾಮಿತ್ಯಥೋಸಾಽಪ್ಯವಾದೀತ್ ।
ನಾಹಂ ಯಾಸ್ಯೇ ಗುರೂಣಾಂ ಸಮಿತಿಮಿತಿ ಯಯೌ ಸೋಽಪ್ಯಮುಂ ಭೀಮ
ಭೀತಂಜ್ಞಾತ್ವಾ ದುಃಶಾಸನಂ ಸೋಽಪ್ಯದಿಶದಥ ನೃಪೋ ಧಾರ್ತರಾಷ್ಟ್ರೋಽ-
ನುಜಂಸ್ವಮ್ ॥೩೨೯॥

ಸೂತಃ – ಸೂತನು, ತದಂತಂ – ದ್ರೌಪದಿದೇವಿಯ ಹತ್ತಿರ, ಗತ್ವಾ—ಹೋಗಿ, ಇಮಾಂ – ಈ ದ್ರೌಪದಿ ದೇವಿಯನ್ನು, ಕೃತಂ, ದ್ಯೂತಮಧ್ಯೇ ಜಿತಾ ಅಸಿ – ದ್ಯೂತಕ್ರೀಡೆಯ ಮಧ್ಯದಲ್ಲಿ ಗೆಲ್ಲಲ್ಪಟ್ಟವಳಾಗಿರುವಿ, ಉರುತರಾಂ– ರಾಜ್ಞಾಂಸಭಾಂತಿಂ – ದೊಡ್ಡದಾದ ರಾಜಸಭೆಗೆ, ಕ್ಷಿಪ್ರಂ ಚ – ಕೂಡಲೇ, ಆಯಾಹಿ—ಬಾ, ಇತಿ – ಎಂದ, ಸಮಂಕಥಯತ್– ಹೇಳಿದನು. ಸಾ ಅಪಿ—ಆ ದ್ರೌಪದೀದೇವಿಯೂ ಕೂಡ, ಅಹಂ – ನಾನು, ಗುರೂಣಾಂ ಸಭಾಂತಿಂ—ಹಿರಿಯರ ಸಭೆಗೆ ನ ಯಾಸ್ಯೇ – ಹೋಗಲಾರೆನು, ಇತಿ—ಎಂದು, ಅಬ್ರವೀತ್ – ಹೇಳಿದಳು, ಸಃ ಅಪಿ – ಆ ಸೂತನೂ ಕೂಡ, ಯಯೌ– ಹೋದನು, ನೃಪಃ ಧೃತರಾಷ್ಟ್ರಃ ಅಪಿ – ಆ ದುರ್ಯೋಧನನು ಕೂಡ, ಅವದಂ – ಸಾರಥಿಯನ್ನು, ಭೀಮಂ ಭೀತಂ ಜ್ಞಾತ್ವಾ – ಭೀಮಸೇನನಿಂದ ಹೆದರಿದವನನ್ನಾಗಿ ತಿಳಿದು, ಅಥ – ನಂತರ, ಸ್ವಂ ಅನುಜಂ ದುಃಶಾಸನಂ – ತನ್ನ ತಮ್ಮ ದುಃಶಾಸನನನ್ನು ಆದಿಶತ್—ಕಳಿಸಿದನು. ॥೩೯॥

ಸ ಪಾಪಪುರುಷೋತ್ತಮಃ ಪ್ರಗೃಹ್ಯ ಕೇಶ ಪಕ್ಷಕೇ ।
ಪುರಃ ಸ್ವಮಾತುರಾನಯತ್ ಸಭಾಮಯುಗ್ಮವಾಸಸೀಮ್ ॥೩೦॥

ಪಾಪಪುರುಷೋತ್ತಮಃ ಸಃ—ಪಾಪಗಳಲ್ಲಿ ಶ್ರೇಷ್ಠನಾದ, ಆ ದುಃಶಾಸನನು, ತಸ್ಯಾಃ – ಆ ದ್ರೌಪದೀದೇವಿಯ ಕೇಶಪಕ್ಷಕೇ – ತಲೆಗೂದಲಿನಲ್ಲಿ, ಪ್ರಗೃಹ್ಯ – ಹಿಡಿದು, ಸ್ವ ಮಾತಃ: ಪುರಃ—ತನ್ನ ತಾಯಿ ಗಾಂಧಾರಿಯ ಎದುರಿನಲ್ಲಿ, ಅಯುಗ್ಮವಾಸಸೀಂ – ಜೋಡಿವಸ್ತ್ರಗಳಲ್ಲದಿರುವ (ಉತ್ತರೀಯವಸ್ತ್ರವಿಲ್ಲದಿರುವ) ಒಬ್ಬ ಹೆಣ್ಣುಮಂಗಳನ್ನು, (ದ್ರೌಪದಿಯನ್ನು) ಸಭಾಂ ಆನಯತ್ – ಸಭೆಗೆ ಎಳೆದು ತಂದನು. ॥೩೦॥

ಸಮಾಹೃತಾ ರಜಸ್ವಲಾ ಜಗಾದ ಭೀಷ್ಮಪೂರ್ವಕಾನ್ ।
ಅಧರ್ಮ ಏಷ ವಾರ್ಯತೇ ನ ಧರ್ಮಿಭಿರ್ಭವದ್ವಿಧೈಃ ॥೩೧॥

ಸಮಾಹೃತಾ ರಜಸ್ವಲಾ—ಎಳೆದು ತರಲ್ಪಟ್ಟ, ರಜಸ್ವಲೆಯಾದ, ಆ ದ್ರೌಪದೀದೇವಿಯಂ, ಭೀಷ್ಮಪೂರ್ವಕಾನ್ – ಭೀಷ್ಮರೇ ಮೊದಲಾದವರನ್ನು ಕುರಿತು, ಭವದ್ವಿಧೈಃ ಧರ್ಮಿಭಿಃ – ನಿಮ್ಮಂಥ ಧಾರ್ಮಿಕರಿಂದಲೂ ಕೂಡ, ಏಷಃ ಅಧರ್ಮಃ – ಈ ಅಧರ್ಮವು, (ಕಥಂ—ಹೇಗೆ) ನವಾರ್ಯತೇ—ತಡೆಯಲ್ಪಡುವದಿಲ್ಲ ? ॥೩೧॥

ಕಥಂಛಲಾತ್ಮಕೇ ದ್ಯೂತೇ ಜಿತೇ ಧರ್ಮಜಯೋ ಭವೇತ್ ।
ನ ಹಿ ದ್ಯೂತಂ ಧರ್ಮಮಾಹುರ್ವಿಶೇಷೇಣ ತು ಭೂಭುಜಾಮ್ ॥೩೨॥

ಛಲಾತ್ಮಕೇ – ದ್ಯೂತೇ – ಕಪಟದಿಂದ ಕೂಡಿದ ದ್ಯೂತದಲ್ಲಿ, ಜಿತೇ – ಅನ್ಯಾಯದಿಂದ, (ಕಪಟದಿಂದ) ಗೆಲ್ಲಲ್ಪಟ್ಟರೆ, ಧರ್ಮಜಯಃ ಕಥಂ ಭವೇತ್—ಧರ್ಮದಿಂದ ಜಯವು (ನ್ಯಾಯವಾಗಿಗೆದ್ದದ್ದು) ಹೇಗೆ ಆದೀತು, ದ್ಯೂತಂತು – ದ್ಯೂತಕ್ರೀಡೆಯನ್ನು, ವಿಶೇಷೇಣ – ವಿಶೇಷವಾಗಿ, ಭೂಭುಜಾಂ – ರಾಜರಿಗೆ, ಧರ್ಮಂ—ಧರ್ಮ ಧರ್ಮವನ್ನಾಗಿ, ನ ಹಿ ಆಹುಃ – (ಜ್ಞಾನಿಗಳು) ಹೇಳುವದಿಲ್ಲ. ದ್ಯೂತವೇ ಅಧರ್ಮ. – ಅದರಲ್ಲೀಯೂ ಕಪಟದ್ಯೂತವು ಇನ್ನೂ ಅಧರ್ಮವಾಯಿತು, ಶಕುನಿಯ ಇಚ್ಛೆಯ ಪ್ರಕಾರ ಬೀಳುವಂತೆ ಅಸ್ಥಿಗಳಿಂದ ಮಾಡಿದ ಲೆತ್ತಗಳಿಂದ ಕೂಡಿದ ದ್ಯೂತವಾದ್ದರಿಂದಲೂ ಕಪಟದ್ಯೂತ ಎಂದು ಅಭಿಪ್ರಾಯ ॥೩೨॥

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥೩೩॥

ಇಹ – ಈ ಸಭೆಯಲ್ಲಿ, ಯೇ – ಯಾರು, ಧರ್ಮಂ ನ ವದಂತಿ—ಧರ್ಮದ ಬಗ್ಗೆ ಹೇಳುವದಿಲ್ಲವೋ, ತೇ – ಅವರು, ವೃದ್ಧಾಃಇತಿ—ವೃದ್ಧರು ಎಂದು, ನ ಈರಿತಾಃ— ಕರೆಯಲ್ಪಡುವದಿಲ್ಲ, ಮನೀಷಿಣಃ – ಜ್ಞಾನಿಗಳು, ಅವೃದ್ಧಮಂಡಿತಾಂ — ವೃದ್ಧರಲ್ಲದವರಿಂದ ಕೂಡಿದ ಸಭೆಯನ್ನು, ಸಭಾ ಇತಿ ನ ಆಹುಃ—ಸಭೆಯೆಂದು ಕರೆಯುವದಿಲ್ಲ. ॥೩೩೩॥

ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ।
ಸದೃಶಾನಧರ್ಮಿಣೀಮಹಮುಭರ್ಯಾರ್ಯಾಂ ಯಸ್ಮಾದ್ವಿಪಶ್ಚಿತಃ ॥೩೩೪॥

ಸ್ವಪತೌ—ನನ್ನ ಪತಿಯು, ಅಜಿತೇ ಸ್ಥಿತೇ ಸತಿ – ಸೋಲದಿದ್ದವನು ಆಗಿರುವಾಗ, ಅಹಂ – ನಾನು, ದ್ಯೂತೇ – ದ್ಯೂತದಲ್ಲಿ, ಕಥಂ – ಜಿತಾ—ಗೆಲ್ಲಲ್ಪಟ್ಟವಳು ಹೇಗೆ ಆಗುವೆನು. ಯಸ್ಮಾತ್ – ಏಕೆಂದರೆ, ವಿಪಶ್ಚಿತಃ— ಜ್ಞಾನಿಗಳು, ಭಾರ್ಯಾಂ – ಹೆಂಡತಿಯನ್ನು, ಸದೃಶಾನಧರ್ಮಿಣೀಂ — ಪತಿಯಂಧರ್ಮ ಸದೃಶ ಧರ್ಮವುಳ್ಳವಳನ್ನಾಗಿ, ಆಹುಃ—ಹೇಳುವರು. ॥೩೩೪॥

ಸದೈವ ಕರ್ಮ ಕರ್ತವ್ಯಂ ಪತೌ ದಾಸೇಽಹಿ ಭಾರ್ಯಯಾ।
ದಾಸೀತ್ವಂ ನ ಪೃಥಙ್ ಮೇ ಸ್ಯಾತ್ ಜಿತೇಽಪಿ ಹಿ ಪತೌ ತತಃ ॥೩೩೫॥

ಹಿ – ಯಾವ ಕಾರಣದಿಂದ, ಪತೌ—ಪತಿಯು, ದಾಸೇ ಸತಿ – ದಾಸನಾದರೆ, ಭಾರ್ಯಯಾ – ಅವನ ಹೆಂಡತಿಯಿಂದ, ಸಹ ಏವ—ಅವನ ಜೊತೆಗೇನೆ, ಕರ್ಮಕರ್ತವ್ಯಂ – ಕಾರ್ಯವು ಮಾಡಲ್ಪಡಬೇಕೋ, ತತಃ—ಆದ್ದರಿಂದ ಪತೌ ಜಿತೇ ಅಪಿ – ಪತಿಯು ಗೆಲ್ಲಲ್ಪಟ್ಟರೂ ಕೂಡ, ಮೇ—ನನಗೆ, ದಾಸೀತ್ವಂ ಪೃಥಕ್ ನ ಸ್ಯಾತ್ – ಪ್ರತ್ಯೇಕ ದಾಸೀ— ತ್ವವು ಬರಲಾರದು. ॥೩೩೫॥

ಇತ್ಯುಕ್ತಾ ಅಪಿ ಭೀಷ್ಮಾದ್ಯಾಃ ಕಲ್ಯಾವೇಶೇನ ಮೋಹಿತಾಃ।
ಪೃಚ್ಛ ಧರ್ಮಜಮಿತ್ಯುಕ್ತ್ವಾ ತೂಷ್ಣೀಮೇವ ಬಭೂವಿರೇ ॥೩೩೬॥

ಇತಿ ಉಕ್ತಾಃ ಅಪಿ—ಈ ರೀತಿ ದ್ರೌಪದಿದೇವಿಯರಿಂದ ಹೇಳಲ್ಪಟ್ಟರೂ ಕೂಡ. ಕಲ್ಯಾವೇಶೇನ ಮೋಹಿ- ತಾಃ—ಕಲ್ಯಾವೇಶದಿಂದ ಮೋಹಿತರಾದ, ಭೀಷ್ಮಾದ್ಯಾಃ— ಭೀಷ್ಮರೇ ಮೊದಲಾದವರು, ಧರ್ಮಜಂ ಪೃಚ್ಛ–ಧರ್ಮ ಅಧರ್ಮಗಳ ಬಗ್ಗೆ ಧರ್ಮರಾಜನನ್ನು ಕೇಳು, ಇತಿ ಉಕ್ತ್ವಾ – ಎಂದು ಹೇಳಿ, ತೂಷ್ಣೀಂ ಏವ ಬಭೂವಿರೇ— ಸುಮ್ಮನೆಯೇ ಆದರು. ॥೩೩೬॥

ದುರ್ಯೋಧನಪ್ರತೀಪಂ ಹಿ ನ ಕಶ್ಚಿದಶಕತ್ತದಾ।
ಉವಾಚ ವಿದುರಸ್ತತ್ರ ಸ ಧರ್ಮೋಽಯಮಿತಿ ಸ್ಫುಟಮ್ ॥೩೩೭॥

ಯದಾ–ಯಾವಾಗ, ದುರ್ಯೋಧನ ಪ್ರತೀಪಂ–ದುರ್ಯೋಧನನ ವಿರೋಧವನ್ನು(ಮಾಡಲು) ಕಶ್ಚಿತ್–ಯಾವನೂ ಕೂಡ, ನ ಅಶಕತ್ ಹಿ–ಸಮರ್ಥನಾಗಲೇ ಇಲ್ಲವೋ ತದಾ – ಆಗ ತತ್ರ—ಆ ಸಭೆಯಲ್ಲಿ ವಿದುರಃ – ವಿದುರರು ಮಾತ್ರ, ಅಯಂ—ಇದು, ನ ಧರ್ಮಃ – ಧರ್ಮವಲ್ಲ, ಇತಿ—ಎಂದು, ಸ್ಫುಟಮ್—ಸ್ಪಷ್ಟವಾಗಿ, ಉವಾಚ—ಹೇಳಿದರು. ॥೩೩೭॥

ನ ತಸ್ಯ ವಾಚಂ ಜಗ್ರಾಹ ಧೃತರಾಷ್ಟ್ರಸ್ಸಹಾತ್ಮಜಃ ।
ಊರ್ಧ್ವಬಾಹುಸ್ಸ ಚುಕ್ರೋಶ ದೇವಾನಾಂ ಖ್ಯಾಪಯಂಸ್ತದಾ ॥೩೩೪॥

ಸ್ವಾಶಕ್ತಿಂ ದ್ರೌಪದೀಂ ಚಾಹ ಜಿತಾ ನೈವಾಸಿ ಧರ್ಮತಃ
ಅಧರ್ಮೋ ಹಿ ಮಹಾನೇತಾಂ ಸಭಾಮಾಕ್ರಮ್ಯ ತಿಷ್ಠತಿ ॥೩೩೫॥

ಸಹಾತ್ಮಜಃ ಧೃತರಾಷ್ಟ್ರಃ-ಮಕ್ಕಳಿಂದ ಸಹಿತನಾದ ಧೃತರಾಷ್ಟ್ರನು, ತಸ್ಯವಾಚಂ-ಆ ವಿದುರರ ಮಾತನ್ನು, ನ ಜಗ್ರಾಹ-ಸ್ವೀಕರಿಸಲಿಲ್ಲ. ತದಾ – ಆಗ, ಸಃ – ವಿದುರರಂ ದೇವಾನಾಂ – ದೇವತೆಗಳಿಗೆ. ಸ್ವಾಶಕ್ತಿಂ – ತನ್ನ ಅಸಾಮರ್ಥ್ಯವನ್ನು ಖ್ಯಾಪಯನ್ಸನ್ – ಪ್ರಕಟಪಡಿಸುವವನಾಗಿ, ಊರ್ಧ್ವಬಾಹುಃಸನ್ - ಬಾಹುಗಳನ್ನು ಮೇಲೆ ಮಾಡಿದವರಾಗಿ ಚುಕ್ರೋಶ-ಕೂಗಿಕೊಂಡರಂ ಚ – ಮಂತ್ತು, ದ್ರೌಪದೀಂ – ದ್ರೌಪದೀದೇವಿಯನ್ನು ಕುರಿತು, ಧರ್ಮತಃ – ಧರ್ಮದಿಂದ. ನೈವ ಜಿತಾ ಅಸಿ – ಗೆಲ್ಲಲ್ಪಟ್ಟವಳಾಗಿಲ್ಲ. ಮಹಾನ್ ಅಧರ್ಮಃಹಿ – ದೊಡ್ಡ ಅಧರ್ಮವೇ, ಏತಾಂ ಸಭಾಂ – ಈ ಸಭೆಯನ್ನು, ಆಕ್ರಮ್ಯ-ಆಕ್ರಮಿಸಿ, ತಿಷ್ಠತಿ – ಇರುವದು. ಇತಿ – ಎಂದಂ, ಆಹ – ಹೇಳಿದರಂ, ॥೩೩೪॥೩೩೫॥

ಏವಂ ತು ವಿದುರೇಣೋಕ್ತೇ ವಿಕರ್ಣಃ ಪಾಪಕೋಽಪಿ ಸನ್ ।
ಆಹ ಡಂಭಾರ್ಥಮೇವಾತ್ರ ಧರ್ಮವಿತ್ವಂ ಪ್ರಕಾಶಯನ್।
ಅಧರ್ಮ ಏವಾಯಮಿತಿ ಕರ್ಣೋಽಥೈನಮಭರ್ತ್ಸಯತ್ ॥೩೩೦॥

ದೃಷ್ಟ್ವಾಭೀಮಃ ಕ್ಲಿಶ್ಯಮಾನಾಂ ತು ಕೃಷ್ಣಾಂ ಧರ್ಮಾತ್ಯಯಂ ಧರ್ಮರಾಜೇ ಚ ದೃಷ್ಟ್ವಾ।
ರಾಜಾ ಶಾಸ್ಯೋ ಯುವರಾಜೇನ ಧರ್ಮಾಚ್ಚಲನ್ಯಸ್ಮಾದ್ವಾಕ್ಯಮಿದಂ ಬಭಾಷೇ ॥೩೩೧॥

ಏವಂ – ಈ ರೀತಿಯಾಗಿ, ವಿದುರೇಣ ಉಕ್ತೇಸತಿ – ವಿದುರರಿಂದ ಹೇಳಲ್ಪಡುತ್ತಿರಲು, ವಿಕರ್ಣಃತು-ದುರ್ಯೋಧನನ ತಮ್ಮನೇಆದ ವಿಕರ್ಣನ, ಪಾಪಕಃಸನ್ಅಪಿ – ಪಾಪಿ (ತಾವಸಿಯೇ) ಆಗಿದ್ದರೂ ಕೂಡ, (ಸ್ವಸ್ಯ) ಧರ್ಮವಿತ್ವಂ ಪ್ರಕಾಶಯನ್-(ತನಗೆ) ಧರ್ಮಜ್ಞತ್ವವನ್ನು ತೋರಿಸುವವನಾಗಿ, ಡಂಭಾರ್ಥಂ ಏವ—(ಕಪಟಕ್ಕಾಗಿಯೇ) ಪ್ರದರ್ಶನ ಮಾತ್ರಕ್ಕಾಗಿಯೇ, ಅತ್ರ – ಈ ಸಂದರ್ಭದಲ್ಲಿ, ಅಯಂ ಅಧರ್ಮಃ ಏವ ಇತಿ – ಇದಂ ಅಧರ್ಮವೇ ಎಂದಂ, ಆಹ-ಹೇಳಿದನಂ. ಅಥ—ನಂತರ, ಕರ್ಣಃ ಕರ್ಣನು, ಏನಂ—ಈ ವಿಕರ್ಣನನ್ನು, ಅಭರ್ತ್ಸಯತ್—ಬೈದನು. ಭೀಮಃ ತು-ಭೀಮ ಸೇನದೇವರು ಮಾತ್ರ, ಕೃಷ್ಣಾಂ ದ್ರೌಪದೀದೇವಿಯನ್ನ ಕ್ಲಿಶ್ಯಮಾನಾಂ-ಕಷ್ಟಪಡುತ್ತಿರುವವಳನ್ನಾಗಿ, ದೃಷ್ಟ್ವಾ—ನೋಡಿ ಚ—ಮತ್ತು, ಧರ್ಮರಾಜೇ-ಧರ್ಮರಾಜನಲ್ಲಿ ಧರ್ಮಾತ್ಯಯಂ-ಧರ್ಮೋಲ್ಲಂಘನೆಯನ್ನು ದೃಷ್ಟ್ವಾ – ನೋಡಿ ಯಸ್ಮಾತ್-ಯಾವ ಕಾರಣದಿಂದ, ಧರ್ಮಾತ್ ಚಲನ್ -ಧರ್ಮದಿಂದ ಸರಿದಂಥ, ರಾಜಾ – ರಾಜನು, ಯುವರಾಜೇನ ಶಾಸ್ಯಃ-ಯುವ ರಾಜನಿಂದ ವಚನದಿಂದ ಶಿಕ್ಷಿಸಲ್ಪಡಬೇಕೋ, ತಸ್ಮಾತ್–ಆದ್ದರಿಂದ, ಇದಂ ವಾಕ್ಯಂ – ಈ ಮುಂದಿನ ಮಾತನ್ನು, ಬಭಾಷೇ – ಹೇಳಿದರಂ. ॥೩೩೦॥೩೩೧॥

ಇಮಾಂ ನ್ಯಸ್ತವತೋ ದ್ಯೂತೇ ಧರ್ಷಣೀಯೌ ಹಿ ತೇ ಭುಜೌ।
ನೈವಮಿತ್ಯರ್ಜುನೋಽವಾದೀತ್ತಮಾಹಾಥವೃಕೋದರಃ ॥೩೩೨॥

ಇಮಾಂ – ಈ ದ್ರೌಪದೀದೇವಿಯನ್ನು, ದ್ಯೂತೇ – ದ್ಯೂತದಲ್ಲಿ, ನ್ಯಸ್ತವತಃ – ಪಣಕ್ಕೆ ಇಟ್ಟಂಥ, ತೇ – ನಿನ್ನ, ಭುಜೌ—ಭುಜಗಳಂ, ಧರ್ಷಣೀಯೌ ಹಿ – ಸಂಡಲ್ಪಡಲೇಬೇಕಂ (ಎಂದು ಧರ್ಮರಾಜನಿಗೆ ಹೇಳಿದರಂ. ಎಂದು ಅನ್ವಯಂ) ಅರ್ಜುನಃ – ಅರ್ಜುನನು. ನ ಏವಂ—ಹಾಗೆ ಮಾಡಬಾರದು, ಇತಿ-ಎಂದಂ, ಅವಾದೀತ್ – ಹೇಳಿದನಂ. ಅಥ—ನಂತರ ವೃಕೋದರಃ—ಭೀಮಸೇನನೇ ವರು, ತಂ—ಆ ಅರ್ಜುನನನ್ನು ಕುರಿತು, ಆಹ—ಹೇಳಿದರಂ, ॥೩೩೨॥

ವಕ್ತವ್ಯಂ ನ ತು ಕರ್ತವ್ಯಂ ತಸ್ಮಾನ್ನ ಹಿ ಮಯಾ ಕೃತಮ್।
ಉತ್ತಮೇ ವಚಸಾ ಶಿಕ್ಷಾ ಮಧ್ಯಮೇऽರ್ಥಾಪಹಾರಣಮ್
ಅಧಮೇ ದೇಹದಂಡಶ್ಚ ತಸ್ಮಾದ್ಧಾರ್ಮಿಕೋ ಯ ಏಧಿಷ್ಠಿರ: ॥೩೪॥

ಉತ್ತಮೇ – ಉತ್ತಮಕ ಬಗೆಗೆ ಆಗುವಾಗ, ವಕ್ತವ್ಯಂ – ಹೇಳಬೇಕು ವಠಾತ್ರ: ನತು ಕರ್ತವ್ಯಂ – (ಆದರೆ)ಕೃತಿಯಿಂದ ಮಾಡಬಾರದು, ತಸ್ಮಾತ್ – ಆದ್ದರಿಂದ. ಮಯಾ ನಹಿ ಕೃತಂ – ನನ್ನಿಂದ ಮಾಡಲ್ಪಟ್ಟಿಲ್ಲ. ಉತ್ತಮೇ- ಉತ್ತಮರ ಬಗ್ಗೆ, ವಚಸಾ ಶಿಕ್ಷಾ—ಮಾತಿನಿಂದ ಶಿಕ್ಷೆಯು ಕಾರ್ಯವು, ಮಧ್ಯಮೇ-ಮಧ್ಯಮರ ಬಗೆಗೆ, ಅರ್ಥಾಪಹಾರಣಂ-ಧನದಂಡನೆಯು ಕರ್ತವ್ಯ, ಚ—ಮತ್ತು, ಅಧಮೇ—ಅಧಮ ಜನರ ಬಗೆಗೆ, ದೇಹದಂಡಃ – ದೇಹದಂಡನೆಯೇ ಮಾಡಲ್ಪಡಬೇಕು. ತಸ್ಮಾತ್—ಹೀಗೆ ಧರ್ಮ ಶಾಸ್ತ್ರ ನಿಯಮವಿರುವದರಿಂದ, ಯಃಧಿಷ್ಠಿರಃ ಜೇಷ್ಠನಾದ ಧರ್ಮರಾಜನು, ವಾಚ್ಯಃ – ಹೇಳಲ್ಪಡಬೇಕು. ॥೩೪॥

ಭಾವಾನುವಾದ ೩೨- ೩೪

ಧೃತರಾಷ್ಟ್ರರಾಜನು, ವಿದುರರು, ಶಕುನಿಸಹಿತರಾದ ದುರ್ಯೋಧನಾದಿಗಳು ದ್ಯೂತಸಭೆಗೆ ಬಂದರು. ಶಕುನಿಯು ಧರ್ಮರಾಜನನ್ನು ದ್ಯೂತದಾಟಕ್ಕಾಗಿ ಕರೆದನು. ಅಲ್ಲಿದ್ದವರ ಮಧ್ಯದಲ್ಲಿ ಭೀಮಾದಿ ನಾಲ್ಕು ಜನ ಪಾಂಡವರು, ವಿದುರ ಕುಂತಿ, ದ್ರೌಪದೀದೇವಿಯರನ್ನು ಬಿಟ್ಟು ಉಳಿದ ಎಲ್ಲರೂ ಆಗ ಕಲ್ಯಾವೇಶವಾಗಿದ್ದರಿಂದ ಕೀಲಕಂಟವಾದ ಈ ದುಷ್ಟ, ಅಧರ್ಮದ್ಯೂತಕಾರ್ಯದಲ್ಲಿ ಪ್ರವೃತ್ತರಾದ ಇವರನ್ನು ಭೀಷ್ಮಾದಿಗಳಾರೂ ತಡೆಯಲಿಲ್ಲ. ಭೀಮಾದಿಗಳು, ವಿದುರರು ಧರ್ಮರಾಜನನ್ನು ತಡೆದರೂ ಅವನು ಕೇಳದೆಯೇ ಆಟಕ್ಕೆ ಕುಳಿತು ಪ್ರಾರಂಭಿಸಿ ಸೋಲುತ್ತಾ ಎಲ್ಲ ಸೊತ್ತನ್ನೂ ಪಣಕ್ಕೆ ಹಚ್ಚಿ ಸೋತನು. ಆಗ ನಕುಲನನ್ನೇ ಪಣಕ್ಕೆ ಹಚ್ಚಿದನು. ಅವನನ್ನು ಕಳೆದುಕೊಂಡನು. ಹೀಗೆ ಕ್ರಮವಾಗಿ ಸಹದೇವನನ್ನು, ಅರ್ಜುನನನ್ನು, ಭೀಮರನ್ನು ಹಚ್ಚಿ ಪರಾಜಿತನೇ ಆದನು. ಆಗ ದ್ರೌಪದೀದೇವಿಯನ್ನು ಹಚ್ಚಿದನು. ಆಗ ಕಪಟಿಯಾದ ಶಕುನಿಯು ಲೆತ್ತಗಳಲ್ಲಿ ಅವಳನ್ನು ಕಳೆದುಕೊಂಡನು. ತನ್ನನ್ನೇ ಹಚ್ಚಿಕೊಂಡು ಆ ಪಣವನ್ನೂ ಸೋತನು. ಆಗ ದುರುಳ ದುರ್ಯೋಧನನು ತನ್ನ ಸಾರಥಿಯನ್ನು ದ್ರೌಪದೀಕಡೆಗೆ ಕರೆದುಕೊಂಡು ಬರಲು ಹೇಳಿಕಳಿಸಿದನು. ಆ ಪ್ರಕಾರ ಅವನು ಬಂದು ದ್ರೌಪದೀದೇವಿಗೆ ನಿನ್ನನ್ನು ದ್ಯೂತದಲ್ಲಿ ದುರ್ಯೋಧನನು ಗೆದ್ದಿರುವನು. ಆದ್ದರಿಂದ ಸಭೆಗೆ ಬರ ಕೆಂದು ಹೇಳಿದಾಗ, ದ್ರೌಪದೀದೇವಿಯು ಹಿರಿಯರ ಆ ಕುರುಸಭೆಗೆ ನಾನು ಬರುವದಿಲ್ಲ ಎಂದಳು. ಆಗ ಆ ಸೂತನು ಬಂದು ಹಾಗೆಯೇ ದುರ್ಯೋಧನನಿಗೆ ಹೇಳಿದನು. ದುರ್ಯೋಧನನು ಈ ಸೂತನು ಭೀಮಬಲಕ್ಕೆ ಹೆದರಿಕೊಂಡಿದ್ದಾನೆ. ಇವನ ಕಡಿಂದ ಆ ಕೆಲಸ ಆಗದು ಎಂದು ತಿಳಿದು ತನ್ನ ತಮ್ಮ ದುಃಶ್ಯಾಸನನನ್ನು ಕಳಿಸಿದನು. ಅವನು ಬಂದು ತನ್ನ ತಾಯಿಯು ಒಬ್ಬ ಹೆಣ್ಣು ಮಗಳು; ಅವಳ ಎದುರು ಇನ್ನೊಬ್ಬ ಹೆಣ್ಣುಮಗಳ ಅವಮಾನ ಕಾರ್ಯಮಾಡುವದು ಸರಿಯಲ್ಲ (ಯಾವಾಗಲೂ ಮಾಡಬಾರದು ಹಾಗಿರುವಾಗ ಎದುರಿಗೆ ಮಾಡಬಾರದು) ಎಂಬ ಪ್ರಜ್ಞೆಯಿಲ್ಲದೇ ದ್ರೌಪದೀದೇವಿಯ ಕೂದಲನ್ನು ಹಿಡಿದು ಎಳೆದುಕೊಂಡು ಬಂದನು. ಅವರು ಆಗ ರಜಸ್ವಲೆಯಾದ್ದರಿಂದ. ಏಕ ವಸ್ತ್ರದಲ್ಲಿದ್ದರು. ಹಾಗೆಯೇ ಎಳೆದು ತಂದನು.

ಆಗ ಸಭೆಗೆ ಬಂದ ದ್ರೌಪದೀದೇವಿಯು ದ್ಯೂತವೇ ಅಧರ್ಮ ತತ್ರಾಪಿ ಕಪಟದದ್ಯೂತದಲ್ಲಿ (ಏಕೆಂದರೆ ಶಕುನಿಯುತಾನು ಇಚ್ಛಿಸಿದ ಹಾಗೆ ಬೀಳುವಂತೆ ಅಸ್ಥಿಗಳಿಂದ ಮಾಡಿದ ಲೆತ್ತಗಳಿಂದ ಆಡಲ್ಪಡುತ್ತಿದ್ದದ್ದರಿಂದ)ಗೆದ್ದರೆ,ನ್ಯಾಯವಾಗಿ ಗೆದ್ದಂತೆ ಆಯಿತೇ? ಇಲ್ಲಿರುವವರಾರೂ ಈ ಧರ್ಮವನ್ನು ತಿಳಿದಿಲ್ಲವೆ? ತಿಳಿದು ಹೇಳುವದಿಲ್ಲವೇ? ಹೇಳದವರು ವೃದ್ಧರು ಎಂದು ಎನಿಸಿ ಕೊಳ್ಳುವದಿಲ್ಲ. ಕೇವಲ ವಯಸ್ಸಾದರೆ ವೃದ್ಧರಲ್ಲ, ಧರ್ಮ ಜ್ಞಾನದಿಂದ ವೃದ್ಧರಾಗಬೇಕು. ಅಂಥವರಿಲ್ಲದ ಈ ಸಭೆಯು ಸಭೆಯಾದರೂ ಹೇಗಾದೀತು? ಪತಿವೃತಾ ಪತ್ನಿಯು ಯಾವಾಗಲೂ ಪತಿಯ ಅಧೀನಳಾದ್ದರಿಂದ ಪತಿಯು ಅಜಿತನಾಗಿರುವಾಗ ಪತ್ನಿಯು ಹೇಗೆ ಪತಿಂದ ಜಿತಳಾಗಿ ಅವನಿಗೆ ಅಧೀನಳಾಗಲು ಶಕ್ಯ? ಪತಿಯಂತೆಯೇ ಕಾರ್ಯವುಳ್ಳವಳು ಪತ್ನಿಯು, ಪತಿಯು ಸೊತು ದಾಸನಾದರೂ ಕೂಡ ಅವನ ಜೊತೆಗೇ ಇರಳು ಅವೇ ಕಾರ್ಯವನ್ನು ಮಾಡುವವೇ ವಿನಃ ಪ್ರತ್ಯೇಕವಾಗಿ ಪತ್ನಿಗೆವಾತ್ರ

ಪರರದಾಸತ್ವ ಬರುವದು ಎನ್ನುವದು ಇಲ್ಲವೇ ಇಲ್ಲ. ಹೌದೋ ಅಲ್ಲವೋ ಹೇಳಿರಿ ಎಂದು ಭೀಷ್ಮಾದಿಗಳನ್ನು ಕೇಳಿದರೂ ಕೂಡ ಅವರು ಕಲ್ಯಾಣೇಶದಿಂದ ಬಂದ್ದಿಮೋಹಕ್ಕೊಳಗಾದ್ದರಿಂದ ಧರ್ಮರಾಜನನ್ನೇ ಕೇಳಿಕೊ, ಎಂದು ಹೇಳಿ ಸುಮ್ಮನಾದರು. ಆ ಸಭೆಯಲ್ಲಿ ವಿದುರರೊಬ್ಬರು ಮಾತ್ರ ದುರ್ಯೋಧನನನ್ನು ಪ್ರತಿಭಟಿಸಿದರು, ಅವರು ಇದು ಮಹಾ ಅಧರ್ಮವು ಎಂದರು. ಅವರ ಮಾತನ್ನು ಯಾರೂ ಲಕ್ಷಿಸದಿರುವಾಗ ಕೈ ಮೇಲೆ ಮಾಡಿ ಇದು ಮಹಾ ಅಧರ್ಮ. ನಾನು ಬಿಡಿಸಲು ಅಸಮರ್ಥ ನೀವೇ ನೋಡಿಕೊಳ್ಳಿರಿ ಎಂದು ದೇವತೆಗಳಿಗೆ ತಿಳಿಸಿ, ದ್ರೌಪದೀದೇವಿಗೆ ಇಲ್ಲಿ ಅಧರ್ಮವೇ ಆಕ್ರಮಿಸಿದೆ: ನಿನ್ನನ್ನು ಧರ್ಮದಿಂದ ಗೆದ್ದಿರುವದಿಲ್ಲ. ಎಂದು ಹೇಳಿದರು. ಆಗ ದುರ್ಯೋಧನನ ತಮ್ಮ ವಿಕರ್ಣನು ಇದು ಅಧರ್ಮ ಎಂದು ತಾನು ಧರ್ಮ ಅಧರ್ಮಗಳ ಜ್ಞಾನಿಯು ಎಂದು ತೋರಿಸುವದಕ್ಕಾಗಿಯೇ ದಂಭದಿಂದ ಹೇಳಿದನು ನಿಜವಾಗಿ ಅವನೂ ಪಾಪಿಯೇ. (ಮುಂದೆ ಗೊತ್ತಾಗುವದು). ಕರ್ಣನು ವಿಕರ್ಣನನ್ನು ಬೈದು ಕೂಡಿಸಿದನು. ಭೀಮಸೇನದೇವರು, ದ್ರೌಪದೀದೇವಿಯ ಕ್ಲೇಶವನ್ನು, ಅಣ್ಣನ ಧರ್ಮೋಲ್ಲಂಘನೆಯನ್ನು ನೋಡಿ ತಾವು ಯುವರಾಜರಾದ್ದರಿಂದ, ರಾಜನು ಧರ್ಮಮಾರ್ಗ ಬಿಟ್ಟಾಗ ಅವನನ್ನು ಉಪದೇಶಿಸಿ ಸೂಚಿಸಿ ಧರ್ಮಮಾರ್ಗಕ್ಕೆ ತರುವದು ಯುವರಾಜನ ಕರ್ತವ್ಯವಾದ್ದರಿಂದ ತಮ್ಮ ಕರ್ತವ್ಯವಾಗಿ ಧರ್ಮರಾಜನಿಗೆ ' ಪತ್ನಿಯನ್ನು ದ್ಯೂತದ ಪಣಕ್ಕೆ ಹಚ್ಚಿದ ನಿನ್ನ ಕೈಗಳನ್ನು ಸುಡಬೇಕು' ಎಂದರು. ಆಗ ಅರ್ಜುನನು ಹಾಗೆಲ್ಲಮಾಡಬಾರದು ಎಂದು ಹೇಳಿದನು. ಆಗ ಅರ್ಜುನನಿಗೆ ಉತ್ತಮರು ತಪ್ಪುಮಾಡಿದಾಗ ಮಾತಿನಿಂದ ಶಿಕ್ಷಿಸಬೇಕು; ಕೃತಿಯಿಂದ ಅಲ್ಲ. ಮಧ್ಯಮರು ತಪ್ಪಿದಾಗ ಅವರಿಗೆ ದಂಡ್ಡಿನದಂಡದಿಂದ ಶಿಕ್ಷಿಸಬೇಕು ಅಧಮರು ತಪ್ಪುಮಾಡಿದಾಗ ಅವರಿಗೆ ದೇಹದಂಡನೆಯನ್ನು ಮಾಡಬೇಕು. ಹೀಗೆ ಧರ್ಮ ತಾಸ್ತ್ರವಿದೆ ಆದ್ದರಿಂದ ಧರ್ಮರಾಜನಿಗೆ ಕೇವಲ ಹೇಳಬೇಕು, ಆದ್ದರಿಂದ ನಾನು ಕೇವಲ ಹೇಳಿದ್ದೇನೆ ಹೊರತು ಹಾಗೆ ಮಾಡಲು ಪ್ರವೃತ್ತನಾಗಿಲ್ಲ ಎಂದು ಭೀಮರು ಹೇಳಿದರು.

ಅಥಕರ್ಣೋಽಬ್ರವೀತ್ಕೃಷ್ಣಾಮುಪತಿರ್ಹ್ಯಸಿಶೋಭನೇ ॥೩೪॥
ಧಾರ್ತರಾಷ್ಟ್ರಗೃಹಂ ಯಾಹೀತ್ಯಥ ದುರ್ಯೋಧನೋಽವದತ್।
ಪರಸ್ಪರವಿರೋಧಾರ್ಥಂ ಪಾಂಡವಾನಾಮಿದಂ ವಚಃ ॥೩೪॥

ಅಥ – ಅನಂತರ, ಕರ್ಣಃ – ಕರ್ಣನು, ಕೃಷ್ಣಾಂ:-ದ್ರೌಪದೀದೇವಿಯನ್ನು ಕುರಿತು, ಶೋಭನೇ – ಸುಂದರಿಯೇ: ಹಿ – ಯಾವಕಾರಣದಿಂದ, ತ್ವಂ – ನೀನು, ಅಪತಿ: ಅಸಿ – ಪತಿರಹಿತಳಾಗಿರುವಿಯೋ, ತಸ್ಮಾತ್ – ಆದ್ದರಿಂದ, ಧಾರ್ತರಾಷ್ಟ್ರಗೃಹಂ – ದುರ್ಯೋಧನನ ಮನೆಗೆ, ಯಾಹಿ – ಹೋಗು, ಇತಿ – ಎಂದು, ಅಬ್ರವೀತ್ – ಹೇಳಿದನು, ಅಥ – ಕರ್ಣನು ಮಾತಾಡಿದ ನಂತರ, ದುರ್ಯೋಧನಃ – ದುರ್ಯೋಧನನು, ಪಾಂಡವಾನಾಂ ಪರಸ್ಪರ ವಿರೋಧಾರ್ಥಂ ಪಾಂಡವರಿಗೆ ಪರಸ್ಪರ ವಿರೋಧವುಂಟಾಗುವದಕ್ಕಾಗಿ, ಇದಂ ವಚಃ – ಅದಕೆ ಅನುಕೂಲವಾದ ಈ ಮುಂದಿನ ಮಾತನ್ನು, ಅವದತ್ ಹೇಳಿದನು ॥೩೪॥೩೪॥

ಯುಧಿಷ್ಠಿರೋ ದುಃಖ ಹೇತುಸ್ತವೈಕೋ ಯದ್ಯೇನಮನ್ಯೇನ ಗುರುರ್ನ ಏಷಃ।
ಇತಿ ಬ್ರೂಯುರಥವಾ ಭೀಮಪಾರ್ಥಾವೇಕೋಽಪಿ ವಾ ಭೀಮ ಇಹೋತ್ಸೃಜೇ ತ್ವಾಂ ೩೬॥

ತವ–ನಿನಗೆ, ಏಷ: ಯುಧಿಷ್ಠಿರ: – ಧರ್ಮರಾಜನೊಬ್ಬನು, ದುಃಖಹೇತು: ದುಃಖಕ್ಕೆ ಕಾರಣನು, ಇತಿ–ಎಂಬುದಾಗಿ, ಏಷ:—ಈ ಧರ್ಮರಾಜನು, ನ: – ನಮಗೆ, ಗುರು: ನ—ಹಿರಿಯ (ಪೂಜ್ಯ) ನಲ್ಲ, ಇತಿ – ಎಂದು, ಏನಂ – ಈ ಧರ್ಮರಾಜನ ಬಗ್ಗೆ. ಯದಿ – ಒಂದು ವೇಳೆ ಅನ್ಯೇ—ಉಳಿದ ನಾಲ್ವರೂ ಸಹೋದರರು. ಬ್ರೂಯು: ಹೇಳಿದರೆ ಅಥವಾ, ಭೀಮಪಾರ್ಥೌ – ಭೀಮಾರ್ಜುನರಿಬ್ಬರು (ಬ್ರೂಯಾತಾಂ—ಹೇಳಿದರೆ ವಾ—ಅಥವಾ. ಏಕಃಭೀಮಃ ಅಪಿ – ಭೀಮನೊಬ್ಬನೂ ಕೂಡ (ಬ್ರೂಯಾತ್ ಚೇತ್ – ಹೇಳಿದರೆ)ಇಹ–ಈ ಸಭೆಯಲ್ಲಿ, ತ್ವಾಂ – ನಿನ್ನನ್ನು ಉತ್ಸೃಜೇ — ಬಿಟ್ಟುಕೊಡುತ್ತೇನೆ. ಎಂದು ನೀಚ ದುರ್ಯೋಧನನು ಹೇಳಿದನು ॥೩೪॥

ಇತ್ಯುಕ್ತ ಊಚೇ ಪವಮಾನಸೂನುಃ ಪೂಜ್ಯೋಽಸ್ಮಾಕಂ ಧರ್ಮಜೋಽಸಂಶಯೇನ।
ಗುರುಶ್ಚಾಹಂ ವೋಽಖಿಲಾನಾಂ ಯತೋ ಹಿ ಬಲಜ್ಯೇಷ್ಠಂ ಕ್ಷತ್ರಮಾಹುರ್ಮಹಾಂತಃ॥೩೪೭॥

ಇತಿ – ಈ ರೀತಿ, ಉಕ್ತೇಸತಿ—ದುರ್ಯೋಧನನಿಂದ ಹೇಳಲ್ಪಡುತ್ತಿರಲು, ಪವಮಾನಸೂನುಃ–ವಾಯುಪುತ್ರರಾದ ಶ್ರೀಭೀಮಸೇನದೇವರು, ಧರ್ಮಜಃ—ಯುಧಿಷ್ಠಿರನು, ಅಸ್ಮಾಕಂ – ನಮಗೆ, ಅಸಂಶಯೇನ—ನಿಸ್ಸಂಶಯವಾಗಿ, ಪೂಜ್ಯಃ—ಪೂಜ್ಯನೇ, ಚ – ಹಾಗೂ, ವಃಅಖಿಲಾನಂ – ನಿಮ್ಮೆಲ್ಲರಿಗೂ, ಅಹಂ—ನಾನು, ಗುರುಃ – ಪೂಜ್ಯನು; ಯತಃ—ಏಕೆಂದರೆ, ಬಲಜ್ಯೇಷ್ಠಃ – ಬಲದಿಂದ ಶ್ರೇಷ್ಠನಾದ, ಕ್ಷತ್ರಂ—ಕ್ಷತ್ರಿಯನನ್ನು, ಶ್ರೇಷ್ಠಂ–ಇತರ ಕ್ಷತ್ರಿಯರಿಗೆ ಶ್ರೇಷ್ಠನನ್ನಾಗಿ ಮಹಾಂತಃ ಆಹುಃ—ಜ್ಞಾನಿಗಳು ಹೇಳುತ್ತಾರೆ. ॥೩೪೭॥

ಬಲಜ್ಯೇಷ್ಠೇ ಯದಿ ವಃ ಸಂಶಯಃ ಸ್ಯಾದುತ್ತಿಷ್ಠಧ್ವಂ ಸರ್ವೇ ಏವಾದ್ಯ ವೀರಾಃ।
ಮೃತ್ಸ್ನಾಮಿ ವಃ ಪಾದತಲೇನ ಸರ್ವಾನ್ಸಹಾನುಬಂಧಾನ್ಯಶ್ಚ ಮಾಂ ಯೋದ್ಧುಕಾಮಃ ॥೩೪೮॥

ವೀರಾಃ – ಶೂರರೆಂದು ತಿಳಿದವರೇ, ಯದಿ–ಒಂದುವೇಳೆ, ವಃ—ನಿಮಗೆ, ಬಲಜ್ಯೇಷ್ಠ್ಯೇ–ನನ್ನ ಬಲಶ್ರೇಷ್ಠತೆಯ ಬಗ್ಗೆ, ಸಂಶಯಃಸ್ಯಾತ್—ಸಂದೇಹ ವಿದ್ದರೆ ಅದ್ಕೆ – ಈಗಲೇ ಸರ್ವೇ ಏವ – ಎಲ್ಲರೂ ಉತ್ತಿಷ್ಠಧ್ವಂ – ಯುದ್ಧಕ್ಕಾಗಿ ಏಳಿರಿ ಸಹಾನುಬಂಧಾನ್–ಬಂಧುಗಳಿಂದ ಸಹಿತರಾದ, ವಃ ಸರ್ವಾನ್ – ನಿಮ್ಮೆಲ್ಲರನ್ನು, ಪಾದತಲೇನ—ನನ್ನ ಪಾದದ ಅಡಿಯಿಂದ ಮೃತ್ಸ್ನಾಮಿ—ಮಂರ್ದಿಸುತ್ತೇನೆ. ಯಃ ಚ—ಯಾವನೇ ಆದರೂ, ಮಾಂ – ನನ್ನ ಜೊತೆಗೆ, ಯೋದ್ಧುಕಾಮಃ–ಯುದ್ಧ ಮಾಡುವ ಇಚ್ಛೆವುಳ್ಳವನಾದರೆ, ತಂ—ಅವನನ್ನು, ಮೃತ್ಸ್ನಾಮಿ—ಮಂರ್ದಿಸುತ್ತೇನೆ. ಎಂದು ಭೀಮರು ಹೇಳಿದರು. ॥೩೪೮॥

ಇತಿ ಬ್ರುವನ್ನಮುತ್ಥಿತೋ ನದನ್ವೃಕೋದರೋ ಯದಾ।
ವಿಘೂರ್ಣಿತಾ ಸಭಾಽಖಿಲಾ ಭಯಾನ್ನ ಚಾಹ ಕಿಂಚನ ॥೩೪೯॥

ಇತಿ—ಈ ರೀತಿ, ಬ್ರುವನ್—ಹೇಳುವವರಾಗಿ, ನದನ್ – ಗರ್ಜಿಸುತ್ತಾ, ವೃಕೋದರಃ – ಶ್ರೀಭೀಮರು ಯದಾ – ಯಾವಾಗ, ಸಮುತ್ಥಿತಃ—ಎದ್ದರೋ, ತದಾ - ಆಗ ಅಖಿಲಾ ಸಭಾ – ಆ ಇಡೀ ಸಭೆಯೇ ಭಯಾತ್ ವಿಘೂರ್ಣಿತಾ ಸತೀ—ಭಯದಿಂದ ಚಂಚಲವಾದದ್ದಾಗಿ, ಕಿಂಚನ – ಯಾವ ಮಾತನ್ನೂ, ನಚ ಆಹ – ಹೇಳಲೇ ಇಲ್ಲ. ॥೩೪೯॥

ಭೀಷ್ಮೋ ದ್ರೋಣೋ ವಿದುರಾದ್ಯಾಃ ಕ್ಷಮಸ್ವ ಸರ್ವಂ ತ್ವಯೋಕ್ತಂ ಸತ್ಯಮಿತ್ಯೇವ ಹಸ್ತೌ।
ಗೃಹೀತ್ವೈನಂ ಸ್ಥಾಪಯಾಮಾಸುರಸ್ಮಿನ್ ಸ್ಥಿತೇ ಶಾಂತಿಂ ಚಾಪಿರೇ ಧಾರ್ತರಾಷ್ಟ್ರಾಃ ॥೩೫೦॥

ಭೀಷ್ಮಃ – ಭೀಷ್ಮಾಚಾರ್ಯರು, ದ್ರೋಣಃ—ದ್ರೋಣಾಚಾರ್ಯರು, ವಿದುರಾದ್ಯಾಃ–ವಿದುರ ಮೊದಲಾದವರು, ತ್ವಯಾಉಕ್ತಂ ಸರ್ವಂ – ನಿನ್ನಿಂದ ಹೇಳಲ್ಪಟ್ಟದೆಲ್ಲವೂ, ಸತ್ಯಂ—ಸತ್ಯವೇಆಗಿದೆ, ಸರ್ವಂ – ಎಲ್ಲ ಅಪರಾಧವನ್ನು, ಕ್ಷಮಸ್ವ–ಕ್ಷಮಿಸು ಇತಿ – ಎಂದು, ಏನಂ ಉಕ್ತ್ವಾ – ಈ ಭೀಮರನ್ನು ಕುರಿತು ಹೇಳಿ, ಹಸ್ತೌ – ಕೈಗಳನ್ನು ಗೃಹೀತ್ವಾ—ಹಿಡಿದು, ಸ್ಥಾಪಯಾಮಾಸುಃ—ಕೂಡಿಸಿದರು. ಅಸ್ಮಿನ್—ಸ್ಥಿತೇಸತಿ – ಈ ಭೀಮರು ಕೂಡುತ್ತಿರಲು. ಧಾರ್ತರಾಷ್ಟ್ರಾಃ ಚ – ದುರ್ಯೋಧನಾದಿಗಳೂ ಕೂಡ, ಶಾಂತಿಂ ಆಪಿರೇ – ಭಯವನ್ನು ಬಿಟ್ಟು ಸಮಾಧಾನವನ್ನು ಹೊಂದಿದರು. ॥೩೫೦॥

ನಿವಾರಿತೋ ಧರ್ಮಜೇನ ಗುರುಭಿಶ್ಚಾಪರೈಸ್ತದಾ।
ಮಾನನಾರ್ಥಂ ಗುರೂಣಾಂ ತು ನ ಭೀಮಸ್ತಾನ್ ಜಘಾನ ಹ ॥೩೫೧॥

ಧರ್ಮಜೇನ—ಧರ್ಮರಾಜನಿಂದ, ಅಪರೈಃ ಗುರುಭಿಃ ಚ – ಭೀಷ್ಮಾದಿ ಇತರ ಹಿರಿಯರಿಂದಲೂ ಕೂಡ, ನಿವಾರಿತಃ – ತಡೆಯಲ್ಪಟ್ಟ, ಭೀಮಃ – ಶ್ರೀಭೀಮರು. ಗುರೂಣಾಂ – ಹಿರಿಯರ, ಮಾನನಾರ್ಥಂ ತು – ಮರ್ಯಾದೆಗಾಗಿಯೇ ತಾನ್ - ಆ ದುರ್ಯೋಧನಾದಿಗಳನ್ನು ನ ಜಘಾನಹ—ಕೊಲ್ಲಲಿಲ್ಲ. ॥೩೫೧॥

ನ ಚಾತ್ಯವರ್ತತ ಜ್ಯೇಷ್ಠಂಧರ್ಮಾತ್ಮಾನಂ ಯುಧಿಷ್ಠಿರಮ್।
ತೇಷಾಂ ಪಾಪಾಭಿವೃದ್ಧ್ಯರ್ಥಂ ಜ್ಯೇಷ್ಠವೃತ್ತಿಂ ಚ ದರ್ಶಯನ್ ॥೩೫೨॥

(ಭೀಮಃ—ಭೀಮರ) ಧರ್ಮರಾಜನ ಬಗ್ಗೆ ಜ್ಯೇಷ್ಠವೃತ್ತಿಂ- ಹಿರಿಯನಂತೆ ನಡತೆಯನ್ನು, ದರ್ಶಯನ್-ತೋರಿಸುವವರಾಗಿ. ತೇಷಾಂ ಪಾಪಾಭಿವೃದ್ಧ್ಯರ್ಥಂ-ದುರ್ಯೋಧನಾದಿಗಳ ಪಾಪದಲಭಿವೃದ್ಧಿಗಾಗಿ, ಜ್ಯೇಷ್ಠಂಧರ್ಮಾತ್ಮಾನಂ ಯುಧಿಷ್ಠಿರಂ-ಹಿರಿಯನಾದ, ಯಾವ ಧರ್ಮಸ್ವರೂಪನಾದ, ಯೀಧಿಷ್ಠಿರನ ಮಾತನ್ನು ನ ಚ ಅತ್ಯವರ್ತತ-ಮೀರಲಿಲ್ಲ ॥೩೫೨॥

ಅಥ ದುರ್ಯೋಧನಃ ಪಾಪೋ ಭೀಮಸೇನಸ್ಯ ಪಶ್ಯತಃ।
ಊರುಂ ಸಂದರ್ಶಯಾಮಾಸ ಕೃಷ್ಣಾಯೈ ಭೀಮ ಏಹ ತವ್ ॥೩೫೩॥

ಅಥ – ಈ ನಂತರ, ಪಾಪಃ ದುರ್ಯೋಧನಃ—ಪಾಪಿಯಾದ ದುರ್ಯೋಧನಂ, ಭೀಮಸೇನಸ್ಯ ಪಶ್ಯತ ಸತಃ—ಭೀಮಸೇನದೇವರು ನೋಡುತ್ತಿರುವ ಹಾಗೆ, ಕೃಷ್ಣಾಯೈ – ದ್ರೌಪದೀದೇವಿಯರಿಗೆ, ಊರುಂ – (ತನ್ನ) ತೊಡೆಯನ್ನು, ಸಂದರ್ಶಯಾಮಾಸ ತೋರಿಸಿದನು (ಅಲ್ಲಿಕೂಡು ಎಂಬ ಅಭಿಪ್ರಾಯದಿಂದ ತೋರಿಸಿದನು). ತವ್ – ಹಾಗೆ ತೋರಿಸಿದ ನೀಚ ದುರ್ಯೋಧನನನ್ನು ಕುರಿತು, ಭೀಮಃ – ಭೀಮಸೇನದೇವರು, ಏಹ – ಹೇಳಿದರು. ॥೩೫೩॥

ತವೋರುಮೇನಂ ಗದಯೋರುವೇಗಯಾ ಬಿಭೇತ್ಸ್ಯಇತ್ಯೇವ ಪುನಸ್ಸುಯೋಧನಃ।
ಊಚೇ ನಾನ್ಯದ್ಭವತಾಮಸ್ತಿ ವಿತ್ತಂ ದ್ಯೂತೇ ಕೃಷ್ಣಂ ಸ್ಥಾಪಯಧ್ವಂ ಪಣಾಯ ॥೩೫೪॥

ತವ – ನಿನ್ನ, ಏನಂ ಊರುಂ – ನೀನು ತೋರಿಸಿದ ಈ ತೊಡೆಯನ್ನು, ಊರುವೇಗಯಾಗ ದಯಾ—ಬಹು ವೇಗವುಳ್ಳ ಗದಾದಿಂದ, ಬಿಭೇತ್ಸ್ಯೇ ಏವ – ಮುರಿದೇ ಮುರಿಯುತ್ತೇನೆ ಇತಿ—ಎಂದು (ಹೇಳಿದರು), ಪುನಃ – ಮತ್ತೆ, ಸುಯೋಧನಃ—ದುರ್ಯೋಧನನು, ಭವತಾಂ – ನಿಮಗೆ, ಅನ್ಯತ್ ವಿತ್ತಂ – ಬೇರೆಯಾವ ದ್ರವ್ಯವೂ ನ ಅಸ್ತಿ–ಇರುವದಿಲ್ಲ, (ಆದ್ದರಿಂದ), ದ್ಯೂತೇ – ಈ ದ್ಯೂತಃಟದಲ್ಲಿ, ಪಣಾಯ – ಪಣಕ್ಕಾಗಿ, ಕೃಷ್ಣಂ–ಶ್ರೀಕೃಷ್ಣನನ್ನೇ, ಸ್ಥಾಪಯಧ್ವಂ–ಇಡಿರಿ, ಇತಿ—ಎಂದು, ಊಚೇ – ಹೇಳಿದನು. ॥೩೫೪॥

ಅಥಾಬ್ರವೀದ್ವೃಕೋದರಃ ಕೃತೇಽವಮಾನನೇ ಹರೇಃ।
ನಿಪಾತ್ಯ ಭೂತಲೇ ಹಿ ತೇ ಶಿರೋ ಮೃದಿಷ್ಯ ಇತ್ಯಲಮ್ ॥೩೫೫॥

ಅಥ – ದುರ್ಯೋಧನನ ಮಾತಿನ ನಂತರ, ವೃಕೋದರಃ—ಭೀಮಸೇನದೇವರು, ಹರೇಃ ಅವಮಾನನೇ ಕೃತೇಸತಿ—ನೀನು ಶ್ರೀಕೃಷ್ಣನ ಅವಮಾನ ಮಾಡಲ್ಪಡುತ್ತಿರಲು, ತ್ವಾಂ—ನಿನ್ನನ್ನು, ಭೂತಲೇ ನಿಪಾತ್ಯ—ಭೂಮಿಯಲ್ಲಿ ಕಡವಿ, ತೇ ಶಿರಃ— ನಿನ್ನ ತಲೆಯನ್ನು, ಅಲಂ ಮೃದಿಷ್ಯೇ – ಖಂಡಿತ ಮರ್ದಿಸುತ್ತೇನೆ, ಇತಿ—ಎಂದು. ಅಬ್ರವೀತ್ – ಮಾತನಾಡಿದರು. (ಪ್ರತಿಜ್ಞೆ ಮಾಡಿದರು) ॥೩೫೫॥

ಸ ವಧ್ಯ ಏವ ಮೇ ಸದಾ ಪರೋಕ್ಷತೋಽಪಿಯೋ ಹರಿಮ್।
ವಿನಿಂದಯೇದಿತಿ ಧ್ರುವಂ ಪ್ರತಿಶ್ರುತಂ ಹಿ ಮಾರುತೇಃ ॥೩೫೬॥

ಯಃ — ಯಾವನು. ಹರಿಮ್ — ಶ್ರೀಹರಿಯನ್ನು, ಪರೋಕ್ಷತಃ ಅಪಿ — ನನ್ನ ಪರೋಕ್ಷದಲ್ಲಿಯೂ ಕೂಡ, ವಿನಿಂದಯೇತ್ — ನಿಂದಿಸುತ್ತಾನೋ, ಸಃ - ಅವನು, ವೇ — ನನ್ನಿಂದ, ಧ್ರುವಂ ವಧ್ಯಃ — ಖಂಡಿತ ವಧಾರ್ಹನು. (ಖಂಡಿತ ಅವನನ್ನು ಕೊಲ್ಲುವೆನು) ಇತಿ — ಎಂದು, ಮಾರುತೇಃ — ಶ್ರೀವಾಯುದೇವರ, ಪ್ರತಿಶ್ರುತಂ — ಪ್ರತಿಜ್ಞೆಯು ಸದಾ ಹಿ — ಯಾವಾಗಲೂ ಇದ್ದೇ ಇದೆಯೋ ಆದ್ದರಿಂದ ತಲೆಯು ಮರ್ದನದ ಪ್ರತಿಜ್ಞೆಯನ್ನು ಮಾಡಿದರು; ಎಂದು ಭಾವ. ॥೩೫೬॥

ಅವತಾರಿಕೆ : ಆಗಲೇ ಏಕೆ ಕೊಲ್ಲಲಿಲ್ಲ ಎಂಬ ಸಂಶಯಕ್ಕೆ ನಿರ್ಣಯವನ್ನು ಹೇಳುವರು,

ಪುನಶ್ಚ ಪಾಪ ವೃದ್ಧಯೇ ತದೈವ ನೋ ಜಘಾನ ತಮ್ ॥೩೫೭॥

ಪುನಃ ಚ — ಮತ್ತಪ್ಪು, ಪಾಪವೃದ್ಧಯೇ — ಮುಂದೆ ಹೇಗಾದರೂ ವಿಷ್ಣುವೈಷ್ಣವದ್ರೋಹಮಾಡಿ ಪಾಪಾಭಿವೃದ್ಧಿಯಾಗಲಿ ಎಂಬ ಉದ್ದೇಶದಿಂದಾಗಿ, ತಮ್ — ಆ ದುರ್ಯೋಧನನನ್ನು, ತದಾ ಏವ — ಆಗಲೇ, ನೋ ಜಘಾನ — ಕೊಲ್ಲಲಿಲ್ಲ. ॥೩೫೭॥

ಭಾವಾನುವಾದ ೩೪೪ - ೩೫೭

ಕರ್ಣನು ದ್ರೌಪದೀದೇವಿಗೆ 'ನೀನು ಈಗ ಪತಿರಹಿತಳಾದ್ದರಿಂದ ದುರ್ಯೋಧನನ ಮನೆಗೆ ಹೋಗು' ಎಂದು ಹೇಳಿದನು. ದುರ್ಯೋಧನನು ಪಾಂಡವರಲ್ಲಿ ಒಬ್ಬರಿಗೊಬ್ಬರಿಗೆ ವಿರೋಧ ಕಲಹ ಆಗಲಿ ಎಂಬ ದುರ್ಭಾವದಿಂದ 'ಧರ್ಮರಾಜನು ದ್ರೌಪದಿಯ ದುಃಖಕ್ಕೆ ಕಾರಣನು;' ಅವನು ನಮಗೆ ಪೂಜ್ಯನಲ್ಲ ಎಂದು ಎಲ್ಲ ನಾಲ್ಕು ಪಾಂಡವರಾಗಲೀ. ಭೀಮಾರ್ಜುನರಿಬ್ಬರೇ ಆಗಲಿ ಅಥವಾ ಭೀಮನೊಬ್ಬನೇ ಆಗಲಿ ಹೇಳಿದರೂ ನಾನು ನಿನ್ನನ್ನು ಬಿಡುತ್ತೇನೆ. ಎಂದು ಹೇಳಿದನು. ಅದಕ್ಕೆ ಶ್ರೀಭೀಮರು ಕೂಡಲೇ ಎದ್ದು ಪ್ರತಿಭಟಿಸುತ್ತಾ ಧರ್ಮರಾಜನು ನಮೆಲ್ಲರಿಗೂ ಖಂಡಿತ ಪೂಜ್ಯನೇ, ಸಂಶಯವಿಲ್ಲ. ನಾನು ನಿಮ್ಮೆಲ್ಲರಿಗೂ ಶ್ರೇಷ್ಠನು. ಏಕೆಂದರೆ ಕ್ಷತ್ರಿಯರಲ್ಲಿ ಬಲಾಧಿಕ್ಯ ವುಳ್ಳವನೂ ಶ್ರೇಷ್ಠನು ಎಂದು ಶಾಸ್ತ್ರವಿದೆಯಲ್ಲವೆ ? ನಿಮ್ಮೆಲ್ಲರಿಗಿಂತ ಬಲಾಧಿಕ್ಯವುಳ್ಳ ನಾನು ನಿಮಗೆ ಶ್ರೇಷ್ಠನೇ' ನನ್ನ ಅಧಿಕ ಬಲದ ಬಗ್ಗೆ ಸಂಶಯವಿದ್ದರೇ ಎಲೋ ವೀರರು ಶೂರರು ಎಂದು ಕೊಚ್ಚಿಕೊಳ್ಳುವ ಕ್ಷತ್ರಿಯರೇ ಏಳಿರಿ ಬನ್ನಿರಿ ಯುದ್ಧಕ್ಕೆ. ನೀವು ಯಾರ್ಯಾರು ನನ್ನ ಜೊತೆಗೆ ಯುದ್ಧಕ್ಕೆ ಬರುವಿರೋ ಅವರೆಲ್ಲರನ್ನು ನನ್ನ ಪಾದದಿಂದಲೇ ತುಳಿದು ಮರ್ದಿಸುತ್ತೇನೆ. ನೀವೆಲ್ಲರೂ ಒಟ್ಟಾಗಿ ಯಃದ್ಧಕ್ಕೆ ಬಂದರೂ ಸೈ: ಎಲ್ಲರನ್ನೂ ಏಕಕಾಲಕ್ಕೆ ಮರ್ದಿಸುತ್ತೇನೆ. ಎಂದು ಹೇಳಿದರು. ಆ ರೀತಿ ಗರ್ಜನ ಮಾಡುವ ಶ್ರೀಭೀಮರನ್ನು ನೋಡಿ ಇಡೀ ಸಭೆಯೇ ನಡುಗಿತು, ಹೆದರಿಕೆಯಿಂದ ಯಾವನೂ ಚಕಾರ ಮಾತಾಡಲಿಲ್ಲ, ಆಗ ಭೀಷ್ಮ, ದ್ರೋಣ, ವಿದುರರು ಕ್ಷವಿಸು. ನೀನು ಹೇಳಿದ್ದೆಲ್ಲವೂ ನಿಜವೇ ಆಗಿದೆ. ಸಹಿಸಿಕೊ; ಎಂದು ಹೇಳಿ ಶ್ರೀಭೀಮನ ಕೈ ಹಿಡಿದು ಕೂಡಿಸಿದರು, ಅವರು ಕುಳಿತಾಗ ಉಳಿದವರಿಗೆ ಹಾರಿದ ಜೀವಪಕ್ಷಿಯು ಪುನಃ ಬಂದಂತಾಯಿತು. ದುರ್ಯೋಧನಾದಿಗಳು ಅವರ ಅಪರಾಧದಿಂದ ಆಗಲೇ ಭೀಮರಿಂದ ಸಂಹಾರಾರ್ಹರೇ ಆಗಿದ್ದರು. ಆದರೂ ಶ್ರೀಭೀಮಸೇನದೇವರು ಹಿರಿಯರ ಮಾತಿನಲ್ಲಿ ಗೌರವದಿಂದ, ಜೇಷ್ಠನಾದ ಧರ್ಮರಾಜನೂ ನಿಷೇಧಿಸಿದ್ದರಿಂದ ಅವರ ಮಾತಿನ ಗೌರವದಿಂದಲೂ ಆಗಲೇ ಸಂಹರಿಸಲಿಲ್ಲ. ಇದರ ಉದ್ದೇಶವೂ ಕೂಡ ದುರ್ಯೋಧನಾದಿಗಳ ಪಾಪಕಾರ್ಯಗಳು ಇನ್ನೂ ಹೆಚ್ಚು ನಡೆದು ಅಧಂತಮಸ್ಸಿಗೆ ಯೋಗ್ಯರಾಗಲಿ ಎಂಬುದು ಆಗಿತ್ತು. ಈ ದೃಷ್ಟಿಯಿಂದ ಶ್ರೀಭೀಮರು ಕುಳಿತಾಗ, ದುರುಳ ದುರ್ಯೋಧನನು ಅರ್ಥಮಾಡಿಕೊಳ್ಳದೇ-

ದ್ರೌಪದೀದೇವಿಗೆ ನೀನು ನನ್ನ ಪತ್ನಿಯಾಗಿ ನನ್ನ ತೊಡೆಯಲ್ಲಿ ಕೂಡು ಎಂಬ ನೀಚ ಉದ್ದೇಶದಿಂದ ತನ್ನ ಎಡ ತೊಡೆಯನ್ನು ತೋರಿಸಿದನು. ಆಗ ಶ್ರೀಭೀಮರು ನಿನ್ನ ಆ ತೊಡೆಯನ್ನು ಯುದ್ಧದಲ್ಲಿ ಮುರಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದರು. ಪುನಃ ದೋಷಿ ದುರ್ಯೋಧನನು ನಿಮಗೆ ಪಣಕ್ಕೆ ಹಚ್ಚಲು ಬೇರೇ ಏನೂ ಇಲ್ಲವಾದ್ದರಿಂದ ಕೃಷ್ಣನನ್ನೇ ಹಚ್ಚಿರಿ ಎಂದು ಹೇಳಿ ಶ್ರೀಕೃಷ್ಣಾವತಾರ ಮಾಡಿದ್ದನ್ನು ನೋಡಿದ, ನನ್ನ ಪರೋಕ್ಷದಲ್ಲಿ ಶ್ರೀಹರಿನಿಂದೆ ಮಾಡಿದರೂ ಅವನನ್ನು ಸಂಹರಿಸುವೆನು. ಎಂದು ಸದಾ ಪ್ರತಿಜ್ಞಾ ವ್ರತವುಳ್ಳ ಶ್ರೀಭೀಮರು ಕೂಡಲೇ ಹಿಂದೆ ಹೇಳಿದಂತೆ ಪಾಪಾಭಿವೃದ್ಧಿಗಾಗಿಯೇ ಆಗಲೇ ಸಂಹರಿಸದೆ, ಯುದ್ಧದಲ್ಲಿ ನಿನ್ನನ್ನು ಭೂಮಿಯಲ್ಲಿ ಕೆಡವಿ ನಿನ್ನ ತಲೆಯನ್ನೇ ಪಾದತಲದಿಂದ ತುಳಿಯುತ್ತೇನೆ ಎಂದು ಪ್ರತಿಜ್ಞೆಗೈದರು.

ವಿಕರ್ತನಾತ್ಮಜಃ ಪುನಃ ಜಗಾದ ಸೋಮಕಾತ್ಮಜಾಮ್ ।
ಪ್ರಯಾಹಿ ಭೂಭೃತೋ ಹಿ ನೋ ಗೃಹಂ ನ ಸಂತಿ ಪಾಂಡವಾಃ ।
ಇತೀರಿತೇ ಸಮುತ್ಥಿತೋ ವೃಕೋದರಸ್ತತೋಽರ್ಜುನಃ ॥೩೫॥

ವಿಕರ್ತನಾತ್ಮಜಃ - ಸೂರ್ಯಪುತ್ರನಾದ ಕರ್ಣನು. ಪುನಃ ಮತ್ತೆ, ಸೋಮಕಾತ್ಮಜಾಮ್ – ದ್ರೌಪದೀದೇವಿಯನ್ನು ಕುರಿತು. ಪಾಂಡವಾಃ ನ ಸಂತಿ – ಪಾಂಡವರು ಇರುವದಿಲ್ಲ, ನಃ ಭೂಭೃತಃ – ನಮ್ಮ ರಾಜನಾದ ದುರ್ಯೋಧನ. ಗೃಹಂ – ಗೃಹಕ್ಕೆ, ಪ್ರಯಾಹಿ – ಹೋಗು, ಇತಿ – ಎಂದು, ಜಗಾದ – ಹೇಳಿದನು, ಇತಿ ಈರಿತೇ – ಈ ರೀತಿ ಹೇಳಲ್ಪಡುತ್ತಿರಲು, ವೃಕೋದರಃ – ಶ್ರೀಭೀಮರು, ಸಮುತ್ಥಿತಃ – ಎದ್ದನಂತರ. (ಯುದ್ಧಕ್ಕಾಗಿ ಎಂಬಂತೆ) ಅನು—ಅವರು ನಿಂತ ನಂತರ ಕೂಡಲೇ, ಅರ್ಜುನಃ ಚ – ಅರ್ಜುನನೂ ನಿಂತನು. ॥೩೫॥

ಉಭೌ ಚ ತೌ ಯುಧಿಷ್ಠಿರೋ ನ್ಯವಾರಯತ್ತಥಾಽಪರೇ ।
ತತೋ ನಿಷಣ್ಣಯೋಸ್ತಯೋಸ್ಸುಯೋಧನೋ ವಚೋಽಬ್ರವೀತ್ ॥೩೬॥

ಉಭೌ ಚ ತೌ — ಅವರಿಬ್ಬರನ್ನೂ ಕೂಡ, ಯುಧಿಷ್ಠಿರಃ – ಧರ್ಮರಾಜನು, ನ್ಯವಾರಯತ್ – ತಡೆದನು, ತಥಾ—ಹಾಗೂ, ಅಪರೇ – ಭೀಷ್ಮಾದಿ ಇತರರು. (ನ್ಯವಾರಯನ್ – ತಡೆದರು.) ತತಃ – ಅವರು ತಡೆದ ನಂತರ, ತಯೋಃ:—ಆ ಭಿ ಮಾರ್ಜುನರು, ನಿಷಣ್ಣಯೋಃ ಸತೋಃ – ಕೂಡುತ್ತಿರಲು, ಸುಯೋಧನಃ – ದುರ್ಯೋಧನನು. ವಚಃ ಅಬ್ರವೀತ್ – ಮುಂದೆ ಹೇಳುವ ಮಾತನ್ನು ತನ್ನ ತಮ್ಮನಿಗೆ ಹೇಳಿದನು. ॥೩೫॥

ದುಃಶಾಸನೈಷಾಂ ವಾಸಾಂಸಿ ದಾಸಾನಾಂ ನೋ ವ್ಯಪಾಕುರು ।
ಇತ್ಯುಕ್ತೋಽಭ್ಯಗಮತ್ತಾರ್ಷ್ಣ್ಯವಾಸಾಂಸ್ಯಥ ತೇ ದದುಃ ॥೩೮॥

ದುಃಶಾಸನ – ಏಲೋ ದುಶ್ಶಾಸನನೇ, ನಃ ದಾಸಾನಾಂ—ನಮ್ಮ ಸೇವಕರಾದ, ಏಷಾಂ – ಈ ಪಾಂಡವರ ವಾಸಾಂಸಿ – ವಸ್ತ್ರಗಳನ್ನು, ವ್ಯಪಾಕುರು—ತೆಗೆದುಬಿಡು. (ಎಂದು ಹೇಳಿದನು ಎಂದು ಹಿಂದಕ್ಕೆ ಅನ್ವಯ) ಇತಿಉಕ್ತಃ:—ಹೀಗೆ ಹೇಳಲ್ಪಟ್ಟ ಆ ನೀಚ ದುಶ್ಶಾಸನನು, ಪಾರ್ಥನ್ ಅಭ್ಯಗಮತ್—ಪಾಂಡವರ ಸನಿಹಕ್ಕೆ ಬಂದನು. ಅಥ – ಕೂಡಲೇ, ತೇ – ಆ ಪಾಂಡವರು, ಸ್ವವಾಸಾಂಸಿ – ತಮ್ಮ ವಸ್ತ್ರಗಳನ್ನು, ದದುಃ—ಕೊಟ್ಟರು. ॥೩೮॥

ತೇ ಚರ್ಮವಸನಾ ಭೂತ್ವಾ ತಾನಶಿಷ್ಯಾನ್ಸ್ವಕಾಶ್ಯಚೇ ।
ನಿಷೇದುಶ್ಚಕ್ಷಮಾಯಾಂತೇ ಕ್ಷಮಾಮಾಲಂಬ್ಯ ವಿಸ್ತೃತಾಮ್ ॥೩೯॥

ತೇ—ಆ ಪಾಂಡವರು, ಚರ್ಮವಸನಾಃ ಭೂತ್ವಾ – ಚರ್ಮವಸ್ತ್ರವನ್ನುಳ್ಳವರಾಗಿ. ತಾನ್ – ಆ ದುರುಳ ದುರ್ಯೋಧನಾದಿಗಳನ್ನು, ಅಶಿಷ್ಟಾನ್ – ನೀತಿಧರ್ಮಬಾಹಿರರನ್ನಾಗಿ, ಪ್ರಕಾಶ್ಯ—ಪ್ರಕಟವಾಡಿ, ವಿಸ್ತೃತಾಂ – ಬಹುವಾದ, ಕ್ಷವಶಾಂ – ಸಹನೆಯನ್ನು, ಆಲಂಬ್ಯ—ಆಶ್ರಯಿಸಿ, ಕ್ಷವಶಾಯಕಾಂತೇ—ದ್ಯೂತಭೂಮೀಯ ಕೊನೆಯ ಭಾಗದಲ್ಲಿ ನಿಷೇದುಃ – ಕುಳಿತರು. ॥೩೬೧॥

ಪುನರ್ದುರ್ಯೋಧನೇನೋಕ್ತಃ ಪಾರ್ಥಾನಾಮುಥ ಪಶ್ಯತಾಮ್ ।
ಚಕರ್ಷ ವಾಸೋ ದ್ರೌಪದ್ಯಾಸ್ತದಾsವಾದೀದ್ವೃಕೋದರಃ ॥೩೬೨॥

ಪುನಃ – ಮತ್ತೆ, ದುರ್ಯೋಧನೇನ ಉಕ್ತಃ – ದುರ್ಯೋಧನನಿಂದ ಹೇಳಲ್ಪಟ್ಟ, ದುಃಶಾಸನನು, ಅಥ—ಯಾವಾಗ, ಪಾರ್ಥಾನಾಂ ಪಶ್ಯತಾಂ ಸತಾಂ—ಪಾಂಡವರು ನೋಡುತ್ತಿರುವಂತೆಯೇ, ದ್ರೌಪದ್ಯಾಃ ವಾಸಃ – ದ್ರೌಪದೀ ದೇವಿಯರ ವಸ್ತ್ರವನ್ನು, ಚಕರ್ಷ— ಎಳೆದನೋ, ತದಾ – ಆಗ, ವೃಕೋದರಃ:—ಶ್ರೀಭೀಮಸೇನದೇವರು, ಅವಾದೀತ್—ಈ ಮುಂದಿನಂತೆ ಮಾತನಾಡಿದರು, ॥೩೬೨॥

ಪಾಪೇಷು ಪೂರ್ವಸ್ಯ ತಥಾsಧನುಸ್ಯ ವಂಶೇ ಕುರೂಣಾಮುರುಧರ್ಮಶೀಲಿನಾಮ್ ।
ದುಃಶಾಸನಸ್ಯಾಸ್ಯನಿದಾರ್ಯ ವಕ್ಷಃ ಪಿಬಾಮಿ ರಕ್ತಂ ಜಗತಸ್ಸಮಕ್ಷಮ್ ॥೩೬೩॥

ಪಾಪೇಷು ಪೂರ್ವಸ್ಯ— ಪಾಪಿಗಳಲ್ಲಿ ಮೊದಲಿಗನಾದ, ತಥಾ – ಹಾಗು, ಉರುಧರ್ಮಶೀಲಿನಾಂ – ಮಹಾಧರ್ಮಿಷ್ಠರಾದ, ಕುರೂಣಾಂ—ಕುರುರಾಜರ, ವಂಶೇ—ವಂಶದಲ್ಲಿ, ಅಧಮಸ್ಯ – ಅತಿ ನೀಚನಾದ, ಅಸ್ಯ ದುಃಶಾಸನಸ್ಯ—ಈ ದುಃಶಾಸನನ, ವಕ್ಷಃ—ವಕ್ಷಸ್ಥಲವನ್ನು, ಜಗತಃ ಸಮಕ್ಷಮ್ – ಎಲ್ಲ ಜಗತ್ತಿನ ಎದುರಿನಲ್ಲಿಯೇ, ವಿದಾರ್ಯ—ಸೀಳಿ, ರಕ್ತಂ ಪಿಬಾಮಿ—ರಕ್ತವನ್ನು ಕುಡಿಯುತ್ತೇನೆ. ॥೩೬೩॥

ವಿಕೃಷ್ಯಮಾಣೇ ವಸನೇ ತು ಕೃಷ್ಣಾ ಸಸ್ಮಾರ ಕೃಷ್ಣಂ ಸುವಿಶೇಷತೋsಪಿ ।
ತದಾsನ್ಯದಾಸೀದ್ವಸನಂ ಚ ತಸ್ಯಾ ದಿವ್ಯಂ ಸುಸೂಕ್ಷ್ಮಂ ಕನಕಾವದಾತಮ್ ॥೩೬೪॥

ವಸನೇ – ವಿಕೃಷ್ಯಮಾಣೇ ಸತಿ—ವಸ್ತ್ರವು ಎಳೆಯಲ್ಪಡುತ್ತಿರಲು, ಕೃಷ್ಣಾ – ದ್ರೌಪದೀದೇವಿಯರು, ಕೃಷ್ಣಂ—ಶ್ರೀಕೃಷ್ಣನನ್ನು, ಸುವಿಶೇಷತಃ ಅಪಿ – ಯಾವಾಗಲೂ ಸ್ಮರಿಸುವವರೇ ಆದರೂ ಕೂಡ ಆಗ ಹೆಚ್ಚು ಹೆಚ್ಚು ಸ್ಮರಿಸಿದಳು ಎಂದು ತೋರುವಂತೆ, ಹೆಚ್ಚಾಗಿ, ಸಸ್ಮಾರ – ಸ್ಮರಿಸಿದರು, ತದಾ – ಆಗ, (ತಸ್ಮಾತ್) ಅನ್ಯತ್ – (ಮೊದಲಿನ ವಸ್ತ್ರಕ್ಕಿಂತ) ಬೇರೆಯಾದಾದ, ಸುಸೂಕ್ಷ್ಮಂ—ಮೃದುವಾದ, ಕನಕಾವದಾತಂ – ಬಂಗಾರದವರ್ಣವಳ್ಳ, ವಸನಂ—ವಸ್ತ್ರವು, ಅಸೀತ್—ಉಂಟಾಯಿತು. ॥೩೬೪॥

ಪುನಃ ಪುನಶ್ಚೈವ ವಿಕರ್ಷಮಾಣೇ ದುಃಶಾಸನೇsನ್ಯಾನಿ ಚ ತಾದೃಶಾನಿ ।
ಬಭೂವುರಂತಂ ನ ಜಗಾಮ ಪಾಪಃ ಶ್ರಾಂತೋ ನ್ಯಷೀದತ್ಸ್ವನ್ನಗಾತ್ರಸ್ಸಭಾಯಾಮ್ ॥೩೬೫॥

ದುಃಶಾಸನೇ – ದುಃಶಾಸನನು, ಪುನಃ ಪುನಃ ಚ—ಮತ್ತೂ ಮತ್ತೂ, ವಿಕರ್ಷಮಾಣೇ ಸತಿ ಏವ – ಎಳೆಯುತ್ತಲೇ ಇರಲು, ತಾದೃಶಾನಿ – ಮೈಮೇಲೆ ಮೊದಲಿನ ವಸ್ತ್ರದಂಥವಾಗಲಾರದೆ, ಅನ್ಯಾನಿ — ಬೇರೆವಸ್ತ್ರಗಳು, ಬಭೂವುಃ – (ಬಂದವು) ಆದವು. ಪಾಪಃ - ಪಾಪಿಯಾದ ದುಃಶಾಸನನು, ಅಂತಂ - ಆ ವಸ್ತ್ರಗಳ ಕೊನೆಯನ್ನು,

ನ ಜಗಾಮ – ಹೋಂದಲಿಲ್ಲ. ಶ್ರಾಂತಃ ಸನ್ – ಎಳೆದಂ ಎಳೆದಂ ಶ್ರಮಹೋಂದಿದವನಾಗಿ, ಸ್ವಿನ್ನಗಾತ್ರಃಸನ್— ಬೆವರಿಂದ ಶರೀರ ವುಳ್ಳವನಾಗಿ, ಸಭಾಯಾಂ – ಸಭೆಯಂಲ್ಲಿ, ನ್ಯಷೀದತ್— ಕೀಳಿತನಂ, ॥೩೬೫॥

ವಸ್ತ್ರೋಚ್ಚಯೇ ಶೈಲನಿಭೇ ಪ್ರಜಾತೇ ದುರ್ಯೋಧನಃ ಪ್ರಾಹ ಸಂಜಾತಕೋಪಃ ।
ಪ್ರವೇಶಯೇಮಾಂ ಗೃಹಮೇವ ಶೀಘ್ರಂ ಕಿಂ ನಶ್ಚಿರೇಣೇತಿ ಸುಮಂದಬುದ್ಧಿಃ ॥೩೬೬॥

ವಸ್ತ್ರೋಚ್ಚಯೇ— ವಸ್ತ್ರಗಳ ರಾಶಿಯಂ, ಶೈಲನಿಭೇ ಪ್ರಜಾತೇ ಸತಿ—ಪರ್ವತಾಕಾರವಾಗಿರುತ್ತಿರಲುಂ, ಸಂಜಾತಕೋಪಃ—ಕ್ರೋಧವನ್ನು ಹೊಂದಿದ, ಸುಮಂದಬುದ್ಧಿಃ – ಅತಿಮೂರ್ಖನಾದ, ದುರ್ಯೋಧನಃ–ದುರ್ಯೋಧನನಂ, ಇಮಾಂ – ಇವಳನ್ನು, ಶೀಘ್ರಂ – ಬೇಗನೇ, ಗೃಹಮೇವ – ನಮ್ಮ ಮನೆಗೇನೇ, ಪ್ರವೇಶಯ— ಕಳಿಸಂ, ಚಿರೇಣ— ವಿಲಂಬದಿಂದ, ನಃ ಕಿಂ – ನಮಂಗೇನಂ ಪ್ರಯೋಜನ,? ಇತಿ – ಎಂದು, ಪ್ರಾಹ = ಹೇಳಿದನಂ ॥೩೬೬॥

ತತ್ ಶ್ರುತ್ವಾ ವಚನಂ ಕೃಷ್ಣಾ ಪ್ರತಿಜ್ಞಾಮಕರೋತ್ತದಾ ।
ಭೀಮೋ ದುರ್ಯೋಧನಂ ಹಂತಾ ಕರ್ಣಂಹಂತಾ ಧನಂಜಯಃ ॥೩೬೭॥

ಶಕುನಿಂ ತ್ವಕ್ಷಕಿತವಂ ಸಹದೇವೋ ವಧಿಷ್ಯತಿ ।
ಇತ್ಯುಕ್ತೇ ತತ್ತಥೇತ್ಯಾಹ ಭೀಮಸೇನಸ್ಸಭಾತಲೇ ॥೩೬೮॥

ತತ್ ವಚನಂ–ದುರ್ಯೋಧನನು ಬೊಗಳಿದ ಆ ಮಾತನ್ನು, ಶ್ರುತ್ವಾ–ಕೇಳಿ, ಕೃಷ್ಣಾ–ದ್ರೌಪದೀದೇವಿಯರಾ, ಭೀಮಃ— ಭೀಮಸೇನದೇವರು, ದುರ್ಯೋಧನಂ ಹಂತಾ—ದುರ್ಯೋಧನನನ್ನು ಕೊಲ್ಲುವರ., ಧನಂಜಯಃ – ಅರ್ಜುನರಂ, ಕರ್ಣಂ ಹಂತಾ—ಕರ್ಣನನ್ನು ಕೊಲ್ಲುವರಂ, ಅಕ್ಷಕಿತವಂ – ಕಪಟದ್ಯೂತವನ್ನಾಡಿದ, ಶಕುನಿಂ ತು – ಶಕುನಿಯನ್ನು. ಸಹದೇವಃ – ಸಹದೇವರಂ, ವಧಿಷ್ಯತಿ—ಸಂಹರಿಸುತ್ತಾರೆ. ಇತಿ ಪ್ರತಿಜ್ಞಾಂ – ಎಂಬ ಪ್ರತಿಜ್ಞೆಯನ್ನು, ತದಾ ಅಕರೋತ್—ಆಗ ಮಾಡಿದರು. ಇತಿ ಉಕ್ತೇ ಸತಿ—ಈ ರೀತಿ ಪ್ರತಿಜ್ಞಾಪೂರ್ವಕವಾಗಿ ದ್ರೌಪದಿದೇವಿಯರು ಹೇಳುತ್ತಿರಲು. ತತ್ ತಥಾ – ಅದೆಲ್ಲವೂ ಹಾಗೆಯೇ ನಡೆಯುಂಪದು, ಇತಿ ಎಂದಂ, ಭೀಮಸೇನಃ—ಭೀಮಸೇನದೇವರಂ, ಸಭಾತಲೇ – ಸಭೆಯಲ್ಲಿ, ಆಹ—ಹೇಳಿದರಂ. ॥೩೬೭॥೩೬೮॥

ಪ್ರತಿಜ್ಞಾಮಾದದೇ ಪಾರ್ಥಸ್ತಾಂ ಮಾದ್ರೀನಂದನಸ್ತಥಾ ।
ನಕುಲಃ ಪ್ರತಿಜಜ್ಞೇಽಥ ಶಾಕುನೇಯವಧಂ ಪ್ರತಿ ॥೩೬೯॥

ಪಾರ್ಥಃ - ಅರ್ಜುನನಂ, ತಾಂ ಪ್ರತಿಜ್ಞಾಂ - ದ್ರೌಪದೀದೇವಿಯುಂ ಹೇಳಿದ ಕರ್ಣ ಸಂಹಾರ ಪ್ರತಿಜ್ಞೆಯನ್ನ, ಆದದೇ—ಸ್ವೀಕರಿಸಿ(ಪೂರ್ಣಗೊಳಿಸಿ)ದನಂ. ಮಾದ್ರೀನಂದನಃ — ಮಾದ್ರೀಕುಮಾರನಾದ ಸಹದೇವನಂ, ತಥಾ — ಹಾಗೆ (ಶಕುನಿ ವಧ ಪ್ರತಿಜ್ಞೆಯನ್ನು ತೊಟ್ಟನು.) ಅಥ - ನಂತರ, ನಕುಲಃ - ನಕುಲನು, ಶಾಕುನೇಯವಧಂಪ್ರತಿ – ಶಕುನಿಪುತ್ರನ ವಧಕ್ಕಾಗಿ. ಪ್ರತಿಜಜ್ಞೇ—ಪ್ರತಿಜ್ಞೆ ಮಾಡಿದನ. ॥೩೬೯॥

ತತಸ್ಸಯೋಧನಾನುಜಶ್ಚಕರ್ಷ ಪಾರ್ಷತಾತ್ಮಜಾಮ್ ।
ಗೃಹಾಯ ತಂ ವಿಶಾನ್ಮ್ಯ ತು ಕ್ರುಧಾss ಹನೂರುತಾತ್ಮಜಃ ॥೩೭೦॥

ತತಃ – ಅನಂತರ, ಸುಯೋಧನಾನುಜ:—ದುರ್ಯೋಧನನ ತಮ್ಮನಾದ ದುಶ್ಶಾಸನನು. ಪಾರ್ಷತಾತ್ಮಜಾಂ–ದ್ರೌಪದೀದೇವಿಯನ್ನು, ಗೃಹಾಯ – ಮನೆಗೆ ಕರೆದುಕೊಂಡುಹೋಗುವದಕ್ಕಾಗಿ. ಚಕರ್ಷ – ಎಳೆದನು. ತಂ—ಹಾಗೆ ಎಳೆಯುವ ದುಷ್ಪದುಶ್ಶಾಸನನನ್ನು, ನಿಶಾಮ್ಯ – ನೋಡಿ. ವೃಕೋದರಾತ್ಮಜಃ ತು—ವಾಯುಪುತ್ರರಾದ ಶ್ರೀಭೀಮಸೇನ ದೇವರೇ, ಕ್ರುಧಾ—ಸಿಟ್ಟಿನಿಂದ, ಆಹ— ಹೇಳಿದರು. ॥೩೭೦॥

ಅರ್ಜುನಾರ್ಜುನ ನೈವಾತ್ರ ಕ್ಷಮಾ ಮೇ ತಾತ ರೋಚತೇ ।
ಪತಿತಸ್ಯಾಸ್ಯ ದೇಹಸ್ಯ ಕಾಷ್ಠವಿಷ್ಠಾಸಮಸ್ಯ ಚ ॥೩೭೧॥

ಫಲಾನಿ ತ್ರೀಣಿ ಶಿಷ್ಯಂತೇ ವಿದ್ಯಾಕರ್ಮಸುತಾ ಇತಿ ।
ಇತಿ ವೇದೋದಿತಂ ವಾಕ್ಯಂ ನ ಸುತೋದಾರದೂಷಣೇ ॥೩೭೨॥

ತಾತ ಅರ್ಜುನ, ಅರ್ಜುನ ವರ್ಗವಾದ ಅರ್ಜುನನೇ ! ಅರ್ಜುನನೇ ! ಅತ್ರ – ಈ ಸಂದರ್ಭದಲ್ಲಿ, ಕ್ಷಮಾ—ಕ್ಷಮಾಗುಣವು, ಮೇ—ನನಗೆ, ನೈವ ರೋಚತೇ— ಯೋಗ್ಯವಾಗಿ ಕಾಣುವದಿಲ್ಲ. ಪತಿತಸ್ಯ – ವ್ಯರ್ಥವಾದಾಗ, ಕಾಷ್ಠವಿಷ್ಠಾಸಮಸ್ಯ—ಕಟ್ಟಿಗೆ ಮಲಗಳಿಗೆ ಸದೃಶವಾಗತಕ್ಕ, ಅಸ್ಯದೇಹಸ್ಯ—ಈ ವರ್ತಮಾನ ದೇಹಕ್ಕೆ, ವಿದ್ಯಾ—ವಿದ್ಯೆಯಂ, ಕರ್ಮ—ಕರ್ಮಾಚರಣೆಯಂ, ಸುತಾಃ – ಮಕ್ಕಳು, ಇತಿ – ಈ ರೀತಿ, ತ್ರೀಣಿ ಫಲಾನಿ—ಮೂರು ಫಲಗಳು, ಶಿಷ್ಯಂತೇ—ಶಾಸ್ತ್ರದಲ್ಲಿ ವಿಧಿಸಲ್ಪಡುತ್ತವೆ. ಇತಿ – ಎಂದು, ವೇದೋದಿತಂ ವಾಕ್ಯಂ – ವೇದದಲ್ಲಿ ಹೇಳಲ್ಪಟ್ಟ ವಾಕ್ಯ, ದಾರದೂಷಣೇ – ಹೆಂಡತಿಗೆ ದೋಷಬಂದರೆ, ಸುತಃ ನ – ಮಗನೆಂಬ ಫಲವು ಸಿದ್ಧಿಸುವದಿಲ್ಲ. ॥೩೭೧॥೩೭೨॥

ದುಷ್ಪದಾರೋ ನ ಚಾಪ್ನೋತಿ ಲೋಕಾನರ್ಧೋ ಹಿ ದೂಷಿತಃ ।
ಅರಕ್ಷಣಾದ್ದೂಷಿತಾಯಾ ನ ತ್ಯಾಗಾಚ್ಚ ಶುಭಂ ಭವೇತ್ ॥೩೭೩॥

ಚ – ಅಷ್ಟೇ ಅಲ್ಲ, ದುಷ್ಪದಾರ: – ದೋಷಿ ಹೆಂಡತಿಯುಳ್ಳ ಪುರುಷನು, ಲೋಕಾನ್—ಉತ್ತಮಲೋಕಗಳನ್ನು, ನ ಚ ಆಪ್ನೋತಿ – ಹೊಂದುವದಿಲ್ಲ, ಹಿ—ಏಕೆಂದರೆ, ಅರ್ಧ: ದೂಷಿತಃ–(ಹೆಂಡತಿಯಲ್ಲಿ ಪುರುಷನ ಅರ್ಧಾಂಗಿಯಾದ್ದರಿಂದ), ಅವನ ಅರ್ಧ ದೇಹವೇ ದೋಷಯುಕ್ತವಾದಂತೆ, ದೂಷಿತಾಯಾ ಅರಕ್ಷಣಾತ್ – ದೂಷಿತ ಹೆಂಡತಿಯ ರಕ್ಷಣೆ ಮಾಡದಿದ್ದರೂ. ತ್ಯಾಗಾತ್ ಚ—ಅಂಥವಳ ತ್ಯಾಗದಿಂದಲೂ, ಶುಭಂ ನಭವೇತ್ – ಶುಭಫಲವಾಗುವದಿಲ್ಲ, ದೂಷಿತಳಾಗಿಬಿಟ್ಟರೆ ಅಂಥವಳನ್ನು ರಕ್ಷಿಸಿದರೂ ರಕ್ಷಿಸದಿದ್ದರೂ ಅಷ್ಟೇ ಉತ್ತಮ ಫಲವಾಗದು. ॥೩೭೩॥

ಅತೋಽದ್ಯ ಸಾನುಬಂಧಕಾನ್ನಿಹನ್ಮಿ ಧಾರ್ತರಾಷ್ಟ್ರಕಾನ್ ।
ಇತಿ ಬ್ರುವನ್ನ್ಯಲೋಕಯದ್ರಿಪೂಂ ದಹನ್ನಿವ ಜಸಾ ॥೩೭೪॥

ಅತಃ – ಕ್ಷಮೆಯು ಯೋಗ್ಯವಲ್ಲವಾದ್ದರಿಂದ, ಸಾನುಬಂಧಕಾನ್ ಧಾರ್ತರಾಷ್ಟ್ರಕಾನ್ – ಬಂಧುಸಹಿತರಾದ ದುರ್ಯೋಧನಾದಿಗಳನ್ನು, ಓಜಸಾ ನಿಹನ್ಮಿ – ನನ್ನ ಸಾಮರ್ಥ್ಯದಿಂದ ಕೊಲ್ಲುವೆನು. ಇತಿ ಬ್ರುವನ್—ಎಂದು ಹೇಳುವವರಾಗಿ, ರಿಪೂ – ವೈರಿಗಳನ್ನು, ದಹನ್ ಇವ – ಸುಡುವಂತೆ, ವ್ಯಲೋಕಯತ್—ನೋಡಿದರು ॥೩೭೪॥

ದದರ್ಶ ಚ ಮಹಾಘೋರಮಾದಾತುಂ ಪರಿಘಂ ರುಷಾ ।
ಕರ್ತುಂ ವ್ಯವಸಿತೋ ಬುಧ್ಯಾ ನಿಶ್ಶೇಷಾನ್ಧೃತರಾಷ್ಟ್ರಜಾನ್ ॥೩೭೫॥

ಚ – ಹಾಗು, ಧೃತರಾಷ್ಟ್ರಜಾನ್ — ದುರ್ಯೋಧನಾದಿಗಳನ್ನು, ನಿಶ್ಶೇಷಾನ್—ಉಳಿಯದವರನ್ನಾಗಿ, ಕರ್ತುಂ– ಮಾಡಲು, ಬುದ್ಧ್ಯಾ ವ್ಯವಸಿತಃ – ಬುದ್ಧಿಯಿಂದ ನಿಶ್ಚಯವಳ್ಳಂಥ ಶ್ರೀ ಭೀಮರು, ರುಷಾ – ಸಿಟ್ಟಿನಿಂದ, ಮಹಾ ಘೋರಂ – ಬಹುಭಯಂಕರವಾದ, ಪರಿಘಂ—ಪರಿಘಾಯುಧವನ್ನು, ಆದಾತುಂ – ತೆಗೆದುಕೊಳ್ಳಲು, ದದರ್ಶ – ನೋಡಿದರು, ॥೩೭೫॥

ತದಾ ಶಿವಾ ವವಾಶಿರೇ ಸುಯೋಧನಾಗ್ನಿಗೇಹತಃ ।
ತಥೈವ ತತ್ಪಿತುರ್ಗೃಹೇಽಪ್ಯಭೂದ್ಭಯಾನಕಂ ಬಹು ॥೩೭೬॥

ತದಾ ಶ್ರೀಭೀಮರು ಪರಿಘಾಯುಧವನ್ನು ಹಾಗೆ ನೋಡುತ್ತಿರುವಾಗ, ಸುಯೋಧನಾಗ್ನಿ ಗೇಹತಃ–ದುರ್ಯೋ ಧನನ ಅಗ್ನಿಹೋತ್ರ ಶಾಲೆಯಿಂದ, ಶಿವಾಃ – ನರಿಗಳು ವವಾಶಿರೇ – ಅಪಶಕುನದ ಧ್ವನಿಯನ್ನುಮಾಡಿದವು. ತಥಾಏವ- ಹಾಗೆಯೇ, ತತ್ಪಿತುಃ – ಅವನ ತಂದೆಯಾದ ಧೃತರಾಷ್ಟ್ರನ, ಗೃಹೇ ಅಪಿ – ಮನೆಯಲ್ಲಿಯೂ ಕೂಡ, ಬಹು ಭಯಾನಕಂ – ಬಹುವಾಗಿ ಭಯಂಕರ ಶಕುನವು, ಅಭೂತ್ — ಆಯಿತು ॥೩೭೬॥

ಭಾವಾನುವಾದ

ಶಿಖಿಲ—೩೭೬

ಕರ್ಣನು ದ್ರೌಪದೀದೇವಿಯನ್ನು ಕುರಿತು – 'ನೀನು ನಮ್ಮ ರಾಜ ದುರ್ಯೋಧನನ ಮನೆಗೆ ಹೋಗು, ನಿನ್ನ ಪತಿಗಳು ಇಲ್ಲದಂತೆಯೇ'. ಎಂದು ಹೇಳಿದನು. ಆಗ ಕೂಡಲೇ ಶ್ರೀಭೀಮಸೇನದೇವರು ಹಾಗು ಅರ್ಜುನ ಇಬ್ಬರೂ ಎದ್ದು ನಿಂತರು. ಅವರಿಬ್ಬರನ್ನೂ ಧರ್ಮರಾಜನು ತಡೆದನು. ಅವರಿಬ್ಬರೂ ಕುಳಿತ ಮೇಲೆ ದುರುಳ ದುರ್ಯೋಧನನು ದುಶ್ಶಾಸನನಿಗೆ 'ನಮ್ಮ ದಾಸರಾದ ಈ ಪಾಂಡವರ ವಸ್ತ್ರಗಳನ್ನು ಕಸಿದುಕೋ' ಎಂದು ನೀಚಮಾತನ್ನು ಹೇಳಿದನು. ಆಗ ಆ ದುಷ್ಟ ದುಶ್ಶಾಸನನು ಕೂಡಲೇ ಅದಕ್ಕಾಗಿ ಪಾಂಡವರ ಹತ್ತಿರ ಬರುತ್ತಿರುವಾಗ ಪಾಂಡವರೇ ತಮ್ಮ ವಸ್ತ್ರಗಳನ್ನು ಸ್ವತಃ ಕೊಟ್ಟು ಬಿಟ್ಟು ತಾವು ಚರ್ಮ(ಚೀಠ)ವನ್ನು ತೊಟ್ಟರು; ಹಾಗೂ ಈ ನೀಚ ಕೌರವರು ಎಷ್ಟು ಅಸಭ್ಯರಿರುವರು ಎಂಬುದನ್ನೂ ಕೂಡ ಸಭೆಗೆ ತೋರಿಸಿದರು. ಭಗವತ್ ಸಂಕಲ್ಪವನ್ನು ತಿಳಿದ ಅವರು ಎಲ್ಲ ಅವರ ದುರುಳ ಕಾರ್ಯವನ್ನು ಸಹಿಸಿಕೊಂಡು ಭೂಮಿಯಲ್ಲಿ ಕುಳಿತರು. ಪುನಃ ನೀಚತಮನಾದ ಆ ದುರ್ಯೋಧನನು ಪಾಂಡವರ ಸಮಕ್ಷದಲ್ಲಿಯೇ ದ್ರೌಪದೀವಸ್ತ್ರಾಪಹಾರ ಮಾಡಲು ದುಃಶಾಸನನಿಗೆ ಹೇಳಿದನು. ಆ ದುಷ್ಟನು ಎಳೆಯಲಾರಂಭಿಸಿದನು. ಆಗ ಶ್ರೀಭೀಮಸೇನದೇವರು 'ಮಹಾಧರ್ಮ ಶೀಲರಾದ ಕುರುರಾಜರ ವಂಶದಲ್ಲಿ ಹುಟ್ಟಿದ, ಪಾಪಿಷ್ಠರಲ್ಲಿ ಅತಿ ಅಧಮ (ಬಹು) ಪಾಪಿಯಾದ ಈ ದುಶ್ಶಾಸನನ ಎದೆಯನ್ನು ಎಲ್ಲ ಜಗತ್ತಿನ ಎದುರಿಗೆ ಸೀಳಿ ಅವನ ರಕ್ತವನ್ನು ಪಾನಮಾಡುವೆನು' ಎಂದು ಪ್ರತಿಜ್ಞೆಯನ್ನು ಮಾಡಿದರು. ಯಾವಾಗಲೂ ಶ್ರೀಕೃಷ್ಣನ ಸ್ಮರಣೆಯನ್ನು ಮಾಡುವ ಸ್ವಭಾವವುಳ್ಳ ಶ್ರೀದ್ರೌಪದೀದೇವಿಯು ಆಗ ಶ್ರೀ ಕೃಷ್ಣನನ್ನು ವಿಶೇಷವಾಗಿ ಸ್ಮರಿಸಿದರು.

(ವಿಶೇಷಾಂತಃ – ಅವರು ಸ್ಮರಿಸಿದ್ದು ವಸ್ತ್ರಕ್ಕಾಗಿ ಅಲ್ಲ; ಅವರುಸ್ವಯಂ ಸಮರ್ಥರು. ಆದರೆ ಮುಂದಿನ ಜನರಿಗೆ ಕಷ್ಟ ಬಂದಾಗ ಭಗವತ್ ಸ್ಮರಣೆಮಾಡುವುದು ಯೋಗ್ಯ ಎಂದು ತಿಳಿಸಲು ಮಾಡಿದರು.) ಆಗ ವಸ್ತ್ರದ ಮೇಲೆ ವಸ್ತ್ರ ಬರುತ್ತಲೇ ಇತ್ತು. ಹಾಗೆ ದುಶ್ಶಾಸನನು ಜಗ್ಗಿ ಜಗ್ಗಿ ಶ್ರಾಂತನಾಗಿ, ಬೆವರಿ ಸಭೆಯಲ್ಲಿ ಭೂಮಿಯಲ್ಲಿ ಕುಳಿತನು. ವಸ್ತ್ರರಾಶಿಯು ಮಾತ್ರ ಬಿಳುತ್ತಲೇ ಇತ್ತು. ಅದು ಪರ್ವತ ಪ್ರಾಯವಾಗಿ ಬಿದ್ದಾಗ, ತನ್ನ ಉದ್ದೇಶ ಸಾಧಿಸದೇ ಇದ್ದದ್ದರಿಂದ ಸಿಟ್ಟಿಗೆದ್ದ, ಮೂರ್ಖನಾದ ದುರ್ಯೋಧನನು ತಡಬಡಿ, ಇವಳನ್ನು ಬೇಗನೇ ನಮ್ಮ ಮನೆಗೆ ಕಳಿಸು' ಎಂದು ದುಶ್ಶಾಸನನಿಗೆ ಹೇಳಿದನು. ಅವನ್ನು ಕೇಳಿ ದ್ರೌಪದೀದೇವಿಯರು 'ಭೀಮಸೇನದೇವರು ದುರ್ಯೋಧನನನ್ನ, ಅರ್ಜುನನು ಕರ್ಣನನ್ನು. ಕಪಟದ್ಯೂತ ಮಾಡಿದ ಶಕುನಿಯನ್ನು ಸಹದೇವನು ಕೊಲ್ಲುತ್ತಾರೆ' ಎಂದು ಪ್ರತಿಜ್ಞೆಯನ್ನು ಮಾಡಿದರು. ಅವರೆಲ್ಲರೂ ಆ ಪ್ರತಿಜ್ಞೆಗಳನ್ನು ಅನುಮೋದಿಸಿದರು. ನಕುಲನು ಶಕುನಿಯ ಮಗನ ಸಂಹಾರಮಾಡುವುದಾಗಿ ಪ್ರತಿಜ್ಞೆಗೈದನು. ಆಗ ದುಶ್ಶಾಸನನು ತಮ್ಮ

ಮನೆಗೆ ಕಳಿಸಲೆಂದು ದ್ರೌಪದೀದೇವಿಯನ್ನು ಎಳೆಯಂತಾ ಇದ್ದನು.ಆದನ್ನು ನೋಡಿದ ಶ್ರೀಭೀಮರು ಅರ್ಜುನಾ!ಅರ್ಜುನಾ! ಈ ಸಮಯದಲ್ಲಿಯೂ ಸಹಿಸಿಕೊಂಡಿರುವಡು ಸರಿಯಲ್ಲ. ಈ ಮನುಷ್ಯದೇಹ ಬಂದಾಗ ವಿದ್ಯೆ, ಕರ್ತೃಚರಣೆ, ಹಾಗು ಸತ್ಸಂತತಿಗಳನ್ನು ಸಂಪಾದಿಸಬಹುದು ಎಂದೇ ಆ ದೇಹಕ್ಕೆ ಮಹತ್ವ. ಇಲ್ಲದಿದ್ದರೆ ಈ ದೇಹದಿಂದ ಏನು ಪ್ರಯೋಜನ ?ಮೃತವಾಗಿ ಬಿದ್ದರೆ ಕಾಷ್ಟಕ್ಕೆ(ಕಟ್ಟಿಗೆಗೆ) ಸದೃಶವಾಗುವದು. ಹಾಗೆ ೨–೩ ದಿನಗಳಲ್ಲಿಟ್ಟರೆ ಕೊಳೆತು ಮಲದಂತೆ ದುರ್ಗಂಧಯುಕ್ತವಾಗುವದು. ಆದ್ದರಿಂದ ಈ ದೇಹಕ್ಕೆ ಆ ಮೂರು ಫಲಗಳನ್ನು ಬಿಟ್ಟು ಬೇರೆ ಏನೂ ಪ್ರಯೋಜನವಿಲ್ಲ ಎಂಬುದು ವೇದದ ನಿರ್ಣಯ. ಹೆಂಡತಿಯು ದೂಷಿತಳಾದರೆ ಒಳ್ಳೆಯ ಸಂತತಿಯ ಉತ್ಪಾದನೆ ಶಕ್ಯವಿಲ್ಲ; ಅವನ ಅರ್ಧ ಅಂಗವೇ ದೂಷಿತವಾದ್ದರಿಂದ ಸದ್ಗತಿಯು ಆಗಲಾರದು. ದೂಷಿತಳಾದವಳನ್ನು ಇಟ್ಟುಕೊಂಡು ರಕ್ಷಿಸಿದರೂ ಪಾಪವೇ; ಪೂರ್ಣತ್ಯಜಿಸಿ ಅವಳ ರಕ್ಷಣೆಯನ್ನು ಬಿಟ್ಟರೂ ಪಾಪವೇ, ಆದ್ದರಿಂದ ಈಗ ದೂಷಿತಳಾಗುವ ಪ್ರಸಂಗವಿದ್ದದ್ದರಿಂದ, ಈಗ ಕ್ಷವಿಸದೇ ಇವರೆಲ್ಲರನ್ನು ಬಂಧುಸಹಿತವಾಗಿ ಸಂಹರಿಸಿ ಬಿಡುತ್ತೇನೆ ಎಂದು ಹೇಳುತ್ತಾ ದುರ್ಯೋಧನಾದಿಗಳನ್ನು ತಮ್ಮ ದೃಷ್ಟಿಯಿಂದಲೇ ಸುಟ್ಟಿ ಬಿಡುವಂತೆ ನೋಡಿದರು ಮತ್ತು ಅವರೆಲ್ಲರನ್ನು ಪೂರ್ಣವಾಗಿಸಿ ಬಿಡುವ ಉದ್ದೇಶದಿಂದ ದೊಡ್ಡದೊಂದು ಪರಿಘಾಯುಧವನ್ನು ನೋಡಿದರು. ಆಗ ಅಪಶಕುನಗಳು ಧೃತರಾಷ್ಟ್ರನ ಮನೆಯಲ್ಲಿ ಬಹುವಾಗಿ ಆದವು. ದುರ್ಯೋಧನನ ಅಗ್ನಿಹೋತ್ರ ಶಾಲೆಯಲ್ಲಿ ನರಿಗಳು ಅಪಶಕುನ ಸೂಚಕವಾದ ಧ್ವನಿಮಾಡಿದವು.

ನಿಮಿತ್ತಾನ್ಯಥ ಘೋರಾಣಿ ಕುಪಿತೇ ಮಾರುತಾತ್ಮಜೇ।
ದೃಷ್ಟ್ವಾಽಽಂಬಿಕೇಯೋ ವಿದುರಂ ಪಪ್ರಚ್ಛೈಷಾಂ ಫಲಂ ದ್ರುತಮ್ ॥೩೭೭॥

ಮಾರುತಾತ್ಮಜೇ – ವಾಯುಪುತ್ರರಾದ ಶ್ರೀಭೀಮದೇವರು, ಕುಪಿತೇಸತಿ—ಸಿಟ್ಟಿನಿಂದಕೂಡಿದಾಗ, ಘೋರಾಣಿ ನಿಮಿತ್ತಾನಿ— ಭಯಪ್ರದವಾದ ಅಪಶಕುನಗಳನ್ನು ದೃಷ್ಟ್ವಾ— ನೋಡಿ, ಅಥ – ಅನಂತರ, ಆಂಬಿಕೇಯಃ— ಅಂಬಿಕಾಪುತ್ರನಾದ ಧೃತರಾಷ್ಟ್ರನು, ವಿದುರಂ – ವಿದುರರನ್ನು, ಏಷಾಂ ಫಲಂ – ಈ ಅಪಶಕುನಗಳ ಫಲದ ಬಗ್ಗೆ, ದ್ರುತಮ್—ಕೂಡಲೇ ಪಪ್ರಚ್ಛ – ಕೇಳಿದನು. ॥೩೭೭॥

ಅಹ ತಂ ವಿದುರೋ ಜೇಷ್ಠಂ ಕ್ಷಣೇಽಸ್ಮಿಂಸ್ತವ ಪುತ್ರಕಾಃ।
ಸಾನುಬಂಧಾ ನ ಶಿಷ್ಯಂತಿ ವೃಕೋದರಬಲಾಹತಾಃ ॥೩೭೮॥

ಕ್ರೀಡಸೇಽರ್ಭಕವತ್ತ್ವಂ ಹಿ ಕಂ ಜಿತಂ ಕಂಜಿತಂ ತ್ವಿತಿ।
ಅಥರ್ಮೇಣ ಜಿತಾನತ್ರ ಜಿತಾನ್ಪಶ್ಯಸಿ ಪಾಂಡವಾನ್ ॥೩೭೯॥

ಸ್ತ್ರೀಷು ದ್ಯೂತೇಷು ವಾ ದತ್ತಂ ಮದಾಂಧೇನ ನರೇಣ ವಾ।
ನ ದತ್ತಮಾಹುರ್ವಿದ್ವಾಂಸಸ್ತಸ್ಯ ಬಂಧುಷ್ವಿರೇವ ಚ ॥೩೮೦॥

ಆಹಾರ್ಯಂ ಪುನರಾಹುಶ್ಚ ತಥಾಽಪಿ ನ ತು ಪಾಂಡವೈಃ।
ತತ್ಕೃತಂ ತವ ಪುತ್ರಾಣಾಂ ಖ್ಯಾಪಯದ್ಭಿರಶಿಷ್ಟತಾಮ್ ॥೩೮೧॥

ವಿದುರಃ – ವಿದುರರು, ತಂ – ಪ್ರಶ್ನೆಮಾಡಿದ ಜೇಷ್ಠಂ—ಅಣ್ಣನಾದ ಧೃತರಾಷ್ಟ್ರನನ್ನು ಕುರಿತು, ತವ-ನಿನ್ನ ಪುತ್ರಕಾಃ – ಮಕ್ಕಳು, ಸಾನುಬಂಧಾ ಸಂತಃ – ಬಂಧುಸಹಿತರಾಗಿ, ಅಸ್ಮಿನ್ ಕ್ಷಣೇ—ಈ ಕ್ಷಣದಲ್ಲಿಯೇ, ವೃಕೋದರ ಬಲಾಹತಾಃಸಂತಃ—ಭೀಮಸೇನದೇವರ ಸಾಮರ್ಥ್ಯದಿಂದ ಸಂಹೃತರಾಗಿ, ನ ಶಿಷ್ಯಂತಿ—ಉಳಿಯುವದಿಲ್ಲ. ತ್ವಂ – ನೀನು, ಕಿಂ ಜಿತಂ ಕಿಂ ಜಿತಂ—ಯಾವ ಪಣವು ಗೆಲ್ಲಲ್ಪಟ್ಟಿತು? ಮತ್ತಾವದು ಗೆಲ್ಲಲ್ಪಟ್ಟಿತು. ಇತಿ ಎಂದು (ಕೇಳುತ್ತಾ) ಅರ್ಭಕವತ್ – ಅವಿವೇಕಿ ಬಾಲಕರಂತೆ, ಕ್ರೀಡಸೇ—ಆಡು (ನಡೆಯು)ತ್ತಿರುವಿ. ಅತ್ರ—ಈ ಕಪಟದ್ಯೂತ ಸಭೆಯಲ್ಲಿ,

ಅಧರ್ಮೇಣ ಜಿತಾನ್‌ಪಾಂಡವಾನ್-ಅಧರ್ಮದಿಂದ ಗೆಲ್ಲಲ್ಪಟ್ಟ ಪಾಂಡವರನ್ನು, ಜಿತಾನ್ ಪಶ್ಯಸಿ—ನಿಜವಾಗಿ ಗೆಲ್ಲಲ್ಪಟ್ಟ ವರನ್ನಾಗಿ ಕಾಣುತ್ತಿರುವಿ.ಸ್ತ್ರೀಷಂ ದತ್ತಂವಾ-ಸ್ತ್ರೀಯರ ಬಗ್ಗೆ (ಸ್ತ್ರೀಯರಿಗೆ) ಕೊಟ್ಟದ್ದನ್ನಾಗಲಿ, ದ್ಯೂತೇಷಂ ದತ್ತಂವಾ-ದ್ಯೂತದಾಟದಲ್ಲಿ ಕೊಟ್ಟದ್ದನ್ನಾಗಲಿ, ಮದಾಂಧೇನ ನರೇಣ ದತ್ತಂ - ಮತ್ತ ಪುರುಷನಿಂದ ಕೊಡಲ್ಪಟ್ಟದ್ದನ್ನು, ದತ್ತಂ - ನಿಜವಾಗಿ ಕೊಡಲ್ಪಟ್ಟದ್ದನ್ನಾಗಿ, ವಿದ್ವಾಂಸಃ-ಜ್ಞಾನಿಗಳು, ನ ಆಹುಃ - ಹೇಳುವದಿಲ್ಲ (ಕಿಂತು--ಅದರೆ), ತಸ್ಯ ಬಂಧುಭಿಃ ಕೊಟ್ಟವನ ಬಂಧುಗಳಿಂದ ಪುನಃ-ಮತ್ತೆ, ಆಹಾರ್ಯಂ—ವಾಪಸ್‌ಪಡೆಯಲ್ಪಡಬಹುದೆಂದು, ಎಂದು,—ಆಹುಃ - ಜ್ಞಾನಿಗಳು ಹೇಳುವರು ತಥಾಽಪಿ - ಹಾಗಿದ್ದರೂಕೂಡ, ತವ ಪುತ್ರಾಣಾಂ - ನಿನ್ನ ಮಕ್ಕಳಾದ ದುರ್ಯೋಧನಾದಿಗಳ, ಅಶಿಷ್ಟತಾಂ—ದುಷ್ಟತೆಯನ್ನು ಖ್ಯಾಪಯದ್ಭಿಃಪಾಂಡವೈಃ - ಲೋಕಪ್ರಸಿದ್ಧಮಾಡುವ ಉದ್ದೇಶವುಳ್ಳ ಪಾಂಡವರಿಂದ ತತ್ - ಪುನಃವಾಪಸ ತೆಗೆದುಕೊಳ್ಳುವಕಾರ್ಯವು, ನ ಕೃತಂ - ಮಾಡಲ್ಪಟ್ಟಿಲ್ಲ ಇತಿ-ಎಂದು, ಆಹ - ಹೇಳಿದರು. ॥೩೭೮॥೩೭೯॥೩೮೦॥೩೮೧॥

ಇತ್ಯುಕ್ತ ಆಹಾಂಬಿಕೇಯೋ ನಿಮಿತ್ತಾನಾಂ ಫಲಂ ಕಥಮ್ ।
ನ ಭವೇದಿತಿ ಸ ಪ್ರಾಹ ದ್ಯುತಂ ಕೃಷ್ಣಾ ವಿಮುಚ್ಯತಾಮ್ ॥೩೮೨॥

ತೋಷಯಸ್ವ ವರೈಶ್ಚೈನಾಮನ್ಯಥಾ ತೇ ಸುತಾನ್ಹತಾನ್ ।
ವಿದ್ಧಿ ಭೀಮೇನ ನಿಷ್ಪಿಷ್ಟಾನ್ನಾತ್ರ ತೇ ಸಂಶಯೋ ಭವೇತ್ ॥೩೮೩॥

ಕೃಷ್ಣಾ ಚ ಪಾಂಡವಾಶ್ಚೈವ ತಪೋವೃದ್ಧಿಮಭೀಪ್ಸವಃ।
ತಪಸಾ ನೈವ ಧಕ್ಷ್ಯಂತಿ ತೇನ ಜೀವಂತಿ ತೇ ಸುತಾಃ ॥೩೮೪॥

ತಥಾಪಿಯದಿ ಕೃಷ್ಣಾಂತ್ವಂ ನವೋಚಯಸಿತೇ ಸುತಾನ್ ।
ಹನಿಷ್ಯತಿನ ಸಂದೇಹೋ ಬಲೇನೈವ ವೃಕೋದರ : ॥೩೮೫॥

ಇತಿ ಉಕ್ತ : ಆಂಬಿಕೇಯಂ : — ಈ ರೀತಿ ವಿದುರರಿಂದ ಹೇಳಲ್ಪಟ್ಟ ಧೃತರಾಷ್ಟ್ರನು, ನಿಮಿತ್ತಾನಾಂ ಫಲಂ - ಈ ಅಪಶಕುನಗಳ ಫಲವು, ಕಥಂ — ಹೇಗೆ, ನ ಭವೇತ್ — ಆಗದಂತಾ ದೀತು ? ಇತಿ - ಎಂದು, ಆಹ —ಹೇಳಿ (ಕೇಳಿ) ದನು. ಸಃ —ಆ ವಿದುರರು, ದ್ಯೂತಂ — ಕೂಡಲೇ ಕೃಷ್ಣಾ — ದ್ರೌಪದೀದೇವಿಯು, ವಿಮುಚ್ಯತಾಂ—ಬಿಡಲ್ಪಡಲಿ, ಚ - ಮತ್ತು, ಏನಾಂ—ಇವಳನ್ನು, ವರೈಃ - ವರಗಳ ಪ್ರದಾನದಿಂದ, ತೋಷಯಸ್ವ—ಸಂತೋಷಪಡಿಸು, ಅನ್ಯಥಾ ಹೀಗೆ ಮಾಡದಿದ್ದರೆ, ತೇ ಸುತಾನ್ - ನಿನ್ನ ಮಕ್ಕಳನ್ನು, ಭೀಮೇನ ನಿಷ್ಪಿಷ್ಟಾನ್‌ಮೃತಾನ್ - ಭೀಮಸೇನನಿಂದ ಮರ್ದಿತರಾಗಿ ಸತ್ತವರನ್ನಾಗಿ, ವಿದ್ಧಿ - ತಿಳಿ ಅತ್ರ - ಈ ಒಗ್ಗೆ, ತೇ—ನಿನಗೆ, ಸಂಶಯಃ - ಸಂಶಯವು, ನ ಭವೇತ್ - ಆಗಕೂಡದು, ಚ -- ಯಾವ ಕಾರಣದಿಂದ ಕೃಷ್ಣಾ ಚ - ದ್ರೌಪದೀ ದೇವಿಯಾಗಲಿ, ಪಾಂಡವಾಃ ಚ - ಪಾಂಡವರಾಗಲಿ, ತಪೋವೃದ್ಧಿಂ ಅಭೀಪ್ಸವಃ ಏವ—ತಪಸ್ಸಿನ ವೃದ್ಧಿಯನ್ನು ಅಪೇಕ್ಷಿಸುವವರೇ ಆಗಿರುವರೋ, (ತಸ್ಮಾತ್ ಆ ಕಾರಣದಿಂದ). ತಪಸಾ - ತಮ್ಮ ತಪಸ್ಸಾಮರ್ಥ್ಯದಿಂದ, (ನಿನ್ನ ಮಕ್ಕಳನ್ನು) ನೈವ ಧಕ್ಷ್ಯಂತಿ-ಸುಡುತ್ತಿಲ್ಲ, ತೇನ -- ಆ ಕಾರಣದಿಂದ, ತೇ ಸುತಾಃ —ನಿನ್ನ ಮಕ್ಕಳು, ಜೀವಂತಿ—ಬದುಕಿರುತ್ತಾರೆ. ತಥಾಪಿ—ಹಾಗಿದ್ದರೂ ಕೂಡ, ನ ಮೋಚಯಸಿ (ಚೇತ್) ಬಿಡುವದಿಲ್ಲವಾದರೆ, ತೇ ಸುತಾನ್— ನಿನ್ನ ಮಕ್ಕಳನ್ನು ವೃಕೋದರಃ - ಭೀಮಸೇನನು, ಬಲೇನ ಏವ — ತನ್ನ ದೇಹಬಾಹು ಶಕ್ತಿಯಿಂದಲೇ (ತಪಸ್ಸಾಮರ್ಥ್ಯದಿಂದ ಅಲ್ಲ), ಹನಿಷ್ಯತಿ ಸಂಹರಿಸುವನು, ನ ಸಂದೇಹಃ — ಸಂದೇಹವಿಲ್ಲ ಇತಿ-ಎಂದು, ಪ್ರಾಹ - ಹೇಳಿದರು. ॥೩೮೨—೩೮೩ - ೩೮೪ — ೩೮೫॥

ಇತೀರಿತೋ ವಿನಿರ್ಭರ್ತ್ಸ್ಯ ಪುತ್ರಂ ದುಃಶಾಸನಂ ನೃಪಃ ।
ಅಮೋಚಯದ್ವರೈಶ್ಚೈನಾಂ ಧಂದಯಾಮಾಸ ಪಾರ್ಷತೀಮ್ ॥೩೮೬॥

ಇತಿ ಈರಿತಃ—ಈ ರೀತಿ ವಿದುರರಿಂದ ಹೇಳಲ್ಪಟ್ಟ, ನೃಪಃ — ಧೃತರಾಷ್ಟ್ರರಾಜನು, ಪುತ್ರಂ ದುಃಶಾಸನಂ— ಮಗನಾದ ದುಃಶಾಸನನನ್ನು, ವಿನಿರ್ಭರ್ತ್ಸ್ಯ —ಬೈದು, ಪಾರ್ಷತೀಂ —ದ್ರೌಪದೀದೇವಿಯನ್ನು, ಅಮೋಚಯತ್-ಬಿಡಿಸಿದನು. ಚ—ಹಾಗೂ, ಏನಾಂ — ಇವಳನ್ನು, ವರೈಃ—ವರಗಳಿಂದ, ಧಂದಯಾಮಾಸ —ಸಂತೋಷಪಡಿಸಿದನು. ॥೩೮೬॥

ಛಂದಿತಾ ಸಾ ವರೈಸ್ತೇನ ಧರ್ಮೋಭಾಗವತೇ ಸ್ಥಿತಾ ।
ನೈವಾತ್ಮನೋ ವರಂ ವವ್ರೇ ವವ್ರೇ ತೇಷಾಂ ವಿಮೋಕ್ಷಣಮ್ ॥೩೮೭॥

ವರೈಃ – ವರಗಳನ್ನು ಕೊಡುವದರಿಂದ, ತೇನ – ಆ ಧೃತರಾಷ್ಟ್ರನಿಂದ. ಛಂದಿತಾ – ಸಮಾಧಾನಮಾಡಲ್ಪಟ್ಟ (ರವಿಸಲ್ಪಟ್ಟ), ಭಾಗವತೇಧರ್ಮೇ ಸ್ಥಿತಾ – ಭಾಗವತಧರ್ಮಾನುಷ್ಠಾನದಲ್ಲಿರುವ, ಸಾ - ಆ ದ್ರೌಪದೀದೇವಿಯು ಆತ್ಮನಃ ವರಂ – ತನ್ನ ಸ್ವಂತಕ್ಕಾಗಿ ವರವನ್ನು, ನೈವ ವವ್ರೇ – ಕೇಳಲಿಲ್ಲ. ತೇಷಾಂ ವಿಮೋಕ್ಷಣಂ - ಆ ಪಾಂಡವರ ಬಿಡುಗಡೆಯನ್ನು. ವವ್ರೇ—(ವರಿಸಿ) ಕೇಳಿದಳು, ॥೩೮೭॥

ಯುಧಿಷ್ಠಿರಸ್ಯ ಸಭ್ರಾತುಸ್ಸರಾಷ್ಟ್ರಸ್ಯ ವಿಮೋಕ್ಷಣಮ್ ।
ದದೌ ನೃಪೋಽಸ್ಯಾನ ಪುನಶ್ಛಂದ್ಯಮಾನಾs ಪಿ ಸಾsವೃಣೋತ್॥೩೮೮॥

ನೃಪಃ – ಧೃತರಾಷ್ಟ್ರರಾಜನು, ಅಸ್ಯಾಃ—ಈ ದ್ರೌಪದೀದೇವಿಗೆ, ಸಭ್ರಾತೃಃ – ಸಹೋದರ ಸಹಿತನಾದ, ಸರಾಷ್ಟ್ರಸ್ಯ—ರಾಷ್ಟ್ರ ಸಹಿತನಾದ, ಯುಧಿಷ್ಠಿರಸ್ಯ - ಧರ್ಮರಾಜನ, ವಿಮೋಕ್ಷಣಮ್ – ಬಿಡುಗಡೆಯನ್ನು, ದದೌ – ವರವನ್ನಾಗಿ ಕೊಟ್ಟನು, ಪುನಃ ಛಿದ್ಯಮಾನಾ ಅಪಿ – ಮತ್ತೆ ವರವನ್ನು ಕೇಳಿಕೋ ಎಂದು ಧೃತರಾಷ್ಟ್ರನಿಂದ ಹೇಳಲ್ಪಟ್ಟವಳಾದರೂ ಕೂಡ, ಸಾ – ಆ ದ್ರೌಪದೀದೇವಿಯು, ನ ಅವೃಣೋತ್ – ಯಾವದೇ ವರವನ್ನು ಕೇಳಲಿಲ್ಲ. ॥೩೮೮॥

ಭರ್ತುರ್ವಿಷ್ಣೋಶ್ಚ ನಾನ್ಯಸ್ಮಾದ್ವರಸ್ವೀಕಾರ ಇಷ್ಯತೇ ।
ಏವಂ ಹಿ ಭಗವದ್ಧರ್ಮಸ್ತಸ್ಮಾತ್ತಾಸ್ನಾವೃಣೋತ್ವರಮ್॥೩೮೯॥

ಭರ್ತುಃ – ಗಂಡನದೆಶೆಯಿಂದ, ಚ—ಮತ್ತು ವಿಷ್ಣೋಃ—ಶ್ರೀಮನ್ನಾರಾಯಣನದೆಶೆಯಿಂದ, ಅನ್ಯಸ್ಮಾತ್ – ಬೇರೆಯವರಿಂದ, ವರಸ್ವೀಕಾರಃ – ವರವನ್ನು ತೆಗೆದುಕೊಳ್ಳುವದು, ನ ಇಷ್ಯತೇ (ಭಾಗವತಧರ್ಮಾನುಷ್ಠಾನದಲ್ಲಿರುವ ಸ್ತ್ರೀಯರಿಗೆ) ವಿಹಿತವಲ್ಲ. ಏವಂ ಹಿ ಭಗವದ್ಧರ್ಮಃ – ಈ ರೀತಿಯಾಗಿ ಭಾಗವತಧರ್ಮವು. ತಸ್ಮಾತ್ – ಆದ್ದರಿಂದ ಸಾ – ಭಾಗವತ ಧರ್ಮಗಳಲ್ಲಿ ನಿಷ್ಠಳಾದ ಆ ದ್ರೌಪದೀದೇವಿಯು, ವರಮ್ – ಬೇರೆ ವರವನ್ನು, ನ ಅವೃಣೋತ್— ವರಿಸಲಿಲ್ಲ,॥೩೮೯॥

ಅವತಾರಿಕೆಃ – ಪತಿವಿಮೋಕ್ಷಣವರವನ್ನಾದರೂ ಹೇಗೆ ಕೇಳಿದಳು? ಎಂಬ ಶಂಕೆಗೆ ಉತ್ತರವನ್ನು ಕೊಡುತ್ತಾರೆ. –

ಅಧರ್ಮತೋಽಹೃತತ್ವಾತ್ತು ತದ್ದಾನಂ ನ ವರೋ ಭವೇತ್ ।
ಇತಿ ಮತ್ವಾ ಪಾಂಡವಾನಾಂ ವವ್ರೇ ಕೃಷ್ಣಾ ವಿಮೋಕ್ಷಣಮ್ ॥೩೯೦॥

ಅಧರ್ಮತಃ – ಅಧರ್ಮದಿಂದ, ಹೃತತ್ವಾತ್ —ತೆಗೆದುಕೊಳ್ಳಲ್ಪಟ್ಟದ್ದರಿಂದ. ತದ್ದಾನಂ - ಅಂಥದರ ಕೊಡುವಿಕೆಯು, ವರಃ ನ ಭವೇತ್ – ವರವೇ ಆಗಲಾರದು. ಇತಿ —ಎಂದು. ಮತ್ವಾ —ತಿಳಿದು ಪಾಂಡವಾನಾಂ ವಿಮೋಕ್ಷಣಂ— ಪಾಂಡವರ ಮೋಚನವನ್ನು. ಕೃಷ್ಣಾ – ದ್ರೌಪದೀದೇವಿಯು, ವವ್ರೇ—ಕೇಳಿದಳು. ॥೩೯೦॥

ಅವತಾರಿಕೆಃ—ಇನ್ನೊಂದು ರೀತಿಯಿಂದಲೂ ಅವಳು ವರವನ್ನು ಕೇಳಿದ್ದು ಭಾಗವತಧರ್ಮವಿರುದ್ಧವಲ್ಲ ಎಂದು ತಿಳಿಸುತ್ತಾರೆ—

ಶ್ವಶುರಾದ್ಯೈಹಿಕವರಾಃ ಕ್ಷತ್ರಿಯಾಯಾಸ್ತ್ರಯೋ ಯತಃ ।
ಉಕ್ತಾಶ್ಯತಂ ಚ ವಿಪ್ರಾಯಾ ಧರ್ಮೇ ಭಾಗವತೇ ತತಃ ।
ಹೇತುನಾsನೇನ ವವ್ರೇ ಸಾಸಾನ್ಯತ್ಕಿಂಚಿದತಃ ಪರಮ್ ॥೩೯೧॥

ಯತಃ —ಯಾವಕಾರಣದಿಂದ, ಭಾಗವತೇ ಧರ್ಮೇ – ಭಾಗವತಧರ್ಮಗಳಲ್ಲಿ, ಕ್ಷತ್ರಿಯಸ್ಯಾಃ–ಕ್ಷತ್ರಿಯಸ್ತ್ರೀಗೆ, ಶ್ವಶುರಾತ್ —ಮಾವನಿಂದ, ತ್ರಯಃ ಐಹಿಕವರಾಃ – ಐಹಿಕಫಲದ ಬಗೆಗೆ ಮೂರುವರಗಳು, ಉಕ್ತಾಃ – ಹಿತವಾಗಿ ಅನುಮತಿಸಲ್ಪಟ್ಟಿವೆಯೋ, ವಿಪ್ರಾಯಶಃ ಚ—ಬ್ರಾಹ್ಮಣಸ್ತ್ರೀಗೆ, ಶತಂ – ನೂರು ವರಗಳು ಅನುಮತಿಸಲ್ಪಟ್ಟವೆಯೋ, ತತಃ— ಆದ್ದರಿಂದ, ಅನೇನ ಹೇತುನಾ— ಈ ಕಾರಣದಿಂದ, ಅತಃಪರಂ ಅನ್ಯತ್ ಕಿಂಚಿತ್ —ಪತಿವಿಮೋಕ್ಷಣಕ್ಕಿಂತ ಹೆಚ್ಚಾಗಿ ಬೇರೆ ಯಾವ ವರವನ್ನು, ಸಾ—ದ್ರೌಪದೀದೇವಿಯು, ನ ವವ್ರೇ—ವರಿಸಲಿಲ್ಲ. ॥೩೯೦॥

ತತೋ ವಿಮುಕ್ತಾಃ ಪ್ರಯಯುಶ್ಚ ಪಾರ್ಥಾ ಗುರೂನ್ಪ್ರಣಮ್ಯ ಸ್ವಪುರಂ ಸಕೃಷ್ಣಾಃ ।
ದುರ್ಯೋಧನಾನಂತರಜೋ ಜಗಾದ ತಾತಂ ನಿಜಂ ಪಾಪಕೃತಾಂ ಪ್ರಧಾನಃ ॥೩೯೧॥

ತತಃ —ಆ ರೀತಿ ಧೃತರಾಷ್ಟ್ರನು ವರವನ್ನು ಕೊಟ್ಟ ನಂತರ, ವಿಮುಕ್ತಾಃ—ಬಿಡಲ್ಪಟ್ಟಂತಹ, ಸಕೃಷ್ಣಾಃ—ಪಾಂಡವಾಃ—ದ್ರೌಪದೀಸಹಿತರಾದ ಪಾಂಡವರು, ಗುರೂನ್—ಹಿರಿಯರನ್ನು, ಪ್ರಣಮ್ಯ – ನಮಸ್ಕರಿಸಿ, ಸ್ವಪುರಂ–ತಮ್ಮ ಪಟ್ಟಣ(ಇಂದ್ರಪ್ರಸ್ಥ) ಕ್ಕೆ, ಯಯುಃ – ಹೋದರು. (ತತಃ – ಅನಂತರ,) ಪಾಪಕೃತಾಂ ಪ್ರಧಾನಃ – ಪಾಪಿಷ್ಠರಲ್ಲಿ ಪ್ರಧಾನನಾದ, ದುರ್ಯೋಧನಾನಂತರಜಃ—ದುರ್ಯೋಧನನ ತಮ್ಮನಾದ ದುಶ್ಶಾಸನನು, ನಿಜಂ ತಾತಂ – ತನ್ನ ತಂದೆಯನ್ನು ಕುರಿತು, ಜಗಾದ—(ಈ ಮುಂದಿನಂತೆ) ಹೇಳಿದನು. ॥೩೯೨॥

ಸಮಸ್ತಪಾಂಡವಶ್ರಿಯಂ ಸಮಾಗತಾಮಹೋ ಪುನಃ ।
ವ್ಯಮೋಚಯೋ ವೃಕೋದರಾದ್ವಧಶ್ಚ ನೋ ಧ್ರುವೋ ಭವೇತ್ ॥೩೯೩॥

(ಹೇ ತಾತ – ಏಲೋ ತಂದೆಯೇ), ಸಮಾಗತಾಂ – ಸರಳವಾಗಿ ಬಂದಂಥ, ಸಮಸ್ತಪಾಂಡವಶ್ರಿಯಂ – ಪಾಂಡವರ ಎಲ್ಲ ಸಂಪತ್ತನ್ನೂ, ವ್ಯಮೋಚಯಃ—ಬಿಟ್ಟು ಕೊಟ್ಟಿಯಲ್ಲೇ, ಅಹೋ—ಬಹಳ ಆಶ್ಚರ್ಯ, ವೃಕೋದರಾತ್—ಭೀಮಸೇನನಿಂದ, ನಃ – ನಮ್ಮ, ವಧಃ ಚ—ವಧವಾದರೂ, ಧ್ರುವಃ ಭವೇತ್— ಖಂಡಿತವಾದದ್ದು ಆಗುವದು. ॥೩೯೩॥

ಅತಃ ಪುನಶ್ಚ ಪಾಂಡವಾನ್ ಸಮಾಹ್ವಯಸ್ವ ನಃ ಕೃತೇ ।
ಪುನಶ್ಚ ದೇವನಂ ಭವೇಜ್ಜಿತಾ ವನಂ ಪ್ರಯಾಂತು ಚ ॥೩೯೪॥

ಅತಃ – ಆದ್ದರಿಂದ, ಪುನಃ—ಮತ್ತೆ, ನಃ ಕೃತೇ—ನಮ್ಮ ಸಲುವಾಗಿ, ಪಾಂಡವಾನ್ – ಪಾಂಡವರನ್ನು, ಸಮಾಹ್ವಯಸ್ವ – ಕರೆಯಿಸು. ಪುನಃ ದೇವನಂ ಭವೇತ್—ಮತ್ತೆ ದ್ಯೂತವು ನಡೆಯಲಿ, ಚ – ಮತ್ತು, ಜಿತಾಃ—ನಮ್ಮಿಂದ ಗೆಲ್ಲಲ್ಪಟ್ಟ ಪಾಂಡವರು, ವನಂ ಪ್ರಯಾಂತು - ವನಕ್ಕೆ ಹೋಗಲಿ. ॥೩೯೪॥

ತೇನೋಕ್ತಸ್ಯ ತಥಾ ರಾಜ್ಞಾ ಪಾಂಡವಾನ್ಪುನರಾಹ್ವಯತ್ ।
ಪುನಃಪಿತ್ರಾ ಸಮಾಹೂತೋ ದೇವನಾಯ ಯುಧಿಷ್ಠಿರಃ।
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚಾಗಮತ್ಸಭಾಮ್ ॥೩೯೫॥

ತೇನ – ಆ ದುಃಶಾಸನನಿಂದ, ತಥಾ ಉಕ್ತಃ—ಆ ರೀತಿ ಹೇಳಲ್ಪಟ್ಟ, ಸಃ ರಾಜಾ - ಆ ಧೃತರಾಷ್ಟ್ರರಾಜನು, ಪಾಂಡವಾನ್ – ಪಾಂಡವರನ್ನು, ಪುನಃ ಆಹ್ವಯತ್—ಮತ್ತೆ ಕರೆದನು. ಪಿತ್ರಾ—ದೊಡ್ಡಪ್ಪ ಧೃತರಾಷ್ಟ್ರನಿಂದ, ದೇವನಾಯ – ದ್ಯೂತಕ್ಕಾಗಿ, ಪುನಃ ಸಮಾಹೂತಃ—ಮತ್ತೆ ಕರೆಯಲ್ಪಟ್ಟ, ಯುಧಿಷ್ಠಿರಃ—ಧರ್ಮರಾಜನು, ಭ್ರಾತೃಭಿಃ ಕೃಷ್ಣಯಾ ಚ ವಾರ್ಯಮಾಣಃ ಅಪಿ—ಸಹೋದರರಿಂದ, ಹಾಗು ದ್ರೌಪದೀದೇವಿಯಿಂದ, ತಡೆಯಲ್ಪಟ್ಟರೂ ಕೂಡ, ಸಭಾಂ – ಆ ಕೌರವರ ಸಭೆಗೆ, ಅಗಮತ್ – ಹೋದನು. ॥೩೯೫॥

ದ್ವಾದಶಾಬ್ದಂ ವನೇವಾಸಮುಜ್ಞಾತಂ ತ್ವೇಕವತ್ಸರಮ್ ॥೩೯॥

ವಾಸಂ ಪ್ರಸಿದ್ಧನೃಪತೇಃ ಪುರೇನೈವಾತಿದೂರತಃ ।
ಕೃಷ್ಣಾಯಾ ಃ ಪಾಂಡವಾನಾಂ ವಾ ದರ್ಶನೇ s ಜ್ಞಾತವಾಸಿನಾಮ್ ॥೩೯॥

ಏಕಸ್ಯಾಪಿ ಸಮುಸ್ತಾನಾಂ ದ್ವಾದಶಾಬ್ದಂ ಪುನರ್ವನಮ್ ।
ವತ್ಸರಾಜ್ಞಾತವಾಸಂ ಚ ತ್ಯಾಗೇಽಪ್ಯುಕ್ತವಿಧೇಸ್ತಥಾ॥
ದುರ್ಯೋಧನಃ ಪಣಂ ಚಕ್ರೇ ಬುಧ್ಯಾ ದುಃಶಾಸನೋಕ್ತಯಾ॥೩೯॥

ದ್ವಾದಶಾಬ್ದಂ – ಹನ್ನೆರಡುವರ್ಷಗಳವರೆಗೆ, ವನೇವಾಸಂ – ಅರಣ್ಯದಲ್ಲಿ ವಾಸವನ್ನು, ತು – ಹಾಗೂ, ನೈವಾತಿ ದೂರತಃ – ಅತಿದೂರವಲ್ಲದ, ಪ್ರಸಿದ್ಧನೃಪತೇಃ – ಪ್ರಸಿದ್ಧರಾಜನ, ಪುರೇ – ನಗರದಲ್ಲಿ ಏಕವತ್ಸರಮ್ ಅಜ್ಞಾತಂ ವಾಸಂ – ಒಂದು ವರ್ಷಪರ್ಯಂತ ಅಜ್ಞಾತವಾಸವನ್ನು, ಅಜ್ಞಾತವಾಸಿನಾಂ – ಅಜ್ಞಾತವಾಸದಲ್ಲಿರುವಂಥ, ಪಾಂಡವಾನಾಂ – ಪಾಂಡವರಲ್ಲಿ, ಏಕಸ್ಯಾಪಿ ದರ್ಶನೇ – ಒಬ್ಬರ ದರ್ಶನವಾದರೂ ಕೂಡ, ವಾ – ಅಥವಾ, ಕೃಷ್ಣಾಯಾಃದರ್ಶನೇ – ದ್ರೌಪದೀದೇವಿಯದರ್ಶನವಾದರೆ, ಪುನಃ – ಮತ್ತೆ, ಸಮುಸ್ತಾನಾಂ ಎಲ್ಲರಿಗೂ ದ್ವಾದಶಾಬ್ದಂ ವನಂ-ಹನ್ನೆರಡು ವರ್ಷ ವನವಾಸವನ್ನು, ಚ-ಮತ್ತು ವತ್ಸರಾಜ್ಞಾತವಾಸಂ – ಒಂದು ವರ್ಷ ಅಜ್ಞಾತವಾಸವನ್ನು, ಮತ್ತು ಅಪಿ ಉಕ್ತ ವಿಧೇಃ ತ್ಯಾಗೇ-ವಿಧಿಸಿದ ಹನ್ನೆರಡುವರ್ಷ ವನವಾಸ ಒಂದು ವರ್ಷ ಅಜ್ಞಾತವಾಸಗಳನ್ನು ಮಾಡಲು ಅಸಾಮರ್ಥ್ಯದಿಂದ ತ್ಯಜಿಸಿದರೆ, ತಥಾ – ಹಾಗೆ ಮೊದಲು ಹೇಳಿದಂತೆ ಮತ್ತೆ ಹನ್ನೆರಡುವರ್ಷ ವನವಾಸ ಒಂದು ವರ್ಷ ಅಜ್ಞಾತವಾಸಗಳನ್ನು, ದುರ್ಯೋಧನಃ ದುರ್ಯೋಧನನು, ದುಃಶಾಸನೋಕ್ತಯಾ ಬುಧ್ಯಾ – ದುಃಶಾಸನನು ಹೇಳಿಕೊಟ್ಟ ಬುದ್ಧಿಯ ಪ್ರಕಾರ, ಪಣಂ ಚಕ್ರೇ – ಎರಡನೆಯ ದ್ಯೂತಕ್ಕೆ ಪಣವನ್ನಾಗಿ ಮಾಡಿದನು. ॥೩೯-೩೯-೩೯॥

ಗಾಂಧಾರೇಣ ಪುನಶ್ಚಾಕ್ಷಹೃದಯಜ್ಞೇನ ಧರ್ಮರಾಜಃ ॥
ಪರಾಜಿತೋ ವನಂ ಯಾತುಮೈಚ್ಛತ್ಸಭ್ರಾತೃಕೋ ಯದಾ ॥೩೯॥

ತದಾ ನನರ್ತ ಪಾಪಕೃತ್ಸುಯೋಧನಾನುಜೋ ಹಸನ್ ।
ವದಂಶ್ಚ ಮಾರುತಾತ್ಮಜಂ ಪುನಃ ಪುನಶ್ಚ ಗೌರಿತಿ ॥೪೦೦॥

ಯದಾ – ಯಾವಾಗ, ಪುನಃ ಚ – ಮತ್ತೆ (ಎರಡನೇಮ್ಮೊತದಲ್ಲಿ) ಧರ್ಮರಾಜಃ – ಧರ್ಮರಾಜನು, ಅಕ್ಷ ಹೃದಯಜ್ಞೇನ – ಲೆತ್ತದರಹಸ್ಯವನ್ನು ತಿಳಿದ, ಗಾಂಧಾರೇಣ – ಶಕುನಿಯಿಂದ, ಪರಾಜಿತ ಸನ್ – ಸೋತವನಾಗಿ, ಸಭ್ರಾತೃಕಃ ಸನ್ – ಸಹೋದರ ಸಮೇತನಾಗಿ, ವನಂ ಯಾತುಂ – ವನಕ್ಕೆ ಹೋಗಲು, ಐಚ್ಛತ್ – ಇಚ್ಛಿಸಿದನೋ, ತದಾ – ಆಗ, ಪಾಪಕೃತ್-ಪಾಪಿಯಾದ, ಸುಯೋಧನಾನುಜಃ – ದುರ್ಯೋಧನನ ತಮ್ಮನಾದ ದುಃಶ್ಶಾಸನನು, ಹಸನ್ ಸನ್ – ನಗುವವನಾಗಿ, ಚ – ಮತ್ತು, ಮಾರುತಾತ್ಮಜಂ – ವಾಯು ಪುತ್ರರಾದ ಶ್ರೀಭೀಮಸೇನದೇವರನ್ನು ಕುರಿತು, ಗೌಃ ಇತಿ – ಎತ್ತು, ಗೂಳಿ(ಹೋರಟಿದೆ) ಎಂದು, ಪುನಃ ಪುನಃ – ಮೇಲಿಂದಮೇಲೆ, ವದನ್ ಸನ್ – ಹೇಳುವವನಾಗಿ ನನರ್ತ – (ಅಣಗಿಸುತ್ತಾ) ಕುಣಿದನು. ॥೩೯-೪೦೦॥

ಉವಾಚ ಚ ಪುನಃ ಕೃಷ್ಣಾಂ ನೃತ್ಯನ್ನೇವ ಸಭಾತಲೇ ।
ಅಪತಿರ್ಭ್ಯಸಿ ಕಲ್ಯಾಣಿ ಗಚ್ಛ ದುರ್ಯೋಧನಾಲಯಮ್ ॥೪೦೧॥

ಚ—ಮತ್ತು, ಸಭಾತಲೇ— ಸಭೆಯಲ್ಲಿ, ಕೃಷ್ಣಾಂ – ದ್ರೌಪದೀದೇವಿಯನ್ನು ಕುರಿತು, ಕಲ್ಯಾಣೀ – ಶೋಭನರೂಪವುಳ್ಳ ದ್ರೌಪದಿಯೇ, ಹಿ—ಯಾವಕಾರಣದಿಂದ, ಅಪತಿಃ ಅಸಿ – ಪತಿರಹಿತಳಿರುವೆಯೋ, (ತಸ್ಮಾತ್ – ಆ ಕಾರಣದಿಂದ), ದುರ್ಯೋಧನಾಲಯಂ ಗಚ್ಛ – ದುರ್ಯೋಧನನ ಗೃಹಕ್ಕೆ ನಡೆ, ಇತಿ – ಎಂದು, ನೃತ್ಯನ್ ಏವ ಉವಾಚ – ಕುಣಿಯುತ್ತಲೆ ಹೇಳಿದನು. ॥೪೨೧॥

ಏತೇ ಽಖಿಲಾಷ್ ಪಂಡತಿಲಾಃ ತಮೋಽಂಧಂ ಪ್ರಾಪ್ತಾ ನ ಚೈಷಾಂ ಪುನರುತ್ಥಿತಿಃ ಸ್ಯಾತ್ ।
ಇತಿ ಬ್ರುವಾಣೋಽನುಚಕಾರ ಭೀಮಂ ತದಾಽಹಸನ್ ಧಾರ್ತರಾಷ್ಟ್ರಾಶ್ಚ ಸರ್ವೇ ॥೪೦೨॥

ಏತೇ ಅಖಿಲಾಃ—ಇವರೆಲ್ಲರೂ, ಪಂಡತಿಲಾಃ— ಜೊಳ್ಳು ಎಳ್ಳುಗಳಂತಿರುವವರು (ಸಾಮರ್ಥ್ಯರಹಿತರು), ಅಂಧತಮಃ ಪ್ರಾಪ್ತಾಃ – ಕಗ್ಗತ್ತಲೆಯಲ್ಲಿ ಬಿದ್ದವರು; ಏಷಾಂ – ಇವರಿಗೆ, ಪುನಃ ಉತ್ಥಿತಿಃ – ಮತ್ತೆ ಮೇಲೇಳುವದೂ, ನ ಸ್ಯಾತ್ – ಆಗಲಾರದು, ಇತಿ—ಎಂದು, ಬ್ರುವಾಣಃ ಸನ್ – ಹೇಳುವವನಾಗಿ, ಭೀಮಂ—ಶ್ರೀಭೀಮಸೇನದೇವರನ್ನು, ಅನುಚಕಾರ – (ಅವರು ಮಾಡಿದಂತೆ ಮಾಡಿ, ನಡೆದಂತೆ ನಡೆದು) ಅಣಕಿಸಿದನು. ತದಾ—ಆಗ, ಸರ್ವೇಧಾರ್ತರಾಷ್ಟ್ರಾಃ ಚ – ಧೃತರಾಷ್ಟ್ರನ ಎಲ್ಲ ಮಕ್ಕಳೂ ಕೂಡ, ಅಹಸನ್—ನಕ್ಕರು. ॥೪೦೨॥

ತದಾಽಕರೋದ್ಭೀಮಸೇನಃ ಪ್ರತಿಜ್ಞಾಂ ಹಂತಾಽಸ್ಮಿ ವೋ ನಿಖಿಲಾನ್ಸಂಗರೇಽಹಮ್।
ಇತೀರಿತೇ ಶರಣಂ ದ್ರೋಣಮೇವ ಜಗ್ಮುಷ್ಸಮಸ್ತಾ ಧೃತರಾಷ್ಟ್ರಪುತ್ರಾಃ ॥೪೦೩॥

ತದಾ – ಆಗ, ಭೀಮಸೇನಃ ಭೀಮಸೇನದೇವರು, ಅಹಂ – ನಾನು, ಸಂಗರೇ–ಯುದ್ಧದಲ್ಲಿ, ವಃ ನಿಖಿಲಾನ್– ನಿಮ್ಮೆಲ್ಲರನ್ನು, ಹಂತಾ ಅಸ್ಮಿ – ಕೊಲ್ಲುವವನು ಆಗುತ್ತೇನೆ, ಇತಿ ಪ್ರತಿಜ್ಞಾಂ ಎಂಬ ಪ್ರತಿಜ್ಞೆಯನ್ನು, ಅಕರೋತ್ – ಮಾಡಿದರು. ಇತಿ ಈ ರೀತೇಸತಿ- ಈ ರೀತಿಯಾಗಿ ಭೀಮಸೇನದೇವರು ಪ್ರತಿಜ್ಞೆಮಾಡುತ್ತಿರಲು, ಸರ್ವೇಸ್ತಾಃ ಧೃತರಾಷ್ಟ್ರಪುತ್ರಾಃ- ಧೃತರಾಷ್ಟ್ರನ ಎಲ್ಲ ಮಕ್ಕಳೂ, ದ್ರೋಣಂ ಏವ – ದ್ರೋಣಾಚಾರ್ಯರನ್ನೇ, ಶರಣಂ ಜಗ್ಮುಃ—ಮೊರೆಹೊಂದಿದರು. ॥೪೦೩॥

ಅವತಾರಿಕೆ:— ದ್ರೋಣಾಚಾರ್ಯರನ್ನು ಮೊರೆ ಹೋಗಲು ಕಾರಣವನ್ನು ತಿಳಿಸುತ್ತಾರೆ.

ಯತ್ರ ದ್ರೋಣಸ್ತತ್ರ ಪುತ್ರಸ್ತತ್ರ ಭೀಷ್ಮಃ ಕೃಪಸ್ತಥಾ ।
ನ ಚಾತ್ಯೇತಿ ಗುರುಂ ಭೀಮ ಇತಿತಂಶರಣಂಯಯುಃ ॥೪೦೪॥

ಯತ್ರ ದ್ರೋಣಃ – ದ್ರೋಣಾಚಾರ್ಯರು ಎಲ್ಲಿರುವರೋ, ತತ್ರ ಪುತ್ರಃ – ಅಲ್ಲಿ ಅವರ ಮಗನಾದ ಅಶ್ವತ್ಥಾಮಾಚಾರ್ಯರಿರುವರು, ತತ್ರ—ಅಲ್ಲಿಯೇ, ಭೀಷ್ಮಃ – ಭೀಷ್ಮಾಚಾರ್ಯರು, ತಥಾ – ಹಾಗು, ಕೃಪಃ – ಕೃಪಾಚಾರ್ಯರು ಇರುವರು, ಭೀಮಃ—ಭೀಮಸೇನರು, ಗುರುಂ–ಗುರು ಹಿರಿಯರನ್ನು, ನಚ ಅತ್ಯೇತಿ – ಮೀರಲಾರರು, ಇತಿ—ಎಂಬ ಕಾರಣದಿಂದ, ತಂ–ದ್ರೋಣರನ್ನು, ಶರಣಂ ಯಯುಃ – ಮೊರೆಹೊಂದಿದರು. ॥೪೦೪॥

ಅಬ್ರವೀದ್ಧಾರ್ತರಾಷ್ಟ್ರಾಂಶ್ಚ ದ್ರೋಣೋ ವಿಪ್ರೋಽಪಿ ಸನ್ನಹಮ್।
ಸಪುತ್ರಸ್ಸಕೃಪಶ್ಶಸ್ತ್ರಂ ಗೃಹೀಷ್ಯೇ ಭವತಾಂ ಕೃತೇ ॥೪೦೫॥

ರಕ್ಷಣೇ ಭವತಾಂ ಚೈವ ಕುರ್ಯಾಂ ಯತ್ನಂ ಸ್ವಶಕ್ತಿತಃ ।
ನ ತು ಭೀಮಾದ್ಭಯಂ ವಶ್ಯಕ್ತಸ್ಸತ್ಯಂ ಬ್ರವೀಮ್ಯಹಮ್ ॥೪೦೬॥

ಚ–ಆದರೆ, ದ್ರೋಣಃ – ದ್ರೋಣಾಚಾರ್ಯರು, ಅಹಂ – ನಾನು, ವಿಪ್ರಃ ಸನ್ ಅಪಿ - ಬ್ರಾಹ್ಮಣನಾಗಿದ್ದರೂ ಕೂಡ, ಸಪುತ್ರಃಸನ್ – ಮಗನಿಂದ ಸಹಿತನಾಗಿ. ಸಕೃಪಃಸನ್ – ಕೃಪನಿಂದ ಸಹಿತನಾಗಿ, ಭವತಾಂ ಕೃತೇ ನಿಮ್ಮ ಸಲು ವಾಗಿ. ಶಸ್ರಂ ಗೃಹೀಷ್ಯೇ – ಶಸ್ತ್ರವನ್ನು ಹಿಡಿಯುತ್ತೇನೆ. ಭವತಾಂ ರಕ್ಷಣೇ – ನಿಮ್ಮ ರಕ್ಷಣೆಯ ಒಗ್ಗೆ. ಸ್ವಶಕ್ತಿತಃ – ನನ್ನ ಶಕ್ತ್ಯನುಸಾರವಾಗಿ, ಯತ್ನಂಚ ಕುರ್ಯಾಂ – ಪ್ರಯತ್ನವನ್ನೂ ಮಾಡುವೆನು. ತು - ಆದರೆ ವಃ – ನಿಮ್ಮನ್ನು, ಭೀಮಾತ್–ಭೀಮ ಸೇನನ ದೆಶೆಯಿಂದ, ರಕ್ಷಿತುಂ—ರಕ್ಷಿಸಲು, ನ ಶಕ್ತಃ—ಸಮರ್ಥನಲ್ಲ, ಅಹಂ ಸತ್ಯಂ ಬ್ರವೀಮಿ—ನಾನು ನಿಜವನ್ನು ಹೇಳುತ್ತಿದ್ದೇನೆ ಇತಿ—ಎಂದು, ಧಾರ್ತರಾಷ್ಟ್ರಾನ್ – ದುರ್ಯೋಧನಾದಿಗಳನ್ನು ಕುರಿತು, ಅಬ್ರವೀತ್—ಹೇಳಿದನು. ॥೪೦॥೪೦॥

ಭಾವಾನುವಾದ ೩೭೭—೪೦೬

ಹೀಗೆ ಶ್ರೀಭೀಮಸೇನದೇವರು ಕುಪಿತರಾದಾಗ ಆಗಹತ್ತಿದ, ಅನಿಷ್ಟಸೂಚನೆಗಳನ್ನು ತಿಳಿದು ಧೃತರಾಷ್ಟ್ರನು ಅವುಗಳ ಫಲದ ಬಗ್ಗೆ ವಿದುರರನ್ನು ಕೇಳಿದಾಗ ಅವರು "ಇದೇ ಕ್ಷಣದಲ್ಲಿ ನಿನ್ನ ಮಕ್ಕಳು ಪರಿವಾರಸಮೇತರಾಗಿ ಭೀಮಸೇನದೇವನಿಂದ ಮರಣಹೊಂದುತ್ತಾರೆ ಎಂದು ಅದರ ಅರ್ಥ. ನೀನು ಮಕ್ಕಳ ಹಾಗೆ ನನ್ನ ಮಕ್ಕಳು ಏನನ್ನು ಗೆದ್ದರು? ಎತ್ತೇನನ್ನು ಗೆದ್ದರು? ಎಂದು ಕೇಳುತ್ತಾ ವಿನೋದಿಸುತ್ತಿರುವಿ. ಆದರೆ ನಿನ್ನ ಮಕ್ಕಳು ಪಾಂಡವರ ಸೊತ್ತನ್ನು, ಪಾಂಡವರನ್ನು ಗೆದ್ದದ್ದು ಅನ್ಯಾಯದಿಂದ. ಅದೂ ಅಲ್ಲದೇ ದ್ಯೂತದಲ್ಲಿ ಗೆದ್ದದ್ದು ನಿಜವಾಗಿ ಗೆದ್ದದ್ದು ಎಂದೆನಿಸಿಕೊಳ್ಳುವುದೂ ಇಲ್ಲ. ಸ್ತ್ರೀಯರಿಗೆ ಕೊಟ್ಟದ್ದನ್ನು, ದ್ಯೂತದಲ್ಲಿ ಸೋತದ್ದನ್ನು, ಮತ್ತನಾವನಿಂದ ಕೊಡಲ್ಪಟ್ಟ ದ್ದನ್ನು (ಯಾರಿಗೆ ಬಂದಿರುವುದೋ) ಅವರ ಸೊತ್ತೆಂದು ಜ್ಞಾನಿಗಳು ಪರಿಗಣಿಸುವುದಿಲ್ಲ. ಆದ್ದರಿಂದ ಕೊಟ್ಟವನ ಸೊತ್ತನ ಬಂಧುಗಳು ಪುನಃ ವಾಪಸ್ ಇಸಿದುಕೊಳ್ಳಬಹುದು ಎಂದು ಹೇಳುವರು. ಹಾಗಿದ್ದರೂ ಕೂಡ ಪ್ರಮಾಣಿಕ ರಾದ ಪಾಂಡವರು ಹಾಗೆ ಮಾಡಿಲ್ಲ. ನಿನ್ನ ಮಕ್ಕಳು ಎಷ್ಟು ಅಪ್ರಾಮಾಣಿಕರು ಎಂಬುದನ್ನು ಲೋಕಕ್ಕೆ ತೋರಿಸಿದ್ದಾರೆ" ಎಂದು ಧೃತರಾಷ್ಟ್ರನಿಗೆ ಹೇಳಿದರು. ಆಗ ಧೃತರಾಷ್ಟ್ರರಾಜನು ಈ ಅಪಶಕುನಗಳ ಫಲ ಹೇಗೆ ಆಗದಿದ್ದೀತು? ಅದಕ್ಕೆ ಏನು ಮಾಡಬೇಕು ? ಎಂದು ಕೇಳಿದನು. ಆಗ ವಿದುರರು ಹಾಗಿದ್ದರೆ ಮೊದಲು ದ್ರೌಪದೀದೇವಿಯನ್ನು ಬಿಡಿಸು. ಅವಳಿಗೆ ಬೇಕಾದ ವರಗಳನ್ನು ಕೊಟ್ಟು ಸಂತೋಷಪಡಿಸು. ಇಲ್ಲದಿದ್ದರೆ ನಿನ್ನ ಮಕ್ಕಳು ಭೀಮನಿಂದ ಪುಡಿ ಪುಡಿಯಾದ ರೆಂದೇ ಭಾವಿಸು; ಇದರಲ್ಲಿ ಸಂಶಯಬೇಡ" ಎಂದು ಹೇಳಿದರು. ಅದಲ್ಲದೇ " ದ್ರೌಪದಿಯಾಗಲೀ ಪಾಂಡವರಾಗಲೀ ತಮ್ಮ ತಪಸ್ಸಿನ ಅಭಿವೃದ್ಧಿಯಾಗಲಿ ಎಂಬ ಉದ್ದೇಶದಿಂದ ತಮ್ಮ ತಪಸ್ಸಾಮರ್ಥ್ಯದಿಂದ ನಿನ್ನ ಮಕ್ಕಳನ್ನು ಸರ್ವ ಸಾಮರ್ಥ್ಯವುಳ್ಳವರಾದರೂ ಸುಡುತ್ತಾ ಇಲ್ಲ ಹೀಗಾಗಿ ನಿನ್ನ ಮಕ್ಕಳು ಬದುಕಿ ಉಳಿದವರು. ನೀನು ದ್ರೌಪದಿಯನ್ನು ಬಿಡಿಸದಿದ್ದರೆ, ಶ್ರೀ ಭೀಮದೇವನು ಖಂಡಿತ ನಿನ್ನ ಮಕ್ಕಳನ್ನು ತನ್ನ ಬಾಹುಸಾಮರ್ಥ್ಯದಿಂದಲೇ (ತಪಸ್ಸಾಮರ್ಥ್ಯವನ್ನು ಉಪಯೋಗಿಸದೇ) ಸಂಹರಿಸುತ್ತಾರೆ " ಎಂದೂ ವಿದುರರು ಹೇಳಿದರು. ಆಗ ಧೃತರಾಷ್ಟ್ರನು ದುಶ್ಶಾಸನನನ್ನು ಬೈದು ಎಳೆಯುವದನ್ನು ನಿಲ್ಲಿಸಿ, ದ್ರೌಪದೀಯನ್ನು ಬಿಡಿಸಿದನು. ಹಾಗೂ ನಿನಗೇನು ಬೇಕೋ ಆ ವರಗಳನ್ನು ಕೇಳಿಕೋ ಎಂದು ಹೇಳಿದನು. ಶುದ್ಧ ಭಾಗವತ ಧರ್ಮದಲ್ಲಿ ಪ್ರವೃತ್ತಳಾದ ಆ ದ್ರೌಪದೀದೇವಿಯು ತನಗಾಗಿ ಯಾವದನ್ನೂ ಕೇಳದೇ ರಾಷ್ಟ್ರ ಹಾಗೂ ಸಹೋದರಸಮೇತನಾದ ಧರ್ಮರಾಜನ ಬಿಡುಗಡೆಯನ್ನು ಮಾತ್ರ ಕೇಳಿದಳು ಅದನ್ನು ಇತ್ತ ಧೃತರಾಷ್ಟ್ರ ಮತ್ತೇನನ್ನಾದರೂ ಕೇಳು ಎಂದಾಗ ದ್ರೌಪದೀದೇವಿಯು ಏನನ್ನೂ ಕೇಳಲಿಲ್ಲ. ಭಾಗವತ ಧರ್ಮದ ಪ್ರಕಾರ ಶ್ರೀ ವಿಷ್ಣುವಿ ನಿಂದ ಅಥವಾ ಗಂಡನಿಂದ ವರ ತೆಗೆದುಕೊಳ್ಳಬಹುದು, ಬೇರೆ ಯಾರಿಂದಲೂ ತೆಗೆದುಕೊಳ್ಳಬಾರದು. ಆದ್ದರಿಂದ ಕೇಳಲಿಲ್ಲ ಹಾಗಾದರೆ ಈ ಒಂದು ವರವನ್ನು ಕೇಳಿದ್ದಾದರೂ ಭಾಗವತಧರ್ಮಕ್ಕೆ ವಿರುದ್ಧವಾಯಿತಲ್ಲ ಎಂದರೆ ಅದಕ್ಕೆ ಶ್ರೀಸರ್ವಜ್ಞಾಚಾರ್ಯರು ನಿರ್ಣಯವನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ. — ೧) ದ್ಯೂತದಲ್ಲಿ ಸೋತದ್ದು ನಿಜವಾಗಿ

ಸೋತದ್ದೇ ಅಲ್ಲವಾದ್ದರಿಂದ ಅದನ್ನು ಕೇಳಿದ್ದು ಕೇಳಿದಂತೆ ಅಲ್ಲವೇ ಅಲ್ಲ. ಅದನ್ನು ಕೊಟ್ಟಿದ್ದು ವರವೇ ಅಲ್ಲ: ೨) ಅಧರ್ಮದಿಂದ ದ್ಯೂತನಡೆದದ್ದರಿಂದಲೂ ದಾನವು ವರವಾಗಲಿಲ್ಲ. ೩) ಮೂವನಿಂದ ಕ್ಷತ್ರಿಯ ಸ್ತ್ರೀಯು ಮೂರು ವರಗಳನ್ನು ಕೇಳಬಹುದು ಎಂದು ಭಾಗವತ ಧರ್ಮಗಳ ಪ್ರಕಾರವೇ ಅನುಮತವಾದ್ದರಿಂದಲೂ ದ್ರೌಪದೀದೇವಿಯು ವರವನ್ನು ಕೇಳಿದ್ದು ಭಾಗವತಧರ್ಮವಿರುದ್ಧವಾಗಿಲ್ಲ.

ಈ ರೀತಿ ದ್ರೌಪದೀದೇವಿಯ ಕೇಳಿಕೆಯ ಪ್ರಕಾರ ಧೃತರಾಷ್ಟ್ರರಾಜನು ಅವರನ್ನು ಬಿಟ್ಟುಕೊಟ್ಟಾಗ ಆ ಪಾಂಡವರೆಲ್ಲ ಅಲ್ಲಿಯ ಹಿರಿಯರನ್ನು ಪ್ರಣಮಿಸಿ ದ್ರೌಪದೀಸಮೇತರಾಗಿ ಇಂದ್ರಪ್ರಸ್ಥಕ್ಕೆ ಹೋದರು. ಇಲ್ಲಿ ದುಷ್ಟ ದುಶ್ಶಾಸನನು ತಮ್ಮ ಅಪ್ಪನಿಗೆ 'ಅನಾಯಾಸವಾಗಿ ಬಂದಿದ್ದ ಪಾಂಡವಸಂಪತ್ತನ್ನೆಲ್ಲ ನೀನು ಬಿಟ್ಟು ಕೊಟ್ಟೆಯಲ್ಲ: ಇಷ್ಟಾದರೂ ಆ ಭೀಮನು ನಮ್ಮನ್ನು ಕೊಲ್ಲುವದನ್ನೇನೂ ಬಿಡುವದಿಲ್ಲ. ಬಹಳ ಆಶ್ಚರ್ಯಕರವಾಗಿದ ನಿನ್ನ ವಿಚಾರ ಸರಣಿ. ಈಗಲಾದರೂ ಏನಾಯಿತು? ಪುನಃ ಆ ಪಾಂಡವರನ್ನು ನಮ್ಮ ಉಳಿವಿಗಾಗಿ ಪುನಃ ದ್ಯೂತಕ್ಕಾಗಿ ಕರೆಯಿಸು: ಈ ಸಲ ಸೋತರೆ ವನಕ್ಕೆ ಹೋಗಲಿ. ಆ ತರಹ ಪಣವನ್ನಿಡೋಣ' ಎಂದು ಹೇಳಿದನು. ಆಗ ಧೃತರಾಷ್ಟ್ರನು ಸಮ್ಮತಿಸಿ ಕರೆಕಳಿಸಿದನು, ಮೊದಲಿನಂತೆಯೇ ಸಹೋದರರ ದ್ರೌಪದೀದೇವಿಯು ನಿಷೇಧವಿರುವಾಗಲೂ ಧರ್ಮರಾಜನು ಬಂದೇ ಬಿಟ್ಟನು, ದ್ಯೂತಕ್ಕೆ ಕೂಡುವಾಗ ಸೋತವರು ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸ ಮಾಡಬೇಕು: ಅಜ್ಞಾತವಾಸವು ನಮ್ಮ ರಾಜ್ಯದ ಸಮೀಪದ, ಪ್ರಸಿದ್ಧರಾಜರ ಊರಿನಲ್ಲಿ ನಡೆಯಬೇಕು. ಅಜ್ಞಾತವಾಸದಲ್ಲಿರುವಾಗ ಪಂಚ ಪಾಂಡವರು ದ್ರೌಪದೀ ಇವರಲ್ಲಿ ಯಾರೊಬ್ಬರೂ ಕಾಣಿಸಿದರೂ ಪುನಃ ಎಲ್ಲರೂ ಮತ್ತೆ ೧೨ ವರ್ಷ ವನಕ್ಕೆ ಮತ್ತು ೧ ವರ್ಷ ಅಜ್ಞಾತವಾಸಕ್ಕೆ ಹೋಗಬೇಕು.ನಾವು ಹೇಳಿದ ನಿಯಮಗಳನ್ನು ನಡೆಸದಿದ್ದರೆ, ಈ ಅವಧಿಯನ್ನು ಪೂರ್ಣ ಮಾಡಲು ಆಗದೇ ಅರ್ಧಕ್ಕೆ ಬಂದರೆ ಪುನಃ ವನವಾಸ ಅಜ್ಞಾತವಾಸ ಮಾಡಬೇಕಾಗುವದು ಎಂದು ಪಣವನ್ನು ದುರ್ಯೋಧನನು ದುಶ್ಶಾಸನನು ಹೇಳಿಕೊಟ್ಟಂತೆ ಮಾಡಿದನು. ಈ ದ್ಯೂತದಲ್ಲಿಯೂ ಕಪಟಿಯಾದ ಶಕುನಿಯಿಂದ ಧರ್ಮರಾಜನು ಸೋತು ವನಕ್ಕೆ ಭ್ರಾತೃ ಪತ್ನೀಸಹಿತನಾಗಿ ಹೊರಡಲು ಸಿದ್ಧನಾದಾಗ ಪಾಪಿಯಾದ ದುಃಶಾಸನನು, ಸಂತಸದಿಂದ ನಗುತ್ತಾ, ಭೀಮಸೇನನಿಗೆ ಗೂಫಿ, ಗೂಳಿ ಎಂದು ಅಣಕ ಮಾಡುತ್ತಾ ಕುಣಿದನು. ಹಾಗೆಯೇ ಕುಣಿಯುತ್ತಾ ದ್ರೌಪದೀ ದೇವಿಯನ್ನು ಕುರಿತು ಈ ನಿನ್ನ ಪತಿಗಳಿಲ್ಲ ಈಗ ನಿರ್ವೀರ್ಯರಾಗಿದ್ದಾರೆ. ಅವರು ಪುನಃ ಮೋಲೇಳದಂಥಕಂದಕದಲ್ಲಿ ಬಿದ್ದಾರೆ, ಆದ್ದರಿಂದ ಅವರಿಲ್ಲದಂತೇಯೇ ಸರಿ. ಆದಕಾರಣ ನೀನು ಪತಿರಹಿತಳು. ನೀನು ದುರ್ಯೋಧನನ ಮನೆಗೆ ನಡೆ ಎಂದು ಅಂದನು ಆಗ ಎಲ್ಲಿ ಆ ದುಷ್ಟ ಸಹೋದರರೂ ನಕ್ಕರು. ಆಗ ಶ್ರೀ ಭೀಮಸೇನದೇವರು 'ಯುದ್ಧದಲ್ಲಿ ನಿಮ್ಮೆಲ್ಲರನ್ನು ನಾನೇ ಸಂಹರಿಸುವೆನು' ಎಂದು ಪ್ರತಿಜ್ಞೆಯನ್ನು ಮಾಡಿದರು. ಆಗ ಅವರೆಲ್ಲರೂ ಭಯದಿಂದ ದ್ರೋಣಾಚಾರ್ಯರನ್ನು ಮೊರೆಹೊಂದಿದರು. ಎಲ್ಲಿ ದ್ರೋಣಾಚಾರ್ಯರು ಇರುವರೋ ಅಲ್ಲಿಯೇ ಅವರ ಮಗ ಅಶ್ವತ್ಥಾಮರು, ಭಾವ ನಾದ ಕೃಪಾಚಾರ್ಯರು, ಹಾಗು ಭೀಷ್ಮಾಚಾರ್ಯರೂ ಇರುವರು. ಈ ಪೂಜ್ಯ ಹಿರಿಯರನ್ನು ಭೀಮನು ವೀರಲಾರನು ಎಂದು ಅವರೆಲ್ಲ ದುಷ್ಟರು ತಿಳಿದಿದ್ದರಿಂದ ದ್ರೋಣರನ್ನು ಮೊರೆಹೊಕ್ಕರು. ಆಗ ದ್ರೋಣಾಚಾರ್ಯರು "ನಾನು ಬ್ರಾಹ್ಮಣನಾಗಿದ್ದರೂ ಕೂಡ ನನ್ನ ಭಾವ, ಮಗ ಇಬ್ಬರಿಂದ ಸಹಿತವಾಗಿ ಶಸ್ತ್ರ ಹಿಡಿದು ಯುದ್ಧ ಮಾಡುವೆನು. ನಿಮ್ಮ ರಕ್ಷಣೆಗಾಗಿ ನನ್ನ ಶಕ್ತ್ಯನುಸಾರ ಪ್ರಯತ್ನವನ್ನು ಮಾಡುವೆನು. ಆದರೆ ಭೀಮನಿಂದ ನಿಮ್ಮನ್ನು ರಕ್ಷಿಸುವದು ಮಾತ್ರ ನನಗೆ ಶಕ್ಯವಾಗಲಾರದು. ಇದು ನಿಜವಾದ. ಮಾತು " ಎಂದು ಹೆಂಳಿದರು.

ತತೋ ಯಯುಃ ಪಾಂಡವಾಸ್ತೇ ಸಭಾಯಾ ವನಾಯ ಕೃಷ್ಣಾಸಹಿತಾಸ್ಸುಶೂರಾಃ ।
ಗತ್ವಾನುಜಕ್ರೇ ಯುವಸಿಂಹಖೇಲಗತಿಂ ಭೀಮಂ ಧಾರ್ತರಾಷ್ಟ್ರೋಪಹಸ್ಯ ॥೪೦೭॥

ತತಃ—ಭೀಮಸೇನದೇವರು ಹಾಗೆ ಪ್ರತಿಜ್ಞೆ ಮಾಡಿದ ನಂತರ, ಸುಶೂರಾಃ – ಬಹುಶೂರರಾದ, ಕೃಷ್ಣಸಹಿತಾಃ—ದ್ರೌಪದೀಸಮೇತರಾದ, ತೇ ಪಾಂಡವಾಃ—ಆ ಪಾಂಡವರು, ಸಭಾಯಾಃ – ಆ ದುಷ್ಟಸಭೆಯ ದೆಶೆಯಿಂದ, ವನಾಯ – ವನಕ್ಕೆ

ಯಯುಃ — ಹೋದರು. ಧಾರ್ತರಾಷ್ಟ್ರ: — ದುರ್ಯೋಧನನು, ಯಂವಸಿಂಹಖೇಲಗತಿಂ—ತರುಣಸಿಂಹದ ಗತಿಯಂತೆ ಚತುರ ನಡಿಗಯಂಲ್ಲಿ, ಭೀಮಂ—ಭೀಮಸೇನದೇವರನ್ನು, ಅಪಹಸ್ಯ – ಅಪಹಾಸ್ಯವಾಡಿ, ಗತ್ವಾ ಅನುಚಕ್ರೀ-ಅವರು ನಡೆದಂತೆ ನಡೆದು ಅಣಕಿಸಿದನು. ॥೪೦೭॥

ದೃಷ್ಟ್ವಾ ಸಭಾಯಾ ಆರ್ಧನಿಷ್ಕ್ರಾಂತದೇಹೋ ವ್ಯಾವೃತ್ಯ ಭೀಮಃ ಪ್ರಾಹ ಸಂರಕ್ತನೇತ್ರಃ।
ಊರುಂ ತವಾನ್ಯಂ ಚ ರಣೇ ಬಿಭೇತ್ಸ್ಮಿ ಇತ್ಯುಕ್ತ್ವಾ ಸೌ ನಿರ್ಗತೋ ಽಸತ್ಸಭಾಯಾಃ ॥೪೦೮॥

ಸಭಾಯಾಃ :— ಆ ಸಭೆಯಿಂದ, ಅರ್ಧನಿಷ್ಕ್ರಾಂತ ದೇಹಃ— ಅರ್ಧದಷ್ಟು ಹೋದಂಥ ದೇಹವುಳ್ಳ, ಭೀಮಃ:— ಭೀಮಸೇನದೇವರು, ವ್ಯಾವೃತ್ಯ— ಹಿಂದಿರುಗಿ, ದೃಷ್ಟ್ವಾ—ನೋಡಿ, ಸಂರಕ್ತನೇತ್ರಸ್ಸನ್— ಕೆಂಪಾದ ಕಣ್ಣುಳ್ಳವರಾಗಿ, ತವ ಅನ್ಯಂ ಊರುಂ ಚ-ನಿನ್ನ ಇನ್ನೊಂದು ತೊಡೆಯನ್ನೂ ಕೂಡ ಬಿಭೇತ್ಸ್ಮಿ—ಮುರಿಯುತ್ತೇನೆ, ಇತಿ—ಎಂದು, ಪ್ರಾಹ— ಹೇಳಿದರು. ಇತಿ ಉಕ್ತ್ವಾ— ಹೀಗೆ ಹೇಳಿ, ಅಸೌ- ಆ ಭೀಮಸೇನದೇವರು, ಅಸತ್ಸಭಾಯಾಃ — ದುಷ್ಟಸಭೆಯಿಂದ ದೆಶೆಯಿಂದ, ನಿರ್ಗತ ;— ಹೊರಟುಹೋದರು. ॥೪೦೮॥

ಪ್ರಯಾತಾನನು ತಾನ್ಕುಂತೀ ಪ್ರಯಯೌ ಪುತ್ರಗೃದ್ಧಿನೀ।
ರೋರುದ್ಯಮಾನಾಂ ವಿದುರಃ ಸ್ಥಾಪಯಾಮಾಸ ತಾಂ ಗೃಹೇ ॥೪೦೯॥

ಪುತ್ರಗೃದ್ಧಿನೀ— ಪುತ್ರರ ಮೇಲೆ ಅತಿಶಯ ಕರುಣವುಳ್ಳ, ಕುಂತೀ— ಕುಂತೀದೇವಿಯು, ಪ್ರಯಾತಾನ್ ತಾನ್ ಅನು — ಹೊರಟಿರುವ ಆ ಪಾಂಡವರನ್ನು ಅನುಸರಿಸಿ, ಯಯೌ— ಹೋದಳು, ವಿದುರ : — ವಿದುರರು, ರೋರುದ್ಯಮಾನಾಂ— ಅಳುತ್ತಿರುವ, ತಾಂ— ಆ ಕುಂತೀದೇವಿಯನ್ನು, ಗೃಹೇ- ತನ್ನ ಮನೆಯಲ್ಲಿ, ಸ್ಥಾಪಯಾಮಾಸ — ನಿಲ್ಲಿಸಿದರು. ॥೪೦೯॥

ಪ್ರಣಮ್ಯ ತಾಂಯಯುಃ ಸಾರ್ಧಾಸ್ಸಕೃಷ್ಣಾಶ್ಶೀಘ್ರಗಾಮಿನಃ ॥೪೧೦॥

ಸಕೃಷ್ಣಾ:ಪಾರ್ಥಾಃ — ದ್ರೌಪದೀದೇವಿಯಿಂದ ಸಹಿತರಾದ ಪಾಂಡವರು; ತಾಂ—ಆ ಕುಂತಿದೇವಿಯನ್ನು ಪ್ರಣಮ್ಯ—ನಮಸ್ಕರಿಸಿ, ಶೀಘ್ರಗಾಮಿನಃ ಸಂತಃ — ಬೇಗ ನಡೆಯುವವರಾಗಿ, ಯಯುಃ:- ಹೋದರು. ॥೪೧೦॥

ಯುಧಿಷ್ಠಿರೋ ಽವಾಗ್ವದನೋ ಯಯೌ ನ ಕ್ರೋಧಚಕ್ಷುಷಾ।
ದಹೇಯಂ ಕೌರವಾನ್ಸರ್ವಾನಿತಿ ಕಾರುಣಿಕೋ ನೃಪಃ ॥೪೧೧॥

ಅಭ್ಯಾಮೇವಾಖಿಲಾನ್ ಶತ್ರೂನ್ಶಕ್ತೋ ಹಂತುಮಹಂತ್ವಿತಿ।
ಉದ್ಧೃತ್ಯ ಬಾಹೂ ಪ್ರಯಯೌ ಬಾಹುಶಾಲೀ ವೃಕೋದರಃ ॥೪೧೨॥

ಕಾರುಣಿಕಃ— ಕರುಣಾಶಾಲಿಯಾದ, ನೃಪ : ಯುಧಿಷ್ಠಿರ: — ಧರ್ಮರಾಜನು, ಕ್ರೋಧಚಕ್ಷುಷಾ — ಕೋಪದಿಂದ ಕೂಡಿದ ತನ್ನ ಕಣ್ಣಿನಿಂದ, ಸರ್ವಾನ್ ಕೌರವಾನ್ — ಎಲ್ಲ ಕೌರವರನ್ನು, ನ ದಹೇಯಂ — ಸುಡಬಾರದು, ಇತಿ-ಎಂಬ ಕಾರಣದಿಂದ, ಅವಾಗ್ವದನ: ಸನ್ ಯಯೌ— ಕೆಳಮುಂಖ ಮಾಡಿಕೊಂಡವನಾಗಿ ಹೊರಟನು, ಬಾಹುಶಾಲೀ—ಬಾಹುಪರಾಕ್ರಮಿಯಾದ, ವೃಕೋದರ:—ಭೀಮಸೇನದೇವರು, ಅಹಂ—ನಾನು, ಅಭ್ಯಾಂ ಏವ-ಈ ಎರಡು ಬಾಹುಗಳಿಂದಲೇ, ಅಖಿಲಾನ್ ಶತ್ರೂನ್— ಎಲ್ಲ ವೈರಿಗಳನ್ನು, ಹಂತುಂ— ಕೊಲ್ಲಲು, ಶಕ್ತ :— ಸಮರ್ಥನು, ಇತಿ ತು — ಈ ಅಭಿಪ್ರಾಯದಿಂದಲೇ, ಬಾಹೂ ಉದ್ಧೃತ್ಯ- ಕೈಗಳನ್ನು ಮೇಲಿತ್ತಿ, ಪ್ರಯಯೌ- ಹೊರಟರು. ॥೪೧೧॥ ॥೪೧೨॥

ಅಬದ್ಧಕೇಶಾ ಪ್ರಯಂಯೌ ದ್ರೌಪದೀ ಸಾ ಸಭಾತಲಾತ್
ಮುಕ್ತಕೇಶಾ ಭವಿಷ್ಯಂತಿ ಧಾರ್ತರಾಷ್ಟ್ರಸ್ತ್ರಿಯಸ್ತ್ವಿತಿ ॥೪೧೩॥

ಧಾರ್ತರಾಷ್ಟ್ರಸ್ತ್ರಿಯ :- ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳ ಪತ್ನಿಯರು, ಮುಕ್ತಕೇಶಾ: ತು— ಯಾವಾಗಲೂ ಕೂದಲನ್ನು ಬಿಟ್ಟವರೇ, ಭವಿಷ್ಯಂತಿ—ಆಗುತ್ತಾರೆ, ಇತಿ—ಎಂಬ ಅಭಿಪ್ರಾಯದಿಂದ, ಸಾ ದ್ರೌಪದೀ - ಆ ದ್ರೌಪದೀದೇವಿಯು, ಅಬದ್ಧಕೇಶಾಸತೀ- ತಲೆಗೂದಲನ್ನು ಕಟ್ಟದವಳಾಗಿ, ಸಭಾತಲಾತ್- ಸಭೆಯ ದೆಶೆಯಿಂದ, ಪ್ರಯಯೌ— ಹೊರಟಳು, ॥೪೧೩॥

ವರ್ಷನ್ಪಾಂಸೂನ್ಯಯೌ ಪಾರ್ಥ ಇತ್ಥಂ ಶತ್ರುಷು ಸಾಯಕಾನ್।
ವರ್ಷಯಾನೀತ್ಯಭಿಪ್ರಾಯಃ ಪರಮಾಸ್ತ್ರವಿದಾಂ ವರ: ॥೪೧೪॥

ಪರಮಾಸ್ತ್ರವಿದಾಂ ವರ; - ಪರಮ ಅಸ್ತ್ರ ಜ್ಞಾನಿಗಳಲ್ಲಿ ಶ್ರೇಷ್ಠನಾದ, ಪಾರ್ಥ:- ಅರ್ಜುನನು, ಪಾಂಸೂನ್ ವರ್ಷನ್- ಧೂಳಿಗಳನ್ನು ಸುರಿಸುತ್ತಾ, ಇತ್ಥಂ- ಇದೇ ರೀತಿಯಾಗಿ, ಶತ್ರುಷು- ವೈರಿಗಳ ಮೇಲೆ, ಸಾಯಕಾನ್- ಬಾಣಗಳನ್ನು, ವರ್ಷಯಾನಿ -- ಸುರಿಮಳೆ ಮಾಡುವೆನು, ಇತ್ಯಭಿಪ್ರಾಯ: ಸನ್- ಎಂಬ ಅಭಿಪ್ರಾಯ ವುಳ್ಳವನಾಗಿ, ಯಯೌ —ಹೊರಟನು, ॥೪೧೪॥

ಯಮಾವವಾಙಮುಖೌ ಯಾತೌ ನಾವಯೋಶ್ಶತ್ರವೋ ಮುಖಮ್॥
ಪಶ್ಯಂತ್ವಸ್ಯಾಮವಸ್ಥಾಯಾಮ್ ಇತ್ಯೇವ ಧೃತಚೇತಸೌ ॥೪೧೫॥

ಯಮೌ— ಅವಳಿಗಳಾದ ನಕುಲ, ಸಹದೇವರು, ಆವಯೋ: ಮುಖಂ - ನಮ್ಮಿಬ್ಬರ ಮುಖವನ್ನು, ಅಸ್ಯಾಂ ಅವಸ್ಥಾಯಾಂ - ಈ ಪರಿಸ್ಥಿತಿಯಲ್ಲಿ, ಶತ್ರವ : - ವೈರಿಗಳು, ನ ಪಶ್ಯಂತು — ನೋಡದಿರಲಿ, ಇತಿ ಏವ — ಎಂದೇ, ಧೃತಚೇತಸೌ ಸಂತೌ - ನಿಶ್ಚಿತ ಮನಸ್ಸುಳ್ಳವರಾಗಿ, ಅವಾಙ್ಮುಖೌ ಸಂತೌ — ಕೆಳಮುಖಮಾಡಿದ ವರಾಗಿ, ಯಾತೌ —ಹೋದರು. ॥೪೧೫॥

ಪ್ರೇತ ಸಂಸ್ಕಾರ ಸೂಕ್ತಾನಿ ಪಠನ್ ಧೌಮ್ಯೋಽಗ್ರತೋ ಯಯೌ ।
ಹತೇಷು ಧಾರ್ತರಾಷ್ಟ್ರೇಷು ಮಯಾ ಕಾರ್ಯಾಃಕ್ರಿಯಾ ಇತಿ ॥೪೧೬॥

ಧೌಮ್ಯ: - ಧೌಮ್ಯಾಚಾರ್ಯರು, ಪ್ರೇತಸಂಸ್ಕಾರಸೂಕ್ತಾನಿ - ಪ್ರೇತಸಂಸ್ಕಾರದ ಸಂದರ್ಭದಲ್ಲಿ ಹೇಳುವ ಸೂಕ್ತಗಳನ್ನು, ಪಠನ್ ಸನ್—ಅನ್ನುತ್ತಾ, ಧಾರ್ತರಾಷ್ಟ್ರೇಷು — ದುರ್ಯೋಧನಾದಿಗಳು, ಹತೇಷು ಸತ್ಸು — ಸಾಯುತ್ತಿರಲು, ಕ್ರಿಯಾಃ ಮಾಯಾ ಕಾರ್ಯಾಃ—ಅವರ ಪ್ರೇತ ಸಂಸ್ಕಾರ ಕಾರ್ಯಗಳು ನನ್ನಿಂದ ಮಾಡಲ್ಪಡುತ್ತವೆ, ಇತಿ— ಎಂದು ಅಭಿಪ್ರಾಯದಿಂದ, ಅಗ್ರತಃಯಯೌ —ಪಾಂಡವರ ಮುಂಬದಿಯಲ್ಲಿ ಹೊರಟರು. ॥೪೧೬॥

ತಾನಥಾನುಯಯುಸ್ಸೂತಾ ರಥೈ: ಪರಿಚತುರ್ದಶೈ: ।
ಸೂದಾ: ಪೌರೋಗವಾಶ್ಚೈವ ಭೃತ್ಯಾಯೇತ್ವಾಪ್ತಕಾರಿಣ: ॥೪೧೭॥

ಅಥ — ನಂತರ, ಸೂದಾ: — ಅಡಿಗೆಯವರು, ಪೌರೋಗವಾಃ — ಪಾಕಶಾಲಾಧ್ಯಕ್ಷರು, ಯೇ - ಯಾರು, ತು ಆಪ್ತಕಾರಿಣ;ಭೃತ್ಯಾಃ — ಸೇವಾಕಾರಿಗಳೋ, ತೇ ಚ-ಅವರೂ ಕೂಡ, ಪರಿಚತುರ್ದಶೈ: — ಪಾಂಡವರ ರಥಗಳ ಸೂತ್ತಲೂ ಇರುವ ಹದಿನಾಲ್ಕು ರಥಗಳಿಂದ, ತಾನ್ — ಆ ಪಾಂಡವರನ್ನು, ಅನುಯಯು:—ಅನುಸರಿಸಿ ಹೋದರು. ॥೪೧೭॥

ತತಸ್ತೇ ಜಾಹ್ನವೀ ತೀರೇ ವನೇ ವಟಮುಪಾಶ್ರಿತಾ: ।
ನ್ಯಷೀದನ್ನಾಗತಾನ್ದೃಷ್ಟ್ವಾಸಮಸ್ತಾನ್ ಪುರವಾಸಿನ: ॥೪೧೮॥

ತತಃ—ಆನಂತರ, **ತೇ**—ಆ ಪಾಂಡವರು, **ಆಗತಾನ್**—ಬೆನ್ನುಹತ್ತಿ ಬಂದಂಥ, **ಸರ್ವಾನ್ ಪುರವಾಸಿನಃ**—ಎಲ್ಲ ಪ್ರಜೆಗಳನ್ನು, **ದೃಷ್ಟ್ವಾ**—ನೋಡಿ, (**ವಾರಯಿತುಂ**—ಅವರನ್ನು ತಡೆಯಲಾರದಕ್ಕಾಗಿ) **ಜಾಹ್ನವೀತೀರೇ**—ಗಂಗಾತೀರದಲ್ಲಿ, **ವನೇ**—ಅಡವಿಯಲ್ಲಿ **ವಟಂ**—ವಟವೃಕ್ಷವನ್ನು, **ಉಪಾಶ್ರಿತಾಃ ಸಂತಃ**—ಆಶ್ರಯಿಸಿದವರಾಗಿ, **ನ್ಯಷೀದನ್**—ವಾಸಿಸಿದರು. ॥೪೧೮॥

ತತಸ್ತು ತೇ ಸರ್ವಜಗನ್ನಿವಾಸಂ ನಾರಾಯಣಂ ನಿತ್ಯಸಮಸ್ತಸದ್ಗುಣವತ್ ।
ಸ್ವಯಂಭುಶರ್ವಾದಿಭಿರರ್ಚಿತಂ ಸದಾ ಭಕ್ತ್ಯಾ ಸ್ಮರನ್ ಭಕ್ತಭವಾಪಹಂ ಪ್ರಭುವತ್ ॥೪೧೯॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯೇ
ಪಾಂಡವವನ ಪ್ರವೇಶೋ ನಾಮ ಏಕವಿಂಶೋಽಧ್ಯಾಯಃ ॥೨೧॥

ತತಃ—ಅಲ್ಲಿಗೆ ಬಂದು ವಾಸಿಸಿದನಂತರ, **ತೇ**—ಆ ಪಾಂಡವರು, **ಸರ್ವಜಗನ್ನಿವಾಸಂ**—ಸರ್ವಜಗತ್ತಿನಲ್ಲಿಯೂ ವ್ಯಾಪಿಸಿರುವ, ಸರ್ವಜಗತ್ತಿಗೆ ಆಶ್ರಯನಾದ, **ನಿತ್ಯಸಮಸ್ತಸದ್ಗುಣಂ** ಯಾವಾಗಲೂ ಸರ್ವಸದ್ಗುಣಭರಿತನಾದ, **ಭಕ್ತಭವಾಪಹಂ**—ಭಕ್ತರಸಂಸಾರವನ್ನು ಪರಿಹರಿಸುವ, **ಪ್ರಭುಂ**—ಸರ್ವಸ್ವಾಮಿಯಾದ, **ಸದಾ**—ಯಾವಾಗಲೂ, **ಸ್ವಯಂಭೂ ಶರ್ವಾದಿಭಿಃ**—ಬ್ರಹ್ಮರುದ್ರಾದಿಗಳಿಂದ, **ಅರ್ಚಿತಂ**—ಪೂಜಿತನಾದ, **ನಾರಾಯಣಂ**—ಶ್ರೀ ನಾರಾಯಣದೇವರನ್ನು, **ಭಕ್ತ್ಯಾ**—ಭಕ್ತಿಯಿಂದ, **ತು ಅಸ್ಮರನ್**—ವಿಶೇಷವಾಗಿ ಸ್ಮರಿಸಿದರು. ॥೪೧೯॥

ಶ್ರೀ ಆನಂದ ತೀರ್ಥ ಭಗವತ್ಪಾದಾಚಾರ್ಯರಿಂದ ರಚಿತವಾದ ಶ್ರೀ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪಾಂಡವರ ವನಪ್ರವೇಶ ಕಥಾವನ್ನು ನಿರೂಪಿಸುವ ಇಪ್ಪತ್ತೊಂದನೆಯ ಅಧ್ಯಾಯದ ಅನುವಾದವು ಮುಗಿಯಿತು. ॥೨೧॥

ಭಾವಾನುವಾದ ೪೦೭—೪೧೯

ಆನಂತರ ಮಹಾಪರಾಕ್ರಮಿಗಳಾದ ಪಾಂಡವರು ದ್ರೌಪದೀಸಮೇತರಾಗಿ ವನಕ್ಕೆ ಹೊರಟರು. ಆಗ ದುರ್ಯೋಧನನು ತರುಣ ಸಿಂಹದಂತೆ ಗಂಭೀರ ಗಮನವುಳ್ಳ ಶ್ರೀಭೀಮಸೇನದೇವರ ನಡಿಗೆಯನ್ನು ಅಣಕ ಮಾಡಿ ಮಹಾ ಅಪಹಾಸಿಸಿದನು. ಆಗ ಸಭೆಯಿಂದ ಹೊರಗೆ ಅರ್ಧ ಹೋದ ಶ್ರೀಭೀಮರು ಹೊರಳಿ ಅವನನ್ನು ಕೆಂಪುಗಣ್ಣಿನಿಂದ ನೋಡಿ 'ನಿನ್ನ ಇನ್ನೊಂದು ತೊಡೆಯನ್ನೂ ಕೂಡ ಯುದ್ಧದಲ್ಲಿ ಮುರಿಯುತ್ತೇನೆ' ಎಂದು ಪ್ರತಿಜ್ಞೆಮಾಡಿ ಆ ದುಷ್ಟ ಸಭೆಯಿಂದ ಹೊರಟು ಹೋದರು. ಅವರನ್ನು ಅನುಸರಿಸಿ ಪುತ್ರಪ್ರೇಮವುಳ್ಳ ಕುಂತೀದೇವಿಯೂ ಅಳುತ್ತಾ ಹೊರಟಳು. ಆಗ ವಿದುರರು ಅವಳನ್ನು ನಿಲ್ಲಿಸಿ ತಮ್ಮ ಗೃಹದಲ್ಲಿ ಇಟ್ಟುಕೊಂಡರು. ಪಾಂಡವರು ದ್ರೌಪದೀದೇವಿಯು ಆ ಕುಂತೀದೇವಿಗೆ ನಮಸ್ಕರಿಸಿ ಬೇಗ ಬೇಗ ಹೊರಟರು. ಹೊರಡುವಾಗ ಧರ್ಮರಾಜನು ತನ್ನ ಕ್ರೋಧ ದೃಷ್ಟಿ ಕೌರವರ ಮೇಲೆ ಬಿದ್ದು ಅವರು ಸುಟ್ಟುಹೋಗುವರಲ್ಲ ಎಂಬ ಕರುಣೆಯಿಂದ ಕೆಳಮುಖ ಮಾಡಿಕೊಂಡು ಹೊರಟನು. ಅಂದರೆ ಧರ್ಮರಾಜನಿಗೆ ತನ್ನ ತಪಶ್ಶಕ್ತಿಯನ್ನು ಪ್ರತ್ಯೇಕಿಸಿ ಕೇವಲ ಕ್ರೋಧವನ್ನು ಮಾತ್ರ ತನ್ನ ದೃಷ್ಟಿಯಲ್ಲಿ ತೊಡಗಿಸಿ ನೋಡುವ ಶಕ್ತಿ ಇರಲಿಲ್ಲ. ಹೀಗಾಗಿ ಅವನ ದೃಷ್ಟಿಯಿಂದ ಕ್ರೋಧದ ಜೊತೆಗೆ ತಪಶ್ಶಕ್ತಿಯೂ ಮಿಲಿತವಾಗಿಯೇ ಹೋಗುತ್ತಿತ್ತು. ಹೀಗಾಗಿ ನೋಡಲ್ಪಟ್ಟವರು ಸುಡುವ ಪ್ರಸಂಗ ಇದೆ. ಧರ್ಮರಾಜನು ವಿದ್ಯೆ ತಪಸ್ಸುಗಳಿಂದ ಉಪಜೀವನವನ್ನು ಕ್ಷಯಿತ ಮಾಡುವದೂ ಉಂಟಾದ್ದರಿಂದ ಆ ಪ್ರತ್ಯೇಕಿಸುವ ಶಕ್ತಿ ಅವನಿಗಿಲ್ಲ. ಭೀಮಸೇನದೇವರು ಮಾತ್ರ ಶುದ್ಧಭಾಗವತಧರ್ಮರತರಾದ್ದರಿಂದ ಎಂದೂ ತಪೋ ವಿದ್ಯೋಪಜೀವನಗೈದಿಲ್ಲವಾದ್ದರಿಂದ ಪ್ರತ್ಯೇಕೀಕರಣ ಶಕ್ತಿ ಇರುವದರಿಂದ ಕೇವಲ ಕ್ರೋಧದಿಂದ ನೋಡಿದರೂ ತಪಶ್ಶಕ್ತಿಯನ್ನು ಅವರಲ್ಲಿ ತೊಡಗಿಸುವದಿಲ್ಲವಾದ್ದರಿಂದ ಅವರು ನೋಡಿದಾಗ ಸುಡುವ ಪ್ರಸಂಗ ಬರುವದಿಲ್ಲ. ಭೀಮರು ಈ ನನ್ನ ಎರಡು ಬಾಹುಗಳಿಂದಲೇ ಎಲ್ಲ ಶತ್ರುಗಳನ್ನು ಸಂಹರಿಸುವೆನು ಎಂದು ತಿಳಿಸುತ್ತಾ ಕೈಗಳನ್ನೆತ್ತಿಕೊಂಡು ಹೊರಟರು. ಅರ್ಜುನನು ವೈರಿಗಳ ಮೇಲೆ ಬಾಣಗಳ ಸುರಿಮಳೆಯನ್ನು ಈ ರೀತಿ ಮಾಡುವೆನು

ಎಂದು ಸೂಚಿಸಲು ಧೂಳಿಗಳನ್ನು ಸುರಿಸುತ್ತಾ ನಡೆದನು. ದ್ರೌಪದೀದೇವಿಯರು 'ಕೌರವರ ಸ್ತ್ರೀಯರು ತಮ್ಮ ಪತಿಗಳನ್ನು ಕಳೆದುಕೊಂಡು ಸಾಯುವಪರ್ಯಂತ ತಲೆ ಕೂದಲನ್ನು ಬಿಟ್ಟವರು ಆಗುವರು' ಎಂದು ಸೂಚಿಸುತ್ತಾ ತಮ್ಮ ಕೂದಲು ಬಿಚ್ಚಿ ಹೊರಟರು. ಈ ಅವಸ್ಥೆಯಲ್ಲಿ ನಮ್ಮ ಮುಖವನ್ನು ಶತ್ರುಗಳು ನೋಡದಿರಲಿ ಎಂಬ ಅಭಿಪ್ರಾಯದಿಂದ ನಕುಲ ಸಹದೇವರು ತಲೆತಗ್ಗಿಸಿಕೊಂಡು ಹೊರಟರು. ಪುರೋಹಿತರಾದ ಧೌಮ್ಯಾಚಾರ್ಯರು ಕೌರವರು ಸತ್ತಾಗ ಅವರ ಸಂಸ್ಕಾರಗಳನ್ನು ನಾನೇ ಮಾಡಬೇಕಾಗುತ್ತೆ ಎಂದು ಸೂಚಿಸಲು ಪ್ರೇತಸೂಕ್ತಗಳನ್ನು ಹೇಳುತ್ತಾ ಹೊರಟರು ಹೀಗೆ ಹೋಗುತ್ತಿರುವ ಪಾಂಡವರನ್ನು ಬೆನ್ನು ಹತ್ತಿ ಊರಿನ ಪ್ರಜೆಗಳು, ಅಡಿಗೆಯವರು ಮೊದಲಾದ ಕಾರ್ಯಕರ್ತರೂ ಹೊದರು. ಪಾಂಡವರ ರಥಗಳ ಸುತ್ತಲೂ ಬೇರೆರಥಗಳಿದ್ದವು. ಹಿಂಬದಿಯಲ್ಲಿ ಪ್ರಜೆಗಳು ಬರುವದನ್ನು ನೋಡಿ ಪಾಂಡವರು ಒಂದು ವನದಲ್ಲಿ ಗಂಗಾತೀರದಲ್ಲಿ ವಟವೃಕ್ಷದ ಕೆಳಗೆ ವಾಸ ಮಾಡಿದರು. ನಿತ್ಯ ಗುಣಪೂರ್ಣನಾದ, ಬ್ರಹ್ಮಾದಿದೇವತೆಗಳಿಂದ ಪೂಜಿತನಾದ ಭಗವಂತನನ್ನೇ ಸದಾ ಸ್ಮರಿಸುತ್ತಾ ವಾಸಿಸಿದರು.

ಇಲ್ಲಿಗೆ ಇಪ್ಪತ್ತೊಂದನೇ ಅಧ್ಯಾಯದ ಭಾಷಾನುವಾದ ಮುಗಿಯಿತು.

— ॥ ಶ್ರೀಮದ್ವೇಶಾರ್ಪಣಮಸ್ತು ॥ —

ಶ್ರೀ ಮಧ್ವ ಸಿದ್ಧಾಂತ ಪ್ರಕಾಶನ ಸಮಿತಿ, ಕೊರಳಹಳ್ಳಿ
ಇದರ ಸದಸ್ಯರಾದಿ ಗ್ರಂಥ ಪಡೆದು ಜ್ಞಾನಲಾಭ ಮಾಡಿಕೊಳ್ಳಿ.

೧) 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೆ' (ಶ್ರೀಕೃಷ್ಣವಾಣಿ)
ತತ್ವಜ್ಞಾನ ಸದೃಶವಾದ ಪವಿತ್ರ ವಸ್ತು ಇನ್ನೊಂದಿಲ್ಲ

೨) 'ಜ್ಞಾನದೇವ ಸ್ವರ್ಗಃ ಜ್ಞಾನಾದೇವಾಪವರ್ಗಃ' (ವೇದವಾಣಿ)
ತತ್ವಜ್ಞಾನದಿಂದಲೇ ಸ್ವರ್ಗ. ತತ್ವಜ್ಞಾನದಿಂದಲೇ ಮೋಕ್ಷ.

೩) 'ಜ್ಞಾನೇನೈವ ಪರಂಪದಂ'(ಶ್ರೀಸರ್ವಜ್ಞರವಾಣಿ)
ತತ್ವಜ್ಞಾನದಿಂದಲೇ ಪರಮ ಪದವಾದ ಮೋಕ್ಷವು.

ಸದಸ್ಯತ್ವ ಹಣ - ರೂ. ೪೦೧/-

ಸಮಿತಿಯಿಂದ ಪ್ರಕಟಿತ ಗ್ರಂಥಗಳು :

1. ಬಿಲ್ವ ಮಂಗಲಃ ಸಾಧುಃ
2. ಕಂದುಕ ಸ್ತುತಿಃ
3. ಶ್ರೀಕೃಷ್ಣ ಜಯಂತೀ ನಿರ್ಣಯ
4. ಸದಾಚಾರ ಸ್ಮೃತಿ
5. ನಖಸ್ತುತಿ
6. ಶ್ರೀಕೃಷ್ಣಾಮೃತ ಮಹಾರ್ಣವ
7. ಯತಿಪ್ರಣವಕಲ್ಪ
8. ನ್ಯಾಸಪದ್ಧತಿ
9. ಶ್ರೀಮಹಾಭಾರತತಾತ್ಪರ್ಯನಿರ್ಣಯ(೧ ರಿಂದ ೨೯ ನೇ ಅಧ್ಯಾಯ)
10. ಶ್ರೀ ಯಮಕ ಭಾರತ
11. ಶ್ರೀ ಮಾಯಾವಾದ ಖಂಡನ
12. ಶ್ರೀ ಸರ್ವಮೂಲಟೀಕಾದ್ಯಂತ ಶ್ಲೋಕಗಳು
13. ಸಂಧ್ಯಾವಂದನ ಮಂತ್ರಾರ್ಥ
14. ಗಾಯಂತ್ರೀ ಮಂತ್ರದಲ್ಲಿ ಶ್ರೀ ಮಧ್ವ ಪ್ರಮೇಯರತ್ನಗಳು
15. ಶ್ರೀ ಹರಿಕಥಾಮೃತಸಾರ, ಗಣಪತಿ ಸಂಧಿ, ಹಾಗೂ ನಾಂದೀ ಸಂಧಿ
16. ಹಿತೋಪದೇಶ ಶ್ರೀ ವಾದಿರಾಜ ತೀರ್ಥ ರಚಿತ

॥ ಹರಿಃ ಓಂ ॥

ಶ್ರೀ ಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತಶ್ರೀಲಕ್ಷ್ಮೀ ಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೨ನೇ ಅಧ್ಯಾಯವು

ಆಗಂತುಕಾವಾನ್ ಪುರವಾಸಿನಸ್ತೇ ಸಂಸ್ಥಾಪ್ಯ ಕೃಛ್ರೇಣ ಕುರುಪ್ರವೀರಾಃ ।
ರಾತ್ರೌ ಪ್ರವಿಷ್ಟಾ ಗಹನಂ ವನಂ ಚ ಕಿರ್ಮೀರಮಾಸೇದುರಥೋ ನರಾಶಂ ॥೧॥

ಅನ್ವಯಾರ್ಥ– ತೇ ಕುರುಪ್ರವೀರಾಃ — ಕುರುಶ್ರೇಷ್ಠರಾದ ಆ ಪಾಂಡವರು, ಆಗಂತುಕಾವಾನ್ — ತಮ್ಮ ಜೊತೆಗೆ ಬರಬೇಕೆಂಬ ಇಚ್ಛೆಯುಳ್ಳ, ಪುರವಾಸಿನಃ—ಹಸ್ತಿನಾ ಪಟ್ಟಣದಲ್ಲಿ ವಾಸಮಾಡುವ ಜನರನ್ನು, ಕೃಛ್ರೇಣ—ಬಹಳ ಪ್ರಯಾಸದಿಂದ, ಸಂಸ್ಥಾಪ್ಯ — ಅಲ್ಲಿಯೇ ಇರುವಂತೆ ಮಾಡಿ, ರಾತ್ರೌ – ರಾತ್ರಿ ಕಾಲದಲ್ಲಿ, ಗಹನಂ ವನಂ ಪ್ರವಿಷ್ಟಾಃ – ಪ್ರವೇಶಿಸಲು ಕಠಿಣವಾದ ಅರಣ್ಯವನ್ನು ಪ್ರವೇಶಿಸುವವರಾಗಿ, ಅಥೋ— ಅನಂತರ ನರಾಶಂ – ನರಭಕ್ಷಕನಾದ, ಕಿರ್ಮೀರಂ - ಕಿರ್ಮೀರ ಎಂಬ ರಾಕ್ಷಸನನ್ನು, ಆಸೇದುಃ—ಹೊಂದಿದರು. ॥೧॥

ಬಕಾನುಜೋಽ ಸೌ ನಿಖಿಲೈರಜೇಯೋ ವರಾದ್ಗಿರೀಶಸ್ಯ ನಿಹಂತುಕಾಮಃ ॥
ಸದಾರಸೋದರ್ಯಮಭಿಪ್ರಸಸ್ರೇ ಭೀಮಂ ಮಹಾವೃಕ್ಷಗಿರೀನ್ ಪ್ರಮುಂಚನ್ ॥೨॥

ಅಸೌ – ಈ ಕಿರ್ಮೀರನು, ಬಕಾನುಜಃ—ಬಕಾಸುರನ ತಮ್ಮನು, ಗಿರೀಶಸ್ಯ ವರಾತ್ – ರುದ್ರದೇವರ ವರದಿಂದ, ನಿಖಿಲೈಃ ಅಜೇಯಃ – ಎಲ್ಲರಿಂದಲೂ ಜಯಿಸಲು ಅಶಕ್ಯನಾಗಿದ್ದನು. ಇಂತಹ ಕಿರ್ಮೀರನು, ಸದಾರ-ಸೋದರ್ಯಂ – ಪತ್ನಿ, ಸಹೋದರರಿಂದ ಕೂಡಿದ, ಭೀಮಂ— ಭೀಮಸೇನದೇವರನ್ನು, ನಿಹಂತುಕಾಮಃ ಸನ್ – ಕೊಲ್ಲಬೇಕೆಂಬ ಇಚ್ಛೆಯುಳ್ಳವನಾಗಿ, ಮಹಾವೃಕ್ಷಗಿರೀನ್— ದೊಡ್ಡ ದೊಡ್ಡ ಮರ ಮತ್ತು ಪರ್ವತಗಳನ್ನು, ಪ್ರಮುಂಚನ್ ಸನ್ – ಎಸೆಯುವಂಥವನಾಗಿ, ಅಭಿಪ್ರಸಸ್ರೇ – ಭೀಮಸೇನರ ಎದುರಿಗೆ ಹಾರಿ ಬಂದನು. ॥೨॥

ಸ ಸಂಪ್ರಹಾರಂ ಸಹ ತೇನ ಕೃತ್ವಾ ಭೀಮೋ ನಿಪಾತ್ಯಾಶು ಧರಾತಲೇ ತಂ ॥
ಚಕ್ರೇ ಮುಖೇ ಸಂಗರನಾಮಧೇಯೋ ಪ್ರಸಹ್ಯ ನಾರಾಯಣ ದೈವತೇ ಪಶುಂ ॥೩॥

ಸಃ ಭೀಮಂ — ಆ ಭೀಮಸೇನದೇವರು, ತೇನ ಸಹ — ಆ ಕೀರ್ಮೀರ ರಾಕ್ಷಸನ ಜೊತೆಗೆ, ಸುಶ್ರಹಾರಂ ಕೃತ್ವಾ — ಯುದ್ಧವನ್ನು ಮಾಡಿ, ಆಶು — ಬೇಗನೆ, ತಂ — ಆ ಕೀರ್ಮೀರನನ್ನು, ಧರಾತಲೇ ನಿಪಾತ್ಯ — ಭೂಮೀಯಲಿ ವೇಲೆ ಕೆಡವಿ, ಪ್ರಸಹ್ಯ — ಬಲಾತ್ಕಾರದಿಂದ, ನಾರಾಯಣದೈವತೇ — ನಾರಾಯಣನೇ ದೇವತೆಯಾಗಿರುವ, ಸಂಗರನಾಮಧೇಯೇ ಮಖೇ ಯುದ್ಧವೆಂಬ ಯಜ್ಞದಲ್ಲಿ, ಪಶುಂ ಚಕ್ರೇ — ಪಶುವನ್ನಾಗಿ ಮಾಡಿದರು. ॥೩॥

ನಿಹತ್ಯ ರಕ್ಷೋವನಮಧ್ಯಸಂಸ್ಥಾಸ್ತದಾ ಯತೀನಾಮಯುತೈಸ್ಸಮೇತಾಃ ।
ಅಶೀತಿಸಾಹಸ್ರಮುನಿಪ್ರವೀರೈರ್ದಶಾಂಶಯುಕ್ತೈಸ್ಸಹಿತಾ ವ್ಯಚಿಂತಯನ್ ॥೪॥

(ಪಾಂಡವರು) ರಕ್ಷಃ — ಕಿರ್ಮೀರನೆಂಬ ರಾಕ್ಷಸನನ್ನು, ನಿಹತ್ಯ — ಸಂಹರಿಸಿ, ವನಮಧ್ಯಸಂಸ್ಥಾಃ (ಬಭೂವುಃ) — ಅರಣ್ಯದ ಮಧ್ಯದಲ್ಲಿ ಇರುವಂಥವರಾದರು, ತದಾ — ಆಗ, (ಆ ಪಾಂಡವರು), ಯತೀನಾಂ ಅಯುತೈಃ ಸಮೇತಾಃ — ಹತ್ತು ಸಾವಿರ ಯತಿಗಳಿಂದ ಯುಕ್ತರಾದವರಾಗಿ, ದಶಾಂಶಯುಕ್ತೈಃ — ಹತ್ತನೆ ಒಂದು ಭಾಗದಿಂದ ಕೂಡಿದ, ಅಶೀತಿಸಾಹಸ್ರಮುನಿಪ್ರವೀರೈಃ — ಎಂಬತ್ತು ಸಹಸ್ರ ಗೃಹಸ್ಥರೆಂಬ ಶ್ರೇಷ್ಠರಿಂದ, ಸಹಿತಾಃ ಸಂತಃ — ಕೂಡಿದವರಾಗಿ, (ಎಂಬತ್ತರ $\frac{1}{10}$ ಅಂದರೆ ೮ ಸಾವಿರ. ಹೀಗೆ ೮೮ ಸಾವಿರ ಗೃಹಸ್ಥ ಮುನಿಶ್ರೇಷ್ಠರಿಂದ ಯುಕ್ತರಾಗಿ) (ಅವರ ಪೋಷಣೆಯ ಬಗ್ಗೆ) ವ್ಯಚಿಂತಯನ್ — ಆಲೋಚನೆಗೈದರು. ॥೪॥

ವಿಚಿಂತ್ಯ ತೇಷಾಂ ಭರಣಾಯ ಧರ್ಮಜಸ್ಸಂಪೂಜ್ಯ ಸೂರ್ಯಸ್ಥಿತಮಚ್ಯುತಂ ಪ್ರಭುಂ ॥
ದಿನೇ s ಕ್ಷಯಾನ್ನಂ ಪಿತರಂ ತದಾಪ ರತ್ನಾದಿದಂ ಕಾಮವರಾನ್ನದಂ ಚ ॥೫॥

ತೇಷಾಂ — ಆ ಯತಿ ವರಿನಿಗಳ, ಭರಣಾಯ — ಪೋಷಣೆಗಾಗಿ, ವಿಚಿಂತ್ಯ — ವಿಚಾರವಶಾಡಿ, ಧರ್ಮಜಃ — ಯುಧಿಷ್ಠಿರನು, ಸೂರ್ಯಸ್ಥಿತಂ — ಸೂರ್ಯಾಂತರ್ಯಾಮಿಯಾದ, ಪ್ರಭುಂ ಅಚ್ಯುತಂ — ಸ್ವಾಮಿಯಾದ ಶ್ರೀಹರಿಯನ್ನು, ಸಂಪೂಜ್ಯ — ಚೆನ್ನಾಗಿ ಉಪಾಸಿಸಿ, ದಿನೇ ಅಕ್ಷಯಾನ್ನಂ ಪ್ರತಿದಿನವೂ ಅಕ್ಷಯವಾದ ಆಹಾರವನ್ನು ಕೊಡುವ, ಚ — ಮತ್ತು, ರತ್ನಾದಿದಂ — ರತ್ನ ಮುಂತಾದವುಗಳನ್ನು ಕೊಡುವಂಥ, ಕಾಮವರಾನ್ನದಂ ಚ — ಕಾಮ್ಯವಾದ ಭಕ್ಷ್ಯ ಭೋಜ್ಯಾದಿಗಳನ್ನು ಕೊಡುವಂಥ, ತತ್ ಪಿತರಂ — ಆ ಪ್ರಸಿದ್ಧವಾದ, ಅಕ್ಷಯಂ ಪಾತ್ರಯನ್ನು, ಆಪ — ಹೊಂದಿದನು. ॥೫॥

ಬಭಾರ ತೇನೈವ ಯುಧಿಷ್ಠಿರಸ್ತಾನ್ ಪ್ರತ್ಯೇಕಶಸ್ತ್ರಿಂಶತದಾಸದಾಸಿಕಾನ್ ॥
ಸುವರ್ಣಪಾತ್ರೇಷು ಹಿ ಭುಂಜತೇಯೇ ಗೃಹೇ ತದೀಯೇ ಬಹುಕೋಟಿದಾಸಿಕೇ ॥೬॥

ಯುಧಿಷ್ಠಿರಃ — ಯುಧಿಷ್ಠಿರನು, ಯೇ — ಯಾವ ಋಷ್ಯಾದಿಗಳು, ಬಹುಕೋಟಿದಾಸಿಕೇ — ಬಹಳಕೋಟಿ ಸೇವಕರಿರುವ, ತದಿಯೇ ಗೃಹೇ ಧರ್ಮರಾಜನ ಇಂದ್ರಪ್ರಸ್ಥದ ಅರಮನೆಯಲ್ಲಿ, ಸುವರ್ಣಪಾತ್ರೇಷು ಹಿ ಭುಂಜತೇ — ಬಂಗಾರದ ಪಾತ್ರೆಗಳಲ್ಲಿ ಭೋಜನ ಮಾಡುತ್ತಿದ್ದರೋ, ತಾನ್ — ಅಂತಹ, ಪ್ರತ್ಯೇಕಶಃ — ಪ್ರತ್ಯೇಕವಾಗಿ, ತ್ರಿಂಶತದಾಸದಾಸಿಕಾನ — ಮೂವತ್ತು ದಾಸ ದಾಸಿಯರುಳ್ಳ ಯತ್ಯಾದಿಗಳನ್ನು, ತೇನೈವ — ಆ ಅಕ್ಷಯ ಪಾತ್ರೆಯಿಂದಲೇ, ಬಭಾರ — ಪೋಷಿಸುತ್ತಿದ್ದನು ॥೬॥

ಸತ್ಸಂಗಮಾಕಾಂಕ್ಷಿಣ ಏವ ತೇ s ವಸನ್ ಪಾರ್ಥೈಸ್ಸಹಾನ್ಯೇ ಚ ಮುನೀಂದ್ರವೃಂದಾಃ ॥
ಶೃಣ್ವಂತ ಏಭ್ಯಃ ಪರಮಾರ್ಥಸಾರಾಃಕಥಾ ವದಂತಶ್ಚ ಪುರಾತನಾಸ್ತಥಾ ॥೭॥

ಸತ್ಸಂಗಮಾಕಾಂಕ್ಷಿಣಃ ಏವ — ಸಜ್ಜನರ ಸಹವಾಸವನ್ನು ಅಪೇಕ್ಷಿಸಿಕೊಂಡೇ ಇರುವ, ತೇ ಮುನೀಂದ್ರ

ವೃಂದಾಃ—ಮುನಿಶ್ರೇಷ್ಠರ ಸಮೂಹಗಳು, ಅನ್ಯೇಚ—ಮತ್ತಂದೆ ಹೇಳುವ ಮುನೀಂದ್ರರೂ, ಪರಮಾರ್ಥಸಾರಾಃ—ಶ್ರೀಹರಿಯು ಸರ್ವೋತ್ತಮತ್ವತತ್ವವನ್ನು ಪ್ರತಿಪಾದಿಸುವದರಿಂದ ಶ್ರೇಷ್ಠವಾದ, ಕಥಾಃ—ಕಥೆಗಳನ್ನು, ಏಭ್ಯಃ—ಪಾಂಡವರಿಂದ, ಶೃಣ್ವಂತಃ ಸಂತ—ಕೇಳುವಂಥವರಾಗಿ, ತಥಾ—ಹಾಗೆ, ಪುರಾತನಾಃ ಕಥಾಃ—ಹಿಂದಿನ ಕಥೆಗಳನ್ನು, ವದಂತಃ ಚ—ಹೇಳುವಂಥವರಾಗಿ, ಪಾರ್ಥೈಃ ಸಹ—ಆ ಪಾಂಡವರಿಂದ ಕೂಡಿಕೊಂಡು, ಅವಸನ್—ವಾಸಿಸಿದರು ॥೭॥

ಏವಂ ಗಜಾನಾಂ ಬಹುಕೋಟಿವೃಂದಾಂ ಸ್ತಥಾ ರಥಾನಾಂ ಚ ಹಯಾಂಶ್ಚ ವೃಂದಶಃ ॥
ವಿಸೃಜ್ಯ ರತ್ನಾನಿ ನರಾಂಶ್ಚ ವೃಂದಶೋ ವನೇ ವಿಜಹ್ರುರ್ದಿವಿ ದೇವವತ್ ಸುಖಂ ॥೮॥

(ಪಾಂಡವರು) ಏವಂ—ಈ ರೀತಿಯಲ್ಲಾಗಿ, ಗಜಾನಾಂ—ಬಹುಕೋಟಿವೃಂದಾನ್—ಬಹಳ ಕೋಟಿ, ಆನೆಗಳ ವೃಂದಗಳನ್ನು, ತಥಾ—ಹಾಗೆಯೆ, ರಥಾನಾಂ—ರಥಗಳ ಸಮೂಹಗಳನ್ನು, ವೃಂದಶಃ ಹಯಾಂಶ್ಚ—ವೃಂದ ಸಂಖ್ಯಾಕಗಳಾದ ಕುದುರೆಗಳನ್ನೂ ಕೂಡ, ರತ್ನಾನಿ ಚ—ರತ್ನಗಳನ್ನೂ ಕೂಡ, ವಿಸೃಜ್ಯ—ತ್ಯಜಿಸಿ ದಿವಿ ದೇವವತ್—ಸ್ವರ್ಗದಲ್ಲಿ ದೇವತೆಗಳಂತೆ, ಸುಖಂ—ಸುಖವಾಗಿ, ವಿಜಹ್ರುಃ—ವಿಹರಿಸುತ್ತಿದ್ದರು, ॥೮॥

ವಿಶೇಷ : ಹತ್ತು ಕೋಟಿ ಎಂದರೆ ಒಂದು ಅರ್ಬುದ, (೧,೦೦೦೦೦೦೦)
ಹತ್ತು ಅರ್ಬುದ ವೆಂದರೆ ಒಂದು ವೃಂದ (ಒಂದು ವೃಂದ – ಹತ್ತು ಅರ್ಬುದ (೧೦೦೦೦೦೦೦೦೦)

ಗವಾಂ ಚ ಲಕ್ಷಂ ಪ್ರದದಾತಿ ನಿತ್ಯಶಸ್ಸುವರ್ಣಭಾರಾಂಶ್ಚ ಶತಂ ಯುಧಿಷ್ಠಿರಃ ॥
ಸಭ್ರಾತೃಕೋಽಸೌ ವನಮಾಪ್ಯ ಶಕ್ರವನ್ಮುಮೋದ ವಿಪ್ರೈಸ್ಸಹಿತೋ ಯಥಾಸುಖಂ ॥೯॥

(ಯುಧಿಷ್ಠಿರನು), ನಿತ್ಯಶ – ನಿತ್ಯದಲ್ಲಿಯೂ, ಗವಾಂ ಲಕ್ಷಂ – ಲಕ್ಷ ಗೋವುಗಳನ್ನು, ಶತಂ—ನೂರು, ಸುವರ್ಣಭಾರಾಂಶ್ಚ—ಸುವರ್ಣ ಭಾರಗಳನ್ನು, ಪ್ರದದಾತಿ—ಕೊಡುತ್ತಿದ್ದನು ಸಭ್ರಾತೃಕಃ ಅಸೌ—ಸೋದರರಿಂದ ಯುಕ್ತನಾದ ಈ ಯುಧಿಷ್ಠಿರನು, ವನಂ ಆಪ್ಯ—ಅರಣ್ಯವನ್ನು ಹೊಂದಿ, ವಿಪ್ರೈಃ ಸಹಿತಃ ಸನ್ – ಬ್ರಾಹ್ಮಣರಿಂದ ಸಹಿತನಾಗಿ, ಯಥಾಸುಖಂ – ಸುಖದಿಂದ, ಶಕ್ರವತ್— ದೇವೇಂದ್ರನಂತೆ, ಮುಮೋದ — ಆನಂದವನ್ನು ಹೊಂದಿದನು, ॥೯॥

ಸಾರ್ಥೇಷು ಯಾತೇಷು ಕಿಮತ್ರ ಕಾರ್ಯಮಿತಿ ಸ್ಮ ಪೃಷ್ಟೋ ವಿದುರೋಽಗ್ರಜೇನ ॥
ಆಹೂಯ ರಾಜ್ಯಂ ಪ್ರತಿಪಾದಯೇತಿ ಪ್ರಾಹೈನಮಾಹಾಥ ರುಷಾಽಽಂಬಿಕೇಯಃ ॥೧೦॥

ಸಾರ್ಥೇಷು ಯಾತೇಷು ಸತ್ಸು – ಪಾಂಡವರು ಆಡವಿಗೆ ಹೋದಮೇಲೆ, ಅತ್ರ ಕಿಂ ಕಾರ್ಯಮಿತಿ – ಈಗ ನಮ್ಮಿಂದ ಏನು ಮಾಡಲ್ಪಡಬೇಕು (ನಾವೇನು ಮಾಡಬೇಕು.) ಎಂದು, ಅಗ್ರಜೇನ ಅಣ್ಣನಾದ ಧೃತರಾಷ್ಟ್ರನಿಂದ, ಪೃಷ್ಟಃ—ಕೇಳಲ್ಪಟ್ಟ, ವಿದುರಃ— ವಿದುರರು, ಆಹೂಯ – ಪಾಂಡವರನ್ನು ಇಲ್ಲಿಗೆ ಕರೆಯಿಸಿ, ರಾಜ್ಯಂ ಪ್ರತಿಪಾದಯ – ರಾಜ್ಯವನ್ನು ತಿರುಗಿಕೊಡು, ಇತಿ ಪ್ರಾಹ – ಎಂದು ಹೇಳಿದನು, ಅಥ – ಅನಂತರ, ಆಂಬಿಕೇಯಃ=ಅಂಬಿಕಾ ತನಯನಾದ ಧೃತರಾಷ್ಟ್ರನು, ರುಷಾ—ಸಿಟ್ಟಿನಿಂದ, ಏನಂ – ಈ ವಿದುರರನ್ನು ಏನಿತ್ತು, ಆಹ – ನುಡಿದನು, ॥೧೦॥

ಜ್ಞಾತಂ ಪ್ರತಿಶ್ಲೋಽಸಿ ಮಮಾತ್ಮಜಾನಾಂ ನ ಮೇ ತ್ವಯಾ ಕಾರ್ಯಮಿಹಾಸ್ತಿ ಕಿಂಚನ ॥
ಯಥೇಷ್ಟತಸ್ತಿಷ್ಠ ವಾ ಗಚ್ಛ ವೇತಿ ಪ್ರೋಕ್ತೋ ಯಯೌ ವಿದುರಃ ಪಾಂಡವಾನ್ ॥೧೧॥

(ಎಲೈ ವಿದುರನೇ) (ತ್ವಂ–ನೀನು). ಮಮ ಆತ್ಮಜಾನಾಂ—ನನ್ನ ಮಕ್ಕಳಿಗೆ. ಪ್ರತೀಪಃ ಅಸಿ—ವಿರೋಧಿಯಾಗಿರುತ್ತಿ (ಎಂದು). ಜ್ಞಾತಂ - ತಿಳಿಯಿತು. ಇಹ – ಇಲ್ಲಿ, ಕಿಂಚಿತ್ ಕಾರ್ಯಂ— ಯಾವುದೇ ಕಾರ್ಯವು, ತ್ವಯಾ - ನಿನ್ನಿಂದ, ನ – ಇರುವದಿಲ್ಲ. ಯಥೇಷ್ಟತಃ—ನಿನ್ನ ಇಚ್ಛಾನುಸಾರವಾದಿ, ತಿಷ್ಠ = (ನಿನ್ನ ಮನೆಯಲ್ಲಿ)ಇರು ವಾ – ಅಥವಾ, ಗಚ್ಛ —ಹೊರಟುಹೋಗು, ಇತಿ—ಹೀಗೆ, ಪ್ರೋಕ್ತಃ – ಹೇಳಲ್ಪಟ್ಟ, ವಿದುರಃ—ವಿದುರರು, ಪಾಂಡುಪುತ್ರಾನ್ – ಪಾಂಡವರನ್ನು ಕುರಿತು, ಯಯೌ – ಹೋದರು. ॥೧೧॥

ತಸ್ಮಿನ್ ಗತೇ ಭ್ರಾತೃವಿಯೋಗಕರ್ಶಿತಃ ಪಪಾತ ಭೂಮೌ ಸಹಸೈವ ರಾಜಾ ॥
ಸಂಜ್ಞಾಮವಾಪಾಶ್ವದಿಶದಾಶು ಸಂಜಯಂ ಜೀವಾಮಿ ಚೇದಾಶು ಮಮಾನಯಾನುಜಂ ॥೧೨॥

ತಸ್ಮಿನ್ ಗತೇ ಸತಿ – ಆ ವಿದುರರು ಹೊರಹೋಗುತ್ತಿರಲು, ಭ್ರಾತೃವಿಯೋಗಕರ್ಶಿತಃ:— ಸಹೋದರನ ವಿರಹದಿಂದ ದುಃಖಿತನಾದ, ರಾಜಾ – ಧೃತರಾಷ್ಟ್ರನು, ಸಹಸೈವ – ಒಮ್ಮೆಲೆ, ಭೂಮೌ ಪಪಾತ – ಭೂಮಿಯ ಮೇಲೆ ಬಿದ್ದನು, ಆಶು – ಬೇಗನೆ, ಸಂಜ್ಞಾಂ ಅವಾಪ್ತ—ಎಚ್ಚರವನ್ನು ಹೊಂದಿ, ಮಮಅನುಜಂ – ನನ್ನ ತಮ್ಮನಾದ ವಿದುರನನ್ನು, ಆಶು - ಶೀಘ್ರದಲ್ಲಿ, ಆನಯ—ಕರೆದುಕೊಂಡು ಬಾ, ಆನಯಿಷ್ಯಸಿಚೇತ್–ಕರೆತಂದರೆ, ಜೀವಾಮಿ – ಬದುಕುತ್ತೇನೆ, ಇತಿ–ಎಂದು, ಸಂಜಯಂ ಸಂಜಯನನ್ನು ಕುರಿತು,(ಉಕ್ತ್ವಾ) ಅದಿಶತ್ – (ಹೇಳಿ) ಕಳುಹಿಸಿದನು ಆಜ್ಞಾಪಿಸಿದನು. ॥೧೨॥

ಇತೀರಿತಸ್ಸಂಜಯಃ ಪಾಂಡವೇಯಾನ್ ಪ್ರಾಪ್ಯಾನಯದ್ದ್ವಿದುರಂ ಶೀಘ್ರಮೇವ ॥
ಸೋಽಪ್ಯಾಗತಃ ಕ್ಷಿಪ್ರಮುಪಾಸ್ತದೋಷೋ ಜ್ಯೇಷ್ಠಂ ವವಂದೇಽಥ ಸ ಚೈನಮಾಶ್ಲಿಷತ್ ॥೧೩॥

ಇತಿ ಈರಿತಃ — ಈ ರೀತಿ ಹೇಳಿಸಿಕೊಂಡ, ಸಂಜಯಃ— ಸಂಜಯನು, ಶೀಘ್ರಂಏವ — ಬೇಗನೆ, ಪಾಂಡವೇಯಾನ್ ಪ್ರಾಪ್ಯ – ಪಾಂಡವರನ್ನು ಹೊಂದಿ, ವಿದುರಂ—ವಿದುರರನ್ನು, ಆನಯತ್ – ಕರೆದುಕೊಂಡುಬಂದನು, ಆಗತಃ ಸಃ ಅಪಿ - ತಿರುಗಿ ಬಂದಿರುವ ಆ ವಿದುರರಾದರೂ, ಅಪಾಸ್ತದೋಷಃ ಸನ್—ಸಿಟ್ಟೆಂಬ ದೋಷವನ್ನು ಕಳೆದು ಶಾಂತವರಾಗಿ, ಜ್ಯೇಷ್ಠಂ ವವಂದೇ ಹಿರಿಯನಾದ ಧೃತರಾಷ್ಟ್ರನನ್ನು ನಮಸ್ಕರಿಸಿದರು, ಅಥ – ಆಮೇಲೆ, ಸಚ – ಧೃತರಾಷ್ಟ್ರನು, ಏನಂ—ಈ ವಿದುರರನ್ನು, ಅಶ್ಲಿಷತ್ – ಆಲಿಂಗಿಸಿಕೊಂಡನು. ॥೧೩॥

ಅಂಕಂ ಸಮಾರೋಪ್ಯ ಸ ಮೂರ್ಧ್ನ ಚೈನಮಾಘ್ರಾಯ ಲೇಭೇ ಪರಮಾಂ ಮುದಂತದಾ ॥
ಕ್ಷತ್ತಾರ ಮಾಯಾಂತ ಮುದೀಕ್ಷ್ಯ ಸರ್ವೇ ಸಸೌಬಲಾ ಧಾರ್ತರಾಷ್ಟ್ರಾ ಅಮುಹ್ಯನ್ ॥೧೪॥

ಸಮ್ಮಂತ್ರ್ಯ ಹಂತುಂ ಪಾಂಡವಾನಾ ಮುತೈಕಂ ಛನ್ನೋಪಧೇನೈವ ಸಸೂತಜಾ ಯಯುಃ ॥
ವಿಜ್ಞಾಯ ತೇಷಾಂ ಗಮನಂ ಸಮುಕ್ತಲೋಕಾಂತರಾತ್ಮಾ ಪಮೇಶ್ವರೇಶ್ವರಃ ॥೧೫॥

ವ್ಯಾಸೋಽಭಿಗನ್ಯಾವದದಾಂಬಿಕೇಯಂ ನಿವಾರಯಾಶ್ವೇವ ಸುತಂ ತವೇತಿ ॥
ಅವಾಪ್ಯ ಪಾರ್ಥಾನಯಮದ್ಯಮೃತ್ಯುಂ ಸಹಾನುಬಂಧೋ ಗಮಿತಾ ಹ್ಯಶಂಕಯಂ ॥೧೬॥

ಸಃ–ಆ ಧೃತರಾಷ್ಟ್ರನು, ಏನಂ—ಈ ವಿದುರರನ್ನು, ಅಂಕಂ ಸಮಾರೋಪ್ಯ—ತೊಡೆಯ ಮೇಲೆ ಕೂರ್ಸಿಕೊಂಡು, ಚ —ಮತ್ತು, ಮೂರ್ಧ್ನಿ ಆಘ್ರಾಯ – ಶಿರಸ್ಸನ್ನು ಆಘ್ರಾಣಮಾಡಿ, ತದಾ –ಆಗ, ಪರಮಾಂ ಮುದಂ–

ಬಹಳವಾದ ಆನಂದವನ್ನು, ಲೇಭೇ – ಹೊಂದಿದನು, ಆಯಾಂತಂ ಕ್ಷತ್ತಾರಂ – ತಿರುಗಿ ಬರುತ್ತಿರುವ ಆ ವಿದುರ ರನ್ನು ಉದೀಕ್ಷ್ಯ – ನೋಡಿ, ಸಸೌಬಲಾ: – ಶಕುನಿಯಿಂದ ಸಹಿತರಾದ, ಸರ್ವೇ ಧಾರ್ತರಾಷ್ಟ್ರಾ:— ಎಲ್ಲ ದುರ್ಯೋಧನಾದಿಗಳು, ಅವಮರ್ಶಾತ್—ಸಿಟ್ಟಿನಿಂದ, ಸಮಂತ್ರ್ಯ – ಚೆನ್ನಾಗಿ ವಿಚಾರವಮಾಡಿ, ಪಾಂಡವಾನಾಂ ಏಕಮುತ ಪಾಂಡವರಲ್ಲಿಯ ಒಬ್ಬನನ್ನಾದರೂ, ಹಂತುಂ – ಕೊಲ್ಲುವುದಕ್ಕಾಗಿ, ಧನೋಷಧೇನೈವ - ಬೇರೆ ನೆಪದಿಂದ ಮುಚ್ಚಿಟ್ಟುಕೊಂಡ ಕಪಟದಿಂದ (ಪಾಂಡವಲ್ಲಿ ಒಬ್ಬನನ್ನಾದರೂ ಕೊಲ್ಲಬೇಕೆಂಬ ಕಪಟವನ್ನು ಹೃದಯದಲ್ಲಿ ಟ್ಟುಕೊಂಡಿರೂ ವನವನ್ನು ನೋಡುವ ನೆವದಿಂದ) ಸಸೂತಜಾ: ಸಂತ: – ಕರ್ಣನಿ ದ ಸಹಿತರಾಗಿ, (ವನಂ) ಯಯುಃ— (ಅರಣ್ಯಕ್ಕೆ) ಹೋದರು; ಸಪುಸ್ತ್ರಲೋಕಾಂತರಾತ್ಮಾ – ಎಲ್ಲ ಲೋಕಗಳಿಗೂ ಅಂತರ್ಯಾಮಿಯಾಗಿರುವವನಾದ, ಪರಮೇಶ್ವರೇಶ್ವರ: – ಪ್ರಭುಗಳಿಗೂ ಪ್ರಭುವಾದ, ವ್ಯಾಸಃ – ವೇದವ್ಯಾಸರವರು, ತೇಷಾಂ ಗಮನಂ ವಿಜ್ಞಾಯ – ಆ ದುರ್ಯೋಧನಾದಿಗಳ ಗಮನವನ್ನು (ಗಮನ ಕಾರಣವನ್ನು) ತಿಳಿದು. ಅಂಬಿಕೇಯಂ– ಧೃತರಾಷ್ಟ್ರನನ್ನು, ಅಭಿಗಮ್ಯ—ಹೊಂದಿ, ತವ ಸುತಂ—ನಿನ್ನ ಮಗನನ್ನು, ಆಶು - ಬೇಗನೆ, ನಿವಾರಯ.— ನಿವಾರಣೆ ಮಾಡು, ಇತಿ—ಎಂದು ಅವದತ್—ಹೇಳಿದರು, ನ ಚೇತ್—ತಡೆಯದಿದ್ದರೆ, ಅಯಂ ಅದ್ಯ ಪಾರ್ಥಾನ್ ಅವಾಪ್ಯ–ಈ ದುರ್ಯೋಧನನು ಇಂದು ಪಾಂಡವರನ್ನು ಹೊಂದಿ, ಅಸಂಶಯಂ–ನಿಶ್ಚಯವಾಗಿ, ಸಹಾನುಬಂಧ:– ಬಾಂಧವರಿಂದ ಕೂಡಿಕೊಂಡು, ವ್ಯಾತ್ಯಂ ಗಮಿತಾ – ವ್ಯಾತ್ಯವನ್ನು ಹೊಂದುವನು, (ಅದ್ದರಿಂದ ಅವನನ್ನು ನಿವಾರಿಸು) ಇತಿ–ಎಂದು, ಅವದತ್—ಹೇಳಿದರು ॥೧೪॥೧೫॥೧೬॥

ಇತೀರಿತೇ ತೇನ ನಿವಾರಯೇತಿ ಪ್ರೋಕ್ತೋಹರಿಃ ಪ್ರಾಹ ನ ಸಂವದೇ ತೈಃ ।
ಮೈತ್ರೇಯ ಆಯಾಸ್ಯತಿ ಸೋಽಪಿ ವಾಚಂ ಶಿಕ್ಷಾರ್ಥಮೇತೇಷ್ವಭಿಧಾಸ್ಯತೀಹ ॥೧೭॥

ತಾಂ ಚೇತ್ಕರೋತ್ಯೇಷ ಸುತಸ್ತವಾಸ್ಯ ಭದ್ರಂ ತದಾ ಶಪ್ಸ್ಯತಿತ್ವನ್ನೃಥಾ ಸಃ ।
ಉಕ್ತ್ವೇತಿ ರಾಜಾನಮನಂತಶಕ್ತಿರ್ವ್ಯಾಸೋ ಯಯೌ ತತ್ರ ಗತೇಷು ತೇಷು ॥೧೮॥

ಇತಿ ಈರಿತೇ ಸತಿ—ಈ ರೀತಿ ವೇದವ್ಯಾಸರಿಂದ ಹೇಳಲ್ಪಡುತ್ತಿರಲು, ತೇನ—ಧೃತರಾಷ್ಟ್ರನಿಂದ, ನಿವಾರಯ—ನೀನೇ ನಿವಾರಿಸು. ಇತಿ – ಎಂದು, ಪ್ರೋಕ್ತಃ – ಹೇಳಲ್ಪಟ್ಟ, ಹರಿಃ – ವೇದವ್ಯಾಸರು, ತೈಃ ಸಹ ನ ಸಂವದೇ – ಅವರ ಜೊತೆಗೆ ನಾನು ಮಾತನಾಡುವದಿಲ್ಲ:, ಮೈತ್ರೇಯಃಆಯಾಸ್ಯತಿ—ಮೈತ್ರೇಯ ಎಂಬ ಮುನಿಯು ಬರುತ್ತಾನೆ. ಸಃ ಅಪಿ – ಅವನೂ ಕೂಡ, ಏತೇಷು – ದುರ್ಯೋಧನಾದಿಗಳಿಗೆ, ಶಿಕ್ಷಾರ್ಥಂ – ಶಿಕ್ಷೆಗಾಗಿ, ವಾಚಂ—ಮಾತನ್ನು, ಅಭಿಧಾಸ್ಯತಿ – ಹೇಳುವನು, ಏಷಃ ತವ ಸುತಃ—ಈ ನಿನ್ನ ಮಗನಾದ ದುರ್ಯೋಧನನು, ತಾಂ ಚೇತ್ ಕರೋತಿ – ಆ ಮೈತ್ರೇಯ ಮುನಿಯ ಮಾತನ್ನು ನಡೆಸಿದರೆ, ಭದ್ರಂ – ಅವನಿಗೆ ಮಂಗಲವಾಗುವದು, ಅನ್ಯಥಾ ಇಲ್ಲವಾದರೆ. ಸಃ – ಆ ಮೈತ್ರೇಯ ಮುನಿಯು, ಶಪ್ಸ್ಯತಿ—ಶಾಪವನ್ನು ಕೊಡುತ್ತಾನೆ, ಇತಿ – ಎಂದು ಪ್ರಾಹ – ಹೇಳಿದರು, ಇತಿ – ಹೀಗೆ, ರಾಜಾನಂ—ರಾಜನಾದ ಧೃತರಾಷ್ಟ್ರನನ್ನು ಕುರಿತು, ಉಕ್ತ್ವಾ – ಹೇಳಿ, ಅನಂತಶಕ್ತಿ:—ಅಪಾರ ಸಾಮರ್ಥ್ಯವುಳ್ಳ, ವ್ಯಾಸಃ –ವೇದವ್ಯಾಸರು, ಯಯೌ—ಹೊರಟು ಹೋದರು, (ತತ್ರ ಗತೇಷು ತೇಷು ಎಂಬ ಪದಗಳನ್ನು ಮುಂದಿನ ಶ್ಲೋಕಕ್ಕೆ ಅನ್ವಯಿಸಿಕೊಳ್ಳಬೇಕು.) ॥೧೭॥೧೮॥

ಸುಯೋಧನಾದ್ಯೇಷು ಹತೇಷು ಪಾರ್ಥೈರ್ಭೂಭಾರ ಹಾನಿರ್ಭವಿತೇತಿ ಪ್ರಭುಃ ।
ಸರ್ವಾಶ್ಚ ಚೇಷ್ಟಾ ಭಗವನ್ನಿಯುಕ್ತಾಸ್ತದಾ ಸಮುಸ್ತಸ್ಯ ಚಿತೋಽಚಿತಶ್ಚ ॥೧೯॥

ತಥಾಽಪಿ ವಿಷ್ಣುರ್ವಿನಿವಾರಯೇತ್ಕ್ಷಚಿದ್ವಾಚಾ ವಿಧತ್ತೇ ಚ ಜನಾನ್ವಿಡಂಬಯನ್ ॥೨೦॥

ತತ್ರ ಗತೇಷು ಸಂಯೋಧನಾದ್ಯೇಷು— ವನಕ್ಕೆ ಹೋದ ದುರ್ಯೋಧನಾದಿಗಳು, ತತ್ರ—ಅಲ್ಲಿಯೇ, ಹತೇಷು ಸತ್ಸು —ಮೃತರಾದರೆ, ಭೂಭಾರಹಾನಿಃ ನ ಭವೇತ್— ಸಕಲ ಭೂಭಾರಹಾನಿಯೂ ಆಗಲಾರದೆ, ಇತಿ— ಎಂದೂ, ಪ್ರಭುಃ — ಸಮರ್ಥರಾದ ಬಾದರಾಯಣರು ರಾಜನನ್ನು ಕುರಿತು ದುರ್ಯೋಧನಾದಿಗಳನ್ನು ನಿವಾರಿಸು ಎಂದು ಹೇಳಿದರು, ಸದಾ—ಯಾವಾಗಲೂ, ಸಮಸ್ತಸ್ಯ — ಎಲ್ಲ, ಚಿತಃ ಅಚಿತಶ್ಚ—ಚೇತನ ಮತ್ತು ಅಚೇತನಗಳ ಸರ್ವಾಃ ಚೇಷ್ಟಾಃ —ಎಲ್ಲ ಕ್ರಿಯಾಗಳು, ಭಗವನ್ನಿಯಂಕ್ತಾಃ — ಭಗವಂತನಿಂದಲೇ ಪ್ರೇರಿತರಾಗಿರುತ್ತವೆ. ತಥಾಪಿ — ಆದರೂ. ವಿಷ್ಣುಃ — ಶ್ರೀಹರಿಯು, ಜನಾನ್ ವಿಡಂಬಯನ್ — ಜನರನ್ನು ಅನುಕರಣೆಮಾಡುತ್ತ. ವಾಚಾ — ಮಾತಿನಿಂದ, ಕ್ವಚಿತ್ — ಕೆಲವು ಪ್ರಸಂಗಗಳಲ್ಲಿ, ವಿನಿವಾರಯೇತ್ — ಆ ಕಾರ್ಯಗಳನ್ನು ನಿವರ್ತನ ಮಾಡುತ್ತಾನೆ, ಚ — ಹಾಗೆಯೇ, ವಿಧತ್ತೆ — ವಿಧಾನ ಮಾಡುತ್ತಾನೆ. ॥೧೯॥೨೦॥

ವಿಶೇಷ :— ೧) ಕೇವಲ ದುರ್ಯೋಧನಾದಿಗಳೇ ಅರಣ್ಯದಲ್ಲಿ ಹತರಾದರೆ ಭೂಭಾರಭೂತವಾದ ಬಹಳ ಅಕ್ಷೋಹಿಣೀ ಸೇನೆಯೂ ನಾಶವಾಗುವದಿಲ್ಲ ಎಂಬ ಅಭಿಪ್ರಾಯದಿಂದ ಬಾದರಾಯಣರು ಈಗ ದುರ್ಯೋಧನಾದಿಗಳನ್ನು ನಿವಾರಣೆ ಮಾಡಲು ಹೇಳಿದರು.

೨) ದುಷ್ಟರಾದ ದುರ್ಯೋಧನಾದಿಗಳು ತಮ್ಮ ಉಪದೇಶಕ್ಕೆ ಯೋಗ್ಯರಲ್ಲವೆಂದು ತಿಳಿಸಲೋಸ್ಕರವೇ ಧೃತರಾಷ್ಟ್ರನಿಂದ 'ಉಪದೇಶಿಸಿರಿ' ಎಂದು ಹೇಳಲ್ಪಟ್ಟರೂ ದುರ್ಯೋಧನಾದಿಗಳಿಗೆ ತಾವು ಹೇಳುವದಿಲ್ಲ; ಮೈತ್ರೇಯ ಮುನಿಯು ಶಿಕ್ಷಣವನ್ನು ಕೊಡುವನು ಎಂದು ತಿಳಿಸಿದರು, ತಮ್ಮ ಅಸಾಮರ್ಥ್ಯದಿಂದ ದುರ್ಯೋಧನಾದಿಗಳಿಗೆ ಉಪದೇಶಿಸಿಲ್ಲ ಎಂದು ತಿಳಿಯಬಾರದು. ಏಕೆಂದರೆ ಎಲ್ಲ ಚೇತನರಿಗೂ ಅಂತಃ ಪ್ರೇರಕನು ಭಗವಂತನೇ.

ಮೈತ್ರೇಯ ಆಗಾದಥ ಭೂಪತಿಶ್ಚ ಪುತ್ರಾನ್ ಸಮಾಹೂಯ ಸಕರ್ಣಸೌಬಲಾನ್ ।।
ಸಂಪೂಜಯಾಮಾಸ ಮುನಿಂ ಸಚಾಹ ದಾತುಂ ರಾಜ್ಯಂ ಪಾಂಡವಾನ್ ಸಂಪ್ರಶಂಸನ್ ।
ವಿಶೇಷತೋ ಭೀಮಬಲಂ ಶಶಂಸ ಕೀರ್ಮೀರನಾಶಾದಿ ವದನ್ನುನೀಂದ್ರಃ ।।೨೧॥

ಅಥ: — ಅನಂತರ ಮೈತ್ರೇಯಃ · ಮೈತ್ರೇಯ ಮುನಿಗಳು, ಆಗಾತ್ — ಅಲ್ಲಿ ಬಂದರು, ಭೂಪತಿಶ್ಚ — ರಾಜನಾದ ಧೃತರಾಷ್ಟ್ರನು, ಸಕರ್ಣಸೌಬಲಾನ್ — ಕರ್ಣ ಶಕುನಿಯಿಂದ ಸಹಿತರಾದ, ಪುತ್ರಾನ್ — ತನ್ನ ಮಕ್ಕಳಾದ ದುರ್ಯೋಧನಾದಿಗಳನ್ನು · ಆಹೂಯ — ಅರಣ್ಯದಿಂದ ಕರೆಯಿಸಿ, ಮುನಿಂ ಮೈತ್ರೇಯ ಮುನಿಗಳನ್ನು, ಸಂಪೂಜಯಾಮಾಸ — ಚೆನ್ನಾಗಿ ಪೂಜಿಸಿದನು, ಸ ಚ ಮುನೀಂದ್ರಃ — ಆ ಮೈತ್ರೇಯ ಮುನೀಂದ್ರರು, ಪಾಂಡವಾನ್ ಪಾಂಡವರನ್ನು ಸಂಪ್ರಶಂಸನ್ — ಚೆನ್ನಾಗಿ ಹೊಗಳುತ್ತ, ರಾಜ್ಯಂ ದಾತುಂ — ರಾಜ್ಯವನ್ನು ತಿರುಗಿಕೊಡಲು, ಆಹ — ಹೇಳಿದರು, ಕಿರ್ಮೀರ ನಾಶಾದಿ ವದನ್ — ಕಿರ್ಮೀರನ ಹತ್ಯೆ ಮುಂತಾದವುಗಳನ್ನು ಹೇಳುತ್ತ. ವಿಶೇಷತಃ — ವಿಶೇಷವಾಗಿ ಭೀಮಬಲಂ - ಭೀಮಸೇನರ ಸಾಮರ್ಥ್ಯವನ್ನು, ಶಶಂಸ - ಪ್ರಶಂಸಿಸಿದರು. ॥೨೧॥

ಶ್ರುತ್ವಾ ಸಹಸ್ತದ್ಧೃತರಾಷ್ಟ್ರ ಪುತ್ರ ಆಸ್ಫಾಲಯಾಮಾಸ ನಿಜೋರುಮುಗ್ರಃ ॥
ಶಶಾಪಚೈನಂ ಮುನಿರುಗ್ರತೇಜಾಸ್ತವೋರುಭೇದಃ ಯ ಭವೇತ್ಸಯುದ್ಧಂ ॥೨ ॥

ಉಗ್ರಃ — ಧೃತರಾಷ್ಟ್ರಪುತ್ರಃ—ಕ್ರೂರನಾದ, ಧೃತರಾಷ್ಟ್ರನ ಮಗನಾದ ದುರ್ಯೋಧನನು, ತತ್ — ಭೀಮ ಬಲ ಪ್ರಶಂಸೆಯನ್ನು, ಶ್ರುತ್ವಾ ಕೇಳಿ, ಅಸಹನ್ — ಸಹಿಸದವನಾಗಿ, ನಿಜೋರುಂ—ತನ್ನ ತೊಡೆಯನ್ನು, ಆಸ್ಫಾಲಯಾಮಾಸ — ಬಡಿದುಕೊಂಡನು, ಉಗ್ರತೇಜಾಃ ಮುನಿಃ —ಮಹಾಸಾಮರ್ಥ್ಯವುಳ್ಳ ಮೈತ್ರೇಯ ಮುನಿಗಳು,

ಏನಂ – ಈ ದುರ್ಯೋಧನನನ್ನು ಕುರಿತು, ತವ ಊರುಭೇದಾಯ—ನಿನ್ನ ತೊಡೆಯ ಭೇದಕ್ಕಾಗಿ, ಸಂಯುದ್ಧಂ—ಚೆನ್ನಾಗಿ ಯುದ್ಧವು, ಭವೇತ್ – ಆಗಲಿ ಎಂದು, ಶಶಾಪ—ಶಾಪವನ್ನು ಕೊಟ್ಟರು; ॥೨೨॥

ಇತ್ಯೂಚಿವಾನ್ ಧೃತರಾಷ್ಟ್ರನತೋಽಪಿ ಯಯೌ ನ ಚೇದ್ರಾಜ್ಯದಸ್ತ್ವಂ ತಥೇತಿ ।
ಶ್ರುತ್ವಾ ತು ಕಿರ್ಮೀರವಧಂ ಸ್ವಪಿತ್ರಾ ಪೃಷ್ಟಕ್ಷತಾತ್ಸೋಽತ್ರಸದ್ಧಾರ್ತರಾಷ್ಟ್ರಃ ॥೨೩॥

ಧೃತರಾಷ್ಟ್ರನತಃ ಅಪಿ—ಧೃತರಾಷ್ಟ್ರನಿಂದ ಚೆನ್ನಾಗಿ ಪೂಜಿಸಲ್ಪಟ್ಟಿದ್ದರೂ ತ್ವಂ ರಾಜ್ಯದಃ ನ ಚೇತ್—ನೀನು ಪಾಂಡವರಿಗೆ ರಾಜ್ಯವನ್ನು ಮರಳಿ ಕೊಡದಿದ್ದ ಪಕ್ಷದಲ್ಲಿ, ತಥಾ (ಭವತಿ) ನಾನು ಹೇಳಿದಂತೆಯೇ ಆಗುವದು. ಇತಿ – ಈ ರೀತಿ, ಊಚಿವಾನ್—ಹೇಳಿದ ಆ ಮುನಿಗಳು, ಯಯೌ – ಅಂದೆ ಹೊರಟರು, ಸ್ವಪಿತ್ರಾ – ತನ್ನ ತಂದೆಯಿಂದ, ಪೃಷ್ಟಕ್ಷಿತಾ ಉಕ್ತಂ – ಪ್ರಶ್ನಿಸಲ್ಪಟ್ಟ ವಿದುರನಿಂದ ಹೇಳಲ್ಪಟ್ಟ, ಕಿರ್ಮೀರವಧಂ—ಕಿರ್ಮೀರದೈತ್ಯನ ನಾಶವನ್ನು, ಶ್ರುತ್ವಾ – ಕೇಳಿ, ಧಾರ್ತರಾಷ್ಟ್ರಃ – ದುರ್ಯೋಧನನಂ, ಅತ್ರಸತ್—ಕಳವಳಗೊಂಡನು ॥೨೩॥

ವನೇ ವಸಂತೋಽಥ ಪೃಥಾಸುತಾಸ್ತೇ ವಾರ್ತಾಂ ಸ್ವಕೀಯಾಂ ಪ್ರಾಪಯಾಮಾಸುರಾಶು ॥
ಕೃಷ್ಣೇ ಸೋಽಪಿ ದ್ರುತಮಾಯಾತ್ಸಸತ್ಯ ಸಂಬಂಧಿನೋ ಯೇ ಚ ಪಾಂಚಾಲಮುಖ್ಯಾಃ ॥೨೪॥

ಅಥ - ಅನಂತರ, ವನೇ ವಸಂತಃ – ವನದಲ್ಲಿ ವಾಸಮಾಡಿಕೊಂಡಿರುವ, ತೇ ಪೃಥಾಸುತಾಃ – ಆ ಕುಂತೀ ಪುತ್ರರಾದ ಪಾಂಡವರು, ಸ್ವಕೀಯಾಂ ವಾರ್ತಾಂ—ತಮ್ಮ ವೃತ್ತಾಂತವನ್ನು, ಕೃಷ್ಣೇ – ಶ್ರೀ ಕೃಷ್ಣನಿಗೋಸ್ಕರ, ಆಶು—ಬೇಗನೆ, ಪ್ರಾಪಯಾಮಾಸುಃ – ಕಳುಹಿಸಿದರು, ಸಃ ಅಪಿ—ಆ ಶ್ರೀಕೃಷ್ಣನೂ ಕೂಡ, ದ್ರುತಂ – ಬೇಗನೆ ಸಸತ್ಯಃ ಸನ್— ಸತ್ಯಭಾಮಾದೇವಿಯಿಂದ ಸಹಿತನಾಗಿ, ಆಯಾತ್ – ಪಾಂಡವರಲ್ಲಿಗೆ ಬಂದನು, ಚ—ಮತ್ತು, ಪಾಂಚಾಲಮುಖ್ಯಾಃ – ದ್ರುಪದರಾಜನೇ ಮುಂತಾದ, ಯೇ ಸಂಬಂಧಿನಃ—ಪಾಂಡವರ ಯಾವ ಸಂಬಂಧಿಕರೋ, (ತೇ ಚ – ಅವರೂ ಕೂಡ,ಅಲ್ಲಿಗೆ ಬಂದರು) ॥೨೪॥

ಕ್ರುದ್ಧಂ ಕೃಷ್ಣಂ ಧಾರ್ತರಾಷ್ಟ್ರಾಯ ಪಾರ್ಥಾಃ ಕ್ಷಮಾಪಯಂತಮಾಸುರುಚ್ಚೈರ್ಗೃಣಂತಃ ।
ಗುಣಾಂಸ್ತದೀಯಾನಮಿತಾನ್ ಪ್ರಣಮ್ಯ ತದಾರುದಂತೀ ದ್ರೌಪದೀ ಚಾಪಪಾದೌ ॥೨೫॥

ಧಾರ್ತರಾಷ್ಟ್ರಾಯ – ದುರ್ಯೋಧನನ ಮೇಲೆ, ಕ್ರುದ್ಧಂ ಕೃಷ್ಣಂ – ಕ್ರುದ್ಧನಾದ ಕೃಷ್ಣನನ್ನು, ಪಾರ್ಥಾಃ– ಪಾಂಡವರು. ತದೀಯಾನ್ ಅಮಿತಾನ್ ಗುಣಾನ್—ಆ ಶ್ರೀಕೃಷ್ಣನ ಅಪಾರವಾದ ಗುಣಗಳನ್ನು, ಉಚ್ಚೈಃ ಗೃಣಂತಃ ಸಂತಃ – ಬಹಳವಾಗಿ ಸ್ತುತಿಸುವವರಾಗಿ, ಪ್ರಣಮ್ಯ – ನಮಸ್ಕರಿಸಿ, ಕ್ಷಮಾಪಯಾಮಾಸುಃ—ಕ್ಷಮಾಯುಕ್ತನನ್ನಾಗಿ ಮಾಡಿದರು. ತದಾ – ಆಗ ರುದಂತೀ – ಅಳುತ್ತಿರುವಂಥ, ದ್ರೌಪದೀ – ದ್ರೌಪದೀದೇವಿಯು, ಪಾದೌ– ಶ್ರೀಕೃಷ್ಣನ ಪಾದಗಳನ್ನು, ಆಪ – ಹೊಂದಿದಳು ॥೨೫॥

ಸಾ ಪಾದಯೋಃ ಪತಿತಾ ವಾಸುದೇವಮುತ್ತಮಂ ಪ್ರಭುಮಾತ್ಮತಂತ್ರಂ ॥
ಅಚಿಂತ್ಯನಿತ್ಯಾಕ್ಷಯಪೂರ್ಣಸದ್ಗುಣಾರ್ಣವೈಕದೇಹಾಖಿಲದೋಷದೂರ ॥೨೬॥

ರಮಾಬ್ಜಜೇರೇಶ ಸುರೇಂದ್ರ ಪೂರ್ವವ್ಯಂದಾರಕಾಣಾಂ ಸತತಾಭಿವಂದ್ಯ ।।
ಸಮಸ್ತಚೇಷ್ಟಾಪ್ರದಸರ್ವಜೀವಪ್ರಭೋ ವಿಮುಕ್ತಾಶ್ರಯ ಸರ್ವಸಾರ ॥೨೭॥

ಇತಿ-ಬ್ರುವಂತೀಸಕಲಾನುಭೂತಂ ಜಗಾದ ಸರ್ವೇಶಿತುರಚ್ಯುತಸ್ಯ ।
ಯಸ್ಮಾಧಿಕಾನುಗ್ರಹಪಾತ್ರಭೂತಾ ಸ್ವಯಂಹಿ ಶೇಷೇಶವಿಪಾದಿಕೇಭ್ಯಃ ॥೨೮॥

ಶ್ರುತ್ವಾ ಸಮಸ್ತಂ ಭಗವಾನ್ಪ್ರತಿಜ್ಞಾಂ ಚಕಾರ ತೇಷಾಮುಖಿಲಾಶ್ಚ ಯೋಷಾಃ ॥
ಪತೀನ್ ಸಮಾಲಿಂಗ್ಯ ವಿಮುಕ್ತಕೇಶಾ ಭೀಮಾಹತಾನ್‌ದರ್ಶಯೇ ನಾನ್ಯಥೇತಿ ।।೨೯।।

ಸಾ—ಆ ದ್ರೌಪದಿಯಂ ಪಾದಯೋಃ—ಪತಿತಾ ಸತೀ—ಶ್ರೀಕೃಷ್ಣನ ಪಾದಗಳ ಮೇಲೆ ಬಿದ್ದವಳಾಗಿ, ಸಮಸ್ತಪ್ರಭುಂ—ಎಲ್ಲರಿಗೂ ನಿಯಾಮಕನಾದ, ಆತ್ಮತಂತ್ರಂ—ಸರ್ವತಂತ್ರಸ್ವತಂತ್ರನಾದ, ವಾಸುದೇವಂ—ಶ್ರೀಕೃಷ್ಣನನ್ನು, ಅಸ್ತೌತ್—ಈ ರೀತಿಯಿಂದ ಸ್ತೋತ್ರ ಮಾಡಿದಳು, ಅಚಿಂತ್ಯನಿತ್ಯಾವ್ಯಯಪೂರ್ಣಸದ್ಗುಣಾರ್ಣವೈಕದೇಹ—ಯಾರಿಂದಲೂ ಧ್ಯಾನಿಸಲು ಅಸಾಧ್ಯವಾದ ನಿತ್ಯವಾದ, ವಿಕಾರ ರಹಿತವಾದ. ಪರಿಪೂರ್ಣವಾದ, ಸದ್ಗುಣಗಳ ಸಮೂಹವೇ ಶರೀರವಾಗಿ ಉಳ್ಳಂತಹ ದೇವನೇ, ಅಖಿಲದೋಷದೂರ—ಎಲ್ಲದೋಷ ವರ್ಜಿತನಾಗಿರುವವನೇ, ರಮಾಬ್ಜಜೇರೇಶಸುರೇಂದ್ರಪೂರ್ವವ್ಯಂದಾರಕಾಣಾಂ—ಲಕ್ಷ್ಮೀದೇವಿ, ಬ್ರಹ್ಮದೇವರು, ವಾಯು ದೇವರು, ರುದ್ರ, ಇಂದ್ರ. ಮುಂತಾದ ದೇವತೆಗಳಿಂದ, ಸತತಾಭಿವಂದ್ಯ—ಯಾವಾಗಲೂ ನಮಸ್ಕಾರಾರ್ಹನಾದವನೇ, ಸಮಸ್ತಚೇಷ್ಟಾಪ್ರದ—ಸಮಸ್ತ ಚರಾಚರ ಪ್ರಪಂಚಕ್ಕೆ ಪ್ರೇರಕನಾದವನೆ. ಸರ್ವಜೀವಪ್ರಭೋ—ಸರ್ವ ಜೀವರಿಗೂ ಪ್ರಭುವಾದ, ವಿಮುಕ್ತಾಶ್ರಯ—ಮುಕ್ತರಿಗೂ ಕೂಡ ಆಧಾರನಾದವನೇ, ಸರ್ವಸಾರ—ಸರ್ವೋತ್ತಮನೇ. ಇತಿ—ಈ ರೀತಿಯಿಂದ, ಬ್ರುವಂತೀ—ಸ್ತುತಿಸುವಂಥವಳಾಗಿ, ಸಕಲಾನುಭೂತಂ—ತನ್ನಿಂದ ಅನುಭವಿಸಲ್ಪಟ್ಟ ವಸ್ತ್ರಾಪಹರಣಾದಿ ಎಲ್ಲ ಕಷ್ಟಗಳನ್ನು, ಸರ್ವೇಶಿತುಃ—ಸರ್ವನಿಯಾಮಕನಾದ, ಅಚ್ಯುತಸ್ಯ—ಶ್ರೀಕೃಷ್ಣನಿಗೆ, ಜಗಾದ—ಹೇಳಿದಳು. ಹಿ—ಯಾವ ಕಾರಣದಿಂದ, ಸ್ವಯಂ—ತಾನು ಸ್ವತಃ ಶೇಷೇಶವಿಪಾದಿಕೇಭ್ಯಃ—ಶೇಷ, ರುದ್ರ, ಗರುಡ. ಇವರೇ ಮೊದಲಾದವರಿಗಿಂತ, ಯಸ್ಮ—ಯಾವಶ್ರೀಕೃಷ್ಣನ, ಅಧಿಕಾನುಗ್ರಹ ಪಾತ್ರಭೂತಾ—ಅಧಿಕವಾದ ಅನುಗ್ರಹಕ್ಕೆ ಪಾತ್ರಳಾಗಿದ್ದಾಳೆಯೋ, ಆದ್ದರಿಂದ ಅಂತಪ ದ್ರೌಪದಿಯಂ ಶ್ರೀಕೃಷ್ಣನಿಗೆ ಹೇಳಿದಳು, ಸಮಸ್ತಂ ಶ್ರುತ್ವಾ—ಎಲ್ಲ ವೃತ್ತಾಂತವನ್ನು ಕೇಳಿ, ಭಗವಾನ್—ಶ್ರೀಕೃಷ್ಣನು, ತೇಷಾಂ—ಆ ದುರ್ಯೋಧನಾದಿಗಳ, ಅಖಿಲಾಶ್ಚ ಯೋಷಾಃ—ಎಲ್ಲ ಸ್ತ್ರೀಯರನ್ನೂ, ಭೀಮಾಹತಾನ್ ಪತೀನ್—ಭೀಮಸೇನನಿಂದ ಹತರಾದ ತಮ್ಮ ಪತಿಗಳನ್ನು, ಆಲಿಂಗ್ಯ—ಆಲಿಂಗಿಸಿಕೊಂಡು. ವಿಮುಕ್ತಕೇಶಾಃ ಬಿಚ್ಚಲ್ಪಟ್ಟ ಕೇಶಗಳುಳ್ಳಂಥವರನ್ನಾಗಿ, ದರ್ಶಯೇ—ನಿನಗೆ ತೋರಿಸುವೆನು, ನ ಅನ್ಯಥಾ—ಇದರಲ್ಲಿ ಸರ್ವಥಾ ವ್ಯತ್ಯಾಸವಾಗುವದಿಲ್ಲ. ಇತಿ ಪ್ರತಿಜ್ಞಾಂ ಚಕಾರ—ಎಂಬ ಪ್ರತಿಜ್ಞೆಯನ್ನು ಮಾಡಿದನು. ॥೨೬॥೨೭॥೨೮॥೨೯॥

ಭಾವಾನುವಾದ ೧—೨೯

ವನವಾಸಕ್ಕಾಗಿ ಹೊರಟ ಪಾಂಡವರು ತಮ್ಮನ್ನು ಬೆನ್ನು ಹತ್ತಿ ಬಂದ ಜನರನ್ನು ಕಷ್ಟದಿಂದ ಹಿಂದೆ ಕಳಿಸಿ ಹೊರಟು, ದಟ್ಟ ಅರಣ್ಯಕ್ಕೆ ಬಂದರು. ಅಲ್ಲಿ ನರಭಕ್ಷಕನಾದ, ಬಕಾಸುರನ ತಮ್ಮನಾದ ರುದ್ರದೇವರ ವರದಿಂದ ಅಜೇಯ

ನಾದ ಕಿರ್ಮೀರಕನೆಂಬ ಅಸುರನು ಪತ್ನೀ–ಸೋದರ ಸಮೇತರಾದ ಶ್ರೀಭೀಮರನ್ನು ಕೊಲ್ಲಲು ಪರ್ವತ ಹಾಗು ವೃಕ್ಷಗಳನ್ನು ಒಗೆಯುತ್ತ ಬಂದನು. ಭೀಮರು ಅವನೊಡನೆ ಯುದ್ಧ ಮಾಡಿ ಕೆಳಗೆ ಕೆಡವಿ ಸಂಹರಿಸಿ ಶ್ರೀಹರಿಗೆ ಆ ದುಷ್ಟ ಸಂಹಾರ ಸೇವೆಯನ್ನು ಸಮರ್ಪಿಸಿ ರು ಮುಂದೆ ಹೊರಟ ಪಾಂಡವರ ಜೊತೆಗೆ ಕತ್ತು ಸಹಸ್ರ ಯತಿಗಳು, ಎಂಭತ್ತೆಂಟು ಸಹಸ್ರ ಗೃಹಸ್ಥ ಮುನಿಗಳು ಇದ್ದರು. ಅಲ್ಲದೇ ಒಬ್ಬಬ್ಬರಿಗೂ ಒಂದಾಸದಾಸಿಯರಿದ್ದರು, ಅವರೆಲ್ಲರ ಪೋಷಣವನ್ನು ಹೇಗೆ ಮಾಡಲು ವದು? ಎಂದು ವಿಚಾರಿಸಿ ಧರ್ಮರಾಜನು ಸೂರ್ಯಾಂತರ್ಯಾಮಿಯಾದ ಶ್ರೀಮನ್ನಾರಾಯಣದೇವರನ್ನೇ ಆರಾಧಿಸಿ ಪ್ರತಿ ದಿನವೂ ಅಕ್ಷಯವಾದ ಇಷ್ಟ ಭಕ್ಷ್ಯ, ಭೋಜ್ಯ ಪದಾರ್ಥಗಳನ್ನು ಕೊಡತಕ್ಕ, ರತ್ನಾದಿ ಸಂಪತ್ಪ್ರದವೂ ಆದ ಪಾತ್ರವನ್ನು ಪಡೆದನು. ಅವರಿಂದಲೆ ಎಲ್ಲರನ್ನೂ ಪೋಷಿಸಿದನು ಇಂದ್ರಪ್ರಸ್ಥದಲ್ಲಿರುವಾಗ ಪಾಂಡವರಲ್ಲಿ ಬಹುಕೋಟಿದಾಸದಾಸಿಯರಿದ್ದರು. ಅವರಿಂದ ಸೇವೆ ಈ ಮುನಿಗಳಿಗೆಲ್ಲ ನಡೆಯುತ್ತಿತ್ತು. ಭಂಗಾರಪಾತ್ರೆಗಳಲ್ಲಿ ಊಟಮಾಡುತ್ತಿದ್ದರು. ಅದಾವ ಐಶ್ವರ್ಯದ ಅಪೇಕ್ಷೆ ಇಲ್ಲದೇ ಕೇವಲ ಸತ್ಸಹವಾಸದ ಅಪೇಕ್ಷೆಯುಳ್ಳವರಾಗಿಯೇ ಆ ಯತಿ–ಮುನಿಗಳೆಲ್ಲ ಪಾಂಡವರ ಜೊತೆಗೆ ನಡೆದಿದ್ದರು. ಬೇರೆಯವರೂ ಬಂದು ಸೇರಿದರು. ಇವರೆಲ್ಲರೂ ವಿಷ್ಣು ಪಾರಮ್ಯಬೋಧಕಗಳಾದ ಪರಮ ಕಥೆಗಳನ್ನು ಪಾಂಡವರಿಂದ ಕೇಳುತ್ತಾ, ಪ್ರಾಚೀನ ಸತ್ಕಥೆಗಳನ್ನು ತಾವು ಹೇಳುತ್ತ ಕಾಲನಯನವನ್ನು ಮಾಡುತ್ತಿದ್ದರು. ಪಾಂಡವರಾದರು ಕೋಟಿಗಟ್ಟಲೇ ಗಜಗಳನ್ನು, ರಥಗಳನ್ನು, ಕುದುರೆಗಳನ್ನು, ರತ್ನಾದಿಐಶ್ವರ್ಯಗಳನ್ನು ತ್ಯಜಿಸಿ, ದಾಸ-ದಾಸಿಯರನ್ನು ಕೂಡ ಬಿಟ್ಟು, ವನಕ್ಕೆ ಬಂದರೂ ಅಲ್ಲಿ ಸ್ವರ್ಗದಲ್ಲಿ ದೇವತೆಗಳು ಸುಖವಾಗಿರುವಂತೆ ಸುಖವಾಗಿ ಇದ್ದರು. ಪ್ರತಿದಿನ ಲಕ್ಷಗೋವುಗಳನ್ನು, ನೂರು ಭಾರ (ಒಂದು ಭಾರ = ೨೦ ತೊಲೆ) ಅಂದರೆ ೨೦೦೦ ತೊಲೆ ಸಾಧಾರಣ ೨೦ ಕಿಲೋ ಭಂಗಾರವನ್ನು ಧರ್ಮರಾಜನು ದಾನಮಾಡುತ್ತಾ, ಬ್ರಾಹ್ಮಣರಿಂದ ಸಹಿತನಾಗಿ ಇಂದ್ರದೇವರಂತೆ ಸುಖವಾಗಿಯೇ ಇದ್ದನು. ಪಾಂಡವರು ವನಕ್ಕೆ ಹೋದನಂತರ, ಈ ಕಡೆಗೆ ಹಸ್ತಿನಾವತಿಯಲ್ಲಿ ಧೃತರಾಷ್ಟ್ರರಾಜನು ವಿದುರರನ್ನು ನಾವೀಗ ಏನು ಮಾಡೋಣ ಎಂದು ಪ್ರಶ್ನಿಸಿದನು. ಅದಕ್ಕೆ ವಿದುರರು ಪಾಂಡವರನ್ನು ಕರೆಯಿಸಿ ರಾಜ್ಯವನ್ನು ಕೊಡು ಎಂದು ಹೇಳಿದಾಗ ಸಿಟ್ಟಾದ ಧೃತರಾಷ್ಟ್ರನು ನೀನು ನನ್ನ ಮಕ್ಕಳ ವಿರೋಧಿಯಿರುವಿ; ನಿನ್ನಿಂದ ಏನು ಪ್ರಯೋಜನ ? ನಿನಗೆ ಬೇಕಾದರೆ ಇರಬಹುದು ಬೇಡವಾದರೆ ಹೊರಹೋಗಬಹುದು ಎಂದು ಕಟುವಾಗಿ ಹೇಳಿದನು, ಆಗ ಇವರು ಹಸ್ತಿನಾವತಿಯನ್ನು ಬಿಟ್ಟು ಪಾಂಡವರ ಹತ್ತಿರವೇ ಹೊರಟರು. ಆಗ ವಿದುರರು ಹೋದಾಗ ಅವರ ವಿಯೋಗದಿಂದ ಅತಿ ದುಃಖಿತನಾದ, ಮೂರ್ಛಿತನಾಗಿ ಬಿದ್ದು ಎಚ್ಚೆತ್ತ ಧೃತರಾಷ್ಟ್ರನು ಸಂಜಯನಿಗೆ ವಿದುರನನ್ನು ಕರೆದುಕೊಂಡು ಬಾ; ಅಂದರೇನೇ ನಾ ಬದುಕುವೆನು ಎಂದು ಹೇಳಿ ಕಳಿಸಿದನು. ಸಂಜಯನು ಪಾಂಡವರ ಹತ್ತಿರ ಬಂದು ವಿದುರರಿಗೆ ಹೇಳಿ ಕರೆದನು. ಸಿಟ್ಟಾ ಮೋದ ಲಾದ ದೋಷಗಳನ್ನು ತೊರೆದ ವಿದುರರು ನಮ್ಮ ಅಣ್ಣ ಹಾಗಂದ, ಹೀಗಂದ ಎಂದು ಅಂದುಕೊಳ್ಳದೆ ಬಂದು ಧೃತರಾಷ್ಟ್ರನಿಗೆ ನಮಿಸಿದರು. ಧೃತರಾಷ್ಟ್ರನಾದರೂ ಅವರನ್ನು ಪ್ರೀತಿಯಿಂದ ಆಲಿಂಗಿಸಿ ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ನೆತ್ತಿಯನ್ನು ಮೂಸಿನೋಡಿದನು. ಒಹಳ ಆನಂದಪಟ್ಟನು. ಆದರೆ ಶಕುನಿ ಹಾಗು ದುರ್ಯೋಧನಾದಿಗಳು ವಿದುರರಲ್ಲಿ ಧೃತರಾಷ್ಟ್ರನು ಮಾಡುವ ಪ್ರೀತಿಯನ್ನು ಸಹಿಸದೇಯೇ ಸಿಟ್ಟಿಗೆದ್ದು, ವಿಚಾರಮಾಡಿ ಪಾಂಡವರ ಪೈಕಿ ಒಬ್ಬನನ್ನಾದರೂ ಸಂಹರಿಸಬೇಕು ಎಂಬ ನಿರ್ಣಯವನ್ನು ಮಾಡಿ ಈ ಕಾರಣವನ್ನು ಮನಸ್ಸಿನಲ್ಲಿಟ್ಟುಕೊಂಡು, ಮೇಲೆ ಮಾತ್ರ ಬೇರೆ (ವನವನ್ನು ನೋಡಿಕೊಂಡುಬರುವಾ ಎಂದು) ಕಾರಣವನ್ನು ತೋರಿಸುತ್ತಾ ಕರ್ಣಸಹಿತರಾಗಿ ಹೊರಟರು. ಅದನ್ನು ತಿಳಿದ ಸರ್ವಜ್ಞಾವಿಯಾದ ಶ್ರೀವೇದವ್ಯಾಸದೇವರು ಬಂದು ಧೃತರಾಷ್ಟ್ರನಿಗೆ "ನಿನ್ನ ಮಗನನ್ನು ತಡೆ; ಅವನು ಪಾಂಡವರ ಹತ್ತಿರ ಹೋದರೆ ನಿಸ್ಸಂಶಯವಾಗಿ ಪರಿವಾರ ಸಮೇತನಾಗಿ ಸತ್ತೇಹೋಗುವನು ಎಂದು ಹೇಳಿದರು. ಆದರೆ ಧೃತರಾಷ್ಟ್ರನು 'ನೀವೇ ತಡೆಯಿರಿ' ಎಂದು ಹೇಳಿದನು ಶ್ರೀ ವೇದವ್ಯಾಸದೇವರು ನಿನ್ನ ಆ ದುಷ್ಟಮಕ್ಕಳ ಸಂಗಡ ನಾನು ಮಾತನಾಡುವದಿಲ್ಲ. ಮೈತ್ರೇಯ ಋಷಿಗಳು ಬರುವರು, ಅವರು ಉಪದೇಶಿಸುವರು, ಅದರಂತೆ ನಡೆದರೆ ಕ್ಷೇಮ; ಇಲ್ಲವಾದರೆ ಅವರು ಶಪಿಸುತ್ತಾರೆ. ಎಂದು ಹೇಳಿಹೋದರು. ದುಷ್ಟ ದುರ್ಯೋಧನಾದಿಗಳು ಅಲ್ಲಿ ಹೋದರೆ ಸಾಯುವರು; ಅವರನ್ನು ತಡೆ ಎಂದು ಹೇಳಿದಾಗ ಇವರು ಸಾಯುಬಾರದು ಎಂದು ಶ್ರೀ ವ್ಯಾಸರಿಗೆ ಅಭಿಪ್ರಾಯ ವಿತ್ತೋ ಎಂದು ಎನಿಸುವದು. ಆದರೆ ಅವರ ನಿಜವಾದ ಅಭಿಪ್ರಾಯವನ್ನು ಶ್ರೀ ಮಾದ್ವಾಚಾರ್ಯರು ಹೇಳಿರುವರು. ಈ ದುಷ್ಟರು ಅಲ್ಲಿಗೆ ಹೋದರೆ ಅವರಷ್ಟೇ ಸತ್ತು ಹೋಗುವರು, ಹೀಗಾಗಿ ಭಾರತಯುದ್ಧವಾಗುವ ಸಂದರ್ಭವೇ

ಬಾರದಂ. ಹೀಗಾಗಿ ಭೂಭಾರರಾದ ಅನೇಕ ಅಕ್ಷೌಹಿಣೀ ಸಂಖ್ಯಾಕ ದಂಪ್ಪರ ನಾಶವಾಗದಂತಾಗುವದಂ. ಆದರೆ ಆ ಕಾರ್ಯವಾಗಬೇಕಂ ಎಂದಂ ಈ ತರಹ ಹೇಳಿದ್ದಾರೆ ಎಂದಂ ಶ್ರೀಮದಾಚಾರ್ಯರ ನಿರ್ಣಯಂ ಮಾತಂ. ಸರ್ವಾಂತಃ ಪ್ರೇರಕನಾದ ಭಗವಂತನಂ ಅಂತಃ ಪ್ರೇರಣೆಯನ್ನೇ ಆ ತರಹ (ವನಕ್ಕೆ ಹೋಗದಂತೆ ಪ್ರೇರಣೆ) ಮಾಡಿದರೆ ಸಾಕಾಗಿತ್ತು. 'ನಿವಾರಣೆ ಮಾಡು' ಎಂದಂ ಧೃತರಾಷ್ಟ್ರನಿಗೆ ಹೇಳುವ ಅವಶ್ಯವಿರಲಿಲ್ಲ ಎಂದರೆ ಅದಂ ನಿಜ. ಎಲ್ಲ ಕಾರ್ಯಗಳಲ್ಲಿ ಅಂತಃ ಪ್ರೇರಣೆ ಇದ್ದೇ ಇದೆ. ಆದರೆ ಭಗವಂತನಂ ಸಾಮಾನ್ಯ ಜನರನ್ನು ಅನುಕರಿಸುತ್ತಾ ಕೆಲವು ಕಾರ್ಯಗಳನ್ನು ಮಾಡು ಎಂದಂ ವಿಧಿಸುತ್ತಾನೆ. ಒಮ್ಮೊಮ್ಮೆ ಬೇಡ ಎಂದಂ ನಿಷೇಧಿಸುತ್ತಾನೆ. ಅಂತಃ ಪ್ರೇರಣೆ ಯಾವ ರೀತಿಯಾಡ ಬೇಕಂ ಎಂದಂ ತನ್ನ ಸಂಕಲ್ಪವಿದೆಯೋ ಆ ರೀತಿ ಅದನ್ನು ಮಾಡಿಯೇಮಾಡುತ್ತಾನೆ, ಅವನಿಗೆ ಯಾವ ಅಶಕ್ತಿಯೂ ಇಲ್ಲ ಎಂದಂ ಶ್ರೀ ತ್ರೈಲೋಕ್ಯಾಚಾರ್ಯರ ನಿರ್ಣಯಂ. ಶ್ರೀ ವ್ಯಾಸರಂ ಹೇಳಿದಂತೆ ಮೈತ್ರೇಯರಂ ಬಂದರಂ. ಧೃತರಾಷ್ಟ್ರನಂ ಮಕ್ಕಳನ್ನು ಕರ್ಣ ಶಕುನಿ ಯರನ್ನು ಕರೆಯಿಸಿ ಅವರ ಸಮಕ್ಷದಲ್ಲಿ ಮೈತ್ರೇಯರನ್ನು ಪೂಜಿಸಿದನು. ಅವರಂ ಪಾಂಡವರನ್ನು ತತ್ರಾಪಿ ವಿಶೇಷವಾಗಿ ಭೀಮಸೇನದೇವರ ಸಾಮರ್ಥ್ಯವನ್ನು ಪ್ರಶಂಸಿಸಿ ಕಿರ್ಮೀರ ಮೊದಲಾದ ರಾಕ್ಷಸರ ನಾಶವನ್ನು ಹೇಳಿದರು. ಅವನ್ನು ಕೇಳಿದ ದಂರುಳ ದುರ್ಯೋಧನನು ಅಪಹಸಿಸುತ್ತಾ ತನ್ನ ತೊಡೆಯನ್ನು ಬಡಿದಂ ಕೊಂಡನು. ಅದನ್ನು ಕಂಡ ಮೈತ್ರೇಯರಂ ನಿನ್ನ ತೊಡೆಯಂ ಭೇದನೆಗಾಗಿಯೇ ದೊಡ್ಡ, ಘೋರ ಯುದ್ಧವಾಗುವದಂ ಎಂದಂ ಅವನಿಗೆ ಶಪಿಸಿ ಧೃತರಾಷ್ಟ್ರನಿಗೆ ನೀನು ಪಾಂಡವರಿಗೆ ರಾಜ್ಯವನ್ನು ಕೊಡದಿದ್ದರೆ ನಾನಂ ಹೇಳಿದಂತೆಯೇ ಆಗುವದಂ ಎಂದಂ ಹೇಳಿ ಹೋದರಂ. ಕಿರ್ಮೀರನಾಶದ ಬಗ್ಗೆ ವಿವರವಾಗಿ ವಿದುರರ ಹತ್ತಿರ ಕೇಳಿ ತಿಳಿದ ಧೃತರಾಷ್ಟ್ರನಂ ಸಂಜಯನಿಗೆ ಹೇಳಿದಾಗ ಅವನೂ ಗಾಬರಿಯಾದನು. ಈ ಕಡೆ ವನದಲ್ಲಿರುವ ಪಾಂಡವರಂ ತಮ್ಮ ವಾರ್ತೆಯನ್ನು ಶ್ರೀಕೃಷ್ಣಪರಮಾತ್ಮನಿಗೆ, ಪಾಂಚಾಲರಾಜಾದಿಗಳಿಗೆ ಮುಟ್ಟಿಸಿದರಂ. ಶ್ರೀಕೃಷ್ಣಪರಮಾತ್ಮನಂ ಸತ್ಯಭಾಮಾಸಮೇತನಾಗಿ ಬಂದನು. ಪಾಂಚಾಲಾದಿ ಬಂಧುಗಳೂ ಬಂದರು. ದುರ್ಯೋಧನನ ನೀಚಕಾರ್ಯದಿಂದ ಅವನಲ್ಲಿ ಕ್ರೋಧ ಯುಕ್ತನಾದ ಶ್ರೀಕೃಷ್ಣನನ್ನು ಅವನ ಗುಣಗಳ ವರ್ಣನೆಯನ್ನುಮಾಡುತ್ತ, ನಮಸ್ಕರಿಸಿ ಕ್ಷಮಾಮಾಡುವಂತೆ (ತತ್ಕಾಲಕ್ಕೆ) ಮಾಡಿದರು. ದ್ರೌಪದೀದೇವಿಯರು ಬಂದು ಶ್ರೀ ಕೃಷ್ಣಪರಮಾತ್ಮನ ಪಾದಗಳಿಗೆ ನಮಸ್ಕರಿಸಿ, ಸ್ವತಂತ್ರ, ನಿತ್ಯಗುಣಪೂರ್ಣತ್ವ, ನಿರ್ದೋಷತ್ವ, ರಮಾಬ್ರಹ್ಮಾದಿವಂದ್ಯತ್ವ, ಸರ್ವಸ್ವಾಮಿತ್ವ, ಮುಕ್ತನಿಯಾಮಕತ್ವ, ಸರ್ವೋತ್ತಮತ್ವ ಮೊದಲಾದ ಗುಣ ಮಹಿಮೆಗಳಿಂದ ಸ್ತುತಿಸಿ ತಾನು ಅನುಭವಿಸಿದ ಎಲ್ಲ ಕೇಶಕರ್ಷಣ, ವಸ್ತ್ರಾಪಹರಣಾದಿ ವಿಷಯಂಗಳನ್ನು ನಿವೇದಿಸಿದಳಂ. ಆಗ ಶ್ರೀಕೃಷ್ಣಪರಮಾತ್ಮನಂ 'ದುರ್ಯೋಧನಾದಿಗಳ ಸಂಹಾರವನ್ನು ಭೀಮನಿಂದ ಮಾಡಿಸಿ ಅವರ ಪತ್ನಿಯರು ಅವರೆ ಮೃತದೇಹಗಳನ್ನು ಅಪ್ಪಿಕೊಂಡಂ, ಕೂದಲುಗಳನ್ನು ಬಿಚ್ಚಿಕೊಂಡು ಅಳುವ ದನ್ನು ನಿನಗೆ ತೋರಿಸುವೆನಂ; ಇದಕ್ಕೆ ಯಾವ ವ್ಯತ್ಯಾಸವೂ ಆಗದಂ.' ಎಂದಂ ಪ್ರತಿಜ್ಞೆಮಾಡಿದನು.

ತಾಂ ಸಾಂತ್ವಯಿತ್ವಾ ಮಧುರೈಸ್ಸುವಾಕ್ಯೈರ್ನಾರಾಯಣೋ ವಾಚಮಿಮಾಂ ಜಗಾದ ॥
ಯದೀಹಾಹಂ ಸ್ಥಿತೋ ನೈವಂ ಭವಿತ್ರ್ಯಹಂ ತ್ವಯೋಧಯಂ ॥
ಸಾಲ್ವರಾಜಂ ದುರಾತ್ಮಾನಂ ಹತಶ್ಚಾಸೌ ಸುಪಾಪಕೃತ್ ॥೩೦॥

ತಾಂ—ಆ ದ್ರೌಪದಿಯನ್ನು, ಮಧುರೈಃ ಸುವಾಕ್ಯೈಃ—ವ ಧುರವಾದ ಒಳ್ಳೆಯ ಮಾತುಗಳಿಂದ, ಸಾಂತ್ವಯಿತ್ವಾ—ಸಾಂತ್ವನ ಮಾಡಿ, ನಾರಾಯಣಃ—ಶ್ರೀಕೃಷ್ಣನಂ, ಯದಿ - ಒಂದು ವೇಳೆ, ಅಹಂ – ನಾನಂ, ಇಹ—ಇಲ್ಲಿಯೇ, (ನಿಮ್ಮ ಸಮೀಪದಲ್ಲಿಯೇ) ಸ್ಥಿತಃ–ಇರುವಂಥವನಾಗಿದ್ದರೆ, ನೈವಂ ಭವಿತಾ – ಹೀಗೆ ಆಗುತ್ತಿರಲಿಲ್ಲ. ಅಹಂ ತು – ನಾನಾದರೂ, ದುರಾತ್ಮಾನಂ ಸಾಲ್ವರಾಜಂ ಅಯೋಧಯಂ—ದಂಪ್ಪನಾದ ಸಾಲ್ವರಾಜನ ಜೊತೆಗೆ ಯುದ್ಧಮಾಡಿದನು ಸುಪಾಪಕೃತ್ ಅಸೌ ಹತಶ್ಚ – ಪಾಪಿಯಾದ ಅವನು ಹತನಾದನು. ಇತಿ ಇಮಾಂ ವಾಚಂ—ಎಂಬ ಈ ಮಾತನ್ನು ಜಗಾದ—ಹೇಳಿದನು. ॥೩೮॥

ಸನ್ನಿಧಾನೇಽಥವಾ ದೂರೇಕಾಲವ್ಯವಹಿತೇಽಪಿವಾ।
ಸ್ವಭಾವಾದ್ವಾ ವ್ಯವಹಿತೇ ವಸ್ತುವ್ಯವಹಿತೇಽ ಪಿವಾ ॥೩೦॥

ನಾಶಕ್ತಿರ್ವಿದ್ಯತೇ ವಿಷ್ಣೋರ್ನಿತ್ಯಾವ್ಯವಹಿತತ್ವತಃ ॥
ತಥಾಽಪಿ ನರಲೋಕಸ್ಯ ಕರೋತ್ಯನುಕೃತಿಂಪ್ರಭುಃ ॥೩೨॥

ವಿಷ್ಣೋಃ – ಶ್ರೀಹರಿಗೆ, ಸನ್ನಿಧಾನೇ – ಸಮೀಪದಲ್ಲಿರುವ ಕಣ್ಣಿನ ರೆಪ್ಪೆಯಲ್ಲಾಗಲಿ, ದೂರೇ – ದೂರದಲ್ಲಿರುವ ಪದಾರ್ಥದಲ್ಲಾಗಲೀ, ಕಾಲವ್ಯವಹಿತೇ – ಅತೀತ ಅನಾಗತ ಕಾಲದಲ್ಲಿರುವ ವಸ್ತುವಿನ ವಿಷಯದಲ್ಲಾಗಲಿ, ವಾ – ಅಥವಾ, ಸ್ವಭಾವಾದ್ ವ್ಯವಹಿತೇ – ಅತೀಂದ್ರಿಯತ್ವ ಸ್ವಭಾವದಿಂದ ವ್ಯವಹಿತವಾದ ಧರ್ಮಾಧರ್ಮಗಳ ವಿಷಯದಲ್ಲಾಗಲೀ, ಅಪಿವಾ – ಅಥವಾ ವಸ್ತುವ್ಯವಹಿತೇ – ಗೋಡೆ ಮುಂತಾದ ವಸ್ತುಗಳಿಂದ ವ್ಯವಹಿತವಾದ ಪದಾರ್ಥಗಳ ವಿಷಯದಲ್ಲಾಗಲಿ, ಅಶಕ್ತಿಃ – ಅಸಾಮರ್ಥ್ಯವು, ನ ವಿದ್ಯತೇ – ಇರುವದಿಲ್ಲ. ಏಕೆಂದರೆ ನಿತ್ಯಾವ್ಯವಹಿತತ್ವತಃ – ಶ್ರೀಹರಿಯು ಸರ್ವದಾ ಸರ್ವದೇಶ ಸರ್ವಕಾಲಗಳಲ್ಲಿ ವ್ಯಾಪ್ತನಾಗಿರುವದರಿಂದ ತಥಾಪಿ ಆದರೂ ಪ್ರಭುಃ – ಸಮರ್ಥನಾದ ಶ್ರೀಹರಿಯು, ನರಲೋಕಸ್ಯ ಅನುಕೃತಿಂ ಕರೋತಿ – ಜನರ ಅನುಕರಣವನ್ನು (ಅಶಕ್ತ ಎಂಬಂತೆ ತೋರಿಸಿ) ಮಾಡುತ್ತಾನೆ. ವಿಶೇಷ – ನಾನು ಇಲ್ಲಿಯೇ ಇದ್ದರೆ ಹೀಗೆ ದುಃಖ ಪ್ರಸಕ್ತಿಯಿರಲಿಲ್ಲ ಎಂದು ದ್ರೌಪದಿಗೆ ಶ್ರೀಕೃಷ್ಣನು ಸಮಾಧಾನದ ಮಾತನ್ನು ಹೇಳಿದನು. ಆದರೆ ತನ್ನ ಸನ್ನಿಧಾನವಿಲ್ಲದಿದ್ದರೆ. ನಿಯಮನ ಮಾಡುವ ಶಕ್ತಿಯು ತನ್ನಲ್ಲಿ ಇಲ್ಲವೆಂದು ಹೇಳಿದಂತಾಗುತ್ತದೆ ಎಂಬ ಶಂಕೆ ಬಂದರೆ ಶ್ರೀ ಮದಾಚಾರ್ಯರು ಉತ್ತರಿಸುತ್ತಾರೆ – ಸರ್ವದೇಶ ಸರ್ವಕಾಲಗಳಲ್ಲಿ ವ್ಯಾಪ್ತನಾದ ಶ್ರೀ ಹರಿಗೆ ಅಶಕ್ತಿ ಎಂಬುದರ ಪ್ರಸಕ್ತಿಯೇ ಇಲ್ಲ. ಆದರೂ ಲೋಕವಿಡಂಬನಾರ್ಥವಾಗಿ ಅಶಕ್ತನೇನೋ ಎಂಬುವಂತೆ ತೋರಿಸುತ್ತಾನೆ. ಆ ಲೋಕವಿಡಂಬನವೂ ಕೂಡ ದುಷ್ಟರ ಮೋಹನ ಮುಂತಾದ ಪ್ರಯೋಜನಕ್ಕಾಗಿ ಇರುತ್ತದೆ. ॥೩೦॥೩೨॥

ದುಷ್ಟಾನಾಂ ದೋಷವೃದ್ಧ್ಯರ್ಥಂ ಭೀಮಾದೀನಾಂಗುಣೋನ್ನತೇಃ ।
ಯುಧಿಷ್ಠಿರೇಽತಿವೃದ್ಧಂತು ರಾಜಸೂಯಾದಿಸಂಭವವ್ ॥೩೩॥

ಧರ್ಮಂ ಚ ಸಂಕಾಮಯಿತುಂ ಕೃಷ್ಣಾಯಾಮನುಜೇಷು ಚ ।
ಯೋಗ್ಯತಾಕ್ರಮತೋ ವಿಷ್ಣುರಿಚ್ಛಯೇತ್ಥಮಚೀಕ್ಲೃಪತ್ ॥೩೪॥

ದುಷ್ಟಾನಾಂ ದೋಷವೃದ್ಧ್ಯರ್ಥಂ – ದುಷ್ಟರದೋಷಗಳ ವೃದ್ಧಿಗಾಗಿ (ಶ್ರೀಕೃಷ್ಣನ ಸನ್ನಿಧಾನವಿಲ್ಲದಿರುವದರಿಂದ ಪಾಂಡವರು ಅಶಕ್ತರು ಎಂಬ ವಿಪರೀತಜ್ಞಾನವನ್ನು ಹುಟ್ಟಿಸಿ ದೋಷವೃದ್ಧಿ ಮಾಡಲು), ಭೀಮಾದೀನಾಂ ಗುಣೋನ್ನತೇಃ – ಭೀಮಸೇನ ಮುಂತಾದವರ ಕ್ಷಮಾ ಮೊದಲಾದ ಗುಣಗಳ ಉನ್ನತಿಗಾಗಿ, ಅಥವಾ ರಾಜಸೂಯಾದಿ ಸಂಭವಂ – ರಾಜಸೂಯ ಯಾಗವೇ ಮೊದಲಾದ ಕಾರ್ಯಗಳಿಂದ ಹುಟ್ಟಿದ, ಯುಧಿಷ್ಠಿರೇ, ಅತಿ ವೃದ್ಧಂತು – ಆದರೆ ಯುಧಿಷ್ಠಿರನ ಯೋಗ್ಯತೆಗಿಂತ ಅಧಿಕವಾದ, ಧರ್ಮಂ ಚ – ಪುಣ್ಯವನ್ನು, ಯೋಗ್ಯತಾಕ್ರಮತಃ – ಯೋಗ್ಯತಾನುಗುಣವಾಗಿ, ಕೃಷ್ಣಾಯಾಂ ದ್ರೌಪದಿಯಲ್ಲಿ, ಚ – ಹಾಗೂ, ಅನುಜೇಷು – ಭೀಮಸೇನಾದಿ ತಮ್ಮಂದಿರಲ್ಲಿ, ಸಂಕ್ರಾಮಯಿತುಂ – ಸಂಬಂಧಿಸಿ ಕೊಡುವದಕ್ಕಾಗಿ, ವಿಷ್ಣುಃ – ಶ್ರೀಹರಿಯು, ಇಚ್ಛಯಾ – ತನ್ನ ಸಂಕಲ್ಪಾನುಸಾರ, ಇತ್ಥಂ – ಹೀಗೆ ಅಚೀಕ್ಲೃಪತ್ – ಮಾಡಿದನು ॥೩೩॥೩೪॥

ಏಧಮಾನ ದ್ವಿಡಿತ್ಯೇವ ವಿಷ್ಣೋರ್ನಾಮ ಹಿ ವೈದಿಕಮ್ ।
ಸ್ವಯೋಗ್ಯತಾಯಾ ಅಧಿಕಂ ಧರ್ಮಚಾಲನಾದಿಜಂಘಲಯತ್ ॥೩೫॥

ಭೀಷ್ಮದ್ರೋಣಾಂಬಿಕೆಯಾದೇಃ ಪಾರ್ಥೇಷ್ವೇವ ನಿಧಾಪಿತುಮ್ ।
ಪುನಶ್ಚ ಪಾಪವೃದ್ಧ್ಯರ್ಥಮಜೋ ದುರ್ಯೋಧನಾದಿ ಷು ॥೩೬॥

ವ್ಯಾಸೋಽಂಬಿಕಾ ಸುತಂ ಪ್ರಾಹ ಪಾರ್ಥಾನೇವೇಹ್ಯಧಿಕಂ ಪ್ರಿಯಾಃ।
ತೇಷಾಂ ಪ್ರವಾಸನಂ ಚೈವ ಪ್ರಿಯಂ ನ ಮಮ ಸರ್ವಥಾ ॥೩೭॥

ಹಿ - ಯಾವ ಕಾರಣದಿಂದ ಏಧಮಾನದ್ವಿಟ್ ಇತಿಏವ —ತಮ್ಮ ಯೋಗ್ಯತೆಕ್ಕಿಂತ ಹೆಚ್ಚು ಪುಣ್ಯ ಸಂಪಾದಿಸಿಂದವರ ಆ ಅಧಿಕಪುಣ್ಯದ ದ್ವೇಷಿಯಾಗಿರುವದರಿಂದ 'ಏಧಮಾನದ್ವಿಟ್' ಎಂದೆ', ವಿಷ್ಣೋಃ—ಶ್ರೀ ಹರಿಯ, ವೈದಿಕಂ ನಾಮ — ವೇದ ಪ್ರಸಿದ್ಧವಾದ ನಾಮಧೇಯವು ಇರುವದೋ, (ಆದ್ದರಿಂದ) ಭೀಷ್ಮದ್ರೋಣಾಂಬಿಕೇಯಾದೇ:—ಭೀಷ್ಮಾಚಾರ್ಯ ದ್ರೋಣಾಚಾರ್ಯ, ಧೃತರಾಷ್ಟ್ರ, ಮೊದಲಾದವರ, ಸ್ವಯೋಗ್ಯತಾಯಾ: ಅಧಿಕಂ—ತಮ್ಮ ಯೋಗ್ಯತೆಗಿಂತಲೂ ಹೆಚ್ಚಿದ, ಧರ್ಮಜ್ಞಾನಾದಿಜಂ ಫಲಂ—ಧರ್ಮಾಚರಣೆ ಜ್ಞಾನಕಾರ್ಯ ಇವುಗಳಿಂದ (ಹುಟ್ಟಿದ) ಬಂದ ಪುಣ್ಯವನ್ನು, ಪಾರ್ಥೇಷು—ಪಾಂಡವರಲ್ಲಿ, ನಿಧಾಪಿತುಂ ಏವ — ಇಡುವದಕ್ಕಾಗಿಯೇ ಪುನ:—ಮತ್ತು, ದುರ್ಯೋಧನಾದಿಷು — ದುರ್ಯೋಧನಾದಿ ದುಷ್ಟರಲ್ಲಿ, ಪಾಪವೃದ್ಧ್ಯರ್ಥಂ ಚ - ಪಾಪ ವೃದ್ಧಿಯಾಗುವದಕ್ಕಾಗಿಯೇ, ಅಜಃ ವ್ಯಾಸ:—ಹುಟ್ಟು ಇಲ್ಲದ ಶ್ರೀ ವ್ಯಾಸದೇವರು, ಅಂಬಿಕಾಸುತಂ—ಧೃತರಾಷ್ಟ್ರನನ್ನು ಕುರಿತು, ಹಿ—ಯಾವ ಕಾರಣದಿಂದ, ಮೇ — ನನಗೆ, ಪಾರ್ಥಾ:-ಪಾಂಡವರು, ಅಧಿಕಂ ಪ್ರಿಯಾ: — ಹೆಚ್ಚು ಪ್ರಿಯರಾದವರೋ, ತಸ್ಮಾತ್ ಆ ಕಾರಣದಿಂದ, ತೇಷಾಂ — ಅವರ, ಪ್ರವಾಸನಂ—ಪ್ರವಾಸವಾಗುವಂತೆ ಮಾಡುವುದು (ಅಂದರೆ ಅವರನ್ನು ಹೊರಕಳಿಸಿರುವದು) ಮಮ — ನನಗೆ, ಸರ್ವಥಾ ನ ಪ್ರಿಯಂ - ಸರ್ವಥಾ ಪ್ರಿಯವಲ್ಲ, ಇತಿ — ಎಂದು ಪ್ರಾಹ - ಹೇಳಿದರು. ॥೩೫॥೩೬॥೩೭॥

ಇತಿ ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಮೇವ ಸಃ।
ಪ್ರಿಯಾ ಇತ್ಯೇವ ಕಥನಾತ್ಪಾಂಡವಾನಾಂ ಶುಭೋನ್ನತೇಃ ॥೩೮॥

ಪ್ರಿಯಾಃ ಇತಿ ಕಥನಾತ್ ಏವ - ಪಾಂಡವರು ನನಗೆ ಪ್ರಿಯರು ಎಂದು ಹೇಳುವದರಿಂದಲೇ, ಪಾಂಡವಾನಾಂ- ಪಾಂಡವರಿಗೆ, ಶುಭೋನ್ನತೇ: - ಶುಭ (ಪುಣ್ಯ) ವೃದ್ಧಿಯಾಗುವದರಿಂದ, ಹೀಗೆ ಹೇಳಿದಾಗ್ಯೂ ಅವರನ್ನು ಕಳಿಸದೇ ಶ್ರೀ ವ್ಯಾಸದೇವರ ಮಾತನ್ನು ಮೀರಿದ್ದರಿಂದ. ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಂಏವ—ದುರ್ಯೋಧನಾದಿಗಳಿಗೆ ಪಾಪ ವೃದ್ಧಿ ಯಾಗುವದಕ್ಕಾಗಿಯೇ, ಸಃ—ಆ ಶ್ರೀವ್ಯಾಸದೇವರು, ಇತಿ— ಈ ರೀತಿ, ಪ್ರಾಹ - ಹೇಳಿದರು. ॥೩೮॥

ಅವತಾರಿಕೆ : - ಭೀಮಾರ್ಜುನಾದಿಗಳಲ್ಲಿ ತಾರತಮ್ಯದಿಂದ ಪುಣ್ಯವನ್ನಿಡುವದಕ್ಕೆ ಕಾರಣವನ್ನು ತಿಳಿಸುತ್ತಾರೆ

ಗುರುತ್ವಾದ್ಭೀಮಸೇನಸ್ಯ ಕ್ಷಮಾದ್ಯೂತೇಽರ್ಜುನಾದಿನಾಮ್ ।
ನಾತಿ ಧರ್ಮಸ್ವರೂಪೋಽತ್ರ ಧರ್ಮೋ ಭೀಮೇ ನಿರೌಪಧಃ ॥೩೯॥

ಭೀಮಸೇನಸ್ಯ ಗುರುತ್ವಾತ — ಭೀಮಸೇನದೇವರಿಗೆ ಗುರುತ್ವವಿದ್ದದ್ದರಿಂದ (ಭೀಮಸೇನದೇವರು ಒಲ-ಜ್ಯೇಷ್ಠರೂ, ಅಗ್ರಜರೂ ಆದದ್ದರಿಂದ ಗುರುಗಳಾದ್ದರಿಂದ), ದ್ಯೂತೇ—ದ್ಯೂತದ ಸಭೆಯಲ್ಲಿ ಕ್ಷಮಾ – ಭೀಮಸೇನದೇವರು ಸಿಟ್ಟಿಗೆದ್ದಿರುವಾಗ ತಾವು ಸಿಟ್ಟು ಮಾಡದಿರುವದು, ಅರ್ಜುನಾದಿನಾಂ – ಅರ್ಜುನನೇ ಮೊದಲಾದವರಿಗೆ, ಅತಿ ಧರ್ಮಸ್ವರೂಪಃನ - ಅಂಥ ಉತ್ತಮಧರ್ಮವಾಗಲಿಲ್ಲ ಅತ್ರ — ಈ ದ್ಯೂತದಲ್ಲಿ ಭೀಮೇ - ಭೀಮಸೇನದೇವರಲ್ಲಿಯೇ, ನಿರೌಪಧಃಧರ್ಮ - ಲೋಪವಿಲ್ಲದ ಧರ್ಮವು ಇತ್ತು. ॥೩೯॥

ದ್ರೌಪದ್ಯಾ ಅಪ್ಯತಿಕ್ಲೇಶಾತ್ ಕ್ಷಮಾ ಧರ್ಮೋ ಮಹಾನಭೂತ್।
ಸಾ ಹಿ ಭೀಮಮನೋ ವೇದ ನ ಕಾರ್ಯಶ್ಶಾಪ ಇತ್ಯಲಮ್ ॥೪೦॥

ದ್ರೌಪದ್ಯಾಃ – ದ್ರೌಪದೀದೇವಿಗೆ, ಅತಿ ಕ್ಲೇಶಾತ್ —ಅತ್ಯಂತ ಕಷ್ಟವನ್ನು ಅನುಭವಿಸಿ, ಕ್ಷಮಾ—ಕ್ಷಮಿಸಿದ್ದ (ಸಹಿಸಿದ್ದು), ಮಹಾನ್‌ಧರ್ಮಃಅಭೂತ್–ಅತ್ಯಂತ ಧರ್ಮವೇ ಆಯಿತು. ಪತಿಗಳು ಕ್ರುದ್ಧರಾದಾಗ ದ್ರೌಪದಿಯು ಕ್ರುದ್ಧಳಾಗದಿದ್ದುದು ಹೇಗೆ ಧರ್ಮವಾದೀತು, ಎಂದರೆ ಅದಕ್ಕೆ ಉತ್ತರ 'ಸಾಹಿ' ಎಂಬುದರಿಂದ ಹೇಳಿದ್ದಾರೆ, ಹಿ—ಯಾವಕಾರಣದಿಂದ, ಶಾಪಃ—ಶಾಪವು, ನ ಕಾರ್ಯಃ – ದ್ರೌಪದಿಯಿಂದ ಕೊಡಲ್ಪಡಬಾರದು, ಇತಿ–ಎಂದು, ಭೀಮಮನಃ—ಭೀಮಸೇನದೇವರ ಮನಸ್ಸಿನಲ್ಲಿದ್ದದ್ದನ್ನು ಸಾ – ದ್ರೌಪದಿಯು, ವೇದ – ತಿಳಿದಿರುವಳೋ, ಆದ್ದರಿಂದ ಧರ್ಮವೇ ಆಯಿತು. ॥೪೦॥

ತಸ್ಮಾದ್ಯಥಾ ಯೋಗ್ಯತಯಾ ಹರಿಣಾ ಧರ್ಮವರ್ಧನಂ।
ಕೃತಂ ತತ್ರಾಸನ್ನಿಧಾನಂ ಕಾರಣಂ ಕೇಶವೋಽ ಬ್ರವೀತ್ ॥೪೧॥

ತಸ್ಮಾತ್ – ಆದ್ದರಿಂದ, ಈ ರೀತಿ ಧರ್ಮದಲ್ಲಿ ತಾರತಮ್ಯವಿದ್ದದ್ದರಿಂದ, ಹರಿಣಾ— ಶ್ರೀಮನ್ನಾರಾಯಣದೇವರಿಂದ, ಧರ್ಮವರ್ಧನಂ – ಧರ್ಮಾಭಿವೃದ್ಧಿಕಾರ್ಯವು, ಯಥಾಯೋಗ್ಯತಯಾ – ಅವರವರ ಯೋಗ್ಯತೆಗನುಸಾರವಾಗಿ ಕೃತಂ—ಮಾಡಲ್ಪಟ್ಟಿತು, ಕೇಶವಃ – ಶ್ರೀಕೃಷ್ಣಪರಮಾತ್ಮನು ತತ್ರ – (ಆ ಸಂದರ್ಭದಲ್ಲಿ), ಆ ಎಲ್ಲ ಘಟನೆಯ ವಿಷಯದಲ್ಲಿ, ಅಸನ್ನಿಧಾನಂ—ತನ್ನ ಇಲ್ಲದಿರುವಿಕೆಯನ್ನು, ಕಾರಣಂ – ಕಾರಣವನ್ನಾಗಿ, ಅಬ್ರವೀತ್ – ವಿವರವಾಗಿ ಹೇಳಿದನು ॥೪೫॥

ಸಾಲ್ವಂ ಶ್ರುತ್ವಾ ಸಮಾಯಾತಂ ರೌಕ್ಮಿಣೇಯಾದಯೋಮಯಾ।
ಪ್ರಸ್ಥಾಪಿತಾ ಹಿ ಭವತಾಂ ಸಕಾಶಾತ್ತೇ ಯಯುಃ ಪುರೀಮ್
ತದಾ ಸಾಲ್ವೋಽಪಿ ಸೌಭೇನ ದ್ವಾರಕಾಮರ್ದಯದ್ ಭೃಶಮ್। ॥೪೨॥

ಸಾಲ್ವಂ – ಸಾಲ್ವನನ್ನು, ಸಮಾಯಾತಂ – ಬಂದವನನ್ನಾಗಿ, ಶ್ರುತ್ವಾ—ಕೇಳಿ, ಮಯಾ - ನನ್ನಿಂದ ಪ್ರಸ್ಥಾಪಿತಾಃ—ಕಳುಹಿಸಲ್ಪಟ್ಟ, ತೇ ರೌಕ್ಮಿಣೇಯಾದಯಃ – ಆ ಪ್ರದ್ಯುಮ್ನಾದಿಗಳು, ಭವತಾಂ ಸಕಾಶಾತ್—ನಿಮ್ಮ ಸ್ಥಲ ಇಂದ್ರಪ್ರಸ್ಥದಿಂದ, ಪುರೀಂ—ದ್ವಾರಕೆಯನ್ನು ಪ್ರತಿ ಯಯುಃ –ಹೋದರು. ತದಾ – ಆಗ, ಸಾಲ್ವೋಽಪಿ ಸಾಲ್ವರಾಜನೂ, ಕೂಡ ಸೌಭೇನ ಸಹಿತಃಸನ್–ಸೌಭವಿಮಾನದಿಂದ ಕೂಡಿದವನಾಗಿ, ದ್ವಾರಕಾಂ–ದ್ವಾರಕೆಯನ್ನು, ಭೃಶಂ – ಬಹಳವಾಗಿ, ಅರ್ದಯನ್ – ಕೆಡಿಸಿದನು. ॥೪೨॥

ಪ್ರದ್ಯುಮ್ನ ಆಶು ನಿರಗಾದಥ ಸರ್ವಸೈನ್ಯೈ ರನ್ಯೈರ್ಯಯಾದವಗಣೈ ಸ್ಸಹಿತೋಽನುಜೈಶ್ಚ।
ಸಾಲ್ವೋಽವಗಮ್ಯ ತನಯಂ ಮಮ ತದ್ವಿಮಾನಾತ್ ಪಾಪೋಽವರುಹ್ಯ ರಥಮಾರುಹದತ್ಪ್ರಯೋದ್ಧುಂ॥೪೩॥

ಅಥ—ನಂತರ ಪ್ರದ್ಯುಮ್ನಃ – ಪ್ರದ್ಯುಮ್ನನು, ಸರ್ವಸೈನ್ಯೈಃ—ಎಲ್ಲ ಸೈನ್ಯಗಳಿಂದ, ಅನ್ಯೈಃಯಾ ವಗಣೈಃಚ – ಬೇರೆ ಯಾದವರ ಸಮೂಹಗಳಿಂದಲೂ ಕೂಡ, ಚ - ಮತ್ತು, ಅನುಜೈಃ – ತಮ್ಮಂದಿರಿಂದ ಸಹಿತಃಸನ್–ಕೂಡಿದವನಾಗಿ, ನಿರಗಾತ್ – ಊರಿನಿಂದ ಹೊರಟನು. ಪಾಪಃಸಾಲ್ವಃ—ಪಾಪಿ ಸಾಲ್ವನು, ಮಮ ತನಯಂ – ನನ್ನ

ಮಗಪ್ರದ್ಯುಮ್ನನನ್ನಾಗಿ, ಅವಗಮ್ಯ – ತಿಳಿದಂ, ಅತ್ರ – ಈ ಪ್ರದ್ಯುಮ್ನನಲ್ಲಿ, (ದುರ್ಬಲತ್ವಂ ಮನ್ಯಮಾನಸ್ಸನ್— ದುರ್ಬಲತೆಯನ್ನು ಭಾವಿಸುವವನಾಗಿ) ಯೋದ್ಧುಂ—ಯುದ್ಧಮಾಡುವದಕ್ಕಾಗಿ, ತದ್ವಿಮಾನಾತ್ – ಆ ಸೌಭ ವಿಮಾನದಿಂದ, ಅವರುಹ್ಯ–ಇಳಿದಂ, ರಥಂ ಆರುಹತ್—ರಥವನ್ನು ಏರಿದನು. ॥೪೩॥

ಕೃತ್ವಾ ಸುಯುದ್ಧಮನಯಾ ಮನು ಪುತ್ರಕೋsಸಾವಸ್ತ್ರಾಣಿ ತಸ್ಯ ವಿನಿವಾರ್ಯ ಮಹಾಸ್ತ್ರಜಾಲೈಃ।
ದತ್ತಂ ಮಯಾ ಶರಮುಮೋಘ ಮಥಾsದದೇ ತಂ ಹಂತುಂ ನೃಪಂ ಕೃತಮತಿ ಸ್ತ್ವಶೃಣೋದ್ವಚಃ ಖೇ ॥೪೪॥

ಮನು ಪುತ್ರಕಃ ಅಸೌ—ನನ್ನಮಗನಾದ ಆ ಪ್ರದ್ಯುಮ್ನನು, ಅಮುನಾ – ಆ ಸಾಲ್ವನಿಂದ, ಸುಯುದ್ಧಂ- ಘೋರ ಯುದ್ಧವನ್ನು, ಕೃತ್ವಾ—ಮಾಡಿ, ತಸ್ಯ ಅಸ್ತ್ರಾಣಿ– ಅವನ ಅಸ್ತ್ರಗಳನ್ನು, ಮಹಾಸ್ತ್ರಜಾಲೈಃ–ಶ್ರೇಷ್ಠ ಅಸ್ತ್ರ ಗಳ ಸಮೂಹಗಳಿಂದ, ವಿನಿವಾರ್ಯ–ತಡೆದು, ಅಥ—ನಂತರ, ತಂ ನೃಪಂ–ಆ ಸಾಲ್ವರಾಜನನ್ನು, ಹಂತುಂ—ಕೊಲ್ಲಲು, ಕೃತಮತಿಃಸನ್ – ನಿಶ್ಚಯ ಮಾಡಿದವನಾಗಿ, ಮಯಾ ದತ್ತಂ – ನನ್ನಿಂದ ಕೊಡಲ್ಪಟ್ಟ, ಅಮೋಘಂ–ವ್ಯರ್ಥವಾಗದಿರುವ, ಶರಂ—ಬಾಣವನ್ನ, ಆದದೇ – ತೆಗೆದುಕೊಂಡನು. ತಂ-ಆದರೆ, ಖೇ–ಆಕಾಶದಲ್ಲಿ, ವಚಃ – (ಯಿಂದ ಹೇಳುವ) ಮಾತನ್ನು, ಅಶೃಣೋತ್ – ಕೇಳಿದನು. ॥೪೪॥

ನಾರಾಯಣೇನಹಿ ಪುರಾ ಮನಸಾsಭಿಕ್ಲೃಪ್ತಂ ಕೃಷ್ಣಾವತಾರ ಮುಪಗಮ್ಯ ನಿಹನ್ಮಿ ಸಾಲ್ವಂ।
ಇತ್ಯೇವ ತೇನ ಹರಿಣಾsಪಿ ಸ ಭಾರ್ಗವೇಣ ವಿದ್ರಾವಿತೋ ನ ನಿಹತಃ ಸ್ವಮನೋನುಸಾರಾತ್ ॥೪೫॥

ಹಿ – ಯಾವ ಕಾರಣದಿಂದ ಪುರಾ – ಹಿಂದೆ, ನಾರಾಯಣೇನ—ಶ್ರೀನಾರಾಯಣದೇವರಿಂದ, ಕೃಷ್ಣಾವತಾರಂ ಉಪಗಮ್ಯ—ಶ್ರೀಕೃಷ್ಣ ರೂಪವನ್ನು ಹೊಂದಿ, ಸಾಲ್ವಂ ನಿಹನ್ಮಿ—ಸಾಲ್ವನನ್ನು ಕೊಲ್ಲುತ್ತೇನೆ, ಇತಿ—ಎಂದು, ಮನಸಾ—ಮನಸ್ಸಿನಿಂದ, ಅಭಿಕೃಪ್ತಂ – ಸಂಕಲ್ಪಿಸಲ್ಪಟ್ಟದೆಯೋ, ತೇನ ಏವ – ಆ ಕಾರಣದಿಂದಲೇ, ಹರಿಣಾ ಭಾರ್ಗವೇಣ ಅಪಿ – ಶ್ರೀಹರಿಯ ಅವತಾರನಾದ ಶ್ರೀಪರಶುರಾಮದೇವರಿಂದಲೂ ಕೂಡ, ಸ್ವಮನೋನುಸಾರಾತ್—ತನ್ನ ಸಂಕಲ್ಪಾನುಸಾರವಾಗಿ, ಸಃ—ಆ ಸಾಲ್ವನು, ವಿದ್ರಾವಿತ.—ಓಡಿಸಲ್ಪಟ್ಟನು, (ಹೊರತಾಗಿ) ನನಿಹತಃ – ಕೊಲ್ಲಲ್ಪಡಲಿಲ್ಲ. ॥೪೫॥

ವಧ್ಯಸ್ತ್ವಯಾ ನಹಿ ತವೋsಯಮಮುಯಂ ಚ ಬಾಣಶ್ಚಕ್ರಾಯುಧಸ್ಯ ದಯಿತೋ ನಿತರಾಮುಮೋಘಃ।
ಮಾ ಮುಂಚ ತೇನ ತಮಿಮಂ ನಿವರ್ತಯೇsಹಂ ಸಾಲ್ವಂ ಹೃದಿ ಸ್ಥಿತ ಇತೀರಿತಮೀರಣೇನ ॥೪೬॥

ತತ —ಆದ್ದರಿಂದ, ಅಯಂ – ಈ ಸಾಲ್ವನು, ತ್ವಯಾ – ನಿನ್ನಿಂದ, ನಹಿ ವಧ್ಯಃ—ಸಂಹರಿಸಲು ಶಕ್ಯನಲ್ಲ ಚಕ್ರಾಯುಧಸ್ಯ – ಚಕ್ರಾಯುಧಧಾರಿಯಾದ ಶ್ರೀ ಕೃಷ್ಣನಿಗೆ, ನಿತರಾಂ ದಯಿತಃ – ಅತ್ಯಂತ ಪ್ರಿಯವಾದ, ಅಯಂಬಾಣಃ ಚ – ಈ ಬಾಣವೂಕೂಡ, ಅಮೋಘಃ—ವ್ಯರ್ಥವಾಗುವಂಥದಲ್ಲ. ತೇನ—ಆದ್ದರಿಂದ, ತಂ ಇಮಂ—ಆಂಥ ಈ ಬಾಣವನ್ನು, ಮಾ ಮುಂಚ–ಬಿಡಬೇಡ, ಹೃದಿ ಸ್ಥಿತಃ – ನಿನ್ನ ಹೃದಯದಲ್ಲಿರುವ, ಅಹಂ–ನಾನು, ಸಾಲ್ವಂ–ಸಾಲ್ವನನ್ನು, ನಿವರ್ತಯೇ – ತಡೆಯುತ್ತೇನೆ, ಇತಿ—ಎಂದು, ಈರಣೇನ ಈರಿತಂ—ವಾಯುದೇವರಿಂದ ಹೇಳಲ್ಪಟ್ಟವಚನವನ್ನು (ಕೇಳಿದನು ಎಂದು ಹಿಂದಿನ ೪೪ ನೇಯ ಶ್ಲೋಕಕ್ಕೆ ಅನ್ವಯ) ॥೪೬॥

ಶ್ರುತ್ವಾ ವಚಃ ಸ ಪವನಸ್ಯ ಶರಂ ತ್ವಮೋಘಂ ಸಂಜಹ್ರ ಆಶು ಸ ಚ ಸಾಲ್ವಪತಿಃ ಸ್ವಸೌಭಮ್।
ಆರುಹ್ಯ ಬಾಲಕಲಹೇನ ಕಿಮುತ್ರ ಕಾರ್ಯಂ ಕೃಷ್ಣೇನ ಸಂಗರ ಇತಿ ಪ್ರಯಯೌ ಸ್ವದೇಶಂ ॥೪೭॥

ಸಃ—ಆ ಪ್ರದ್ಯುಮ್ನನು ಪವನಸ್ಯ ವಚಃ – ವಾಯುದೇವರ ದೂತನನ್ನು, ಶ್ರುತ್ವಾ—ಕೇಳಿ, ಆಶು–ಕೂಡಲೇ ಅವೋಘಂ ಶರಂ—ಅಮೋಘವಾದ ಆ ಬಾಣವನ್ನು,ಸಂಜಹ್ರೇ—ಹಿಂದೆಗೆದುಕೊಂಡನು. ಸಃ ಸಾಲ್ವಪತಿಃ ಚ—ಆ ಸಾಲ್ವನಾದರೂ ಕೂಡ, ಬಾಲಕಲಹೇನ —ಬಾಲಕನಜೊತೆಗಿನಯುದ್ಧದಿಂದ, ಕಿಂ ಕಾರ್ಯಂ - ಏನು ಪ್ರಯೋಜನವು? ಅತ್ರ—ಈ ಯುದ್ಧದಲ್ಲಿ, (ಜಯಪರಾಜಯೌ ನಸ್ತಃ – ಜಯಪರಾಜಯಗಳು ಆಗಲಾರವು). ಕೃಷ್ಣೇನ ಶ್ರೀಕೃಷ್ಣನಿಂದ, ಸಂಗರಃ – ಯುದ್ಧವು, ಸ್ಯಾತ್–ಆಗಲಿ, ಇತಿ ಎಂದು, (ಅನುಸಂಧಾಯ–ಅಂದುಕೊಂಡು) ಸ್ವದೇಶಂ - ತನ್ನ ದೇಶಕ್ಕೆ, ಯಯೌ—ಹೋದನು. ॥೪೭॥

ಪ್ರದ್ಯುಮ್ನ ಸಾಂಬಗದಸಾರಣಚಾರುದೇಷ್ಣಾಃ ಸೇನಾಂ ನಿಹತ್ಯ ಸಹ ಮಂತ್ರಿಗಣೈಸ್ತದೀಯಾಮ್ ।
ಆಹ್ಲಾದಿನಃ ಸ್ವಪುರಮಾಯಯುರಪ್ಯಹಂ ಚ ತತ್ರಾಗಮಂ ಸಪದಿ ತೈಃ ಶ್ರುತವಾನಶೇಷಂ ॥೪೮॥

ಪ್ರದ್ಯುಮ್ನಸಾಂಬಗದಸಾರಣಚಾರುದೇಷ್ಣಾಃ – ಪ್ರದ್ಯುಮ್ನಃಸಾಂಬ, ಗದ, ಸಾರಣ, ಚಾರುದೇಷ್ಣ ಎಂಬ ಶ್ರೀ ಕೃಷ್ಣ ಪುತ್ರರು, ಮಂತ್ರಿಗಣೈಃ ಸಹ— ಮಂತ್ರಿಗಳ ಸಮೂಹಗಳಿಂದ ಕೂಡಿಕೊಂಡು, ತದೀಯಾಂ ಸೇನಾಂ—ಅವನ ಸೇನೆಯನ್ನು, ನಿಹತ್ಯ–ಕೊಂದು, ಆಹ್ಲಾದಿನಃ ಸಂತಃ – ಸಂತಸದಿಂದಕೂಡಿದವರಾಗಿ ಸ್ವಪುರಂ ಅಪಿ ಆಯಯುಃ–ತಮ್ಮ ಊರಿಗೆ ಬಂದರು, ತತ್ರ – ಆ ಸಮಯದಲ್ಲಿ, ಅಹಂ ಚ– ನಾನೂ ಕೂಡ, ತತ್ರ—ಅಲ್ಲಿಗೆ,ಅಗಮಂ–ಹೋದೆನು. ಸಪದಿ–ಕೂಡಲೇ, ತೈಃ – ಆ ಪ್ರದ್ಯುಮ್ನಾದಿಗಳಿಂದ, ಅಶೇಷಂ – ಎಲ್ಲ ವಾರ್ತೆಯನ್ನು. ಶ್ರುತವಾನ್—ಕೇಳಿದನು. ॥೪೮॥

ಯಸ್ಮಿಂಶ್ಚರೇ ಕರಗತೇ ವಿಜಯೋ ಧ್ರುವಃ ಸ್ಯಾನ್ಮತ್ತೇಜಸಾ ತದನುಸಂಗ್ರಹಣಾತ್ಸುತಾನ್ಮೇ ॥
ಯಾತಂ ನಿಶಮ್ಯ ರಿಪುಮಾತ್ಮಪುರೀಂ ಚ ಭಗ್ನಾಂ ದೃಷ್ಟ್ವೈವ ತೇನ ತದನುವ್ರಜನಂ ಕೃತಂ ಮೇ ॥೪೯॥

ಯಸ್ಮಿನ್ ಶರೇ—ಯಾವ ಬಾಣವು, ಕರಗತೇ ಸತಿ – ಕೈಯಲ್ಲಿರುತ್ತಿರಲು, ಮತ್ತೇಜಸಾ – ಬಾಣದಲ್ಲಿರುವ ನನ್ನ ಪ್ರಭಾವದಿಂದ, ವಿಜಯಃ ಧ್ರುವಃ ಸ್ಯಾತ್—ವಿಜಯವು ಖಂಡಿತವಾಗಿ ಆಗುವದೋ, ತದನುಸಂಗ್ರಹಣಾತ್–ಆ ಬಾಣವನ್ನು ಹಿಡಿದಿರುವದರಿಂದ, ಮೇ ಸುತಾತ್ – ನನ್ನ ಮಗನಾದ ಪ್ರದ್ಯುಮ್ನನಿಂದ ಯಾತಂ—ಪರಾಜಯವನ್ನು ಹೊಂದಿ ಹೋದಂಥವನನ್ನಾಗಿ, ರಿಪುಂ—ವೈರಿಯಾದ ಸಾಲ್ವನ ಬಗ್ಗೆ, ನಿಶಮ್ಯ—ಕೇಳಿ, ಆತ್ಮಪುರೀಂ – ನನ್ನ ದ್ವಾರಕಾ ಪಟ್ಟಣವನ್ನು, ತೇನ—ಆ ಸಾಲ್ವನಿಂದ, ಭಗ್ನಾಂ – ನಾಶಪಡಿಸಲ್ಪಟ್ಟದ್ದನ್ನಾಗಿ, ದೃಷ್ಟ್ವಾ ಏವ—ನೋಡಿಯೇ, ಮೇ – ನನ್ನಿಂದ, ತದನುವ್ರಜನಂ-ಕೃತಂ—ಅವನನ್ನು ಬೆನ್ನಿಹತ್ತುವ ಕಾರ್ಯವು ಮಾಡಲ್ಪಟ್ಟಿತು. ॥೪೯॥

ತಂ ಸಾಗರೋಪರಿಗಸೌ ಭಗತಂ ನಿಶಾಮ್ಯ ಮುಕ್ತೇ ಚ ತೇನ ಮಯಿ ಶಸ್ತ್ರ ಮಹಾಸ್ತ್ರವರ್ಷೇ ॥
ತಂ ಸನ್ನಿವಾರ್ಯ ತು ಮಯಾ ಶರಪೂಗವಿದ್ಧೋ ಮಾಯಾ
ಯುಯೋಜ ಮಯಿ ಪಾಪತಮಃ ಸ ಸಾಲ್ವಃ ॥೫೦॥

ಸಾಗರೋಪರಿಗಸೌಭಗತಂ – ಸಮುದ್ರದ ಮೇಲೆ ಹೊರಟಿದ್ದ ಸೌಭವಿಮಾನದಲ್ಲಿರುವ ತಂ – ಆ ಸಾಲ್ವನನ್ನು ನಿಶಾಮ್ಯ – ನೋಡಿ, ಚ–ಮತ್ತು, ತೇನ – ಅವನಿಂದ, ಮಯಿ – ನನ್ನಲ್ಲಿ, ಶಸ್ತ್ರಮಹಾಸ್ತ್ರವರ್ಷೇ—ಶಸ್ತ್ರಾಸ್ತ್ರಗಳ ಮಹಾ ಸುರಿಮಳೆಯು, ಮುಕ್ತೇ ಸತಿ—ಮಾಡಲ್ಪಡುತ್ತಿರಲು, ತಂ – ಆ ಸುರಿಮಳೆಯನ್ನು, ಸನ್ನಿವಾರ್ಯ–ಚೆನ್ನಾಗಿ ತಡೆದು, ಮಯಾ—ನನ್ನಿಂದ, ಶರಪೂಗವಿದ್ಧಃ—ಬಾಣಸಮೂಹದಿಂದ ತಾಡಿತನಾದ, ಪಾಪತಮಃ ಸಃ ಸಾಲ್ವಃ – ಅತ್ಯಂತ ಪಾಪಿಯಾದ, ಆ ಸಾಲ್ವನು, ಮಯಿ–ನನ್ನಲ್ಲಿ, ಮಾಯಾಃ – ಇಂದ್ರಜಾಲಮಾಯಾಗಳನ್ನು, ಯುಯೋಜ – ಪ್ರಯೋಗಿಸಿದನು. ॥೫೦॥

ತಾಃ ಕ್ರೀಡಯಾ ಕ್ಷಣಮಹಂ ಸಮರೇ ನಿಶಾಮ್ಯ
ಜ್ಞಾನಾಸ್ತ್ರತಃ ಪ್ರತಿವಿಧೂಯ ಬಹೂಂಶ್ಚ ದೈತ್ಯಾನ್ ॥
ಹತ್ವಾSSಶು ತಂ ಚ ಗಿರಿವರ್ಷಿಣಮಾಶು ಸೌಭಂ
ವಾಧೌನ್ಮಪಾತಯಮರೀಂದ್ರ ವಿಭಿನ್ನ ಬಂಧವಮ್ ॥೫೧॥

ಅಹಂ – ನಾನು, ಸಮರೇ – ಯುದ್ಧದಲ್ಲಿ, ಕ್ಷಣಂ – ಸ್ವಲ್ಪೀಸಮಯದಲ್ಲಿ, ತಾಃ – ಅವನ ಪರಾಯಣಕಾರ್ಯ ಗಳನ್ನು, ಕ್ರೀಡಯಾ – ವಿನೋದದ ದೃಷ್ಟಿಯಿಂದ, ನಿಶಾಮ್ಯ – ನೋಡಿ, ಜ್ಞಾನಾಸ್ತ್ರತಃ – ಜ್ಞಾನಾಸ್ತ್ರದಿಂದ ಪ್ರತಿ ವಿಧೂಯ – ಪರಿಹರಿಸಿ, ಗಿರಿವರ್ಷಿಣಂ ತಂ – ಪರ್ವತಗಳನ್ನು ಸತತವಾಗಿ, ಒಗೆಯುತ್ತಿದ್ದ ಅವನನ್ನು, ಚ – ಮತ್ತು, ಅರೀಂದ್ರವಿಭಿನ್ನಬಂಧಂ – ಚಕ್ರದಿಂದ ಮೊರಿದ ಭಾಗಗಳ ಸಂದರ್ಭಗಳನ್ನು, ಸೌಭಂ ಚ – ಸೌಭವಿಮಾನವನ್ನು ಕೂಡ ವಾಧೌ – ಸಮರೇಂದ್ರದಲ್ಲಿ, ನ್ಮಪಾತಯಂ – ಕೆಡವಿದನು. ॥೫೧॥

ತಂ ಸ್ಯಂದನಸ್ಥಿತನುಥೋ ವಿಭುಜಂ ವಿಧಾಯ ಬಾಣೇನ ತದ್ರಥವರಂ ಗದಯಾ ವಿಭಿದ್ಯ ॥
ಚಕ್ರೇಣ ತಸ್ಯ ಚ ಶಿರೋ ವಿನಿಕೃತ್ಯ ಧಾತೃಶರ್ವಾದಿಭಿಃ ಪ್ರತಿನುತಃ ಸ್ವಪುರೀಮುಗಾಂ ಚ ॥೫೨॥

ಅಥೋ—ನಂತರ ಸ್ಯಂದನಸ್ಥಿತಂ ತಂ—ರಥದಲ್ಲಿರುವ ಅವನನ್ನು, ಬಾಣೇನ – ಬಾಣದಿಂದ, ವಿಭುಜಂ – ಭುಜರಹಿತನನ್ನಾಗಿ, ವಿಧಾಯ – ಮಾಡಿ, ಗದಯಾ – ಗದೆಯಿಂದ, ತದ್ರಥವರಂ – ಅವನ ಶ್ರೇಷ್ಠ ರಥವನ್ನು, ವಿಭಿದ್ಯ – ಮೊರಿದು, ಚ—ಮತ್ತು, ಚಕ್ರೇಣ—ಸುದರ್ಶನ ಚಕ್ರದಿಂದ, ತಸ್ಯ ಶಿರಃ—ಆ ಸಾಲ್ವರಾಜನ ಶಿರಸ್ಸನ್ನು, ವಿನಿಕೃತ್ಯ—ಕತ್ತರಿಸಿ, ಧಾತೃಶರ್ವಾದಿಭಿಃ – ಬ್ರಹ್ಮ ರುದ್ರಾದಿಗಳಿಂದ, ಪ್ರತಿನುತಃ ಸನ್—(ನಮಸ್ಕೃತ) ಸ್ತುತನಾಗಿ, ಸ್ವಪುರೀಂ – ನಮ್ಮ ದ್ವಾರಕಾ ಪಟ್ಟಣವನ್ನು ಕುರಿತು, ಅಗಾಂ – ಬಂದೆನು. ॥೫೨॥

~~ತಸ್ಮಾದಿದಂ ವ್ಯಸನಮಾಸ ಹಿ ವಿಪ್ರಕರ್ಷಾನ್ನೇ ಕಾರ್ಯತಸ್ತ್ವಿತಿ ನಿಗದ್ಯ ಪುನರ್ಜಗಾರ್ಥಾನ್॥~~

ಕೃಷ್ಣಾಂ ಚ ಸಾಂತ್ವಯಿತುಮತ್ರ ದಿನಾನ್ಯವಾಸ ಸತ್ಯಾ ಚ ಸೋಮಕಸುತಾಮನುಸಾಂತ್ವಯಂತೀ ॥೫೩॥

ತಸ್ಮಾತ್ ಕಾರ್ಯತಃ—ಆ ಸಾಲ್ವವಧವೆಂಬ ಕಾರ್ಯನಿಮಿತ್ತದಿಂದ, ಮೇ ವಿಪ್ರಕರ್ಷಾತ್ – ನನ್ನ ದೂರಸ್ಥಿತಿಯಿಂದ, ಇದಂ ವ್ಯಸನಂ – ದ್ಯೂತದಿಂದ ಆರಂಭಿಸಿ ಈವನವಾಸಾದಿ ಈ ಎಲ್ಲ ಕಷ್ಟವು, (ನಿ – ನಿಮಗೆ). ಆಸ – ಉಂಟಾಯಿತು. ಇತಿ—ಎಂದು. ಪಾರ್ಥಾನ್—ಪಾಂಡವರನ್ನು ಕುರಿತು, ನಿಗದ್ಯ – ಹೇಳಿ, ಪುನಃ—ಮತ್ತೆ, ಕೃಷ್ಣಾಂ ಚ ದ್ರೌಪದೀದೇವಿಯನ್ನು, ಸಾಂತ್ವಯಿತುಂ – ಸಮಾಧಾನಪಡಿಸಲು, ಅತ್ರ—ಇಲ್ಲಿಯೇ ವನದಲ್ಲಿ(ಪಾಂಡವರ ಹತ್ತಿರದಲ್ಲಿ), ದಿನಾನಿ – ಕೆಲವು ದಿನಗಳವರಗೆ, ಉವಾಸ - ವಾಸಿಸಿದನು. ಸತ್ಯಾ ಚ—ಸತ್ಯಭಾಮಾದೇವಿಯೂ ಕೂಡ, ಸೋಮಕಸುತಾಂ–ಪಾಂಚಾಲ ರಾಜಕುಮಾರಿಯಾದ ದ್ರೌಪದಿಯನ್ನು, ಅನು ಸಾಂತ್ವಯಂತೀ ಸತೀ–ಸಾಂತ್ವನಗೊಳಿಸುವವಳಾಗಿ, ಉವಾಸ – ವಾಸಮಾಡಿದಳು. ॥೫೩॥

ಭಾವಾನುವಾದ ೫೦ ಶ್ಲೋ

ಶ್ರೀಕೃಷ್ಣ ಪರಮಾತ್ಮನು ದ್ರೌಪದೀದೇವಿಯರಿಗೆ ಆ ರೀತಿ ಸಮಾಧಾನ ಹೇಳಿ ನಾನು ಒಂದು ವೇಳೆ ಆ ಸಂದರ್ಭದಲ್ಲಿ ನಿಮ್ಮ ಜೊತೆಯಲ್ಲಿ ಇದ್ದರೆ ಇಷ್ಟೆಲ್ಲ ಆಗುತ್ತಿರಲಿಲ್ಲ. ಆದರೇನು ಮಾಡುವದು ? ಸಾಲ್ವನು ಯುದ್ಧಕ್ಕೆ

ಬಂದಿದ್ದಾನೆ ಎಂದೂ ನಾರದರ ಮುಖದಿಂದ ಆಂದೂ ಇಂದ್ರಪ್ರಸ್ಥದ ಸಭೆಯಲ್ಲಿ ನಿಮ್ಮ ಜೊತೆಗಿರುವಾಗ ಕೇಳಿ ಮೊದಲೂ ಪ್ರದ್ಯುಮ್ನಾದಿಗಳನ್ನು ಕಳಿಸಿದೆನಷ್ಟೇ-ಅವರೂ ಅಲ್ಲಿಗೆ ಹೋಗಿ ಸೈನ್ಯ ಸಹಿತರಾಗಿ ಸಾಲ್ವನ ಜೊತೆಗೆ ಯುದ್ಧಕ್ಕಿಳಿದರು. ಸಾಲ್ವನೂ ತನ್ನ ಸೌಭವಿಮಾನವನ್ನು ಏರಿ ದ್ವಾರಕೆಯನ್ನು ತುಂಬಾ ಹಾಳುಮಾಡಿ ಈ ನನ್ನ ಮಕ್ಕಳು ಯುದ್ಧಕ್ಕೆ ಬಂದ ದ್ದನ್ನು ತಿಳಿದು ಇವರೂ ಅಶಕ್ತರೆಂದೂ ಭಾವಿಸಿ ಇವರ ಜೊತೆಗೆ ಯುದ್ಧ ಮಾಡಲೆಂದೂ ವಿಮಾನದಿಂದ ಕೆಳಗಿಳಿದೂ ರಥ ವನ್ನೇರಿ ಯುದ್ಧಾರಂಭ ಮಾಡಿದನೂ. ಪ್ರದ್ಯುಮ್ನನಾದರೂ ಅವನ ಸಂಗಡ ಚೆನ್ನಾಗಿ ಯುದ್ಧಮಾಡಿ, ಅವನ ಅಸ್ತ್ರಗಳನ್ನೂ ಪ್ರತಿಪ್ರಬಲ ಅಸ್ತ್ರಗಳಿಂದ ನಾಶಪಡಿಸಿ ಪಾಪಿಯಾದ ಸಾಲ್ವನನ್ನು ಕೊಂದೇ ಬಿಡಬೇಕೆಂದು ನಾನೂ ಕೊಟ್ಟಿರುವ, ವ್ಯರ್ಥ ವಾಗದ ಬಾಣವೊಂದನ್ನು ಕೈಯಲ್ಲಿ ತೆಗೆದುಕೊಂಡನು. ಆಗ ವಾಯುದೇವರೂ ಆಕಾಶದಲ್ಲಿದ್ದುಕೊಂಡು ಪ್ರದ್ಯುಮ್ನನಿಗೆ "ಈ ಸಾಲ್ವನನ್ನು ತಾನೇ ಶ್ರೀಕೃಷ್ಣನ ರೂಪದಿಂದ ಸಂಹರಿಸಬೇಕೆಂದೂ ಶ್ರೀಮನ್ನಾರಾಯಣನೂ ಸಂಕಲ್ಪಿಸಿದ್ದಾನೆ ಆದ್ದ ರಿಂದಲೇ ಅವನದೇ ರೂಪರಾದ ಶ್ರೀ ಪರಶುರಾಮದೇವರೂ ಕೂಡ ಪೂರ್ವರೂಪದ ಸಂಕಲ್ಪಾನುಸಾರ ಈ ಸಾಲ್ವ-ನನ್ನು ಓಡಿಸಿದ್ದಾನೆ ವಿನಃ ಸಂಹರಿಸಲಿಲ್ಲ. ನಿನಗೆ ಇವನನ್ನು ಸಂಹರಿಸಲೂ ಶಕ್ಯವಾಗದೂ. ಆದರೆ ಈ ಬಾಣವು ಭಗ ವಂತನಿಗೆ ಅತಿ ಪ್ರಿಯವಾದದ್ದು, ವ್ಯರ್ಥವಾಗದಂಥದ್ದು ಆದ್ದರಿಂದ ಈ ಬಾಣವನ್ನು ನೀನೂ ಪ್ರಯೋಗಿಸಬೇಡ; ಇವನೂ ಹಿಂದಿರುಗುವಂತೆ ಇವನ ಹೃದಯದಲ್ಲಿ ಪ್ರೇರಕನಾಗಿರುವ ನಾನು ಪ್ರೇರಿಸಿ ಮಾಡುವೆನೂ" ಎಂದೂ ಹೇಳಿದರೂ. ಆ ಮಾತಿನ ಪ್ರಕಾರ ಪ್ರದ್ಯುಮ್ನನೂ ಆ ಬಾಣವನ್ನು ಉಪಸಂಹರಿಸಿಕೊಂಡನೂ. ಆಗ ವಾಯುದೇವರೂ ತಾವು ಹೇಳಿದಂತೆ ಅವ ನಿಗೆ ಪ್ರೇರಿಸಿದ್ದಾರೆ. ಅವನು ಈ ಬಾಲಕ ಪ್ರದ್ಯುಮ್ನನಿಂದ ಕೂಡಿ ಯುದ್ಧಮಾಡಿದರೆ ಜಯಪರಾಜಯಾದಿ ಲಾಭವೇನೂ ಇಲ್ಲ; ಶ್ರೀಕೃಷ್ಣನ ಜೊತೆಗೆ ಯುದ್ಧ ಮಾಡೋಣ ಎಂದುಕೊಂಡು ಹೊರಟುಹೋದನೂ. ನನ್ನ ಮಕ್ಕಳು ಸಾಲ್ವನ ಮಂತ್ರಿಗಳನ್ನು, ಸೈನ್ಯವನ್ನು ಸಂಹರಿಸಿ ಸಂತಸದಿಂದ ಊರಿಗೆ ಬಂದರೂ. ನಿಮ್ಮಿಂದ ಹೊರಟ ನಾನೂ ಅದೇ ಸಮಯಕ್ಕೆ ಅಲ್ಲಿಗೆ ಹೋದೆನೂ. ಅವರಿಂದ ಎಲ್ಲವನ್ನೂ ಕೇಳಿ, ನಮ್ಮ ದ್ವಾರಕೆಯಲ್ಲಿ ಇವನಿಂದ ಹಾಳಾದುದನ್ನು ನೋಡಿ ಆ ಸಾಲ್ವ ನನ್ನು ಬೆನ್ನಟ್ಟಿ ಹೊರಟೂ, ಸೌಭವಿಮಾನದಲ್ಲಿ ಸಮುದ್ರ ಮೇಲಿನ ಪ್ರದೇಶದಲ್ಲಿ ಹೋಗುತ್ತಿದ್ದ ಅವನನ್ನು ಸಂಧಿಸಿ ಯುದ್ಧಾರಂಭವಾದಾಗ ಅವನು ನನ್ನ ಮೇಲೆ ಶಸ್ತ್ರಾಸ್ತ್ರಗಳ ಸುರಿಮಳೆಯನ್ನು ಮಾಡಿದಾಗ ಅದನ್ನೆಲ್ಲ ಪೂರ್ಣನಾಶ ಪಡಿಸಿ, ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದಾಗ, ಅವುಗಳ ಪೆಟ್ಟಿನಿಂದ ಪೀಡಿತನಾಗಿ ಮಾಯಾಯುದ್ಧವನ್ನಾರಂಭಿ ಸಿದನೂ. ಅವನ ಮಾಯೆಗಳನೆಲ್ಲ ಜ್ಞಾನಾಸ್ತ್ರದಿಂದ ನಾಶಪಡಿಸಿ, ಬಹುದೈತ್ಯರನ್ನುಕೊಂದೂ, ಪರ್ವತಗಳನ್ನು ಒಗೆಯುತ್ತಿದ್ದ ಆ ಸಾಲ್ವನನ್ನು, ಅವನ ಸೌಭವಿಮಾನವನ್ನು ಕೂಡ ಸಮುದ್ರದಲ್ಲಿ ಕೆಡವಿದೆನೂ. ಅಲ್ಲಿಂದ ಎದ್ದು ರಥವನ್ನು ಏರಿ ಬಂದಾಗ ಅವನ ಭುಜಗಳನ್ನು ಕತ್ತರಿಸಿ, ಗದೆಯಿಂದ ಅವನ ರಥವನ್ನು ಮುರಿದೂ, ಚಕ್ರದಿಂದ ಅವನ ಶಿರಸ್ಸನ್ನು ಕತ್ತರಿಸಿ ಅವನ ಸಂಹಾರಮಾಡಿ ಬ್ರಹ್ಮಾದಿದೇವತೆಗಳಿಂದ ಸ್ತುತನಾಗಿ ಊರಿಗೆ ಬಂದೆನೂ. ಈ ರೀತಿ ಸಾಲ್ವವಧ ಕಾರಣದಿಂದ ನಾನೂ ಹೋದದ್ದರಿಂದ ನಿಮ್ಮಿಂದ ದೂರದಲ್ಲಿದ್ದರಿಂದ ಈ ರೀತಿ ನಿಮಗೆ ವನವಾಸಾದಿಗಳು ಬರುವಂತಾ ಯಿತು, ನಾನಿದ್ದರೆ ಹಾಗಾಗಗೊಡುತ್ತಿದ್ದಿಲ್ಲ. ಎಂದೂ ಹೇಳಿದನೂ. ಹೀಗೆ ಹೇಳಿದ್ದನ್ನು ಓದಿದ ಕೇಳಿದ ಜನರಿಗೆ ಶ್ರೀಕೃಷ್ಣನೂ ಇಲ್ಲದಿರುವ ಪ್ರದೇಶವೂ ಉಂಟೇ ? ದೂರದಲ್ಲಿದ್ದರೂ ಕಾರ್ಯಮಾಡುವ ಶಕ್ತಿ ಇಲ್ಲವೇ? ಎಂದೂ ಸಂಶಯವೂ ಬರುವದೂ. ಅದಕ್ಕೆ ಶ್ರೀಮದಾಚಾರ್ಯರು ನಿರ್ಣಯವನ್ನು ಹೇಳಿದ್ದಾರೆ – ಭಗವಂತನಿಗೆ ಸಮೀಪದಲ್ಲಿರುವ ವಸ್ತುವಿನ ಬಗ್ಗೆ, ದೂರದಲ್ಲಿರುವ ವಸ್ತುವಿನ ಬಗ್ಗೆ, ಕಾಲದಿಂದ ದೂರದಲ್ಲಿರುವ ಅಂದರೆ ಭೂತಕಾಲೀನ, ಭವಿಷ್ಯತ್ಕಾಲೀನ ವಸ್ತು ವಿನ ಬಗ್ಗೆ ಯಾಗಲೀ, ಸ್ವಾಭಾವಿಕವಾಗಿ ಕಾಣದಂಥ (ಅತೀಂದ್ರಿಯ) ಧರ್ಮಾಧರ್ಮಗಳ ಬಗ್ಗೆಯಾಗಲೀ ಯಾವದೇ ಒಂದೂ ವಸ್ತುವಿನ ಅಡೆ ತಡೆಯಿಂದ ಕಾಣದಂತಿರುವ (ಗೋಡೆಯಿಂದ ಅಚೆ ಇರುವ, ಆವರಣದಿಂದ ಮುಚ್ಚಟ್ಟಿ) ವಸ್ತುಗಳ ಬಗ್ಗೆ ವಾಯುದೇವರಿಗೆ ಅಸಾಮರ್ಥ್ಯ ಎಂಬುದು ಇಲ್ಲವೇ ಇಲ್ಲ. ಭಗವಂತ ಸರ್ವತ್ರ ವ್ಯಾಪ್ತಿ ಎಲ್ಲ ಕಡೆಗೂ ಇರುವವನೂ. ಆದರೂ ಕೂಡ ಹಾಗೆ ಅಶಕ್ತಜನರಂತೆ ನಟಿಸುತ್ತಾನೆ; ಹಾಗೆ ಹೇಳುತ್ತಾನೆ. ಹಾಗೆ ನಟಿಸುವದೂ ಕೂಡ ದುಷ್ಟರಲ್ಲಿ ದೋಷವೃದ್ಧಿಯಾಗುವ, ಸಜ್ಜನರಲ್ಲಿ ಗುಣ ವೃದ್ಧಿಯಾಗುವ ಉದ್ದೇಶವಿರುವದೂ. ಪ್ರಕೃತದಲ್ಲಿ ದೂರ ದಲ್ಲಿದ್ದು ತನಗೆ ದೂತಾದಿಗಳನ್ನು ತಡೆಯಲೂ ಆಗಿಲ್ಲ ಎಂಬಂತೆ ತೋರಿಸಿ, ದೂತ ಆಗುವಂತೆಮಾಡಿ ಅದರಲ್ಲಿ ಕಪಟ ಮಾಡಿ ಮಹಾಭಗವದ್ಭಕ್ತರಾದ ಪಾಂಡವರ ಕಷ್ಟಕ್ಕೆ ದ್ರೋಹಕ್ಕೆ ಕಾರಣರಾಗಿ ದುರ್ಯೋಧನಾದಿಗಳಿಗೆ ದೋಷ ವೃದ್ಧಿ ಆಗುವ ಉದ್ದೇಶ ವಿತ್ತು. ಅದರಂತೆ ಭೀಮಸೇನಾದಿ ಪಾಂಡವರ ಭಕ್ತಾದಿ ಗುಣವೃದ್ಧಿ ಪುಣ್ಯವೃದ್ಧಿ ಆಗುವ ಉದ್ದೇಶ

ವಿತ್ತು. ಅದರಂತೆ ಭೀಮಸೇನಾದಿ ಪಾಂಡವರ ಭಕ್ತ್ಯಾದಿ ಗುಣವೃದ್ಧಿ ಪುಣ್ಯವೃದ್ಧಿಆಗುವ ಉದ್ದೇಶವಿತ್ತು. ಅದನ್ನು ಧರ್ಮರಾಜನಲ್ಲಿ (ರಾಜಸೂಯಯಾಗದಲ್ಲಿ) ಹಿರಿಯನಾದ್ದರಿಂದ ಪ್ರಧಾನನಾಗಿ ಭಾಗವಹಿಸಿದ್ದರಿಂದ ಬಂದ, ಅವನ ಯೋಗ್ಯತೆಗೆ ಮೀರಿರುವ ಪುಣ್ಯವನ್ನು ಭೀಮಾದಿಗಳಲ್ಲಿ ತಾರತಮ್ಯದಿಂದ ಹಂಚುವದರಿಂದ ಮಾಡಿದನು. ಶಾಸ್ತ್ರಗಳು ಭಗವಂತನನ್ನು 'ಏಭವಮಾನದ್ವಿಟ್' ಎಂಬ ಬಿರುದಿನಿಂದ ಹೊಗಳುತ್ತಾ ಇವೆ. ಅದರ ಅರ್ಥ-ಏಭವಮಾನ-ಸಜ್ಜನರ ಯೋಗ್ಯತೆಗೆ ಮೀರಿರುವ ಅವರ ಸದ್ಗತಿಗೆ ಅಡ್ಡಾಗುವ ಪುಣ್ಯವನ್ನು, ದ್ವಿಟ್-ದ್ವೇಷಿಸುವವನು-ಪರಿಹರಿಸುವವನು, ಏನಾದರೂ ಉಪಾಯದಿಂದ ಅಸತ್ಕಾರ್ಯಗಳು ಅವರಿಂದ ನಡೆಯುವಂತೆ ಮಾಡಿ ಪರಿಹರಿಸುವವನು ಎಂದೂ ಇದೆ. ಅದರಂತೆ ಭೀಷ್ಮದ್ರೋಣಾದಿಗಳು ಮಾಡಿದ ಧರ್ಮಜ್ಞಾನ ಕಾರ್ಯಗಳಿಂದ ಬಂದ ಯೋಗ್ಯತಾಧಿಕ ಫಲವನ್ನು ಪಾಂಡವರಿಗೆ ಕೊಡುವದಕ್ಕಾಗಿಯೇ ಭಗವಂತನು ಹೀಗೆ ಮಾಡಿದನು. ಇದೇ ಉದ್ದೇಶದಿಂದ ಶ್ರೀವ್ಯಾಸದೇವರೂ ಬಂದು ಧೃತರಾಷ್ಟ್ರನಿಗೆ 'ಪಾಂಡವರು ನನಗೆ ಅತಿ ಪ್ರಿಯರು; ಅವರನ್ನು ವನಕ್ಕೆ ತಳ್ಳುವದು ಸರ್ವಥಾ ನನಗೆ ಸಮ್ಮತವಲ್ಲ' ಎಂದು ಹೇಳಿದರು. ಹಾಗೆ ಹೇಳಿದ್ದರಿಂದ ಪಾಂಡವರಲ್ಲಿ ಭಗವಂತನ ಪ್ರಶಂಸೆಯಿಂದ ಪುಣ್ಯದ ಅಭಿವೃದ್ಧಿಯೂ ಅಂಧವರ ದ್ವೇಷವನ್ನು ಮಾಡಿದ್ದರಿಂದ, ಭಗವಂತನ ಮಾತನ್ನು ಮೀರಿ ವನಕ್ಕೆ ಕಳಿಸಿದ್ದು. ಅವರಲ್ಲಿ ಒಬ್ಬನ ನ್ನು ಸಂಹರಿಸಲು ಹೋದದ್ದು ಇತ್ಯಾದಿ ದುಷ್ಟಕಾರ್ಯಗಳಿಂದ ದುರ್ಯೋಧನಾದಿಗಳಿಗೆ ದುಷ್ಟಫಲವಾದ ಪಾಪದ ಆಧಿಕ್ಯವೂ ಬರುವಂತೆಮಾಡಿದರು. ದ್ಯೂತಸಭೆಯಲ್ಲಿ ಭೀಮಸೇನದೇವರು ಕ್ರುದ್ಧರಾದಾಗ ಅವರ ಶಿಷ್ಯನಂತಿರುವ (ಬಲಜ್ಯೇಷ್ಠ, ವಯೋಜ್ಯೇಷ್ಠರೂ ಆದ್ದರಿಂದ ಭೀಮಸೇನದೇವರು ಗುರುಗಳು; ಅರ್ಜುನಾದಿಗಳು ಶಿಷ್ಯರು) ಅರ್ಜುನಾದಿಗಳು ಕ್ರೋಧ ಮಾಡದಿರುವದು ಮುಖ್ಯ ಧರ್ಮವಾಗಲಿಲ್ಲ. ಯದ್ಯಪಿ ಕ್ಷಮಾ ಎಂಬುದು ಸಾಮಾನ್ಯವಾಗಿ ಧರ್ಮ ಎಂದಾದರೂ ಈ ಸಂದರ್ಭದಲ್ಲಿ ಅದು ಮುಖ್ಯ ಧರ್ಮವಾಗಲಿಲ್ಲ ಹೀಗೆ ಭೀಮಸೇನದೇವರಲ್ಲಿ ಮಾತ್ರ ನಿಷ್ಕಪಟವಾದ ಧರ್ಮವಿದೆ ದ್ರೌಪದೀದೇವಿಯೂ ಭೀಮರ ಮನಸ್ಸಿನಲ್ಲಿದ್ದದ್ದನ್ನು ತಿಳಿದು ಶಾಪ ಕೊಡದೇ ಇದ್ದದ್ದರಿಂದ ಅವಳಿಗೆ ಅದೂ ಧರ್ಮವೇ ಆಗಿದೆ. ಹೀಗೆ ಮುಖ್ಯಧರ್ಮ ಶ್ರೀಭೀಮಸೇನದೇವರಲ್ಲಿದೆ. ನಂತರ ಶ್ರೀದ್ರೌಪದೀದೇವಿಯ ರಲ್ಲಿ; ನಂತರ ಅರ್ಜುನ; ನಂತರ ಧರ್ಮರಾಜ, ನಂತರ ನಕುಲ ಸಹದೇವರಲ್ಲಿದೆ. ಎಂಬುದನ್ನು ತಿಳಿಯಬೇಕು. ಅದಕ್ಕನು ಸಾರವಾರವಾಗಿ ಅವರಲ್ಲಿ ಫಲವನ್ನು ಇಡುವದಕ್ಕಾಗಿ ಹೀಗೇ ಅನೇಕ ಉದ್ದೇಶಗಳಿಂದ ಭಗವಂತನ ವಿಡಂಬನೆಯಾಗಿರುತ್ತದೆ ಎಂದೂ ಶ್ರೀ ಮದಾಚಾರ್ಯರು ನಿರ್ಣಯ ರತ್ನವನ್ನು ಭಕ್ತರಿಗೆ ದಯಪಾಲಿಸಿದ್ದಾರೆ.

ಪಾಂಡವಾನಾಂ ಚ ಯಾ ಭಾರ್ಯಾಃ ಪುತ್ರಾ ಅಪಿ ಹಿ ಸರ್ವಶಃ ।
ಅನ್ವೇವ ಪಾಂಡವಾನ್ ಯಾತಾ ವನಮತ್ರೈವ ಚ ಸ್ಥಿತಾಃ ॥೫೪॥

ಪಾಂಡವಾನಾಂ ಯಾಃ ಭಾರ್ಯಾಃ – ಪಾಂಡವರ (ದ್ರೌಪದೀಯಿಂದ ಬೇರೆಯಾದ) ಯಾವ ಪತ್ನಿಯರೋ ಚ – ಮತ್ತು, ಯೇ ಪುತ್ರಾಃ – ಯಾವ ಮಕ್ಕಳು ಪಾಂಡವಾನ್ ಅನು – ಪಾಂಡವರನ್ನು ಅನುಸರಿಸಿ, ವನಂ ಏವ ಯಾತಾಃ – ವನಕ್ಕೆ ಹೊರಟುಬಂದಿದ್ದರೋ ತಾಃ ತೇ ಸರ್ವೇ ಅತ್ರ ಏವ ಸ್ಥಿತಾಃ – ಅವರೆಲ್ಲ (ಶ್ರೀ ಕೃಷ್ಣನು ಬಂದಾಗ) ಇಲ್ಲಿಯೇ ಇದ್ದರು. ॥೫೪॥

ಧೃಷ್ಟದ್ಯುಮ್ನಸ್ತತಃ ಕೃಷ್ಣಾಂ ಸಾಂತ್ವಯಿತ್ವೈವ ಕೇಶವಮ್ ॥
ಪ್ರಣಮ್ಯ ಸಮನುಜ್ಞಾತೋ ಭಾಗಿನೇಯೈಃ ಪುರಂ ಯಯೌ ॥೫೫॥

ತತಃ – ಅನಂತರ, ಧೃಷ್ಟದ್ಯುಮ್ನಃ – ಧೃಷ್ಟದ್ಯುಮ್ನನು, ಕೃಷ್ಣಾಂ ಸಾಂತ್ವಯಿತ್ವಾ – ದ್ರೌಪದೀದೇವಿಯನ್ನು ಸಮಾಧಾನಪಡಿಸಿ ಕೇಶವಂ – ಶ್ರೀಕೃಷ್ಣಪರಮಾತ್ಮನನ್ನು, ಪ್ರಣಮ್ಯ – ನಮಸ್ಕರಿಸಿ, ಸಮನುಜ್ಞಾತಃ ಸನ್ ಏವ – ಅಪ್ಪಣೆಯನ್ನು ಹೊಂದಿವನನಾಗಿಯೇ, ಭಾಗಿನೇಯೈಃ ಸಹ – ತಂಗಿಯ ಮಕ್ಕಳಿಂದ ಕೂಡಿಕೊಂಡು, ಪುರಂ – ಪಾಂಚಾಲನಗರಕೆ ಯಯೌ – ಹೋದನು, ॥೫೫॥

ಧೃಷ್ಟಕೇತುಶ್ಚ ಭಗಿನೀಂ ಕಾಶಿರಾಜಃಸುತಾಮಪಿ ॥
ಪುರಂ ಯಯುತುರಾದಾಯ ಕುಂತ್ಯೈವಾನ್ಯಾಃ ಸಹ ಸ್ಥಿತಾಃ ॥೫೬॥

ಧೃಷ್ಟಕೇತುಃ – ಧೃಷ್ಟಕೇತುವು, ಭಗಿನೀಂ – ಸಹೋದರಿಯಾದ, ಧರ್ಮರಾಜನ ಪತ್ನಿಯಾದ ದೇವಕಿಯನ್ನು ಚ – ಹಾಗು, ಕಾಶಿರಾಜಃ – ಕಾಶೀರಾಜನು, ಸುತಾಂ ಅಪಿ – ಮಗಳಾದ, ಭೀಮಸೇನರ ಪತ್ನಿಯಾದ ಕಾಳೀದೇವಿಯನ್ನು ಕೂಡ, ಆದಾಯ – ಕರೆದುಕೊಂಡು, ಪುರಂ – ತಮ್ಮ ಊರಿಗೆ, ಯಯುತುಃ – ಹೋದರು. ಅನ್ಯಾಃ – ಉಳಿದವರು, ಕುಂತ್ಯಾಸಹ ಏವ – ಕುಂತಿಯಿಂದ ಸಹಿತವಾಗಿಯೇ ವಿದುರರ ಮನೆಯಲ್ಲಿ, ಸ್ಥಿತಾಃ – ಇದ್ದರು. ॥೫೬॥

ಪಾರ್ವತೀ ನಕುಲ ಸ್ಯಾಸೀತ್ ಭಾರ್ಯಾಪೂರ್ವಂ ತಿಲೋತ್ತಮಾ॥
ಪೂರ್ವೋಕ್ತೇ ಚೈವ ಯಮಯೋ ಭಾರ್ಯೇ ಕುಂತ್ಯಾ ಹಿ ವಾರಿತಾ. ॥೫೭॥

ಯಾ – ಯಾವಳು, ಪೂರ್ವಂ – ಮೊದಲಲ್ಲಿ ತಿಲೋತ್ತಮಾ – ತಿಲೋತ್ತಮೆ ಎಂಬ ಅಪ್ಸರೆಯೋ, ಸಾ – ಆ ಪಾರ್ವತೀ – ಪಾರ್ವತೀ ಎಂಬವಳು, ನಕುಲಸ್ಯ ಭಾರ್ಯಾ ಆಸೀತ್ – ನಕುಲನ ಹೆಂಡತಿಯಾಗಿದ್ದಳು, ಸಾ – ಅವಳು, ಚ – ಮತ್ತು, ಪೂರ್ವೋಕ್ತೇ – ಈ ಮೊದಲು ಹೇಳಲ್ಪಟ್ಟ, ಯಮಯೋಃ ಭಾರ್ಯೇ – ನಕುಲಸಹದೇವರ ಹೆಂಡತಿಯರು. (ನಕುಲ ಪತ್ನಿಯಾದ ಮದ್ರರಾಜನ ಮಗಳೊಬ್ಬಳು, ಸಹದೇವನ ಪತ್ನಿಯಾದ ಜರಾಸಂಧನ ಮಗಳು) ಹಿ – ಯಾವ ಕಾರಣದಿಂದ, ಕುಂತ್ಯಾವಾರಿತಾಃ – ಕುಂತೀದೇವಿಯಿಂದ ನಿಷೇಧಿಸಲ್ಪಟ್ಟಿದ್ದಳೋ, ತಸ್ಮಾತ್ – ಆದ್ದರಿಂದ, ಕುಂತೀದೇವಿಯಿಂದ ಕೂಡಿಕೊಂಡು ಇದ್ದರು. ॥೫೭॥

ಸುಭದ್ರಾಮಭಿಮನ್ಯುಂ ಚ ರಥಮಾರೋಪ್ಯ ಕೇಶವಃ
ಪಾಂಡವಾನಭ್ಯನುಜ್ಞಾಪ್ಯ ಸಭಾರ್ಯಃ ಸ್ವಪುರೀಂ ಯಯೌ ॥೫೮॥

ಕೇಶವಃ – ಶ್ರೀಕೃಷ್ಣಪರಮಾತ್ಮನು, ಸುಭದ್ರಾಂ – ಸುಭದ್ರಾದೇವಿಯನ್ನು, ಅಭಿಮನ್ಯುಂ ಚ – ಅಭಿಮನ್ಯುವನ್ನೂ ಕೂಡ, ರಥಂ ಆರೋಪ್ಯ – ತನ್ನರಥದಲ್ಲಿ ಕೂಡಿಸಿಕೊಂಡು (ಅನು ಆಗತವಾ) ಪಾಂಡವಾನ್ – (ಬೆನ್ನು ಹತ್ತಿ ಬಂದ) ಪಾಂಡವರನ್ನು, ಅಭ್ಯನುಜ್ಞಾಪ್ಯ – ನಿಲ್ಲಲು ಆಜ್ಞಾಪಿಸಿ, ಸಭಾರ್ಯಃಸನ್ – ಪತ್ನೀಸಹಿತನಾಗಿ, ಸ್ವಪುರೀಂ – ತನ್ನ ದ್ವಾರಕಾ ಪಟ್ಟಣಕ್ಕೆ, ಯಯೌ – ಹೋದನು. ॥೫೮॥

ಕಂಚಿತ್ಕಾಲಂ ದ್ರೌಪದೇಯಾ ಉಷ್ಯ ಪಾಂಚಾಲಕೇ ಪುರೇ॥
ಯಯುರ್ದ್ವಾರವತೀಮೇವ ತತ್ರೋಷುಃ ಕೃಷ್ಣಲಾಲಿತಾಃ ॥೫೯॥

ದ್ರೌಪದೇಯಾಃ – ದ್ರೌಪದೀದೇವಿಯ ಮಕ್ಕಳು, ಕಂಚಿತ್ಕಾಲಂ – ಕೆಲವು ಸಮಯದವರೆಗೆ, ಪಾಂಚಾಲಕೇ ಪುರೇ – ಪಾಂಚಾಲರಾಜ್ಯದಲ್ಲಿ, ಉಷ್ಯ – ವಾಸಮಾಡಿ, ದ್ವಾರವತೀಂ ಏವ – ದ್ವಾರಕಾಪಟ್ಟಣಕ್ಕೇನೇ ಯಯುಃ – ಹೋದರು. ತತ್ರ – ಅಲ್ಲಿ, ಕೃಷ್ಣಲಾಲಿತಾಃಸಂತಃ – ಶ್ರೀಕೃಷ್ಣನಿಂದ ಪ್ರೀತಿಸಲ್ಪಟ್ಟವರಾಗಿ, ಊಷುಃ – ವಾಸಿಸಿದರು. ॥೫೯॥

ತತಃ ಪರಂ ಧರ್ಮರಾಜೋ ನಿರ್ವಿಣ್ಣಃಸ್ವಕೃತೇನ ಹ॥
ಭ್ರಾತೃಭಾರ್ಯಾಪದೇ ಕೃಷ್ಣಾಂ ಸ್ಥಾಪಯಾಮಾಸ ಸರ್ವದಾ ॥೬೦॥

ಧರ್ಮರಾಜಃ—ಧರ್ಮರಾಜನು, ತತಃಪರಂ—ದ್ಯೂತವಾಡಿ ಈ ವನವಾಸಾದಿಗಳಿಗೆ ಬರುವಂತೆ ಮಾಡಿದ ನಂತರ, ಸ್ವಕೃತೇನ – ತನ್ನ ಈ ಅಪರಾಧಕಾರ್ಯದಿಂದ, ನಿರ್ವಿಣ್ಣಃಸನ್ = ವ್ಯಥಿತನಾಗಿ, ಕೃಷ್ಣಾಂ – ದ್ರೌಪದೀದೇವಿಯನ್ನು, ಸರ್ವದಾ ಮುಂದೆ ಯಾವಾಗಲೂ, ಭ್ರಾತೃಭಾರ್ಯಾಪದೇ – ತಮ್ಮ (ಭೀಮಸೇನದೇವ)ನ ಹೆಂಡತಿಯು ಸ್ಥಾನದಲ್ಲಿ, ಸ್ಥಾಪಯಾಮಾಸ—ಇಟ್ಟನು (ದ್ರೌಪದೀ ಸಂಗವನ್ನು ಬಿಟ್ಟನು)ಹ–ಅದು ಯುಕ್ತವೇ ಪ್ರಮಾಣ ಸಮ್ಮತವೇ.॥೬೦॥

ಊಷುರ್ವನೇ ಚ ತೇ ಪಾರ್ಥಾಃ ಮುನಿಶೇಷಾನ್ನಭೋಜಿನಃ ।
ಭುಕ್ತವತ್ಸ್ವೇವಾನುಜೇಷು ಭುಙ್ಕ್ತೇ ರಾಜಾ ಯುಧಿಷ್ಠಿರಃ ॥೬೧॥

ತೇ ಪಾರ್ಥಾಃ—ಆ ಪಾಂಡವರು, ವನೇ – ವನದಲ್ಲಿ, ಮುನಿಶೇಷಾನ್ನಭೋಜಿನಃಸಂತಃ—ಮುನಿಗಳು ಊಟಮಾಡಿ ಉಳಿದ ಅನ್ನವನ್ನು ಸ್ವೀಕರಿಸುವವರಾಗಿ ಊಷುಃ – ವಾಸಿಸಿದರು ಅನುಜೇಷು—ಎಲ್ಲ ತಮ್ಮಂದಿರು, ಭುಕ್ತವತ್ಸು ಸತ್ಸುಏವ—ಊಟಮಾಡಿದವರಾದ ಮೇಲೆಯೇ, ರಾಜಾ ಯುಧಿಷ್ಠಿರಃ ಭುಂಕ್ತೇ – ಊಟಮಾಡುತ್ತಿದ್ದನು, ॥೬೧॥

ಅವತಾರಿಕೆ : ಅಣ್ಣನಿಗಿಂತ ಮೊದಲು ತಮ್ಮಂದಿರು ಹೇಗೆ ಉಣ್ಣುತ್ತಿದ್ದರು ಎಂಬುದಕ್ಕೆ ಉತ್ತರ ಹೇಳುವರು.

ಅಲಂಘ್ಯತ್ವಾತ್ ತದಾಜ್ಞಾಯಾ ಅನುಜಾಃ ಪೂರ್ವಭೋಜಿನಃ ।
ತಸ್ಯಾನಂತರಮೇವೈಕಾ ಭುಙ್ಕ್ತೇಸಾ ಪಾರ್ಷತಾತ್ಮಜಾ ॥೬೨॥

ಅನುಜಾಃ – ತಮ್ಮಂದಿರು, ತದಾಜ್ಞಾಯಾಃಅಲಂಘ್ಯತ್ವಾತ್— ಅಣ್ಣನ ಆಜ್ಞೆಗೆ ಮೀರಲಾರದಿರುವಿಕೆ ಇದ್ದ ದ್ದರಿಂದ (ಅಣ್ಣನ ಆಜ್ಞೆಯನ್ನು ಮೀರಲಾಬಾರದ್ದರಿಂದ), ಪೂರ್ವಭೋಜಿನಃ – ಅವನ ಆಜ್ಞಾನುಸಾರ ಮೊದಲು ಊಟ ಮಾಡುತ್ತಿದ್ದರು. ತಸ್ಯ ಅನಂತರಂ – ಅವನ ಊಟದನಂತರ, ಸಾ ಪಾರ್ಷತಾತ್ಮಜಾ– ಆ ದ್ರೌಪದೀದೇವಿಯು. ಏಕಾ ಏವ—ಒಬ್ಬಳೇ, ಭುಂಜ್ತೇ—ಉಣ್ಣುತ್ತಿದ್ದಳು. ॥೬೨॥

ಏವಂ ಸದಾ ವಿಷ್ಣುಪರಾಯಣಾನಾಂ ತತ್ಪಾರ್ಷಣಾನ್ಯೈಕಭುಜಾಂ ಪ್ರಯಾತಃ ।
ಸಂವತ್ಸರಸ್ತತ್ರ ಜಗಾದಕೃಷ್ಣಾ ಭೀಮಾಜ್ಞಯಾ ಧರ್ಮರಾಜಂ ಸುವೇತ್ರ್ಯೇ ।೬೩॥

ಏವಂ – ಈ ರೀತಿಯಾಗಿ, ಸದಾ – ಯಾವಾಗಲೂ, ವಿಷ್ಣುಪರಾಯಣಾನಾಂ ತತ್ಪಾರ್ಷಣಾನ್ಯೈಕ ಭುಜಾಂ – ಶ್ರೀವಿಷ್ಣುದೇವನಲ್ಲೇ ಆಸಕ್ತರಾದ, ಆ ಭಗವಂತನಿಗೆ ಸಮರ್ಪಿತವಾದ ಅನ್ನವನ್ನೇ ಉಣ್ಣುವ, ಆ ಪಾಂಡವರಿಗೆ, ಸಂವತ್ಸರಃ – ಒಂದು ವರ್ಷಸಮಯವು, ಪ್ರಯಾತಃ – ಕಳೆಯಿತು, ತತ್ರ - ಆ ಸಮಯದಲ್ಲಿ ಸುವೇತ್ರ್ಯೇ— ಶ್ರೇಷ್ಠ ತತ್ತ್ವಜ್ಞಾನಿಯಾದ, ಕೃಷ್ಣಾ – ದ್ರೌಪದೀದೇವಿಯು, ಭೀಮಾಜ್ಞಯಾ—ಭೀಮಸೇನದೇವರ ಅಪ್ಪಣೆಯಂತೆ, ಜಗಾದ – ಮಾತನಾಡಿದಳು ॥೬೩॥

ಅವತಾರಿಕೆ – ಭೀಮಸೇನದೇವರು ದ್ರೌಪದೀದೇವಿಯನ್ನು ಧರ್ಮರಾಜನ ಹತ್ತಿರ ಮಾತನಾಡಲು ಕಳಿಸಿದ್ದಕ್ಕೆ ಕಾರಣವನ್ನು ತಿಳಿಸುತ್ತಾರೆ --

ಅತಿಮಾರ್ದವಯುಕ್ತತ್ವಾದ್ ಧರ್ಮರಾಜಶ್ಚತುರ್ದಶೇ ।
ಅಪಿವರ್ಷೇ ಗುರುಭಯಾದ್ ರಾಜ್ಯಂ ನೇಚ್ಛೇದಿತಿ ಪ್ರಭುಃ ।
ಮಾರುತಿಃ ಪ್ರೇಷಯಾಮಾಸ ಕೃಷ್ಣಾಂ ಪ್ರಸ್ತಾವಹೇತವೇ ॥೬೪॥

ಧರ್ಮರಾಜಃ—ಧರ್ಮರಾಜನು, ಅತಿಮಾರ್ದವಯುಕ್ತತ್ವಾತ್ – ಅತ್ಯಂತ ಮೃದುಸ್ವಭಾವವುಳ್ಳವನಾದ್ದರಿಂದ, ಚತುರ್ದಶೇ ವರ್ಷೇ ಅಪಿ – ಹದಿನಾಲ್ಕನೆಯ ವರ್ಷ(ವನವಾಸ, ಅಜ್ಞಾತವಾಸ ಮುಗಿದನಂತರ)ದಲ್ಲಿಯೂ ಕೂಡ ಗುರುಭಯಾತ್ – ಹಿರಿಯರು, ಪೂಜ್ಯರು ಆದ ಭೀಷ್ಮಾದಿಗಳನ್ನು ಎದುರಿಸುವ ಸಂಕೋಚ(ಭಯ ದಿಂದ, ರಾಜ್ಯಂ—ರಾಜ್ಯವನ್ನು, ನ ಇಚ್ಛೇತ್ – ಇಚ್ಛಿಸದಿರಬಹುದು, ಇತಿ—ಎಂಬ ಕಾರಣದಿಂದ, ಪ್ರಭುಃ ಮಾರುತಿಃ – ಸಮರ್ಥರಾದ ಶ್ರೀ ಭೀಮಸೇನದೇವರು, ಪ್ರಸ್ತಾವಹೇತವೇ ——ತಾವು ಮುಂದೆ ಮಾಡಬೇಕೆಂದಿರುವ ಚರ್ಚೆಯ ಪ್ರಸಕ್ತಿ ಮಾಡಿಕೊಳ್ಳುವದಕ್ಕಾಗಿ, ಕೃಷ್ಣಾಂ—ದ್ರೌಪದೀದೇವಿಯನ್ನು, ಪ್ರೇಷಯಾಮಾಸ – ಕಳಿಸಿದರು. ।೬೪॥

ಭಾವಾನುವಾದ ೫೪—೬೪

ಪಾಂಡವರು ವನಕ್ಕೆ ಹೊರಡುವಾಗ ನಕುಲನ ಪತ್ನಿಯಾದ, ತಿಲೋತ್ತಮೆ ಎಂಬ ಅಪ್ಸರಾಸ್ತ್ರೀಯ ಅವತಾರಳಾದ ಪಾರ್ವತೀ ಎಂಬವಳನ್ನು, ನಕುಲಸಹದೇವರ ಹೆಂಡತಿಯರಾದ ಶಲ್ಯ ಹಾಗು ಜರಾಸಂಧನ ಮಕ್ಕಳು ಇವರನ್ನು ಕುಂತೀದೇವಿಯು ತಡೆದಿದ್ದರಿಂದ ಆ ಮೂವರೂ ಕುಂತೀದೇವಿಯ ಜೊತೆಗೆ ವಿದುರನ ಮನೆಯಲ್ಲಿಯೇ ಇದ್ದರು. ಆದರೆ ಉಳಿದ ಪಾಂಡವಪತ್ನಿಯರೆಲ್ಲರೂ ವನಕ್ಕೆ ಪಾಂಡವರನ್ನು ಅನುಸರಿಸಿ ಬಂದಿದ್ದರು. ಶ್ರೀಕೃಷ್ಣ ಪರಮಾತ್ಮನು ಬಂದ ಸ್ಥಳದಲ್ಲಿ ಅವರೆಲ್ಲರು ಇದ್ದರು. ಶ್ರೀಕೃಷ್ಣಪರಮಾತ್ಮನು ಸುಭದ್ರೆ ಅಭಿಮನ್ಯು ಇವರನ್ನು ರಥದಲ್ಲಿ ಕೂರಿಸಿಕೊಂಡು ದ್ವಾರಕೆಗೆ ಹೋದನು. ಧೃಷ್ಟದ್ಯುಮ್ನನು ದ್ರೌಪದೀದೇವಿಗೆ ಸಮಾಧಾನ ಹೇಳಿ, ಶ್ರೀಕೃಷ್ಣಪರಮಾತ್ಮನಿಗೆ ಸಾಷ್ಟಾಂಗ ಪ್ರಣಾಮ ಮಾಡಿ, ಅನುಜ್ಞೆಯನ್ನು ತೆಗೆದುಕೊಂಡು, ಐದು ದ್ರೌಪದೀಪುತ್ರರಿಂದ ಕೂಡಿಕೊಂಡು ತನ್ನ ಪಾಂಚಾಲದೇಶಕ್ಕೆ ಹೋದನು. ಶಿಶುಪಾಲನ ಮಗನಾದ ಧೃಷ್ಟಕೇತುವು ತನ್ನ ಸಹೋದರಿಯಾದ, ಧರ್ಮರಾಜನ ಹೆಂಡತಿಯಾದ ದೇವಕೀ ಎಂಬುವಳನ್ನು ಕರೆದುಕೊಂಡು ಹೋದನು ಕಾಶೀರಾಜನು ಭೀಮಸೇನರ ಪತ್ನಿಯಾದ, ತನ್ನ ಮಗಳಾದ ಕಾಳೀದೇವಿಯನ್ನು ಕರೆದುಕೊಂಡು ಹೋದನು ದ್ರೌಪದೀದೇವಿಯ ಮಕ್ಕಳು ಕೆಲವು ದಿನಗಳ ಮಟ್ಟಿಗೆ ಪಾಂಚಾಲರಾಜ್ಯದಲ್ಲಿದ್ದು, ದ್ವಾರಕೆಗೆ ಬಂದು ಶ್ರೀಕೃಷ್ಣನಿಂದ ರಕ್ಷಿತರಾಗಿ ವಾಸಿಸಿದರು. ಇದರ ನಂತರದಿಂದ ಧರ್ಮರಾಜನು ತಾನು ಮಾಡಿದ ದ್ಯೂತಾದಿಕಾರ್ಯಗಳ ಬಗೆ ಪಶ್ಚಾತ್ತಾಪ ಪಟ್ಟವನಾಗಿ, ದ್ರೌಪದೀದೇವಿಯಲ್ಲಿ ತನ್ನ ಪತ್ನಿ ಎಂಬ ಅನುಸಂಧಾನವನ್ನು ಬಿಟ್ಟುಬಿಟ್ಟು, ಸಹೋದರನ ಪತ್ನಿ ಎಂಬ ಅನುಸಂಧಾನ ಮಾಡುತ್ತ ಅದೇ ರೀತಿ ನಡೆಯುತ್ತಿದ್ದನು. ಪಾಂಡವರು ವನದಲ್ಲಿ ಮುನಿಗಳು ಭೋಜನವಾದ ಮೇಲೆ ಶೇಷ ಅನ್ನವನ್ನು ಊಟಮಾಡಿಕೊಂಡು ಇದ್ದರು. ಎಲ್ಲ ತಮ್ಮಂದಿರೂ ಉಂಡಮೇಲೆ ಧರ್ಮರಾಜನು ಊಟಮಾಡುತ್ತಿದ್ದನು. ಅನಂತರ ದ್ರೌಪದೀದೇವಿಯೊಬ್ಬರೇ ಉಣ್ಣುತ್ತಿದ್ದರು. ಹೀಗೆ ಭಗವಂತನಿಗೆ ನಿವೇದಿತವಾದ ಆಹಾರವನ್ನೇ ಸ್ವೀಕರಿಸುತ್ತಿದ್ದ, ವಿಷ್ಣುಭಕ್ತರಾದ ಪಾಂಡವರಿಗೆ ವನದಲ್ಲಿ ಒಂದು ವರ್ಷ ಕಳೆಯಿತು. ಆಗ ದ್ರೌಪದೀದೇವಿಯು ಶ್ರೀಭೀಮರ ಆಜ್ಞಾಪ್ರಕಾರ ಧರ್ಮರಾಜನ ಹತ್ತಿರ ಮಾತಾಡಲು ಬಂದಿದ್ದಾಳೆ. ಧರ್ಮರಾಜನು ಅತಿ ಮೃದುಸ್ವಭಾವನಾದ್ದರಿಂದ ಅಜ್ಞಾತವಾಸ ಸೇರಿ ೧೩ ವರ್ಷ ಮುಗಿದು ೧೪ನೆಯ ವರ್ಷದಲ್ಲಿಯೂ ಕೂಡ ಹಿರಿಯರಾದ ಭೀಷ್ಮದ್ರೋಣಾದಿಗಳ ಸಂಹಾರಮಾಡುವದು ಹೇಗೆ ಎಂಬ ಪಾಪ ಭಯದಿಂದ ಯುದ್ಧಮಾಡಲು ತಯಾರಾಗದಿರಬಹುದು ಎಂಬ ವಿಚಾರದಿಂದ ಅವನನ್ನು ಯುದ್ಧಕ್ಕೆ ಸಿದ್ಧನಾಗುವಂತೆ ಮಾಡುವದಕ್ಕೆ ಪ್ರಸಕ್ತಿ ತಂದುಕೊಳ್ಳುವದಕ್ಕಾಗಿ ದ್ರೌಪದೀದೇವಿಯನ್ನು ಶ್ರೀಭೀವ ಸೇನದೇವರು ಕಳಿದ್ದರು.

ಕ್ಷಮಾ ಸರ್ವತ್ರಧರ್ಮೋ ನ ಪಾಪಹೇತುಶ್ಚ ದುರ್ಜನೇ ।
ರಾಜ್ಞಾಂ ಸಾಮರ್ಥ್ಯಯುಕ್ತಾನಾಮಿತಿ ಸಂಸ್ಥಾಪ್ಯ ಶಾಸ್ತ್ರತಃ ॥೬೫॥

ಹತ್ವಾ ಚತುರ್ದಶೇ ವರ್ಷೇ ಧಾರ್ತರಾಷ್ಟ್ರಾನರಾಜ್ಯದಾನ್ ।
ಕರ್ತುಂ ರಾಜ್ಯಂ ಪುರೋಗಂತಾ ಭವಾನೀತ್ಯಗ್ರಜೇನ ಹ ॥೬೬॥

ಕಾರಯನ್ ಸತ್ಯಶಪಥಂ ವಿವಾದಸ್ಯ ಕ್ರಮೇಚ್ಛಯಾ ।
ಆದಿಶತ್ ಪ್ರಥಮಂ ಕೃಷ್ಣಾಂ ಭೀಮಃ ಸಾ ನೃಪಮಬ್ರವೀತ್ ॥೬೭॥

ಸರ್ವತ್ರ—ಎಲ್ಲ ಕಡೆಗೂ (ಸಜ್ಜನರ ಬಗ್ಗೆಯೂ, ದುರ್ಜನರ ಬಗ್ಗೆಯೂ). ಕ್ಷಮಾ – ಕ್ಷಮಾ ಮಾಡುವದು ಧರ್ಮಃ ನ—ಧರ್ಮವಲ್ಲ, ಚ – ಮತ್ತು, ದುರ್ಜನೇ—ದುರ್ಜನರ ಬಗ್ಗೆ, ಕ್ಷಮಾ—ಕ್ಷಮಾವಾಡುವದು, ಸಾಮರ್ಥ್ಯಯುಕ್ತಾನಾಂ - ಶಿಕ್ಷಿಸುವ ಸಾಮರ್ಥ್ಯವುಳ್ಳ, ರಾಜ್ಞಾಂ—ರಾಜರಿಗೆ, ಪಾಪಹೇತುಃ—ಪಾಪಕ್ಕೆ ಕಾರಣವಾಗುವದು, ಇತಿ—ಎಂದು, ಶಾಸ್ತ್ರತಃ—ಶಾಸ್ತ್ರಪುರಾಣದಿಂದ, ಸಂಸ್ಥಾಪ್ಯ—ಧರ್ಮರಾಜನಿಗೆ ನಿರ್ಣಯವನ್ನು ಮಾಡಿಕೊಟ್ಟು, ಚತುರ್ದಶೇ ವರ್ಷೇ—ಹದಿನಾಲ್ಕನೆಯ ವರ್ಷದಲ್ಲಿ, ಅರಾಜ್ಯದಾನ್ – ರಾಜ್ಯಕೊಡದಿರುವ, ಧಾರ್ತರಾಷ್ಟ್ರಾನ್—ದುರ್ಯೋಧನಾದಿಗಳನ್ನು, ಹತ್ವಾ – ಕೊಂದು, ರಾಜ್ಯಂ ಕರ್ತುಂ—ರಾಜ್ಯರಕ್ಷಣೆ ಮಾಡಲು, ಪುರೋಗಂತಾ ಭವಾನಿ – ಅಗ್ರಗಾಮಿಯು ಆಗುವೆನು, ಇತಿ – ಎಂದು, ಸತ್ಯಶಪಥಂ – ಸತ್ಯಪ್ರತಿಜ್ಞೆಯನ್ನು, ಅಗ್ರಜೇನ—ಅಣ್ಣನಾದ ಯುಧಿಷ್ಠಿರನಿಂದ, ಕಾರಯನ್ – ಮಾಡಿಸಲು ಇಚ್ಛೆಯುಳ್ಳ, ಭೀಮಃ—ಶ್ರೀಭೀಮಸೇನದೇವರು, ಪ್ರಥಮಂ—ಮೊದಲು, ವಿವಾದಸ್ಯ ಕ್ರಮೇಚ್ಛಯಾ – ಜರ್ಜೆಯು ಪ್ರಾರಂಭವಾಗಲು, ಪ್ರಸಕ್ತರಾಗುವ ಇಚ್ಛೆಯಿಂದ, ಕೃಷ್ಣಾಂ—ದ್ರೌಪದೀದೇವಿಯನ್ನು ಆದಿಶತ್—ಕಳಿಸಿದರು. ಸಾ – ಆ ದ್ರೌಪದೀದೇವಿಯು, ನೃಪಂ – ಧರ್ಮರಾಜನನ್ನು ಪ್ರತಿ, ಉವಾಚ, ಅಬ್ರವೀತ್—ಹೀಗೆ ಹೇಳಿದಳು. ॥೬೫-೬೭॥

ನೈವ ಕ್ಷಮಾ ದುರ್ಜನೇಷು ನೃಪಸ್ಯ ಧರ್ಮಸ್ತ್ವಾಂ ತ್ವಂ ವೃಥೈವ ಧೃತವಾನಸಿ ಸರ್ವಕಾಲಂ ।
ಇತ್ಯುಕ್ತ ಆಹ ನೃಪತಿಃ ಪರಮಾ ಕ್ಷಮೈವ ಸರ್ವತ್ರ ತದ್ವಿಧೃತಮೇವ ಜಗತ್ ಸಮಸ್ತಂ ॥೬೮॥

ನೃಪಸ್ಯ—ರಾಜನಿಗೆ, ದುರ್ಜನೇಷು—ದುಷ್ಟಜನರಲ್ಲಿ, ಕ್ಷಮಾ – ಕ್ಷಮೆ ಮಾಡುವದು, ನೈವ ಧರ್ಮಃ—ಧರ್ಮವಲ್ಲ, ತಾಂ—ಧರ್ಮವಲ್ಲದಂಥ ಕ್ಷಮೆಯನ್ನು, ತ್ವಂ- ನೀನು, ವೃಥಾ—ವ್ಯರ್ಥವಾಗಿ, ಸರ್ವಕಾಲಂ ಧೃತವಾನ್ ಅಸಿ—ಯಾವಾಗಲೂ ಮಾಡುತ್ತಿರುವಿ, ಇತಿ ಉಕ್ತಃ—ಈ ರೀತಿ ಹೇಳಿಸಿಕೊಳ್ಳಲ್ಪಟ್ಟ, ನೃಪತಿಃ—ಧರ್ಮರಾಜನು, ಸರ್ವತ್ರ – ಎಲ್ಲರ ಬಗ್ಗೆಯೂ, ಕ್ಷಮೈವ – ಕ್ಷಮೆಯೇ, ಪರಮಾ—ಶ್ರೇಷ್ಠವಾದದ್ದು(ಮುಖ್ಯ ಧರ್ಮವು), ಸಮಸ್ತಂ ಜಗತ್—ಎಲ್ಲ ಜಗತ್ತು, ತದ್ವಿಧೃತಂ ಏವ – ಆ ಕ್ಷಮೆಯಿಂದಲೇ ಧರಿಸಲ್ಪಟ್ಟಿದೆ(ನಿಂತಿದೆ). ॥೬೮॥

ಕರ್ತಾ ಚ ಸರ್ವಜಗತಃ ಸುಖದುಃಖಯೋರ್ಹಿ ನಾರಾಯಣಸ್ತದನುದತ್ತಮಿಹಾಸ್ಯ ಸರ್ವಮ್ ।
ತಸ್ಮಾನ್ನ ಕೋಪವಿಷಯೋಽಸ್ತಿ ಕುತಶ್ಚ ಕಶ್ಚಿತ್ ತಸ್ಮಾತ್ ಕ್ಷಮೈವ ಸಕಲೇಷು ಪರೋಽಸ್ಯ ಧರ್ಮಃ ॥೬೯॥

ಸರ್ವಜಗತಃ—ಎಲ್ಲ ಜಂತ್ತಿನ, ಸುಖದುಃಖಯೋಃ ಕರ್ತಾ - ಸುಖದುಃಖಗಳಿಗೆ ಕರ್ತನು, ನಾರಾಯಣಃ ಹಿ—ಶ್ರೀಮನ್ನಾರಾಯಣದೇವರೇ, ಅಸ್ಯ—ಈ ಜಗತ್ತಿಗೆ, ಸರ್ವಂ—ಸುಖದುಃಖಗಳು ಜನ್ಮಾದಿಗಳೆಲ್ಲವೂ, ತದನುದತ್ತಂ — ಅದರದರ ಯೋಗ್ಯತೆಕರ್ಮಗಳಿಗನುಸರಿಸಿ ಶ್ರೀಹರಿಯಿಂದಲೇ, ಕೊಡಲ್ಪಟ್ಟಿರುತ್ತದೆ, ತಸ್ಮಾತ್—ಆದ್ದರಿಂದ, ಕಶ್ಚಿತ್ —

ಯಾವನೂ ಕೂಡ; ಕುತಃ ಚ – ಯಾವ ಕಾರಣದಿಂದಲೂ, ಕೋಪವಿಷಯಃ ನ—ಕೋಪಮಾಡಿಕೊಳ್ಳಲ್ಪಡಲೂ ಯೋಗ್ಯನು ಅಲ್ಲ. ಅಸ್ಯ—ಈ ಚೇತನನಿಗೆ, ಸಕಲೇಷಂ ಕ್ಷವಶಾವಿವ – ಎಲ್ಲರಬಗ್ಗೆ ಕ್ಷವಶಾಗುಣವೇ, ಪರಃ ಧರ್ಮಃ – ಶ್ರೇಷ್ಠವಾದ ಧರ್ಮವು. ॥೮೯॥

ಇತ್ಯುಕ್ತವಂತಂ ನೃಪಮಾಹ ಪಾರ್ಷತೀ ಯದಿ ಕ್ಷಮಾ ಸರ್ವನರೇಷು ಧರ್ಮಃ ।
ರಾಜ್ಞಾ ನ ಕೃತ್ಯಂ ನ ಚ ಲೋಕಯಾತ್ರಾ ಭವೇಜ್ಜಗತ್ ಕಾಪುರುಷೈರ್ವಿನಶ್ಯೇತ್ ॥೭೦॥

ಇತಿ ಉಕ್ತವಂತಂ ನೃಪಂ – ಈ ರೀತಿ ವಕ್ತನಾಡಿದ ರಾಜನನ್ನು ಕುರಿತು, ಪಾರ್ಷತೀ – ದ್ರೌಪದೀ ದೇವಿಯು, ಯದಿ – ಒಂದುವೇಳೆ, ಸರ್ವನರೇಷು – ಎಲ್ಲ ಚೇತನರ ಬಗೆಗೂ, ಕ್ಷವಾ – ಕ್ಷಮಾವಶಾಡುವದೇ, ಧರ್ಮಃ—ಧರ್ಮವಾದರೆ, ರಾಜ್ಞಾ – ರಾಜನಿಂದ, ಕೃತ್ಯಂ ನ – ಪ್ರಯೋ ನವಿಲ್ಲ, ಲೋಕಯಾತ್ರಾ ನ ಭವೇತ್—ಲೋಕವ್ಯವಹಾರವೇ ನಡೆಯದಾದೀತು, ಜಗತ್—ಜಗತ್ತು, ಕಾಪುರುಷೈಃ—ದುಷ್ಟಪುರುಷ(ಕಳ್ಳ, ಘಟಿಂಗ ಮೊದಲಾದವ)ರಿಂದ, ವಿನಶ್ಯೇತ್ – ನಾಶವನ್ನು ಹೊಂದೀತು ॥೭೦॥

ಸತ್ಯಂ ಚ ವಿಷ್ಣುಃ ಸಕಲಪ್ರವರ್ತಕೋ ರಮಾವಿರಿಂಚೇಶಪುರಸ್ಸರಾಶ್ಚ ।
ಕಾಷ್ಠಾದಿವತ್ ತದ್ವಶಗಾಃ ಸಮುಸ್ತಾಸ್ತಥಾಽಪಿ ನ ವ್ಯರ್ಥತಾ ಪೌರುಷಸ್ಯ ॥೭೧॥

ವಿಷ್ಣುಃ – ಶ್ರೀಹರಿಯು, ಸಕಲಪ್ರವರ್ತಕಃ—ಎಲ್ಲರ ಎಲ್ಲದರ ಪ್ರವರ್ತಕನು, ಚ–ಮತ್ತು, ರಮಾವಿರಿಂಚೇಶ ಪುರಸ್ಸರಾಃಸಮುಸ್ತಾಃ ಚ – ಶ್ರೀ ರಮಾದೇವಿ, ಬ್ರಹ್ಮದೇವರು, ರುದ್ರದೇವರು ಮೊದಲಾದ ಎಲ್ಲರೂ ಕೂಡ ಕಾಷ್ಠಾದಿವತ್ – ಕಟ್ಟಿಗೆ ಮೊದಲಾದವುಗಳು ಹೇಗೆ ಜೀವನ ಅಧೀನವಾಗಿವೆಯೋ ಹಾಗೆ, ತದ್ವಶಗಾಃಚ - ಆ ಶ್ರೀಹರಿಯು ಅಧೀನರೇ ಆಗಿರುವರು, ಇತಿ—ಎಂಬುದು, ಸತ್ಯಂ ಚ—ಸತ್ಯವೇ. ತಥಾಪಿ–ಆದರೂ ಕೂಡ, ಪೌರುಷ್ಯ–ಪುರುಷ ಪ್ರಯತ್ನಕ್ಕೆ, ವ್ಯರ್ಥತಾ ನ–ವೈಯರ್ಥ್ಯ ವಿಲ್ಲ. ॥೭೧॥

ತದಾಜ್ಞಯಾ ಪುರುಷಶ್ಚೇಷ್ಟವಾನಶ್ಚೇಷ್ಟಾನು ಸಾರೇಣಶುಭಾಶುಭಸ್ಯ ।
ಭೋಕ್ತಾ ನ ತಚ್ಚೇಷ್ಟಿತ ಮನ್ಯಥಾ ಭವೇತ್ ಕರ್ತಾ ತಸ್ಮಾತ್ಪುರುಷೋಽಪ್ಯಸ್ಯ ವಶ್ಯಃ ॥೭೨॥

ತದಾಜ್ಞಯಾ—ಆ ಭಗವಂತನ ಪ್ರೇರಣೆಯಂತೆ ಚೇಷ್ಟವಾನಃ—ಕಾರ್ಯಮಾಡುವ, ಪುರುಷಃ – ಚೇತನನು, (ಜೀವನು), ಶುಭಾಶುಭಸ್ಯ, ಫಲ) – ಪುಣ್ಯಪಾಪಗಳ(ಫಲವನ್ನು.)ಭೋಕ್ತಾ—ಉಣ್ಣುವವನು ಆಗಿರುವನು. ಅನ್ಯಥಾ–ಜೀವನಿಗೆ ಶ್ರೀಹರಿಯು ಅಧಿನವಾದ ಕರ್ತೃತ್ವವೂ ಇಲ್ಲವಾದರೆ, ತಚ್ಚೇಷ್ಟಿತಂ ಇತಿ – ಇದು ಆ ಜೀವನ ಕರ್ಮವು ಎಂದು, ನ ಭವೇತ್—ಆಗಲಿಕ್ಕಿಲ್ಲ. (ಯದಿ ತಚ್ಚೇಷ್ಟಿತಂ ನ ಭವೇತ್ – ಒಂದು ವೇಳೆ ಜೀವನ ಕರ್ಮವು ಎಂದಾಗದಿದ್ದರೆ, ಜೀವನು ಕರ್ಮ ಕರ್ತೃವೇ ಅಲ್ಲ ಎಂದಾದರೆ ಭೋಕ್ತಾ ನ ಭವೇತ್ – ಜೀವನು ಫಲ ಭೋಕ್ತೃವೂ ಅಲ್ಲ ಎಂದಾದೀತು. (ಆದರೆ ಜೀವನು ಫಲಭೋಕ್ತೃವು ಆಗಿದ್ದು ಅನುಭವಸಿದ್ಧವಾಗಿದೆ) ತಸ್ಮಾತ್ – ಆದ್ದರಿಂದ ಪುರುಷಃಅಪಿ– ಜೀವನೂ ಕೂಡ, ಅಸ್ಯ — ಈ ಶ್ರೀ ಹರಿಗೆ, ವಶ್ಯಃ ಕರ್ತಾ – ಅಧೀನನಾದ ಕರ್ತನೇ ಆಗಿದ್ದಾನೆ. ॥೭೨॥

ವ್ಯರ್ಥಾ ಯದಿ ಸ್ಯಾತ್ ಪೌರುಷಂ ಕಸ್ಯ ಹೇತೋರ್ವಿಧಿರ್ನಿಷೇಧಶ್ಚ ಸಮುಸ್ತವೇದಗಃ।
ವಿಧೇರ್ನಿಷೇಧಸ್ಯ ಚ ನೈವ ಗೋಚರಃ ಪುಮಾನ್ ಯದಿ ಸ್ಯಾದ್ ಭವತೋ ಹಿ ತೌ ಹರೇಃ ॥೭೩॥

ಯದಿ ಪೌರುಷಂ ವೃಥಾ ಸ್ಯಾತ್—ಒಂದು ವೇಳೆ ಪುರುಷಪ್ರಯತ್ನ ವ್ಯರ್ಥವಾದರೆ, ಪುರುಷನಿಗೆ ಕರ್ತೃತ್ವವಿಲ್ಲವಾದರೆ, ತರ್ಹಿ—ಆ ಪಕ್ಷದಲ್ಲಿ, ಸರ್ವಸ್ತವೇದಗಃ—ಎಲ್ಲ ವೇದಗಳಲ್ಲಿರುವ, ವಿಧಿ:ನಿಷೇಧ: ಚ—ವಿಧಿವಾಕ್ಯಗಳು ಮತ್ತು ನಿಷೇಧವಾಕ್ಯಗಳೂ ಕೂಡ, ಕಸ್ಯ ಹೇತೋಃ—ಯಾರ ಸಲುವಾಗಿ ಎಂದು ಹೇಳಬೇಕು? ಪುಮಾನ್-ಜೀವನು ವಿಧೇ: ನಿಷೇಧಸ್ಯ ಚ – ವಿಧಿ ವಾಕ್ಯಕ್ಕೆ ನಿಷೇಧವಾಕ್ಯಕ್ಕೂ ಗೋಚರಃ ನ ಸ್ಯಾತ್ – ಪಾತ್ರ ಅರ್ಹ (ಬದ್ಧ) ನಲ್ಲವಾದರೆ, ತೌ—ಆ ವಾಕ್ಯಗಳು, ಹರೇ:—ಶ್ರೀಹರಿಗೆ, ಭವತಃ - ಸಂಬಂಧಿಸಿದವುಗಳು ಎಂದಾಗಬೇಕಾದೀತು. ॥೭೩॥

ತೇನೈವ ಲೇಪಶ್ಚ ಭವೇದವುಷ್ಯ ಪುಣ್ಯೇನ ಪಾಪೇನ ಚ ನೈವ ಚಾಸೌ ।
ಲಿಪ್ಯೇತ ತಾಭ್ಯಾಂ ಪರಮಃ ಸ್ವತಂತ್ರಃಕರ್ತಾ ತತ: ಪುರುಷೋಽಪ್ಯಸ್ಯ ವಶ್ಯ: ॥೭೪॥

ತೇನ ಏವ – ವಿಧಿನಿಷೇಧ ಬದ್ಧನಾಗಬೇಕಾದ್ದರಿಂದಲೇ, ಪುಣ್ಯೇನ ಪಾಪೇನ ಚ ಲೇಪಃ – ಪುಣ್ಯದಿಂದ ಹಾಗು ಪಾಪದಿಂದ ಸಂಬಂಧವೂ ಕೂಡ, ಅವುಷ್ಯ-ಆ ಶ್ರೀಹರಿಗೇ, ಭವೇತ್ –ಆಗಬೇಕಾದೀತು. ಚ – ಆದರೆ, ಪರಮಃಸ್ವತಂತ್ರಃ ಅಸೌ – ಸರ್ವೋತ್ತಮನೂ, ಸ್ವತಂತ್ರನೂ ಆದ ಆ ಭಗವಂತನು, ತಾಭ್ಯಾಂ – ಆ ಪುಣ್ಯ ಪಾಪಗಳಿಂದ, ನೈವ ಲಿಪ್ಯೇತ – ಲಿಪ (ಸಂಬಂಧ)ವುಳ್ಳವನಾಗಲಾರನು. ತತಃ – ಆ ಕಾರಣದಿಂದ ಪುರುಷ:—ಜೀವನು, ಅಸ್ಯ – ಈ ಶ್ರೀಹರಿಗೆ, ವಶ್ಯ:ಅಪಿ ಅಧೀನನಾದರೂ ಕರ್ತಾ—ಕರ್ತೃವು ಆಗಿರುತ್ತಾನೆ. ॥೭೪॥

ಇತೀರಿತೋ ಧರ್ಮಜ: ಕೃಷ್ಣಯೈವ ನಿರುತ್ತರತ್ವಂ ಗಮಿತಸ್ತ್ವಭರ್ತ್ಸಯತ್,
ಕುತರ್ಕಮಾಶ್ರಿತ್ಯ ಹರೇರಪಿ ತ್ವ ಮುಸ್ವಾತಂತ್ರ್ಯಂ ಸಾಧಯಸೀತಿ ಚೋಕ್ತ್ವಾ ॥೭೫॥

ಇತಿ—ಈ ರೀತಿಯಲಾಗಿ, ಕೃಷ್ಣಯಾ – ದ್ರೌಪದೀದೇವಿಯಿಂದ, ಈರಿತಃ— ಹೇಳಿಸಿಕೊಳ್ಳಲ್ಪಟ್ಟ, ಧರ್ಮಜ: —ಧರ್ಮರಾಜನು, ನಿರುತ್ತರತ್ವಂ ಗಮಿತಃಸನ್—ನಿರುತ್ತರತ್ವವನ್ನು ಹೊಂದಿದವನಾಗಿ (ಕೃಷ್ಣಂ-ದ್ರೌಪದೀದೇವಿಯನ್ನು ಕುರಿತು) ತ್ವಂ - ನೀನು, ಕುತರ್ಕಂ ಆಶ್ರಿತ್ಯ – ಕುಚ್ಛಿತವಾದ (ಸ್ವತಂತ್ರವಾಗಿ ಪ್ರಮಾಣವಲ್ಲದ) ಯುಕ್ತಿಯನ್ನು ಆಶ್ರಯಿಸಿ, ಹರೇಃಅಪಿ—ಸ್ವತಂತ್ರನಾದ ಶ್ರೀಹರಿಗೂ ಕೂಡ, ಅಸ್ವಾತಂತ್ರ್ಯಂ—ಅಸ್ವತಂತ್ರತೆಯನ್ನು, ಸಾಧಯಸಿ ಇತಿ - ಸಾಧಿಸುತ್ತಿರುವಿ ಎಂದು, ಉಕ್ತ್ವಾ—ಹೇಳಿ, ಅಭರ್ತ್ಸಯತ್ - ನಿಂದಿಸಿದನು. ಸುಮ್ಮನೆ ಕೂಡುವಂತೆ ಜಬರಿಸಿದನು. ॥೭೫॥

ಛಲೇನ ತೇನ ಪ್ರತಿಭರ್ತ್ಸಿತಾ ಸಾ ಕ್ಷಮಾಪಯಾಮಾಸ ನೃಪಂ ಯತಃ ಸ್ತ್ರೀ ।
ವಾಚಾಲತಾ ನಾತಿತರಾಂ ಹಿ ಶೋಭತೇ ಸ್ತ್ರೀಣಾಂ ತತಃ ಪ್ರಾಹ ವೃಕೋದರಸ್ತಮ್ ॥೭೬॥

ತೇನ – ಆ ಧರ್ಮರಾಜನಿಂದ, ಛಲೇನ—ದುರಾಗ್ರಹದಿಂದ, ಪ್ರತಿಭರ್ತ್ಸಿತಾ– ಬೆದರಿಸಲ್ಪಟ್ಟ, ಸಾ – ಆ ದ್ರೌಪದೀದೇವಿಯು, ಯತಃ ಸ್ತ್ರೀ – ಯಾವ ಕಾರಣದಿಂದ ಸ್ತ್ರೀ ಆಗಿದ್ದಾಳೋ, ಹಿ – ಯಾವ ಕಾರಣದಿಂದ, ಅತಿತರಾಂ ವಾಚಾಳತಾ – ಅತಿ ಹೆಚ್ಚು ಮಾತನಾಡುವದು, ಸ್ತ್ರೀಣಾಂ – ಸ್ತ್ರೀಯರಿಗೆ, ನಹಿ ಶೋಭತೇ – ಶೋಭಿಸುವದಿಲ್ಲವೋ, ತತಃ – ಆ ಕಾರಣದಿಂದ, ನೃಪಂ – ಧರ್ಮರಾಜನನ್ನು, ಕ್ಷಮಾಪಯಾಮಾಸ - ಕ್ಷಮಿಸುವಂತೆ ಪ್ರಾರ್ಥಿಸಿದಳು. ತತ:—ಅನಂತರ, ವೃಕೋದರಃ—ಶ್ರೀಭೀಮಸೇನದೇವರು, ತಂ – ಆ ಧರ್ಮರಾಜನನ್ನು ಕುರಿತು, ಪ್ರಾಹ – ಮಾತನಾಡಿದರು. ॥೭೬॥

ಅವತಾರಿಕೆ : ಭೀಮಸೇನದೇವರು ಹೇಳಿದ್ದನ್ನು ಹೇಳುತ್ತಾ ಇದ್ದಾರೆ.

ರಾಜನ್ ವಿಷ್ಣುಃ ಸರ್ವಕರ್ತಾ ನಚಾನ್ಯಸ್ತತ್ತಂತ್ರಮೇವಾನ್ಯದಸೌ ಸ್ವತಂತ್ರಃ ।
ತಥಾಽಪಿ ಪುಂಸಾ ವಿಹಿತಂ ಸುಕರ್ಮಕಾರ್ಯಂ ತ್ಯಾಜ್ಯಂ ಚಾನ್ಯದತ್ಯಂತಯತ್ನಾತ್ ॥೭೭॥

ರಾಜನ್—ಧರ್ಮರಾಜನೇ, ವಿಷ್ಣುಃ—ಶ್ರೀ ನಾರಾಯಣನು. ಸರ್ವಕರ್ತಾ—ಸರ್ವಕರ್ತನು, ಅನ್ಯತ್—ಉಳಿದೆಲ್ಲವು, ತತ್ತಂತ್ರಂ ಏವ—ಅವನ ಅಧೀನವೇ ಆಗಿದೆ, ಅಸೌ—ಆ ಭಗವಂತನು, ಸ್ವತಂತ್ರಃ—ಸ್ವೇಚ್ಛಾಧೀನನು; ತಥಾಪಿ—ಆದರೂ ಕೂಡ, ಪುಂಸಾ—ಚೇತನನಿಂದ, ವಿಹಿತಂ ಸುಕರ್ಮ—ತನ್ನ ವರ್ಣ ಆಶ್ರಮಗಳಿಗೆ ವಿಹಿತವಾದ ಕಾರ್ಯವು, ಕಾರ್ಯಂ—ಮಾಡಲ್ಪಡಬೇಕು. ಅನ್ಯತ್—ಉಳಿದದ್ದು, ಅತ್ಯಂತ ಯತ್ನಾತ್—ಅತಿ ಪ್ರಯತ್ನಪೂರ್ವಕ ವಾಗಿ, ತ್ಯಾಜ್ಯಂ ಚ—ಬಿಡಲ್ಪಡಲೇಬೇಕು ॥೭೭॥

ಪ್ರತ್ಯಕ್ಷಮೇತತ್ ಪುರುಷಸ್ಯ ಕರ್ಮ ತೇನಾನುಮೇಯಾ ಪ್ರೇರಣಾ ಕೇಶವಸ್ಯ ।
ಸ್ವಕರ್ಮ ಕೃತ್ವಾ ವಿಹಿತಂ ಹಿ ವಿಷ್ಣುನಾ ತತ್ಪ್ರೇರಣೇತ್ಯೇವ ಬುಧೋಽನುಮನ್ಯತೇ ॥೭೮॥

ಪುರುಷಸ್ಯ—ಚೇತನನ, ಏತತ್ ಕರ್ಮ—ಈ ಜೀವನದ ಕ್ರಿಯೆಯು. ಪ್ರತ್ಯಕ್ಷಂ—ಪ್ರತ್ಯಕ್ಷವಿದೆ. ತೇನ—ಆ ರೀತಿ ಕಾರ್ಯ ನಡೆಯುತ್ತಾ ಇರುವದರಿಂದ. ಕೇಶವಸ್ಯ ಪ್ರೇರಣಾ—ಶ್ರೀಹರಿಯ ಪ್ರೇರಣೆ (ಇದೆ ಎಂಬುದು) ಯು, ಅನುಮೇಯಾ—ಊಹಿಸಲ್ಪಡಬೇಕು. ಬುಧಃ—ಜ್ಞಾನಿಯಾದವನು. ವಿವೇಕಿಯು, ವಿಷ್ಣುನಾ ವಿಹಿತಂ—ಭಗವಂತನಿಂದ ಶ್ರುತಿಸ್ಮೃತಿಗಳಲ್ಲಿ ವಿಧಿಸಲ್ಪಟ್ಟ, ಸ್ವಕರ್ಮ—ತನಗೆ ಉಚಿತವಾದ ವರ್ಣಾಶ್ರಮಕರ್ಮವನ್ನು, ಕೃತ್ವಾ—ಮಾಡಿ, ತತ್ಪ್ರೇರಣಾ—ಆ ಭಗವಂತನ ಪ್ರೇರಣೆಯಿಂದ (ಕೃಪೆಯಿಂದ) ಆಯಿತು, ಇತಿ—ಎಂದು ಅನುಮನ್ಯತೇ—ತಿಳಿಯುತ್ತಾನೆ. ॥೭೮॥

ಭಾವಾನುವಾದ ೭೫-೭೮

ದುಷ್ಟ ಸಂಹಾರ, ದುಷ್ಟ ಶಿಕ್ಷೆ ಮಾಡಲು ಸಾಮರ್ಥ್ಯವುಳ್ಳ ರಾಜರು ಎಲ್ಲರಲ್ಲಿಯೂ ಕ್ಷಮೆಯನ್ನು ತೋರುವದು ಧರ್ಮವಲ್ಲವೆಪ್ಪೇ ಅಲ್ಲ; ದುಷ್ಟರಲ್ಲಿ ಕ್ಷಮೆ ತೋರುವದು ಪಾಪಕ್ಕೇ ಕಾರಣವಾಗುತ್ತದೆ ಎಂದು ಶಾಸ್ತ್ರದಿಂದ ಸಿದ್ಧ ಮಾಡಿ ವನವಾಸ ಅಜ್ಞಾತವಾಸಗಳ ಅವಧಿ ಹದಿಮೂರು ವರ್ಷಗಳು ಮುಗಿದ ಮೇಲೆ ರಾಜ್ಯವನ್ನು ದುರ್ಯೋಧನಾದಿಗಳು ಕೊಡದಿದ್ದಲ್ಲಿ ಅವರನ್ನು ಸಂಹರಿಸಿ ರಾಜ್ಯವನ್ನು ವಹಿಸಿಕೊಂಡು ರಕ್ಷಣಮಾಡಲು ಧರ್ಮರಾಜನ ಮನಸ್ಸು ಸಿದ್ಧವಾಗಿ ನಾನು ಹಾಗೆ ಖಂಡಿತ ಮಾಡುವೆನು ಎಂದು ಪ್ರತಿಜ್ಞೆಯನ್ನು ಅವನಿಂದ ಮಾಡಿಸುವಷ್ಟು ಅವನನ್ನು ತಯಾರು ಮಾಡಲು ವಿವಾದದ ಪ್ರಸಕ್ತಿ ತಂದುಕೊಳ್ಳುವದಕ್ಕಾಗಿ ಶ್ರೀಭೀಮರು ಮೊದಲು ದ್ರೌಪದೀದೇವಿಯನ್ನು ಧರ್ಮರಾಜನ ಹತ್ತಿರ ಕಳಿಸಿದರು. ಆ ಪ್ರಕಾರ ಶ್ರೀದ್ರೌಪದೀದೇವಿಯರು ಬಂದು ರಾಜನ ಹತ್ತಿರ "ಎಲೋ ರಾಜನೇ, ದುಷ್ಟರಲ್ಲಿ ಕ್ಷಮಾತೋರುವದು ಸರ್ವಥಾ ಧರ್ಮವಲ್ಲ. ಆದರೂ ನೀನು ವ್ಯರ್ಥವಾಗಿ ಅಂಥ ಕ್ಷಮೆಯನ್ನು ಯಾವಾಗಲೂ ಮಾಡುತ್ತಿರುವಿ" ಎಂದು ಹೇಳಿದಳು, ಆಗ ಧರ್ಮರಾಜನು, ಕ್ಷಮೆಯೇ ಎಲ್ಲ ಕಡೆಗೂ ಶ್ರೇಷ್ಠವಾದದ್ದು. ಆದರಿಂದಲೆ ಜಗತ್ತು ನಡೆದಿದೆ. ಅಷ್ಟೇಅಲ್ಲ ಎಲ್ಲರಿಗೂ ಸುಖದುಃಖಿಗಳನ್ನು ಕೊಡುವವನು ಭಗವಂತನೇ ಆದ್ದರಿಂದ ಯಾವದೇ ವ್ಯಕ್ತಿಯ ಬಗ್ಗೆ ಇವನು ದುಃಖವನ್ನು ನಮಗೆ ಕೊಟ್ಟ ಎಂದು ತಿಳಿಯುವದು, ಹಾಗೆ ತಿಳಿದು ಅವನ ಮೇಲೆ ದ್ವೇಷ ಸಿಟ್ಟು ಮಾಡುವದು ಸರಿಯಲ್ಲ. ಆದ್ದರಿಂದ ಬಂದದ್ದೆಲ್ಲವು ಭಗವಚ್ಚಿತ್ತ ಎಂದು ತಿಳಿದು ಸುಮ್ಮನಿರುವದೇ ಶ್ರೇಷ್ಠಧರ್ಮವು ಎಂದು ಹೇಳಿದನು ಆಗ ಶ್ರೀ ದ್ರೌಪದೀಯರು ನೀನು ಹೇಳಿದಂತೆ ಎಲ್ಲ ಕಡೆಗೂ ಕ್ಷಮೆಯೇ ಧರ್ಮವಾಗುವದಾದರೆ ದುಷ್ಟರಾಕ್ಷಸ(ಕಳ್ಳ, ಕಾಮುಕ)ರನ್ನೂ ಕೂಡ ಶಿಕ್ಷಿಸದಂತಾಗಿ ಜಗತ್ತಿನ ನಿತ್ಯ ಜೀವನವೇ ನಡೆಯುದಂತಾದೀತು. ಆ ದುಷ್ಟರಿಂದ ನಾಶಹೊಂದುವಂತಾದೀತು. ಭಗವಂತನು ಎಲ್ಲರಿಗೂ ಸುಖ ದುಃಖಪ್ರದನು. ಲಕ್ಷ್ಮೀಬ್ರಹ್ಮ ಮೊದಲಾದ

ಎಲ್ಲರೂ ಅವನ ವಶರು ಎಂಬುದು ನಿಜವೇ. ಆದರೆ ಪುರುಷ ಪ್ರಯತ್ನವು ವ್ಯರ್ಥವಲ್ಲ. ಆ ಭಗವಂತನ ಪ್ರೇರಣೆ ಯಂತೆ ಶುಭಾಶುಭಕರ್ಮವನ್ನು ಮಾಡುತ್ತಿರುವ ಜೀವನು ಶುಭಾಶುಭ ಫಲಗಳ ಅನುಭೋಗ ಮಾಡುತ್ತಿರುವನು. ಒಂದು ವೇಳೆ ಹರ್ಯಧೀನವಾದ ಕರ್ತೃತ್ವವೇ ಇಲ್ಲವಾದರೆ, ಆ ಜೀವನ ಪುಣ್ಯಪಾಪಕಾರ್ಯಗಳು ವ್ಯರ್ಥವೇ ಆಗುವ ಪ್ರಸಂಗ ಬರುವದರಿಂದ ಜೀವನೂ ಭಗವದಧೀನ ಕರ್ತೃವೇ ಆಗಿದ್ದಾನೆ ಎಂದು ಒಪ್ಪಬೇಕು. ಅಷ್ಟೇ ಅಲ್ಲ ಜೀವನ ಕರ್ತೃತ್ವವು ವ್ಯರ್ಥವೇ ಆದರೆ ಅಂದರೆ ಜೀವನು ಕರ್ತನೇ ಅಲ್ಲವಾದರೆ, ಶಾಸ್ತ್ರದ ವಿಧಿ ನಿಷೇಧ ವಾಕ್ಯಗಳು ಯಾರಿಗಾಗಿ? ಎಂಬ ಪ್ರಶ್ನೆ ಬರುವದು. ಜಡಕ್ಕೆ ಅಲ್ಲ, ಜೀವನಿಗಲ್ಲ ಅಂದಮೇಲೆ ಆ ವಾಕ್ಯಗಳು ವ್ಯರ್ಥವಾಗಬಾರದಾದ್ದರಿಂದ ದೇವರಿಗೆ ಎಂದು ಹೇಳಬೇಕಾಗುತ್ತದೆ. ಆಗ ತತ್ಪ್ರಯುಕ್ತ ಪುಣ್ಯಪಾಪಲೇಪಗಳೂ ಅವನಿಗೇ ಎಂದು ಹೇಳಬೇಕು. ಆದರೆ ಸ್ವತಂತ್ರನಾದ ಸರ್ವೋತ್ತಮನಾದ ಅವನಿಗೆ ಪುಣ್ಯಪಾಪಗಳು ಕೂಡುವದೂ ಇಲ್ಲ; ಅವನಿಗೆ ಇಲ್ಲ ಎಂದು ಶ್ರುತಿಗಳು ಹೇಳುತ್ತಿವೆಯಾದ್ದರಿಂದಲೂ ವಿಧಿನಿಷೇಧಗಳಿಗೆ ಅರ್ಹನಾಗಿ ಪುಣ್ಯಪಾಪಗಳ ಭಾಗಿಯಾಗುವವನೊಬ್ಬನು ಬೇಕೇಬೇಕಾದ್ದರಿಂದ ಅವನು ಜೀವನೆಂದೇ ಹೇಳಬೇಕು. ಆದ್ದರಿಂದ ಜೀವನು ಭಗವಂತನ ಅಧೀನನಾಗಿ ಕರ್ತೃವೇ ಆಗಿದ್ದಾನೆ ಎಂದು ಹೇಳಬೇಕು. ಎಂದು ದ್ರೌಪದೀದೇವಿಯು ಹೇಳಿದಾಗ ಉತ್ತರ ಕೊಡಲು ಆಗದ ಧರ್ಮರಾಜನು 'ನೀನು ಸುಮ್ಮನೆ ಏನೋ ಕುತರ್ಕಗಳಿಂದ ಭಗವಂತನ ಸ್ವಾತಂತ್ರ್ಯವನ್ನೇ ಅಲ್ಲಗಳೆಯುತ್ತಿರುವಿ ಇದು ಸರಿಯಲ್ಲ' ಎಂದು ಹಟದಿಂದ ದ್ರೌಪದಿಗೆ ಜೋರು ಮಾಡಿದನು. ಆಗ ಅವಳು, ಸ್ತ್ರೀಯರು (ಗಂಡನ ಎದುರು) ಹೆಚ್ಚು ಮಾತನಾಡಬಾರದು ಎಂಬ ನೀತಿಯನ್ನು ತಿಳಿಸುವದಕ್ಕಾಗಿ, ಇಷ್ಟು ಪ್ರಸಕ್ತಿ ಮಾಡುವದಕ್ಕಾಗಿಯೇ ಶ್ರೀಭೀಮರು ತನ್ನನ್ನು ಕಳಿಸಿದ್ದಾರೆ ಎಂದು ತಿಳಿದಿದ್ದರಿಂದಲೂ, ಪುನಃ ಮಾತಾಡದೇ ಕ್ಷಮಿಸು ಎಂದು ಹೇಳಿ ಸುಮ್ಮನಾದಳು. ಇಷ್ಟು ಪ್ರಸಕ್ತಿ ಬಂದಾಗ, ಶ್ರೀ ಭೀಮಸೇನದೇವರು ಪ್ರವೇಶಿಸಿ ಧರ್ಮರಾಜನನ್ನು ಕುರಿತು 'ರಾಜ, ಶ್ರೀಹರಿಯು ಸರ್ವಕರ್ತನು ಎನ್ನುವದು ನಿಶ್ಚಯ. ಅವನೇ ಸ್ವತಂತ್ರ, ಉಳಿದೆಲ್ಲವೂ ಪರತಂತ್ರ. ಆದರೂ ಪ್ರತಿಯೊಬ್ಬನಿಂದಲೂ ತನಗೆ ವೇದಾದಿ ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಕರ್ಮಗಳನ್ನು ಮಾಡಲೇಬೇಕು. ನಿಷಿದ್ಧವಾದದ್ದನ್ನು ಬಿಡಲೇಬೇಕು. ಪುರುಷ (ಜೀವ)ನಲ್ಲಿ ಕರ್ತೃತ್ವವಿಲ್ಲ ಎಂದು ಅನ್ನಲಿಕ್ಕೂ ಕೂಡದು. ಏಕೆಂದರೆ ಚೇತನರಲ್ಲಿ ಸಂಧ್ಯಾದಿ ಕ್ರಿಯೆಗಳಾಗಲಿ, ಆಹಾರವಿಹಾರಾದಿ ಕ್ರಿಯೆಗಳಾಗಲೀ ಪ್ರತ್ಯಕ್ಷಸಿದ್ಧವೇ ಆಗಿರುವವು. ಆ ಕ್ರಿಯೆಗಳು ನಡೆಯುತ್ತಿರುವದರಿಂದ ದೇವರ ಪ್ರೇರಣೆಯೂ ಆಗುತ್ತಿದೆ ಎಂದೂ ಊಹಿಸಲೇಬೇಕು. ಆ ಊಹೆಯಕ್ರಮವು ಹೀಗೆ — ಧಾರ್ಮಿಕನೂ ಜೀವನೇ, ಕಾಮುಕನೂ ಜೀವನೇ ಆಗಿದ್ದರೂ ಕೂಡ ಕಾಮುಕಾದಿಗಳು ಮಾಡದಿರುವ ಸಂಧ್ಯಾದಿಕರ್ಮಗಳನ್ನು ಈ ಆಸ್ತಿಕನು ಏಕೆ ಆಚರಿಸುತ್ತಿರುವನು ಎಂದು ವಿಚಾರಿಸಿದಾಗ ಭಗವಂತನು ಕಾಮುಕನಲ್ಲಿ ಕಾಮುವನ್ನೇ ಜೋದನ ಮಾಡಿದ್ದಾನೆ, ಆಸ್ತಿಕರಲ್ಲಿ ಧಾರ್ಮಿಕ ಶ್ರದ್ಧೆಯನ್ನೇ ಜಾಗೃತಗೊಳಿದ್ದಾನೆ. ಇದರಿಂದ ಹೀಗೆ ಆಗುತ್ತಲಿವೆ. ಎಂದು ಎಲ್ಲರೂ ಹೇಳಬೇಕು. ಅಂದರೆ ಶ್ರೀಹರಿಪ್ರೇರಣೆಯೇ ಆ ಕಾರ್ಯಗಳ ಹಿಂದೆ ಕಾರಣವಾಗಿದೆ ಎಂದು ಯುಕ್ತಿಯಿಂದ ಒಪ್ಪಬೇಕಾಯಿತು. ಅವರವರ ಯೋಗ್ಯತೆಯೇ ಕಾರಣ ಎಂದು ಹೇಳೋಣ, ಪ್ರೇರಣೆಯನ್ನು ಏಕೆ ಒಪ್ಪಬೇಕು ಎಂದು ಅನ್ನುವವರಿಗೂ ಆಸ್ತಿಕರಾದವರಲ್ಲೇ ಇದ್ದಾದಿಗಳು ಪರನಾರೀಕಾಮುನೆಯನ್ನು ಏಕೆ ಮಾಡಿದರು ಎಂದು ಕೇಳಿದಾಗ ಅವರಾದರೂ ಭಗವತ್ಪ್ರೇರಣೆಯಿಂದ ಎಂದು ಹೇಳಲೇಬೇಕಾಗುವದು. ಅದಲ್ಲದೇ, ತನಗೆ ಬೇಡಾದ ನರಕಾದ್ಯನರ್ಥಕ್ಕೆ ಕಾರಣವಾಗತಕ್ಕ ಪಾಪಕರ್ಮವೂ ಅನಿಷ್ಟವೇ (ಬೇಡವಾದದ್ದೇ) ಆಗುವದು. ಅಂಥದ್ದನ್ನು ಮಾಡಬೇಕಾದರೆ ತಾನು ಸ್ವತಃ ಮಾಡುವನು ಎಂದು ಹೇಳಲು ಬರುವದಿಲ್ಲ ಕಿಂತು ಬೇರೆಯುವರಿಂದ ಪ್ರೇರಿತನಾಗಿ ಮಾಡುತ್ತಿದ್ದಾನೆ ಎಂದು ಹೇಳಬೇಕಾದ್ದರಿಂದ ಅನಿಷ್ಟಕರ್ಮ ಪರಂಪರೆಗೆ ಸ್ವತಂತ್ರ ಪ್ರೇರಕನಾದ ಭಗವಂತನ ಪ್ರೇರಣೆಯಿಂದ ಈ ಎಲ್ಲ ಕೆಲಸವಾಗುತ್ತಾ ಇದೆ ಎಂದು ಒಪ್ಪಲೇಬೇಕು. ಜ್ಞಾನಿಯಾದವನು ಇದನ್ನೆಲ್ಲ ತಿಳಿದು ಕರ್ಮವಾಡಿ, ಭಗವಂತನ ಪ್ರೇರಣೆಯಿಂದ ಮಾಡಿದೆ ಎಂದೇ ಅನುಸಂಧಾನ ಮಾಡುತ್ತಾನೆ.

ತೇನೈತಿ ಸಮ್ಯಗ್ಗತಿಮುಸ್ಯ ವಿಷ್ಣೋರ್ಜನೋಽಶುಭೋದ್ಯೈವಮಿತ್ಯೇವ ಮುತ್ತಾ ।
ಹಿತ್ವಾಸ್ವಕಂ ಕರ್ಮಗತಿಂ ಚ ತಾವನುಸೀಂ ಪ್ರಯಾತಿ ತಸ್ಮಾತ್ ಕಾರ್ಯಮೇವ ಸ್ವಕರ್ಮ ॥೭೯॥

ತೇನ – ಅದರಿಂದ, (ಆ ರೀತಿ ಕರ್ತವ್ಯ ಮಾಡಿ ಭಗವಂತನ ಪ್ರೇರಣಾನುಸಂಧಾನವಾಡಿದ್ದರಿಂದ) ಅಸ್ಯ ವಿಷ್ಣೋಃ—ಈ ಶ್ರೀಮನ್ನಾರಾಯಣನ, ಸಮ್ಯಗ್ಗತಿಂ – ಉತ್ತಮ ಸ್ಥಾನವನ್ನು, ಏತಿ – ಹೊಂದುವನು. ಅಶುಭಾಃ ಜನಃ—ದುರ್ಜನರು ಮಾತ್ರ, ದೈವಂ ಏವ—ದೇವರನ್ನೇ, ಕರ್ತೃ ಇತಿ – ಕರ್ತನೆಂದು, ಮತ್ವಾ – ತಿಳಿದು, ಸ್ವಕಂ ಕರ್ಮ—ತಮ್ಮ ವರ್ಣ ಆಶ್ರಮಗಳಿಗುಚಿತವಾದ ಕರ್ಮವನ್ನು, ಹಿತ್ವಾ – ಬಿಟ್ಟು, ತಾಮಸೀಂ ಗತಿಂ ಯಂ— ತಾಮಸ ಸ್ಥಾನವ (ತಮಸ್ಸನ್ನೇ, ಪ್ರಯಾತಿ—ಹೊಂದುವನು. ತಸ್ಮಾತ್— ಆದ್ದರಿಂದ. ಸ್ವಕರ್ಮ – ತಪಗುಚಿತ ಕರ್ಮವು, ಕಾರ್ಯಮೇವ – ಮಾಡಲ್ಪಡಲೇಬೇಕು ॥೭೯॥

ಜ್ಞಾತವ್ಯಂ ಚೈವಾಸ್ಯ ವಿಷ್ಣೋರ್ವಶತ್ವಂ ಕರ್ತವ್ಯಂ ಚೈವಾತ್ಮನಃ ಕಾರ್ಯಕರ್ಮ ।
ಪ್ರತ್ಯಕ್ಷೈಷಾ ಕರ್ತೃತಾ ಜೀವಸಂಸ್ಥಾ ತಥಾಗಮಾದನುಮಾನಾಚ್ಚ ಸರ್ವಮ್ ॥೮೦॥

ವಿಷ್ಣೋರ್ವಶೇ ತನ್ನ ಹೇಯಂ ದ್ವಯಂ ಚ ಜ್ಞಾನನ್ ವಿದ್ವಾನ್ ಕುರುತೇ ಕಾರ್ಯಕರ್ಮ ।
ತತ್ಪ್ರೇರಕಂ ವಿಷ್ಣುಮೇವಾಭಿಜಾನನ್ ಭವೇತ್ ಪ್ರಮಾಣತ್ರಿತಯಾನುಗಾವಿೀ ॥೮೧॥

ಚ—ಮತ್ತು ಅಸ್ಯ – ಈ ಜೀವನಿಗೆ, ವಿಷ್ಣೋಃ ವಶತ್ವಂ—ವಿಷ್ಣುವಿನ ಆಧೀನತೆಯಂ, ಜ್ಞಾತವ್ಯಂ ಏವ – (ತನ್ನಿಂದ)ತಿಳಿಯಲ್ಪಡಲೇಬೇಕು, ಚ—ಹಾಗೂ, ಆತ್ಮನಃ ಕಾರ್ಯಕರ್ಮ – ತನ್ನ ಕರ್ತವ್ಯ ಕರ್ಮವು, ಕರ್ತವ್ಯಂ ಏವ—ಮಾಡಲ್ಪಡಲೇಬೇಕು. ಜೀವಸಂಸ್ಥಾ ಏಷಾ ಕರ್ತೃತಾ—ಜೀವನಲ್ಲಿ ಇರುವ ಕರ್ತೃತ್ವವು, ಪ್ರತ್ಯಕ್ಷಾ—ಪ್ರತ್ಯಕ್ಷ ಸಿದ್ಧವಾಗಿದೆ, ತಥಾ – ಹಾಗು, ಆಗಮಾತ್—'ಕುರ್ವನ್ನೇವೇಹ ಕರ್ಮಾಣಿ...' ಇತ್ಯಾದಿ ಶ್ರುತಿಸ್ಮೃತಿಗಳಿಂದ, ತಥಾ – ಹಾಗು, ಅನುಮಾನಾತ್—'ಜೀವಃ ಯಜನಾದಿಕರ್ಮಕರ್ತಾ ತಜ್ಜನ್ಯ ಫಲಭೋಕ್ತೃತ್ವಾತ್ ವ್ಯತಿರೇಕೇಣ ಘಟವತ್' (ಜೀವನಿಗೆ ಯಜ್ಞಯಾಗಾದಿಗಳ ಫಲಭೋಗವಾಗುತ್ತಿರುವುದರಿಂದ ಅವನು ಕರ್ತನು)ಎಂಬ ಅನುಮಾನದಿಂದಲೂ, ಸಿದ್ಧಾ—ಸಿದ್ಧವಾಗಿದೆ, ಸರ್ವಂ – ಎಲ್ಲವು, ವಿಷ್ಣೋಃ ವಶೇ – ಶ್ರೀನಾರಾಯಣನ ಆಧೀನದಲ್ಲಿ, ತತ್ ದ್ವಯಂ— ಅದೆರಡೂ ಕೂಡ, ನ ಹೇಯಂ – ತ್ಯಜಿಸಲ್ಪಡಬಾರದು, ಇತಿ ಚ – ಎಂದೂ ಕೂಡ, ಅಭಿಜಾನನ್— ತಿಳಿದವನಾಗಿ, ಪ್ರಮಾಣತ್ರಿತಯಾನುಗಾವಿೀ ಭವೇತ್ – ಪ್ರಮಾಣತ್ರಯವನ್ನು ಅನುಸರಿಸಿದವನು ಆಗುವನು. ॥೮೦-೮೧॥

ಪೂರ್ಣಂ ಪ್ರಮಾಣಂ ತತ್ ದ್ವಯಂ ಚಾವಿರೋಧೇನೈಕತ್ರಸ್ಥಂ ತತ್ ತ್ರಯಂ ಚಾವಿರೋಧಿ ।
ಪ್ರಥಜ್ ವಾ ಮಧ್ಯಂ ಚಾ ಪ್ರಮಾಣಂ ವಿರೋಧಿ ಸ್ಯಾತ್ ತತ್ ತಸ್ಮಾತ್ ತ್ರಯಮೇಕತ್ರ ಕಾರ್ಯಂ ॥೮೨॥

ತತ್ ತ್ರಯಂ—ಆ ಮೂರು ಪ್ರಮಾಣಗಳು, ಅವಿರೋಧೇನ – ವಿರೋಧವಿಲ್ಲದಂತೆ. ಏಕತ್ರಸ್ಥಂ – ಒಂದು ವಿಷಯದ ಬಗ್ಗೆ ಇದ್ದಾಗ, ಪೂರ್ಣಪ್ರಮಾಣಂ ಇತಿ ಉಚ್ಯತೇ) – ಪೂರ್ಣಪ್ರಮಾಣವು (ಎಂದು ಹೇಳಲ್ಪಡುವದು), (ಉದಾ—ಜೀವಕರ್ತೃತ್ವ, ಈಶ್ವರ ಕರ್ತೃತ್ವದ ಬಗ್ಗೆ ಹೇಳಲ್ಪಟ್ಟ ಪ್ರಮಾಣ ತ್ರಯವು), ತತ್ ತ್ರಯಂ—ಆ ಪ್ರಮಾಣತ್ರಯವು ಪೃಥಕ್ – ಭಿನ್ನ ಭಿನ್ನ ಅರ್ಥಗಳ ಬಗ್ಗೆ ಇದ್ದು, ಅವಿರೋಧಿ ಚೇತ್—ವಿರೋಧರಹಿತವಾದರೆ, ಮಧ್ಯಂ— ಮಧ್ಯಮ ಪ್ರಮಾಣವು, ಚ—ಹಾಗು, ಯತ್—ಯಾವಜ್ಜೀವ, ವಿರೋಧಿ - ಒಂದೊಂದು ಪ್ರಮಾಣದಿಂದ ವಿರೋಧಿಯಾದರೂ, ತತ್—ಅದು, ಅಪ್ರಮಾಣಂ ಸ್ಯಾತ್ – ಅಪ್ರಮಾಣವಾಗುವದು, ತಸ್ಮಾತ್—ಆದ್ದರಿಂದ, ತತ್ ತ್ರಯಂ – ಪ್ರಮಾಣತ್ರಯವು, ಏಕತ್ರ ಕಾರ್ಯಂ - ಒಂದ ವಿಷಯದ ಬಗ್ಗೆ ವಿರುದ್ಧವಲ್ಲದಂತೆ ಮಾಡಲ್ಪಡಬೇಕು ॥೮೨॥

ಅಜ್ಞಃ ಪ್ರತ್ಯಕ್ಷಂ ತ್ಮಪಹಾಯೈವ ದೈವಂ ಮತ್ವಾ ಕರ್ತೃ ಸ್ವಾತ್ಮಕರ್ಮ ಪ್ರಜಹ್ಯಾತ್ ।
ವಿದ್ವಾನ್ ಜೀವಂ ವಿಷ್ಣುವಶಂ ವಿದಿತ್ವಾ ಕರೋತಿ ಕರ್ತವ್ಯಮಜಸ್ರಮೇವ ॥೮೩॥

ಅಜ್ಞಃ ತಂ - ಅಜ್ಞನಿಬಂ ವಹಾತ್ರ, ಪ್ರತ್ಯಕ್ಷಂ ಅಪಹಾಯ ಏವ—ಪ್ರತ್ಯಕ್ಷ ಪ್ರಮಾಣವನ್ನೂ ಬಿಟ್ಟು ಕೊಟ್ಟೇ, ದೈವಂ ಏವ—ದೇವರನ್ನೇ, ಕರ್ತ್ರ ವಂತ್ವಾ—ಕರ್ತೃವನ್ನಾಗಿ ತಿಳಿದು, ಸ್ವಾತ್ಮಕರ್ಮ—ತನ್ನ ವರ್ಣಾಶ್ರಮ ಧರ್ಮಗಳನ್ನು, ಪ್ರಜಹಾತ್ - ಬಿಟ್ಟು ಬಿಡುತ್ತಾನೆ, ವಿದ್ವಾನ್ ತಃ—ಜ್ಞಾನಿಯು ವಹಾತ್ರ, ಜೀವಂ - ಜೀವನನ್ನು, ವಿಷ್ಣುವಶಂ ಕರ್ತಾರಂ - ವಿಷ್ಣುವಿಗೆ ಅಧೀನನಾದ ಕರ್ತನನ್ನಾಗಿ, ವಿದಿತ್ವಾ - ತಿಳಿದು, ಕರ್ತವ್ಯಂ—ತನ್ನ ವಿಹಿತ ಕರ್ತವ್ಯ ಕರ್ಮಗಳನ್ನು, ಅಜಸ್ರಂ - ಯಾವಾಗಲೂ, ಕರೋತಿ ಏವ—ಮಾಡುತ್ತಲೇ ಇರುತ್ತಾನೆ.॥೮೩॥

ಅವತಾರಿಕೆ :— ಜೀವನಿಂದ ಕಾರ್ಯಗಳು ನಡೆಯಲು ಕಾರಣವಾದ ಮೂರನ್ನು ಹೇಳುವರು.—

ಸ್ವಭಾವಾಖ್ಯಾ ಯೋಗ್ಯತಾ ಯಾ ಹಠಾಖ್ಯಾ ಯಾಽನಾದಿ ಸಿದ್ಧಾ ಸರ್ವಜೀವೇಷು ನಿತ್ಯಾ ।
ಸಾ ಕಾರಣಂ ತತ್ಪ್ರಥಮಂ ತ್ವದ್ವಿತೀಯಮನಾದಿ ಕರ್ಮೈವ ತಥಾ ತೃತೀಯಃ ।
ಜೀವಪ್ರಯತ್ನಃ ಪೌರುಷಾಖ್ಯಸ್ತದೇತತ್ ತ್ರಯಂ ವಿಷ್ಣೋರ್ವಶಗಂ ಸರ್ವದೈವ ॥೮೪॥

ಯಾ — ಯಾವದಂ, ಸರ್ವಜೀವೇಷು—ಸರ್ವಜೀವರಲ್ಲಿ, ಅನಾದಿಸಿದ್ಧಾ—ಅನಾದಿಯಿಂದಾಗಿ ಇರತಕ್ಕ, ನಿತ್ಯಾ—ಯಾವಾಗಲೂ ಇರುವಂಥ, ಸ್ವಭಾವಾಖ್ಯಾ ಹಠಾಖ್ಯಾ - ಸ್ವಭಾವ-ಹಠ ಎಂದು ಹೆಸರುಳ್ಳ, ಯೋಗ್ಯತಾ - ಯೋಗ್ಯತೆಯೋ, ಸಾ—ಅದು, ಪ್ರಥಮಂ ಕಾರಣಂ—ಮೊದಲಕಾರಣವು, ತತ್—ಅನಾದಿಕರ್ಮವೇ ಏವ—ಆ ಅನಾದಿಕರ್ಮವೇ, ದ್ವಿತೀಯಂ ಕಾರಣಂ—ಎರಡನೆಯ ಕಾರಣವು, ತಥಾ - ಹಾಗೂ, ಪೌರುಷಾಖ್ಯಃ ಜೀವಪ್ರಯತ್ನಃ— ಪೌರುಷ ಎಂಬ ಹೆಸರುಳ್ಳ, ಜೀವಪ್ರಯತ್ನವು, ತೃತೀಯಃ - ಕಾರಣಗಳಲ್ಲಿ ಮೂರನೆಯದ್ದು, ತತ್ ಏತತ್ ತ್ರಯಂ—ಆ ಈ ಮೂರು ಕಾರಣಗಳ ಸಮೂಹವು, ಸರ್ವದಾ—ಯಾವಾಗಲೂ, ವಿಷ್ಣೋಃ ವಶಗಂ ಏವ—ಶ್ರೀಹರಿಯ ಅಧೀನವೇ ಆಗಿದೆ. ॥೮೪॥

ಸ ಕಸ್ಯಚಿನ್ನ ವಶೇ ವಾಸುದೇವಃ ಪರಾತ್ ಪರಃ ಪರಮೋಽಸೌ ಸ್ವತಂತ್ರಃ ।
ಹಠಶ್ಚಾಸೌ ತಾರತಮ್ಯಸ್ಥಿತೋ ಹಿ ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್ ।
ಹಠಾಚ್ಚ ಕರ್ಮಾಣಿ ಭವಂತಿ ಕರ್ಮಜೋ ಯತ್ನೋ ಯತೋ ಹಠಕರ್ಮಪ್ರಯೋಕ್ತಾ ॥೮೫॥

ವಿನಾ ಯತ್ನಂ ನ ಹಠೋ ನಾಪಿ ಕರ್ಮ ಫಲಪ್ರದೌ ವಾಸುದೇವೋಽಖಿಲಸ್ಯ ।
ಸ್ವಾತಂತ್ರ್ಯ ಶಕ್ತೇರ್ನಿಯಾಮಕೋ ಹಿ ತಥಾಽಪ್ಯೇತಾನ್ ಸೋಽಪ್ಯಪೇಕ್ಷ್ಯೈವ ಯುಂಜೀತ ॥೮೬॥

ಸಃ ವಾಸುದೇವಃ—ಆ ಶ್ರೀಹರಿಯಂ, ಕಸ್ಯಚಿತ್ ವಶೇ(ಅಪಿ)—ಯಾರದೇ ವಶದಲ್ಲಿಯೂ, ನ—ಇರುವದಿಲ್ಲ ಅಸೌ—ಅವನು ಪರಾತ್ ಪರಃ—ಬ್ರಹ್ಮಾದಿ ಉತ್ತಮರಿಗಿಂತಲೂ ಶ್ರೇಷ್ಠನು, ಸ್ವತಂತ್ರಃ—ಸ್ವತಂತ್ರನು. ಅಸೌ ಹಠಃ ಚ—ಜೀವರಲ್ಲಿರುವ ಹಠವೆಂಬ ಯೋಗ್ಯತೆಯೂ ಕೂಡ, ಬ್ರಹ್ಮಾಣಮಾರಭ್ಯ—ಚತುರ್ಮುಖಬ್ರಹ್ಮದೇವರನ್ನಾರಂಭಿಸಿ, ಯಾವತ್‌ಕಲಿಃ - ಕಲಿಯವರೆಗೆ, ತಾರತಮ್ಯಸ್ಥಿತಃ—ತಾರತಮ್ಯದಿಂದ ಇದೆ, ಹಠಾತ್ ಚ—ಆ ಯೋಗ್ಯತೆಯಿಂದ; ಕರ್ಮಾಣಿ—ಕಾರ್ಯಗಳು, ಭವಂತಿ—ಆಗುವವು, ಯತ್ನಃ—ಪ್ರಯತ್ನವು, ಕರ್ಮಜಃ—ಪೂರ್ವಕರ್ಮಗಳಿಗೆ ಅನುಗುಣವಾಗಿ ಬರುವದು, ಯತಃ—ಯಾವ ಕಾರಣದಿಂದ, ಯತ್ನಃ—ಪ್ರಯತ್ನವು, ಹಠ ಕರ್ಮಪ್ರಯೋಕ್ತಾ—ಯೋಗ್ಯತೆ ಕರ್ಮಗಳಫಲ ಬರಲು ಪ್ರಯೋಜಕವಾಗಿದೆಯೋ, ತತಃ—ಆದ್ದರಿಂದ, ಯತ್ನಂ ವಿನಾ ಹಠಃ ಕರ್ಮ ಅಪಿ ನ ಫಲಪ್ರದೌ—ಪ್ರಯತ್ನವಿಲ್ಲದೇ ಯೋಗ್ಯತೆಯಾಗಲಿ. ಪೂರ್ವಕರ್ಮವಾಗಲಿ ಫಲಪ್ರದವಾಗುವದಿಲ್ಲ, ವಾಸುದೇವಃ ಅಪಿ—ಶ್ರೀಹರಿಯೂ ಕೂಡ, ಯತ್ನಂವಿನಾ—ಜೀವರ ಪ್ರಯತ್ನವಿಲ್ಲದೆ, ಅಖಿಲಸ್ಯ—ಎಲ್ಲರಿಗೂ, ಫಲಪ್ರದಃ ನ - ಫಲಕೊಡುವವನು ಆಗುವದಿಲ್ಲ ಸ್ವಾತಂತ್ರ್ಯ ಶಕ್ತೇಃ—ತನ್ನ ಸ್ವಾತಂತ್ರ್ಯದಿಂದ, ॥೮೫॥

ವಿನಿಯೋಮಂಕ:—ನಿಯಾಮಂಕನೇ ಆಗಿರುವನು. [ಅವರವರ ಯೋಗ್ಯತೆ, ಕರ್ಮ, ಪ್ರಯತ್ನಗಳಿಗೆ ಅನುಗುಣವಾಗಿ ಫಲ ಕೊಡುವಲ್ಲಿ ಅವನೇ ಶಕ್ತನು ಆಗಿರುವನು.] ತಥಾಽಪಿ—ಅವನು ಸ್ವತಂತ್ರನಾಗಿದ್ದರೂ ಕೂಡ, ಸ: ಅಪಿ—ಆ ಭಗವಂತನೂ ಕೂಡ, ಏತಾನ್ ಅಪೇಕ್ಷ್ಯ ಏವ ಅಪೇಕ್ಷಿಸಿಕೊಂಡೇ, ಯುಂಜೀತ್—ಫಲಯುಕ್ತನನ್ನಾಗಿ ಮಾಡುತ್ತಾನೆ. ॥೪೫ – ೪೬॥

ಅವತಾರಿಕೆ : ಮೂರರ ಅನುಸಾರವಾಗಿ ಭಗವಂತನು ಫಲಕೊಡುವನು ಎಂದಾಗ, ಅವನಿಗೂ ಪರತಂತ್ರತೆಯಿರಬಂತಲ್ಲ ಎಂದು ಶಂಕೆ ಬಂದರೆ ಅದಕ್ಕೆ ಉತ್ತರವನ್ನು ಕೊಡುತ್ತಾರೆ—

ಏತಾನಪೇಕ್ಷ್ಯೈವ ಫಲಂದದಾನೀತ್ಯಸ್ಯೈವ ಸಂಕಲ್ಪ ಇತಿ ಸ್ವತಂತ್ರತಾ।
ನಾಸ್ಯಾಪಗಚ್ಛೇತ್ ಸ ಹಿ ಸರ್ವಶಕ್ತಿರ್ನಾಶಕ್ತತಾ ಕ್ವಚಿದಸ್ಯ ಪ್ರಭುತ್ವಾತ್ ॥೪೭॥

ಏತಾನ್ – ಯೋಗ್ಯತಾಪೋ ಮೊದಲಾದವುಗಳನ್ನು, ಅಪೇಕ್ಷ್ಯ ಏವ – ನೋಡಿಕೊಂಡೇ, ಫಲಂ ದದಾನಿ—ಜೀವರಿಗೆ ಫಲವನ್ನು ಕೊಡುವೆನು, ಇತಿ – ಎಂದು, ಅಸ್ಯ ಏವ ಸಂಕಲ್ಪಃ— ಇವನದೇ (ಶ್ರೀ ಹರಿಯದೇ) ಸಂಕಲ್ಪವು (ಇಚ್ಛೆಯು) ಇದೆ ಇತಿ – ಈ ಕಾರಣದಿಂದ ತನ್ನ ಇಚ್ಛೆಗನುಸಾರವಾಗಿ ನಡೆದದ್ದರಿಂದ ಸ್ವತಂತ್ರತಾ - ಸ್ವಾತಂತ್ರ್ಯವು ನ ಅಪಗಚ್ಛೇತ್ – ಹೋಗಲಾರದು, ಹಿ – ಏಕೆಂದರೆ, ಸ: – ಅವನು, ಸರ್ವಶಕ್ತಿ:–ಎಲ್ಲದರ ಬಗ್ಗೆ ಶಕ್ತಿವುಳ್ಳವನು ಆಗಿರುವನು ಪ್ರಭು ತ್ವಾತ್—ಸರ್ವಸ್ವಾಮ್ಯವಿದ್ದದ್ದರಿಂದ, ಕ್ವಚಿತ್ – ಯಾವದರ ಬಗೆಗೂಕೂಡ, ಅಸ್ಯ ಅಶಕ್ತತಾ ನ – ಇವನಿಗೆ ಅಸಾಮರ್ಥ್ಯವಿಲ್ಲ. ॥೪೭॥

ತಸ್ಮಾತ್ ಕಾರ್ಯಂ ತೇನ ಕ್ಲೃಪ್ತಂ ಸ್ವಕರ್ಮ ತತ್ಪೂಜಾರ್ಥಂ ತೇನ ತತ್ಪ್ರಾಪ್ತಿರೇವ ।
ಅತೋಽನ್ಯಥಾ ನಿರಯಃ ಸರ್ವಥಾ ಸ್ಯಾತ್ ಸ್ವಕರ್ಮ ವಿಪ್ರಸ್ಯ ಜಪೋಪದೇಶೌ ।
ವಿಷ್ಣೋರ್ಮುಖಾದ್ ವಿಪ್ರಜಾತಿಃಪ್ರವೃತ್ತಾಮುಖೋತ್ಥಿತಂ ಕರ್ಮ ತೇನಾಸ್ಯಸೋಽದಾತ್ ॥೪೮॥

ತಸ್ಮಾತ್ – ಈ ರೀತಿ ಯೋಗ್ಯತಾಕರ್ಮ ಪ್ರಯತ್ನಗಳಿಗನುಸಾರವಾಗಿಯೇ ಶ್ರೀಹರಿಯಲಿ ಫಲಕೊಡುವನಾದ್ದರಿಂದ, ತೇನ—ಆ ಭಗವಂತನಿಂದ, ಕ್ಲೃಪ್ತಂ - ಶಾಸ್ತ್ರದಲ್ಲಿ (ವಿಧಿಸಲ್ಪಟ್ಟ) ನಿಯಮಿಸಲ್ಪಟ್ಟ, ಸ್ವಕರ್ಮ – ಸ್ವವರ್ಣಾಶ್ರಮ ವಿಹಿತವಾದ ಕರ್ಮವು, ತತ್ಪೂಜಾರ್ಥಂ – ಆ ಭಗವಂತನ ಪೂಜೆಗಾಗಿ (ಸೇವೆಗಾಗಿ)ಕಾರ್ಯಂ ಏವ – ಮಾಡಲ್ಪಡಲೇಬೇಕು. ತೇನ—ಅದರಿಂದ ಸ್ವಕರ್ಮಾಚರಣೆಯಿಂದ, ತತ್ಪ್ರಾಪ್ತಿಃ ಏವ - (ಜ್ಞಾನ ಪ್ರಸಾದಗಳದ್ವಾರಾ) ಅವನ ಪ್ರಾಪ್ತಿಯೇ ಫಲವಾಗಿ ಬರುವದು ಅತ: ಅನ್ಯಥಾ—ಇದಕ್ಕೆ ವಿರುದ್ಧವಾಗಿ ನಡೆದರೆ, ನಿರಯಃ—ನರಕವೇ, ಸರ್ವಥಾ ಸ್ಯಾತ್—ಅವಶ್ಯವಾಗಿ ಆದೀತು (ಆಗುವದು).

ಅವತಾರಿಕೆ : ತಮ್ಮ ತಮ್ಮ ವರ್ಣಾಶ್ರಮಗಳಿಗೆ ಉಚಿತವಾದ ಕಾರ್ಯಗಳನ್ನು ಮಾಡಬೇಕು ಎಂದು ಸಾಮಾನ್ಯವಾಗಿ ಸ್ಥಾಪಿಸಿದನಂತರ, ವರ್ಣಾಶ್ರಮಗಳಿಗೆ ಉಚಿತವಾದ ಕರ್ಮಗಳು ಯಾವು ಯಾವು ಎಂಬುದನ್ನು ಸ್ವಲ್ಪ ವಿವರಿಸಿ ತಿಳಿಸುತ್ತಾ ಇದ್ದಾರೆ.

ವಿಪ್ರಸ್ಯ—ಬ್ರಾಹ್ಮಣನಿಗೆ, ಸ್ವಕರ್ಮ – ಉಚಿತವಾದ ತನ್ನ ಕರ್ಮವೆಂದರೆ, ಜಪೋಪದೇಶೌ – ಜಪೋಪದೇಶಗಳು. ಯತ —ಯಾವಕಾರಣದಿಂದ, ವಿಪ್ರಜಾತಿಃ—ಬ್ರಾಹ್ಮಣಜಾತಿಯು, ವಿಷ್ಣೋ:ಮುಖಾತ್ ಶ್ರೀಹರಿಯ ಮುಖದಿಂದ, ಪ್ರವೃತ್ತಾ—ಹುಟ್ಟಿರುವದೋ, ತೇನ – ಆ ಕಾರಣದಿಂದ, ಸಃ – ಆ ಶ್ರೀ ಹರಿಯು, ಅಸ್ಯ—ಈ ವಿಪ್ರಜಾತಿಗೆ ಮುಖೋತ್ಥಿತಂ ಕರ್ಮ – ಮುಖದಿಂದ ನಡೆಯುವ ಕಾರ್ಯವನ್ನು, ಅದಾತ್ —ಕೊಟ್ಟನು ॥೪೮॥

ಬಾಹ್ವೋರ್ಜಾತಃ ಕ್ಷತ್ರಿಯಸ್ತೇನ ಬಾಹ್ವೋಃ ಕರ್ಮಾಸ್ಯ ಪಾಪಪ್ರತಿವಾರಣಂ ಹಿ।
ಪ್ರವರ್ತನಂ ಸಾಧುಧರ್ಮಸ್ಯ ಚೈವ ಮುಖಸ್ಯ ಬಾಹ್ವೋಃ ಶ್ಚಾತಿ ಸಾಮೀಪ್ಯತೋಽಸ್ಯ ।
ಜಪೋಪದೇಶೌ ಕ್ಷತ್ರಿಯಸ್ಯಾಪಿ ವಿಷ್ಣುಶ್ಚಕ್ರೇ ಧರ್ಮೌ ಯಜ್ಞಕರ್ಮಾಪಿ ವಿಪ್ರೇ ॥೪೯॥

ಯೇನ-ಯಾವಕಾರಣದಿಂದ, ಕ್ಷತ್ರಿಯಃ-ಕ್ಷತ್ರಿಯನು, ಬಾಹ್ವೋಃಜಾತಃ-ಬಾಹುಗಳಿಂದ ಹುಟ್ಟಿದವನೋ, ತೇನ – ಆ ಕಾರಣದಿಂದ, ಅಸ್ಯ-ಈ ಕ್ಷತ್ರಿಯನಿಗೆ, ಬಾಹ್ವೋಃಕರ್ಮ-ಬಾಹುಗಳ ಕರ್ಮವಾದ, ಪಾಪಪ್ರತಿವಾರಣಂ-ಪಾಪಿಜನನಿಗ್ರಹ ಕಾರ್ಯವನ್ನು, (ಸಾಧು) ಧರ್ಮಸ್ಯ – (ಶುದ್ಧ) ಧರ್ಮದ, ಧಾರ್ಮಿಕರ, ಸಾಧು ಪ್ರವರ್ತನಂ ಹಿ – ಚೆನ್ನಾಗಿ ರಕ್ಷಣೆಯನ್ನೇ, ಚ-ಮತ್ತು ಬಾಹ್ವೋಃ – ಬಾಹುಗಳಿಗೂ, ಮುಖಸ್ಯ ಚ – ಮುಖಕ್ಕೂ ಕೂಡ, ಅತಿಸಾಮೀಪ್ಯತಃ – ಬಹು ಸಾಮೀಪ್ಯ ವಿದ್ದದ್ದರಿಂದ, ಜಪೋಪದೇಶೌ – ಜಪ ಮತ್ತು ಉಪದೇಶಗಳನ್ನು, ಕ್ಷತ್ರಿಯಸ್ಯ ಅಪಿ ಧರ್ಮೌ – ಕ್ಷತ್ರಿಯನಿಗೂ ಕೂಡ ಕರ್ತವ್ಯ ಕರ್ಮಗಳನ್ನಾಗಿ, ವಿಷ್ಣುಃ ಚಕ್ರೇ – ಶ್ರೀಹರಿಯು ಮಾಡಿದನು. (ಅದರಂತೆ) ಯಜ್ಞಕರ್ಮ ಅಪಿ – ಬಾಹುವಿನಿಂದ ಆಗುವ ಯಜ್ಞ ಕರ್ಮವನ್ನು, ವಿಪ್ರೇ—ಬ್ರಾಹ್ಮಣರಲ್ಲಿ, ಧರ್ಮಂ ಚಕ್ರೇ – ಕರ್ತವ್ಯವನ್ನಾಗಿ ಮಾಡಿದನು. ॥೪೯॥

ವೈಶ್ಯೋಯಸ್ಮಾದೂರುಜಸ್ತೇನ ತಸ್ಯ ಪ್ರಜಾವೃದ್ಧಿಸ್ತಜ್ಜಕರ್ಮ್ಯೇವಧರ್ಮಃ।
ತತ್ಸಾದೃಶ್ಯಾತ್ ಸ್ಥಾವರಾಣಾಂ ಚ ವೃದ್ಧಿಃಕರೋರೂರ್ವೋ ಸ್ಸನ್ನಿಕೃಷ್ಟತ್ವಹೇತೋಃ।
ವಾರ್ತಾತ್ಮಕಂಕರ್ಮಧರ್ಮಂ ಚಕಾರ ವಿಷ್ಣುಸ್ತಸ್ಯೈವಾಂಘ್ರಿಜಃಶೂದ್ರಉಕ್ತಃ ॥೯೦॥

ಗತಿಪ್ರಧಾನಂ ಕರ್ಮ ತುಶ್ರೂಷಣಾಖ್ಯಂ ಸಾದೃಶ್ಯತೋ ಹಸ್ತಪದೋಸ್ತಥೈವ ।
ಹಸ್ತೋದ್ಭವಂ ಕರ್ಮ ತಸ್ಮಾಪಿ ಧರ್ಮಃ ಸಂತಾನವೃದ್ಧಿಶ್ಚ ಸಮೀಪಗತ್ವಾತ್ ॥೯೧॥

ಯಸ್ಮಾತ್—ಯಾವಕಾರಣದಿಂದ ವೈಶ್ಯಃ – ವೈಶ್ಯನು – ಊರುಜಃ—ತೊಡೆಯಿಂದ ಹುಟ್ಟಿದವನೋ, ತೇನ—ಆದರಿಂದ, ತಜ್ಜಕರ್ಮ – ತೊಡೆಗಳಿಂದ ಆಗುವ ಕಾರ್ಯವಾದ, ಪ್ರಜಾವೃದ್ಧಿಃ—ಪ್ರಜಾಭಿವೃದ್ಧಿಯು, ತಸ್ಯ ಧರ್ಮಃ;ಅಭೂತ್-ವೈಶ್ಯನಿಗೆ ಧರ್ಮವುಆಯಿತು. ತತ್ಸಾದೃಶ್ಯಾತ್—ಸೃಷ್ಟಿಯ ಸಾದೃಶ್ಯವಿರುವದರಿಂದ, ಸ್ಥಾವರಾಣಾಂಚ ವೃದ್ಧಿಃ-ಒಂದೇ ಕಡೆ ಸ್ಥಿರವಾಗಿ ನಿಲ್ಲುವ ಸಸ್ಯಗಳ ವೃದ್ಧಿ ಅಂದರೆ ಕೃಷಿಯು, ಧರ್ಮಃ - ಧರ್ಮವಾಯಿತು. ಕರೋಃ (ಕರಯೋಃ) — ಕೈಗಳಿಗೆ, ಊರ್ವೋಃ — ತೊಡೆಗಳಿಗೆ. ಸನ್ನಿಕೃಷ್ಟತ್ವ ಹೇತೋಃ - ಸಾಮೀಪ್ಯವಿರುವ ಕಾರಣದಿಂದ, ವಾರ್ತಾತ್ಮಕಂ ಕರ್ಮ - ವ್ಯಾಪಾರರೂಪವಾದ ಕರ್ಮವನ್ನೂ ಕೂಡ, ವಿಷ್ಣುಃ – ಶ್ರೀಹರಿಯು, ತಸ್ಯ—ಆ ವೈಶ್ಯನಿಗೆ, ಧರ್ಮಂ—ಕರ್ತವ್ಯವನ್ನಾಗಿ, ಚಕಾರ—ಮಾಡಿದನು. ಶೂದ್ರಃ - ಶೂದ್ರನು, ಅಂಘ್ರಿಜಃ—ಭಗವಂತನ ಪಾದದಿಂದ ಹುಟ್ಟಿದವನಾಗಿ, ಉಕ್ತಃ - ಹೇಳಲ್ಪಟ್ಟಿರುವನು. ತತಃ-ಆದ್ದರಿಂದ, ಗತಿಪ್ರಧಾನಂ – ಗಮನಾಗಮನಗಳನ್ನೇ ಪ್ರಧಾನವಾಗಿ ಒಳಗೊಂಡಿರ ವ ಶುಶ್ರೂಷಣಾಖ್ಯಂ ಕರ್ಮ—ಸೇವಾರೂಪವಾದ ಕಾರ್ಯವನ್ನು, ತಥಾ—ಹಾಗೂ, ಹಸ್ತಪದೋಃ—ಕೈ ಕಾಲುಗಳಿಗೆ, ಸಾದೃಶ್ಯತಃ –ಸಾಮ್ಯ (ಸಾದೃಶ್ಯ) ವಿರುವದರಿಂದ ಹಸ್ತೋದ್ಭವಂ ಕರ್ಮ —ಕೈಗಳಿಂದಾಗುವ ಕೃಷಿ— ವ್ಯಾಪಾರ ಕಾರ್ಯಗಳು, ತಸ್ಯ ಅಪಿ ಧರ್ಮಃ—ಆ ಶೂದ್ರನಿಗೂ ಧರ್ಮವೇ ಆಗಿದೆ. (ಊರುಪದೋಃ) ಸಮೀಪ ಗತ್ವಾತ್ ತೊಡೆ ಮತ್ತು ಕಾಲುಗಳು ಸಮೀಪವಿದ್ದದ್ದರಿಂದ. (ತೊಡೆಗಳಿಂದಾಗುವ), ಸಂತಾನವೃದ್ಧಿಃ ಚ – ಸಂತತಿ ವೃದ್ಧಿಯೂಕೂಡ. ತಸ್ಯ – ಶೂದ್ರನಿಗೆ ಧರ್ಮಃ – ಧರ್ಮವಾಗಿದೆ. ॥೯೦॥೯೧॥

ಭುಜಾವುರೋ ಹೃದಯಂ ಯದ್ ಬಲಸ್ಯ ಜ್ಞಾನಸ್ಯ ಚ ಸ್ಥಾನಮತೋ ನೃಪಾಣಾಮ್।
ಬಲಂ ಜ್ಞಾನಂ ಚೇತ್ಯಭಯಂ ಧರ್ಮ ಉಕ್ತಃ ಪಾಣೌ ಕೃತೀನಾಂ ಕೌಶಲಂ ಕೇವಲಂ ಹಿ ।
ತಸ್ಮಾತ್ ಪಾಣ್ಯೋರೂರುಪದೋರುಪಸ್ಥಿತೇರ್ನಿಟ್‌ಶೂದ್ರಕೌ ಕರ್ಮಣಾಂ ಕೌಶಲೇತೌ ॥೯೨॥

ಯತ್-ಯಸ್ಮಾತ್ಕಾರಣದಿಂದ, ಭುಜೌ-ಭುಜಗಳು, ಉರಃ-ಎದೆಯು, ಚ-ಮತ್ತು ಹೃದಯಂ-ಮನಸ್ಸು, ಕ್ರಮವಾಗಿ ಬಲಸ್ಯ-ಶಕ್ತಿಯು, ಚ-ಮತ್ತು, ಜ್ಞಾನಸ್ಯ-ಜ್ಞಾನದ, ಸ್ಥಾನಂ-ಸ್ಥಾನಗಳಾಗಿರುವವೋ, ಅತಃ-ಈ ಕಾರಣದಿಂದ, ನೃಪಾಣಾಂ-ರಾಜ (ಕ್ಷತ್ರಿಯ)ರಿಗೆ, ಬಲಂ ಜ್ಞಾನಂ ಚ ಇತಿ ಉಭಯಂ-ಬಲ ಹಾಗು ಜ್ಞಾನ ಎಂಬ ಎರಡೂಕೂಡ, ಧರ್ಮಃ-ಧರ್ಮವಾಗಿ, ಉಕ್ತಃ-ಹೇಳಲ್ಪಟ್ಟಿದೆ. ಚ-ಮತ್ತು ಹಿ-ಯಸ್ಮಾತ್ಕಾರಣದಿಂದ, ಪಾಣೌ-ಕೈಯಲ್ಲಿ ಕೇವಲಂ-ಕೇವಲವಾಗಿ, ಕೃತೀನಾಂ-ಕಾರ್ಯಗಳ, ಕೌಶಲಂ-ಚಾತುರ್ಯವೇ ಸಾಧ್ಯವಾಗುವದೋ, ತಸ್ಮಾತ್-ಆದ್ದರಿಂದ ಚ-ಹಾಗು, ಪಾಣ್ಯೋಃ-ಕೈಗಳಿಗೆ, ಊರುಪದೋಃ-ತೊಡೆಕಾಲುಗಳ, ಉಪಸ್ಥಿತೇಃ-ಸಾಮೀಪ್ಯವಿರುವದರಿಂದಲೂ, ವಿಟ್‌ಶೂದ್ರೌ-ವೈಶ್ಯಶೂದ್ರರು, ಕರ್ಮಣಾಂ-ಕೃಷಿ, ಹಾಗು ವ್ಯಾಪಾರ ಸೇವಾ, ಕಾರ್ಯಗಳ, ಕೌಶಲೇತೌ-ಕೌಶಲದಿಂದ ಕೂಡಿದವರುಆಗಿದ್ದಾರೆ. ॥೯೨॥

ಪ್ರಾಧಾನ್ಯತೋ ಧರ್ಮವಿಶೇಷ ಏಷ ಸಾಮಾನ್ಯತಃ ಸರ್ವ ಏವಾಖಿಲಾನಾಮ್।
ವಯಂ ಹಿ ದೇವಾಸ್ತೇನ ಸರ್ವಂ ಹಿ ಕರ್ಮಪ್ರಾಯೇಣ ನೋ ಧರ್ಮತಾಮೇತಿಶಶ್ವತ್ ॥೯೩॥

ಸರ್ವ ಏಷಃ-ಇಲ್ಲಿಯವರೆಗೆ ಹೇಳಿದ ಎಲ್ಲ ಧರ್ಮಗಳು, ಪ್ರಾಧಾನ್ಯತಃ-ಪ್ರಧಾನವಾಗಿ, ಧರ್ಮವಿಶೇಷಃ-ಬ್ರಾಹ್ಮಣಾದಿ ವರ್ಣಪ್ರಭೇದಗಳ ಧರ್ಮಗಳಾಗಿವೆ, ಸಾಮಾನ್ಯತಃ-ಅಪ್ರಧಾನವಾಗಿ, ಸರ್ವಃ-ಎಲ್ಲವೂ, ಅಖಿಲಾನಾಂ-ಎಲ್ಲರಿಗೂ ಧರ್ಮವಾಗುವದು. (ವಿ, ಸೂ. ವಿವರಕ್ಕಾಗಿ ಭಾವಾನುವಾದನೋಡಿರಿ) ಹಿ-ಯಸ್ಮಾತ್ಕಾರಣದಿಂದ, ವಯಂ-ನಾವು, ದೇವಾಃ-ದೇವತೆಗಳಾಗಿರುವೆವೋ ತೇನ-ಆ ಕಾರಣದಿಂದ, ನಃ-ನಮಗೆ, ಸರ್ವಂ-ಎಲ್ಲವರ್ಣಾಶ್ರಮ ಧರ್ಮಗಳೂ ಕೂಡ, ಪ್ರಾಯೇಣ-ಪ್ರಾಯಶಃ; ಶಶ್ವತ್ ಧರ್ಮತಾಂ ಏತಿ-ಯಾವಾಗಲೂ ಧರ್ಮರೂಪತ್ವವನ್ನು ಹೊಂದುವವು, ಧರ್ಮವಾಗುತ್ತವೆ. ॥೯೩॥

ಏತೈರ್ಧರ್ಮೈರ್ವಿಷ್ಣುನಾಪೂರ್ವಕ್ಲೃಪ್ತೈಃ ಸರ್ವೈರ್ವರ್ಣೈರ್ವಿಷ್ಣುರೇವಾಭಿಪೂಜ್ಯಃ।
ತದ್ಭಕ್ತಿರೇವಾಖಿಲಾನಾಂ ಚ ಧರ್ಮೋಽಯಂಥಾಯೋಗ್ಯಂ ಜ್ಞಾನಮಸ್ಯಾಪಿ ಪೂಜಾ ॥೯೪॥

ಸರ್ವೈಃ ವರ್ಣೈಃ-ಎಲ್ಲವರ್ಣದವರಿಂದ, ಪೂರ್ವಕ್ಲೃಪ್ತೈಃ ಏತೈಃ ಧರ್ಮೈಃ-ಮೊದಲೇ ನಿರ್ಧರಿತವಾದ ಇಲ್ಲಿಯವರೆಗೆ ಹೇಳಿದ ಅವರವರಿಗೆ ಉಚಿತವಾದ ಧರ್ಮಗಳಿಂದ, ವಿಷ್ಣುಃ ಏವ-ಶ್ರೀನಾರಾಯಣನೇ, ಅಭಿಪೂಜ್ಯಃ-ಪೂಜಿಸಲ್ಪಡಬೇಕು. ಯಂಥಾಯೋಗ್ಯಂ ತದ್ಭಕ್ತಿಃ ಏವ-ಯೋಗ್ಯತೆಗೆಅನುಸಾರವಾಗಿ ಅವನ ಭಕ್ತಿಯನ್ನು ಮಾಡುವದೇ, ಅಖಿಲಾನಾಂ ಚ ಧರ್ಮಃ-ಎಲ್ಲರಿಗೂ ಧರ್ಮವಾಗಿದೆ. ಯಂಥಾಯೋಗ್ಯಂ-ಯೋಗ್ಯತಾನುಸಾರವಾಗಿ, ಜ್ಞಾನಂ ಅಪಿ-ಜ್ಞಾನ ಸಂಪಾದನವೂಕೂಡ, ಅಸ್ಯ ಪೂಜಾ-ಇವನ ಪೂಜೆಯೇ ಆಗಿರುವದು ॥೯೪॥

ಅವತಾರಿಕೆ :— ಶ್ರೀಹರಿಯೇ ಅಗ್ರಪೂಜ್ಯನೆಂಬುದಕ್ಕೆ ಕಾರಣವನ್ನು ಹೇಳುತ್ತಾರೆ:

ಪಿತಾ ಗುರುಃಪರಮಂ ದೈವತಂ ಚ ವಿಷ್ಣುಃ ಸರ್ವೇಷಾಂ ತೇನ ಪೂಜ್ಯಃಸ ಏವ।
ತದ್ಭಕ್ತತ್ವಾದ್ ದೇವತಾಶ್ಚಾಭಿಪೂಜ್ಯಾಃವಿಶೇಷತಸ್ತೇಷುಯೋಽತ್ಯಂತಭಕ್ತಾಃ ॥೯೫॥

ವಿಷ್ಣುಃ-ಶ್ರೀಹರಿಯು, ಸರ್ವೇಷಾಂ-ಎಲ್ಲರಿಗೂ, ಪಿತಾ-ತಂದೆಯು, ಗುರುಃ-ಗುರುವು, ಪರಮಂ-ದೈವತಂಚ-ಸರ್ವೋತ್ತಮ ದೇವತೆಯೂ ಆಗಿರುವನು ತೇನ-ಆ ಕಾರಣದಿಂದ ಸಃ ಏವ-ಅವನೇ, ಪೂಜ್ಯಃ-ಎಲ್ಲರಿಂದಲೂ ಪ್ರಥಮ ಪೂಜ್ಯನಾಗಿರುವನು.-ದೇವತಾಃ ಚ-ಇತರ ರವಾ ಬ್ರಹ್ಮಾದಿದೇವತೆಗಳೂ ಕೂಡ, ತದ್ಭಕ್ತತ್ವಾತ್-ಆ ಶ್ರೀಹರಿಯ ಭಕ್ತರಾದ್ದರಿಂದ, ಅಭಿಪೂಜ್ಯಾಃ-ಪೂಜಿಸಲ್ಪಡಬೇಕು; ತೇಷು-ಆ ದೇವತೆಗಳಲ್ಲಿ, ಯೇ-ಯಾರು,

ಅತ್ಯಂತ ಭಕ್ತಾಃ—ಹೆಚ್ಚು ಹೆಚ್ಚು ಭಕ್ತರಾಗಿರುವರೋ, ತೇ—ಅವರು, ವಿಶೇಷತಃ ಅಭಿಪೂಜ್ಯಾಃ—ಹೆಚ್ಚುಹೆಚ್ಚು ಪೂಜ್ಯರು ॥೯೫॥

ಸಂಪೂಜಿತೋ ವಾಸುದೇವಃ ಸ ಮುಕ್ತಿಂ ದದ್ಯಾದೇವಾಪೂಜಿತೋ ದುಃಖಮೇವ ।
ಸ್ವತಂತ್ರತ್ವಾತ್ ಸುಖದುಃಖಪ್ರದೋಽಸೌ ನಾನ್ಯಃ ಸ್ವತಂತ್ರಸ್ತದ್ವಶಾಯತ್ ಸಮುಸ್ತಾಃ ॥೯೬॥

ಸಃವಾಸುದೇವಃ—ಆ ಶ್ರೀಹರಿಯು, ಸಂಪೂಜಿತಃಚೇತ್ – ವರ್ಣಾಶ್ರಮಂಧರ್ಮಗಳಿಂದ ಭಕ್ತಿಪೂರ್ವಕ ಪೂಜಿಸಲ್ಪಟ್ಟರೆ, ಮುಕ್ತಿಂ ದದ್ಯಾತ್ ಏವ—ಮೋಕ್ಷವನ್ನು ಕೊಟ್ಟೇಕೊಡುತ್ತಾನೆ. ಅಪೂಜಿತಃ ಚೇತ್- ಪೂಜಿಸಲ್ಪಡದಿದ್ದರೆ, ದುಃಖಿಂ ಏವ ದದ್ಯಾತ್-ನರಕದುಃಖವನ್ನೇ ಕೊಡುವನು ಸ್ವತಂತ್ರತ್ವಾತ್ – ಸ್ವತಂತ್ರನಾದ್ದರಿಂದ, ಅಸೌ—ಶ್ರೀಹರಿಯು ಸುಖಿದುಃಖಪ್ರದಃ – ಸುಖದುಃಖಪ್ರದನು, ಯತ್ – ಯಾವಕಾರಣದಿಂದ, ಸಮುಸ್ತಾಃ—ಎಲ್ಲರೂ, ತದ್ವಶಾಃ—ಅವನ ಅಧೀನರಾಗಿರುವರೋ, ಅನ್ಯಃ—ಶ್ರೀಹರಿಯಿಂದ ಬೇರೆಯಾದವನ್ಯಾವನೂ, ನ ಸ್ವತಂತ್ರಃ—ಯಾವದೇ ಕಾರ್ಯದ ಬಗ್ಗೆಯೂ ಸ್ವತಂತ್ರರಲ್ಲ. ॥೯೬॥

ಸ್ವತಂತ್ರತ್ವಾತ್ ಸುಖಸಜ್ಜ್ಞಾನಶಕ್ತಿಪೂರ್ವೈರ್ಗುಣೈಃಪೂರ್ಣಏಷೋಽಖಿಲೈಶ್ಚ ।
ಸ್ವತಂತ್ರತ್ವಾತ್ ಸರ್ವದೋಷೋಜ್ಝಿತಶ್ಚ ನಿಸ್ಸೀಮಶಕ್ತಿರ್ಹಿಯತಃ ಸ್ವತಂತ್ರಃ ॥೯೭॥

ಸ್ವತಂತ್ರತ್ವಾತ್ – ಸ್ವತಂತ್ರನಾದ್ದರಿಂದ, ಏಷಃ—ಈ ಶ್ರೀಹರಿಯು, ಸುಖಿಸಜ್ಜ್ಞಾನಶಕ್ತಿಪೂರ್ವೈಃ—ಅಖಿಲೈಃಗುಣೈಃ – ನಿರ್ದೋಷವಾದ, ಸುಖ, ಜ್ಞಾನ, ಶಕ್ತಿ ಮೊದಲಾದ ಎಲ್ಲ ಗುಣಗಳಿಂದ, ಪೂರ್ಣಃ—ಪೂರ್ಣನಾಗಿರುವನು. ಚ – ಮತ್ತು, ಸ್ವತಂತ್ರತ್ವಾತ್ – ಸ್ವತಂತ್ರನಾದ್ದರಿಂದ, ಸರ್ವದೋಷೋಜ್ಝಿತಃ—ಸರ್ವದೋಷರಹಿತನಾಗಿರುವನು; ಚ – ಹಾಗು, ಯತಃ ಸ್ವತಂತ್ರಃ—ಯಾವಕಾರಣದಿಂದ ಸ್ವತಂತ್ರನಾಗಿರುವನೋ, ತತಃ ಚ—ಆ ಕಾರಣದಿಂದಲೇ ನಿಸ್ಸೀಮಶಕ್ತಿಃ – ಅಪರಿಮಿತ ಶಕ್ತಿಯುಳ್ಳವನಾಗಿರುವನು. ॥೯೭॥

ದೋಷಾಸ್ಪೃಷ್ಟೌ ಗುಣಪೂರ್ತೌ ಚ ಶಕ್ತಿರ್ನಿಸ್ಸೀಮತಾದ್ ವಿದ್ಯತೇ ತಸ್ಯಯಸ್ಮಾತ್ ।
ಏವಂ ಗುಣೈರಖಿಲೈಶ್ಚಾಪಿ ಪೂರ್ಣೋ ನಾರಾಯಣಃ ಪೂಜ್ಯತಮಃ ಸ್ವಧರ್ಮೈಃ ।
ಅಸ್ಮಾಕಂ ಯತ್ ತೇನ ನಾತಿಕ್ಷವೈವ ಧರ್ಮೋ ದುಷ್ಟಾನಾಂ ವಾರಣಂ ಹ್ಯೇವ ಕಾರ್ಯಮ್ ॥೯೮॥

ಯಸ್ಮಾತ್ — ಯಾವ ಕಾರಣದಿಂದ, ದೋಷಾಸ್ಪೃಷ್ಟೌ—ದೋಷಗಳ ಸ್ಪರ್ಶವಿಲ್ಲದಿರುವದರ ಬಗ್ಗೆ, ಗುಣಪೂರ್ತೌ – ಎಲ್ಲ ಗುಣಗಳನ್ನು ಪೂರ್ಣ ಹೊಂದಿರುವದರ ಬಗ್ಗೆ, ಶಕ್ತಿಃ—ಸಾಮರ್ಥ್ಯವು, ತಸ್ಯ – ಆ ಶ್ರೀಹರಿಗೆ, ನಿಸ್ಸೀಮತ್ವತ್ – ಅಪರಿಮಿತ ಶಕ್ತಿಯಂ ಇರುವದರಿಂದ, ವಿದ್ಯತೇ—ಇರುವದೋ, (ಆದ್ದರಿಂದ), ಸದಾ ಸರ್ವ ದೋಷರಹಿತನೂ, ಸಕಲಗುಣಪೂರ್ಣನೂ ಆಗಿರುವನು, ಏವಂ—ಈ ರೀತಿ, ಅಖಿಲೈಃ ಗುಣೈಃ ಪೂರ್ಣಃ – ಸಕಲ ಗುಣಗಳಿಂದ ಪೂರ್ಣನಾದ, ಅಪಿ – ಹಾಗೂ ನಿರ್ದೋಷನಾದ, ನಾರಾಯಣಃ – ಶ್ರೀಮನ್ನಾರಾಯಣನೇ, ಯತ್ — ಯಾವ ಕಾರಣದಿಂದ, ಸ್ವಧರ್ಮೈಃ – ತಮ್ಮ ತಮ್ಮ ವರ್ಣಾಶ್ರಮಂಧರ್ಮಗಳಿಂದ, ಪೂಜ್ಯತಮಃ—ಅತ್ಯಂತ ಪೂಜ್ಯನು ಆಗಿರುವನೋ, ತೇನ – ಆ ಕಾರಣದಿಂದ, ಅಸ್ಮಾಕಂ – ನಮಗೆ, ಅತಿಕ್ಷವೈವ—ಎಲ್ಲ ಕಡೆಗೆ ಕ್ಷಮೆ ಮಾಡುವದೇ, ನ ಧರ್ಮಃ - ಧರ್ಮವಲ್ಲ, ದುಷ್ಟಾನಾಂ ವಾರಣಂ – ದುಷ್ಟರ ನಿಗ್ರಹವು ಕಾರ್ಯಂ—ಮಾಡಲ್ಪಡಲೇಬೇಕು ॥೯೮॥

ಹನ್ಯಾದ್ ದುಷ್ಟಾನ್ ಯಃ ಕ್ಷತ್ರಿಯಃ ಕ್ಷತ್ರಿಯಾಂಶ್ಚ ವಿಶೇಷತೋ ಯುದ್ಧಗತಾನ್ ಸ ರನ್ ಹರಿಮ್ ।
ಸ್ವಬಾಹುವೀರ್ಯೇಣ ಚ ತಸ್ಯ ಬಾಹೂ ಚೈತನ್ಯಮಾತ್ರೌ ಭವತಃ ಸದೇಹೌ ॥೯೯॥

ಯಂ:ಕ್ಷತ್ರಿಯಂಃ – ಯಾವ ಕ್ಷತ್ರಿಯನಂ, ದುಷ್ಟಾನ್ – ಶ್ರೀಹರಿದ್ವೇಷಿಗಳಾದಂಥ, ವಿಶೇಷತ: – ವಿಶೇಷವಾಗಿ, ಯಃಂದ್ಧಗತಾನ್ – ಯಃಂದ್ಧದಲ್ಲಿ ಒಂದಂಥ, ಕ್ಷತ್ರಿಯಾನ್—ಕ್ಷತ್ರಿಯರನ್ನು, ಹರಿಂ ಸ್ಮರನ್ – ಶ್ರೀಹರಿಯನ್ನು ಸ್ಮರಿಸುವವನಾಗಿ, ಸ್ವಬಾಹುವೀರ್ಯೇಣ—ತನ್ನ ಬಾಹುಸಾಮರ್ಥ್ಯದಿಂದ, ಹನ್ಯಾತ್ – ಕೊಲ್ಲುವನೋ, ತಸ್ಯ – ಆ ಕ್ಷತ್ರಿಯನಿಗೆ, ಚೈತನ್ಯ ಮಾತ್ರೌ—ಜ್ಞಾನಸ್ವರೂಪವಾದ, ಸದೇಹೌ ಬಾಹೂ – ದೇಹದಿಂದ ಸಹಿತವಾದ ಬಾಹುಗಳು, ಭವತಃ – ಬರುವವು, ಸ್ವರೂಪಾನಂದ ಜ್ಞಾನಗಳ ಆವಿರ್ಭಾವವಾಗುವದು, (ಮೋಕ್ಷವೇಸಿಗುವದು). ॥೯೯॥

ಪಾಪಾಧಿಕಾಂಶ್ಚೈವ ಬಲಾಧಿಕಾಂಶ್ಚ ಹತ್ವಾ ಮುಕ್ತಾವಧಿಕಾನಂದವೃದ್ಧಿಃ ।
ಪ್ರೀತಶ್ಚ ವಿಷ್ಣೋಃ ಪರಮೈವ ತತ್ರ ತಸ್ಮಾದ್ಧಂತವ್ಯಾಃ ಪಾಪಿನಃ ಸರ್ವಥೈವ ॥೧೦೦॥

ಪಾಪಾಧಿಕಾನ್ – ಅಧಿಕ ಪಾಪಿಗಳಾದ, ಬಲಾಧಿಕಾನ್—ಹೆಚ್ಚು ಬಲಿಷ್ಠರನ್ನು, ಹತ್ವಾ—ಕೊಂದಾಗ, ಮುಕ್ತೌ – ಮೋಕ್ಷದಲ್ಲಿ, ಅಧಿಕಾನಂದವೃದ್ಧಿ: – ಹೆಚ್ಚು ಹೆಚ್ಚು ಆನಂದವೃದ್ಧಿಯು ಆಗುವದು, ತತ್ರ – ಆ ಕಾರ್ಯ ಮಾಡಿದಾಗಲೇ, ವಿಷ್ಣೋ: – ಶ್ರೀಮನ್ನಾರಾಯಣನ, ಪರಮಾ ಪ್ರೀತಿ: ಚ – ವಿಶೇಷವಾದ ಪ್ರೀತಿಯೂ ಆಗುವದು, ತಸ್ಮಾತ್ – ಆದ್ದರಿಂದ, ಪಾಪಿನಃ – ಪಾಪಿಗಳಾದವರು, ಸರ್ವಥಾ – ಅವಶ್ಯವಾಗಿ, ಹಂತವ್ಯಾ ಏವ—ಸಂಹರಿಸಲ್ಪಡಲೇಬೇಕು ॥೧೦೦॥

ಭಾವಾನುವಾದ ೭೯–೧೦೦

ಜ್ಞಾನಿಯಾದ ಸಜ್ಜನನು ತಾನು ಕರ್ತವ್ಯಕರ್ಮಮಾಡಿ ಭಗವತ್ಪ್ರೇರಣೆಯಿಂದ ಮಾಡಿದೆ ಎಂದು ಅನುಸಂಧಾನ ಮಾಡುವದರಿಂದ, ಭಗವತ್ಕೃಪೆಯನ್ನು ಹೊಂದಿ ಉತ್ತಮಗತಿಯನ್ನು ಪಡೆಯುವನು. ಆದರೆ ದುಷ್ಟಜನರು ದೇವರೇ ಕರ್ತನು ಜೀವನಲ್ಲವೇ ಅಲ್ಲ ಎಂದು ತಿಳಿದು, ಸ್ವೋಚಿತಕರ್ಮಗಳನ್ನು ಬಿಟ್ಟು ದೇವರ ಅವಕೃಪೆಯನ್ನು ಹೊಂದಿ ತಾಮಸೀಗತಿಯನ್ನು ಪಡೆಯುವರು. ಆದ್ದರಿಂದ ಪ್ರತಿಯೊಬ್ಬ ಜೀವನು ತನಗೆ ಭಗವದಧೀನಕರ್ತೃತ್ವ ವಿರುವದೆಂದು ತಿಳಿಯಬೇಕು. ಪ್ರತಿಯೊಬ್ಬರಲ್ಲಿ ಕರ್ತೃತ್ವವಿದ್ದೇ ಇದೆ ಎಂಬುದು ಅವರವರ ಪ್ರತ್ಯಕ್ಷ ಅನುಭವದಿಂದ ಶ್ರುತಿಸ್ಮೃತಿಗಳಿಂದ, ಹಾಗು ಅನುಮಾನದಿಂದಲೂ ಸಿದ್ಧವಾಗಿದೆ. ಆದರಂತೆ ಈ ಕರ್ತೃತ್ವವು ಭಗವದಧೀನ ಎಂಬುದು ಜ್ಞಾನಿಪ್ರತ್ಯಕ್ಷ ಶ್ರುತಿಸ್ಮೃತಿಗಳು ಅನುಮಾನದಿಂದಲೂ ಸಿದ್ಧವಾಗಿದೆ. ಆದ್ದರಿಂದ ಈ ಪ್ರಮೇಯಗಳನ್ನು ಬಿಡದಂತೆ ಸ್ವಕರ್ತವ್ಯವ್ಯವಚರಣೆಮಾಡಿ ಅದು ಭಗವಂತನ ಪ್ರೇರಣೆಯಿಂದ ಆಯಿತು ಎಂದು ತಿಳಿಯುವವನು ಪ್ರಮಾಣತ್ರಯವನ್ನು ಕೂಡಿಸಿದವನು ಆಗುವನು. ಯಾವದೇ ಒಂದು ವಿಷಯದ ಬಗ್ಗೆ ಮೂರು ಪ್ರಮಾಣಗಳಿದ್ದು, ಅವುಗಳಿಗೆ ಪರಸ್ಪರ ವಿರೋಧವೇ ಇಲ್ಲವಾದರೆ ಅದು ಪೂರ್ಣ ಪ್ರಮಾಣವೆನಿಸುವದು. ಒಂದು ವೇಳೆ ಒಂದೇ ಎರಡೇ ಪ್ರಮಾಣವಿದ್ದು ಬೇರೆ ಪ್ರಮಾಣವಿರೋಧವಿಲ್ಲವಾದರೆ ಅದು ಮಧ್ಯಮ ಪ್ರಮಾಣವೆನಿಸುವದು. ಇತರ ಪ್ರಮಾಣದ ವಿರೋಧ ಬಂದರೆ ಆಗ ಪ್ರಬಲ ದುರ್ಬಲ ವಿಚಾರ ಮಾಡಿ ದುರ್ಬಲವಾದದಕ್ಕೆ ಅಪ್ರಾಮಾಣ್ಯವನ್ನು ಹೇಳಬೇಕಾಗುವದು. ಯಾವದೇ ತತ್ವವು ಪೂರ್ಣಪ್ರಮಾಣದಿಂದ ಸಿದ್ಧವಾಗಿರುವಾಗ ಅವುಗಳಲ್ಲಿ ಒಂದು ಪ್ರಮಾಣವನ್ನು ಅದರಿಸಿ ಇನ್ನೊಂದನ್ನು ಅನಾದರಿಸಿ ನಡೆಯುವವನು ದೋಷನೆನಿಸುವನು, ಉದಾ–ಪ್ರಕೃತದಲ್ಲಿ ವಿವೇಕ ಜ್ಞಾನಿಯು ಪ್ರತ್ಯಕ್ಷ ಸಿದ್ಧವಾದ ಜೀವ ಕರ್ತೃತ್ವವನ್ನು ಬಿಟ್ಟು ದೈವವನ್ನೇ ಕರ್ತೃ ಎಂದು ವೇದಾದಿಗಳಿಂದ (ಅವುಗಳ ಸರಿಯಾದ ಅರ್ಥವನ್ನೂ ತಿಳಿಯದೇ) ತಿಳಿದು, ತನ್ನ ಕರ್ತವ್ಯವನ್ನೇ ತ್ಯಜಿಸುವನು. ಜ್ಞಾನಿಯು ಮಾತ್ರ ಜೀವನ ಕರ್ತೃತ್ವವನ್ನೂ ದೇವರ ಕರ್ತೃತ್ವವನ್ನು ಒಪ್ಪಿ ಜೀವಕರ್ತೃತ್ವವನ್ನು ದೇವರ ಅಧೀನವನ್ನಾಗಿ ತಿಳಿದು ಎಲ್ಲ ಪ್ರಮಾಣಗಳನ್ನೂ ಹೊಂದಿಸಿ ತನ್ನ ಕರ್ತವ್ಯವನ್ನು ಮಾಡುತ್ತಲೇ ಇರುವನು. ಅಣ್ಣನಾದ ರಾಜನೇ, ಯಾವುದೇ ಕಾರ್ಯವು ನಡೆಯಬೇಕಾದರೆ ಈ ಮೂರು ಸಂಗತಿಗಳು ಅವಶ್ಯವಾಗಿ ಬೇಕು, ಯೋಗ್ಯತೆ, ಅನಾದಿಯಾದ ಪೂರ್ವಕರ್ಮ, ಹಾಗು ಜೀವ ಪ್ರಯತ್ನ ಇವೇ ಆ

ಮೂರು ಅಂಶಗಳು. ಯೋಗ್ಯತೆಯನ್ನೇ 'ಹಕ', ಸ್ವಭಾವ ಎಂಬುದಾಗಿ ಕರೆಯುತ್ತಾರೆ. ಮೂರೂ ಕೂಡ ಭಗವಂತನ ಆಧೀನಗಳೇಆಗಿವೆ. ಭಗವಂತನು ಮಾತ್ರ ಯಾರ ಅಧೀನನೂ ಅಲ್ಲ, ಅವನು ಸರ್ವೋತ್ತಮನು. ಯೋಗ್ಯತೆಯು ತಾರತಮ್ಯದಿಂದ ಜೀವರಲ್ಲಿದೆ. ಕಲಿಯುಲ್ಲಿ ಅತಿಕನಿಷ್ಠವಾದರೆ, ಬ್ರಹ್ಮದೇವರಲ್ಲಿ ಅತಿಗರಿಷ್ಠವಾದದ್ದಿದೆ, ಯೋಗ್ಯತಾನುಸಾರವಾಗಿ ಕರ್ಮಗಳು ನಡೆಯುತ್ತಾ, ಇರುವವು. ಪೂರ್ವಕರ್ಮಗಳಿಗನುಸಾರವಾಗಿ ಪ್ರಯತ್ನವು ನಡೆಯುವುದು. ಆದರೆ ಪ್ರಯತ್ನವಿಲ್ಲದೆಯೇ ಯೋಗ್ಯತೆಯಾಗಲೀ ಪೂರ್ವಕರ್ಮವಾಗಲೀ ಫಲಕೊಡುವುದರಲ್ಲಿ ಸಾಮರ್ಥ್ಯವಾಗುವದಿಲ್ಲ. ಭಗವಂತನೂ ಕೂಡ ಫಲಪ್ರದನಾಗುವದಿಲ್ಲ. ಯೋಗ್ಯತೆ ಪ್ರಯತ್ನಕರ್ಮಗಳು ಭಗವದಧೀನವಾದ್ದರಿಂದ ಅವುಗಳ ಸರಿಯಾದ ಯೋಜನೆ ಮಾಡಿ ಕಾರ್ಯಮಾಡಿಸಿ ಫಲಪ್ರದನಾಗುವನು. ತನ್ನ ಅಧೀನವಾದ ಅವುಗಳನ್ನು ಅನುಸರಿಸಿಯೇ ಫಲವನ್ನು ಕೊಡುವನು ಎಂದು ಅವನದೇ ಸಂಕಲ್ಪವಿರುವದರಿಂದ, ತನ್ನ ಸಂಕಲ್ಪಕ್ಕೆ ಅನುಸಾರವಾಗಿ ನಡೆಯುವದರಿಂದ, ಅವನ ಸ್ವಾತಂತ್ರ್ಯಕ್ಕೆ ಚ್ಯುತಿಯಿಲ್ಲ.

ವಿಶೇಷ :— ಸ್ವತಂತ್ರ ಎಂದರೆ ತನ್ನ ಇಚ್ಛೆಗನುಸಾರ ನಡೆಯುವವನು, ಎಂದರ್ಥ. ಪರರ ಇಚ್ಛೆಗನುಸಾರವಾಗಿ ನಡೆದರೆ ಸ್ವಾತಂತ್ರ್ಯಕ್ಕೆ ಭಂಗ ಬರುವದು. ಪ್ರಕೃತದಲ್ಲಿ ಹಾಗಿಲ್ಲ. ಆದ್ದರಿಂದ ಸ್ವಾತಂತ್ರ್ಯ ಚ್ಯುತಿಇಲ್ಲ.

ಆದ್ದರಿಂದ ಅವನ ಪೂಜಾರೂಪವಾಗಿ ನನ್ನ ಕರ್ತವ್ಯವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ ಮಾಡುವದರಿಂದ ಅವನ ಪ್ರಾಪ್ತಿಯೇ ಆಗುವದು. ಇಲ್ಲವಾದರೆ ನರಕಾದ್ಯನರ್ಥವೇ ಆಗುವದು ಬ್ರಾಹ್ಮಣರು ಭಗವಂತನ ಮುಖದಿಂದ ಹುಟ್ಟಿದವರಾದ್ದರಿಂದ ಅವರಿಗೆ ಮುಖದ ಕಾರ್ಯಗಳಾದ ಜಪ–ಉಪದೇಶಗಳನ್ನೇ ಪ್ರಧಾನವನ್ನಾಗಿ ವಿಧಿಸಿದ್ದಾನೆ. ಬಾಹುಜಾತನದ ಕ್ಷತ್ರಿಯನಿಗೆ ಬಾಹುಬಲದಿಂದ ಆಗುವ ದುಷ್ಟನಿಗ್ರಹ ಶಿಷ್ಟರಕ್ಷಣಗಳನ್ನು ವಿಧಿಸಿದ್ದಾನೆ. ಮುಂಖದ ಸಾಮೀಪ್ಯವು ಬಾಹುಗಳಿಗೆ ಇರುವದರಿಂದ ಮುಂಖದ ಕಾರ್ಯಗಳನ್ನೂ ಕೂಡ ಕ್ಷತ್ರಿಯರ ಧರ್ಮವನ್ನಾಗಿ ವಿಧಿಸಿರುವನು. ವೈಶ್ಯಜಾತಿಯು ತೊಡೆಯಿಂದ ಜಾತವಾದರಿಂದ ಪ್ರಜಾಸೃಷ್ಟಿಯು ಅದರಂತೆ ಸಸ್ಯಸೃಷ್ಟಿ (ಕೃಷಿ)ಯು ಧರ್ಮವಾಗಿವೆ. ಕೈಗಳ ಸಾಮೀಪ್ಯವು ತೊಡೆಗಳಿಗೆ ಇರುವದರಿಂದ ಕೈಗಳಿಂದಾಗುವ ವ್ಯಾಪಾರವೂ ಅವರಧರ್ಮವಾಗಿದೆ. ಶೂದ್ರನು ಪಾದದಿಂದ ಜನಿತನಾದ್ದರಿಂದ ಪಾದಗಳಿಂದ ಗಮನಾಗಮನಗಳು ನಡೆಯುವದರಿಂದ ಗಮನಾಗಮನಗಳೇ ಅವಶ್ಯವಾಗಿ ಬೇಕಾಗಿರುವ ಸೇವಾಕಾರ್ಯವು ಅವರಿಗೆ ಧರ್ಮವಾಗಿದೆ. ಕೈಕಾಲುಗಳಲ್ಲಿ ಸಾದೃಶ್ಯವಿರುವದರಿಂದ ಕೈಯ ಕಾರ್ಯವಾದ ಧರ್ಮಾಚರಣೆಯು, ತೊಡೆಯ ಸಾಮೀಪ್ಯವಿರುವದರಿಂದ ಸಂತಾನವೃದ್ಧಿಯು ಧರ್ಮಗಳೇ ಆಗಿವೆ. ಭುಜ ವಕ್ಷಸ್ಥಲಗಳು ಬಲದ ಸ್ಥಾನಗಳಾದ್ದರಿಂದ, ಮುಖವು ಜ್ಞಾನದ ಸ್ಥಾನವಾದ್ದರಿಂದ ಕ್ಷತ್ರಿಯರಿಗೆ ಬಲ ಹಾಗು ಜ್ಞಾನಗಳೆರಡೂ ಧರ್ಮಗಳೇ ಆಗಿರುವವು. ಕೈಗಳಲ್ಲಿ ಕೇವಲ ಕಾರ್ಯಗಳ ನಿಪುಣತೆ ಇರುವದರಿಂದ, ಕೈಗಳು ತೊಡೆ ಪಾದಗಳ ಸಮೀಪವಿದ್ದದ್ದರಿಂದ ವೈಶ್ಯ-ಶೂದ್ರರು ಕಾರ್ಯ ನಿಪುಣರಾಗಿರುವರು. ಈ ರೀತಿ ಬ್ರಾಹ್ಮಣಾದಿಗಳಿಗೆ ಮುಖ್ಯವಾದ ಧರ್ಮಗಳು ಆಗಿವೆ.

ಸಾಮಾನ್ಯತಃ ಅವು ಮುಖ್ಯವಾಗಿ ವಿಚಾರಮಾಡಿದರೆ ಅಂದರೆ ಆಪತ್ತಿನಲ್ಲಿ ಎಲ್ಲರಿಗೂ ಎಲ್ಲವೂ ಧರ್ಮಗಳು ಪ್ರಾಯಃ ಆಗುವವು, ಅಂದರೆ ಆಪತ್ತಿನಲ್ಲಿ ಬ್ರಾಹ್ಮಣರಿಗೆ ಕ್ಷತ್ರಿಯಧರ್ಮಗಳು. ಕ್ಷತ್ರಿಯರಿಗೆ ವೈಶ್ಯಧರ್ಮಗಳು. ವೈಶ್ಯರಿಗೆ ಶೂದ್ರಧರ್ಮಗಳು ಹೇಳಲ್ಪಟ್ಟವೆ. ಅತ್ಯಾಪತ್ತಿನಲ್ಲಿ ಎಲ್ಲ ಧರ್ಮಗಳೂ ಅನುಮತವಾಗಿವೆ. ಈ ರೀತಿ ಮನುಷ್ಯರಲ್ಲಿ ವರ್ಣಪ್ರಭೇದದಲ್ಲಿದ್ದವರ ಧರ್ಮಗಳಿವೆ. ನಾವಂತೂ ದೇವಾವತಾರಿಗಳು, ಮನುಷ್ಯರಂತಲ್ಲ. ನಮಗೆ ನೀಚ ಸೇವಾದಿಗಳನ್ನು ಬಿಟ್ಟು ಉಳಿದೆಲ್ಲ ಕಾರ್ಯಗಳೂ ಧರ್ಮಗಳೇ ಆಗಿವೆ. ಎಲ್ಲವನ್ನೂ ಮಾಡಬೇಕು.

ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಭಗವದ್ಭಕ್ತಿಯನ್ನು ಮಾಡುವದು, ಭಗವಂತನ ಜ್ಞಾನವನ್ನು ಸಂಪಾದಿಸುವದು ಎಲ್ಲರಿಗೂ ಕರ್ತವ್ಯವಾಗಿದೆ. ಅದೇ ಆ ದೇವರ ಪೂಜೆ ಅನಿಸುವದು. ಶ್ರೀಹರಿಯೇ ಎಲ್ಲರಿಗೂ ತಂದೆ. ಗುರು, ಪರಮದೇವತೆಯಾದ್ದರಿಂದ ಅವನೇ ಸರ್ವೋತ್ತಮತ್ವೇನ ಪೂಜ್ಯನು, ಇತರ ದೇವತೆಗಳು ಅವನ ಭಕ್ತರಾದ್ದರಿಂದ ಅವರ ಪೂಜೆಯನ್ನು ಅವರಲ್ಲಿರುವ ವಿಷ್ಣು ಭಕ್ತ್ಯಾದಿ ಗುಣ ತಾರತಮ್ಯಕ್ಕೆ ಅನುಸಾರವಾಗಿ ಮಾಡಬೇಕು. ಸರ್ವೋತ್ತಮತ್ವೇನ ಭಕ್ತಿಯಿಂದ ಶ್ರೀಹರಿಯನ್ನು ಪೂಜಿಸಿದಾಗ ಅವನು ಮೋಕ್ಷವನ್ನೇ ಕೊಡುವನು,

ಪೂಜಿಸದೇ ಇದ್ದರೆ ನರಕಾದ್ಯನರ್ಥವನ್ನೇ ಕೊಡುವನು. ಸ್ವತಂತ್ರನಾದ್ದರಿಂದ ಈ ಎಲ್ಲ ಸಾಮರ್ಥ್ಯ ಅವನೊಬ್ಬನಿಗೆ ಇದೆ. ಸ್ವತಂತ್ರನಾದ್ದರಿಂದಲೇ ಅವನು ಸಕಲಗುಣಪೂರ್ಣ, ಸಕಲದೋಷದೂರ, ಅಪರಿಮಿತ ಶಕ್ತಿವಳ್ಳವನು ಆಗಿರುವನು.

ವಿಶೇಷ — ಸ್ವತಂತ್ರನಾದ್ದರಿಂದ ತನ್ನ ಇಚ್ಛೆಯಂತೆಯೇ ಇದ್ದೇ ಇರುವನು. ೧) ಯಾರಿಗಾದರೂ ತಾನು ಎಲ್ಲ ಗುಣಗಳಿಂದ ಕೂಡಿದವನು, ಎಲ್ಲ ದೋಷಗಳಿಲ್ಲದವನು ಆಗಬೇಕೆಂದು ಇಚ್ಛೆ ಇದ್ದೇ ಇರುವದು. ಅದರಂತೆ ಇವನಿಗೂ ಸದಾ ಇಚ್ಛೆ ಇದೆ. ಇಚ್ಛೆಯು ಪ್ರಕಾರ ಸದಾ ಇದ್ದಾನೆ (ಸ್ವಾತಂತ್ರ್ಯ ಪ್ರಯುಕ್ತ). ಹೀಗಾಗಿ ಸದಾ ಗುಣ ಪೂರ್ಣನೂ, ನಿರ್ದೋಷನೂ ಆಗಿರುವನು ೨) ಯಾರಿಗಾದರೂ ತನ್ನಲ್ಲಿ ಯಾವದೇ ವಿಷಯದ ಬಗ್ಗೆ ಅಪರಿಮಿತ ಶಕ್ತಿ ಇರಬೇಕು ಎಂದು ಇಚ್ಛೆ ಇರುವಂತೆ ಶ್ರೀಹರಿಗೂ ಆ ತರಹ ಇಚ್ಛೆ ಸದಾ ಇದ್ದೇ ಇದೆ. ಸ್ವಾತಂತ್ರ್ಯವಿದ್ದದ್ದರಿಂದ ಎಲ್ಲದರ ಬಗ್ಗೆ ಅಪರಿಮಿತ ಶಕ್ತಿವುಳ್ಳವನೇ ಆಗಿದ್ದಾನೆ. ಉಳಿದವರು ಆಗಿಲ್ಲ. ಆದ್ದರಿಂದ ಎಲ್ಲ ಗುಣಗಳನ್ನು ತನ್ನಲ್ಲಿ ಸದಾ ಇಟ್ಟುಕೊಳ್ಳುವಲ್ಲಿ, ಎಲ್ಲ ದೋಷಗಳು ಸದಾ ತನ್ನಲ್ಲಿ ಇರಲಾರದಂತೆ ಮಾಡಿಕೊಳ್ಳುವ ವಿಷಯದಲ್ಲಿಯೂ ಇವನಿಗೆ ಶಕ್ತಿ ಇದ್ದದ್ದರಿಂದ ಸದಾಗುಣಪೂರ್ಣನೂ ನಿರ್ದೋಷನೂ ಆಗಿರುವನು.

ಈ ರೀತಿ ಸರ್ವೋತ್ತಮನಾದ ಆ ಭಗವಂತನನ್ನು ನಮ್ಮ ನಮ್ಮ ಧರ್ಮಗಳಿಂದ ಪೂಜಿಸುವದು. ಸೇವಿಸುವದು ಕರ್ತವ್ಯವಾದ್ದರಿಂದ ಕ್ಷತ್ರಿಯರಾದ ನಮಗೆ ಅಯೋಗ್ಯರಲ್ಲಿ ಸಹಿತ ಕ್ಷಮಾ ಮಾಡುವದು ಧರ್ಮವಲ್ಲ. ದುಷ್ಟರ ಶಿಕ್ಷೆಯನ್ನು ಮಾಡಲೇಬೇಕು. ಯಾವ ಕ್ಷತ್ರಿಯನು ಯುದ್ಧದಲ್ಲಿ ದುಷ್ಟ ಶಿಕ್ಷಿಯನ್ನು ಶ್ರೀಹರಿಯ ಸೇವೆ ಎಂದು ಅನುಸಂಧಾನದಿಂದ ತನ್ನ ಬಾಹುಸಾಮರ್ಥ್ಯದಿಂದ ಸಂಹರಿಸುವನೋ ಅವನು ಶ್ರೀಹರಿಕೃಪಾಪಾತ್ರನಾಗಿ ಮೋಕ್ಷವನ್ನೇ ಪಡೆದು ಸ್ವರೂಪಾವಿರ್ಭಾವವನ್ನು ಹೊಂದುವನು. ಹೆಚ್ಚು ಹೆಚ್ಚು ಪಾಪಿಷ್ಠ ಬಲಿಷ್ಠರನ್ನು ಸಂಹರಿಸುವದರಿಂದ ವಿಶೇಷ ಭಗವತ್ಕೃಪೆ ಆಗಿ ಮೋಕ್ಷದಲ್ಲಿ ಆನಂದಾಭಿವೃದ್ಧಿಯೂ ಆಗುವದು. ಆದ್ದರಿಂದ ಪಾಪಿಗಳನ್ನು ಸಂಹರಿಸಲೇಬೇಕು.

~~ಯೋ ಶ್ವಪ್ಸ ಧೂರ್ತಾಗ್ರಹಣಂ ಗತಾ ವಾ ಪಾಪಾಸ್ತೇ ನೈವ ಘಾತನೀಯಾ: ಸ್ವದೋರ್ಭ್ಯಾಮ್।~~
ರಾಜಾನಂ ವಾ ರಾಜಪುತ್ರಂ ತಥೈವ ರಾಜಾನುಜಂ ವಾऽಭಿಯಾತಂ ನಿಹನ್ಯಾತ್ ॥೧೦೧॥

ಯೇ ತು — ಯಾರು, ಅಕ್ಷಧೂರ್ತಾ:–ಪಟದ್ಯೂತವನ್ನಾಡಿದವರೋ, ತೇಪಾಪಾ–ಪಾಪಿಗಳಾದ ಅವರು, ಗ್ರಹಣಂ ಗತಾ: ವಾ — ಬಂಧನಕ್ಕೆ ಸಿಕ್ಕವರಾದರೂ ಕೂಡ, ಅನ್ಯೈ: ಘಾತನೀಯಾ: — ಸೇವಕರಿಂದ ಸಂಹರಿಸಲ್ಪಡಬೇಕು. (ಏಸ್ತ ವಿಕವಾಗಿ ಕೈಬಂಧನಕ್ಕೆ ಸಿಕ್ಕವರ ವಧವಾಡಬಾರದು. ಆದರೆ ಪಾಪಿಷ್ಠರಾದರೆ ಅಂಥವರ ಹನನವೂ ಧರ್ಮವೇ.) ತಥಾಏವ – ಹಾಗೆಯೇ, ಅಭಿಯಾಂತಂ – ಆಕ್ರಮಿದ್ದಕ್ಕೆ ಬಂದಂಥ, ರಾಜಾನಂ ವಾ ರಾಜಪುತ್ರಂ ವಾ ರಾಜಾನುಜಂವಾ — ರಾಜನನ್ನಾಗಲೀ, ರಾಜಪುತ್ರನನ್ನಾಗಲಿ, ರಾಜನ ತಮ್ಮನನ್ನಾಗಲಿ, ಸ್ವದೋರ್ಭ್ಯಾಂ-ತನ್ನ ಬಾಹುಗಳಿಂದ, ನಿಹನ್ಯಾತ್— ಸಂಹರಿಸಬೇಕು. ॥೧೦೧॥

ರಾಜ್ಞ: ಪುತ್ರೋऽಪ್ಯಕೃತೋದ್ವಾಹಕೋ ಯ: ಸ ಘಾತನೀಯೋ ನ ಸ್ವಯಂ ವಧ್ಯ ಏವ।
ಕ್ರೂರಂ ಚಾನಧರ್ಮಯುಕ್ತಂ ಪರೈಸ್ತತ್ ಪ್ರಸಾಧನೀಯಂ ಕ್ಷತ್ರಿಯೈರ್ನ ಸ್ವಕಾರ್ಯಮ್।
ಏವಂ ಧರ್ಮೋ ವಿಹಿತೋ ವೇದ ಏವ ವಾಕ್ಯಂ ವಿಷ್ಣೋ: ಪಂಚರಾತ್ರೇಷು ತಾದೃಕ್ ॥೧೦೨॥

ಯ:ರಾಜ್ಞ:ಪುತ್ರ: — ಯಾವ ರಾಜಕುಮಾರನು, ಅಕೃತೋದ್ವಾಹಕ: – ವಿವಾಹವಾಗದವನೋ, ಸ: — ಅವನು, (ಪರ ಹಸ್ತೇನ – ಬೇರೆಯವರಕೈಯಿಂದ) ಘಾತನೀಯ: – ಸಂಹರಿಸಲ್ಪಡಬೇಕು. ಕ್ರೂರಂ ಧರ್ಮ ಯುಕ್ತಂ

ಅನ್ಯತ್ ಕರ್ಮ—ಲೋಕದೃಷ್ಟಿಯಿಂದ ಕ್ರೂರವಾದ, ಆದರೆ ಧರ್ಮವೇ ಆಗಿರುವ, ಬೇರೆ ಕರ್ಮವು (ದಂಷ್ಟರ ಮೂಗು ಕಿವಿ ಇತ್ಯಾದಿಗಳ ಛೇದನರೂಪವಾದ ಕರ್ಮವು) ಪರೈಃ—ಭೃತ್ಯಾದಿ ಬೇರೆಯವರಿಂದ, ಸಾಧನೀಯಂ—ಸಾಧಿಸಲ್ಪಡಬೇಕು. ಕ್ಷತ್ರಿಯೈಃ-ಕ್ಷತ್ರಿಯರಿಂದ, ನ ಸ್ವಕಾರ್ಯಂ—ಸ್ವಂತವಾಡಲ್ಪಡಬಾರದು. ಏವಂ—ಈ ರೀತಿಯಾಗಿ, ಧರ್ಮಃ—ಧರ್ಮವು ವೇದೇಷ್ವಿವ-ವೇದದಲ್ಲಿಯೇ, ವಿಹಿತಃ—ವಿಧಿಸಲ್ಪಟ್ಟಿದೆ. ಪಂಚರಾತ್ರೇಷು—ಪಂಚರಾತ್ರಾಗ್ರವಂಗ್ರಂಥದಲ್ಲಿ ತಾದೃಕ್—ಆ ರೀತಿ ವಿಷಯವನ್ನು ಹೇಳತಕ್ಕ, ವಿಷ್ಣೋಃ—ವಾಕ್ಯಂ (ಅಪಿ)—ಶ್ರೀಹರಿಯ ವಾಕ್ಯವೂಕೂಡ, (ಅಸ್ತಿ—ಇರುವದು.) ॥೧೦೨॥

ಅಕ್ಷದ್ಯೂತಂ ನಿಕೃತಿಃಪಾಪಮೇವ ಕೃತಂ ತ್ವಯೂ ಗರ್ಹಿತಂ ಸೌ ಬಲೇನ ।
ನ ಕುತ್ರಚಿದ್ ವಿಧಿರಸ್ಯಾಸ್ತಿ ತೇನ ನ ತದ್‌ದತ್ತಂ ದ್ಯೂತಹೃತಂ ವದಂತಿ ॥೧೦೩॥

ನಿಕೃತಿಃ—ಕಪಟಸ್ವರೂಪವೇ ಆದ ಅಕ್ಷದ್ಯೂತಂ—ದ್ಯೂತಕ್ರೀಡೆಯು, ಪಾಪಂಏವ—ಪಾಪವೇ ಆಗಿದೆ. ತತ್ ಗರ್ಹಿತಂ—ಅಂಥ ನಿಂದ್ಯವಾದ ಆಟವು, ತ್ವಯಾ—ನಿನ್ನಿಂದ, ಸೌಬಲೇನ ಸಹ—ಶಕುನಿಯಿಂದ ಕೂಡಿಕೊಂಡು, ಕೃತಂ—ಆಡಲ್ಪಟ್ಟಿತು. ಕುತ್ರಚಿತ್-ಎಲ್ಲಿಯೂ ಯಾವ ಪುರಾಣಗ್ರಂಥದಲ್ಲಿಯೂ ಕೂಡ, ಅಸ್ಯ—ಈ ಕ್ರೀಡೆಯು, ವಿಧಿಃ—ವಿಧಾನವಮಾಡತಕ್ಕ ವಾಕ್ಯವು, ನ ಅಸ್ತಿ—ಇರುವದಿಲ್ಲ ತೇನ—ಆದ್ದರಿಂದ, ದ್ಯೂತಹೃತಂ ಯತ್—ದ್ಯೂತದಲ್ಲಿ ಅಪಹರಿಸಲ್ಪಟ್ಟದ್ದು ಯಾವದೋ, ತತ್—ಅದನ್ನು, ದತ್ತಂ—ಕೊಡಲ್ಪಟ್ಟದ್ದನ್ನಾಗಿ ನ ವದಂತಿ—(ಜ್ಞಾನಿಗಳು) ಹೇಳುವದಿಲ್ಲ. ॥೧೦೩॥

ಭೀತೇನ ದತ್ತಂ ದ್ಯೂತದತ್ತಂ ತಥೈವ ದತ್ತಂ ಕಾಮಿನ್ಯೈ ಪುನರಾಹಾರ್ಯಮೇವ ।
ಏವಂ ಧರ್ಮಃ ಶಾಶ್ವತೋ ವೈದಿಕೋ ಹಿ ದ್ಯೂತೇ ಸ್ತ್ರಿಯಾಂ ನಾಲ್ಪಮಾಹಾರ್ಯಮಾಹುಃ॥೧೦೪॥

ಭೀತೇನ ದತ್ತಂ—ಹೆದರಿದವನಿಂದ ಕೊಡಲ್ಪಟ್ಟದ್ದು, ದ್ಯೂತದತ್ತಂ—ದ್ಯೂತದಲ್ಲಿ ಕೊಡಲ್ಪಟ್ಟದ್ದು, ತಥಾ—ಹಾಗೂ, ಕಾಮಿನ್ಯೈ ದತ್ತಂ—ಪರಸ್ತ್ರೀ(ವೇಶ್ಯಾದಿ)ಗೆ ಕೊಟ್ಟದ್ದು, ಪುನಃ ಆಹಾರ್ಯಂ ಏವ—ಮತ್ತೆ ವಾಪಸ್ ಪಡೆಯಲ್ಪಡಬಹುದಾದದ್ದೇ ಆಗಿದೆ. ಏವಂ—ಆ ರೀತಿ, ಶಾಶ್ವತಃ ವೈದಿಕಃ ಧರ್ಮಃ—ಶಾಶ್ವತವಾದ ವೇದಗಳಲ್ಲಿ ಪ್ರತಿಪಾದಿತವಾದ ಧರ್ಮವಾಗಿದೆ. ದ್ಯೂತೇ ಸ್ತ್ರಿಯಾಂ ದತ್ತಂ—ದ್ಯೂತದಲ್ಲಿ ಸ್ತ್ರೀಯಲ್ಲಿ ಕೊಡಲ್ಪಟ್ಟದ್ದು, ಅಲ್ಪಂಚೇತ್—ಅಲ್ಪವಾದರೆ, ನ ಆಹಾರ್ಯಂ ಇತಿ ಆಹುಃ—ವಾಪಸ್ ಸ್ವೀಕರಿಸಲ್ಪಡಬಾರದು ಎಂದು ಹೇಳುವರು. ॥೧೦೪॥

ಅವತಾರಿಕೆ — ಅಲ್ಪವಾದರೆ ವಾಪಸ್ ಪಡೆಯಬಾರದು ಎಂಬುದಕ್ಕೆ ಅಪವಾದವನ್ನು ಹೇಳುತ್ತಾರೆ.—

ಯದ್ಯೇಷಾಂ ವೈ ಭೋಗ್ಯಮುಲ್ಪಂ ತದೀಯಂ ಭೋಗೇನ ತದ್ಬಂಧುಭಿಸ್ತಚ್ಚ ಹಾರ್ಯಮ್ ।
ನಿವಾರಣೇ ಪುರುಷಸ್ಯ ತ್ವಶಕ್ತ್ಯೈಸ್ತದ್ ರಾಜ್ಯಂ ನಃ ಪುನರಾಹಾರ್ಯಮೇವ ॥೧೦೫॥

ಯದಿ—ಒಂದು ವೇಳೆ, ಏಷಾಂ—ಕೊಟ್ಟವನ ಬಂಧುಗಳ, ಭೋಗ್ಯಂ—ಭೋಗಾರ್ಹವಾದ ಒಟ್ಟಿನ ಸೊತ್ತು, ಅಲ್ಪಂ ಚೇತ್—ಅಲ್ಪವೇ ಆಗಿದ್ದರೆ, ಭೋಗೇನ (ದತ್ತಂ)—ಭೋಗನಿಮಿತ್ತದಿಂದ ಕೊಡಲ್ಪಟ್ಟ, ತದೀಯೈಃ—ಸ್ತ್ರೀ ಮೊದಲಾದವರ ವಶದಲ್ಲಿರುವಃ ತಚ್ಚ—ಅಲ್ಪವಾದ ದಾನವೂ ಕೂಡ, ಪುರುಷಸ್ಯ ನಿವಾರಣೇ—ಕಾಮ ಅಥವಾ ದ್ಯೂತವಾಡುವ ಪುರುಷನ ನಿವಾರಣ(ತಡೆಯುವ) ವಿಷಯದಲ್ಲಿ, ಅಶಕ್ತ್ಯೈಃ—ಅಸಮರ್ಥರಾದ, ತದ್ಬಂಧುಭಿಃ—ಅವನ ಬಂಧುಗಳಿಂದ, ಆಹಾರ್ಯಂ ಏವ—ವಾಪಸ ಪಡೆಯಲು ಯೋಗ್ಯವೇ ಆಗಿದೆ. ತತ್—ಆದ್ದರಿಂದ, ನಃ ರಾಜ್ಯಂ ನಮ್ಮ ರಾಜ್ಯವೂ ಕೂಡ, ಪುನಃ ಆಹಾರ್ಯಂ ಏವ—ನಮ್ಮಿಂದವಾಪಸ್ ಪಡೆಯಲು ಯೋಗ್ಯವೇ ಆಗಿದೆ ॥೧೦೫॥

ತ್ವಂ ಧರ್ಮನಿತ್ಯಶ್ಚಾಗ್ರಜಶ್ಚೇತಿ ರಾಜನ್ ಋತೇಽನುಜ್ಞಾಂ ನ ಮಯಾ ತತ್‌ಕೃತಂ ಚ।
ದಾತಾಸ್ಯನುಜ್ಞಾಂ ಯದಿತಾನ್ ನಿಹತ್ಯ ತ್ವಯ್ಯೇವ ರಾಜ್ಯಂ ಸ್ಥಾಪಯಾಮ್ಯದ್ಯ ಸಮ್ಯಕ್॥೧೦೬॥

ರಾಜನ್ — ರಾಜನೇ, ತ್ವಂ — ನೀನು, ಧರ್ಮನಿತ್ಯಃ — ನಿತ್ಯದಲ್ಲಿ ಧರ್ಮದಲ್ಲಿ ಸ್ಥಿರನು, ಚ — ಮತ್ತು, ಅಗ್ರಜಃ — ನನಗೆ ಅಣ್ಣನು, ಇತಿ — ಈ ಕಾರಣದಿಂದ, (ತವ)ಅನುಜ್ಞಾಂ ಋತೇ — ನಿನ್ನ ಅಪ್ಪಣೆ ಇಲ್ಲದೆ, ಮಯಾ — ನನ್ನಿಂದ, ತತ್ — ಪುನಃ ಪಾಪಸ್ ತೆಗೆದುಕೊಳ್ಳುವ ಕಾರ್ಯವು, ನ ಕೃತಂ ಚ — ಮಾಡಲ್ಪಟ್ಟಿಲ್ಲ, ಯದಿ — ಒಂದು ವೇಳೆ, ಅನುಜ್ಞಾಂ ದಾತಾ ಅಸಿ — ಅಪ್ಪಣೆಯನ್ನು ಕೊಡುವಿಯಾದರೆ, ಅದ್ಯೈವ — ಇಂದೇ, ತಾನ್ — ಅವರನ್ನೆಲ್ಲ, ನಿಹತ್ಯ — ಕೊಂದು, ರಾಜ್ಯಂ — ರಾಜ್ಯವನ್ನು, ತ್ವಯ್ಯೇವ — ನಿನ್ನಲ್ಲಿಯೇ, ಸಮ್ಯಕ್ ಸ್ಥಾಪಯಾಮಿ — ಪೂರ್ಣವಾಗಿ ಇಡುತ್ತೇನೆ ॥೧೦೬॥

ಸತ್ಯಂ ಪಾಪೇಷ್ವಪಿ ಕರ್ತುಂ ಯದೀಚ್ಛಾ ತಥಾಪಿ ನಾಸಾ ದ್ವಾದಶ ನಃ ಪ್ರಯಾತಾಃ।
ವೇದಪ್ರಾಮಾಣ್ಯಾದ್ ವತ್ಸರಾಸ್ತೇ ಹಿ ಮಾಸ್ಯೈಃ ಸಹಸ್ರಾಬ್ದಂ ಸತ್ರಮುಕ್ತಂ ನರಾಣಾಮ್ ।
ಅಜ್ಞಾತನೈಕಂ ಮಾಸಮುಷ್ಯಾಽಥ ಶತ್ರೂನ್ ನಿಹತ್ಯ ರಾಜ್ಯಂ ಪ್ರತಿಪಾಲಯಾಮಃ ॥೧೦೭॥

ಯದಿ — ಒಂದು ವೇಳೆ, ಪಾಪೇಷು ಅಪಿ — ಪಾಪಿಷ್ಠರಾದ ಆ ಕೌರವರ ಬಗ್ಗೆ ಕೂಡ, (ವಚಃ — ವನವಾಸಾದಿಗಳ ಕರಾರು ಮಾತನ್ನು) ಸತ್ಯಂ ಕರ್ತುಂ — ಸತ್ಯವನ್ನಾಗಿ ಮಾಡಲು, ಇಚ್ಛಾ — ಇಚ್ಛೆ ಇರುವದಾದರೆ, ತಥಾಪಿ — ಹಾಗಾದರೂ ಕೂಡ, ನಃ — ನಮಗೆ, ದ್ವಾದಶ ಮಾಸಾಃ — ಹನ್ನೆರಡು ತಿಂಗಳುಗಳು, ಪ್ರಯಾತಾಃ — ಕಳೆದಿರುವವು, ಹಿ — ಯಾವ ಕಾರಣದಿಂದ, ನರಾಣಾಂ — ಮನುಷ್ಯರಿಗೆ, ಸಹಸ್ರಾಬ್ದಂ ಸತ್ರಂ — ಒಂದು ಸಾವಿರ ವರ್ಷಮಾಡಬೇಕಾದ ಯಾಗವು ಮಾಸ್ಯೈಃ — ಒಂದು ಸಾವಿರ ತಿಂಗಳಿನಿಂದ ಮಾಡಲು, (ವೇದೇ) ಉಕ್ತಂ — (ವೇದದಲ್ಲಿ) ಹೇಳಲ್ಪಟ್ಟಿರುವದೋ, ತೇನ — ಆ ಕಾರಣದಿಂದ, ವೇದಪ್ರಾಮಾಣ್ಯಾತ್ — ವೇದಕ್ಕೆ ಪ್ರಾಮಾಣ್ಯವಿರುವದರಿಂದ, ತೇ — ಹನ್ನೆರಡು ತಿಂಗಳುಗಳು, ವತ್ಸರಾಃ — ಹನ್ನೆರಡು ವರ್ಷಗಳಿಗೆ ಸಮವಾಗಲಿ, ಏಕಂ ಮಾಸಂ — ಇನ್ನೊಂದು ತಿಂಗಳು ಪರ್ಯಂತ, ಅಜ್ಞಾತಂ ಉಷ್ಯ — ಅಜ್ಞಾತವಾಸಮಾಡಿ, ಅಥ — ಅದರ ನಂತರ, ಶತ್ರೂನ್ ನಿಹತ್ಯ — ಶತ್ರುಗಳನ್ನು ಸಂಹರಿಸಿ, ರಾಜ್ಯಂ ಪ್ರತಿಪಾಲಯಾಮಃ — ರಾಜ್ಯವನ್ನು ಆಳೋಣ ॥೧೦೭॥

ಮಾ ಮಿತ್ರಾಣಾಂ ತಾಪಕಸ್ತ್ವಂ ಭವೇಥಾಸ್ತಥಾಽಮಿತ್ರಾಣಾಂ ನಂದಕಶ್ಚೈವರಾಜನ್।
ಜ್ವಲಸ್ವಾರೀಣಾಂ ಮೂರ್ಧ್ನಿ ಮಿತ್ರಾಣಿ ನಿತ್ಯಮಾಹ್ಲಾದಯನ್ ವಾಸುದೇವಂ ಭಜಸ್ವ॥೧೦೮॥

ತ್ವಂ — ನೀನು, ಮಿತ್ರಾಣಾಂ — ನಿನ್ನ ಪ್ರಿಯಂರಿಗೆ, ತಾಪಕಃ ಮಾಭವೇಥಾಃ — ತಾಪದಾಯಕನಾಗಬೇಡ, ತಥಾ — ಹಾಗೂ ಅಮಿತ್ರಾಣಾಂ — ದುಷ್ಟ ವೈರಿಗಳಿಗೆ, ನಂದಕಃ ಚ — ಆನಂದದಾಯಕನೂ ಆಗಬೇಡ, ರಾಜನ್ — ರಾಜನೇ, ಅರೀಣಾಂ ಮೂರ್ಧ್ನಿ — ವೈರಿಗಳ ತಲೆಯ ಮೇಲೆ, ಜ್ವಲಸ್ವ — ಅಗ್ನಿಯಂತೆ ಪ್ರಕಾಶಿಸು. ನಿತ್ಯಂ — ಯಾವಾಗಲೂ, ಮಿತ್ರಾಣಿ — ಪ್ರಜೆಗಳನ್ನು, ಸಜ್ಜನರನ್ನು, ಆಹ್ಲಾದಯನ್ — ಸಂತೋಷಪಡಿಸುತ್ತಾ, ವಾಸುದೇವಂ — ಶ್ರೀಹರಿಯನ್ನು, ಭಜಸ್ವ — ಸೇವಿಸು. ॥೧೦೮॥

ಸ್ವತಂತ್ರತ್ವಂ ವಾಸುದೇವಸ್ಯ ಸಮ್ಯಕ್ ಪ್ರತ್ಯಕ್ಷತೋ ದೃಶ್ಯತೇ ಹ್ಯದ್ಯ ರಾಜನ್।
ಯಸ್ಮಾತ್ ಕೃಷ್ಣೋ ವ್ಯಜಯಚ್ಛಂಕರಾದೀನ್ ಜರಾಸುತಾದೀನ್ ಕಾದಿವರ್ಯೈರಜೇಯಾನ್ ॥೧೦೯॥

ರಾಜನ್ — ರಾಜನೇ, ಸ್ವತಂತ್ರತ್ವಂ — ಸ್ವಾತಂತ್ರ್ಯವು, ವಾಸುದೇವಸ್ಯ — ಶ್ರೀಹರಿಗೇ, ಅದ್ಯ — ಈಗ, ಪ್ರತ್ಯಕ್ಷತಃ ಸಮ್ಯಕ್ ದೃಶ್ಯತೇ — ಸ್ಪಷ್ಟ ಪ್ರತ್ಯಕ್ಷದಿಂದ ತೋರುತ್ತಾ ಇದೆ. ಯಸ್ಮಾತ್ — ಏಕೆಂದರೆ, ಕೃಷ್ಣಃ — ಶ್ರೀಕೃಷ್ಣನು

ಯಾವಕಾರಣದಿಂದ, ಕಾದಿವರ್ಕೆ: – ಬ್ರಹ್ಮಾದಿಗಳ ವರಗಳಿಂದ, ಅಜೇಯಾನ್ – ಅಜೇಯರಾದ, ಜರಾಸಂತಾದೀನ್ – ಜರಾಸಂಧ ಮೊದಲಾದವರನ್ನು ವ್ಯಜಯತ್ – ಗೆದ್ದನೋ, ಅತಃ—ಆದ್ದರಿಂದ, ಶಂಕರಾದೀನ್ ಚ – ರುದ್ರಾದಿದೇವತೆಗಳನ್ನೂ ಕೂಡ, ವ್ಯಜಯತ್ – ಗೆದ್ದನು. ॥೧೦೯॥

ಬ್ರಹ್ಮಾದೀನಾಂ ಪ್ರಕೃತೇಸ್ತದ್ವಶತ್ವಂ ದೃಷ್ಟಂ ಹಿ ನೋ ಬಹುಶೋ ವ್ಯಾಸದೇಹೇ।
ಪಾರಾಶರ್ಯೋ ದಿವ್ಯದೃಷ್ಟಿಂ ಪ್ರದಾಯ ಸ್ವಾತಂತ್ರ್ಯಂ ನೋಽದರ್ಶಯತ್ ಸರ್ವಲೋಕೇ॥೧೧೦॥

ಬ್ರಹ್ಮಾದೀನಾಂ—ಬ್ರಹ್ಮದೇವರೇ ಮೊದಲಾದವಂಗೆ, ಪ್ರಕೃತೇ – ಶ್ರೀಲಕ್ಷ್ಮೀದೇವಿಗೆ ತದ್ವಶತ್ವಂ–ಆ ಭಗವಂತನ ಅಧೀನತೆಯು, ವ್ಯಾಸದೇಹೇ – ಶ್ರೀವೇದವ್ಯಾಸದೇವರ ದೇಹದಲ್ಲಿ, ಬಹುಶಃ—ಅನೇಕಸಲ, ದೃಷ್ಟಂ ಹಿ—ಸ್ಪಷ್ಟವಾಗಿಕಂಡಿದೆ. ಪಾರಾಶರ್ಯಃ – ಶ್ರೀವೇದವ್ಯಾಸದೇವರು, ನಃ—ನಮಗೆ, ದಿವ್ಯದೃಷ್ಟಿಂ – ದಿವ್ಯದೃಷ್ಟಿಯನ್ನು, ಪ್ರದಾಯ–ಕೊಟ್ಟು, ಸ್ವಾತಂತ್ರ್ಯಂ—ತನ್ನ ಸ್ವಾತಂತ್ರ್ಯವನ್ನು, ನಃ—ನಮಗೆ, ಸರ್ವಲೋಕೇ–ಎಲ್ಲ ಲೋಕದ ಸಮಕ್ಷದಲ್ಲಿ, ಅದರ್ಶಯತ್—ತೋರಿಸಿದ್ದಾರೆ. ॥೧೧೦॥

ತಸ್ಮಾದ್ ರಾಜನ್ನಭಿನಿರ್ಯಾಹಿ ಶತ್ರೂನ್ ಹಂತುಂ ಸರ್ವಾನ್ ಭೋಕ್ತುಮೇವಾಧಿರಾಜ್ಯಮ್।
ಏವಂ ಚ ತೇ ಕೀರ್ತಿಧರ್ಮೌ ಮಹಾಂತೌ ಪ್ರಾಪ್ಸ್ಯೌ ರಾಜನ್ ವಾಸುದೇವಪ್ರಸಾದಾತ್॥೧೧೧॥

ಹೇ ರಾಜನ್ – ಎಲೋ ರಾಜನೇ, ತಸ್ಮಾತ್ – ಆದ್ದರಿಂದ, ಸರ್ವಾನ್ ಶತ್ರೂನ್—ಎಲ್ಲ ಶತ್ರುಗಳನ್ನು, ಹಂತುಂ—ಕೊಲ್ಲಲು, ಅಧಿರಾಜ್ಯಂ ಭೋಕ್ತುಂ—ಪೂರ್ಣರಾಜ್ಯಾಧಿಪತ್ಯವನ್ನು, ಭೋಗಿಸಲು ಅಭಿನಿರ್ಯಾಹಿ – ನಿಸ್ಸಂಶಯವಾಗಿ ಹೊರಡು. ರಾಜನ್ – ರಾಜನೇ, ಏವಂಚ – ಹೀಗೆಮಾಡಿದರೆ, ತೇ – ನಿನಗೆ, ವಾಸುದೇವ ಪ್ರಸಾದಾತ್–ಶ್ರೀಹರಿಯ ಅನುಗ್ರಹದಿಂದ, ಮಹಾಂತೌ—ಶ್ರೇಷ್ಠವಾದ, ಅಧಿಕವಾದ, ಕೀರ್ತಿಧರ್ಮೌ – ಕೀರ್ತಿಧರ್ಮಗಳು, ಪ್ರಾಪ್ಸ್ಯೌ – ಹೊಂದಲು ಶಕ್ಯಗಳಾಗುವವು. ॥೧೧೧॥

ಏವಮುಕ್ತೋಽಬ್ರವೀದ್ ಭೀಮಂ ಧರ್ಮಪುತ್ರೋ ಯುಧಿಷ್ಠಿರಃ।
ತ್ರಯೋದಶಾಬ್ದಸ್ಯಾಂತೇಽಹಂ ಕುರ್ಯಾಮೇವ ತ್ವದೀರಿತಮ್ ॥೧೧೨॥

ಸತ್ಯಮೇತನ್ನ ಸಂದೇಹಃ ಸತ್ಯೇನಾತ್ಮಾನಮಾಲಭೇ।
ಲೋಕಾಪವಾದಭೀರುಂ ಮಾಂ ನಾತೋಽನ್ಯದ್ ವಕ್ತುಮರ್ಹಸಿ ॥೧೧೩॥

ಏವಂ ಉಕ್ತಃ – ಈ ರೀತಿ ಹೇಳಿಸಿಕೊಳ್ಳಲ್ಪಟ್ಟ, ಧರ್ಮಪುತ್ರಃ – ಯಮಧರ್ಮನ ಮಂಗನಾದ, ಯುಧಿಷ್ಠಿರಃ–ಧರ್ಮರಾಜನು, ಅಹಂ – ನಾನು, ತ್ರಯೋದಶಾಬ್ದಸ್ಯ ಅಂತೇ – ಹದಿಮೂರನೆಯ ವರ್ಷದ ಕೊನೆಯಲ್ಲಿ, ತ್ವದೀರಿತಂ—ನಿನ್ನ ಮಾತನ್ನು, ಕುರ್ಯಾಂ ಏವ – ನಡೆಸಿಯೇತೀರುತ್ತೇನೆ, ಏತತ್ – ಈ ಮಾತು, ಸತ್ಯಂ—ಸತ್ಯವಾದದ್ದು, ನ ಸಂದೇಹಃ – ಸಂಶಯವಿಲ್ಲ ಸತ್ಯೇನ ಆತ್ಮಾನಂ ಆಲಭೇ – ಸತ್ಯ ಎಂಬದೃಷ್ಟಿಯಿಂದ ನನ್ನನ್ನೇ ಮುಟ್ಟಿ (ನನ್ನ ಆಣೆ ಮಾಡಿ) ಹೇಳುತ್ತೇನೆ. ಲೋಕಾಪವಾದ ಭೀರುಂ—ಲೋಕಾಪವಾದಕ್ಕೆ ಹೆದರುವ, ಮಾಂ – ನನ್ನನ್ನು ಕುರಿತು, ಅತಃ ಅನ್ಯತ್—ಈ ಮಾತಿಗಿಂತ ಬೇರೆ (ಹೆಚ್ಚಿನ) ಮಾತನ್ನು, ವಕ್ತುಂ ನ ಅರ್ಹಸಿ—ಹೇಳಲು ಯೋಗ್ಯನಲ್ಲ ॥೧೧೨॥೧೧೩॥

ತುದಸೇ ಚಾತಿ ವಾಚಾ ಮಾಂ ಯದ್ಯೇವಂ ಭೀಮ ಮಾಂವದೇಃ।
ತಥೈವ ಮೇಽತ್ರಯಃ ಕಾರ್ಯೋ ಹಂತವ್ಯಾಶ್ಚೈವ ಶತ್ರವಃ ॥೧೧೪॥

ನೈತಾದೃಶೈರಿದಾನೀಂ ತು ವಾಕ್ಯೈರ್ಬಾಧಿತುಮರ್ಹಸಿ ।
ಭೀಷ್ಮದ್ರೋಣಾದಯೋಽಸ್ಮಜ್ಜಾ ನಿವಾರ್ಯಾಶ್ಚ ಕಥಂಯುಧಿ ॥೧೧೫॥

ಪೂಜ್ಯಾಸ್ತೇ ಬಾಹುಯುದ್ಧೇನ ನ ನಿವಾರ್ಯಾ:ಕಥಂಚನ।
ಅಸ್ತ್ರಾಣಿ ಜಾನನ್ನಪಿ ಹಿ ಪ್ರಯೋಜಯಸಿ ನ ಕ್ವಚಿತ್ ॥೧೧೬॥

ತಸ್ಮಾತ್ತದೈವ ಗಂತವ್ಯಂ ವಿಜ್ಞಾತಾಸ್ತ್ರೇ ಧನಂಜಯೇ।
ಇತ್ಯುಕ್ತೋ ಭೀಮಸೇನಸ್ತು ಸ್ನೇಹ ಭಂಗಭಯಾತ್ತತಃ।
ನೋವಾಚ ಕಿಂಚಿತ್ವಚನಂ ಸ್ವಾಭಿಪ್ರೇತಮುವಾಪ್ಯಚ ॥೧೧೭॥

ಭೀಮಂ – ಭೀಮಸೇನನೇ, ಯದಿ – ಒಂದು ವೇಳೆ, ಏವಂಉಪಿ – ಈ ರೀತಿ ನಾನು ಪ್ರತಿಜ್ಞೆ (೧೩ ವರ್ಷಗಳ ನಂತರ ಯುದ್ಧ ಮಾಡುವೆನು ಎಂದು) ಮಾಡಿದ ನಂತರವೂ ಕೂಡ, ಮಾಂ – ನನ್ನನ್ನು ಕುರಿತು, ವದೇಃ—ಈಗಲೇ ಹೋಗಿ ಯುದ್ಧ ಮಾಡುವಾ ಇತ್ಯಾದಿ ಮಾತುಗಳನ್ನು ಪುನಃಪುನಃ ಹೇಳುವಿಯಾದರೆ, ತರ್ಹಿ—ಆಗ, ಮಾಂ ನನ್ನನ್ನು, ಅತಿವಾಚಾ—ಅತಿಕ್ರೂರವಾದ ಮಾತಿನಿಂದ ತುಂಬಾ ವ್ಯಥೆಪಡಿಸುವಿ. ತದಾ ಏವ— ಹದಿಮೂರು ವರ್ಷಗಳ ನಂತರ ನೀನು ಹೇಳಿದಂತೆ ನಡೆಯುದಿದ್ದರೆ ಮಾತ್ರವೇ, ಮೇ ಅತ್ಯಯ: – ನನ್ನನ್ನು ಪೀಡಿಸುವ ಕಾರ್ಯವು, ಕಾರ್ಯಃ – ಮಾಡಲ್ಪಡಬಹುದು. ಶತ್ರವಃ – ವೈರಿಗಳು, ಹಂತವ್ಯಾಃಚ—ಸಂಹರಿಸಲ್ಪಡಬೇಕು ಇದಾನೀಂ ತು ಈಗ ಮಾತ್ರ, ಏತಾದೃಶೈಃ ವಾಕ್ಯೈಃ—ಇಂಥ ಮಾತುಗಳಿಂದ, ಬಾಧಿತುಂ – (ನನ್ನನ್ನು) ಪೀಡಿಸಲು, ನ ಅರ್ಹಸಿ—ಯೋಗ್ಯನಲ್ಲ ಚ – ಅಷ್ಟೇ ಅಲ್ಲ, ಅಸ್ತ್ರಜ್ಞಾಃಭೀಷ್ಮದ್ರೋಣಾದಯಃ – ಅಸ್ತ್ರಜ್ಞರಿಗಳಾದ, ಭೀಷ್ಮದ್ರೋಣಾದಿಗಳು, ಯುಧಿ – ಯುದ್ಧದಲ್ಲಿ, ಕಥಂ ನಿವಾರ್ಯಾ:—ಹೇಗೆ ತಡೆಯಲ್ಪಡಬೇಕು. ಪೂಜ್ಯಾಃತೇ – ಪೂಜ್ಯರಾದ ಅವರೇ, ತೇ–ನಿನ್ನಿಂದ, ಬಾಹುಯುದ್ಧೇನ – ಬಾಹು ಯುದ್ಧದಿಂದ, ಕಥಂಚನ ನ ನಿವಾರ್ಯಾಃ—ತಡೆಯಲ್ಪಡುವವರು ಆಗರು. ಅಸ್ತ್ರಾಣಿ ಜಾನನ್ನಪಿ ಅಸ್ತ್ರಗಳನ್ನು ತಿಳಿದವನಾದರೂ, (ನೀನು), ಕ್ವಚಿತ್ — ಎಂದೂ. ನ ಪ್ರಯೋಜಯಸಿ— ಪ್ರಯೋಗಿಸುವದಿಲ್ಲ ತಸ್ಮಾತ್ – ಆದ್ದರಿಂದ, ಧನಂಜಯೇ ವಿಜ್ಞಾತಾಸ್ತ್ರೇಸತಿ —ಅರ್ಜುನನು ಅಸ್ತ್ರಗಳನ್ನು ತಿಳಿದವನಾಗುತ್ತಿರಲು, ತದಾಏವ-ಆಗಲೇ, ಗಂತವ್ಯಂ— ಯುದ್ಧಕ್ಕೆಹೋಗಲ್ಪಡಬೇಕು.” ಇತಿ—ಎಂದು, ಅಬ್ರವೀತ್ - ಹೇಳಿದನು ಇತಿಉಕ್ತಃಭೀಮಸೇನ:— ಈ ರೀತಿ ಹೇಳಿಸಿಕೊಂಡ ಭೀಮಸೇನದೇವರು, ಸ್ನೇಹಭಂಗಭಯಾತ್-ಧರ್ಮರಾಜನ ಪ್ರೀತಿಯು ಭಂಗಬರುವುದೆಂಬ ಹೆದರಿಕೆಯಿಂದ ಚ – ಮತ್ತು, ಸ್ವಾಭಿಪ್ರೇತಂ – ತಮಗೆ ಅಭಿಪ್ರೇತವಾದ ವಿಷಯವನ್ನು, ಆವಾಪ್ಯ—ಹೊಂದಿ. ತತಃಕಿಂಚಿತ್ ವಚನಂ – ಅದಕ್ಕಿಂತ ಹೆಚ್ಚಿನ ಸ್ವಲ್ಪ ಮಾತನ್ನೂಕೂಡ, ನ ಉವಾಚ- ಹೇಳಲಿಲ್ಲ. ॥೧೧೫॥೧೧೬॥೧೧೭॥೧೧೮॥

ಅಭಿಪ್ರಾಯೋ ಹಿ ಭೀಮಸ್ಯ ನಿಶ್ಚಯೇನ ತ್ರಯೋದಶೇ ॥೧೧೯॥
ಯುಧಿಷ್ಠಿರಸ್ಯ ರಾಜ್ಯಾರ್ಥಂ ಗಮನಾರ್ಥೇಪ್ರತಿಶ್ರವಃ ।
ಅನ್ಯಥಾಽತಿ ಮೃದುತ್ವಾತ್ಸ ನ ಗಚ್ಛೇದ್ಭಿನ್ನಧೀ ಪರೈಃ ॥೧೨೦॥

ತ್ರಯೋದಶೇ (ಸಮಾಪ್ತೇಸತಿ) – ಹದಿನೆಯ ವರ್ಷವುಮುಗಿಯುತ್ತಿರಲು, ರಾಜ್ಯಾರ್ಥಂ— ರಾಜ್ಯಸಂಪಾದನೆಗಾಗಿ, ನಿಶ್ಚಯೇನ–ನಿಶ್ಚಯವಾಗಿ, ಗಮನಾರ್ಥೇ—ಹೊರಡುವದರ ಬಗ್ಗೆ, ಯಃಧಿಷ್ಠಿರಸ್ಯ ಪ್ರತಿಶ್ರವ – ಧರ್ಮರಾಜನಿಂದ ಪ್ರತಿಜ್ಞೆಯಾಗಬೇಕೆಂಬುದೇ ಭೀಮಸ್ಯ ಅಭಿಪ್ರಾಯಃ ಹಿ – ಶ್ರೀಭೀಮರ ಅಭಿಪ್ರಾಯವಾಗಿತ್ತು ಅನ್ಯಥಾ– ಆ ರೀತಿ ಪ್ರತಿಜ್ಞೆ ಇಲ್ಲದಿದ್ದರೆ, ಅತಿಮೃದುತ್ವಾತ್—ಅತ್ಯಂತ ಮೃದುಸ್ವಭಾವವಾದ್ದರಿಂದ ಪರೈಃ – ಶತ್ರುಗಳಿಂದ,

ಭಿನ್ನಧೀಃಸನ್ ದಂರ್ಭೋದಧಿಸಲ್ಪಟ್ಟ (ಹೆದರಿ ಗೊಂದಲಮಯವಾದ) ಮನಸ್ಸುಳ್ಳವನಾಗಿ, ನ ಗಚ್ಛೇತ್ – ಯುದ್ಧಕ್ಕೆ ಹೊರಡಲಾರನು (ಎಂಬ ಕಾರಣದಿಂದ ಪ್ರತಿಜ್ಞೆಯನ್ನು ಮಾಡಿಸಿದರು.) ॥೧೧೮॥೧೧೯॥

ಕೃತಕೃತ್ಯೇ ತಥಾ ಭೀಮೇ ಸ್ಥಿತೇಧರ್ಮಾತ್ಮಜೋ ಹಿ ಸಃ।
ಭೀಷ್ಮದ್ರೋಣಾದಿವಿಜಯಃ ಕಥಂ ಸ್ಯಾದಿತ್ಯಚಿಂತಯತ್ ॥೧೨೦॥

ತಥಾ – ಅಪೇಕ್ಷೆ ಮಾಡಿದರೀತಿಯಲ್ಲಿ, ಭೀಮೇ - ಭೀಮಸೇನದೇವರು, ಕೃತಕೃತ್ಯೇ ಸ್ಥಿತೇಸತಿ – ಪ್ರತಿಜ್ಞೆ ಮಾಡಿಸುವ ಕಾರ್ಯವನ್ನು ಮಾಡಿರುತ್ತಿರಲು, ಧರ್ಮಾತ್ಮಜಃ ಸಃ-ಆ ಧರ್ಮರಾಜನು, ಭೀಷ್ಮದ್ರೋಣಾದಿವಿಜಯಃ—ಭೀಷ್ಮ ದ್ರೋಣ ಮೊದಲಾದವರ ಮೇಲೆ ವಿಜಯವು, ಕಥಂ ಸ್ಯಾತ್—ಹೇಗೆ ಆದೀತು, ಇತಿ ಅಚಿಂತಯತ್ – ಎಂದು ವಿಚಾರಿಸಿದನು. ॥೧೨೦॥

ನಿವಾರಣಂ ಗುರೂಣಾಂ ಹಿ ಭೀಮ ಇಚ್ಛತಿ ನ ಕ್ವಚಿತ್।
ತಸ್ಮಾತ್ತೇ ಹ್ಯರ್ಜುನೇನೈವ ನಿವಾರ್ಯಾ ಇತ್ಯಚಿಂತಯತ್ ॥೧೨೧॥

ಭೀಮಃ – ಭೀಮಸೇನನು, ಕ್ವಚಿತ್ – ಎಂದೂ, ಗುರೂಣಾಂ ನಿವಾರಣಂ—ಹಿರಿಯರನ್ನು ತಡೆಯುವ ಕಾರ್ಯವನ್ನು, ನ ಇಚ್ಛತಿ— ಅಪೇಕ್ಷಿಸುವದಿಲ್ಲ ತಸ್ಮಾತ್—ಆದ್ದರಿಂದ ತೇ—ಆ ಹಿರಿಯರು, ಅರ್ಜುನೇನ ಏವ – ಅರ್ಜುನನಿಂದಲೇ, ನಿವಾರ್ಯಾಃ —ತಡೆಯಲ್ಪಡಬೇಕು. ಇತಿ—ಎಂದು, ಅಚಿಂತಯತ್ – ವಿಚಾರಿಸಿದನು. ॥೧೨೧॥

ಆಪದ್ಯೇವ ಹಿ ಭೀಮಸ್ತಾನ್ನಿವಾರಯತಿ ನಾನ್ಯಥಾ।
ಏವಂ ಚಿಂತಾಸವಾವಿಷ್ಟಂ ವಿಜ್ಞಾಯೈವ ಯಮಧಿಷ್ಠಿರಂ ॥೧೨೨॥

ಸರ್ವಜ್ಞಃ ಸರ್ವಶಕ್ತಿಶ್ಚ ಕೃಷ್ಣದ್ವೈಪಾಯನೋಽಗಮತ್।
ನೃಪತಿಂ ಬೋಧಯಾಮಾಸ ಚಿಂತಾವ್ಯಾಕುಲಮಾನಸಮ್ ॥೧೨೩॥

ಆಪದಿ ಏವ—ಆಪತ್ತಿನಲ್ಲಿಯೇ, ಭೀಮಃ – ಭೀಮಸೇನನು, ತಾನ್- ಭೀಷ್ಮಾದಿಗಳನ್ನು ನಿವಾರಯತಿ—ತಡೆಯುವನು, ಅನ್ಯಥಾ— ಆಪತ್ತಿಲ್ಲದಾದಾಗ ನ—ತಡೆಯುವದಿಲ್ಲ, ಇತಿ ಚಿಂತಾಸವಾವಿಷ್ಟಂ – ಈ ರೀತಿ ಚಿಂತಾ ಯುಕ್ತನಾದ, ಯುಧಿಷ್ಠಿರಂ ವಿಜ್ಞಾಯಏವ,-ಧರ್ಮರಾಜನ ಬಗ್ಗೆ ತಿಳಿದೇ, ಸರ್ವಜ್ಞಃ ಚ ಸರ್ವಶಕ್ತಿಃ—ಸರ್ವಜ್ಞರಾದ ಮತ್ತು ಸರ್ವಶಕ್ತರಾದ, ಕೃಷ್ಣದ್ವೈಪಾಯನಃ—ಶ್ರೀವೇದವ್ಯಾಸದೇವರು, ಅಗಮತ್ – ಬಂದರು. ಚ—ಮತ್ತು, ಚಿಂತಾವ್ಯಾಕುಲಮಾನಸಂ— ಚಿಂತೆಯಿಂದಕೂಡಿದ ಮನಸ್ಸುಳ್ಳ, ನೃಪತಿಂ–ಧರ್ಮರಾಜನನ್ನು ಕುರಿತು, ಬೋಧಯಾಮಾಸ – ತಿಳಿಹೇಳಿದರು. ॥೧೨೨॥೧೨೩॥

ಇಮುಂಮುಂತ್ರಂವದಿಷ್ಯಾಮಿ ಯೇನಜೇಷ್ಯತಿ ಫಲ್ಗುನಃ।
ಭೀಷ್ಮದ್ರೋಣಾದಿಕಾನ್ಸರ್ವಾನ್ ತಂತ್ವಂ ವದ ಧನಂಜಯೇ ॥೧೨೪॥

ಫಲ್ಗುನಃ – ಅರ್ಜುನನು, ಯೇನ - ಯಾವವುಂತ್ರದಿಂದ, ಭೀಷ್ಮದ್ರೋಣಾದಿಕಾನ್ ಸರ್ವಾನ್ – ಭೀಷ್ಮ ದ್ರೋಣವೊದಲಾದ ಎಲ್ಲರನ್ನು, ಜೇಷ್ಯತಿ–ಗೆಲ್ಲುವನೋ, ತಂ ಇಮಂ ಮುಂತ್ರಂ-ಅಂಥ ಈ ಮುಂತ್ರವನ್ನು, ಅಹಂ – ನಾನು, ತವ – ನಿನಗೆ, ವದಿಷ್ಯಾಮಿ – ಹೇಳುವೆನು. ತಂ— ಆ ಮುಂತ್ರವನ್ನು ತ್ವಂ—ನೀನು, ಧನಂಜಯೇ–ಅರ್ಜುನನಿಗೆ, ವದ–ಹೇಳು. ॥೧೨೪॥

ಇತ್ಯುಕ್ತ್ವೈವಾವದನ್ಮಂತ್ರಂ ಸರ್ವದೈವತದೃಷ್ಟಿದಮ್।
ನ ಸ್ವಯಂ ಹ್ಯವದತ್ಪಾರ್ಥೇ ಫಲಾಧಿಕ್ಯಂ ಯತೋಭವೇತ್ ॥೧೨೫॥

ಇತಿಉಕ್ತ್ವಾ—ಈ ರೀತಿಮಾಡಿನಾಖಿ, ಸರ್ವದೈವತದೃಷ್ಟಿದಂ – ಎಲ್ಲದೇವತೆಗಳ ದರ್ಶನವಾಡಿಕೊಡ ಬಲ್ಲಂಥ, ಮಂತ್ರಂ—ಮಂತ್ರವನ್ನು, ಅವದತ್ – ಹೇಳಿದರು.

ಅವತಾರಿಕೆ :— ತಾನೇ ಅರ್ಜುನನಿಗೆ ಸಾಕ್ಷಾತ್ ಹೇಳದಿರಲು ಕಾರಣ ಹೇಳುವರು.

ಯತಃ—ಯಾವಕಾರಣದಿಂದ, (ತಾನು ಸ್ವಯಂ ಹೇಳಿದ್ದರೆ) ಫಲಾಧಿಕ್ಯಂ – ಅವಶ್ಯ ಫಲಕ್ಕಿಂತಲೂ ಹೆಚ್ಚಿನ ಫಲವು ಆಗುವದೋ, ಅತಃ—ಆದ್ದರಿಂದ ಪಾರ್ಥೇ—ಅರ್ಜುನನಿಗೆ, ಸ್ವಯಂ – ಸ್ವತಃ, ನ ಅವದತ್—ಹೇಳಲಿಲ್ಲ. ॥೧೨೫॥

ಭಾವಾನುವಾದ ೧೦೧–೧೨೫

ಪಾಪಿಗಳನ್ನು ಸಂಹರಿಸುವಲ್ಲಿಯೂ ವಿಶೇಷವನ್ನೂ ಕೂಡ ಶ್ರೀಭೀಮಸೇನದೇವರು ತಿಳಿಸಿದ್ದಾರೆ—'ಯಾರು ಕಪಟದ್ಯೂತವನ್ನು ಆಡುವವರೋ ಅಂಥವರು ಒಂದಿಯಾಗಿ ಕೈಗೆ ಸಿಕ್ಕಾಗ ಕೂಡ ಅವರನ್ನು ಸಂಹರಿಸುವದು ಧರ್ಮವೇ. ವಾಸ್ತವಿಕವಾಗಿ ಒಂದಿಯಾಗಿ ಸಿಕ್ಕವನ ಸಂಹಾರ ಮಾಡಬಾರದು ಎಂದು ನಿಯಮ. ಆದರೆ ಪಾಪಿಯಾದವನ ವಿಷಯದಲ್ಲಿ ಅದನ್ನು ಅನ್ವಯಿಸದೇ ಅವಶ್ಯ ಸಂಹರಿಸಬಹುದು. ಆದರೆ ತಾನೇ ಸಂಹರಿಸಬಾರದು, ತನ್ನ ಸೇವಕರಿಂದ ಸಂಹಾರಮಾಡಿಸಬೇಕು. ಯುದ್ಧದಲ್ಲಿ ಎದುರಾಗಿ ಬಂದ ರಾಜನಾಗಲಿ, ರಾಜ ಪುತ್ರನಾಗಲಿ, ರಾಜನ ಅನುಜನಾಗಲೀ ಅವರನ್ನು ಅವಶ್ಯವಾಗಿ ತನ್ನ ಬಾಹುವಿನಿಂದಲೇ ಸಂಹರಿಸಬೇಕು. ರಾಜಕುಮಾರನ ವಿವಾಹವಾಗಿರದಿದ್ದರೆ. ಅಂಥವರ ಸಂಹಾರವನ್ನು ಸೇವಕರಿಂದ, ಮಾಡಿಸಬೇಕು. ದುಷ್ಟರ ಅಂಗಛೇದಾದಿಗಳನ್ನು ಮಾಡುವ ಪ್ರಸಂಗ ಬಂದಾಗ ಅದು ಧರ್ಮವೇ ಆದರೂ ಕೂಡ ನಿಂದ್ಯವಾದ್ದರಿಂದ ತಾನು ಸ್ವಯಂ ಮಾಡದೇ ಭೃತ್ಯರಿಂದ ಮಾಡಿಸಬೇಕು. ಈ ರೀತಿಯಾಗಿ ಧರ್ಮವು ವೇದದಲ್ಲಿ ಪಂಚರಾತ್ರಾಗಮದಲ್ಲಿ ನಿರೂಪಿಸಲ್ಪಟ್ಟಿದೆ. ದ್ಯೂತವೇ ಅಧರ್ಮ. ತತ್ರಾಪಿ ಕಪಟದ್ಯೂತವು ಅಧರ್ಮವೆಂದು ಏನು ಹೇಳುವದು ? ಅಂಥ ದ್ಯೂತವನ್ನು ಪಾಪಿಶಕುನಿಯಸಂಗಡ ಆಡಿದಿಯಲ್ಲವೇ. ದ್ಯೂತವನ್ನು ಆಡಲು ಪರವಾನಿಗೆ ಯಾವ ಗ್ರಂಥದಲ್ಲೂ ಇಲ್ಲ. ಕಿಂತು ನಿಷೇಧವೇ ಇದೆ. ಹೆದರಿದವನು ಕೊಟ್ಟದ್ದು, ದ್ಯೂತದಲ್ಲಿ ಸೋತದ್ದು, ಪರ ಸ್ತ್ರೀಯರಿಗೆ (ಕಾಮದಿಂದ) ಕೊಟ್ಟದ್ದು ಇವೆಲ್ಲ ಕೊಟ್ಟದ್ದು ಎಂದು ಎನಿಸಿ ಕೊಳ್ಳುವದಿಲ್ಲ. ಪುನಃವಾಪಸ ಪಡೆಯಂಬಹುದಾಗಿದೆ. ಹೀಗೆ ಶಾಸ್ತ್ರ ನಿರ್ಣಯವಿದೆ. ಆದ್ದರಿಂದ ಈಗ ನೀನು ದ್ಯೂತದಲ್ಲಿ ಸೋತರಾಜ್ಯವನ್ನು ನಾವು ಅವಶ್ಯವಾಗಿ ತೆಗೆದುಕೊಳ್ಳಬಹುದು ಈಗಲೇ ಹೊರಟು ಯುದ್ಧವಾಡಿ ವೈರಿಗಳನ್ನು ಸಂಹರಿಸಿ ರಾಜ್ಯ ಸಂಪಾದನವಾಡಿದರೆ ಯಾವ ದೋಷವೂ ಇಲ್ಲ. ಆದರೆ ನೀನು ಧರ್ಮದಲ್ಲಿ ಅತಿ ದೀಕ್ಷೆಯುಳ್ಳವನು, ನೀನು ನಮ್ಮ ಅಣ್ಣನು. ನಿನ್ನ ಅಪ್ಪಣೆಇಲ್ಲದೇ ನಾವು ತರಬಾರದು ಎಂದು ಸುಮ್ಮನಿರುವೆನು. ನೀನು ಅಪ್ಪಣೆ ಕೊಡು, ಆ ಕೆಲಸವನ್ನು ಕೂಡಲೇ ಮಾಡುವೆನು. ಒಂದು ವೇಳೆ ಪಾಪಿಗಳಾದ ಆ ದುರ್ಯೋಧನಾದಿಗಳ ಹತ್ತಿರವೂ ಕೂಡ ನಿನ್ನ ವನವಾಸ ಅಜ್ಞಾತವಾಸಗಳ ಅವಧಿಯ ಬಗ್ಗೆ ಇರುವ ಮಾತನ್ನು ಸತ್ಯವಾಡುವ ಇಚ್ಛೆ ಇರುವದಾರೆ ಅದಕ್ಕೂ ಯಾವ ತೊಂದರೆ ಇಲ್ಲ. ಈಗಾಗಲೇ ಹನ್ನೆರಡು ತಿಂಗಳು ಕಳೆದಿವೆ. ಒಂದು ತಿಂಗಳ ಎಂದರೆ ಒಂದು ವರ್ಷ ಇದ್ದಂತೆ ಎಂದು ವೇದವೇ ಹೇಳುತ್ತಿದೆ. ಮನುಷ್ಯರಿಗೆ ಸಾವಿರವರ್ಷದ ಸತ್ರವನ್ನು ವಿಧಾನ ಮಾಡತಕ್ಕ ವೇದವಾಕ್ಯವಿದೆ. ಮನುಷ್ಯರಿಗೆ ಸಾವಿರ ವರ್ಷಆಯುಷ್ಯವೇ ಇಲ್ಲ: ಇದು ಹೇಗೆ ಕೂಡುವದು ಎಂಬ ಶಂಕೆ ಬಂದರೆ ವೇದವೇ ಆ ಸಂದರ್ಭದಲ್ಲಿ ಉತ್ತರಿಸಿದೆ – ಒಂದು ತಿಂಗಳು ಒಂದು ವರ್ಷಕ್ಕೆ ಸಮವಾದದ್ದರಿಂದ ಒಂದು ಸಾವಿರ ತಿಂಗಳ ಯಜ್ಞವಾಡಬೇಕು ಎಂದು. ವೇದವು ಪ್ರಮಾಣವಾದದ್ದರಿಂದ ಅದರ ಪ್ರಕಾರ ಈಗ ಹನ್ನೆರಡು ವರ್ಷ ವನವಾಸವನ್ನು ಕಳೆದಂತಾಯಿತು. ಇನ್ನು ಒಂದು ತಿಂಗಳ ಅಜ್ಞಾತವಾಸವನ್ನು ಮುಗಿಸಿ ಯುದ್ಧಕ್ಕೆ ಹೊರಡೋಣ

ಹೀಗೆ ಮಾಡಿದರೆ ನಿನ್ನ ಬಂಧು ಮಿತ್ರರಾದ ಸಜ್ಜನರಿಗೆ ಸಂತೋಷಕರನಾಗುವಿ, ಇಲ್ಲವಾದರೆ ಅವರಿಗೇ ತಾಪಪ್ರದನಾಗುವಿ, ದುಷ್ಟರಿಗೆ ಆನಂದಕರನಾಗುವಂತಾಗುವದು. ಹಾಗಾಗಬಾರದು, ವೈರಿಗಳ ತಲೆಯ ಮೇಲೆ ಶೋಭಿಸು; ಶ್ರೀಹರಿಯ ಆರಾಧನೆಯನ್ನು ಮಾಡು. ಅವನು ಸ್ವತಂತ್ರ ಸರ್ವೋತ್ತಮನೆಂಬುದು. ಪ್ರತ್ಯಕ್ಷ ಸಿದ್ಧವಾಗಿದೆ. ಏಕೆಂದರೆ ಶ್ರೀ ಕೃಷ್ಣನು ಬ್ರಹ್ಮಾದಿವರಗಳಿಂದ ಅಜೇಯರಾದ ಜರಾಸಂಧಾದಿಗಳನ್ನು ಅನೇಕ ಸಲ ಗೆದ್ದಿರುವನು. ಆದ್ದರಿಂದ ಬ್ರಹ್ಮಾದಿಗಳಿಗಿಂತ ಉತ್ತಮನು ಎಂದು ಸಿದ್ಧವಾಯಿತು. ವ್ಯಾಸದೇವರು ಅನೇಕ ಸಲ ತನ್ನ ದೇಹದಲ್ಲಿ ಲಕ್ಷ್ಮ್ಯಾದಿ ದೇವತೆಗಳು ತನ್ನ ಅಧೀನರಾಗಿರುವದನ್ನು ತಾನು ಸ್ವತಂತ್ರನಾಗಿರುವದನ್ನು ನಮಗೆ ದಿವ್ಯದೃಷ್ಟಿಯನ್ನು ಕೊಟ್ಟು ತೋರಿಸಿರುವರು. ಆದ್ದರಿಂದ ರಾಜ, ಭಗವದನುಗ್ರಹಕ್ಕಾಗಿ ಯುದ್ಧಕ್ಕೆ ಸಿದ್ಧನಾಗು, ಶತ್ರುಗಳನ್ನು ಸಂಹರಿಸು, ರಾಜ್ಯ ಭಾರವನ್ನು ಮಾಡು, ಅದರಿಂದ ನಿನ್ನ ಕೀರ್ತಿಧರ್ಮ ಎರಡೂ ಬೆಳೆಯುವವು.' ಎಂಬುದಾಗಿ ಶ್ರೀ ಭೀಮಸೇನ ದೇವರು ಧರ್ಮರಾಜನಿಗೆ ಹೇಳಿದರು. ಆಗ ಧರ್ಮರಾಜನು 'ನಾನು ಖಂಡಿತ ಹದಿಮೂರು ವರ್ಷಗಳನಂತರ ನೀನು ಹೇಳಿದಂತೆ ಮಾಡುತ್ತೇನೆ. ನನ್ನ ಆಣೆಮಾಡಿ ಹೇಳುವೆನು. ಇದು ಸತ್ಯಮಾತು. ಸಂಶಯವಿಲ್ಲ, ಹೀಗಿದ್ದರೂ ಪುನಃ ಪುನಃ ಈಗಲೇ ಹೊರಡು ಎಂದು ಹೇಳುವಿಯಾದರೆ ನನಗೆ ಬಹಳ ಬೇಸರವನ್ನುಂಟುಮಾಡಿದಂತಾಗುವದು. ವಚನದ ಅವಧಿ ೧೩ ವರ್ಷಗಳ ನಂತರವೂ ಒಂದು ವೇಳೆ ನಾನು ಮಾಡದಿದ್ದರೆ ಆಗ ನೀನು ನನ್ನನ್ನು ವೀರಿ ಯುದ್ಧಕ್ಕೆ ಹೊರಡಬಹುದು. ಇಷ್ಟೇ ಅಲ್ಲ, ಅಸ್ತ್ರಜ್ಞರಾದ ಭೀಷ್ಮದ್ರೋಣಾದಿಗಳ ಜೊತೆಗೆ ಭಾಗವತ ಧರ್ಮರತನಾದ ನೀನು ಬಾಹು ಯುದ್ಧ ಮಾಡುವದಿಲ್ಲ. ಅಸ್ತ್ರಗಳು ನಿನಗೆಗೊತ್ತಿದ್ದರೂ ಅವುಗಳನ್ನು ಪ್ರಯೋಗಿಸುವದಿಲ್ಲ. ಅಂದ ಮೇಲೆ ಭೀಷ್ಮದ್ರೋಣಾದಿಗಳನ್ನು ಎದುರಿಸಲು ನಮ್ಮ ಅರ್ಜುನನು ಅಸ್ತ್ರಜ್ಞನ ಸಂಪಾದಿಸಿದ ಮೇಲೆಯೇ ಶಕ್ಯ. ಆದ್ದರಿಂದ ಇವನು ಅಸ್ತ್ರಗಳನ್ನು ಸಂಪಾದಿಸಿದ ಮೇಲೆ ಯುದ್ಧಕ್ಕೆ ಹೋಗುವಾ; ಈಗ ಬೇಡ ಎಂದು ಅಂದನು. ಆಗ ಶ್ರೀ ಭೀಮಸೇನದೇವರಿಗೆ ಧರ್ಮರಾಜನು ಹದಿಮೂರು ವರ್ಷಗಳ ನಂತರ ಯುದ್ಧವಾಡಿಯೇ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡಬೇಕು ಎಂಬ ಇಚ್ಛೆ ಇತ್ತು. ಅದು ಆದದ್ದರಿಂದ ಹೆಚ್ಚಿಗೆ ಮಾತಾಡದೇ ಸುಮ್ಮನಾದರು. ಇನ್ನು ಹೆಚ್ಚು ಮಾತಾಡಿದರೆ ಧರ್ಮರಾಜನಿಗೆ ಸಿಟ್ಟುಬರುವ ಪ್ರಸಂಗ ಇದ್ದದ್ದರಿಂದಲೂ ಸುಮ್ಮನಾದರು. ಇಷ್ಟಾದ ಮೇಲೆ ಧರ್ಮರಾಜನು ಭೀಷ್ಮಾದಿಗಳನ್ನು ಗೆಲ್ಲುವದು ಹೇಗೆ ಎಂದು ಚಿಂತಾಯುಕ್ತನಾಗಿದ್ದನು. ಆಗ ಶ್ರೀವೇದವ್ಯಾಸದೇವರು ಬಂದು ಏನೇನೂ ವಿಚಾರಿಸಬೇಡ; ನಾನು ನಿನಗೆ ಒಂದು ಮಂತ್ರವನ್ನು ಹೇಳುವೆನು. ಅದು ಎಲ್ಲ ದೇವತಾ ದರ್ಶನಮಾಡಿಸುವ ಮಂತ್ರವಾಗಿದೆ ನೀನು ಅದನ್ನು ಅರ್ಜುನನಿಗೆ ಕೊಡು ಎಂದು ಹೇಳಿ ಆ ಮಂತ್ರವನ್ನು ಧರ್ಮರಾಜನಿಗೆ ಕೊಟ್ಟರು. ಒಂದು ವೇಳೆ ವೇದವ್ಯಾಸದೇವರು ಸಾಕ್ಷಾತ್ ಅರ್ಜುನನಿಗೆ ಆ ಮಂತ್ರವನ್ನು ಕೊಟ್ಟಿದ್ದರೆ ಪ್ರಸ್ತಕವಾದ ಭೀಷ್ಮಾದಿಗಳ ವಿಜಯ ಫಲಕ್ಕಿಂತ ಹೆಚ್ಚಿನ ಫಲ ಆಗುತ್ತಿತ್ತು. ಹಾಗಾಗಬಾರದು ಕೇವಲ ಅಷ್ಟೇಫಲವಾಗಲಿ ಎಂಬ ಉದ್ದೇಶದಿಂದ ಧರ್ಮರಾಜನ ದ್ವಾರಾ ಉಪದೇಶಮಾಡಿದರು.

ಭೀಷ್ಮದ್ರೋಣಾದಿ ವಿಜಯ ಏತಾವದ್ವೀರ್ಯ ಮೇವ ಹಿ।
ಅಲಂ ನಾತೋ ಽಧಿಕಂ ಕಾರ್ಯಮಿತಾವದ್ಯೋಗ್ಯಮುಸ್ಯಚ ॥೧೨೬॥

ಫಲ್ಗುನಸ್ಯೇತಿ ಭಗವಾನ್ನ ಸ್ವಯಂ ಹ್ಯವದನ್ಮನುಮ್ ।
ಗತೇವ್ಯಾಸೇ ಭವತಿ ಸರ್ವಜ್ಞೇ ಸರ್ವಕರ್ತರಿ ॥೧೨೭॥

ಧರ್ಮರಾಜೋಽದಿಶನ್ಮಂತ್ರಂ ಫಲ್ಗುನಸ್ಯ ರಹಸ್ಯಮುಮ್।
ತಮಾಪ್ಯ ಫಲ್ಗುನೋ ಮಂತ್ರ ಯಯೌ ಜೇಷ್ಠೌ ಪ್ರಣಮ್ಯ ಚ ॥೧೨೮॥

ಯುಯುಜೌ ಚ ಸಮಾಶ್ಲಿಷ್ಯ ಗಿರಿಮೇವೇಂದ್ರಕೀಲಕಮ್।
ತಪಶ್ಚಕಾರ ತತ್ರಸ್ಥಶ್ಶಂಕರಸ್ಥಂ ಹರಿಂ ಸ್ಮರನ್ ॥೧೬೯॥

ಭೀಷ್ಮದ್ರೋಣಾದಿವಿಜಯೇ—ಭೀಷ್ಮದ್ರೋಣಾದಿಗಳನ್ನು ಗೆಲ್ಲುವವಿಷಯದಲ್ಲಿ, ಏತಾವತ್ ವೀರ್ಯಂ ಏವ—ಇಷ್ಟು ಶಕ್ತಿಯೇ, ಅಲಂ – ಸಾಕು, ಅತಃ ಅಧಿಕಂ ಇದಕ್ಕಿಂತ ಹೆಚ್ಚು, ನ ಕಾರ್ಯಂ - ಮಾಡಲ್ಪಡಬಾರದು. ಚ—ಮತ್ತು, ಅಸ್ಯ ಫಲ್ಗುನಸ್ಯ—ಅರ್ಜುನನಿಗೆ, ಏತಾವತ್—ಇಷ್ಟೇ, ಯೋಗ್ಯಂ ಯೋಗ್ಯವಾಗಿದೆ. ಇತಿ ಎಂಬ ಕಾರಣದಿಂದ, ಭಗವಾನ್ – ಶ್ರೀವೇದವ್ಯಾಸರುಸ್ವಯಂ ತಾವೇ. ಮಂತ್ರಂ—ಮಂತ್ರವನ್ನು, ನಹಿ ಅವದತ್ – ಹೇಳಲಿಲ್ಲ. ಸರ್ವಜ್ಞೇ ಸರ್ವಕರ್ತರಿ ಭಗವತಿ ವ್ಯಾಸೇಗತೇ ಸತಿ—ಸರ್ವಜ್ಞರಾದ, ಸರ್ವಕರ್ತರಾದ,ಷಡಂಗಪೂರ್ಣರಾದ ಶ್ರೀವೇದವ್ಯಾಸದೇವರು ಹೋಗುತ್ತಿರಲು, ಧರ್ಮರಾಜಃ—ಧರ್ಮರಾಜನು, ಅಮುಂ ಮಂತ್ರಂ – ಆ ಮಂತ್ರವನ್ನು, ರಹಸಿ – ರಹಸ್ಯದಲ್ಲಿ, ಫಲ್ಗುನಸ್ಯ – ಅರ್ಜುನನಿಗೆ, ಅದಿಶತ್ – ಕೊಟ್ಟರು, ಫಲ್ಗುನಃ – ಅರ್ಜುನನು, ತಂ ಮಂತ್ರಂ—ಆ ಮಂತ್ರವನ್ನು, ಆಪ್ಯ—ಹೊಂದಿ, ಜ್ಯೇಷ್ಠೌ – ಇಬ್ಬರು ಅಣ್ಣಂದಿರನ್ನು, ಪ್ರಣಮ್ಯ—ನಮಸ್ಕರಿಸಿ, ಚ – ಮತ್ತು. ಯಮಜೌ ಚ—ನಕುಲ ಸಹದೇವರನ್ನೂ ಕೂಡ, ಸಮಾಶ್ಲಿಷ್ಯ—ಆಲಿಂಗಿಸಿಕೊಂಡು, ಇಂದ್ರಕೀಲಕಂ ಗಿರಿಂ ಏವ – ಇಂದ್ರಕೀಲ ಪರ್ವತವನ್ನು ಕುರಿತೇ, ಯಯೌ — ಹೋದನು, ತತ್ರಸ್ಥಃ—ಅಲ್ಲಿ ಇರುವವನಾಗಿ, ಶಂಕರಸ್ಥಂ – ಶ್ರೀರುದ್ರದೇವರಲ್ಲಿರುವ, ಹರಿಂ – ಶ್ರೀಹರಿಯನ್ನು, ಸ್ಮರನ್ — ಸ್ಮರಿಸುವವನಾಗಿ, ತಪಶ್ಚಕಾರ—ತಪಸ್ಸನ್ನು ಮಾಡಿದನು. ॥೧೨೬-೧೨೭-೧೨೮-೧೨೯॥

ಷಣ್ಮಾಸೇಷ್ವತಿಗತೇಷ್ವಪಶ್ಯನ್ಮೂಕಂ ನಾಮಾಸುರಂ ಗಿರೌ।
ವರಾಹರೂಪ ಮಾಯಾತಂ ವಧಾರ್ಥಂ ಫಲ್ಗುನಸ್ಯ ಚ ॥೧೩೦॥

ಷಣ್ಮಾಸೇ—ಆರುತಿಂಗಳ ಸಮಯವು, ಅತಿಗತೆ ಸತಿ – ಕಳೆಯುತ್ತಿರಲು, ಗಿರೌ —ಆ ಪರ್ವತದಲ್ಲಿ. ಫಲ್ಗುನಸ್ಯ ವಧಾರ್ಥಂ – ಅರ್ಜುನನ ವಧಕ್ಕಾಗಿ, ಆಯಾತಂ – ಬರುತ್ತಿದ್ದ ವರಾಹರೂಪಂ—ವರಾಹವೇಷದಲ್ಲಿರುವ, ಮೂಕಂ ನಾಮ ಅಸುರಂ – ಮೂಕ ಎಂಬ ಹೆಸರಿನ ಅಸುರನನ್ನು, ಅಪಶ್ಯತ್ – ಅರ್ಜುನನು ನೋಡಿದನು. ॥೧೩೦॥

ತಂ ಜ್ಞಾತ್ವಾ ಫಲ್ಗುನೋ ವೀರಸ್ಸಜ್ಯಂ ಕೃತ್ವಾತು ಗಾಂಡಿವಮ್।
ಚಿಕ್ಷೇಪ ವಜ್ರಸಮಿತಾಂಸ್ತತ್ಕಾಯೇ ಸಾಯಕಾನ್ ಬಹೂನ್ ॥೧೩೧॥

ಫಲ್ಗುನಃ – ಅರ್ಜುನನು, ತಂ ಜ್ಞಾತ್ವಾ—ಬಂದ ಅಸುರನಬಗ್ಗೆ ತಿಳಿದು, ಗಾಂಡಿವಂ ಸಜ್ಯಂಕೃತ್ವಾ—ಗಾಂಡಿವಧನುಸ್ಸನ್ನು ಜ್ಯಾಸಹಿತವನ್ನಾಗಿ ಮಾಡಿ, ತತ್ಕಾಯೇ ಅಸುರನದೇಹದಲ್ಲಿ. ವಜ್ರಸಮಿತಾನ್—ವಜ್ರಾಯುಧಕ್ಕೆ ಸದೃಶವಾದ, ಬಹೂನ್ ಸಾಯಕಾನ್ —ಬಹಳಬಾಣಗಳನ್ನು, ಚಿಕ್ಷೇಪ— ಪ್ರಯೋಗಿಸಿದನು. ॥೧೩೧॥

ಕಿರಾತರೂಪಸ್ತಮನು ಸಭಾರ್ಯಶ್ಚ ತ್ರಿಯಂಬಕಃ।
ಸ ಮುಮೂರ ಹತಸ್ತಾಭ್ಯಾಂ ದಾನವಃ ಪಾಪಚೇತನಃ ॥೧೩೨॥

ತಂ ಅನು-ಅರ್ಜುನನ ನಂತರ, ಅರ್ಜುನಬಾಣವನ್ನು ಅನುಸರಿಸಿ, ಕಿರಾತರೂಪಃ—ಬೇಡರ ರೂಪದಲ್ಲಿರುವ, ಸಭಾರ್ಯಃ—ಪತ್ನಿಯಿಂದಸಹಿತರಾದ. ತ್ರಿಯಂಬಕಃ ಚ—ರುದ್ರದೇವರೂ ಕೂಡ, (ಆಯುಧ (ಬಾಣ) ಪ್ರಯೋಗ

ಮಾಡಿದರು). ಪಾಪಚೇತನಃ ಸಃ ದಾನವಃ – ಪಾಪಿಷ್ಠನಾದ ಆ ಮೂಕಾಸುರನಾದರೂ, ತಾಭ್ಯಾಂ – ಅವರಿಬ್ಬರಿಂದ, ಹತಃಸನ್ ಮಮಾರ—ಹೊಡೆಸಿಕೊಂಡವನಾಗಿ ಸಂಹೃತನಾದನು. ॥೧೩೨॥

ತೇನೋಕ್ತೋಽಸೌ ಮಯೈವಾಯಂ ವರಾಹೋಽನುಗತೋಽದ್ಯ ಹಿ।
ತಮವಿಧ್ಯೋ ಯತಸ್ತ್ವಂ ಹಿ ತದ್ಯುಧ್ಯಸ್ವ ಮಯಾ ಸಹ ॥೧೩೩॥

ಅಸೌ – ಆ ಅರ್ಜುನನು, ತೇನ – ಆ ರುದ್ರದೇವರಿಂದ, ಅದ್ಯ – ಇಂದು, ಅಯಂ ವರಾಹಃ – ಈ ವರಾಹವು, ಮಯಾಏವ ಅನುಗತಃ – ನನ್ನಿಂದಲೇ ಬೆನ್ನುಹತ್ತಲ್ಪಟ್ಟಿದೆ. (ಅದನ್ನು ಹೊಡೆಯಬೇಡವೆಂದಕ್ಕಾಗಿ ನಾನು ಬೆನ್ನು ಹತ್ತಿಕೊಂಡುಬಂದಿರುವದು.) ತಂ – ಅಂಥ ಆ ವರಾಹವನ್ನು, ಯತಃ—ಯಾವ ಕಾರಣದಿಂದ, ತ್ವಂ—ನೀನು, ಅವಿಧ್ಯಃ – ಹೊಡಿದಿರುವಿಯೋ, ತತ್ – ಆ ಕಾರಣದಿಂದ, ಮಯಾ ಸಹ—ನನ್ನಿಂದ ಕೂಡಿಕೊಂಡು ಯುಧ್ಯಸ್ವ – ಯುದ್ಧಮಾಡು, ॥೧೩೩॥

ಇತ್ಯುಕ್ತಃ ಫಲ್ಗುನಃ ಪ್ರಾಹ ತಿಷ್ಠ ತಿಷ್ಠನಮೋಕ್ಷ್ಯಸೇ।
ಇತ್ಯುಕ್ತ್ವಾ ತಾವುಭೌ ಯುದ್ಧಂ ಚಕ್ರತುಃ ಪುರುಷರ್ಷಭೌ ॥೧೩೪॥

ಇತಿ ಉಕ್ತಃ – ಈ ರೀತಿ ರುದ್ರದೇವರಿಂದ ಹೇಳಲ್ಪಟ್ಟ, ಫಲ್ಗುನಃ – ಅರ್ಜುನನು, ತಿಷ್ಠ ತಿಷ್ಠ – ನಿಲ್ಲು; ನಿಲ್ಲು, ನ ಮೋಕ್ಷ್ಯಸೇ – ನನ್ನಿಂದ ಬಿಡಲ್ಪಡುವದಿಲ್ಲ. ಇತಿ ಉಕ್ತ್ವಾ—ಈ ರೀತಿ ಹೇಳಿ, ತೌ ಉಭೌ ಪುರುಷರ್ಷಭೌ – ಆ ಇಬ್ಬರೂ ಪುರುಷಶ್ರೇಷ್ಠರು, ಯುದ್ಧಂ ಚಕ್ರತುಃ – ಯುದ್ಧವನ್ನು ಮಾಡಿದರು. ॥೧೩೪॥

ತತ್ರಾಖಿಲಾನಿ ಚಾಸ್ತ್ರಾಣಿ ಫಲ್ಗುನಸ್ಯಾಗ್ರಸಚ್ಛಿವಃ।
ತತೋಽರ್ಜುನಸ್ತು ಗಾಂಡೀವಂ ಸಮಾದಾಯಾಭ್ಯತಾಡಯತ್ ॥೧೩೫॥

ತತ್ರ—ಆ ಯುದ್ಧದಲ್ಲಿ, ಶಿವಃ—ರುದ್ರದೇವರು, ಫಲ್ಗುನಸ್ಯ ಅಖಿಲಾನಿ ಅಸ್ತ್ರಾಣಿ ಚ – ಅರ್ಜುನನ ಎಲ್ಲ ಅಸ್ತ್ರಗಳನ್ನೂ ಕೂಡ, ಅಗ್ರಸತ್ - ನುಂಗಿದರು (ನಾಶಪಡಿಸಿದರು). ತತಃ – ಅನಂತರ, ಅರ್ಜುನಃ ತು—ಅರ್ಜುನನಾದರೂ ಕೂಡ, ಗಾಂಡೀವಂ ಸಮಾದಾಯ – ಗಾಂಡಿವಧನುಸ್ಸನ್ನು ತೆಗೆದುಕೊಂಡು, ಅಭ್ಯತಾಡಯತ್—ಹೊಡೆದನು. ॥೧೩೫॥

ತದಸ್ಯಾಗ್ರಸದೇವಾಸೌ ಪ್ರಹಸನ್ ಗಿರಿಶಸ್ತದಾ।
ಬಾಹುಯುದ್ಧಂ ತತಶ್ಚಾಸೀತ್ತಯೋಃ ಪುರುಷಸಿಂಹಯೋಃ ॥೧೩೬॥

ತದಾ—ಆಗ, ಅಸೌ ಗಿರಿಶಃ – ಆ ರುದ್ರದೇವರು, ಪ್ರಹಸನ್—ನಗುತ್ತಾ, ತದಪಿ— ಅದನ್ನೂ ಕೂಡ, ಅಗ್ರಸತ್ – ನುಂಗಿದರು. ತತಃ ಚ—ಅನಂತರ, ತಯೋಃ ಪುರುಷಸಿಂಹಯೋಃ - ಆ ಶ್ರೇಷ್ಠ ಪುರುಷರಿಬ್ಬರಿಗೆ, ಬಾಹುಯುದ್ಧಂ—ಬಾಹು (ಮೊಲ್ಲ) ಯುದ್ಧವು, ಆಸೀತ್—ಆಯಿತು. ॥೧೩೬॥

ಪಿಂಡೀಕೃತ್ಯ ತತೋ ರುದ್ರಃ ಚಿಕ್ಷೇಪಾಥ ಧನಂಜಯಮ್।
ಮೂರ್ಛಾಮವಾಪ ಮಹತೀಂ ಫಲ್ಗುನೋ ರುದ್ರ ಪೀಡಿತಃ ॥೧೩೭॥

ತತಃ – ಅನಂತರ, ರುದ್ರಃ – ರುದ್ರದೇವರು, ಧನಂಜಯಂ – ಅರ್ಜುನನನ್ನು, ಪಿಂಡೀಕೃತ್ಯ – ಮುದ್ದಾಡಿ ಮಾಡಿ (ಹೆಡಮುರಿಗಿ ಕಟ್ಟಿ), ಚಿಕ್ಷೇಪ – ದೂರಕ್ಕೆ ಎಸೆದರು, ಅಥ—ನಂತರ, ರುದ್ರಪೀಡಿತಃ—ರುದ್ರದೇವರಿಂದ ಪೀಡೆಯನ್ನು (ನೋವನ್ನು) ಹೊಂದಿದ, ಫಲ್ಗುನಃ – ಅರ್ಜುನನು, ಮಹತೀಂ ಮೂರ್ಛಾಂ—ಬಹಳ ಮೂರ್ಛೆಯನ್ನು ಅವಾಪ—ಹೊಂದಿದನು. ॥೧೩೭॥

ಅವತಾರಿಕೆ :— 'ನಾನು ಭೂಮಿಯಲ್ಲಿರುವಾಗ ಅರ್ಜುನನನ್ನು ಯಾವನೂ ಗೆಲ್ಲಲಾರನು' ಎಂಬ ಶ್ರೀ ಕೃಷ್ಣನ ವರವಿರುವಾಗ ರುದ್ರದೇವರು ಅರ್ಜುನನನ್ನು ಹೇಗೆ ಗೆದ್ದರು ಎಂಬ ಶಂಕೆಗೆ ನಿರ್ಣಯವನ್ನು ಕೊಡುತ್ತಿರುವರು –

ಪೂರ್ವಂ ಸಂಪ್ರಾರ್ಥಯಾಮಾಸ ಶಂಕರೋ ಗರುಡಧ್ವಜಂ ।
ಅವರಾಣಾಂ ವರಂ ಮತ್ತೋ ಯೇಷಾಂ ತ್ವಂ ಸಂಪ್ರಯಚ್ಛಸಿ ॥೧೩೮॥

ಅಜೇಯತ್ವಂ ಪ್ರಸಾದಾತ್ತೇ ವಿಜೇಯಾಸ್ಮ್ಯರ್ಜುನಾದಪಿ ತೇ ।
ಇತ್ಯುಕ್ತಃ ಪ್ರದದೌ ವಿಷ್ಣುರುಮಾಧೀಶಾಯಂ ತಂ ವರಮ್ ॥೧೩೯॥

ಪೂರ್ವಂ – ಹಿಂದೆ, ಶಂಕರಃ – ರುದ್ರದೇವರು, ಗರುಡಧ್ವಜಂ—ಗರುಡವಾಹನನಾದ ಶ್ರೀಹರಿಯನ್ನು, ಮತ್ತಃ ಅವರಾಣಾಂ – ನನ್ನಕ್ಕಿಂತ ಕಡಿಮೆಯಾದ, ಯೇಷಾಂ – ಯಾರಿಗೆ, ವರಂ - ವರರೂಪವಾಗಿ, ಅಜೇಯತ್ವಂ—ಅಜೇಯತ್ವವನ್ನು, ತ್ವಂ ನೀನು, ಸಂಪ್ರಯಚ್ಛಸಿ – ಕೊಡುವಿಯೋ, ತೇ – ಅವರು, ತೇ ಪ್ರಸಾದಾತ್—ನಿನ್ನ ಅನುಗ್ರಹದಿಂದ, ಮಯಾ ಅಪಿ ವಿಜೇಯಾಃ ಸ್ಮ್ಯಃ—ನನ್ನಿಂದಲೂ ಗೆಲ್ಲಲ್ಪಡುವವರು ಆಗಬೇಕು. ಇತಿ–ಎಂದು, ಸಂಪ್ರಾರ್ಥಯಾಮಾಸ – ಪ್ರಾರ್ಥಿಸಿದ್ದರು. ಇತಿ ಉಕ್ತಃ–ಈ ರೀತಿ ಪ್ರಾರ್ಥಿಸಲ್ಪಟ್ಟ, ವಿಷ್ಣುಃ—ಶ್ರೀಹರಿಯು, ಉಮಾಧೀಶಾಯ–ರುದ್ರದೇವರಿಗೆ, ತಂ ವರಂ – ಆ ವರವನ್ನು, ಪ್ರದದೌ – ಕೊಟ್ಟನು. ॥೧೩೮॥೧೩೯॥

ತೇನಾಜಯಚ್ಛ್ವೇತವಾಹಂ ಗಿರಿಶೋ ರಣಮೂರ್ಧ್ನಗಂ ।
ಕೇವಲಾನ್‌ವೈಷ್ಣವಾನ್ಮಂತ್ರಾನ್ ವ್ಯಾಸಃಪಾರ್ಥಾಯ ನೋ ದದೌ ॥೧೪೦॥

ತೇನ—ಆ ಕಾರಣದಿಂದ, ಗಿರಿಶಃ—ರುದ್ರದೇವರು, ರಣಮೂರ್ಧ್ನಗಂ – ಯುದ್ಧದಲ್ಲಿರುವ, ಶ್ವೇತವಾಹಂ—ಅರ್ಜುನನನ್ನು, ಅಜಯತ್ – ಗೆದ್ದರು.

ಅವತಾರಿಕೆಃ — ವೈಷ್ಣವ ಮಂತ್ರಗಳು ಅರ್ಜುನನಿಗೆ ಇದ್ದದ್ದರಿಂದ ಅರ್ಜುನನನ್ನು ಗೆಲ್ಲಲು ರುದ್ರದೇವರಿಗೆ ಹೇಗೆ ಶಕ್ಯವಾಯಿತು? ಎಂಬ ಪ್ರಶ್ನೆಗೆ ಉತ್ತರಾರ್ಧದಿಂದ ಉತ್ತರವನ್ನು ಹೇಳುತ್ತಾರೆ.

ವ್ಯಾಸಃ – ಶ್ರೀವ್ಯಾಸದೇವರು, ಕೇವಲಾನ್ ವೈಷ್ಣವಾನ್ ಮಂತ್ರಾನ್—ಕೇವಲ ಶ್ರೀವಿಷ್ಣುವೇ ಋಷಿಯಾಗಿರುವ, ಶ್ರೀವಿಷ್ಣುವೇ ದೇವತಾ ಆ (ಪ್ರತಿಪಾದ್ಯವಾ)ಗಿರುವ ಮಂತ್ರಗಳನ್ನು, ಪಾರ್ಥಾಯ–ಅರ್ಜುನನಿಗೆ ನೋದದೌ – ಕೊಟ್ಟಿರಲಿಲ್ಲ (ಬೇರೆಯವರು ರುದ್ರದೇವರು ಋಷಿಯಾಗಿರುವ ವಿಷ್ಣುದೇವತಾಕವಾದ ಮಂತ್ರಗಳನ್ನಷ್ಟೇ ಕೊಟ್ಟಿದ್ದರು) ಹೀಗಾಗಿ ಶ್ರೀರುದ್ರರಿಗೆ ಅರ್ಜುನನನ್ನು ಗೆಲ್ಲಲು ಶಕ್ಯವಾಯಿತು. ॥೧೪೦॥

ಏತಾವತಾಽಲಂ ಭೀಷ್ಮಾದೇರ್ಜಯಾರ್ಥಮಿತಿ ಚಿದ್ಘನಃ।
ಕೇವಲೈರ್ವೈಷ್ಣವೈರ್ಮಂತ್ರೈಃ ಸ್ವದತ್ತೈರ್ವಿಜಯಾವಹೈಃ ॥೧೪೧॥

ಅತಿವೃದ್ಧಸ್ಯ ಪಾರ್ಥಸ್ಯ ದರ್ಪ: ಸಾದಿತ್ಯಚಿಂತಯತ್ ।
ಪಾರ್ಥಸ್ಸಂಜ್ಞಾಂ ಮುವಾಪ್ಯಾಥ ಜಯಾರ್ಥ್ಯಾರಾಧಯಚ್ಛಿವಮ್ ॥೧೪೨॥

ವ್ಯಾಸೋದಿತೇನ ಮಂತ್ರೇಣ ತಾನಿ ಪುಷ್ಪಾಣಿ ತಚ್ಛಿರ: ।
ಆರುಹನ್ ಸತು ತಂ ಜ್ಞಾತ್ವಾ ರುದ್ರ ಇತ್ಯೇವ ಫಲ್ಗುನ: ॥೧೪೩॥

ನಮಶ್ಚಕ್ರೇ ತತಃಪ್ರಾದಾದಸ್ತ್ರಂ ಪಾಶುಪತಂ ಶಿವ: ।
ಅಸ್ತ್ರಂತದ್ವಿಷ್ಣುದೈವತ್ಯಂ ಸಾಧಿತಂ ಶಂಕರೇಣ ಯತ್ ॥೧೪೪॥

ತಸ್ಮಾತ್ ಪಾಶುಪತಂ ನಾಮ ಸ್ವಾನ್ಯಸ್ತ್ರಾಣ್ಯಪರೇ ಸುರಾ: ।
ದದುಸ್ತದೈವಪಾರ್ಥಾಯ ಸರ್ವೇ ಪ್ರತ್ಯಕ್ಷಗೋಚರಾ: ॥೧೪೫॥

ಚಿದ್ಭವಃ – ಜ್ಞಾನನಿಬಿಡ ಸ್ವರೂಪರಾದ ಶ್ರೀವ್ಯಾಸದೇವರು, ಭೀಷ್ಮಾದೇ: — ಭೀಷ್ಮಾದಿಗಳ ಮೇಲೆ, ಜಯಾರ್ಥಂ — (ಅರ್ಜುನನಿಗೆ) ಜಯಕ್ಕಾಗಿ, ಏತಾವತಾ ಅಲಂ — ಈ ವೈಷ್ಣವ (ಇತರ ಋಷಿಕವಾದ) ಮಂತ್ರಗಳೇ ಸಾಕು, ಇತಿ — ಎಂಬ ಅಭಿಪ್ರಾಯದಿಂದ ಕೇವಲ ವೈಷ್ಣವ ಮಂತ್ರಗಳನ್ನು ಕೊಟ್ಟರಲ್ಲಿ, ಅವತಾರಿಕೆ — ಅವುಗಳನ್ನು ಕೊಡದಿರಲು ಕಾರಣಾಂತರವನ್ನು ಹೇಳುತ್ತಿದ್ದಾರೆ. (ಒಂದು ವೇಳೆ ಆ ಮಂತ್ರಗಳನ್ನೂ ಕೂಡ ಕೊಟ್ಟರೆ). ಸ್ವದತ್ತೈ:— ತನ್ನಿಂದ ಕೊಡಲ್ಪಟ್ಟ, ವಿಜಯಾವಹೈ:—ವಿಜಯಪ್ರಾಪಕವಾದ, ಕೇವಲೈ:ವೈಷ್ಣವೈ ಮಂತ್ರೈ:— ಕೇವಲ ವೈಷ್ಣವ ಮಂತ್ರಗಳಿಂದ, ಅತಿವೃದ್ಧಸ್ಯ — ಅತ್ಯಂತ ಬಲವೃದ್ಧಿಯನ್ನು ಹೊಂದುವ, ಪಾರ್ಥಸ್ಯ — ಅರ್ಜುನನಿಗೆ, ದರ್ಪ:ಸ್ಯಾತ್ ಇತಿ — ಅಹಂಕಾರವು ಬಂದೀತು ಎಂದು, ಅಚಿಂತಯತ್ — ವಿಚಾರಿಸಿದ್ದರು. ಅದಕ್ಕೆ ಆ ಮಂತ್ರಗಳನ್ನು ಕೊಡಲಿಲ್ಲ. ಅಥ — ನಂತರ, ಪಾರ್ಥ:—ಅರ್ಜುನನು, ಸಂಜ್ಞಾಂ ಅವಾಪ್ಯ — ಎಚ್ಚರಿಕೆಯನ್ನು ಹೊಂದಿದನು, ಜಯಾರ್ಥೀಪನ್ — ಕಿರಾತರೂಪಿ ರುದ್ರ ದೇವರ ಮೇಲೆ ಜಯದ ಅಪೇಕ್ಷೆಯುಳ್ಳವನಾಗಿ, ವ್ಯಾಸೋದಿತೇನ ಮಂತ್ರೇಣ—ಶ್ರೀ ವ್ಯಾಸರಿಂದ ಹೇಳ-ಲ್ಪಟ್ಟಿದ್ದ ಮಂತ್ರದಿಂದ, ಶಿವಂ—ಆರಾಧಯತ್ — ರುದ್ರದೇವರನ್ನು ಆರಾಧಿಸಿ (ಪೂಜಿಸಿ) ದನು, ತಾನಿ ಪುಷ್ಪಾಣಿ — ಅರ್ಜುನನು ಲಿಂಗಕ್ಕೆ ಸಮರ್ಪಿಸಿದ ಆ ಪುಷ್ಪಗಳು, ತಚ್ಛಿರಃ — ಆ ಕಿರಾತರೂಪಿ ರುದ್ರದೇವರ ತಲೆಯನ್ನೇ, ಆರುಹನ್— ಏರಿದವು. ಸಃ ಫಲ್ಗುನ: ತು—ಆ ಅರ್ಜುನನಾದರೂ ಕೂಡ, ತಂ—ಆ ಕಿರಾತನನ್ನು, ರುದ್ರ: ಇತಿ ಏವ — ರುದ್ರ ದೇವರೆಂದೇ ಜ್ಞಾತ್ವಾ —ತಿಳಿದು, ನಮಶ್ಚಕ್ರೇ — ನಮಸ್ಕರಿಸಿದನು. ತತ: — ನಂತರ, ಶಿವ:—ರುದ್ರದೇವರು, ಪಾಶುಪತಂ ಅಸ್ತ್ರಂ — ಪಾಶುಪತಾಸ್ತ್ರವನ್ನು, ಪ್ರಾದಾತ್ — ಕೊಟ್ಟರು. ತತ್ ಅಸ್ತ್ರಂ—ಆ ಅಸ್ತ್ರವು ವಿಷ್ಣುದೈವತ್ಯಂ— ವಿಷ್ಣುದೇವತಾಕವಾದದ್ದೇ, (ಕಿಂತು — ಆದರೆ), ಯತ್ — ಯಾವಕಾರಣದಿಂದ, ಶಂಕರೇಣ—ಶ್ರೀರುದ್ರದೇವರಿಂದ, ಸಾಧಿತಂ — ದೃಷ್ಟವಾದದ್ದೋ, ತತ್ —ಆ ಕಾರಣದಿಂದ, ಪಾಶುಪತಂ ನಾಮ — ಪಾಶುಪತಾಸ್ತ್ರವೆಂಬ ಹೆಸರುಳ್ಳದ್ದು, ತದಾ ಏವ — —ರುದ್ರದೇವರು ಪಾಶುಪತಾಸ್ತ್ರವನ್ನು ಕೊಟ್ಟ ಸಮಯದಲ್ಲಿಯೇ, ಅಪರೇ ಸರ್ವೇಸುರಾಃ — ಉಳಿದ ಎಲ್ಲ ದೇವತೆಗಳು, ಪ್ರತ್ಯಕ್ಷಗೋಚರಾ:ಸಂತ:—ಪ್ರತ್ಯಕ್ಷ ಕಾಣಿಸಿಕೊಂಡವರಾಗಿಯೇ, ಪಾರ್ಥಾಯ - ಅರ್ಜುನನಿಗೆ, ಸ್ವಾನಿ ಅಸ್ತ್ರಾಣಿ — ತಮ್ಮ ತಮ್ಮ ಅಸ್ತ್ರಗಳನ್ನು, ದದುಃ — ಕೊಟ್ಟರು, ॥೧೪೦॥೧೪೨॥೧೪೩॥೧೪೪॥೧೪೫॥

ಭಾವಾನುವಾದ ೧೩೬—೧೪೫

ಭೀಷ್ಮದ್ರೋಣಾದಿಗಳನ್ನು ಗೆಲ್ಲಲು, ಅರ್ಜುನನಿಗೆ ಇಷ್ಟ ಮಂತ್ರಸಾಫಲ್ಯವೇ ಸಾಕು: ಇವನಿಗೆ ಇಷ್ಟು ಯೋಗ್ಯವು. ಇದಕ್ಕಿಂತ ಹೆಚ್ಚು ಆಗುವಂತೆ ಮಾಡಬಾರದು ಎಂದು ತಿಳಿದೇ, ಶ್ರೀ ವ್ಯಾಸದೇವರು ತಾವು

ಪ್ತತ ವ ಂತ್ರವನ್ನು ಕೇಳದಿಯೇ ಧರ್ಮರಾಜನ ದ್ವಾರಾ ಹೇಳಿಸಿದರು. ಸರ್ವಜ್ಞರಾದ ಶ್ರೀ ವ್ಯಾಸದೇವರು ಹೋದ ಮೇಲೆ ಧರ್ಮರಾಜನು ರಹಸ್ಯದಲ್ಲಿ ಅರ್ಜುನನಿಗೆ ಆ ಮಂತ್ರವನ್ನು ಉಪದೇಶಿಸಿದನು. ಅರ್ಜುನನು ಇಬ್ಬರೂ ಅಣ್ಣಂದಿರಿಗೆ ನಮಸ್ಕರಿಸಿ ಆ ಮಂತ್ರವನ್ನು ಪಡೆದು ತಮ್ಮಂದಿರಿಬ್ಬರನ್ನು ಪ್ರೀತಿಯಿಂದ ಅಪ್ಪಿಕೊಂಡು ಇಂದ್ರಕೀಲಪರ್ವತಕ್ಕೆ ಹೋಗಿ ರುದ್ರಾಂತರ್ಯಾಮಿ ಶ್ರೀಹರಿಯನ್ನು ಸ್ಮರಿಸುತ್ತಾ ತಪಸ್ಸನ್ನಾಚರಿಸಿದನು ಹೀಗೆ ಆರು ತಿಂಗಳು ಕಳೆದಿರುವಾಗ ಒಬ್ಬ ಮೂಕ ನೆಂಬ ಅಸುರನು ಹಂದಿಯ ರೂಪವನ್ನು ತಾಳಿ ಅರ್ಜುನನನ್ನು ಸಂಹರಿಸಲೆಂದು ಬಂದನು. ಅದನ್ನು ತಿಳಿದ ಅರ್ಜುನನು ಗಾಂಡೀವಧನುಸ್ಸಿನಿಂದ ಒಹುಬಾಣವನ್ನು ಆ ಹಂದಿಯ ಮೇಲೆ ಬಿಟ್ಟನು. ರುದ್ರದೇವರು ಕಿರಾತರಾಗಿ ಪತ್ನೀಸಮೇತರಾಗಿ ಆ ಹಂದಿಯನ್ನು ಬೆನ್ನಟ್ಟಿಕೊಂಡು ಬಂದು ಅದರ ಮೇಲೆ ಬಾಣಗಳನ್ನು ಪ್ರಯೋಗಿಸಿದರು ಅವರಿಬ್ಬರಿಂದ ಹೊಡೆಯಲ್ಪಟ್ಟ ಹಂದಿಯರೂಪನಾದ ಮೂಕಾಸುರನು ಸತ್ತನು. ಆಗ ರುದ್ರದೇವರು ಅರ್ಜುನನಿಗೆ ನಾನು ಬೆನ್ನಟ್ಟಿ ಹತ್ತಿ ಹೊಡೆಯುತ್ತಾ ಬೇಟೆಯಾಡುತ್ತ ಬಂದ ಹಂದಿಯನ್ನು ನೀನು ಹೊಡೆದಿರುವಿಯಾದ್ದರಿಂದ ನನ್ನ ಜೊತೆಗೆ ಯುದ್ಧಕ್ಕೆ ಬಾ ಎಂದು ಹೇಳಿದರು. ಅದನ್ನು ಕೇಳಿದ ಅರ್ಜುನನೂ ಬಾ, ಬಾ ನಿಲ್ಲು ಯುದ್ಧಕ್ಕೆ; ಇದರಲ್ಲಿ ನೀನು ಪಾರಾಗುವದಿಲ್ಲ ಎಂದು ಹೇಳಿ ಯುದ್ಧಕ್ಕೆ ನಿಂತನು. ಇಬ್ಬರೂ ಭಾರಿ ಯುದ್ಧಮಾಡಿದರು. ಅರ್ಜುನನು ಅನೇಕ ಅಸ್ತ್ರಗಳನ್ನು ಪ್ರಯೋಗಿಸಿದನು. ಅವೆಲ್ಲವನ್ನು ರುದ್ರದೇವರು ವ್ಯರ್ಥಮಾಡಿದರು. ಆಗ ಅರ್ಜುನನು ಗಾಂಡಿವ ಧನುಸ್ಸಿನಿಂದಲೇ ಹೊಡೆದನು; ಅದನ್ನು ನಗುತ್ತಾ ನುಂಗಿದನು ಆ ಕಿರಾತನು. ಆಗ ಇಬ್ಬರೂ ಬಾಹುಯುದ್ಧವನ್ನಾರಂಭಿಸಿದರು, ಅದರಲ್ಲಿ ರುದ್ರದೇವರು ಅರ್ಜುನನ ದೇಹವನ್ನು ಉಂಡೆಮಾಡಿ ದೂರಕ್ಕೆ ಬೀಸಾಡಿದರು ಭಾರಿ ನೋವನ್ನು ಹೊಂದಿ ಮೂರ್ಛಿತನಾದನು ಅರ್ಜುನನು. ಈ ಸಂದರ್ಭದಲ್ಲಿ – ಅರ್ಜುನನಿಗೆ ಶ್ರೀ ಹರಿಯು ಅಜೇಯತ್ವ ವರವು ಇರುವಾಗ(೧) ಶ್ರೀಕೃಷ್ಣನು ಸ್ವರ್ಗಲೋಕದ ನಂದನವನದಿಂದ ಪಾರಿಜಾತ ತರುವನ್ನು ತರುತ್ತಿರುವ ಸಂದರ್ಭದಲ್ಲಿ ಯುದ್ಧಮಾಡಿ ಸೋತ ಇಂದ್ರದೇವರು ತನ್ನ ಅವತಾರನಾದ ಅರ್ಜುನನ ರಕ್ಷಣೆಗಾಗಿ ಪ್ರಾರ್ಥಿಸಿದಾಗ "ಜಗಾದ ಕೃಷ್ಣೋಽಪಿ ಧರಾತಲಸ್ಥಿತೇ ನರಾಯ್ಯಮಂ ಕಶ್ಚನ ಜೇಷ್ಯತೀತಿ" ನಾನು ಭೂಮಿಯಲ್ಲಿರುವಾಗ ಅರ್ಜುನನನ್ನು ಯಾರೂ ಗೆಲ್ಲಲಾರರು' ಎಂದು ವರವನ್ನು ಇಂದ್ರದೇವರಿಗೆ ಅರ್ಜುನನ ಒಗ್ಗೆ ಕೊಟ್ಟಿರುವಾಗ,೨)ಅದರಂತೆ ಶ್ರೀವ್ಯಾಸದೇವರು ಧರ್ಮರಾಜನಿಗೆ ಮಂತ್ರವನ್ನು ಉಪದೇಶಿಸಿ ಈ ಮಂತ್ರವನ್ನು ನೀನು ಅರ್ಜುನನಿಗೆ ಹೇಳು. ಅದರಿಂದ ಅವನು ಎಲ್ಲರನ್ನು ಜಯಿಸುವನು; ಅಜೇಯನಾಗುವನು ಎಂಬ ವರವನ್ನಿತ್ತಿರುವಾಗ] ವ್ಯಾಸದೇವರು ಕೊಟ್ಟ ವೈಷ್ಣವ ಮಂತ್ರಗಳಿರುವಾಗ ರುದ್ರದೇವರು ಅರ್ಜುನನನ್ನು ಹೇಗೆ ಜಯಿಸಿದರು? ಎಂಬ ಪ್ರಶ್ನೆ ಬರುವದು. ಇದಕ್ಕೆ ಶ್ರೀಹರಿಪ್ರಿಯರಾದ, ಸರ್ವಜೀವನಿಕಾಯನಿಯಾಮಕರಾದ, ವಾಯುದೇವರ ಅವತಾರರಾದ ಶ್ರೀಮನ್ಮಧ್ವಭಗವತ್ಪಾದರು ಅಮೌಲ್ಯವಾದ ನಿರ್ಣಯವನ್ನು ಈ ರೀತಿ ಹೇಳುತ್ತಾರೆ – ಹಿಂದೆಯೇ ಶ್ರೀರುದ್ರದೇವರು ಶ್ರೀಹರಿಯ ಹತ್ತಿರ— ನನ್ನಕ್ಕಿಂತ ಬಲಭದ್ರರಿಗೆ ನೀನು ಅಜೇಯತ್ವ ವರವನ್ನು ಕೊಟ್ಟರೆ ಅವರು ನನಗೆ ಮಾತ್ರ ಸೋಲುವಂತೆ ವರವನ್ನು ನೀನು ನನಗೆ ನೀಡು ಎಂದು ಪ್ರಾರ್ಥಿಸಿದ ಪ್ರಕಾರ ಆ ರೀತಿಯ ವರವನ್ನು ದೇವರು ಶ್ರೀರುದ್ರದೇವರಿಗೆ ಕೊಟ್ಟಿದ್ದಾನೆ. ಇದರಿಂದಾಗಿಯೂ ಹಾಗೂ ಶ್ರೀ ವ್ಯಾಸದೇವರೂ ಕೂಡ ಅರ್ಜುನನಿಗೆ ಕೊಡಲಿಕ್ಕಾಗಿ ಧರ್ಮರಾಜನಿಗೆ ಹೇಳಿದ ವೈಷ್ಣವ ಮಂತ್ರಗಳು ಕೇವಲ ವೈಷ್ಣವ ಮಂತ್ರಗಳಲ್ಲ. ಕೇವಲ ವೈಷ್ಣವ ಮಂತ್ರಗಳೆಂದರೆ ಆ ಮಂತ್ರಗಳ ಋಷಿಯೂ, ದೇವತೆಯೂ ಶ್ರೀ ವಿಷ್ಣುವೇ ಆಗಿರುವನು. ಋಷಿಯು ಬೇರೆಯವರಾಗಿದ್ದು ದೇವತೆಯು ಮಾತ್ರ ಶ್ರೀ ವಿಷ್ಣುವೇ ಇರುವ ಮಂತ್ರಗಳು ವೈಷ್ಣವ ಮಂತ್ರಗಳು ಎಂದಿಷ್ಟೇ ಕರೆಯಿಸಿಕೊಳ್ಳುವವು ಮೊದಲಿನ ತರಹದ ಕೇವಲ ವೈಷ್ಣವ ಮಂತ್ರಗಳನ್ನು ಕೊಡದೆಯೇ ಎರಡನೆಯ ತರಹದ ವೈಷ್ಣವ ಮಂತ್ರಗಳನ್ನು ಕೊಟ್ಟಿದ್ದರು ಏಕೆಂದರೆ ಭೀಷ್ಮ ದ್ರೋಣಾದಿಗಳ ಮೇಲೆ ವಿಜಯ ಸಂಪಾದಿಸಲು ಈ ಮಂತ್ರಸಾಮರ್ಥ್ಯವೇ ಸಾಕು. ಇದಕ್ಕಿಂತ ಹೆಚ್ಚು ಶಕ್ತಿಯುಕ್ತವಾದ ಕೇವಲವೈಷ್ಣವ ಮಂತ್ರಗಳನ್ನು ಕೊಟ್ಟರೆ ಅವುಗಳಿಂದ ಹೆಚ್ಚು ಬಲಾಭಿವೃದ್ಧಿಯನ್ನು, ತತ್ಫಲಯುಕ್ತ ಜಯಾದಿ ಉತ್ಕರ್ಷಗಳ ಅಭಿವೃದ್ಧಿಯನ್ನು ಹೊಂದುವ ಅರ್ಜುನನು ಅಹಂಕಾರವನ್ನು ಹೊಂದುವನು, ಹಾಗಾಗದಿರಲಿ ಎಂದು ವಿಚಾರಿಸಿ ಆ ಕೇವಲ ವೈಷ್ಣವ ಮಂತ್ರಗಳನ್ನು ಕೊಟ್ಟಿರಲಿಲ್ಲ. ಅದರಿಂದಾಗಿಯೂ ರುದ್ರದೇವರು ಅರ್ಜುನನನ್ನು ಗೆಲ್ಲಲು ಶಕ್ತವಾಯಿತು ಎಂಬ ಈ ಪ್ರಕೃಷ್ಟ ನಿರ್ಣಯವನ್ನು ಶ್ರೀಮದಾಚಾರ್ಯರು ದಯಪಾಲಿಸಿದ್ದಾರೆ. ಮೂರ್ಛಿತನಾದ ಅರ್ಜುನನು ಎಚ್ಚರವಾದ ಮೇಲೆ ಆ ಕಿರಾತನನ್ನು ಗೆಲ್ಲಬೇಕೆಂಬ ಉದ್ದೇಶದಿಂದ ತನಗೆ ಉಪದಿಷ್ಟವಾದ ಮಂತ್ರ

ಳಿಂದ ಶ್ರೀ ರುದ್ರಾಂತರ್ಗತ ಶ್ರೀಹರಿಯನ್ನು ಪೂಜಿಸಲಾರಂಭಿಸಿದನು. ಆಗ ಅವನು ರುದ್ರಪ್ರತಿಪೆ ಲಿಂಗಕ್ಕೆ ಸಮರ್ಪಿಸಿದ ಪುಷ್ಪಗಳೆಲ್ಲ ಆ ಕಿರಾತನ ತಲೆಯಲ್ಲಿ ಬಂದು ಕೂಡುತ್ತಿದ್ದವು. ಅದನ್ನು ಕಂಡ ಅರ್ಜುನನು ಆ ಕಿರಾತನು ಶ್ರೀರುದ್ರ ದೇವರೆಂದೇ ತಿಳಿದು ಸಾಷ್ಟಾಂಗ ಪ್ರಣಾಮಮಾಡಿದನು. ಆಗ ಅವರು ಪಾಶುಪತಾಸ್ತ್ರ-ಅಂದರೆ ಶ್ರೀರುದ್ರದೇವರು ಋಷಿಯಾಗಿರುವ ಶ್ರೀವೈಷ್ಣವ ಮಂತ್ರವನ್ನು ಉಪದೇಶಿಸಿದರು. ಆಗ ಉಳಿದ ದೇವತೆಗಳೂ ಕೂಡ ಪ್ರತ್ಯಕ್ಷರಾಗಿ ತಮ್ಮ ತಮ್ಮ ಮಂತ್ರಗಳ ಪ್ರದಾನ ಮಾಡಿದರು.

ಇಂದ್ರೋಽರ್ಜುನಂ ಸಮಾಗಮ್ಯ ಪ್ರಾಹ ಪ್ರೀತೋಽಸ್ಮಿ ತೇಽನಘ ।
ರುದ್ರದೇಹಸ್ಥಿತಂ ಬ್ರಹ್ಮ ವಿಷ್ಣ್ವಾಖ್ಯಂ ತೋಷಿತಂ ತ್ವಯಾ ॥೧೪೬॥

ತೇನ ಲೋಕಂ ಮಮಾಗಚ್ಛ ಪ್ರೇಷಯಾಮಿ ರಥಂ ತವ ।
ಇತ್ಯುಕ್ತ್ವಾ ಪ್ರಯಯಾವಿಂದ್ರಸ್ತದ್ರಥೇನ ಚ ಮಾತಲಿಃ ॥೧೪೭॥

ಆಯಾತ್ಪಾರ್ಥಸ್ತಮಾರುಹ್ಯ ಯಯೌ ತಾತನಿವೇಶನಮ್ ।
ಪೂಜಿತೋ ದೈವತೈಸ್ಸರ್ವೈರಿಂದ್ರೇಣೈವ ನಿವೇಶಿತಃ ॥೧೪೮॥

ತೇನ ಸಾರ್ಧಮುಪಾಸೀದತ್ತಸ್ಮಿನ್ನೈಂದ್ರೇ ವರಾಸನೇ ॥೧೪೯॥

ಇಂದ್ರಃ - ಇಂದ್ರದೇವರು, ಅರ್ಜುನಂ ಸಮಾಗಮ್ಯ - ಅರ್ಜುನನ ಹತ್ತಿರಕ್ಕೆ ಬಂದು. ಹೇ ಅನಘ— ಎಲೋ ಪಾಪಕಾರ್ಯಗಳನ್ನು ಮಾಡದ ಅರ್ಜುನನೇ, ತ್ವಯಾ—ನಿನ್ನಿಂದ, ರುದ್ರದೇಹಸ್ಥಿತಂ - ಶ್ರೀರುದ್ರದೇವರ ದೇಹದಲ್ಲಿರುವ, ವಿಷ್ಣ್ವಾಖ್ಯಂ ಬ್ರಹ್ಮ - ಶ್ರೀವಿಷ್ಣು ಎಂಬ ದೇವರು, ತೋಷಿತಂ—ಸಂತೋಷಪಡಿಸಲ್ಪಟ್ಟಿದೆ. ತೇನ— ಆ ಕಾರಣದಿಂದ, (ಅಹಂ - ನಾನು); ತೇ—ನಿನ್ನ ಬಗ್ಗೆ, ಪ್ರೀತಃ ಅಸ್ಮಿ - ಸಂತುಷ್ಟನಾಗಿರುವೆನು, ತೇನ - ಆ ಕಾರಣದಿಂದ, ಮಮ ಲೋಕಂ—ನನ್ನ ಲೋಕವನ್ನು ಕುರಿತು. ಆಗಚ್ಛ—ಬಾ ತವ—ನಿನಗೆ, ರಥಂ ಪ್ರೇಷಯಾಮಿ—ನನ್ನ ರಥವನ್ನು ಕಳಿಸುವೆನು. ಇತಿ—ಎಂದು ಪ್ರಾಹ—ಹೇಳಿದರು. ಇತಿ ಉಕ್ತ್ವಾ - ಹೀಗೆ ಹೇಳಿ, ಇಂದ್ರಃ - ಇಂದ್ರದೇವರು. ಪ್ರಯಯೌ - ಹೋದರು, ಚ—ನಂತರ, ಮಾತಲಿಃ - ಇಂದ್ರನ ಸಾರಥಿಯಾದ ಮಾತಲಿಯು. ತದ್ರಥೇನ—ಆ ಇಂದ್ರನ ರಥದಿಂದ, ಆಯಾತ್ - ಬಂದನು. ಪಾರ್ಥಃ - ಅರ್ಜುನನು, ತಂ— ಮಾತಲಿ ತಂದ ಆ ರಥವನ್ನು, ಆರುಹ್ಯ - ಏರಿ, ತಾತನಿವೇಶನಂ - ತಂದೆಯ ಸ್ಥಳಕ್ಕೆ, ಯಯೌ— ಹೋದನು. (ತತ್ರ - ಅಲ್ಲಿ), ಸರ್ವೈಃ ದೈವತೈಃ - ಎಲ್ಲ ದೇವತೆಗಳಿಂದ, ಪೂಜಿತಃ - ಮರ್ಯಾದಿಸಲ್ಪಟ್ಟನು. ಇಂದ್ರೇಣ ಏವ— ಇಂದ್ರ ದೇವರಿಂದಲೇ, ಐಂದ್ರೇ ವರಾಸನೇ - ಇಂದ್ರದೇವರ ಶ್ರೇಷ್ಠವಾದ ಸಿಂಹಾಸನದಲ್ಲಿ, ನಿವೇಶಿತಃ - ಕೂಡಿಸಲ್ಪಟ್ಟನು. ತಸ್ಮಿನ್—ಆಸಿಂಹಾಸನದಲ್ಲಿ, ತೇನಸಾರ್ಧಂ — ಇಂದ್ರದೇವನಿಂದ ಕೂಡಿಕೊಂಡು, ಉಪಾಸೀದತ್— ಕುಳಿತನು. ॥೧೪೬॥೧೪೭॥೧೪೮॥೧೪೯॥

ಪ್ರೀತ್ಯಾ ಸಮಾಶ್ಲಿಷ್ಯ ಕುರುಪ್ರವೀರಂ ಶಕ್ರೋದ್ವಿತೀಯಾಂ ತನುಮಾತ್ಮನಸ್ಸ ।
ಈಕ್ಷನ್ ಮುಖಂ ತಸ್ಯ ಮುಮೋದ ಸೋಽಪಿಹ್ಯುವಾಸ ತಸ್ಮಿನ್ವತ್ಸರಾನ್ ಪಂಚಲೋಕೇ ॥೧೫೦॥

ಸಃಶಕ್ರಃ—ಆ ದೇವೇಂದ್ರನು, ಆತ್ಮನಃ - ತನ್ನ, ದ್ವಿತೀಯಾಂ ತನುಂ - ತನ್ನ ಎರಡನೆಯ ರೂಪನಾದ, ಕುರುಪ್ರವೀರಂ - ಕುರುಕುಲಶೇಷ್ಠನಾದ ಅರ್ಜುನನನ್ನು, ಪ್ರೀತ್ಯಾ - ಪ್ರೀತಿಯಿಂದ, ಸಮಾಶ್ಲಿಷ್ಯ-ಆಲಿಂಗಿಸಿಕೊಂಡು,

ತಸ್ಯ ಪಂಚಮಂ—ಅವನ ಪಂಚಮವನ್ನು. ಈಕ್ಷನ್ ಸನ್—ನೋಡುವವನಾಗಿ. ಪರಮೋದ ಸಂತೋಷ ಪಟ್ಟನು. ಸಃ ಅಪಿ—ಆ ಅರ್ಜುನನಾದರೂ, ತಸ್ಮಿನ್ ಲೋಕೇ—ಆ ಸ್ವರ್ಗಲೋಕದಲ್ಲಿ, ಪಂಚ ಪತ್ಸರಾನ್—ಐದು ವರ್ಷ ಗಳವರಗೆ, ಉವಾಸ ಹಿ – ವಾಸಿಸಿದನು. ॥೧೫೦॥

ಅಸ್ತ್ರಾಣಿ ತಸ್ಮಾ ಅದಿಶಚ್ಚ ವಾಸವೋ ಮಹಾಂತಿ ದಿವ್ಯಾನಿ ತದೋರ್ವಶೀ ತಮ್।
ಸಂಪ್ರಾಪ್ಯಭಾವೇನ ತು ಮಾನುಷೇಣ ಮಾತಾಕುಲಸ್ಯೇತಿ ನಿರಾಕೃತಾಽಭೂತ್ ॥೧೫೧॥

ವಾಸವಃ—ಇಂದ್ರದೇವರು, ತಸ್ಮೈ—ಆ ಅರ್ಜುನನಿಗೆ, ಮಹಾಂತಿ – ಬಹುಸಂಖ್ಯಾಕವಾದ, (ಶ್ರೇಷ್ಠ ವಾದ), ದಿವ್ಯಾನಿ – ದೇವತಾಲೋಕ ಸಂಬಂಧಿಯಾದ, ಅಸ್ತ್ರಾಣಿ ಚ—ಅಸ್ತ್ರಗಳನ್ನೂಕೂಡ, ಅದಿಶತ್ – ಕೊಟ್ಟರು, ತದಾ – ಆ ಲೋಕದಲ್ಲಿ ವಾಸವಾಡಿದಾಗ, ಊರ್ವಶೀ—ಊರ್ವಶೀ ಎಂಬ ಅಪ್ಸರೆಯು, ತಂ—ಆ ಅರ್ಜುನನನ್ನು, ಸಂಪ್ರಾಪ್ಯ—(ಅವನ ಜೊತೆಗೆ ಸಂಗಕ್ಕಾಗಿ) ಬಂದು, ಮಾನುಷೇಣಭಾವೇನ – ಅರ್ಜುನನು ಮನುಷ್ಯರೂಪನಾದ್ದರಿಂದ; ಮನುಷ್ಯ ಎಂಬ ದೃಷ್ಟಿಯಿಂದ, ಕುಲಸ್ಯ—ತನ್ನ ಕುಲದ, ಮಾತಾ ಇತಿ—ತಾಯಿ ಎಂಬ ಕಾರಣದಿಂದ, ನಿರಾಕೃತಾ ಅಭೂತ್—ನಿಷೇಧಿಸಲ್ಪಟ್ಟಳು. ॥೧೫೧॥

ಷಂಢೋ ಭವೇತ್ಯೇವ ತದಾಽಭಿಶಪ್ತೇ ಪಾರ್ಥೇ ಶಕ್ರೋಽನುಗ್ರಹಂ ತಸ್ಯ ಚಾದಾತ್।
ಸಂವತ್ಸರಂ ಷಂಢರೂಪೀ ಚರಸ್ವ ನ ಷಂಢತಾ ತೇ ಭವಿತೇತಿ ಧೃಷ್ಣುಃ ॥೧೫೨॥

ತದಾ – ಅರ್ಜುನನು ನಿರಾಕರಿಸಿದಾಗ, ತಯಾ—ಆ ಊರ್ವಶೀಯಿಂದ, ಪಾರ್ಥೇ—ಅರ್ಜುನನು, ಷಂಢಃ ಭವ ಇತಿ – ಷಂಢನಾಗು ಎಂದು. ಅಭಿಶಪ್ತೇಸತಿ – ಶಪಿಸಲ್ಪಡುತ್ತಿರಲು. ಧೃಷ್ಣುಃ ಶಕ್ರಃ—ಶತ್ರುಗಳಿಗೆ ಪೀಡೆಕೊಡಲು ಸಹಜಶಕ್ತಿಯುಳ್ಳ ಇಂದ್ರನು, ತಸ್ಯ – ಅರ್ಜುನನಿಗೆ. ಸಂವತ್ಸರಂ ಒಂದು ವರ್ಷ ಮಾತ್ರ ಷಂಢರೂಪೀಸನ್—ಷಂಢವೇಷವುಳ್ಳವನಾಗಿ, ಚರಸ್ವ—ಸಂಚರಿಸು, ತೇ—ನಿನಗೆ, ಷಂಢತಾ – ಷಂಢತನವು, ನ ಭವಿತಾ—ಇರುವದಿಲ್ಲ, ಇತಿ—ಎಂದು, ಅನುಗ್ರಹಂ—ಅನುಗ್ರಹವನ್ನು, ಆದಾತ್—ಮಾಡಿದನು (ಊರ್ವಶೀ ಶಾಪಪರಿಹಾರ ವಚನವನ್ನು ಹೇಳಿದನು ॥೧೫೨॥

ತತೋಽವಸತ್ಪಾಂಡವೇಯೋ ಗಾಂಧರ್ವಂ ವೇದಮುಭ್ಯಸನ್।
ಗಂಧರ್ವಾಚ್ಚಿತ್ರಸೇನಾತ್ತು ತಥಾಽಸ್ತ್ರಾಣಿ ಸುರೇಶ್ವರಾತ್ ॥೧೫೩॥

ತತಃ - ಅನಂತರ, ಪಾಂಡವೇಯಃ—ಅರ್ಜುನನು; ಚಿತ್ರಸೇನಾತ್ ಗಂಧರ್ವಾತ್ – ಚಿತ್ರಸೇನ ಎಂಬ ಗಂಧರ್ವನಿಂದ, ಗಾಂಧರ್ವಂ ವೇದಂ—ಗಾಂಧರ್ವ ವೇದವನ್ನು, ತಥಾ—ಮತ್ತು ಸುರೇಶ್ವರಾತ್—ದೇವೇಂದ್ರನಿಂದ, ಅಸ್ತ್ರಾಣಿ—ಅಸ್ತ್ರಗಳನ್ನು, ಅಭ್ಯಸನ್ – ಅಭ್ಯಸಿಸುತ್ತಾ, ಅವಸತ್ – ವಾಸವಾಡಿದನು. ॥೧೫೩॥

ಭಾವಾನುವಾದ ೧೪೬—೧೫೩

ಇಂದ್ರದೇವರು ಅರ್ಜುನನ ಹತ್ತಿರ ಬಂದು ನೀನು ರುದ್ರಾಂತರ್ಯಾಮಿಯಾದ ಶ್ರೀಹರಿಯನ್ನು ತಪಸ್ಸಿನಿಂದ ಸಂತೋಷಪಡಿಸಿದ್ದರಿಂದ ನನಗೆ ತುಂಬಾ ಸಂತೋಷವಾಗಿದೆ. ಆದ್ದರಿಂದ ನನ್ನ ಲೋಕವನ್ನು ಕರಿತು ಬಾ;

ಬರಲಂ ನಿನಗೆ ನನ್ನ ರಥವನ್ನು ಕಳಿಸುತ್ತೇನೆ ಎಂದಂ ಹೇಳಿ ಹೊರಟನು. ನಂತರ ಇಂದ್ರ ಸಾರಥಿ ಮಾತಲಿಯಂ ಇಂದ್ರನ ರಥವನ್ನು ತೆಗೆದುಂಕೊಂಡಂ ಬಂದನಂ ಅದರಲ್ಲಿ. ಕಳಿತು ಸ್ವರ್ಗಲೋಕದ ಇಂದ್ರಗೃಹಕ್ಕೆ ಅರ್ಜುನನಂ ತರಳಿದನು. ಅಲ್ಲಿ ಎಲ್ಲ ದೇವತೆಗಳೂ ಗೌರವಿಸಿದರಂ; ಇಂದ್ರನೂ ತನ್ನ ಸಿಂಹಾಸನದಲ್ಲಿ ತನ್ನ ಜೊತೆಗೆ ಕೂಡಿಸಿಕೊಂಡನಂ; ಆಲಿಂಗಿಸಿದನು; ಅರ್ಜುನನನ್ನು ನೋಡುತ್ತಾ ಸಂತಸವನ್ನು ಹೊಂದಿದನಂ. ಈ ರೀತಿ ಆದೃತನಾಗಿ ಐದಂ ವರ್ಷಗಳವರೆಗೆ ಅರ್ಜುನನಂ ಅಲ್ಲಿ ಇದ್ದನಂ. ಇಂದ್ರದೇವರಂ ಆ ಸಮಯದಲ್ಲಿ ದಿವ್ಯವಾದ ಅಸ್ತ್ರಗಳನ್ನು ಉಪದೇಶಿಸಿದರು. ಒಂದಂ ದಿನ ಸ್ವರ್ಗಲೋಕದ ಅಪ್ಸರೆಯರಾದ, ದಿವ್ಯಸುಂದರಿಯರಾದ ಊರ್ವಶಿಯಂ ಅರ್ಜುನನ ಸಂಗವನ್ನು ಅಪೇಕ್ಷಿಸಿ ಬಂದಳಂ. ಆದರೆ ಅರ್ಜುನನಂ ತಾನು ಇಂದ್ರಾಂಶ ಎಂಬ ದೃಷ್ಟಿಯಿಂದ ಅವಳ ಸಂಗವಮಾಡಲಂ ಅರ್ಹನಾಗಿದ್ದರೂ, ತಾನು ಮನುಷ್ಯನಾಗಿ ಭರತಕುಲದಲ್ಲಿ ಅವತರಿಸಿದವನಂ ಎಂಬ ದೃಷ್ಟಿಯಿಂದ ಅವಳಂ ತಮ್ಮ ಕುಲದ ಮೂಲಪುರುಷ ಪುರೂರವ ರಾಜನ ಪತ್ನಿಯಾದ್ದರಿಂದ, ಪೂರುರವನ ಮಗನ ಮಗನ ಸಂತತಿಯಲ್ಲಿ ತಾನಂ ಹುಟ್ಟಿದ್ದರಿಂದ ತನ್ನ ಕುಲಕ್ಕೆ ತಾಯಿ ಎಂಬ ದೃಷ್ಟಿಯಿಂದ ನಿಷೇಧಿಸಿದನು ಇದರಿಂದ ಬೇಸರಗೊಂಡ ಊರ್ವಶಿಯಂ ನೀನಂ 'ಷಂಢನಾಗು' ಎಂಬ ಶಾಪವನ್ನು ಕೊಟ್ಟಳಂ. ಆದರೆ ಇವನ ಧರ್ಮ ದೃಷ್ಟಿಯಿಂದ ಸಂತುಷ್ಟರಾದ ಇಂದ್ರದೇವರಂ ನಿನಗೆ ಷಂಢತ್ವವು ಬರುವವರಿಗೆ ಬೇಡ. ಒಂದು ವರ್ಷ ಷಂಢರೂಪದಲ್ಲಿ ಸಂಚರಿಸುವಂತಾಗಲಿ ಎಂದಂ ಆ ಊರ್ವಶಿ ಶಾಪಕ್ಕೆ ತಿದ್ದುಪಡಿ ಮಾಡಿ, ಶಾಪಕ್ಕೆ ಪರಿಹಾರವಚನವನ್ನು ಹೇಳಿದರು. ಆ ನಂತರ ಅರ್ಜುನನಂ ಚಿತ್ರಸೇನ ಗಂಧರ್ವನಿಂದ ಗಂಧರ್ವವೇದವನ್ನು ಅಭ್ಯಾಸ ಮಾಡುತ್ತಾ, ದೇವೇಂದ್ರನಿಂದ ಅಸ್ತ್ರಗಳನ್ನು ಸಂಪಾದಿಸುತ್ತಾ ಇದ್ದನಂ.

ಅವತಾರಿಕೆಃ - ಇದೇ ಸಮಯದಲ್ಲಿ ನಡೆದಿರುವ ಶ್ರೀಕೃಷ್ಣಚರಿತೆಯನ್ನು ಮುಂದಿನ ಶ್ಲೋಕಗಳಲ್ಲಿ ಹೇಳುತ್ತಾರೆ.

ಸುಭದ್ರಯಾಽಭಿಮನ್ಯುನಾ ಸಹ ಸ್ವಕಾಂ ಪುರೀಂ ಗತಃ ।
ಜನಾರ್ದನೋಽತ್ರ ಸಂವಸನ್ ಕದಾಚಿದಿತ್ಥಮೈಕ್ಷತ ॥೧೫೪॥

ಸುಭದ್ರಯಾ ಚ ಅಭಿಮನ್ಯುನಾ ಸಹ — ಸುಭದ್ರೆ ಮತ್ತು ಅಭಿಮನ್ಯುವಿನಿಂದ ಕೂಡಿಕೊಂಡಂ, ಸ್ವಕಾಂ ಪುರೀಂ ಗತಃ — ತನ್ನ ದ್ವಾರಕಾ ಪಟ್ಟಣಕ್ಕೆ, ಗತಃ — ಹೋದಂಥ, ಜನಾರ್ದನಃ — ಶ್ರೀಕೃಷ್ಣನಂ, ಅತ್ರ — ಈ ದ್ವಾರಕೆಯಲ್ಲಿ ಸಂವಸನ್ — ವಾಸಿಸುವವನಾಗಿ ಕದಾಚಿತ್ — ಏಮ್ಮೆ, ಇತ್ಥಂ — ಈ ರೀತಿಂದ ಹೇಳಲಾಗುವ ರೀತಿಯಲ್ಲಿ, ಐಕ್ಷತ — ವಿಚಾರಿಸಿದನು. ॥೧೫೪॥

ಮಯಾ ವರೋ ಹಿ ಶಂಭವೇ ಪ್ರದತ್ತ ಆಸ ಪೂರ್ವತಃ।
ವರಂ ಗೃಹೀಷ್ಯ ಏವ ತೇ ಸಕಾಶತೋ ವಿಮೋಹಯನ್ ॥೧೫೫॥

ಹೇ ಶಂಭೋ — ಎಲೋ ರುದ್ರದೇವನೇ, (ಅಹಂ — ನಾನು) (ಜನಾನ್ — ದುಷ್ಟಜನರನ್ನು,) ವಿಮೋಹಯನ್ — ಮೋಹಗೊಳಿಸುವವನಾಗಿ, ತೇ ಸಕಾಶತಃ ಏವ — ನಿನ್ನ ದೆಶೆಯಿಂದಲೇ, ವರಂ ಗೃಹೀಷ್ಯೇ — ವರವನ್ನು ತೆಗೆದುಕೊಳ್ಳುವೆನಂ, ಇತಿ — ಎಂಬ, ವರಃ — ವರವು, ಮಯಾ - ನನ್ನಿಂದ, ಪೂರ್ವತಃ — ಹಿಂದೆಯೇ, ಶಂಭವೇ - ರುದ್ರದೇವನಿಗೆ, ಪ್ರದತ್ತಃ ಆಸ ಹಿ — ಕೊಡಲ್ಪಟ್ಟಿರುತ್ತದೆ. ॥೧೫೫॥

ಅವತಾರಿಕೆಃ - ಈ ವರಕೊಟ್ಟ ವಿಷಯವನ್ನು ಪುರಾಣಗಳಲ್ಲಿ ಹೇಳಿದೆ. ಆ ಪುರಾಣ ವಾಕ್ಯವನ್ನೇ ಉದಾಹರಿಸುತ್ತಿದ್ದಾರೆ.

ತ್ವಾಮಾರಾಧ್ಯ ತಥಾ ಶಂಭೋ ಗ್ರಹೀಷ್ಯಾಮಿ ವರಂ ಸದಾ ।
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ॥೧೫೬॥

ಸ್ವಾಗಮೈಃ ಕಲ್ಪಿತೈಸ್ತಂಚ ಜನಾನ್ಮದ್ವಿಮುಖಾನ್ಕುರು।
ಮಾಂ ಚ ಗೋಪಯ ಯೇನ ಸ್ಯಾತ್ಸೃಷ್ಟಿರೇಷೋತ್ತರಾऽಧರಾ ॥೧೫೭॥

ಶಂಭೋ – ರುದ್ರದೇವನೇ, ದ್ವಾಪರಾದೌ ಯುಗೇ – ದ್ವಾಪರಯುಗವೇ ಮೊದಲಾದ ಯುಗದಲ್ಲಿ, ಕಲಯಾ – ಅಂಶದಿಂದ, ಮಾನುಷಾದಿಷು – ಮನುಷ್ಯ ಮೊದಲಾದ ರೂಪದಲ್ಲಿ, ಭೂತ್ವಾ – ಅವತರಿಸಿ. ಸದಾ— ನಿಯವಿ ತವಾಗಿ, ತ್ವಾಂ ಆರಾಧ್ಯ— ನಿನ್ನನ್ನು ಆರಾಧಿಸಿ, ವರಂ – ವರವನ್ನು, ಗೃಹೀಷ್ಯಾಮಿ – ತೆಗೆದುಕೊಳ್ಳುತ್ತೇನೆ. ತ್ವಂ ಚ–ನೀನಾದರೂ ಕಲ್ಪಿತೈಃ (ನಿನ್ನಿಂದಲೇ) ರಚಿಸಲ್ಪಟ್ಟ, ಸ್ವಾಗಮೈಃ—ನಿನ್ನ ಶಾಸ್ತ್ರಗಳಿಂದ. ಜನಾನ್-ದುಷ್ಟ ಜನರನ್ನು, ಮದ್ವಿಮುಖಾನ್ – ನನ್ನಿಂದ ವಿಮುಖರನ್ನಾಗಿ ಕುರು— ಮಾಡು, ಚ– ಹಾಗೂ ಮಾಂ— ನನ್ನನ್ನು, ಗೋಪಯ-ಮರೆಮಾಚಿಡು (ಆಚ್ಛಾದಿಸು) ಯೇನ-ಯಾವ ಆ ನನ್ನಿಂದ ವಿಮುಖರಾಗುವ ಕಾರ್ಯದಿಂದ, ಉತ್ತರಾ— ಊರ್ಧ್ವಲೋಕಗಮನ ಮಾಡಿಯಾದ ಏಷಾ ಸೃಷ್ಟಿ:— ಈ ಅಸುರಜನ ಸೃಷ್ಟಿಯು, ಅಧರಾ ಸ್ಯಾತ್— ಅಧೋಲೋಕ ಮುಖಿಯಾಗುವಂತೆ, (ಹಾಗೆ ವಿಮುಖರನ್ನಾಗಿಮಾಡು) ॥೧೫೬॥೧೫೭॥

ಇತಿವಾಕ್ಯಮೃತಂ ಕರ್ತುಮಭಿಪ್ರಾಯಂ ವಿಜಜ್ಞುಷೀ।
ಪ್ರೀತ್ಯರ್ಥಂ ವಾಸುದೇವಸ್ಯ ರುಕ್ಮಿಣೀವಾಕ್ಯಮಬ್ರವೀತ್ ॥೧೫೮॥

ಇತಿ – ಈ ರೀತಿಯಾದ, ವಾಕ್ಯಂ – ಭಗವಂತನ ವಚನವನ್ನು, ಋತಂ ಕರ್ತುಂ–ಸತ್ಯವನ್ನಾಗಿ ಮಾಡಲು, ಅಭಿಪ್ರಾಯಂ—ಭಗವಂತನ ಅಭಿಪ್ರಾಯವನ್ನು, ವಿಜಜ್ಞುಷೀ - ತಿಳಿದಂಥ, ರುಕ್ಮಿಣೀ— ಶ್ರೀ ರುಕ್ಮಿಣದೇವಿಯು, ವಾಸುದೇವಸ್ಯ ಪ್ರೀತ್ಯರ್ಥಂ - ಭಗವಂತನ ಪ್ರೀತಿಗಾಗಿ, ವಾಕ್ಯಂ - ಮುಂದೆ ಹೇಳುವ ಮಾತನ್ನು, ಅಬ್ರವೀತ್ ಹೇಳಿದಳು. ॥೧೫೮॥

ಜಾತೇऽಪಿ ಪುತ್ರೇ ಪುತ್ರಾರ್ಥಂ ಸಾ ಹಿ ವೇದ ಮನೋಗತಮ್ ।
ಪುತ್ರೋ ಮೇ ಬಲವಾನ್ ದೇವ ಸ್ಯಾತ್ಸರ್ವಾಸ್ತ್ರವಿದುತ್ತಮಃ ॥೧೫೯॥

ಹಿ—ಯಾವ ಕಾರಣದಿಂದ, ಸಾ - ಆ ರುಕ್ಮಿಣೀದೇವಿಯು, ಪುತ್ರೇಜಾತೇ (ಸತಿ) ಅಪಿ – ಮಗನು ಹುಟ್ಟಿದ್ದರೂ ಕೂಡ ಪುತ್ರಾರ್ಥಂ – ಮಗನು ಆಗುವದಕ್ಕಾಗಿ ರುದ್ರನಿಂದ ವರವನ್ನು ತೆಗೆದುಕೊಂಡಂತೆ ಮಾಡಬೇಕು. ಅದಕ್ಕಾಗಿ ರುಕ್ಮಿಣಿಯು ತನ್ನನ್ನು ಮಗನಿಗಾಗಿ ಕೇಳಬೇಕು ಎಂದು) ಮನೋಗತಂ – ಶ್ರೀ ಕೃಷ್ಣಪರಮಾತ್ಮನ ಮನಸ್ಸಿನಲ್ಲಿ ರುವದನ್ನು, ವೇದ-ತಿಳಿದಿರುವಳೋ, ಅತ: – ಆದ್ದರಿಂದ; ದೇವ – ಪತಿ ದೇವನಾದ, ಸರ್ವದೇವನಾದ ಶ್ರೀಕೃಷ್ಣನೇ, ಮೇ – ನನಗೆ, ಸರ್ವಾಸ್ತ್ರವಿತ್ – ಎಲ್ಲ ಆಸ್ತ್ರಗಳನ್ನು ತಿಳಿದಿರುವ, ಬಲವಾನ್—ಬಲಿಷ್ಠನಾದ, ಉತ್ತಮ: – ಉತ್ತಮನಾದ, ಪುತ್ರ: – ಮಗನು, ಸ್ಯಾತ್ – ಆಗಬೇಕು. (ಎಂದು ಹೇಳಿದಳು). ॥೧೫೯॥

ಇತ್ಯುಕ್ತೋ ಭಗವಾನ್ದೇವ್ಯಾ ಸಮ್ಮೋಹಾಯ ಸುರದ್ವಿಷಾಮ್ ।
ಯಯೌ ಸುಪರ್ಣಮಾರುಹ್ಯ ಸ್ವೀಯಂ ಬದರಿಕಾಶ್ರಮಮ್ ॥೧೬೦॥

ದೇವ್ಯಾ – ಶ್ರೀರುಕ್ಮಿಣೀದೇವಿಯಿಂದ, ಇತಿ ಉಕ್ತಃ – ಈ ರೀತಿ ಪ್ರಾರ್ಥಿಸಲ್ಪಟ್ಟ, ಭಗವಾನ್ – ಶ್ರೀಕೃಷ್ಣ ಪರಮಾತ್ಮನು, ಸುರದ್ವಿಷಾಂ ಸಮ್ಮೋಹಾಯ— ದೈತ್ಯರ ಮೋಹನಕ್ಕಾಗಿ, ಸ್ವೀಯಂ ಸುಪರ್ಣಂ ಆರುಹ್ಯ – ತನ್ನ, ವಾಹನವಾದ ಗರುಡನನ್ನು ಏರಿ, ಬದರಿಕಾಶ್ರಮಂ ಯಯೌ – ಬದರಿಕಾಶ್ರಮಕ್ಕೆ ಹೋದನು. ॥೧೬೦॥

ಅವತಾರಿಕೆಃ - ಅಸುರಮೋಹನಕ್ಕಾಗಿ ಬದರಿಕಾಶ್ರಮಕ್ಕೆ ರುದ್ರನತಪಸ್ಸಿಗಾಗಿ ಎಂಬಂತೆ ಹೋದದ್ದಾ ಎಂಬುದಕ್ಕೆ ಪುರಾಣವಾಕ್ಯವನ್ನೇ ಆಧಾರವಾಗಿ ಉದಾಹರಿಸುತ್ತಾ ಇದ್ದಾರೆ. ಇದು ರುದ್ರದೇವರನ್ನು ಕುರಿತು ದೇವರು ಹೇಳಿದ ಮಾತು.

ಏಷ ಮೋಹಂ ಸೃಜಾಮ್ಯಾಶು ಯೋ ಜನಾನ್ಮೋಹಯಿಷ್ಯತಿ ।
ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿಕಾರಯ ॥೧೬೧॥

ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ।
ಪ್ರಕಾಶಂ ಕುರು ಚಾತ್ಮಾನಮ್ ಪ್ರಕಾಶಂ ಚ ಮಾಂ ಕುರು ॥೧೬೨॥

ಮಹಾಬಾಹೋ, ರುದ್ರ – ಎಲೋ ಸಮರ್ಥನಾದ ರುದ್ರನೇ, ಏಷಃ – ಇಚ್ಛಾಸ್ವರೂಪನಾದ, (ಅಹಂ) ನಾನು, ಯಃ: ಯಾವದು, ಜನಾನ್ – ದುರ್ಜನರನ್ನು, ಮೋಹಯಿಷ್ಯತಿ – ಮೋಹಗೊಳಿಸುವದೋ, ತಂ – ಅಂಥ, ಮೋಹಂ - ಒಳಗಿನ ಮಾಯೆಯನ್ನು, ಆಶು ಸೃಜಾಮಿ - ಬೇಗನೇ ಸೃಷ್ಟಿಸುತ್ತೇನೆ. ತ್ವಂ ಚ – ನೀನಾದರೂ, ಮೋಹಶಾಸ್ತ್ರಾಣಿ ಮೋಹಗೊಳಿಸಲು ಬೇಕಾದ ಹೊರಗಿನ ಸಾಮಗ್ರಿಯಾದ ಶಾಸ್ತ್ರಗಳನ್ನು, ಕಾರಯ – ಮಾಡು (ಇತರರಿಂದಮಾಡಿಸು) ಮಹಾಭುಜ – ಮಹಾಬಾಹು ಸಮರ್ಥನಾದ ರುದ್ರನೇ ಅತಥ್ಯಾನಿ – ನಿಷ್ಫಲವಾದ, ಎಲ್ಲೂ ಯಾವ ಪ್ರಮಾಣದಲ್ಲಿ ಇಲ್ಲದಿರುವ ವಿಷಯಂಗಳನ್ನು, ಜಟಾರುದ್ರಾಕ್ಷಭಸ್ಮಧಾರಣಾದಿಗಳನ್ನು ಚ – ಮತ್ತು, ವಿತಥ್ಯಾನಿ- ನಿನ್ನಲ್ಲಿ ಇಲ್ಲದಿರುವ ನನ್ನಲ್ಲಿರುವ ಸರ್ವೋತ್ತಮತ್ವ ಸ್ವಾತಂತ್ರ್ಯಾದಿಗಳನ್ನು, (ನಿನ್ನಲ್ಲಿ) ದರ್ಶಯಸ್ವ – ತೋರಿಸು, ಆತ್ಮಾನಂ- ನಿನ್ನನ್ನು, ಪ್ರಕಾಶಂ ಕುರು – ಪ್ರಸಿದ್ಧನನ್ನಾಗಿ ಮಾಡಿಕೊ, ಮಾಂ – ನನ್ನನ್ನು, ಅಪ್ರಕಾಶಂ ಕುರು- ಅಪ್ರಕಾಶ ಅಪ್ರಸಿದ್ಧನನ್ನಾಗಿಮಾಡು. ॥೧೬೧॥೧೬೨॥

ಅಹಂ ತ್ವಾಂ ಪೂಜಯಿಷ್ಯಾಮಿ ಲೋಕಸಮ್ಮೋಹನೋತ್ಸುಕಃ ।
ತಮೋಽಸುರಾ ನಾನ್ಯಥಾ ಹಿ ಯಾಂತೀ ತ್ಯೇತನ್ಮತಂ ಮಮ ॥೧೬೩॥

ಲೋಕಸಮ್ಮೋಹನೋತ್ಸುಕಃ ಅಹಂ – ದುಷ್ಟರನ್ನು ಮೋಹಗೊಳಿಸಬೇಕೆಂಬ ಉದ್ದೇಶ ಉತ್ಸಾಹಗಳುಳ್ಳ ನಾನು, ತ್ವಾಂ – ನಿನ್ನನ್ನು, ಪೂಜಯಿಷ್ಯಾಮಿ – ಪೂಜಿಸುತ್ತೇನೆ. ಅನ್ಯಥಾ – ಹೀಗೆ ನಾನು ಮಾಡದಿದ್ದರೆ, ನೀನು ಮೋಹಶಾಸ್ತ್ರರಚಿಸದಿದ್ದರೆ ಆ ದುಷ್ಟರು ಮೋಹಗೊಳ್ಳದಿದ್ದರೆ, ಅಸುರಾಃ - ಆಸುರೀ ಸ್ವಭಾವದ ದುಷ್ಟರು, ತಮಃ:- ತಮಸ್ಸಿಗೆ, ನ ಯಾಂತಿ – ಹೋಗುವದಿಲ್ಲ, ಇತಿ ಏತತ್ – ಎಂಬುದು. ಮಮ ಮತಂ – ನನ್ನ ಅಭಿಪ್ರಾಯವು. ॥೧೬೩॥

ಇತ್ಯುಕ್ತಂ ವಚನಂ ಪೂರ್ವಂ ಕೇಶವೇನ ಶಿವಾಯ ಯತ್ ।
ತತ್ಸತ್ಯಂ ಕರ್ತುಮಾಯಾಂತಂ ಕೃಷ್ಣಂ ಬದರಿಕಾಶ್ರಮಮ್ ॥೧೬೪॥

ಸರ್ವಜ್ಞಾ ಮುನಯಸ್ಸರ್ವೇ ಪೂಜಯಾಂಚಕ್ರಿರೇ ಪ್ರಭುಮ್ ॥೧೬೫॥

ಇತಿ – ಈ ರೀತಿಯಾಗಿ, ಯತ್ ವಚನಂ – ಯಾವ ಮಾತು, ಕೇಶವೇನ—ಭಗವಂತನಿಂದ, ಶಿವಾಯ- ರುದ್ರದೇವರಿಗೆ, ಉಕ್ತಂ – ಹೇಳಲ್ಪಟ್ಟಿತ್ತೋ, ತತ್ – ಅದನ್ನು ಸತ್ಯಂಕರ್ತುಂ—ಸತ್ಯವನ್ನಾಗಿ ಮಾಡಲು, ಬದರಿಕಾಶ್ರಮಂ-

ಬದರಿಕಾಶ್ರಮಕ್ಕೆ, ಅಯಾಂತಂ - ಬಂದಂಥ, ಪ್ರಭುಂ ಕೃಷ್ಣಂ—ಸ್ವಾಮಿಯಾದ ಶ್ರೀಕೃಷ್ಣನನ್ನು ಸರ್ವಜ್ಞಾ ಸರ್ವೇ ಮುನಯಃ—ಸರ್ವಜ್ಞರಾದ ಎಲ್ಲ ಮುನಿಗಳು, ಪೂಜಯಾಂಚಕ್ರಿರೇ – ಪೂಜಿಸಿದರು. ॥೧೬೪॥೧೬೫॥

ರಾತ್ರೌ ಕೃಷ್ಣೇ ಮುನಿಮಧ್ಯೇ ನಿವಿಷ್ಟೇ ಘಂಟಾಕರ್ಣ: ಕರ್ಣನಾಮಾ ಪಿಶಾಚೌ ।
ಸಮಾಯಾತಾಂ ಗಿರಿಶೇನ ಪ್ರದಿಷ್ಟೌ ಕೃಷ್ಣಂ ದ್ರಷ್ಟುಂ ದ್ವಾರಕಾಂ ಗಂತುಕಾಮೌ ॥೧೬೬॥

ರಾತ್ರೌ—ರಾತ್ರಿಯಲ್ಲಿ, ಕೃಷ್ಣೇ- ಶ್ರೀಕೃಷ್ಣರು, ಮುನಿಮಧ್ಯೇ-ಋಷಿಗಳ ನಡುವೆ, ನಿವಿಷ್ಟೇಸತಿ—ಸೇರಿರುತ್ತಿರಲು, ಗಿರಿಶೇನ – ರುದ್ರದೇವರಿಂದ ಪ್ರದಿಷ್ಟೌ – ಆಜ್ಞಾಪ್ತರಾದ (ನೀವು ಶ್ರೀಕೃಷ್ಣದರ್ಶನ ಮಾಡಿರಿ, ಅದರಿಂದ ಪಿಶಾಚಜನ್ಮದಿಂದ ಬಿಡುಗಡೆಹೊಂದುವಿರಿ ಎಂದು ಹೇಳಲ್ಪಟ್ಟ) ಘಂಟಾಕರ್ಣಃ – ಕರ್ಣನಾಮಾ ಪಿಶಾಚಿ—ಘಂಟಾಕರ್ಣ ಹಾಗು ಕರ್ಣ ಎಂಬ ಹೆಸರಿನ ಪಿಶಾಚಿಗಳು, ಕೃಷ್ಣಂದ್ರಷ್ಟುಂ - ಶ್ರೀಕೃಷ್ಣನನ್ನು ನೋಡಲು, ದ್ವಾರಕಾಂ ಗಂತುಕಾಮೌ ಸಂತೌ—ದ್ವಾರಕಾಕ್ಕೆ ಹೋಗುವ ಇಚ್ಛೆಯುಳ್ಳವರಾಗಿ, ಸಮಾಯಾತಾಂ – (ಬದರಿಗೆ) ಬಂದರು. ॥೧೬೬॥

ತೌ ದೃಷ್ಟ್ವಾ ಮುನಿಮಧ್ಯಸ್ಥಂ ಕೇಶವಂ ತದಬೋಧತ: ।
ಕೃತ್ವಾ ಸ್ವಜಾತಿಚೇಷ್ಟಾಶ್ಚ ಧ್ಯಾನೇನೈನಮುಪಶ್ಯತಾಮ್ ॥೧೬೭॥

ತೌ – ಆ ಕರ್ಣ ಹಾಗು ಘಂಟಾಕರ್ಣ ಎಂಬ ಪಿಶಾಚಿಗಳು ಮುನಿಮಧ್ಯಸ್ಥಂ – ಮುನಿಗಳ ನಡುವೆ ಇರುವ, ಕೇಶವಂ—ಶ್ರೀಕೃಷ್ಣಪರಮಾತ್ಮನನ್ನು ದೃಷ್ಟ್ವಾ – ನೋಡಿ, ತದಬೋಧತ: - ಅವನು ದೇವರು ಕೃಷ್ಣ ಎಂಬ ಜ್ಞಾನವಿಲ್ಲದೇ ಇರುವದರಿಂದ, ಸ್ವಜಾತಿ ಚೇಷ್ಟಾಃ ಚ ತಮ್ಮ ಪಿಶಾಚಿ ಜಾತಿಗೆ ಯೋಗ್ಯವಾದ ಕುಕಾರ್ಯಗಳನ್ನು ಕೂಡ, ಕೃತ್ವಾ – ಮಾಡಿ, ಧ್ಯಾನೇನ - ಧ್ಯಾನದೃಷ್ಟಿಯಿಂದ, ಏನಂ – ಈ ಶ್ರೀಕೃಷ್ಣನನ್ನೇ, ಉಪಶ್ಯತಾಮ್ ಕಂಡರು ॥೧೬೭॥

ದೃಷ್ಟ್ವಾ ಹೃದಿ ಸ್ಥಿತಂ ತಂ ತು ಕೌತೂಹಲಸಮನ್ವಿತೌ ।
ಸ್ತುತ್ವಾ ಭಕ್ತ್ಯಾಪ್ರಣಾಮಂ ಚ ಬಹುಶ ಶ್ಚಕ್ರತುಶ್ಶುಭೌ ॥೧೬೮॥

ತಂ ತು—ಆ ಶ್ರೀಕೃಷ್ಣನನ್ನೇ, ಹೃದಿ ಸ್ಥಿತಂ—ತಮ್ಮ ಹೃದಯದಲ್ಲಿ ಇರುವವನನ್ನಾಗಿ ದೃಷ್ಟ್ವಾ –ನೋಡಿ, ಕೌತೂಹಲಸಮನ್ವಿತೌ ಸಂತೌ – ಆಶ್ಚರ್ಯದಿಂದ ಕೂಡಿದವರಾಗಿ, ಶುಭೌ – ಸಾತ್ವಿಕರಾದ ಅವರಿಬ್ಬರೂ ತಂ – ಆ ಭಗವಂತನನ್ನು, ಸ್ತುತ್ವಾ—ಸ್ತುತಿಸಿ, ಭಕ್ತ್ಯಾ - ಭಕ್ತಿಯಿಂದ, ಬಹುಶ: ಪ್ರಣಾಮಂ ಚಕ್ರತು:– ಬಹು ನಮಸ್ಕಾರ ಮಾಡಿದರು, ॥೧೬೮॥

ತಯೋ: ಪ್ರಸನ್ನೋ ಭಗವಾನ್ ಸ್ಪೃಷ್ಟ್ವಾ ಗಂಧರ್ವಸತ್ತಮೌ ।
ಚಕಾರ ಕ್ಷಣ ಮಾತ್ರೇಣ ದಿವ್ಯರೂಪಸ್ವರಾನ್ವಿತೌ ॥೧೬೯॥

ತಯೋ:– ಅವರಿಬ್ಬರ ಬಗ್ಗೆ, ಪ್ರಸನ್ನ: – ಸಂತೋಷಪಟ್ಟ, ಭಗವಾನ್ – ಶ್ರೀಕೃಷ್ಣನು, (ತೌ – ಅವರನ್ನು) ಸ್ಪೃಷ್ಟ್ವಾ – ತನ್ನ ಕರದಿಂದ ಸ್ಪರ್ಶಿಸಿ, ಕ್ಷಣಮಾತ್ರೇಣ—ಕ್ಷಣಸಮಯದಲ್ಲಿಯೇ, ದಿವ್ಯರೂಪಸ್ವರಾನ್ವಿತೌ – ಶ್ರೇಷ್ಠ ರೂಪಸ್ವರಗಳಿಂದ ಕೂಡಿದ, ಗಂಧರ್ವಸತ್ತಮೌ – ಶ್ರೇಷ್ಠ ಗಂಧರ್ವರೂಪರನ್ನಾಗಿ, ಚಕಾರ-ಮಾಡಿದನು. ॥೧೬೯॥

ತಾಭ್ಯಾಂ ಪುನರ್ನೃತ್ಯಗೀತಸಂಸ್ತವೈಃ ಪೂಜಿತಃ ಪ್ರಭುಃ. ।
ಯಯೌ ಕೈಲಾಸಮದ್ರೀಶಂ ಚಕಾರೇವ ತಪೋಽತ್ರ ಚ ॥೧೭೦॥

ತಾಭ್ಯಾಂ – ಅವರಿಬ್ಬರಿಂದ, ಪುನಃ – ಮತ್ತೂ ಮತ್ತೂ, ನೃತ್ಯಗೀತಸಂಸ್ತವೈಃ - ನರ್ತನ, ಗಾಯನ, ಸ್ತೋತ್ರಗಳಿಂದ, ಪೂಜಿತಃ – ಪೂಜಿಸಲ್ಪಟ್ಟ, ಪ್ರಭುಃ – ಸ್ವಾಮಿಯಾದ, ಶ್ರೀಕೃಷ್ಣನು, ಅದ್ರೀಶಂ ಕೈಲಾಸಂ – ಕೈಲಾಸವೆಂಬ ಶ್ರೇಷ್ಠಪರ್ವತವನ್ನು ಕುರಿತು, ಯಯೌ – ಹೋದನು. ಚ – ಹಾಗೂ. ಅತ್ರ – ಇಲ್ಲಿ, ತಪಃ – ತಪಸ್ಸನ್ನು, ಚಕಾರ ಇವ - ಮಾಡಿದಂತೆ ನಟನೆ ಮಾಡಿದನು. ॥೧೭೦॥

ಸ್ವೀಯಾನೇವ ಗುಣಾನ್ವಿಷ್ಣುರ್ಭುಂಜನ್ನಿತ್ಯೇನ ಶೋಚಿಷಾ ।
ಶಾರ್ವಂ ತಪಃ ಕರೋತೀವ ಮೋಹಯಾಮಾಸ ದುರ್ಜನಾನ್ ॥೧೭೧॥

ವಿಷ್ಣುಃ – ಶ್ರೀಕೃಷ್ಣಪರಮಾತ್ಮನು, ನಿತ್ಯೇನ ಶೋಚಿಷಾ – ನಿತ್ಯವಾದ ಪ್ರಕಾಶರೂಪವಾದ ತನ್ನ ಸಾಕ್ಷಿಯಿಂದ, ಸ್ವೀಯಾನ್ ಗುಣಾನ್ ಏವ – ತನ್ನ ಗುಣಗಳನ್ನೇ, ಭುಂಜನ್ – ಸದಾ ಅನುಭವಿಸುವವನಾದರೂ ಕೂಡ, ಶಾರ್ವಂ ತಪಃ – ರುದ್ರದೇವರ ಉದ್ದೇಶ್ಯಕವಾದ ತಪಸ್ಸನ್ನು, ಕರೋತಿ ಇವ – ಮಾಡುತ್ತಿದ್ದಾನೋ ಎಂಬಂತೆ, ದುರ್ಜನಾನ್ – ದುಷ್ಟಜನರನ್ನು, ಮೋಹಯಾಮಾಸ – ಮೋಹಿಸಿದನು. ॥೧೭೧॥

ಪೂರ್ವಂ ತೇನೋದಿತಂ ಯತ್ತ ಲ್ಲೋಕಾನ್ ಮೋಹಯತಾಽಂಜಸಾ।
ಶರ್ವಂ ಪ್ರತಿ ತವಾಹಂ ತು ಕುರ್ಯಾಂ ದ್ವಾದಶವತ್ಸರಮ್ ॥೧೭೨॥

~~ತಪೋಽಸುರಾಣಾಂ ಮೋಹಾಯ ಸುರಾಸ್ಸಂತು ಗತಜ್ವರಾಃ ।~~
ಇತಿ ತಸ್ಮಾತ್ತದಾಕೃಷ್ಣ ಏಕಾಹೇನ ಬೃಹಸ್ಪತಿಮ್ ॥೧೭೩॥

ಆಜ್ಞಯಾ ಚಾರಯಾಮಾಸ ಕ್ಷಿಪ್ರಂ ದ್ವಾದಶರಾಶಿಷು ।
ದ್ವಾದಶಾಬ್ದವದಭೂತ್ತೇನ ತದಹಃ ಕೇಶವಾಜ್ಞಯಾ ॥೧೭೪॥

ಲೋಕಾನ್ – ದುಷ್ಟಜನರನ್ನು, ಅಂಜಸಾ – ಅವಶ್ಯವಾಗಿ, ಮೋಹಯತಾ – ಮೋಹಗೊಳಿಸುವಂಥ, ತೇನ – ಆ ಶ್ರೀಕೃಷ್ಣನಿಂದ, ಪೂರ್ವಂ – ಈ ಮೊದಲು ಶರ್ವಂ ಪ್ರತಿ – ರುದ್ರದೇವರನ್ನು ಕುರಿತು, ಅಹಂ – ನಾನು, ದ್ವಾದಶವತ್ಸರಂ – ಹನ್ನೆರಡು ವರ್ಷಗಳ ವರೆಗೆ, ತವ – ನಿನ್ನ ಉದ್ದೇಶ್ಯವಾಗಿ, ತಪಃ – ತಪಸ್ಸನ್ನು, ಆಸುರಾಣಾಂ ಮೋಹಾಯ – ಅಸುರರ ಮೋಹನಕ್ಕಾಗಿ, ಕುರ್ಯಾಂ – ಮಾಡುವೆನು. ಸುರಾಃ – ದೇವತೆಗಳು, ಗತಜ್ವರಾಃ – ಸಂಶಯ ರಹಿತರು, (ಶ್ರೀಕೃಷ್ಣನು ರುದ್ರದೇವರ ತಪಸ್ಸನ್ನು ಮಾಡುತ್ತಿದ್ದಾನೆ ಆದ್ದರಿಂದ ರುದ್ರದೇವರಿಗಿಂತ ಶ್ರೀಕೃಷ್ಣನು ಅಧಮನೋ ಏನೋ ಎಂಬ ಸಂಶಯ ರಹಿತರು) ಸಂತು – ಆಗಿರಿ, ಇತಿ – ಎಂದು, ಯತ್ – ಯಾವಕಾರಣದಿಂದ, ಉದಿತಂ – ಹೇಳಲ್ಪಟ್ಟಿತ್ತೋ, ತಸ್ಮಾತ್ – ಆ ಕಾರಣದಿಂದ, ತದಾ – ಆ ಪ್ರಕಾರ ಹನ್ನೆರಡು ವರ್ಷ ತಪಸ್ಸನ್ನು ಮಾಡುವಸಂದರ್ಭದಲ್ಲಿ, ಕೃಷ್ಣಃ – ಶ್ರೀಕೃಷ್ಣನು, ಬೃಹಸ್ಪತಿಂ – ಗುರುಗ್ರಹವನ್ನು, ಆಜ್ಞಯಾ – ತನ್ನ ಆಜ್ಞೆಯಿಂದ, ಕ್ಷಿಪ್ರಂ – ಕೂಡಲೇ ಏಕಾಹೇನ – ಒಂದೇ ದಿನದಲ್ಲಿ, ದ್ವಾದಶರಾಶಿಷು – ಹನ್ನೆರಡು ರಾಶಿಗಳಲ್ಲಿ, ಚಾರಯಾಮಾಸ – ಸಂಚಾರ ಮಾಡಿಸಿದರು. ತೇನ – ಆದರಿಂದ, ತದಹಃ – ಆ ಒಂದು ದಿನವೇ, ಕೇಶವಾಜ್ಞಯಾ – ಶ್ರೀಕೃಷ್ಣನ ಆಜ್ಞೆಯ ಪ್ರಕಾರ, ದ್ವಾದಶಾಬ್ದಂ – ಹನ್ನೆರಡು ವರ್ಷದ ಸಮಯದಷ್ಟು ಸಮಯವು, ಅಭೂತ್ – ಆಯಿತು. ॥೧೭೨॥೧೭೩॥೧೭೪॥

ಏಕಸ್ಮಿನ್ನಹ್ನಿ ಭಗವಾನ್ರಾಶಿಂ ರಾಶಿಂ ಚ ವತ್ಸರಮ್ ।
ಕಲ್ಪಯಿತ್ವೋಪವಾಸಾದೀನ್ ಮನಸಾ ನಿಯಮಾನಪಿ ॥೧೭೫॥

ಭಗವಾನ್ – ಶ್ರೀಕೃಷ್ಣಪರಮಾತ್ಮನಂ, ಏಕಸ್ಮಿನ್ ಅಹ್ನಿ—ಒದೇದಿನದಲ್ಲಿ, ರಾಶಿಂ ರಾಶಿಂ ಚ—ಒಂದಂ ರಾಶಿಯಿಂದ ಇನ್ನೊಂದಂ ರಾಶಿಗೆ ಹೋಗುವ ಸಮಯವನ್ನು, ವತ್ಸರಂ—ಒಂದಂ ವರ್ಷಸಮಯವನ್ನಾದಿ, ಕಲ್ಪಯಿತ್ವಾ—ಅನುಸಂಧಾನಮಾಡಿ, ಉಪವಾಸಾದೀನ್—ಉಪವಾಸಾದೀನ್ – ಉಪವಾಸವೇ ಮೊದಲಾದ, ನಿಯಮಾನಪಿ—ನಿಯಮಂಗಳನ್ನೂಕೂಡ, ಚಚಾರ – ಆಚರಿಸಿದನಂ, ॥೧೭೫॥

ಭಾವಾನುವಾದ ೧೫೪_೧೭೫

ಶ್ರೀಕೃಷ್ಣಪರಮಾತ್ಮನಂ ಅರಣ್ಯಕ್ಕೆ ಬಂದಂ ಪಾಂಡವರನ್ನು ದ್ರೌಪದಿದೇವಿಯನ್ನು ಸಮಾಧಾನಪಡಿಸಿ ಸುಭದ್ರೆ ಅಭಿಮನ್ಯು ಇಬ್ಬರಿಂದ ಸಹಿತನಾಗಿ ದ್ವಾರಕೆಗೆ ಹೋದ ಮೇಲೆ ಒಮ್ಮೆ, ತಾನಂ (ಮೂಲರೂಪದಲ್ಲಿ) ಹಿಂದೆಯೇ ರಂದ್ರನಿಗೆ ನಾನಂ ದ್ವಾಪರಾದಿಯುಂಗಗಳಲ್ಲಿ ಮನುಷ್ಯಾದಿರೂಪದಲ್ಲಿ ಅವತರಿಸಿ, ದುಷ್ಟರ ಮೋಹನಾರ್ಥವಾಗಿ ನಿನ್ನನ್ನು ಕುರಿತು ತಪಸ್ಸುಮಾಡಿದಂತೆ ಮಾಡಿ ನಿನ್ನಿಂದ ವರವನ್ನು ಪಡೆದಂತೆ ತೋರಿಸುತ್ತೇನೆ ನೀನೂ ಕೂಡ ನಿನ್ನನ್ನು ನನಗಿಂತ ಉತ್ತಮನನ್ನಾಗಿ ಹೇಳುವ, ನನ್ನನ್ನು ಅಧಮನನ್ನಾಗಿ ಹೇಳುವ, ಅದಕ್ಕಾಗಿ ನಿನ್ನನ್ನು ಆರಾಧಿಸಿ ವರವನ್ನು ಪಡೆದಿರುವೆ ಎಂಬುದಾಗಿ ಹೇಳುವ ಗ್ರಂಥಗಳನ್ನು ದುಷ್ಟಜನರ ಮೋಹನಕ್ಕಾಗಿ ರಚಿಸಿ ಆ ದುಷ್ಟಜನರನ್ನು ನನ್ನಿಂದ ವಿಮುಖರನ್ನಾಗಿ ಮಾಡು. ಅವರು ಸಜ್ಜನರ ಸಹವಾಸದಿಂದ ನನ್ನ ಮಾರ್ಗದಲ್ಲಿದ್ದದ್ದರಿಂದ ಊರ್ಧ್ವಲೋಕಕ್ಕೆ ಹೋಗುವ ಪ್ರಸಂಗಬರುವದು. ಆದರೆ ಅವರು ಆ ಲೋಕಗಳಿಗೆ ಅನರ್ಹರು. ಆದ್ದರಿಂದ ಅವರು ಆ ಲೋಕಗಳಿಗೆ ಹೋಗದಂತೆ ಅಧೋಲೋಕಗಳಿಗೆ ಹೋಗುವಂತೆ ಮಾಡು. ಎಂದು ಹೇಳಿದ್ದೆನೆ ಆದ್ದರಿಂದ ನಾನೂಕೂಡ ಆ ಪ್ರಕಾರ ನಡೆಯುಬೇಕು" ಎಂದು ವಿಚಾರಿಸಿದನು. ಅದನ್ನೆಲ್ಲ ತಿಳಿದ ಶ್ರೀರುಕ್ಮಿಣೀದೇವಿಯೂ ಕೂಡ ಅದಕ್ಕೆ ಪೂರ್ವರಂಗವನ್ನು ಸಿದ್ಧಪಡಿಸಿ ಭಗವಂತನ ಅನುಗ್ರಹ ಕಾಮನೆಯಿಂದ (ಸದಾಅನುಗ್ರಹ ಪಾತ್ರಳೇಆಗಿದ್ದರೂಕೂಡ ಅನುಗ್ರಹದ ಅಭಿವ್ಯಕ್ತಿಯ ಇಚ್ಛೆಯಿಂದ) ತನಗೆ ಪುತ್ರನು ಹುಟ್ಟಿದ್ದರೂ ಕೂಡ ಮಗನಿಗಾಗಿ ಪ್ರವೃತ್ತನಾಗುವ ಇಚ್ಛೆ ದೇವರಿಗೆ ಇದೆ ಎಂದು ತಿಳಿದು 'ಸ್ವಾಮಿ, ಶ್ರೀಕೃಷ್ಣ, ನನಗೆ ಮಗ ಆಗಬೇಕೆಂಬ ಇಚ್ಛೆ ಇದೆ. ಅದನ್ನು ಪೂರ್ಣಮಾಡು' ಎಂದು ಪ್ರಾರ್ಥಿಸಿದಳು. ಆ ಪ್ರಕಾರ ಶ್ರೀಕೃಷ್ಣನು ಗರುಡಾರೂಢನಾಗಿ ಹೊರಟು ಬದರಿಕಾಶ್ರಮಕ್ಕೆ ಬಂದನು ಅಲ್ಲಿರುವ ಮುನಿಗಳೆಲ್ಲ ಭಗವಂತನು ರುದ್ರನಿಗೆ ಹೇಳಿದಂತೆ ನಡೆಯಲು ತಪಸ್ಸಿನ ನಟನೆ ಮಾಡಲು ಈ ಕೃಷ್ಣರೂಪದಿಂದ ಬಂದಿದ್ದಾನೆ ಎಂದು ತಿಳಿದು ಅವನನ್ನು ಚೆನ್ನಾಗಿ ಪೂಜಿಸಿದರು. ಎಲ್ಲ ಮುನಿಗಳ ಮಧ್ಯದಲ್ಲಿ ಭಗವಂತನಿದ್ದಾನೆ. ಅಂದು ರಾತ್ರಿಯಲ್ಲಿ ಕರ್ಣ ಹಾಗು ಘಂಟಾಕರ್ಣ ಎಂಬ ಎರಡು ಪಿಶಾಚಿಗಳು ಶ್ರೀಕೃಷ್ಣ ದರ್ಶನಮಾಡಿ ಪಿಶಾಚಿಜನ್ಮವನ್ನು ಕಳೆದುಕೊಳ್ಳಲು ಶ್ರೀ ರುದ್ರದೇವರ ಮತದ ಪ್ರಕಾರ ದ್ವಾರಕೆಗೆ ಹೊರಟವರು ಮಾರ್ಗದಲ್ಲಿ ಇಲ್ಲಿಗೆ ಬದರಿಕಾಶ್ರಮಕ್ಕೆ ಬಂದು ಅಲ್ಲಿರುವ ಶ್ರೀಕೃಷ್ಣ ಭಗವಂತನ ಜ್ಞಾನವಾಗದೇ ಪಿಶಾಚಿ ಚೇಷ್ಟೆಗಳನ್ನು ಮಾಡಿ, ಧ್ಯಾನಕ್ಕೆ ಕುಳಿತಾಗ ಹೃದಯದಲ್ಲಿ ಕೃಷ್ಣನ ಧ್ಯಾನಶ್ಲೋಕದಿಂದ ಚಿಂತನ ಮಾಡುತ್ತಿರುವಾಗ ಇಲ್ಲಿ ಮುನಿಮಧ್ಯದಲ್ಲಿರುವ ಶ್ರೀಕೃಷ್ಣನನ್ನೇ ಕಂಡು ಇವನೇ ನಾವು ದ್ವಾರಕೆಯಲ್ಲಿ ದರ್ಶನಮಾಡಬೇಕಾಗಿದ್ದ ಕೃಷ್ಣ ಎಂದು ತಿಳಿದು ಸಂತೋಷದಿಂದ, ಭಕ್ತಿಯಿಂದ ಆ ಭಗವಂತನ ಸ್ತೋತ್ರ ಪ್ರಣಾಮಗಳನ್ನು ಮಾಡಿದರು. ಸಚ್ಚೇತನರಾದ ಆ ಇಬ್ಬರ ಸ್ತೋತ್ರಾದಿಗಳಿಂದ ಸಂತುಷ್ಟನಾದ ಭಗವಂತನು ಅವರಿಬ್ಬರನ್ನು ತನ್ನ ಕೈಯಿಂದ ಸ್ಪರ್ಶಿಸಿ ಪಿಶಾಚಿ ಜನ್ಮದಿಂದ ಬಿಡಿಸಿ ಶ್ರೇಷ್ಠಗಂಧರ್ವರನ್ನಾಗಿ ಮಾಡಿದನು. ಆ ಗಂಧರ್ವರಿಂದ ಪೂಜಿತನಾಗಿ ಅಲ್ಲಿಂದ ಕೈಲಾಸಪರ್ವತಕ್ಕೆ ಹೋಗಿ ದುರ್ಜನರ ಮೋಕ್ಷಾರ್ಥವಾಗಿ ರುದ್ರದೇವರನ್ನು ಕುರಿತು ತಪಸ್ಸನ್ನು ಮಾಡಿದನು. ತಾನು ಹನ್ನೆರಡು ವರ್ಷ ತಪಸ್ಸನ್ನು ಮಾಡುವೆನೆಂದು ಹಿಂದೆ ಹೇಳಿದ್ದರಿಂದ ಈಗ ಆ ಪ್ರಕಾರ ಹನ್ನೆರಡುವರ್ಷ ಮಾಡಬೇಕಾಗಿದೆ. ಅದಕ್ಕಾಗಿ

ಭಗವಂತನು ಗರುಡಗ್ರಹಕ್ಕೆ ಒಂದು ದಿನದಲ್ಲಿಯೇ ಹನ್ನೆರಡು ರಾಶಿಗಳಲ್ಲಿ ಸಂಚರಿಸುವಂತೆ ಆಜ್ಞಾಪಿಸಿದನು. ವಾಸ್ತವಿಕವಾಗಿ ಗರುಡನು ಒಂದು ರಾಶಿಯಿಂದ ಒಂದು ರಾಶಿಗೆ ಹೋಗಲು ಒಂದು ವರ್ಷ ಅವಧಿ ಬೇಕು. ಹೀಗೆ ಹನ್ನೆರಡು ರಾಶಿಗಳನ್ನು ತಿರುಗಲು ಹನ್ನೆರಡುವರ್ಷಬೇಕು, ಆದರೆ ಭಗವಂತನ ಅಪ್ಪಣೆಯ ಪ್ರಕಾರ ಆ ಒಂದು ದಿನದಲ್ಲಿಯೇ ಹನ್ನೆರಡುರಾಶಿಗಳನ್ನು ತಿರುಗಿದನು. ಹೀಗಾಗಿ ಆ ಒಂದು ದಿನವೇ ಹನ್ನೆರಡು ವರ್ಷಗಳಿಗೆ ಸಮವಾದಂತಾಯಿತು. ಆ ದಿನ ಒಂದು ರಾಶಿಯಿಂದ ಇನ್ನೊಂದು ರಾಶಿಯು ಹೊಂದುವಷ್ಟು ಕಾಲವನ್ನು ಒಂದು ವರ್ಷವನ್ನಾಗಿ ಸಂಕಲ್ಪಿಸಿ ಉಪವಾಸ ವ್ರತ ನಿಯಮಗಳನ್ನೆಲ್ಲ ಆ ಪ್ರಮಾಣದ ಪ್ರಕಾರ ಮಾಡಿದನು.

ಮಾಸವ್ರತಂ ಸಾರ್ಧಶತಶ್ವಾಸಕಾಲೈರಕಲ್ಪಯತ್ ।
ಮನಸೈವ ಸ್ವಭಕ್ತಾನಾಂ ದ್ವಾದಶಾಬ್ದವ್ರತಾಪ್ತಯೇ ॥೧೭೬॥

ಭಗವಾನ್ – ಶ್ರೀಕೃಷ್ಣಪರಮಾತ್ಮನು, ಸ್ವಭಕ್ತಾನಾಂ – ತನ್ನ ಭಕ್ತರಿಗೆ. ದ್ವಾದಶಾಬ್ದವ್ರತಾಪ್ತಯೇ— ಹನ್ನೆರಡು ವರ್ಷವ್ರತದಫಲಪ್ರಾಪ್ತಿಯಾಗುವದಕ್ಕಾಗಿ ಮನಸಾಏವ – ತನ್ನ ಇಚ್ಛೆಯಿಂದಲೇ, ಮಾಸವ್ರತಂ— ಒಂದು ತಿಂಗಳುಮಾಡಬೇಕಾದ ವ್ರತವನ್ನು, ಸಾರ್ಧಶತಶ್ವಾಸಕಾಲೈಃ – ಒಂದುವರಿನೂರು (ಒಂದುನೂರಾಐವತ್ತು) ಶ್ವಾಸಗಳಿಗೆ ಬೇಕಾಗುವ ಕಾಲಗಳಿಂದ ಸಮವಾದ ಕಾಲವುಳ್ಳದ್ದನ್ನಾಗಿ,ಅಕಲ್ಪಯತ್— ಅನುಸಂಧಾನಮಾಡಿದನು. ॥೧೭೬॥

ತತ್ರಾಸ್ಯ ಗರುಡಾದ್ಯಾಶ್ಚ ಪರಿಚರ್ಯಾಂ ಸ್ವಪಾರ್ಷದಾಃ ।
ಚಕ್ರುರ್ಹೋಮಾದಿಕಾಶ್ಚೈವ ಕ್ರಿಯಾಶ್ಚಕ್ರೇ ಜನಾರ್ದನಃ ।
ಸ್ವಾತ್ಮಾನಂ ಪ್ರತಿ ಪಾಪಾನಾಂ ಶಿವಾಯೇತಿ ಪ್ರಕಾಶಯನ್ ॥೧೭೭॥

ತತ್ರ—ಆ ಸಮಯದಲ್ಲಿ, ಗರುಡಾದ್ಯಾಃ ಸ್ವಪಾರ್ಷದಾಃ – ಗರುಡನೇ ಮೊದಲಾದ ಭಗವಂತನ ಸೇವಕರು, ಅಸ್ಯ – ಈ ಶ್ರೀಕೃಷ್ಣನ, ಪರಿಚರ್ಯಾಂ— ಸೇವೆಯನ್ನು. ಚಕ್ರುಃ – ಮಾಡಿದರು. ಜನಾರ್ದನಃ – ಶ್ರೀಕೃಷ್ಣನು, ಹೋಮಾದಿಕಾಃ ಕ್ರಿಯಾಃ–ಹೋಮವೇ ಮೊದಲಾದ ಪ್ರಧಾನ ಕಾರ್ಯಗಳನ್ನು. ಪಾಪಾನಾಂ – ಪಾಪಿಗಳಾದ ದುಷ್ಟಜನರಿಗೆ, ಶಿವಾಯ ಇತಿ ಇವ – ರುದ್ರದೇವರ ಉದ್ದೇಶ್ಯವಾಗಿ ಏನೋ ಎಂಬಂತೆ. ಪ್ರಕಾಶಯನ್ ಸನ್—ಪ್ರಕಟಿಸುವವನಾಗಿ (ತೋರಿಸುವವನಾಗಿ), ಸ್ವಾತ್ಮಾನಂ ಪ್ರತಿ ಏವ – ತನ್ನನ್ನು ಕುರಿತೇ, ಚಕ್ರೇ – ಮಾಡಿದನು ॥೧೭೭॥

ಏವಂ ಸ್ಥಿತಂ ತಮರವಿಂದದಲಾಯತಾಕ್ಷಂ ಬ್ರಹ್ಮೇಂದ್ರ ಪೂರ್ವಸುರಯೋಗಿವರಪ್ರಜೇಶಾಃ।
ಅಭ್ಯಾಯಯುಃ ಪಿತೃಮುನೀಂದ್ರಗಣೈಸ್ಸಮೇತಾ ಗಂಧರ್ವಯಕ್ಷವರಸಿದ್ಧವಿಹಂಗಮಾದ್ಯಾಃ॥೧೭೮॥

ಏವಂಸ್ಥಿತಃ- ಈ ರೀತಿ ವ್ರತ ನಿಯಮಂಗಳಲ್ಲಿ ಇರತಕ್ಕ, ಅರವಿಂದದಲಾಯತಾಕ್ಷಂ-ಕಮಲದಳದಂತೆ ವಿಸ್ತೃತವಾದ ಕಣ್ಣುಳ್ಳ, ತಂ— ಆ ಭಗವಂತ ಶ್ರೀಕೃಷ್ಣನನ್ನು ಕುರಿತು, ಬ್ರಹ್ಮೇಂದ್ರಪೂರ್ವಸುರಯೋಗಿವರಪ್ರಜೇಶಾಃ– ಬ್ರಹ್ಮದೇವರು, ಇಂದ್ರ ಮೊದಲಾದ ದೇವತೆಗಳು, ಸನಕಾದಿ ಶ್ರೇಷ್ಠಋಷಿಗಳು ಹಾಗು ದಕ್ಷಾದಿ ಪ್ರಜಾಪತಿಗಳು, (ಚ – ಹಾಗು) ಪಿತೃಮುನೀಂದ್ರಗಣೈಃ ಸಮೇತಾಃ ಪಿತೃದೇವತೆಗಳು, ಮುನಿಗಣಗಳು ಇವರಿಂದ ಸಹಿತರಾದ, ಗಂಧರ್ವಯಕ್ಷವರಸಿದ್ಧವಿಹಂಗಮಾದ್ಯಾಃ–ಗಂಧರ್ವರುಯಕ್ಷರು, ಸಿದ್ಧರು, ಬ್ರಹ್ಮವಾಹನ ಹಂಸಾದಿ ಪಕ್ಷಿ ಮೊದಲಾದವರು; ಅಭ್ಯಾಯಯಯುಃ – ಬಂದರು ॥೧೭೮॥

ಶರ್ವೋಽಪಿ ಸರ್ವಸುರದೈವತ ಮಾತ್ಮದೇವಮಾಯಾತಮಾತ್ಮಗೃಹಸನ್ನಿಧಿಮಾಶ್ವವೇತ್ಯ।
ಅಭ್ಯಾಯಯೌ ನಿಜಗಣೈಸ್ಸಹಿತಸ್ಸಭಾರ್ಯೋ ಭಕ್ತ್ಯತಿಸಂಭ್ರಮಗೃಹೀತ ಸಮರ್ಹಣಾಗ್ರ್ಯಃ ॥೧೬೯॥

ಶರ್ವಃ ಅಪಿ—ಶ್ರೀರುದ್ರದೇವರೂ ಕೂಡ, ಸರ್ವಸುರದೈವತಂ—ಎಲ್ಲದೇವತೆಗಳಿಗೂ ದೇವರಾದ, ಆತ್ಮದೇವಂ – ತನ್ನ ದೇವರಾದ ಭಗವಂತ ಶ್ರೀಕೃಷ್ಣನನ್ನು, ಆತ್ಮಗೃಹಸನ್ನಿಧಿಂ—ತನ್ನ ಮನೆಯ ಸಮೀಪಕ್ಕೆ, ಆ (ಯಾಂ) ಯಾತಂ – ಬಂದವನನ್ನು ಗಿ, ಅವೇತ್ಯ—ತಿಳಿದು, ಆಶು – ಕೂಡಲೇ, ನಿಜಗಣೈಃ ಸಹಿತಃ ಸನ್—ತನ್ನ ಭೂತಗಣಗಳಿಂದ ಸಹಿತನಾಗಿ, ಸಭಾರ್ಯಃ ಸನ್ – ಪತ್ನೀಸಹಿತನಾಗಿ, ಅತಿಸಂಭ್ರಮಗೃಹೀತ ಸಮರ್ಹಣಾಗ್ರ್ಯಃ ಸನ್—ಅತ್ಯಂತ ಭಕ್ತಿಸಂಭ್ರಮದಿಂದ ಶ್ರೇಷ್ಠಪೂಜಾಸಾಮಗ್ರಿಗಳನ್ನು ತೆಗೆದುಕೊಂಡವನಾಗಿ, ಅಭ್ಯಾಯಯೌ—ಬಂದರು. ॥೧೬೯॥

ಆಭ್ಯೇತ್ಯ ಪಾದಯುಗಲಂ ಜಗದೇಕಭರ್ತುಃ ಕೃಷ್ಣಸ್ಯ ಭಕ್ತಿಭರಿತಶ್ಶಿರಸಾನನಾಮ।
ಚಕ್ರೇಸ್ತುತಿಂ ಚ ಪರಮಾಂ ಪರಮಸ್ಯ ಪೂರ್ಣಷಾಡ್ಗುಣ್ಯವಿಗ್ರಹವಿದೋಷಮಹಾವಿಭೂತೇಃ ॥೧೭೦॥

(ರುದ್ರದೇವರು) ಜಗದೇಕಭರ್ತುಃ ಕೃಷ್ಣಸ್ಯ—ಜಗತ್ತಿನ ಮುಖ್ಯ ಒಡೆಯನಾದ ಶ್ರೀಕೃಷ್ಣನ, ಪಾದಯುಗಲಂ—ಪಾದದ ಜೋಡಿಯನ್ನು ಕುರಿತು, ಅಭ್ಯೇತ್ಯ – ಬಂದು, ಭಕ್ತಿಭರಿತಃ ಸನ್ – ಭಕ್ತಿಯಿಂದ ತುಂಬಿದವರಾಗಿ, ಶಿರಸಾನನಾಮ—ಸಾಷ್ಟಾಂಗ ನಮಸ್ಕಾರಮಾಡಿದರು. ಚ—ಮತ್ತು, ಪರಮಸ್ಯ—ಸರ್ವೋತ್ತಮನಾದ, ಪೂರ್ಣಷಾಡ್ಗುಣ್ಯವಿಗ್ರಹವಿದೋಷಮಹಾವಿಭೂತೇಃ – ಪೂರ್ಣವಾದ ಷಡ್ಗುಣಗಳೇಶರೀರವಾಗಿವುಳ್ಳ, ದೋಷರಹಿತನಾದ ಮಹಾಐಶ್ವರ್ಯ ಪೂರ್ಣನಾದ, ಕೃಷ್ಣಸ್ಯ—ಶ್ರೀಕೃಷ್ಣನ, ಪರಮಾಂ ಸ್ತುತಿಂ ಚ—ಶ್ರೇಷ್ಠವಾದ ಸ್ತೋತ್ರವನ್ನು, ಚಕ್ರೇ—ಮಾಡಿದರು. ॥೧೭೦॥

ಕೃಷ್ಣೋಽಪ್ಯಯೋಗ್ಯಜನಮೋಹನಮೇವ ವಾಂಛಂಸ್ತುಷ್ಟಾವ ರುದ್ರಹೃದಿಗಂ ನಿಜಮೇವ ರೂಪಮ್ ।
ರುದ್ರೋನಿಶಮ್ಯ ತದುವಾಚ ಸುರಾನ್ಸಮಸ್ತಾನ್ ಸತ್ಯಂ ವದಾಮಿ ಶೃಣುತಾದ್ಯ ವಚೋಮದೀಯಮ್ ।
ವಿಷ್ಣುಸ್ಸಮಸ್ತ ಸುಜನೈಃ ಪರಮೋ ಹ್ಯುಪೇಯಸ್ತತ್ಪ್ರಾಪ್ತಯೇಽಹಮನಿಲೋಽಥ ರಮಾಹ್ಯುಪೇಯಾಃ ॥೧೭೧॥

ಕೃಷ್ಣಃ ಅಪಿ - ಶ್ರೀಕೃಷ್ಣಪರಮಾತ್ಮನೂ ಕೂಡ, ಅಯೋಗ್ಯಜನಮೋಹನಂ ಏವ – ದುಷ್ಟಜನರ ಮೋಹವನ್ನೇ, ವಾಂಛನ್ ಸನ್ – ಇಚ್ಛಿಸುವವನಾಗಿ, ರುದ್ರಹೃದಿಗಂ—ರುದ್ರದೇವರ ಹೃದಯದಲ್ಲಿರುವ, ನಿಜಂ ರೂಪಂ ಏವ – ತನ್ನ ರೂಪವನ್ನೇ, ತುಷ್ಟಾವ—ಸ್ತುತಿಸಿದನು. (ಮೇಲೆ ನೋಡುವಾಗ ರುದ್ರನನ್ನು ಸ್ತುತ್ತಿಸುತ್ತಾ ಇದ್ದಾನೋ ಎಂಬಂತೆ ತೋರಿಸುತ್ತಾ ಅಂತರ್ಯಾಮಿಯಾದ ತನ್ನನ್ನೇ ಸ್ತುತಿಸಿದನು). ತತ್—ಶ್ರೀಕೃಷ್ಣಪರಮಾತ್ಮನು ಮಾಡಿದ ಸ್ತುತಿಯನ್ನು, ನಿಶಮ್ಯ—ಕೇಳಿ, ರುದ್ರಃ-ರುದ್ರದೇವರು, ಸಮಸ್ತಾನ್ ಸುರಾನ್ – ಎಲ್ಲ ದೇವತೆಗಳನ್ನು ಕುರಿತು, (ದೇವತೆಗಳೇ), ಅದ್ಯ—ಇಂದು, ಮದೀಯಂ ವಚಃ – ನನ್ನ ಮಾತನ್ನು, ಶೃಣುತ—ಕೇಳಿರಿ, ಸತ್ಯಂ ವದಾಮಿ—ಸತ್ಯವನ್ನೇ ಹೇಳುತ್ತಿದ್ದೇನೆ ಸಮಸ್ತಸುಜನೈಃ—ಎಲ್ಲ ಸಜ್ಜನರಿಂದ, ವಿಷ್ಣುಃ ಹಿ—ಶ್ರೀಮನ್ನಾರಾಯಣನೇ, ಪರಮಃ; ಉಪೇಯಃ—ಮುಖ್ಯವಾಗಿ ಪ್ರಾಪ್ಯನು. ತತ್ಪ್ರಾಪ್ತಯೇಹಿ—ಅವನ ಪ್ರಾಪ್ತಿಗಾಗಿಯೇ. ಅಹಂ – ನಾನು, ಅನಿಲಃ – ಶ್ರೀ ಮುಖ್ಯಪ್ರಾಣದೇವರು (ಬ್ರಹ್ಮದೇವರು), ಅಥ-ಹಾಗು, ರಮಾ – ಶ್ರೀರಮಾದೇವಿಯು, ಉಪೇಯಾಃ – ಹೊಂದಲ್ಪಡಬೇಕು. ॥೧೭೧॥

ಏಷಹ್ಯಶೇಷನಿಗಮೋತ್ಥವಿನಿರ್ಣಯೋಽರ್ಥೋ ಯದ್ವಿಷ್ಣುರೇವ ಪರಮೋಮುಮಾಬ್ಜಯೋನೇಃ ।
ಅವ್ಯಕ್ತತಸ್ಸಕಲ ಜೀವಗಣಾಚ್ಚ ನಿತ್ಯಮಿತ್ಯೇವ ನಿಶ್ಚಯ ಉತೈತದನುಸ್ಮರಧ್ವಮ್ ॥
ಇತ್ಯುಕ್ತವತ್ಯಖಿಲದೇವಗಣಾ ಗಿರೀಶೇ ಕೃಷ್ಣಂ ಪ್ರಣೇಮುರತಿವೃದ್ಧರಮೇಶ ಭಕ್ತ್ಯಾ ॥೧೪೨॥

ಏಷಃ ಹಿ – ಈ ಶ್ರೀಕೃಷ್ಣನೇ, ಅಶೇಷನಿಗಮೋತ್ಥವಿನಿರ್ಣಯಃ ಅರ್ಥಃ – ಎಲ್ಲ ವೇದ, ಶಾಸ್ತ್ರಗಳಿಂದ ಉಂಟಾದ ನಿರ್ಣಯಾತ್ಮಕವಾದ, ಅರ್ಥಃ—ವಿಷಯವು, ಯತ್–ಏದು ಯಾವದಂದರೆ, ವಿಷ್ಣುಃ ಏವ–ಶ್ರೀಹರಿಯೇ ಮಾಮ (ಸಕಾಶಾತ್ – ನನಗಿಂತ, ಅಬ್ಜಯೋನೇಃ – ಬ್ರಹ್ಮದೇವರಿಗಿಂತಲೂ, ಅವ್ಯಕ್ತತಃ ಚ – ಲಕ್ಷ್ಮೀದೇವಿಗಿಂತಲೂ ಕೂಡ; ಸಕಲಜೀವಗಣಾತ್—ಎಲ್ಲ ಜೀವರ ಸಮೂಹಕ್ಕಿಂತಲೂ, ಪರಮಃ – ಉತ್ತಮನು, ಇತಿ ಏವ – ಎಂಬುದೇ, ನಿಶ್ಚಯಃ – ನಿಶ್ಚಯವು, ಏತತ್ ಉತ – ಇದನ್ನೇ, ಅನುಸ್ಮರಧ್ವಂ – ಸದಾಸ್ಮರಿಸಿರಿ. ಇತಿ – ಈ ರೀತಿ, ಗಿರೀಶೇ–ರುದ್ರದೇವರು, ಉಕ್ತವತಿ ಸತಿ– ಹೇಳುತ್ತಿರಲು, ಅಖಿಲದೇವಗಣಾಃ – ಎಲ್ಲ ದೇವತೆಗಳ ಸಮೂಹಗಳು, ಅತಿವೃದ್ಧರಮೇಶಭಕ್ತ್ಯಾ–ಅತಿ ಹೆಚ್ಚಾದ ವಿಷ್ಣು ಭಕ್ತಿಯಿಂದ, ಕೃಷ್ಣಂ-ಶ್ರೀಕೃಷ್ಣನನ್ನು, ಪ್ರಣೇಮುಃ–ನಮಸ್ಕರಿಸಿದರು. ॥೧೪೨॥

ಉಕ್ತೈರನ್ಯೈಶ್ಚ ಗಿರಿಶವಾಕ್ಯೈಸ್ತತ್ತ್ವವಿನಿರ್ಣಯೈಃ।
ಕೃಷ್ಣಸ್ಯೈವ ಗುಣಾಖ್ಯಾನೈಃ ಪುನರಿಂದ್ರಾದಿದೇವತಾಃ ॥
ಜ್ಞಾನಾಭಿವೃದ್ಧಿಮಗಮನ್ ಪುರಾಽಪಿ ಜ್ಞಾನಿನೋಽಧಿಕಮ್ ॥೧೪೩॥

ಸರ್ವದೇವೋತ್ತಮಂ ತಂ ಹಿ ಜಾನಂತ್ಯೇವ ಸುರಾಸ್ತದಾ ॥೧೪೪॥

ಉಕ್ತೈಃ – ಹೇಳಲ್ಪಟ್ಟ, ಅನ್ಯೈಃ – ಬೇರೆಯಾದ, ತತ್ತ್ವವಿನಿರ್ಣಯೈಃ – ತತ್ತ್ವನಿರ್ಣಾಯಕವಾದ, ಕೃಷ್ಣಸ್ಯ ಏವ ಗುಣಾಖ್ಯಾನೈಃ – ಶ್ರೀಕೃಷ್ಣನದೇ ಗುಣ ಪ್ರತಿಪಾದಕವಾದ, ಗಿರೀಶವಾಕ್ಯೈಃ – ಶ್ರೀರುದ್ರದೇವರ ವಾಕ್ಯಗಳಿಂದ, ಇಂದ್ರಾದಿದೇವತಾಃ—ಇಂದ್ರಾದಿದೇವತೆಗಳು, ಪುರಾ–ಈ ಮೊದಲೇ, ಜ್ಞಾನಿನಃ ಅಪಿ – ಜ್ಞಾನಿಗಳಾಗಿದ್ದರೂ ಕೂಡ, ಘನಃ ಅಧಿಕಂ ಯಥಾ ಭವತಿತಥಾ – ಇನ್ನಷ್ಟು ಹೆಚ್ಚು, ಹೇಗೆ ಆಗಬೇಕೋ ಹಾಗೆ, ಜ್ಞಾನಾಭಿವೃದ್ಧಿಂ-ಜ್ಞಾನಾಭಿವೃದ್ಧಿಯನ್ನು, ಅಗಮನ್–ಹೊಂದಿದರು. ಸುರಾಃ – ದೇವತೆಗಳು, ತಂ—ಆ ಶ್ರೀಕೃಷ್ಣನನ್ನು, ಸರ್ವದೇವೋತ್ತಮಂ–ಸರ್ವದೇವೋತ್ತಮನೆನ್ನಾಗಿ. ಸದಾ ಜಾನಂತಿ ಏವ – ಯಾವಾಗಲೂ ತಿಳಿದೇ ತಿಳಿದಿರುತ್ತಾರೆ. ॥೧೪೩॥೧೪೪॥

ತಥಾಽಪಿ ತತ್ತ್ವಮಾಣಾನಾಂ ಬಹುತ್ವಾದ್ಯೇಽತ್ರ ಸಂಶಯಾಃ ।
ಯುಕ್ತಿಮಾತ್ರಾತ್ತೇಽಪಿ ರುದ್ರವಾಕ್ಯಾದಪಗತಾಸ್ತದಾ ॥೧೪೫॥

ತಥಾಽಪಿ – ಹಾಗಿದ್ದರೂ ಕೂಡ, ತತ್ತ್ವಮಾಣಾನಾಂ ಬಹುತ್ವಾತ್ – ವಿಷ್ಣುಸರ್ವೋತ್ತಮತ್ವ ಪ್ರತಿಪಾದಕ ಪ್ರಮಾಣಗಳು ಬಹುಸಂಖ್ಯೆಯಲ್ಲಿದ್ದ್ದರಿಂದ (ವಿರುದ್ಧವೇನೋ ಎಂದು ತೋರುವ ಅಣುತ್ವ ಮಹತ್ವಾದಿ ಬಹುಗುಣಗಳನ್ನು ಹೇಳುವ ವಾಕ್ಯಗಳಿದ್ದ್ದರಿಂದ), ಅತ್ರ – ಈ ವಾಕ್ಯಗಳ ಬಗ್ಗೆ, ಯುಕ್ತಿಮಾತ್ರಾತ್ – 'ವಿಷ್ಣುವು ಅಣುವಾಗಲಾರನು ಮಹತ್ವವುಳ್ಳವನಾದ್ದರಿಂದ' ಇತ್ಯಾದಿ ಕೇವಲ ಶುಷ್ಕ ಯುಕ್ತಿಯಿಂದ. ಯೇ ಸಂಶಯಾಃ—ಯಾವ ಸಂಶಯಗಳು ಬರಬಹುದಿತ್ತೋ, ತೇ ಅಪಿ—ಅವೂ ಕೂಡಾ, ತದಾ—ಆಗ, ರುದ್ರವಾಕ್ಯಾತ್ – ರುದ್ರದೇವರ ವಚನದಿಂದ, ಅಪಗತಾಃ – ಪರಿಹೃತವಾದವು. ॥೧೪೫॥

ತತಃಕೃಷ್ಣಸ್ತವರಂ ತ್ವತ್ತ ಆದಾಸ್ಯ ಇತ್ಯಜಃ।
ಯದುಕ್ತವಾಂಛಿವಂ ಪೂರ್ವಂಸತ್ಯಂ ಕರ್ತುಂ ತದಬ್ರವೀತ್ ॥೧೪೬॥

ಪುತ್ರಂ ದೇಹೀತಿ ಸೋಽಪ್ಯಾಹ ಪೂರ್ವಮೇವ ಸುತಸ್ತವ।
ಜಾತಃ ಪ್ರದ್ಯುಮ್ನನಾಮಾ ಯಸ್ಯ ಮದ್ದತ್ತಃಪ್ರವಾದತಃ ॥೧೪೭॥

ತತಃ – ರುದ್ರದೇವರು ಹಾಗೆ ಬೋಧಿಸಿದನಂತರ ಅಜಃ ಕೃಷ್ಣಃ – ಜನನಾದಿರಹಿತನಾದ ಶ್ರೀಕೃಷ್ಣನು, ಪೂರ್ವಂ – ಹಿಂದೆ, ಶಿವಂ–ರುದ್ರನನ್ನು ಕುರಿತು, ತ್ವತ್ತಃ – ನಿನ್ನದೆಲೆಯಿಂದ, ಸುತವರಂ—ಮಗನ ವರವನ್ನು, ಆವಾಸ್ಯೇ – ಹೊಂದುವೆನು. ಇತಿ ಯತ್ - ಎಂದು ಯಾವ ಮಾತನ್ನು, ಉಕ್ತವಾನ್ – ಹೇಳಿದ್ದನೋ, ತತ್ ಸತ್ಯಂ ಕರ್ತುಂ – ಅದನ್ನು ಸತ್ಯವನ್ನಾಗಿಮಾಡಲು, ಪುತ್ರಂದೇಹಿ ಇತಿ - ಮಗನನ್ನು ಕೊಡು ಎಂದು, ಅಬ್ರವೀತ್- ಹೇಳಿದನು. ಸಃ ಅಪಿ – ಆ ರುದ್ರದೇವರಾದರೂ ಕೂಡ, ತವ - ನಿನಗೆ, ಪೂರ್ವಮೇವ – ಈ ಮೊದಲೇ, ಯಃ ಪ್ರದ್ಯುಮ್ನನಾಮಾ ಪುತ್ರಃ ಜಾತಃ – ಯಾವ ಪ್ರದ್ಯುಮ್ನ ಎಂದು ಹೆಸರುಳ್ಳ ಮಗನು ಹುಟ್ಟಿರುವನೋ, ಸಃ – ಅವನು, ಪ್ರವಾದತಃ– ಪ್ರಸಿದ್ಧಿಯಿಂದ, ಮದ್ದತ್ತಃ ಸ್ಯಾತ್ – ನನ್ನಿಂದ ಕೊಡಲ್ಪಟ್ಟವನಾಗಲಿ (ನನ್ನಿಂದ ಆದವನು ಎಂದು ಪ್ರಸಿದ್ಧವಾಗಲಿ), ಇತಿ – ಎಂದು, ಆಹ – ಹೇಳಿದರು. ॥೧೪೬।೧೪೭॥

ಅವತಾರಿಕೆ : ಆ ರೀತಿ ಪ್ರಸಿದ್ಧಿ ಬರಲು ಅನುಕೂಲವಾದ ಘಟನೆಯೂ ಹಿಂದೆ ನಡೆದಿದೆ ಎಂದು ತಿಳಿಸುತ್ತಾ ಇದ್ದಾರೆ

ಪುರಾದಗ್ಧೋ ಮಯಾ ಕಾಮಸ್ತದಾಽಯಾಚತ ಮಾಂ ರತಿಃ।
ದೇಹಿ ಕಾಂತಂ ಮಮೇತ್ಯೇವ ತದಾ ತಾಮಹಮಬ್ರುವಮ್ ॥೧೪೮॥

ಉತ್ಪತ್ಸ್ಯತೇ ವಾಸುದೇವಾತ್ತದಾ ತ್ವಂ ಪತಿಮಾಪ್ಸ್ಯಸಿ।
ಇತ್ಯತೋಽಸೌ ಮಯಾ ದತ್ತ ಇವ ದೇವತ್ವದಾಜ್ಞಯಾ ॥೧೪೯॥

ಪುರಾ – ಹಿಂದೆ, ಮಯಾ—ನನ್ನಿಂದ, (ಯದಾ— ಯಾವಾಗ), ಕಾಮಃ – ಕಾಮನು, ದಗ್ಧಃ – ಭಸ್ಮ ಮಾಡಲ್ಪಟ್ಟನೋ, ತದಾ – ಆಗ, ರತಿಃ – ಅವನ ಪತ್ನಿಯಾದ ರತಿದೇವಿಯು, ಮಾಂ—ನನ್ನನ್ನು ಕುರಿತು, ಮಮ ಕಾಂತಂ ದೇಹಿ ಇತಿ – ನನ್ನ ಪತಿಯನ್ನು ಕೊಡು ಎಂದು, ಅಯಾಚತ – ಪ್ರಾರ್ಥಿಸಿದಳು, ತದಾ – ಆಗ, ಅಹಂ– ನಾನು, ತಾಮ್ – ಅವಳನ್ನು ಕುರಿತು: (ತ್ವತ್ಪತಿಃ ಕಾಮಃ – ನಿನ್ನ ಗಂಡನಾದ ಕಾಮನು), ವಾಸುದೇವಾತ್ – ಶ್ರೀ ಕೃಷ್ಣನಿಂದ, ಉತ್ಪತ್ಸ್ಯತೇ – ಹುಟ್ಟುತ್ತಾನೆ, ತದಾ—ಆಗ, ತ್ವಂ – ನೀನು, ಪತಿಂ—ಪತಿಯನ್ನು, ಆಪ್ಸ್ಯಸಿ – ಹೊಂದುವಿ, ಇತಿ ಎಂದು, ಅಬ್ರುವಮ್ – ಹೇಳಿರುವೆನು. ಅತಃ – ಈ ಕಾರಣದಿಂದ, ದೇವ – ಸ್ವಾಮಿಯಾದ ಶ್ರೀಕೃಷ್ಣನೇ, ಆಸೌ - ಆ ಕಾಮನು, ತ್ವದಾಜ್ಞಯಾ—ನಿನ್ನ ಆಜ್ಞೆಯಿಂದ, ಮಯಾ ದತ್ತಃ ಇವ ನನ್ನಿಂದ ಕೊಡಲ್ಪಟ್ಟವನಂತೆ ಆಗಲಿ. ॥೧೪೮॥೧೪೯॥

ದಾಸೋಽಸ್ಮಿ ತವದೇವೇಶ ಪಾಹಿ ಮಾಂ ಶರಣಾಗತಮ್ ।
ಇತ್ಯುಕ್ತ್ವಾಽಭಿಪ್ರಣಮ್ಯೈನಂ ಪುನರಾಹ ಸುರಾನ್ಹರಃ ॥೧೫೦॥

ದೇವೇಶ —ದೇವನಿಯಾಮಕನಾದ, ಶ್ರೀಕೃಷ್ಣನೇ, (ಅಹಂ - ನಾನು) ತವ ದಾಸಃ ಅಸ್ಮಿ – ನಿನ್ನ ಸೇವಕ

ನಿರುತ್ತೇನೆ. ಶರಣಾಗತಂ – ನಿನಗೆಮೊರೆಹೊಕ್ಕಿರುವ, ಮಾಂ—ನನ್ನನ್ನು, ಪಾಹಿ – ರಕ್ಷಿಸು, ಇತಿ – ಎಂದು, ಉಕ್ತ್ವಾ ಹೇಳಿ, ಏನಂ—ಈ ಶ್ರೀಕೃಷ್ಣನನ್ನು, ಅಭಿಪ್ರಣಮ್ಯ - ಭಕ್ತಿಯಿಂದ ವಮಸ್ಕರಿಸಿ, ಹರಃ – ರುದ್ರದೇವರು, ಸುರಾನ್ ದೇವತೆಗಳನ್ನು ಕುರಿತು, ಪುನಃ ಆಹ – ಮತ್ತೆ ಹೇಳಿದರು. ॥೧೯೦॥

ಯದರ್ಥಮೇಷ ಆಯಾತ: ಕೇಶವಃಶೃಣುತಾಮುರಾ:।
ಯೋsಸುರೋ ವಕ್ರನಾಮಾssಸೀದವಧ್ಯೋ ಬ್ರಹ್ಮಣೋ ವರಾತ್ ॥೧೯೦॥

ತದಾಜಾತಾದ್ವಾಸುದೇವ ಪುತ್ರಾತ್ಕಾಮಾದೃತೇ ಕ್ವಚಿತ್।
ತಂ ಹಂತುಮೇವ ಪುತ್ರಂ ಸ್ವಂ ಪ್ರದ್ಯುಮ್ನಮುದರೇsಪ್ಯಚ ॥೧೯೨॥

ಆಯಾತ ಇಹ ತಂ ಚಾಪಿ ದದಾಹ ಸ್ವೋದರಾತ್ಸುತಮ್।
ನಿಸ್ಸಾರಯಿತ್ವಾ ಕಕ್ಷಂ ಚ ದಗ್ಧಂ ಪಶ್ಯತ ದೇವತಾ: ॥೧೯೩॥

ಅಮರಾಃ - ಎಲೋ ದೇವತೆಗಳೇ, ಏಷ ಕೇಶವ:—ಈ ಶ್ರೀಕೃಷ್ಣಪರಮಾತ್ಮನು, ಯದರ್ಥಂ – ಯಾವ ದಕ್ಕಾಗಿ, ಆಯಾತ: – ಬಂದಿರುವನು, (ಎಂಬುದನ್ನು ಹೇಳುವನು). ಶೃಣುತ - ಕೇಳಿರಿ. (ಅದೇನೆಂದರೆ–) ಬ್ರಹ್ಮಣ: ವರಾತ್ – ಬ್ರಹ್ಮದೇವರ ವರದಿಂದಾಗಿ, ಯಃ ವಕ್ರನಾಮಾ ಅಸುರ: – ಯಾವ ವಕ್ರನೆಂಬ ಅಸುರನು, ತದಾಜಾತಾತ್ – ಅದೇ ತಾನೇ ಹುಟ್ಟಿದ, ವಾಸುದೇವಪುತ್ರಾತ್ – ಶ್ರೀಕೃಷ್ಣನ ಮಗನಾದ, ಕಾಮಾತ್ಋತೇ—ಕಾಮನನ್ನು ಬಿಟ್ಟು, ಬೇರೆಯವರಿಂದ, ಕ್ವಚಿತ್ – ಯಾವ ಸಂದರ್ಭದಲ್ಲಿಯೂ, ಅವಧ್ಯ: ಅವಧ್ಯನಾದವನು; ಆಸೀತ್ – ಇದ್ದನೋ, ತಂ ಹಂತುಂ ಏವ – ಅವನನ್ನು ಕೊಲ್ಲುವದಕ್ಕಾಗಿಯೇ, ಸ್ವಂ ಪುತ್ರಂ ಪ್ರದ್ಯುಮ್ನಂ—ತನ್ನ ಮಗನಾದ ಪ್ರದ್ಯುಮ್ನನನ್ನು, ಉದರೇ ಅಪ್ಯ ಚ – ಹೃದಯದಲ್ಲಿಟ್ಟುಕೊಂಡೇ, ಇಹ ಆಯಾತ: – ಇಲ್ಲಿಗೆ ಬಂದನು. ಚ—ಅಷ್ಟೇ ಅಲ್ಲದೆ, ಸ್ವೋದರಾತ್—ತನ್ನ ಹೃದಯದಿಂದ, ಸುತಂ ನಿಸ್ಸಾರಯಿತ್ವಾ – ಮಗನನ್ನು ಹೊರಗೆ ತಂದು, ತಂ – ಆ ವಕ್ರಾಸುರನನ್ನು, ಕಕ್ಷಂ ಚ – ಅವನಿರುವ ಈ ವನವನ್ನೂ ಕೂಡ, ದದಾಹ – ಸುಟ್ಟನು. ದೇವತಾ:—ದೇವತೆಗಳೇ, ದಗ್ಧಂ ಕಕ್ಷಂ–(ಅಸುರನನ್ನು ಹಾಗು ವನವನ್ನು ಸುಟ್ಟಿದ್ದಾನೆ ಎಂಬುದರಬಗ್ಗೆ ಜ್ಞಾಪಕವಾದಿರುವ) ಸುಟ್ಟಂಥ ಅಡವಿಯನ್ನೇ, ಪಶ್ಯತ—ನೋಡಿರಿ. ॥೧೯೦॥೧೯೨॥೧೯೩॥

ಜ್ವಾಲಾಮಾಲಾಕರಾಲೇನ ಸ್ವತೇಜೋ ವರ್ಧಿತೇನ ಚ।
ಪ್ರದ್ಯುಮ್ನೇನೈವ ತಂ ದೈತ್ಯಂ ದಗ್ಧ್ವಾವನಸಮನ್ವಿತಮ್ ॥೧೯೪॥

ಪುನಶ್ಚ ಸ್ವೋದರೇ ಪುತ್ರಂ ಸ್ಥಾಪಯಾಮಾಸ ಕೇಶವ: ।
ಸದ್ಯೋಗರ್ಭಂ ಪುನಸ್ತಂ ಚ ರುಗ್ಮಿಣ್ಯಾಂ ಜನಯಿಷ್ಯತಿ ॥೧೯೫॥

ಕೇಶವಃ—ಶ್ರೀಕೃಷ್ಣನು, ಜ್ವಾಲಾಮಾಲಾಕರಾಲೇನ – ವಿಶೇಷತೇಜಸ್ಸಿನ ಸಮೂಹದಿಂದ ಭಯಂಕರನಾಗಿರುವ, ಸ್ವತೇಜೋವರ್ಧಿತೇನ – ತನ್ನ ಅನುಗ್ರಹದಿಂದ ಬಂದಿರುವ ದೈತ್ಯಹನನದ ಶಕ್ತಿ ವಿಶೇಷದಿಂದ ಕೂಡಿರುವ, ಪ್ರದ್ಯುಮ್ನೇನ ಏವ - ಪ್ರದ್ಯುಮ್ನನಿಂದಲೇ, ವನಸಮನ್ವಿತಮ್ತಂ ದೈತ್ಯಂ – ವನದಿಂದ ಕೂಡಿದಂಥ ಆ ವಕ್ರದೈತ್ಯನನ್ನು, ದಗ್ಧ್ವಾ – ಸುಟ್ಟು, ಪುನಃ ಚ – ಮತ್ತೆ ಕೂಡ, ಪುತ್ರಂ - ಮಗನಾದ ಪ್ರದ್ಯುಮ್ನನನ್ನು, ಸ್ವೋದರೆ—ತನ್ನ

ಹೃದಯಂದಲ್ಲಿಯೇ, ಸ್ಥಾಪಯಾಮಾಸ – ಇಟ್ಟುಕೊಂಡನಂ, ಪದ್ಮೋಗರ್ಭಂ – ತತ್ಕ್ಷಣದಲ್ಲಿ ಗರ್ಭಗತನಾದ, ತಂ – ಆ ಪ್ರದ್ಯುಮ್ನನನ್ನೂ, ಪುನ:—ಮತ್ತೆ, ರುಕ್ಮಿಣ್ಯಾಂ ಚ – ರುಕ್ಮಿಣಿಯಲ್ಲಿ, ಜನಯಿಷ್ಯತಿ—ಪಡೆಯುವನಂ. ॥೧೯೪॥೧೯೫॥

ಪೂರ್ವವತ್ಕ್ಷಣ ಮಾತ್ರೇಣಯುವಾ ಚ ಸ ಭವಿಷ್ಯತಿ।
ದೃಷ್ಟವೇತನ್ನಾರದಾದ್ಯೈರ್ಮುನಿಭಿಸ್ಸರ್ವಮೇವ ಚ ॥೧೯೬॥

ಸ: ಚ – ಆಪ್ರದ್ಯುಮ್ನನೂ ಕೂಡ, ಪೂರ್ವವತ್ – ಈ ಮೊದಲು ವಕ್ರಾಸುರನ ಸಂಹಾರಕ್ಕಾಗಿ ಹುಟ್ಟಿದಾಗ ಹುಟ್ಟಿದ ಕ್ಷಣದಲ್ಲಿಯೇ ತರುಣನಾದಂತೆ, ಕ್ಷಣಮಾತ್ರೇಣ – ಕ್ಷಣಮಾತ್ರಸಮಯದಲ್ಲಿಯೇ, ಯುವಾ ಭವಿಷ್ಯತಿ–ಯುವಕನಾಗುತ್ತಾನೆ. ಏತತ್ ಸರ್ವಂ ಚ – ಇದೆಲ್ಲವೂ ಕೂಡ, ನಾರದಾದ್ಯೈಃ ಮುನಿಭಿ: - ನಾರದಾದಿ ಮುನಿಗಳಿಂದ ದೃಷ್ಟಂ—ನೋಡಲ್ಪಟ್ಟಿದೆ. (ಹೀಗೆ ಪ್ರತ್ಯಕ್ಷಸಿದ್ಧವೂ ಆಗಿದೆ) ॥೧೯೬॥

ಏವಂ ಕ್ರೀಡತ್ಯಯಂ ದೇವಃಪೂರ್ಣೈಶ್ವರ್ಯೇಣ ಕೇವಲಮ್।
ಇತ್ಯುಕ್ತೇ ಕೇಶವಂ ನೇಮುರ್ದೇವಾಶ್ಶಕ್ರಪುರೋಗಮಾ: ॥೧೯೭॥

ಏವಂ – ಈ ರೀತಿಯಾದಿ, ಅಯಂ ದೇವಃ – ಕ್ರೀಡಾದಿಗುಣವಿಶಿಷ್ಟನಾದ ಈ ಭಗವಂತನು, ಕೇವಲಮ್ ಪೂರ್ಣೈಶ್ವರ್ಯೇಣ– ಕೇವಲ ತನ್ನ ಪೂರ್ಣೈಶ್ವರ್ಯದಿಂದ. ಕ್ರೀಡತಿ - ಕ್ರೀಡಿಸುತ್ತಾನೆ ಇತಿ – ಎಂದು, ಉಕ್ತೇ ಸತಿ—ರುದ್ರದೇವರಿಂದ ಹೇಳಲ್ಪಡುತ್ತಿರಲು, ಶಕ್ರಪುರೋಗಮಾಃ ದೇವಾ: – ದೇವೇಂದ್ರನೇ ಮೊದಲಾದ ದೇವತೆಗಳು, ಕೇಶವಂ – ಶ್ರೀಕೃಷ್ಣನನ್ನು, ನೇಮುಃ: – ನಮಸ್ಕರಿಸಿದರು. ॥೧೯೭॥

ತತೋ ಹರಿರ್ಬ್ರಹ್ಮಸುರೇಂದ್ರಮುಖ್ಯೈಸ್ಸುರ್ಯೈಃ ಸ್ತುತೋ ಗರುಡಸ್ಕಂಧಸಂಸ್ಥಃ।
ಪುನ:ಪನ: ಪ್ರಣತಶ್ಶಂಕರೇಣ ಸ್ತುತಸ್ತೃತೀಯೇಽಹ್ನಿ ನಿಜಾಂ ಪುರೀಮಗಾತ್ ॥೧೯೮॥

ತತಃ – ಅನಂತರ, ಬ್ರಹ್ಮಸುರೇಂದ್ರಮುಖ್ಯೈಃ ಸುರೈ: – ಬ್ರಹ್ಮ ಇಂದ್ರಾದಿ ದೇವತೆಗಳಿಂದ, ಸ್ತುತಃ–ಸ್ತುತಿಸಲ್ಪಟ್ಟ, ಪುನಃ ಪುನ:–ಮತ್ತೂ ಮತ್ತೂ, ಶಂಕರೇಣ ಸ್ತುತಃಪ್ರಣತ:-ರುದ್ರದೇವರಿಂದ ಸ್ತುತಿಸಲ್ಪಟ್ಟ, ನಮಿಸಲ್ಪಟ್ಟ ಹರಿ:-ಶ್ರೀಕೃಷ್ಣನು, ಗರುಡಸ್ಕಂಧ ಸಂಸ್ಥ:ಸನ್ –ಗರುಡನ ಹೆಗಲಲ್ಲಿ ಕುಳಿತವನಾಗಿ, ತೃತೀಯೇ ಅಹ್ನಿ - ಹೊರಟ ದಿನದಿಂದ 3 ನೆಯ ದಿನದಲ್ಲಿ ನಿಜಾಂ ಪುರೀಂ—ತನ್ನ ದ್ವಾರಕೆಯನ್ನು ಕುರಿತು, ಅಗಾತ್ –ಹೋದನು. ॥೧೯೮॥

ಭಾವಾನುವಾದ ೧೭೬—೧೯೮

ಒಂದು ದಿನದಲ್ಲಿ ಹನ್ನೆರಡು ವರ್ಷದ ವ್ರತವಾಗುವಂತಾಗಬೇಕಾದರೆ ಶ್ರೀಕೃಷ್ಣಪರಮಾತ್ಮನು ಮಾಡಿಕೊಂಡ ಕಾಲಗಣನೆ ಹೀಗಿದೆ ಎಂದು ತಿಳಿಸುತ್ತಾ ಇದ್ದಾರೆ. ಅದೇನೆಂದರೆ–ಒಂದು ದಿನಕ್ಕೆ ೨೧೬೦೦ ಶ್ವಾಸಗಳು ನಡೆಯುತ್ತವೆ. ೧೨ ವರ್ಷಗಳಿಗೆ ೧೪೪ ತಿಂಗಳುಗಳು ಆಗುವವು' ಒಟ್ಟು ಶ್ವಾಸಗಳ ಸಂಖ್ಯೆಯನ್ನು ತಿಂಗಳುಗಳ ಸಂಖ್ಯೆಯಿಂದ ಭಾಗಿಸಲು ಬರುವದು ೧೫೦ ಶ್ವಾಸಗಳು. ಅಂದರೆ ೧೫೦ ಶ್ವಾಸಗಳಿಗೆ ಬೇಕಾಗುವ ಕಾಲವನ್ನು ಒಂದು ತಿಂಗಳನ್ನಾಗಿ ಭಾವಿಸಿದ್ದನು. ಈ ಗಣನೆಯ ಪ್ರಕಾರ ಮಾಸವ್ರತವನ್ನು ಆ ರೀತಿ ದ್ವಾದಶಾಬ್ದವ್ರತವನ್ನು ಆಚರಿಸಿದನು. ಆ ಸಮಯದಲ್ಲಿ ಗರುಡದೇವರೇ ಮೊದಲಾದವರು ಭಗವಂತನ ಸೇವೆಯನ್ನು ಮಾಡಿದರು. ಭಗವಂತನು

ಹೋಮಾದಿಕ್ರಿಯೆಂಗಳನ್ನು ಮಾಡಿದನು. ಅದೆಲ್ಲವನ್ನು ತನ್ನ ಉದ್ದೇಶವಾಗಿಯೇ ಮಾಡುತ್ತಿದ್ದರೂ ಕೂಡ ದುಷ್ಟರಿಗೆ ರುದ್ರದೇವರ ಉದ್ದೇಶವಾಗಿ ಮಾಡುತ್ತಿರುವಂತೆ ತೋರಿಸಿದನು ಈ ರೀತಿ ಅಲ್ಲಿರುವಾಗ ಬ್ರಹ್ಮಾದಿದೇವತೆಗಳು, ಸನಕಾದಿ ಋಷಿಶ್ರೇಷ್ಠರು, ಪಿತೃದೇವತೆಗಳು, ಗಂಧರ್ವ ಸಿದ್ಧ ಮೊದಲಾಗಿ ಎಲ್ಲರೂ ಬಂದರು. ಶ್ರೀರುದ್ರದೇವರೂ ಕೂಡ (ತನ್ನ ಲೋಕಕ್ಕೆ) ತನ್ನ ಮನೆಗೆ ಸರ್ವರಿಗೂ ದೇವನಾದ ತನ್ನ ದೇವನಾದ ಶ್ರೀಕೃಷ್ಣ ಬಂದದ್ದನ್ನು ತಿಳಿದು ತನ್ನ ಸೇವಕರಾದ ಭೂತಗಳ ಗಣದಿಂದ, ಪತ್ನಿಯಿಂದ ಕೂಡಿಕೊಂಡು ಪೂಜೆ ಸಾಮಗ್ರಿಸಹಿತನಾಗಿ ಬಂದು ಶ್ರೀಕೃಷ್ಣ ಪರಮಾತ್ಮನ ಪಾದಗಳನ್ನು ಪೂಜಿಸಿ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಮಾಡಿ ಸ್ತುತಿಸಿದನು. ಶ್ರೀಕೃಷ್ಣನು ದುಷ್ಟಜನರ ಮೋಹನ ಕಾರ್ಯವನ್ನು ತನ್ನ ಮುಖ್ಯ ಉದ್ದೇಶವಾಗಿ ಇಟ್ಟುಕೊಂಡಿದ್ದರಿಂದ(ವಸ್ತುತಃ ರುದ್ರದೇವರ ಹೃದಯದಲ್ಲಿರುವ ತನ್ನ ರೂಪವನ್ನೇ ಸ್ತುತಿಸುತ್ತಾ ಇದ್ದರೂ ಕೂಡ) ಮೇಲೆ ನೋಡುವಾಗ ರುದ್ರನನ್ನೇ ಸ್ತುತಿಸುತ್ತಿರುವಂತೆ ತೋರಿಸಿದನು. ಅದನ್ನು ಕೇಳಿದ ಶ್ರೀರುದ್ರದೇವರೂ ಎಲ್ಲ ದೇವತೆಗಳನ್ನು ಸಂಬೋಧಿಸಿ 'ಎಲ್ಲ ದೇವತೆಗಳೇ, ಕೇಳಿರಿ ಶ್ರೀಹರಿಯೇ ಸರ್ವೋತ್ತಮನು ಅವನೇ ಎಲ್ಲರಿಂದ ಪ್ರಾಪ್ಯನು. ಅವನನ್ನು ಹೊಂದುವದಕ್ಕಾಗಿ ನನ್ನನ್ನು, ಮುಖ್ಯಪ್ರಾಣದೇವರನ್ನು ಶ್ರೀಲಕ್ಷ್ಮೀದೇವಿಯನ್ನು ಹೊಂದುವರು. ನನಗೂ, ಬ್ರಹ್ಮದೇವರಿಗೂ, ಲಕ್ಷ್ಮೀದೇವಿಗೂ, ಅಂತೂ ಎಲ್ಲರಿಗೂ ಉತ್ತಮನಾದವನು ಶ್ರೀಹರಿಯೇ; ಇದು ಸಕಲ ಶಾಸ್ತ್ರಗಳ ನಿರ್ಣಯವು. ಆದ್ದರಿಂದ ಇದನ್ನೇ ಸ್ಮರಿಸುತ್ತಾ ಇರಬೇಕು.' ಎಂದು ಹೇಳಿದರು. ಅದನ್ನು ಕೇಳಿದ ಎಲ್ಲ ದೇವತೆಗಳೂ ಅತಿ ಹೆಚ್ಚು ಹೆಚ್ಚು ಭಕ್ತಿಯಿಂದ ಶ್ರೀಹರಿಯನ್ನು ನಮಸ್ಕರಿಸಿದರು. ಎಲ್ಲ ದೇವತೆಗಳೂ ಮೊದಲೇ ವಿಷ್ಣುಸರ್ವೋತ್ತಮತ್ವವನ್ನು ತಿಳಿದವರಾದರೂ ಕೂಡ ಕ್ವಚಿತ್ ಯಾವದಾದರೂ ಸಂಶಯವಿದ್ದರೂ (ಆಗ ಆ ರುದ್ರದೇವರ ಮಾತುಗಳಿಂದ) ಅವುಗಳ ಪರಿಹಾರವನ್ನೂ ಕೂಡಪಡೆದು ಜ್ಞಾನ-ಭಕ್ತಿಗಳ ಅಭಿವೃದ್ಧಿಯನ್ನು ಪಡೆದರು.

ಶ್ರೀಕೃಷ್ಣನು ನಿನ್ನಿಂದ ಪುತ್ರನನ್ನು ಪಡೆಯುವಂತೆ ವರವನ್ನು ಪಡೆಯುತ್ತೇನೆ ಎಂದು ಹೇಳಿದ್ದನ್ನು ಕೃತಿಯಲ್ಲಿ ತರುತ್ತಾ 'ನನಗೆ ಮಕ್ಕಳನ್ನು ಕೊಡು' ಎಂದು ರುದ್ರನನ್ನು ಕೇಳಿದನು. ಆಗ ರುದ್ರದೇವರು 'ನಿನಗೆ ಪ್ರದ್ಯುಮ್ನನೆಂಬ ಮಗನು ಹುಟ್ಟಿಯಾಗಿದೆ. ಅವನೇ ನನ್ನ ವರದಿಂದ ಹುಟ್ಟಿದವನು ಎಂಬ ಪ್ರಸಿದ್ಧಿಯು ಆಗಲಿ. ಹಿಂದೆ ಕಾಮನನ್ನು ನಾನು ಸುಟ್ಟಾಗ ಅವನ ಪತ್ನಿಯಾದ ರತಿದೇವಿಯು ತನ್ನಗಂಡನನ್ನು ಕೊಡು ಎಂದು ಕೇಳಿದಳು ಅದಕ್ಕೆ ನಾನು ಹೀಗೆ ಹೇಳಿದ್ದೇನೆ ನಿನ್ನ ಗಂಡನು ಶ್ರೀಕೃಷ್ಣಪರಮಾತ್ಮನಿಂದ ಹುಟ್ಟಿದಾಗ ಅವನನ್ನು ನೀನು ಹೊಂದುವಿ' ಎಂದು. ಆದ್ದರಿಂದ ಇಷ್ಟು ಹೇಳಿದ ಮಾತ್ರದಿಂದ ಅವನು ನನ್ನ ವರದಿಂದ ಹುಟ್ಟಿದವನು ಎಂದು ಪ್ರಸಿದ್ಧವಾಗಲಿ. ನಿನ್ನ ಅಪ್ಪಣೆಕೊಡು. ನೀನು ನನಗೆ ಶರಣಾಗತನಾಗಿ ಬಂದಿರುವ, ನಿನ್ನ ದಾಸನಾದ ನನ್ನನ್ನು ರಕ್ಷಿಸು ಎಂದು ಪ್ರಾರ್ಥಿಸಿ ಪ್ರಣಮಿಸಿ ಎಲ್ಲ ದೇವತೆಗಳನ್ನು ಕುರಿತು "ಎಲೈದೇವತೆಗಳೇ; ಈ ಶ್ರೀಕೃಷ್ಣನು ಇಲ್ಲಿಗೆ ಯಾವದಕ್ಕಾಗಿ ಬಂದಿದ್ದಾನೆ ಎಂಬುದನ್ನು ಹೇಳುತ್ತೇನೆ ಕೇಳಿರಿ—ನನ್ನಿಂದ ಮಗನನ್ನು ಪಡೆಯಲು ಬಂದದ್ದಲ್ಲ; ಅದೆಲ್ಲ ನಾಟಕ. ನಿಜವಾಗಿ ಬಂದದ್ದು ಏಕೆಂದರೆ ಇಲ್ಲಿ ವಕ್ರ ಎಂಬ ಅಸುರನಿದ್ದನು. ಅವನಿಗೆ ಬ್ರಹ್ಮದೇವರ ವರವು 'ಶ್ರೀಕೃಷ್ಣನಿಂದ ಅದೇ ಹುಟ್ಟಿದ ಮಗನನ್ನು ಬಿಟ್ಟು ಬೇರೆಯಾರಿಂದಲೂ ವಧವು ಬಾರದಿರಲಿ' ಎಂದು ಇತ್ತು ಆ ವರದ ಪ್ರಕಾರ ನಡೆದು ಇವನ ಸಂಹಾರ ಮಾಡಲು, ತನ್ನ ಮಗನಾದ ಪ್ರದ್ಯುಮ್ನನನ್ನು ತನ್ನ ಹೃದಯದೊಳಗೇ ಇಟ್ಟುಕೊಂಡು ಬಂದು ಅವನನ್ನು ತನ್ನ ಉದರದಿಂದ ಹೊರಗೆ ತಂದು ತನ್ನ ವಿಶೇಷ ಸನ್ನಿಧಾನವನ್ನು ಅವನಲ್ಲಿಟ್ಟದ್ದರಿಂದ ವಿಶೇಷ ಶಕ್ತಿಯಿಂದ ಕೂಡಿದ ಅವನಿಂದ ಈ ವಕ್ರಾಸುರನನ್ನು ಅವನಿರುವ ಈ ವನವನ್ನೂ ಕೂಡ ಸುಟ್ಟು ಭಸ್ಮ ಮಾಡಿದನು. ಅದಕ್ಕೆ ಈ ಸುಟ್ಟವನವೇ ಸಾಕ್ಷಿಯಾಗಿದೆ ನೋಡಿರಿ. ಇದೆಲ್ಲವನ್ನು ನಾರದಾದಿ ಮುನಿಗಳು ಪ್ರತ್ಯಕ್ಷ ನೋಡಿದ್ದು ಅದೂ ಪ್ರಮಾಣವೇ ಆಗಿದೆ. ಈ ಪ್ರದ್ಯುಮ್ನನನ್ನು ಮತ್ತೆ ತನ್ನ ಉದರದಲ್ಲಿ ಇಟ್ಟುಕೊಂಡಿದ್ದು ಅವನನ್ನು ರುಕ್ಮಿಣಿಯಲ್ಲಿ ಪುನಃಪಡೆದಂತೆಮಾಡುತ್ತಾನೆ. ರುಕ್ಮಿಣಿಯಲ್ಲಿ ಹುಟ್ಟಿದ ಪ್ರದ್ಯುಮ್ನನು ಈ ಮೊದಲು ವಕ್ರಾಸುರನನ್ನು ಕೊಲ್ಲಲು ಶ್ರೀಕೃಷ್ಣನಿಂದ ಹೊರಬಂದಾಗ ಕೂಡಲೇ ತರುಣನಾದಂತೆ, ಕೂಡಲೇ ತರುಣನೇ ಆಗುವನು. ಹೀಗೆ ಈ ಭಗವಂತ ಶ್ರೀಕೃಷ್ಣನು ತನ್ನ ಲೀಲೆಯನ್ನು ತೋರುತ್ತಿರುವನು." ಎಂದು ಹೇಳಿದರು. ಅದನ್ನು ಕೇಳಿದ ಎಲ್ಲ ದೇವತೆಗಳು ಶ್ರೀಕೃಷ್ಣನನ್ನು ನಮಸ್ಕರಿಸಿದರು ಬ್ರಹ್ಮರುದ್ರ ಇಂದ್ರಾದಿದೇವತೆಗಳಿಂದ ಸ್ತುತಿಸಲ್ಪಟ್ಟವನಾಗಿ ಗರುಡಾರೂಢನಾಗಿ ತಾನು ದ್ವಾರಕೆಯಿಂದ ಹೊರಟ ದಿನವಿಂದ ಮುನ್ನೂರನೆಯ ದಿನಕ್ಕೆ ವಾಪಸ್ ಊರಿಗೆ (ದ್ವಾರಕೆಗೆ) ಬಂದನು.

ಕೃಷ್ಣೇಪ್ರಯಾತೇ ನಿಲಯಂ ಪುರದ್ವಿಷೋ ರಾತ್ರೌಪೌಂಡ್ರೋ ವಾಸುದೇವಸ್ಸಮಾಗಾತ್।
ಸಹೈಕಲವ್ಯೇನ ನಿಜೇನ ಮಾತುಃಪಿತ್ರಾ ತಥಾsಕ್ಷೌಹಿಣಿಕತ್ರಯೇಣ ॥೧೯೯॥

ಕೃಷ್ಣೇ - ಶ್ರೀಕೃಷ್ಣನು ಪುರದ್ವಿಷಃ – ತ್ರಿಪುರಾಸುರ ಸಂಹಾರಕನಾದ ರುದ್ರದೇವರ, ನಿಲಯಂ – ವಾಸ ಸ್ಥಾನವಾದ ಕೈಲಾಸ ಲೋಕಕ್ಕೆ, ಪ್ರಯಾತೇ ಸತಿ – ಹೋಗಿರುತ್ತಿರಲು, ರಾತ್ರೌ – ಆಗ ಎರಡನೆಯ ದಿನದ ರಾತ್ರಿಯಲ್ಲಿ, ಪೌಂಡ್ರಃ ವಾಸುದೇವಃ – ಪೌಂಡ್ರಕವಾಸುದೇವನು, ಏಕಲವ್ಯೇನ ಸಹ – ಏಕಲವ್ಯನಿಂದ ಕೂಡಿಕೊಂಡು, ತಥಾ– ಹಾಗು, ನಿಜೇನ ಮಾತುಃ ಪಿತ್ರಾ ಸಹ—ತನ್ನ ತಾಯಿಯ ತಂದೆಯಾದ ಕಾಶೀರಾಜನಿಂದ ಕೂಡಿಕೊಂಡು, ಅಕ್ಷೌಹಿಣಿಕ ತ್ರಯೇಣ ಸಹ—ಮೂರು ಅಕ್ಷೌಹಿಣೀ ಸೈನ್ಯದಿಂದ ಕೂಡಿಕೊಂಡು, ಸಮಾಗಾತ್—(ದ್ವಾರಕೆಗೆ) ಬಂದನು. ॥೧೯೯॥

ಪುರೀಂ ಪ್ರಭಂಜನ್ತಮುಮುಂ ವಿದಿತ್ವಾ ಸರಾಮಶೈನೇಯಯದುಪ್ರವೀರಾಃ।
ಸಂಯೋಧಯಾಮಾಸುರಥಾಭ್ಯವರ್ಷಚ್ಛರೈರ್ನಿಷಾದಾಧಿಪ ಏಕಲವ್ಯಃ ॥೨೦೦॥

ಸರಾಮಶೈನೇಯಯದುಪ್ರವೀರಾಃ-ಬಲರಾಮ ಸಾತ್ಯಕಿ ಇವರಿಂದ ಸಹಿತರಾದ ಯಾದವ ವೀರರು, ಅಮುಂ- ಆ ಪೌಂಡ್ರಕ ವಾಸುದೇವನನ್ನು, ಪುರೀಂಪ್ರಭಂಜಂತಂ—ದ್ವಾರಕಾಪಟ್ಟಣವನ್ನೇ ಹಾಳುಮಾಡುತ್ತಿರುವವನನ್ನಾಗಿ, ವಿದಿತ್ವಾ—ತಿಳಿದು, ಸಂಯೋಧಯಾಮಾಸುಃ – ಚೆನ್ನಾಗಿ ಯುದ್ಧ ಮಾಡಿದರು. ಅಥ – ನಂತರ, ನಿಷಾದಾಧಿಪಃ ಏಕಲವ್ಯಃ – ನಿಷಾದರ ಮುಂಖಂಡನಾದ ಏಕಲವ್ಯನು ಶರೈಃ ಅಭ್ಯವರ್ಷತ್ – ಬಾಣಗಳ ಸುರಿಮಳೆ ಕರೆದಿದನು. ॥೨೦೦॥

ತದಸ್ತ್ರಶಸ್ತ್ರೈಸ್ಸಹಸಾ ವಿಷಣ್ಣಾ ಯದುಪ್ರವೀರಾ ವಿಹತಪ್ರದೀಪಾಃ।
ಸಹೈವ ರಾಮೇಣ ಶಿನೇಶ್ಚ ನಪ್ತ್ರಾ ಸಮಾವಿಶನ್ ಸ್ವಾಂ ಪುರಮೇವ ಸರ್ವೇ ॥೨೦೧॥

ತದಸ್ತ್ರಶಸ್ತ್ರೈಃ—ಆ ಏಕಲವ್ಯನ ಶಸ್ತ್ರಾಸ್ತ್ರಗಳಿಂದ, ವಿಹತಪ್ರದೀಪಾಃ—ನಾಶವಾಡಲ್ಪಟ್ಟ ದೀಪವುಳ್ಳ, ಸಹಸಾ – ಒಮ್ಮೆಲೆ, (ಏಕಲವ್ಯನಿಂದ), ವಿಷಣ್ಣಾಃ – ವಿಷಾದವನ್ನು ಹೊಂದಿದ, ಸರ್ವೇಯದುಪ್ರವೀರಾಃ – ಎಲ್ಲ ಯಾದವ ಶ್ರೇಷ್ಠರು, ರಾಮೇಣ – ಬಲರಾಮನಿಂದ ಚ – ಮತ್ತು, ಶಿನೇಃ ನಪ್ತ್ರಾ – ಶಿನಿ ಎಂಬ ಯಾದವನ ಮೊಮ್ಮಗನಾದ (ಶಿನಿಯಮಗನಾದ ಸತ್ಯಕನ ಮಗನಾದ) ಸಾತ್ಯಕಿಯಿಂದ, ಸಹ – ಕೂಡಿಕೊಂಡು, ಸ್ವಾಂ ಪುರಂ ಏವ - ತಮ್ಮ ಪಟ್ಟಣವನ್ನೇ, ಸಮಾವಿಶನ್ – ಪ್ರವೇಶಿಸಿದರು ॥೨೦೧॥

ಪುನಸ್ಸಮಾದಾಯ ತಥೋರುದೀಪಿಕಾ ಅಗ್ರೇ ಸಮಾಧಾಯ ಚ ರೌಹಿಣೇಯಮ್।
ವಿನಿಸ್ಸೃತಾ ಆತ್ತಶಸ್ತ್ರಾಃ ಸ್ವಪುರ್ಯಾಸ್ಸಿಂಹಾ ಯಥಾ ಧರ್ಷಿತಾಸ್ಸದ್ಮ ಹಾಯಾಃ ॥೨೦೨॥

ಪುನಃ—ಮತ್ತೆ, (ತೇ – ಅವರು) ಉರುದೀಪಿಕಾ - ದೊಡ್ಡ ದೊಡ್ಡ ದೀಪಗಳನ್ನು, ಸಮಾದಾಯ – ತೆಗೆದುಕೊಂಡು, ಚ – ಹಾಗೂ, ರೌಹಿಣೇಯಂ – ಬಲರಾಮನನ್ನು, ಅಗ್ರೇ ಸಮಾಧಾಯಂ—ಮುಂದಿಟ್ಟುಕೊಂಡು, ಆತ್ತ ಶಸ್ತ್ರಾಃ ಸಂತಃ – ಶಸ್ತ್ರಗಳನ್ನು ಧರಿಸಿದವರಾಗಿ, ಯಥಾ—ಹೇಗೆ, ಸಿಂಹಾಃ – ಸಿಂಹಗಳು, ಧರ್ಷಿತಾಃ ಸಂತಃ – ಬೇರೆ ಪ್ರಾಣಿ ಅಥವಾ ಮನುಷ್ಯರಿಂದ ಛೇಡಿಸಲ್ಪಟ್ಟವುಗಳಾಗಿ, ಸದ್ಮಗಹಾಯಾಃ – ತಮ್ಮ ವಾಸಸ್ಥಾನವಾದ ಗುಹೆಯಿಂದ ನಿಸ್ಸರಂತಿ – ಹೊರಗೆ ಹೊರಡುವವೋ, ತಥಾ ಸ್ವಪುರ್ಯಾಃ–ತಮ್ಮ ಪಟ್ಟಣದಿಂದ,ವಿನಿಸ್ಸೃತಾ–ಹೊರ ಬಂದರು ॥೨೦೨॥

ಅಥಾ ಸಸಾದೈಕಲವ್ಯಂ ರಥೇನ ರಾಮಶ್ಶೈನೇಯ:ಪೌಂಡ್ರಕಂ ವಾಸುದೇವಂ।
ಅಯುಧ್ಯತಾಂ ತೌ ಪೌಂಡ್ರಕಃ ಸಾತ್ಯಕಿಶ್ಚ ತಥಾsನ್ಯೋನ್ಯಂ ವಿರಥಂ ಚಕ್ರತುಶ್ಚ ॥೨೦೩॥

ಅಥ—ಅನಂತರ ರಾಮ:—ಬಲರಾಮನು, ಏಕಲವ್ಯಂ – ಏಕಲವ್ಯನವರೆಲೆ, ರಥೇನ ಆಸಸಾದ – ರಥದಿಂದ ಏರಿಬಂದನು; ಶೈನೇಯ:—ಸಾತ್ಯಕಿಯು, ಪೌಂಡ್ರಕಂ ವಾಸುದೇವಂ—ಪೌಂಡ್ರಕ ವಾಸುದೇವನನ್ನು ಕುರಿತು (ಏರಿಹೋದನು). ತೌ —ಆ ಬಲರಾಮ ಏಕಲವ್ಯರಿಬ್ಬರು, ಅಯುಧ್ಯತಾಂ—ಯುದ್ಧವಾಡಿದರು. ತಥಾ – ಹಾಗೆ, ಪೌಂಡ್ರಕ:ಸಾತ್ಯಕಿ: ಚ – ಪೌಂಡ್ರಕ ವಾಸುದೇವನ ಹಾಗು ಸಾತ್ಯಕಿ ಇಬ್ಬರು ಅನ್ಯೋನ್ಯಂ ಅಯುಧ್ಯತಾಂ – ಪರಸ್ಪರ ಯುದ್ಧವಾಡಿದರು. ಚ – ಮತ್ತು, ವಿರಥಂ ಚಕ್ರತು: – ರಥಹೀನರನ್ನಾಗಿ ವಾಡಿದರು. ॥೨೦೩॥

ತತೋ ಗದಾಯುದ್ಧಮಭೂತ್ತಯೋರ್ದ್ವಯೋಸ್ತಥಾ ರಾಮಶ್ಚೈಕಲವ್ಯಶ್ಚ ವೀರೌ ।
ಕೃತ್ವಾsನ್ಯೋನ್ಯಂ ವಿರಥಂ ಗದಾಭ್ಯಾಮಯುಧ್ಯತಾಂ ಜಾತದರ್ಪೌ ಬಲಾಗ್ರ್ಯೌ ॥೨೦೪॥

ತತ:-ಪರಸ್ಪರರು ರಥಹೀನರಾದ ನಂತರ, ತಯೋ:ದ್ವಯೋ:–ಅವರಿಬ್ಬರಿಗೆ (ಸಾತ್ಯಕಿ ಹಾಗು ಪೌಂಡ್ರಕ ವಾಸುದೇವ ಇವರಿಬ್ಬರಿಗೆ). ಗದಾಯುದ್ಧಂ – ಗದೆಗಳಿಂದ ಯುದ್ಧವು. ಅಭೂತ್ – ಆಯಿತು. ತಥಾ – ಹಾಗೆಯೇ, ವೀರೌ ವೀರರಾದ, ಬಲಾಗ್ರ್ಯೌ – ಬಲಿಷ್ಠರಾದ, ಜಾತದರ್ಪೌ—ನಾನು ಶ್ರೇಷ್ಠ ಬಲಿಷ್ಠ ನಾನು ಶ್ರೇಷ್ಠ ಬಲಿಷ್ಠ ಎಂದು ಅಹಂಕಾರವುಳ್ಳ. ರಾಮ ಏಕಲವ್ಯ:, ಚ—ಬಲರಾಮ ಏಕಲವ್ಯ ಇವರಿಬ್ಬರು. ಅನ್ಯೋನ್ಯಂ—ಪರಸ್ಪರವಾಗಿ, ವಿರಥಂ ಕೃತ್ವಾ – ರಥವಿಲ್ಲದವರನ್ನಾಗಿ ಮಾಡಿ, ಗದಾಭ್ಯಾಂ ಅಯುಧ್ಯತಾಂ—ಗದೆಯಿಂದ ಯುದ್ಧ ವಾಡಿದರು. ॥೨೦೪॥

ತಸ್ಮಿನ್ಕಾಲೇ ಕೇಶವೋ ವೈನತೇಯಮಾರುಹ್ಯಾಯಾದ್ಯತ್ರ ತೇ ಯುದ್ಧ ಸಂಸ್ಥಾ ॥

ದೃಷ್ಟ್ವಾsಕೃಷ್ಣಂ ಹರ್ಷಸಂಪೂರಿತಾತ್ಮಾ ರಾಮೋ ಹಂತುಂ ಚೈಕಲವ್ಯಂ ಸಮೈಚ್ಛತ್ ॥೨೦೫॥

ತಸ್ಮಿನ್ಕಾಲೇ – ಆ ಸಮಯದಲ್ಲಿ, ಕೇಶವ: – ಶ್ರೀಕೃಷ್ಣಪರಮಾತ್ಮನು, ವೈನತೇಯಂ ಆರುಹ್ಯ ಗರುಡನನ್ನು ಏರಿ, ತೇ—ಆ ಯಾದವ ಶ್ರೇಷ್ಠರು, ಯತ್ರ ಯುದ್ಧ ಸಂಸ್ಥಾ:—ಎಲ್ಲಿ ಯುದ್ಧದಲ್ಲಿ ತೊಡಗಿದ್ದರೋ, ತತ್ರ – ಅಲ್ಲಿಗೆ, ಅಯಾತ್ – ಹೋದನು. ಕೃಷ್ಣಂ ದೃಷ್ಟ್ವಾ – ಶ್ರೀಕೃಷ್ಣಪರಮಾತ್ಮನನ್ನು ನೋಡಿ, ಹರ್ಷ ಸಂಪೂರಿತಾತ್ಮಾ–ಆನಂದದಿಂದ ಕೂಡಿದಂಥ ರಾಮ:—ಬಲರಾಮದೇವರು, ಏಕಲವ್ಯಂ ಹಂತುಂ ಚ–ಏಕಲವ್ಯನನ್ನು ಕೊಲ್ಲುವ ಕಾರ್ಯಕ್ಕಾಗಿಯೇ, ಸಮೈಚ್ಛತ್ —ಇಚ್ಛಿಸಿದರು. ॥೨೦೫॥

ಉದ್ಯಮ್ಯ ದೋರ್ಭ್ಯಾಂ ಸ ಗದಾಂ ಜವೇನ ಯದಾsಪತದ್ರೌಹಿಣೇಯೋ ನಿಷಾದಮ್ ।
ಬಲಂ ಕೋಪಂ ಚಾಸ್ಯ ದೃಷ್ಟ್ವೈವ ಏಕಲವ್ಯ: ಪರಾದ್ರವಜ್ಜೀವಿತೇಪ್ಸು: ಸುದೂರಮ್ ।೨೦೬।

ಸ: ರೌಹಿಣೇಯ: – ಆ ಬಲರಾಮದೇವರು, ಯದಾ – ಯಾವಾಗ, ದೋರ್ಭ್ಯಾಂ – ತನ್ನ ಬಾಹುಗಳಿಂದ, ಗದಾಂ —ಗದೆಯನ್ನು, ಉದ್ಯಮ್ಯ—ಎತ್ತಿ, ಜವೇನ – ವೇಗದಿಂದ, ನಿಷಾದಂ – ಏಕಲವ್ಯನ ಮೇಲೆ, ಅಪತತ್—ಏರಿ ಬಂದರೋ, ತದಾ – ಆಗ, ಏಕಲವ್ಯ:—ಏಕಲವ್ಯನು, ಅಸ್ಯ – ಈ ಬಲರಾಮದೇವರ, ಬಲಂ ಕೋಪಂ ಚ – ಸಾಮರ್ಥ್ಯವನ್ನು, ಕ್ರೋಧವನ್ನೂ ಕೂಡ, ದೃಷ್ಟ್ವಾ – ನೋಡಿ, ಜೀವಿತೇಪ್ಸು: ಸನ್—ಬದುಕಬೇಕೆಂಬ ಇಚ್ಛೆಯುಳ್ಳವನಾಗಿ, ಸುದೂರಂ – ಅತ್ಯಂತ ದೂರಕ್ಕೆ, ಪರಾದ್ರವತ್ – ಓಡಿದನು. ॥೨೦೬॥

ವಿದ್ರಾವಯನ್ ರೌಹಿಣೇಯೋಽನ್ವಯಾತ್ತಂ ಭೀತೋಽಪತಚ್ಚೈಕಲವ್ಯೋಽಂಬುಧೌ ಸಃ।
ವೇಲಾಂತಂ ತಂ ದ್ರಾವಯಿತ್ವಾತ ತಸ್ಥೌ ರಾಮೋ ಗದಾಪಾಣಿ ರದೀನ ಸತ್ವಃ ॥೨೦೭॥

ರೌಹಿಣೇಯಃ – ಬಲರಾಮದೇವರು ತಂ – ಆ ಏಕಲವ್ಯನನ್ನು, ವಿದ್ರಾವಯನ್ – ಓಡಿಸುವವರಾಗಿ, ಅನ್ವಯಾತ್ – ಬೆನ್ನುಹತ್ತಿಹೋದರು. ಸಃ ಏಕಲವ್ಯಃ ಚ – ಆ ಏಕಲವ್ಯನಾದರೂ, ಭೀತಃ ಸನ್ – ಹೆದರಿದವನಾಗಿ, ಅಂಬುಧೌ ಸಮುದ್ರದಲ್ಲಿ. ಅಪತತ್ – ಬಿದ್ದನು. ಅದೀನ ಸತ್ವಃ ರಾಮಃ – ಹೆಚ್ಚು ಜ್ಞಾನ ಬಲಗಳುಳ್ಳ ಬಲರಾಮದೇವರು, ತಂ – ಆ ಏಕಲವ್ಯನನ್ನು ವೇಲಾಂತಂ – ದಂಡೆಯ ಪರ್ಯಂತ, ದ್ರಾವಯಿತ್ವಾ – ಓಡಿಸಿ, ಅತ್ರ – ಈ ದಂಡೆಯಲ್ಲಿ ಗದಾಪಾಣಿಃ ಸನ್ – ಗದಾಧಾರಿಗಳಾಗಿಯೇ, ತಸ್ಥೌ – ನಿಂತರು. ॥೨೦೭॥

ಸುಪಾಪೋಽಸಾವೇಕಲವ್ಯಸ್ತ್ವಭೀತೋ ರಾಮಂ ಮತ್ವೈವಾನುಯಾತಂ ಪುನಶ್ಚ।
ಸಮುದ್ರೇ ಽಶೀತಿಂ ಯೋಜನಾನಾಮತೀತ್ಯ ಪಶ್ಚಾದ್ವೈಕ್ಷದ್ದ್ವೀಪಮೇವಾಧಿರುಹ್ಯ ॥೨೦೮॥

ಸುಪಾಪಃ – ಅತಿ ಪಾಪಿಷ್ಠನಾದ, ಅಸೌ ಏಕಲವ್ಯಃ – ಆ ಏಕಲವ್ಯನು, ಅಭೀತಃ ಸನ್ – ಅತಿ ಹೆದರಿದವನಾಗಿ, ರಾಮಂ – ಬಲರಾಮದೇವರನ್ನು, ಪುನಃ ಚ – ಇನ್ನೂ ಕೂಡ, ಅನುಯಾಂತಂ – ತನ್ನನ್ನು ಅನುಸರಿಸಿಯೇ ಬರುತ್ತಿದ್ದಾನೆ ಎಂಬುದಾಗಿ ಮತ್ವಾ – ತಿಳಿದು, ಸಮುದ್ರೇ – ಸಮುದ್ರದಲ್ಲಿ, ಯೋಜನಾನಾಂ ಅಶೀತಿಂ – ಎಂಭತ್ತು ಯೋಜನೆಗಳ ದೂರವನ್ನು, ಅತೀತ್ಯ – ದಾಟಿ ಕ್ರಮಿಸಿ, ಪಶ್ಚಾತ್ – ಆಮೇಲೆ, ದ್ವೀಪಂ ಅಧಿರುಹ್ಯ – ಒಂದು ದ್ವೀಪ ಪ್ರದೇಶವನ್ನು ಏರಿ, ಪಶ್ಚಾತ್ – ಹಿಂಬದಿಗೆ, ಐಕ್ಷತ್ (ಬಲರಾಮನು ಇನ್ನೂ ಬರುತ್ತಿದ್ದಾನೋ ಹೇಗೆ ಎಂಬುದನ್ನು) ಐಕ್ಷತ್ – ನೋಡಿದನು. ॥೨೦೮॥

ರಾಮೋ ವಿಜಿತ್ಯಾತಿಬಲಂ ರಣೇ ರಿಪುಂ ಮುದೈವ ದಾಮೋದರಮಾಸಸಾದ।
ಪೌಂಡ್ರಸ್ತ್ವವಜ್ಞಾಯ ಶಿನಿಪ್ರವೀರಂ ನಿವಾರ್ಯಮಾಣೋಽಪಿ ಯಯೌ ಜನಾರ್ದನಮ್ ॥೨೦೯॥

ರಾಮಃ – ಬಲರಾಮದೇವರು, ರಣೇ – ಯುದ್ಧದಲ್ಲಿ, ಅತಿಬಲಂ ರಿಪುಂ – ಅತಿ ಬಲಿಷ್ಠನಾದ ವೈರಿಯಾದ ಏಕಲವ್ಯನನ್ನು, ವಿಜಿತ್ಯ – ಗೆದ್ದು, ಮುದಾ ಏವ – ಸಂತೋಷದಿಂದಲೇ, ದಾಮೋದರಂ – ಶ್ರೀಕೃಷ್ಣನನ್ನು, ಆಸಸಾದ – ಹೊಂದಿದನು. ಪೌಂಡ್ರಃ ತು – ಪೌಂಡ್ರಕ ವಾಸುದೇವನು, ಶಿನಿಪ್ರವೀರಂ – ಶಿನಿಕುಲದಲ್ಲಿ ವೀರನಾದ ಸಾತ್ಯಕಿಯನ್ನು, ಅವಜ್ಞಾಯ – ಇಂಥದುರ್ಬಲನ ಜೊತೆಗೆ ಯುದ್ಧ ಮಾಡಿ ಏನು ಪ್ರಯೋಜನ ಎಂದು ಅವಜ್ಞೆ ಮಾಡಿ, ನಿವಾರ್ಯಮಾಣಃ ಅಪಿ – ಸಾತ್ಯಕಿಯಿಂದ ನಿಲ್ಲು ನಿಲ್ಲು ಎಂದು ತಡೆಯಲ್ಪಟ್ಟರೂ ಕೂಡ, ಜನಾರ್ದನಂ – ಶ್ರೀಕೃಷ್ಣನ ಹತ್ತಿರ, ಯಯೌ – ಹೋದನು. ॥೨೦೯॥

ತಂ ಕೇಶವೋ ವಿರಥಂ ವ್ಯಾಯುಧಂ ಚ ಕ್ಷಣೇನ ಚಕ್ರೇ ಸ ಯಯೌ ನಿಜಾಂ ಪುರೀಮ್।
ಪ್ರಸ್ಥಾಪಯಾಮಾಸ ಪುನಶ್ಚ ದೂತಂ ಕೃಷ್ಣಾಯೈಷೋ ವಾಸುದೇವೋಽಹಮುಸ್ಮಿ ॥೨೧೦॥

ಮದೀಯ ಲಿಂಗಾನಿ ವಿಸೃಜ್ಯ ಚಾಸು ಸಮಾಗಚ್ಛೇತಿ ಶರಣಂ ಮಾಮನಂತಂ।
ತದ್ದೂತೋಕ್ತಂ ವಾಕ್ಯಮೇತನ್ನಿಶಮ್ಯ ಯದುಪ್ರವೀರಾ ಉಚ್ಚೈಃ ಪ್ರಾಹಸನ್ಸ್ಮ ॥೨೧೧॥

ಕೇಶವಃ – ಶ್ರೀಕೃಷ್ಣನು, ತಂ – ಆ ಪೌಂಡ್ರಕ ವಾಸುದೇವನನ್ನು, ವಿರಥಂ ವ್ಯಾಯುಧಂ ಚ – ರಥಹೀನನ

ನ್ನಾಗಿ. ಆಯುಧ ರಹಿತನನ್ನಾಗಿ, ಕ್ಷಣೇನ – ಕ್ಷಣಸಮಯದಲ್ಲಿಯೇ, ಚಕ್ರೇ – ಮಾಡಿದನು, ಸಃ - ಆ ಪೌಂಡ್ರಕನು ನಿಜಾಂ ಪುರೀಂ—ತನ್ನ ಪಟ್ಟಣಕ್ಕೆ, ಯಯೌ —ಹೋದನು. ಪುನಃ ಚ – ಮತ್ತೆ ಕೂಡ, 'ಅಹಂ ಏಕಃ ವಾಸುದೇವಃ ಅಸ್ಮಿ —ನಾನು ಒಬ್ಬನೇ ವಾಸುದೇವನಿರುವೆನು, ಮದೀಯಂಲಿಂಗಾನಿ—ನನ್ನ ಚಿಹ್ನಗಳನ್ನು ವಿಸೃಜ್ಯ – ಬಿಟ್ಟು, ಆಶು – ಕೂಡಲೇ, ಅನಂತಂ ಮಾಂ - ನಾಶರಹಿತನಾದ ನನ್ನನ್ನು ಕುರಿತು, ಶರಣಂ ಸಮಾ ಗಚ್ಛೇಥಾಃ – ಶರಣು ಬಾ (ಮೊರೆಹೋಗು) ಇತಿ ಉಕ್ತ್ವಾ – ಎಂದು ಹೇಳಿ, ದೂತಂ ಪ್ರಸ್ಥಾಪಯಾಮಾಸ – ದೂತನನ್ನು ಕಳಿಸಿದನು. ತದ್ದೂತೋಕ್ತಂ – ಆ ದೂತನಿಂದ ಹೇಳಲ್ಪಟ್ಟ. ಏತತ್ ವಾಕ್ಯಂ - ಈ ವಾಕ್ಯವನ್ನು, ನಿಶಮ್ಯ-ಕೇಳಿ, ಯಾದವಪ್ರವೀರಾಃ —ಯಾದವ ಶ್ರೇಷ್ಠರು. ಪ್ರಾಹಸನ್ ಸ್ಮ – ಜೋರಾಗಿ ನಕ್ಕರು ॥೨೧೦॥೨೧೧॥

ಕೃಷ್ಣಃಪ್ರಹಸ್ಯಾsಹ ತವಾಯುಧಾನಿ ದಾತಾsಸ್ಮ್ಯಹಂ ಲಿಂಗಭೂತಾನಿ ತಾಜೌ।
ಇತ್ಯುಕ್ತೋsಸೌ ದೂತ ಏತ್ಯಾಹ ತಸ್ಮೈ ಸ ಚಾಭ್ಯಾಗಾದ್ಯೋದ್ಧುಕಾಮೋ ಹರಿಶ್ಚ ॥೨೧೨॥

ಕೃಷ್ಣಃ – ಶ್ರೀಕೃಷ್ಣನೂ ಕೂಡ, ಪ್ರಹಸ್ಯ – ನಕ್ಕು, ಅಹಂ – ನಾನು, ತವ – ನಿನಗೆ, ಲಿಂಗ ಭೂತಾನಿ- ಚಿಹ್ನರೂಪವಾದ, ಆಯುಧಾನಿ – ಆಯುಧಗಳನ್ನು, ದಾತಾ ಅಸ್ಮಿ – ಕೊಡುವವನು ಆಗುವೆನು, ಇತಿ - ಎಂದು, ಆಹ-ಹೇಳಿದನು. ಇತಿ ಉಕ್ತಃ – ಎಂದು ಹೇಳಲ್ಪಟ್ಟ, ಅಸೌ ದೂತಃ—ಆ ದೂತನು, ಏತ್ಯ – ಪೌಂಡ್ರನ ಹತ್ತಿರ ಬಂದು, ತಸ್ಮೈ – ಅವನಿಗೆ, ಆಹ – ಶ್ರೀಕೃಷ್ಣನ ಮಾತನ್ನು ಹೇಳಿದನು. ಸಃ ಚ – ಆ ಪೌಂಡ್ರಕ ವಾಸುದೇವ ನಾದರೂ, ಯೋದ್ಧುಕಾಮಃ ಸನ್ - ಯುದ್ಧಮಾಡಲು ಇಚ್ಛೆವುಳ್ಳವನಾಗಿ, ಅಭ್ಯಾಗಾತ್ – ಏರಿ ಬಂದನು, ಹರಿಃ ಚ – ಶ್ರೀಕೃಷ್ಣಪರಮಾತ್ಮನೂ ಕೂಡ ಬಂದನು. ॥೨೧೨॥

ತಂ ಶಾತಕೌಂಭೇ ಗರುಡೇ ರಥಸ್ಥೇ ಸ್ಥಿತಂ ಚಕ್ರಾದೀನ್ ಕೃತ್ರಿಮಾನ್ ಸಂದಧಾನಮ್।
ಶ್ರೀವತ್ಸಾರ್ಥೇ ದಗ್ಧವಕ್ಷಸ್ಥಲಂ ಚ ದೃಷ್ಟ್ವಾ ಕೃಷ್ಣಃಪ್ರಾಹಸತ್ಪಾಪಬುದ್ಧಿಮ್ ॥೨೧೩॥

ರಥಸ್ಥೇ—ರಥದ ಮೇಲೆ ಸ್ಥಾಪಿಸಲ್ಪಟ್ಟ, ಶಾತಕೌಂಭೇ – ಭಂಗಾರದಿಂದ ನಿರ್ಮಿತವಾದ, ಗರುಡೇ – ಗರುಡ ಮೂರ್ತಿಯ ಮೇಲೆ, ಸ್ಥಿತಂ—ಕುಳಿತಿರುವ, ಕೃತ್ರಿಮಾನ್ ಚಕ್ರಾದೀನ್ – ಕೃತ್ರಿಮವಾದ ಚಕ್ರಾದಿ ಆಯುಧ ಗಳನ್ನು, ಸಂದಧಾನಂ – ಧರಿಸಿರುವ, ಶ್ರೀವತ್ಸಾರ್ಥೇ –ಶ್ರೀವತ್ಸ ಚಿಹ್ನವು ತನ್ನ ಎದೆಯಲ್ಲಿ ಉಂಟು ಎಂದು ತೋರಿಸಿ ಕೊಳ್ಳುವದಕ್ಕಾಗಿ, ದಗ್ಧವಕ್ಷಸ್ಥಲಂ ಚ—ಎದೆಯನ್ನು ಸುಟ್ಟುಕೊಳ್ಳುವ (ಮೂರ್ಖ) ಕಾರ್ಯವನ್ನೂ ಕೂಡ ಮಾಡಿದ, ಪಾಪಬುದ್ಧಿಂ ತಂ—ಪಾಪಿಷ್ಠವಾದ ಬುದ್ಧಿಯುಳ್ಳ ಆ ಪೌಂಡ್ರಕನನ್ನು ದೃಷ್ಟ್ವಾ ನೋಡಿ, ಕೃಷ್ಣಃ—ಶ್ರೀಕೃಷ್ಣ ಪರಮಾತ್ಮನು, ಪ್ರಾಹಸತ್—ಅಪಹಾಸ ಮಾಡಿದನು. ॥೨೧೩॥

ತತೋsಸ್ತ್ರಶಸ್ತ್ರಾಣ್ಯಭಿವರ್ಷಮಾಣಂ ವಿಜಿತ್ಯ ತಂ ವಾಸುದೇವೋsರಿಣೈವ।
ಚಕರ್ತತತ್ಕಂಧರಂ ತಸ್ಯ ಚಾನು ಮಾತಾಮಹಸ್ಯಾಚ್ಛಿನತ್ಸಾಯಕೇನ ॥೨೧೪॥

ತತಃ – ಅನಂತರ, ಅಸ್ತ್ರಶಸ್ತ್ರಾಣಿ – ಅಸ್ತ್ರಶಸ್ತ್ರಗಳನ್ನು, ಅಭಿವರ್ಷಮಾಣಂ ಸುರಿಮಳೆ ಮಾಡತಕ್ಕ, ತಂ – ಆ ಪೌಂಡ್ರಕ ವಾಸುದೇವನನ್ನು, ವಾಸುದೇವಃ – ಶ್ರೀಕೃಷ್ಣಪರಮಾತ್ಮನು, ವಿಜಿತ್ಯ – ಗೆದ್ದು, ಅರಿಣಾ ಏವ- ಚಕ್ರದಿಂದಲೇ, ತತ್ಕಂಧರಂ—ಅವನ ಕೊರಳನ್ನು, ಚಕರ್ತ - ಕತ್ತರಿಸಿದನು. ಅನು—ಅನಂತರ, ತಸ್ಯ ಮಾತಾ-ಮಹಸ್ಯ—ಅವನ (ತಾಯಿಯ ತಂದೆಯಾದ) ಅಜ್ಜನಾದ ಕಾಶೀರಾಜನ, ಕಂಠಂ—ರುಂಡವನ್ನು, ಸಾಯಕೇನ ಚಕರ್ತ ಬಾಣದಿಂದ ಕತ್ತರಿಸಿದನು. ॥೨೧೪॥

ಅಪಾತಯಚ್ಚಾಶು ಶಿರ: ಸ ತೇನ ಕಾಶೀಶ್ವರಸ್ಯೇಶ್ವರೋ ವಾರಣಸ್ಯಾಮ್।
ಸ ಚ ಬ್ರಹ್ಮಾಹಂ ವಾಸುದೇವೋಽಸ್ಮಿ ನಿತ್ಯಮಿತಿ ಜ್ಞಾನಾದಗಮತ್ತತ್ತಮೋಂಧವಮ್॥೨೧೫॥

ಸ: – ಆ ಶ್ರೀಕೃಷ್ಣಪರಮಾತ್ಮನಂ, ಆಶಂ – ಶೀಘ್ರವಾಗಿ ತೇನ—ಆ ಬಾಣದಿಂದ, ಕಾಶೀಶ್ವರಸ್ಯ—ಕಾಶಿರಾಜನ, ಶಿರಃ – ತಲೆಯನ್ನು, ವಾರಣಸ್ಯಾಂ – ಕಾಶಿಯಲ್ಲಿ, ಅಪಾತಯತ್ – ಬೀಳಿಸಿದನಂ. ಸ: ಚ—ಆ ಪೌಂಡ್ರಕನೂ ಕೂಡ, ಅಹಂ ಬ್ರಹ್ಮ ವಾಸುದೇವ: ಅಸ್ಮಿ ಇತಿ - ನಾನೇ ಪೂರ್ಣನಾದ ದೇವರಾದ ವಾಸುದೇವನಿರುವೆ ಎಂಬ ಜ್ಞಾನಾತ್—ಜ್ಞಾನದಿಂದ, ತತ್ ನಿತ್ಯಂ – ಶಾಸ್ತ್ರ ಪ್ರಸಿದ್ಧವಾದ, ಶಾಶ್ವತವಾದ, ಅಂಧತಮ:—ಅಂಧಂತ ಮಸ್ಸನ್ನು, ಅಗಮತ್ – ಹೊಂದಿದನಂ. ॥೨೧೫॥

ಸಾಹಾಯ್ಯಕೃಚ್ಚಾಸ್ಯ ಚ ಕಾಶಿರಾಜೋಯಥೈವ ಕಿರ್ಮೀರಹಿಡಿಂಬಸಾಲ್ವಾ: ।
ಅನ್ಯೇ ಚ ದೈತ್ಯಾ ಅಪತಂಸ್ತಮೋಽಂಧೇ ತಥೈವ ಸೋಽಪ್ಯಪತತ್ಪಾಪಬುದ್ಧಿ: ॥೨೧೬॥

ಕಿರ್ಮೀರಹಿಡಿಂಬಸಾಲ್ವಾಃ ಚ–ಮತ್ತು, ಅಸ್ಯ–ಈ ಪಾಪಿ ಪೌಂಡ್ರಕನಿಗೆ, ಸಾಹಾಯ್ಯಂ ಕೃತ್–ಸಹಾಯಮಾಡಿದ, ಪಾಪಬುದ್ಧಿ: ಸಃ ಕಾಶೀರಾಜ: – ಅಪಿ ಪಾಪಿಷ್ಠನಾದ ಕಾಶೀರಾಜನೂ ಕೂಡ, ಯಥಾ – ಹೇಗೆ, ಕಿರ್ಮೀರ ಹಿಡಿಂಬ ಸಾಲ್ವರು, ಚ—ಹಾಗು, ಅನ್ಯೇ ದೈತ್ಯಾಃ ಅಪಿ – ಬೇರೆ ಜರಾಸಂಧಾದಿ ದೈತ್ಯರೂ, ತಮೋಂಧೇ—ಅಂಧಂತಮಸ್ಸಿನಲ್ಲಿ, ಅಪತನ್ – ಬಿದ್ದರೋ, ತಥಾಏವ—ಅದೇರೀತಿ, ಅಪತತ್ – ಬಿದ್ದನು. ॥೨೧೬॥

ನಿಹತ್ಯ ತೌ ಕೇಶವೋ ರೌಕ್ಮಿಣೇಯಂ ಪುನರ್ವೈದರ್ಭ್ಯಾಂ ಜನಯಾಮಾಸ ಸದ್ಯ: ।
ಸ ಏಕಲವ್ಯೋ ರಾಮಜಿತಶ್ಶಿವಾಯ ಚಕ್ರೇ ತಪೋಽಜೇಯತಾಂ ಚಾಪ ತಸ್ಮಾತ್ ॥೨೧೭॥

ಕೇಶವ:—ಶ್ರೀಕೃಷ್ಣಪರಮಾತ್ಮನಂ, ತೌ—ಅವರಿಬ್ಬರನ್ನೂ, ನಿಹತ್ಯ – ಕೊಂದು, ರೌಕ್ಮಿಣೇಯಂ—ರುಕ್ಮಿಣೀ ಪುತ್ರನಾದ, ಪ್ರದ್ಯುಮ್ನನನ್ನು, ಪುನಃ—ಮತ್ತೆ, ವೈದರ್ಭ್ಯಾಂ—ಶ್ರೀರುಕ್ಮಿಣೀ ದೇವಿಯಲ್ಲಿ, ಜನಯಾಮಾಸ—ಪುಟ್ಟಿಸಿದನಂ. ರಾಮಜಿತಃ ಸಃ ಏಕಲವ್ಯಃ ಚ – ಬಲರಾಮದೇವರಿಂದ ಗೆಲ್ಲಲ್ಪಟ್ಟ ಏಕಲವ್ಯನೂ ಕೂಡ, ಶಿವಾಯ – ರುದ್ರದೇವರ ಉದ್ದೇಶವಾಗಿ, ತಪ: – ತಪಸನ್ನು ಚಕ್ರೇ – ಮಾಡಿದನಂ, ತಸ್ಮಾತ್– ಆ ರುದ್ರದೇವರಿಂದ, ಅಜೇಯತಾಂ ಚ – ಅಜೇಯತ್ವವನ್ನೂ ಕೂಡ, ಆಪ – ಪಡೆದನಂ. ॥೨೧೭॥

ಸ ಶರ್ವದತ್ತೇನ ವರೇಣ ದೃಪ್ತಃ ಪುನರ್ಯೋದ್ಧುಂ ಕೃಷ್ಣಮೇವಾಸಸಾದ ।
ತಸ್ಯಾಸ್ತ್ರಶಸ್ತ್ರಾಣಿ ನಿವಾರ್ಯ ಕೇಶವಶ್ಚಕ್ರೇಣ ಚಕ್ರೇ ತಮುಪಾಸ್ತಕಂಧರಮ್ ॥೨೧೮॥

ಸ:— ಆ ಏಕಲವ್ಯನಂ, ಶರ್ವದತ್ತೇನ ವರೇಣ – ರುದ್ರದೇವರಿಂದ ಕೊಡಲ್ಪಟ್ಟ ವರದಿಂದ, ದೃಪ್ತಃ ಸನ್—ದರ್ಪವುಳ್ಳವನಾಗಿ, ಪುನ: – ಮತ್ತೆ, ಯೋದ್ಧುಂ – ಯುದ್ಧಮಾಡುವದಕ್ಕಾಗಿ ಕೃಷ್ಣಂ ಏವ – ಶ್ರೀಕೃಷ್ಣಪರ ಮಾತ್ಮನನ್ನೇ, ಆಸಸಾದ—ಹೊಂದಿದನಂ ಕೇಶವಃ – ಶ್ರೀಕೃಷ್ಣನಂ, ತಸ್ಯ ಅಸ್ತ್ರಶಸ್ತ್ರಾಣಿ–ಅವನ (ದುಷ್ಟನಾದ ಏಕಲವ್ಯನ) ಅಸ್ತ್ರಶಸ್ತ್ರಗಳನ್ನು ನಿವಾರ್ಯ – ಕತ್ತರಿಸಿ, ಚಕ್ರೇಣ – ಚಕ್ರದಿಂದ ತಂ – ಅವನನ್ನೂ, ಅಪಾಸ್ತಕಂಧರಂ—ಕಂಠ ಕಳೆದವನನ್ನಾಗಿ, ಚಕ್ರೇ – ಮಾಡಿದನಂ. ॥೨೧೮॥

ಸ ಚಾಪ ಪಾಪಸ್ಯ ಏವ ಘೋರಂ ಕೃಷ್ಣದ್ವೇಷಾನ್ನಿತ್ಯದು:ಖಾತ್ಮಕಂ ತತ್ ।
ಏವಂ ಯದೂನಾಮೃಷಭೇಣ ಸೂದಿತೇ ಪೌಂಡ್ರೇ ತಥಾ ಕಾಶಿನೃಪೇ ಚ ಪಾಪೇ ॥೨೧೯॥

ಕಾಶೀಶಪುತ್ರಸ್ಯ ಸುದಕ್ಷಿಣಾಖ್ಯಸ್ತಪೋಽಚರಚ್ಛಂಕರಾಯೋರುಭಕ್ತ್ಯಾ ॥
ಪ್ರತ್ಯಕ್ಷಗಂ ತಂ ಶಿವಂ ಪಾಪಬುದ್ಧಿಃ ಕೃಷ್ಣಾಭಾವಂ ಯಾಚತೇ ದುಷ್ಟಚೇತಾಃ ॥೨೨೦॥

ಸಃ ಚ ಪಾಪಃ – ಆ ಪಾಪಿಯಾದ ಏಕಲವ್ಯನಾದರೂ, ನಿತ್ಯದುಃಖಾತ್ಮಕಂ – ನಿತ್ಯ ದುಃಖ:ಸ್ವರೂಪವಾದ, ತತ್—ಶಾಸ್ತ್ರಗಳಲ್ಲಿ ಆ ರೀತಿ ಪ್ರಸಿದ್ಧವಾದ, ಘೋರಂತಮಃ ಏವ – ಭಯಂಕರವಾದ ನರಕವನ್ನೇ. ಆಪ – ಹೊಂದಿದನು. ಏವಂ – ಈ ರೀತಿ. ಯದೂನಾಂ ಋಷಭೇಣ—ಯದು ಶ್ರೇಷ್ಠನಾದ ಶ್ರೀಕೃಷ್ಣನಿಂದ, ಪೌಂಡ್ರೇ ಸೂದಿತೇ ಸತಿ – ಪೌಂಡ್ರಕವಾಸುದೇವನು ಸಂಹರಿಸಲ್ಪಡುತ್ತಿರಲು, ತಥಾ—ಹಾಗು, ಕಾಶಿನೃಪೇ ಸೂದಿತೇ ಸತಿ—ಕಾಶೀ ರಾಜನು ಸಂಹರಿಸಲ್ಪಡುತ್ತಿರಲು, ಚ – ಮತ್ತು, ಪಾಪೇ – ಪಾಪಿಷ್ಠನಾದ ಏಕಲವ್ಯನು, ಸೂದಿತೇ ಸತಿ – ಸಂಹರಿಸಲ್ಪಡುತ್ತಿರಲು. ಸಃ ಕಾಶೀಶಪುತ್ರಃ ಸುದಕ್ಷಿಣಾಖ್ಯಃ—ಕಾಶೀರಾಜನ ಮಗನಾದ, ಆ ಸುದಕ್ಷಿಣನೆಂಬುವನು, ಉರು ಭಕ್ತ್ಯಾ – ಬಹುಭಕ್ತಿಯಿಂದ, ತಪಃ – ತಪಸ್ಸನ್ನು, ಶಂಕರಾಯ—ರುದ್ರದೇವರಿಗಾಗಿ, ಚಕಾರ–ಮಾಡಿದನು. ಪ್ರತ್ಯಕ್ಷಗಂ-ತಪಸ್ಸಿನಿಂದ ಪ್ರತ್ಯಕ್ಷನಾದ, ತಂ ಶಿವಂ – ಆ ರುದ್ರದೇವರನ್ನು ಕಂಡಿತಂ ದುಷ್ಟಚೇತಾಃ – ದುಷ್ಟ ಬುದ್ಧಿಯುಳ್ಳ, ಪಾಪ ಬುದ್ಧಿಃ – ಪಾಪದಲ್ಲಿಯೇ ಬುದ್ಧಿಯುಳ್ಳ ಆ ಸುದಕ್ಷಿಣನು, ಕೃಷ್ಣಾಭಾವಂ ಯಾಚತೇ—ಶ್ರೀಕೃಷ್ಣನನಾಶವನ್ನು ಪ್ರಾರ್ಥಿಸಿದನು. ॥೨೧೯॥೨೨೦॥

ಕೃತ್ಯಾಮುಸ್ಮೈ ದಕ್ಷಿಣಾಗ್ನೌ ಶಿವೋಽಪಿ ದೈತ್ಯಾವೇಶಾದದದಾದಾವೃತಾತ್ಮಾ ।
ಸ ದಕ್ಷಿಣಾಗ್ನಿಶ್ಚಾಸುರಾವೇಶಯುಕ್ತಃ ಸಂಪೂಜಿತಃ ಕಾಶಿರಾಜಾತ್ಮಜೇನ ॥೨೨೧॥

ವರಾದುಮೇಶಸ್ಯ ವಿವೃದ್ಧಶಕ್ತಿರ್ಯಯೌ ಕೃಷ್ಣೋ ಯತ್ರ ಸಂಪೂರ್ಣಶಕ್ತಿಃ ।
ಕೃಷ್ಣಸ್ತಸ್ಯ ಪ್ರತಿಘಾತಾರ್ಥಮುಗ್ರಂ ಸಮಾದಿಶತ್ಚಕ್ರಮನಂತವೀರ್ಯಃ ॥೨೨೨॥

ಶಿವ ಅಪಿ—ರುದ್ರದೇವರೂ ಕೂಡ, ದೈತ್ಯಾವೇಶಾತ್ – ದೈತ್ಯಾವೇಶದಿಂದಾಗಿ, ಆವೃತಾತ್ಮಾ ಸನ್ – ಆಚ್ಛಾದಿತವಾದ ಮನಸ್ಸುಳ್ಳವರಾಗಿ, ದಕ್ಷಿಣಾಗ್ನೌ – ದಕ್ಷಿಣಾಗ್ನಿಯಲ್ಲಿ, ಕೃತ್ಯಾಂ – ದಕ್ಷಿಣಾಗ್ನಿ ಸ್ವರೂಪವಾದ ಒಂದು ತರಹದ ಭೂತವನ್ನು(ಉತ್ಪಾದ್ಯ-ಹುಟ್ಟಿಸಿ),ಅದದಾತ್–ಕಾಶೀರಾಜನಿಗೆ ಕೊಟ್ಟನು.ಸ ದಕ್ಷಿಣಾಗ್ನಿಃಚ–ಆ ದಕ್ಷಿಣಾಗ್ನಿಯೂ ಕೂಡ, ಅಸುರಾವೇಶಯುಕ್ತಃ ಸನ್ – ಅಸುರಾವೇಶದಿಂದ ಕೂಡಿದವನಾಗಿ, ಕಾಶೀರಾಜಾತ್ಮಜೇನ ಸಂಪೂಜಿತಸ್ಸನ್ – ಕಾಶೀರಾಜನ ಮಗನಿಂದ ಪೂಜಿತನಾಗಿ, ಉಮೇಶಸ್ಯವರಾತ್—ರುದ್ರದೇವರ ವರದಿಂದ, ವಿವೃದ್ಧಶಕ್ತಿಃ ಸನ್ – ಅತಿ ಹೆಚ್ಚು ಶಕ್ತಿವುಳ್ಳವನಾಗಿ, ಯತ್ರ—ಎಲ್ಲಿ, ಸಂಪೂರ್ಣಶಕ್ತಿಃಕೃಷ್ಣ—ಸಂಪೂರ್ಣಶಕ್ತಿಯುಳ್ಳ ಶ್ರೀಕೃಷ್ಣನಿದ್ದನೋ, ತತ್ರ–ಅಲ್ಲಿಗೆ, ಯಯೌ—ಹೋದನು. ಅನಂತವೀರ್ಯಃ ಕೃಷ್ಣಃ – ಅನಂತಪರಾಕ್ರಮವುಳ್ಳ ಶ್ರೀಕೃಷ್ಣನೂ ಕೂಡ, ತಸ್ಯ ಪ್ರತಿಘಾತಾರ್ಥಂ—ದಕ್ಷಿಣಾಗ್ನಿ ರೂಪವಾದ ಆ ಕೃತ್ಯಾದ ತಡೆಮಾಡುವದಕ್ಕಾಗಿ, ಉಗ್ರಂ ಚಕ್ರಂ—ಉಗ್ರವಾದ ಚಕ್ರವನ್ನು, ಸಮಾದಿಶತ್—ಆಜ್ಞಾಪಿಸಿದನು. ॥೨೨೧-೨೨೨॥

ಜಾಜ್ವಲ್ಯಮಾನಂ ತದಮೋಘವೀರ್ಯಂ ವ್ಯದ್ರಾವಯದ್ವಹ್ನಿಮಿನುಂ ಸುದೂರಮ್ ।
ಕೃತ್ಯಾತ್ಮಕೋ ವಹ್ನಿರಸೌ ಪ್ರಧಾನವಹ್ನೇಃ ಪುತ್ರಶ್ಚಕ್ರವಿದ್ರಾವಿತೋಽಥ ॥೨೨೩॥

ಸಹಾನುಬಂಧಂ ಚ ಸುದಕ್ಷಿಣಂ ತಂ ಭಸ್ಮೀಚಕಾರಾಶು ಸಪುತ್ರಭಾರ್ಯಮ್ ।
ದಗ್ಧ್ವಾಪುರೀಂ ವಾರಣಸೀಂ ಸುದರ್ಶನಂ ಪುನಃಪಾರ್ಶ್ವಂ ವಾಸುದೇವಸ್ಯ ಚಾಗಾತ್॥೨೨೪॥

ಜಾಜ್ವಲ್ಯಮಾನಂ – ಬಹಂ ಪ್ರಖರವಾದ, ಅಮೋಘವೀರ್ಯಂ—ವ್ಯರ್ಥವಾಗದ ಸಾಮರ್ಥ್ಯವುಳ್ಳ, ತತ್ – ಆ ಚಕ್ರವು ಇಮಂ ವಹ್ನಿಂ—ಈ ಅಗ್ನಿಸ್ವರೂಪವಾದ ಕೃತ್ಯಾವನ್ನು, ಸುದೂರಂ—ಅತಿ ದೂರಕ್ಕೆ, ವ್ಯದ್ರಾವಯತ್ ಓಡಿಸಿತು, ಪ್ರಧಾನವಹ್ನೇಃ ಪುತ್ರಃ – ಪ್ರಧಾನಾಗ್ನಿಯ ಪುತ್ರನಾದ, ಕೃತ್ಯಾತ್ಮಕಃ – ಈಗ ಕೃತ್ಯಾ ರೂಪವನ್ನು ಹೊಂದಿದ ವಿದ್ರಾವಿತಃ ಅಸೌ—ವಹ್ನಿಃ – ಓಡಿಸಲ್ಪಟ್ಟ ಆ ದಕ್ಷಿಣಾಗ್ನಿಯಂ, ಅಥ—ತಾನು ಓಡಿದ ನಂತರ, ಸಹಾನುಬಂಧಂ—ಪರಿವಾರ ಸಹಿತನಾದ, ಸಪುತ್ರಭಾರ್ಯಂ – ಮಕ್ಕಳು ಹೆಂಡತಿಯರಿಂದ ಕೂಡಿದ, ತಂ ಸುದಕ್ಷಿಣಂ - ಆ ಸುದಕ್ಷಿಣನನ್ನು, ಆಶು-ಕೂಡಲೇ, ಭಸ್ಮೀಚಕಾರ ಸುಟ್ಟು ಬೂದಿಮಾಡಿತು. ಸುದರ್ಶನಂ ಚ – ಸುದರ್ಶನ ಚಕ್ರವೂ ಕೂಡ, ವಾರಣಸೀಂ ಪುರೀಂ –ಕಾಶೀ ಪಟ್ಟಣವನ್ನು, ದಗ್ಧ್ವಾ—ಸುಟ್ಟು, ಪುನಃ – ಮತ್ತೆ, ವಾಸುದೇವಸ್ಯ ಪಾರ್ಶ್ವಂ ಚ – ಶ್ರೀಕೃಷ್ಣನ ಸಮೀಪಕ್ಕೇ, ಆಗಾತ್ – ಬಂದಿತು. ॥೨೨೩–೨೨೪॥

ಭಾವಾನುವಾದ ೧೯೯—೨೨೪

ಶ್ರೀಕೃಷ್ಣಪರವಾತ್ಮನು ಕೈಲಾಸಕ್ಕೆ ಹೋಗಿರುವಾಗ ಪೌಂಡ್ರಕವಾಸುದೇವನು ಏಕಲವ್ಯ ಹಾಗೂ ತನ್ನ ಭ್ರಾತಾವುಹ (ತಾಯಿಯತಂದೆ) ಹಾಗು ಎರೂರು ಅಕ್ಷೌಹಿಣಿ ಸೈನ್ಯ ಇವರಿಂದ ಕೂಡಿದವನಾಗಿ, ಈ ಕಡೆಗೆ ರಾತ್ರಿಯಲ್ಲಿ ದ್ವಾರಕೆಯ ಮೇಲೇರಿ ಹೋಗಿ, ಪಟ್ಟಣವನ್ನು ಹಾಳು ಮಾಡಹತ್ತಿದ್ದನು. ಆಗ ಬಲರಾಮ, ಸಾತ್ಯಕಿ ಮೊದಲಾದ ಯಾದವರು ಅವರ ಜೊತೆಗೆ ಯುದ್ಧಮಾಡಿದರು. ಏಕಲವ್ಯನು ಬಹುಬಾಣವೃಷ್ಟಿಯನ್ನೂ, ಅಸ್ತ್ರ ಪ್ರಯೋಗವನ್ನೂ ಮಾಡಿದನು. ಆದರಿಂದ ಬಲರಾಮಾದಿಯಾದವರೆಲ್ಲರೂ ತಮ್ಮ ಜೊತೆಗೆ ತಂದಿದ್ದ ದೀಪಗಳನೆಲ್ಲ ಕಳೆದುಕೊಂಡು ವಿಷಣ್ಣರಾದರು. ತಮ್ಮ ಊರಿಗೆ ಹೋಗಿ ಮತ್ತೆ ದೀಪಗಳನ್ನೂ ತೆಗೆದುಕೊಂಡು, ಬಲರಾಮ ದೇವರನ್ನೂ ವಂದಿಸಿಕೊಂಡು, ತಮ್ಮ ದ್ವಾರಕೆಯಿಂದ ಸಿಟ್ಟಿನಿಂದ ಹೊರಬಂದು ಯುದ್ಧಕ್ಕೆ ನಡೆದರು. ಏಕಲವ್ಯನಿಗೂ ಬಲರಾಮದೇವರಿಗೂ ಯುದ್ಧ, ಸಾತ್ಯಕಿಗೂ ಪೌಂಡ್ರಕ ವಾಸುದೇವನಿಗೂ ಯುದ್ಧ ನಡೆದವು. ಎಲ್ಲರೂ ಪರಸ್ಪರ ರಥಗಳ ನಾಶಮಾಡಿ ಗದೆಗಳಿಂದ ಯುದ್ಧ ಮಾಡಿದರು. ಆಗ ಶ್ರೀಕೃಷ್ಣಪರವಾತ್ಮನು ಇವರೆಲ್ಲರೂ ಯುದ್ಧಕ್ಕೆ ನಿಂತ ಸ್ಥಳಕ್ಕೆ ಬಂದನು. ಬಲರಾಮದೇವರು ಶ್ರೀಕೃಷ್ಣನನ್ನು ನೋಡಿ, ತುಂಬಾ ಹುರುಪಿನಿಂದ ಏಕಲವ್ಯನನ್ನು ಕೊಂದೇಬಿಡಲು ಇಚ್ಛಿಸಿ ಗದೆಯನ್ನು ಎತ್ತಿ ಏಕಲವ್ಯನ ಮೇಲೆ ಏರಿ ಹೋದಾಗ ಇವರ ಸಾಮರ್ಥ್ಯ ಹಾಗು ಕ್ರೋಧಗಳನ್ನು ನೋಡಿದ ಏಕಲವ್ಯನು ಬದುಕಿಕೊಳ್ಳಲು ದೂರಕ್ಕೆ ಓಡಿದನು. ಬಲರಾಮದೇವರು ಅವನನ್ನೇ ಓಡಿಸುತ್ತಾ ಬೆನ್ನು ಹತ್ತಿದರು. ಅವನು ಹೆದರಿ ಓಡಿ ಓಡಿ ಬಂದು ಸಮುದ್ರದಲ್ಲಿ ಬಿದ್ದನು. ಬಲರಾಮದೇವರು ದಂಡೆಯಲ್ಲಿಯೇ ನಿಂತರು. ಅವನು ಭ್ರಾತೃ ನನ್ನ ಹಿಂದೆ ಬರುತ್ತಲೇ ಇದ್ದಾರೆ ಎಂದು ತಿಳಿದು ಈಸಿ ಈಸಿ ಎಂಭತ್ತು ಯೋಜನ ದೂರಕ್ಕೆ ಹೋಗಿ ಅಲ್ಲಿ ಸಿಕ್ಕ ದ್ವೀಪವೊಂದಕ್ಕೆ ಹೋಗಿ ಏರಿ ನಿಂತು ನಂತರ ಹಿಂದೆ ನೋಡಿದನು. ಬಲರಾಮದೇವರು ಏಕಲವ್ಯನನ್ನು ಆ ರೀತಿ ಸೋಲಿಸಿ ಸಂತೋಷದಿಂದ ಸಮುದ್ರ ದಂಡೆಯಿಂದ ವಾಪಸ್ ಶ್ರೀಕೃಷ್ಣನ ಹತ್ತಿರಕ್ಕೆ ಬಂದು ಸೇರಿದರು. ಪೌಂಡ್ರಕ ವಾಸುದೇವನು ಭ್ರಾತೃ ಸಾತ್ಯಕಿಯನ್ನು ಅಲಕ್ಷಿಸಿ ಶ್ರೀಕೃಷ್ಣನ ಹತ್ತಿರಕ್ಕೆ ಯುದ್ಧಕ್ಕೆ ಬಂದನು. ಶ್ರೀಕೃಷ್ಣನು ಸ್ವಲ್ಪೇ ಸಮಯದಲ್ಲಿ ಅವನ ರಥ ಹಾಗು ಆಯುಧಗಳನ್ನು ನಾಶ ಮಾಡಿದಾಗ ಪೌಂಡ್ರಕನು ತನ್ನ ಊರಿಗೆ ಹೋದನು. ನಂತರ ತನ್ನ ದೂತನ ಕಡೆಯಿಂದ 'ತಾನು ವಾಸುದೇವನು; ತನ್ನ ಚಿಹ್ನಗಳಾದ ಶಂಖಚಕ್ರಾದಿಗಳನ್ನು ಬಿಟ್ಟುಕೊಟ್ಟು ನನಗೆ ಶರಣು ಬರಬೇಕು' ಎಂದು ಶ್ರೀಕೃಷ್ಣಪರವಾತ್ಮನಿಗೆ ಹೇಳಿ ಕಳುಹಿಸಿದನು. ಅವನು ಬಂದು ಆ ಮಾತನ್ನು ಹೇಳಿದಾಗ ಯಾದವರೆಲ್ಲರೂ ಜೋರಾಗಿ ನಕ್ಕರು. ಶ್ರೀಕೃಷ್ಣನೂ ಕೂಡ ನಕ್ಕು, 'ಯುದ್ಧದಲ್ಲಿ ಚಿಹ್ನಗಳನ್ನು ಕೊಡುವೆನೆಂದು ಹೇಳು' ಎಂದು ಹೇಳಿ ಕಳಿಸಿದನು. ಆ ದೂತನು ತನ್ನ ಪೌಂಡ್ರಕನಿಗೆ ಹಾಗೆ ತಿಳಿಸಿದಾಗ ಪೌಂಡ್ರಕನು ಯುದ್ಧಕ್ಕೆ ಹೊರಟು ಬಂದನು. ಶ್ರೀಕೃಷ್ಣಸ್ವಾಮಿಯೂ ಬಂದನು. ಆ ಪೌಂಡ್ರಕನು ತಾನು ವಾಸುದೇವ ಎಂದು ಹೇಳಿಕೊಳ್ಳುವದಕ್ಕೋಸ್ಕರ ಶ್ರೀಕೃಷ್ಣನಂತೆ ಚಿಹ್ನ ಉಳ್ಳವನಾಗಲು ಭಂಗಾರದ ಗರುಡವನ್ನು ತನ್ನ ರಥವ ಮೇಲೆ ಮಾಡಿಸಿಟ್ಟುಕೊಂಡು ಅದರ ಮೇಲೆ ಹತ್ತಿ, ಕೃತಕ ಶಂಖಚಕ್ರಾದಿ

ಗಳನ್ನು ಧರಿಸಿ ಶ್ರೀವತ್ಸಚಿಹ್ನಕ್ಕಾಗಿ ಎದೆಯನ್ನು ಸೀಟ್ಟು ಕೊಂಡು ಬಂದಿದನು. ಅದನ್ನು ನೋಡಿದ ಶ್ರೀಕೃಷ್ಣನು ಆ ಪಾಪಿಯ ಬಗ್ಗೆ ಅಪಹಾಸವಾಡಿದನು. ಯುದ್ಧವು ನಡೆಯಿತು. ಶ್ರೀಕೃಷ್ಣನು ಆ ಪಾಪಿಯನ್ನು ಗೆದ್ದು ಚಕ್ರದಿಂದ ಅವನ ಶಿರಸ್ಸನ್ನೇ ಕತ್ತರಿಸಿ ಆವನ ಅಜ್ಜನ ತಲೆಯನ್ನು ಬಾಣದಿಂದ ಕತ್ತರಿಸಿ ಕಾಶಿಯಲ್ಲಿ ಬೀಳಿಸಿದನು. ಆ ಪೌಂಡ್ರಕನು ತಾನು ದೇವರು ಎಂದು ತಿಳಿದು ಹೇಳಿಕೊಂಡದ್ದರಿಂದ ಅಂಧಂತಮಸ್ಸಿಗೆ ಹೋದನು. ಅವನಿಗೆ ಸಾಹಾಯ್ಯವನ್ನು ಮಾಡಿದ ಅಜ್ಜ ಕಾಶೀರಾಜನೂ ಕೂಡ ಕವಿರ್ಗೀರ ಹಿಡಿಂಬ ಸಾಲ್ವ ಜರಾಸಂಧಾದಿಗಳು ಹೋದಂತೆ ಅಂಧಂತಮಸ್ಸಿಗೆ ಹೋದನು. ಹೀಗೆ ಅವರಿಬ್ಬರನ್ನು ಸಂಹರಿಸಿದ ಶ್ರೀಕೃಷ್ಣ ಪರಮಾತ್ಮನು (ರುದ್ರದೇವರ ವರದಿಂದ ಮಂಗನನ್ನು ಪಡೆದೆನೆ ಎಂದು ತೋರಿಸುವದಕ್ಕಾಗಿ) ಈ ಮೊದಲೇ ಪ್ರದ್ಯುಮ್ನನು ರುಕ್ಮಿಣಿಯಲ್ಲಿ ಹುಟ್ಟಿ ಎಷ್ಟೋವರ್ಷಗಳಾಗಿದ್ದರೂ ಕೂಡ, ಪುನಃರುಕ್ಮಿಣಿಯಲ್ಲಿ ಕೂಡಲೇ ಪಡೆದಂತೆ ಮಾಡಿದನು. ಬಲರಾಮದೇವನಿಂದ ಸೋತು ಓಡಿ ಸಮುದ್ರಕ್ಕೆ ಬಿದ್ದ ಏಕಲವ್ಯನು ರುದ್ರದೇವರನ್ನು ಕುರಿತು ತಪಸ್ಸುಮಾಡಿ ಅಜೇಯತ್ವವರವನ್ನು ಪಡೆದು, ತಪ್ಪಲ್ಲಯುಕ್ತವಾಗಿ ದರ್ಪದಿಂದ ಕೂಡಿ ಪುನಃ ಶ್ರೀಕೃಷ್ಣನ ಮೇಲೆ ಏರಿ ಬಂದನು. ಅವನ ಅಸ್ತ್ರ, ಶಸ್ತ್ರಗಳನೆಲ್ಲ ಕತ್ತರಿಸಿ ಶ್ರೀಕೃಷ್ಣಪರಮಾತ್ಮನ ಚಕ್ರದಿಂದ ಅವನ ಕೊರಳನ್ನು ಕತ್ತರಿಸಿ ಸಂಹರಿಸಿದನು. ಕಾಶೀರಾಜನ ಮಂಗನಾದ ಸುದಕ್ಷಿಣನೆಂಬವನು ರುದ್ರದೇವರನ್ನು ಕುರಿತು ಭಕ್ತಿಯಿಂದ ತಪಸ್ಸನ್ನು ಮಾಡಿ ಅವರು ಪ್ರತ್ಯಕ್ಷರಾದಾಗ ತಾನು ಶ್ರೀಕೃಷ್ಣನನ್ನು ಸಂಹರಿಸುವಂತೆ ಆಗಲು ಅನುಗ್ರಹಿಸಲು ಕೇಳಿದನು. ಆಗ ರುದ್ರದೇವರೂ ಅಸುರಾವೇಶವುಳ್ಳವರಾಗಿ ವಿಚಾರ ತಪ್ಪಿ ದಕ್ಷಿಣಾಗ್ನಿಯಲ್ಲಿ ಅವರ ಸ್ವರೂಪವೇ ಆದ ಒಂದು ಭೂತವಿಶೇಷವನ್ನು ಹುಟ್ಟಿಸಿ ಅವನಿಗೆ ಕೊಟ್ಟರು. ಪ್ರಧಾನಾಗ್ನಿಯು ಮಂಗನಾದ ಆ ದಕ್ಷಿಣಾಗ್ನಿಯೂ ಆಗ ಅಸುರಾವೇಶವುಳ್ಳವನೇ ಆಗಿದ್ದನು. ರುದ್ರವರದಿಂದ ವಿಶೇಷ ಶಕ್ತಿವೃದ್ಧಿಯುಳ್ಳವನಾಗಿ, ಸಂಪೂರ್ಣಶಕ್ತಿಯುಳ್ಳ ಶ್ರೀಕೃಷ್ಣನು ಇದ್ದಲ್ಲಿಗೆ ಒಂದನು. ಆದನ್ನು ತಡೆಯಲು ಶ್ರೀಹರಿಯು ತನ್ನ ಚಕ್ರಕ್ಕೆ ಆಜ್ಞೆಯಿತ್ತನು ಆ ಚಕ್ರವು ಆ ಕೃತ್ಯಾಗ್ನಿಯನ್ನು ಬಹುದೂರಕ್ಕೆ ಓಡಿಸಿತು. ಅದು ಓಡಿ ಹೋಗಿ ಸುದಕ್ಷಿಣನನ್ನೇ ಪುತ್ರ ಹೆಂಡತಿ ಪರಿವಾರ ಸಮೇತವಾಗಿ ಸುಟ್ಟಿತು. ಚಕ್ರವಾದರೂ ಕಾಶಿಗೆ ಹೋಗಿ ಇಡೀ ಪಟ್ಟಣವನ್ನೇ ಸುಟ್ಟು ಶ್ರೀಕೃಷ್ಣನಿದ್ದಲ್ಲಿಗೆ ಬಂದಿತು.

ಸುದಕ್ಷಿಣೋಽ ಸೌ ತಮು ಏವ ಜಗ್ಮಿವಾನ್ ಕೃಷ್ಣದ್ವೇಷಾತ್ ಸಾನುಬಂಧಸ್ತಪಾಪಃ ।
ಕೃಷ್ಣಃ ಕ್ರೀಡನ್ದ್ವಾರವತ್ಯಾಂ ಸುಪೂರ್ಣನಿತ್ಯಾನಂದಃ ಕ್ವಚಿದಾಹ ಸ್ಮ ಭೈಷ್ಮೀಮ್ ॥೨೨೫॥

ವಿಡಂಬಯನ್ ಗೃಹಿಣಾಮೇವ ಚೇಷ್ಟಾಃ ನಿತ್ಯಾವಿರೋಧೋಽಪಿ ತಯಾ ವಿದೋಷಯಾ ।
ತ್ವಯಾ ನ ಕಾರ್ಯಂ ಮಮ ಕಿಂ ಚ ಭದ್ರೇ ಮಯಾರೀಣಾಂ ಮಾನಭಂಗಾರ್ಥಮೇವ ।
ಸಮಾಹೃತಾಽ ಸೀತಿ ಸಾ ಚಾವಿಯೋಗಂ ಸದಾಕೃಷ್ಣೇನಾತ್ಮನೋಽ ಹ್ಯೇವಮೇತ್ರೀ ॥೨೨೬॥

ಸ್ತ್ರಿಯಾ ಭೇತ್ತವ್ಯಂಭರ್ತುರಿತ್ಯೇವ ಧರ್ಮಂ ವಿಜ್ಞಾಪಯಂತೀ ದುಃಖಿತೇವಾಸ ದೇವೀ ॥
ತಾಂ ಸಾಂತ್ವಯಾಮಾಸ ಗೃಹಸ್ಥಧರ್ಮಂ ವಿಜ್ಞಾಪಯನ್ ದೇವದೇವೋಽಪ್ಯದುಃಖಾಮ್ ॥೨೨೭॥

ಸಂಪೂರ್ಣನಿತ್ಯಾನಂದಃ – ಪೂರ್ಣವಾದ, ನಿತ್ಯವಾದ ಆನಂದವುಳ್ಳ, ಕೃಷ್ಣಃ – ಶ್ರೀಕೃಷ್ಣನು, ದ್ವಾರವತ್ಯಾಂ - ದ್ವಾರಕೆಯಲ್ಲಿ, ಕ್ರೀಡನ್ – ವಿಹರಿಸುತ್ತಾ, ಕ್ವಚಿತ್ - ಒಮ್ಮೆ, ಭೈಷ್ಮೀಂ – ಶ್ರೀ ರುಕ್ಮಿಣೀದೇವಿಯನ್ನು ಕುರಿತು ವಿದೋಷಯಾ ತಯಾ – ನಿರ್ದೋಷಳಾದ ಅವಳಿಂದ ಕೂಡಿಕೊಂಡು, ನಿತ್ಯಾವಿರೋಧಃ ಅಪಿ – ನಿತ್ಯವೂ ವಿರೋಧವಿಲ್ಲದವನಾದರೂ ಕೂಡ, ಗೃಹಿಣಾಂ ಚೇಷ್ಟಾಃ – ಗೃಹಸ್ಥಾಶ್ರಮಿಗಳ ವಿನೋದಗಳನ್ನು, ವಿಡಂಬ-

ಯಃನ್ ಏವ – ಅನುರಿಸುತ್ತಲೇ, ಭದ್ರೇ – ಎಲೋ ಸುಂದರಿಯಾದ ರುಕ್ಮಿಣಿಯೇ, ಮಮ—ನನಗೆ, ತ್ವಯಾ ಕಿಂಚ-ಕಾರ್ಯಂ— ನಿನ್ನಿಂದ ಯಾವದೇ ಪ್ರಯೋಜನವು, ನ – ಇಲ್ಲ, ಮಯಾ – ನನ್ನಿಂದ, ಅರೀಣಾಂ – ವೈರಿಗಳ, ಪಣ-ಭಂಗಾರ್ಥಂ ಏವ—ಮರ್ಯಾದಾಭಂಗಕ್ಕಾಗಿಯೇ, (ತ್ವಂ) ಸಹಸಾಹೃತಾ ಅಸಿ – (ನೀನು) ತರಲ್ಪಟ್ಟಿರುತ್ತಿ, ಇತಿ—ಎಂದು ಆಹ ಸ್ಮ – ಹೇಳಿದನು, ಸಾ ಚ—ಆ ರುಕ್ಮಿಣೀದೇವಿಯೂ ಕೂಡ, ಆತ್ಮನಃ—ತನಗೆ, ಸದಾ—ಯಾವಾಗಲೂ, ಕೃಷ್ಣೇನ – ಶ್ರೀಕೃಷ್ಣನಿಂದ, ಅವಿಯೋಗಂ – ವಿಯೋಗವಿಲ್ಲದಿರುವಿಕೆಯನ್ನು, ವೇತ್ತೀ ಏವ ಆಪಿ – ತಿಳಿದವಳೇ ಆಗಿದ್ದರೂ ಕೂಡ, ಸ್ತ್ರಿಯಾ—ಸತಿಯಿಂದ ಭರ್ತುಃ—ಗಂಡನಿಗೆ, ಭೇತ್ತವ್ಯಂ – ಹೆದರಲ್ಪಡಬೇಕು. ಇತಿ—ಎಂಬ ಧರ್ಮಂ – ಧರ್ಮವನ್ನು, ವಿಜ್ಞಾಪಯಂತೀ – (ಲೋಕಕ್ಕೆ ತಿಳಿಸುವ ಬಯಕೆಯುಳ್ಳವಳಾಗಿ, ದೇವೀ = ಶ್ರೀರುಕ್ಮಿಣೀದೇವಿಯು, ದುಃಖಿತಾ ಇವ ಆಸ – ದುಃಖಿಯಂತೆ ಆದಳು ದೇವದೇವಃ ಅಪಿ – ದೇವದೇವನಾದ ಶ್ರೀಕೃಷ್ಣಪರಮಾತ್ಮನೂ ಕೂಡ, ಗೃಹಸ್ಥಧರ್ಮಂ – ಗೃಹಸ್ಥಾಶ್ರಮಿಗಳ ರೀತಿನೀತಿಗಳನ್ನು ವಿಜ್ಞಾಪಯನ್— ತಿಳಿಸುವನಾಗಿ. ಆದುಃಖಾಂ ತಾಂ— ದುಃಖರಹಿತಳಾದ ಆ ರುಕ್ಮಿಣೀದೇವಿಯನ್ನು. ಸಾಂತ್ವಯಾಮಾಸ—ಸಮಾಧಾನಪಡಿಸಿದನು. ॥೨೨೫ – ೨೨೬ – ೨೨೭॥

ಏವಂ ಕ್ರೀಡತ್ಯಬ್ಜನಾಭೇ ರಮಾಯಾಂ ಕೃಷ್ಣಾದಿಷ್ಟೋ ಗೋಕುಲಂ ರೌಹಿಣೇಯಃ ॥೨೨೮॥

ಪ್ರಾಯಾದ್ದೃಷ್ಟ್ವಾ ತತ್ರ ನಂದಂ ಯಶೋದಾಂ ತತ್ಪೂಜಿತಃ ಕೃಷ್ಣವಾರ್ತಾಂ ಚ ಪೃಷ್ಟಃ ।
ವಾಸೌ ತತ್ರ ನ್ಯವಸದ್ಗೋಪಿಕಾಭೀರೇಮೇಕ್ಷೀಬೋಯಮುನಾವಾಹ್ಯಯಚ್ಚ ॥೨೨೯॥

ಮತ್ತೋಯಮಿತ್ಯೇವ ನದೀಮನಾಗತಾಂ ಚಕರ್ಷ ರಾಮೋಲಾಂಗಲೇನೋಗ್ರವೀರ್ಯಃ ॥
ಪುನಸ್ತಯಾಪ್ರಣತಸ್ಸಂಸ್ತುತಶ್ಚ ವ್ಯಸರ್ಜಯತ್ತಾಮಥ ನಂದಗೋಪಮ್ ।
ಆಪೃಚ್ಛ್ಯಾಗಾದ್ದ್ವಾರಕಾಂ ಕೇಶವಾಯ ನ್ಯವೇದಯನ್ನಂದಗೋಪಾದಿ ಭಕ್ತಿಮ್ ॥೨೩೦॥

ಅಬ್ಜನಾಭೇ – ಶ್ರೀಕೃಷ್ಣಪರಮಾತ್ಮನು. ಏವಂ—ಈ ರೀತಿಯಾಗಿ, ರಮಾಯಾಂ—ಶ್ರೀ ರುಕ್ಮಿಣೀದೇವಿಯಲ್ಲಿ, ಕ್ರೀಡತಿ ಸತಿ- ಕ್ರೀಡಿಸುತ್ತಿರಲು, ಕೃಷ್ಣಾದಿಷ್ಟಃ:-ಶ್ರೀಕೃಷ್ಣಪರಮಾತ್ಮನಿಂದ ಆದೇಶಿಸಲ್ಪಟ್ಟ, ರೌಹಿಣೇಯಃ:- ಬಲರಾಮದೇವರು:, ಗೋಕುಲಂ – ಗೋಕುಲಕ್ಕೆ, ಪ್ರಾಯಾತ್—ಹೋದರು, ತತ್ರ—ಅಲ್ಲಿ, ನಂದಂ ಯಶೋದಾಂ ಚ—ನಂದಗೋಪನನ್ನು, ಯಶೋದೆಯನ್ನೂ ಕೂಡ, ದೃಷ್ಟ್ವಾ—ಕಂಡು, ತತ್ಪೂಜಿತಃ ಸನ್—ಅವರಿಬ್ಬರಿಂದಲೂ ಆದರಿಸಲ್ಪಟ್ಟವರಾಗಿ, ತಾಭ್ಯಾಂ ಅವರಿಬ್ಬರಿಂದಲೂ, ಕೃಷ್ಣವಾರ್ತಾಂ ಶ್ರೀ ಕೃಷ್ಣನ ಸುದ್ದಿಯನ್ನು, ಪೃಷ್ಟಃ ಸನ್—ಕೇಳಲ್ಪಟ್ಟವರಾಗಿ. ತತ್ರ—ಆ ಗೋಕುಲದಲ್ಲಿಯೇ, ವಾಸೌ – ಎರಡು ತಿಂಗಳವರೆಗೆ, ನ್ಯವಸತ್—ವಾಸಿಸಿದರು, ಗೋಪಿಕಾಭಿ:- ಗೋಪಿಕಾ ಸ್ತ್ರೀಯರಿಂದ ಕೂಡಿಕೊಂಡು. ರೇಮೇ— ಕ್ರೀಡಿಸಿದರು, ಕ್ಷೀಬಃ – ಮದಾದಕ ದ್ರವ್ಯಪಾನದಿಂದ ಮಂದವುಳ್ಳ ಬಲರಾಮದೇವರು, ಯಮುನಾಂ ಚ – ಯಮುನೆಯನ್ನೂ ಕೂಡ. ಆಹ್ವಯತ್ — ಕರೆದರು, ಅಯಂ ಮತ್ತಃ ಇತಿ–ಈ ಬಲರಾಮನು ಮತ್ತನಾಗಿರುವನು ಎಂಬ ಕಾರಣದಿಂದ, ಅನಾಗತಾಂ–ಬಾರದಿರುವ, ನದೀಂ —ಯಮುನೆಯನ್ನು. ಉಗ್ರವೀರ್ಯಃ ರಾಮಃ—ಭಯಂಕರ ಪರಾಕ್ರಮವುಳ್ಳ ಬಲರಾಮದೇವರು, ಲಾಂಗ-ಲೇನ - ತಮ್ಮ ಹಲದಿಂದ, ಚಕರ್ಷ – (ನದಿಯನ್ನೇ) ಎಳೆದರು. ಪುನಃ—ಅನಂತರ, ತಯಾ - ಅವಳಿಂದ, ಪ್ರಣತಃ ಸಂಸ್ತುತಃ ಚ ಸನ್ - ನಮಸ್ಕರಿಸಲ್ಪಟ್ಟವರು, ಸ್ತುತಿಸಲ್ಪಟ್ಟವರೂ ಆಗಿ, ತಾಂ – ಅವಳನ್ನು, ವ್ಯಸರ್ಜಯತ್—ಬಿಟ್ಟು ಕೊಟ್ಟರು, ಅಥ – ನಂತರ, ನಂದಗೋಪಂ – ನಂದಗೋಪನನ್ನು, ಆಪೃಚ್ಛ್ಯ—ಕೇಳಿ, ದ್ವಾರಕಾಂ - ದ್ವಾರಕೆಗೆ, ಆಗಾತ್ – ಬಂದರು, ಕೇಶವಾಯ – ಶ್ರೀಕೃಷ್ಣನಿಗೆ, ನಂದಗೋಪಾದಿಭಕ್ತಿಂ – ನಂದಗೋಪ ಮೊದಲಾದ ಗೋಪಾಲಕರ ಭಕ್ತಿಯಬಗ್ಗೆ, ನ್ಯವೇದಯತ್ – ನಿವೇದಿಸಿದರು. ॥೨೨೮ – ೨೨೯ – ೨೩೦॥

ತದೈವ ಮೈಂದೋವಿವಿದಶ್ಚ ಭೌಮೇ ಹತೇ ಸಖಾಯೌ ದಾನವಾವೇಶಯುಕ್ತೌ ।
ಆನರ್ತರಾಷ್ಟ್ರಂ ವಾಸುದೇವಪ್ರತೀಪೌ ವ್ಯನಾಶಯೇತಾಂ ವಾಸುದೇವೋऽಥ ಚೋಚ್ಚೈ: ॥೨೩೧॥

ರಾಮಾಯ ಸೋऽದಾದ್ವರಮಬ್ಜನಾಭೋ ವಧ್ಯಾವೇತೌ ಭವತಾಂ ತೇऽಪ್ಯವಧ್ಯೌ ।
ವರಾದ್ವಿರಿಂಚಸ್ಯ ತಥಾऽಮೃತಾಶನಾದುಭೌ ಚ ಮೈಂದೋ ವಿವಿದೋ ವ್ರಜೇತಿ ॥೨೩೨॥

ಗತ್ವಾ ಸ ಮೈಂದಂ ಪೃಥಮಂ ಜಘಾನ ಕ್ರೋಧಾದ್ಯುದ್ಧಾರ್ಥಮಾಗತಂ ರೈವತಾಗ್ರೇ ॥೨೩೩॥

ಭೌಮೇ ಹತೇ ಸತಿ – ನರಕಾಸುರನು ಸಾಯುತ್ತಿರಲು, ದಾನವಾವೇಶಯುಕ್ತೌ – ರಾಕ್ಷಸರ ಆವೇಶದಿಂದ ಕೂಡಿದ, (ಆದ್ದರಿಂದಲೇ) ವಾಸುದೇವಪ್ರತೀಪೌ – ಶ್ರೀಕೃಷ್ಣನ ವಿರೋಧ ಮಾಡುವ ಬುದ್ಧಿಯುಳ್ಳ, ಸಖಾಯೌ ಮೈಂದ: ವಿವಿದಃ ಚ – ನರಕಾಸುರನ ಗೆಳೆಯರಾದ ಮೈಂದ ಮತ್ತು ವಿವಿದರಿಬ್ಬರು, ತದಾಏವ – ಆ ಕಾಲದಲ್ಲಿಯೇ, ಆನರ್ತರಾಷ್ಟ್ರಂ – ದ್ವಾರಕೆಯನ್ನು, ವ್ಯನಾಶಯೇತಾಂ ಹಾಳುಮಾಡಲಾರಂಭಿಸಿದರು. ಅಥ – ಆಗ, ಅಬ್ಜನಾಭ: ವಾಸುದೇವಃ – ಕಮಲನಾಭನಾದ ಶ್ರೀ ಕೃಷ್ಣಪರಮಾತ್ಮನು, ರಾಮಾಯ – ಬಲರಾಮದೇವರಿಗೆ, (ಎಲೋ ಅಣ್ಣನೇ), ವಿರಿಂಚಸ್ಯ ವರಾತ್ ಬ್ರಹ್ಮದೇವರ ವರದಿಂದ, ತಥಾ – ಹಾಗು, ಅಮೃತಾಶನಾತ್ ಚ – ಅಮೃತವನ್ನು ಉಂಡದ್ದರಿಂದಲೂ, ಅವಧ್ಯೌ ಅಪಿ – ಅವಧ್ಯರಾದರೂ ಕೂಡ, ಏತೌ – ಇವರಿಬ್ಬರು, ತೇ – ನಿನಗೆ, ವಧ್ಯೌ ಭವತಾಂ – ಸಂಹಾರ ಮಾಡಲು ಶಕ್ಯರು ಆಗುವರು, ವ್ರಜ ಹೊರಡು, ಇತಿ – ಎಂದು, ವರಂ – ವರವನ್ನು, ಅದಾತ್ – ಕೊಟ್ಟನು ಸ: – ಬಲರಾಮದೇವರು, ಗತ್ವಾ – ಹೋಗಿ, ಪೃಥಮಂ – ಮೊದಲು, ರೈವತಾಗ್ರೇ – ರೈವತ ಪರ್ವತದ ಮೇಲೆ, ಯುದ್ಧಾರ್ಥಂ ಆಗತಂ – ಯುದ್ಧಕ್ಕೆ ಬಂದಿರುವ, ಮೈಂದಂ – ಮೈಂದನನ್ನು, ಕ್ರೋಧಾತ್ – ಸಿಟ್ಟಿನಿಂದ, ಜಘಾನ – ಸಂಹರಿಸಿದರು. ॥೨೩೦ – ೨೩೨ – ೨೩೩॥

ದಿನೇಷರಸ್ಮಿನ್ವಿವಿದಂ ಜಘಾನ ಶಿಲಾವರ್ಷಂತಂ ಮುಸಲೇನಾಗ್ರ್ಯಕರ್ಮಾ ।
ತಯೋರಾಷಿಷ್ಟೌ ತಾವಸುರೌ ತಮೋऽಂಧಂ ಪ್ರಾಪ್ತೌ ಚ ತಾವಶ್ವಿನೌ ಸ್ವಂ ಚ ಲೋಕಂ ॥೨೩೪॥

ಅಗ್ರ್ಯಕರ್ಮಾ – ಶ್ರೇಷ್ಠವೀರಕಾರ್ಯಗಳುಳ್ಳ ಶ್ರೀಬಲರಾಮದೇವರು, ಪರಸ್ಮಿನ್ ದಿನೇ – ಮರುದಿನದಲ್ಲಿ, ಶಿಲಾಃ ವರ್ಷಂತಂ – ಬಂಡೆಗಳನ್ನು ಸುರಿಸುತ್ತಾ ಬಂದಂಥ, ವಿವಿದಂ – ವಿವಿದನನ್ನು, ಮುಸಲೇನ – ಒನಕೆಯಿಂದ, ಜಘಾನ ಸಂಹರಿಸಿದರು. ತಯೋಃ ಆಷಿಷ್ಟೌ – ಆ ಮೈಂದವಿವಿದರಲ್ಲಿ ಸೇರಿದ, ಅಸುರೌ – ರಾಕ್ಷಸರಿಬ್ಬರು, ತಮೋಂಧಂ ಪ್ರಾಪ್ತೌ – ಅಂಧತಮಸ್ಸನ್ನು, ಹೊಂದಿದರು. ತೌ ಅಶ್ವಿನೌ ಚ – ಆ ಅಶ್ವಿನಿದೇವತೆಗಳೂ ಕೂಡ ಸ್ವಂ ಲೋಕಂ – ತಮ್ಮ ಲೋಕವನ್ನು, ಪ್ರಾಪ್ತೌ – ಹೊಂದಿದರು ॥೨೩೪॥

ಭಾವಾನುವಾದ ೨೨೫—೨೩೪

ಸಂದಕ್ಷಿಣನು ಕೃಷ್ಣದ್ವೇಷದ ಫಲವಾಗಿ ಸಪರಿವಾರವಾಗಿ ತಮಿಸ್ರಗೆ ಹೋದನು, ದ್ವಾರಕೆಯಲ್ಲಿ ಸಂತೋಷದಿಂದ ವಿಹರಿಸುತ್ತಿರುವ ಶ್ರೀಕೃಷ್ಣಪರಮಾತ್ಮನು ನಿರ್ದೋಷಿಯಾದ ರುಕ್ಮಿಣೀದೇವಿಯಿಂದ ಎಂದೂ ವಿರೋಧವಿಲ್ಲದಿದ್ದರೂ ಕೂಡ, ಗೃಹಸ್ಥಾಶ್ರಮಿಗಳಂತೆ ನಟಿಸುತ್ತಾ ವಿರೋಧದ ನಟನೆಮಾಡುತ್ತಾ ರುಕ್ಮಿಣೀಯನ್ನು ಕುರಿತು 'ನೋಡು

ರುಕ್ಮಿಣೀ, ನಾನು ನಿನ್ನನ್ನು ನನ್ನ ವೈರಿರಾಜರ ಮಾನಭಂಗ ಮಾಡುವದಕ್ಕೆಂದೇ ಕರತಂದದ್ದು. ನನಗೇನೂ ನಿನ್ನ ಅವಶ್ಯಕತೆಯು ಇಲ್ಲ. ನೀನು ಈಗಲಾದರೂ ನನ್ನನ್ನು ಬಿಟ್ಟು ಹೋಗಬಹುದು' ಇತ್ಯಾದಿಯಾಗಿ ಹೇಳಿದನು. ಅದನ್ನು ಕೇಳಿದ ಶ್ರೀರುಕ್ಮಿಣೀದೇವಿಯೂ ಕೂಡ, ಹೆಂಡತಿಯು ಗಂಡನಿಗೆ ಹೆದರಿಕೊಂಡಿರಬೇಕು; ಅದೇ ಧರ್ಮವು ಎಂದು ತಿಳಿಸುವದಕ್ಕಾಗಿ ಏನೂ ಎದುರು ಮಾತಾಡದೇ, ದುಃಖಿಯಾದವಳಂತೆ ನಟಿಸಿದಳು. ಆಗ ಶ್ರೀಕೃಷ್ಣನೂ ಅವಳನ್ನು ಸಮಾಧಾನ ಪಡಿಸಿದಂತೆ ಮಾಡಿದನು. ಹೀಗೆ ಭಗವಂತನು ಗೃಹಸ್ಥ ಧರ್ಮವನ್ನು ತೋರಿಸಿದನು ಒಲರಾವು ದೇವರನ್ನು ಶ್ರೀಕೃಷ್ಣನು ಗೋಕುಲದ ಜನರ ಸಮಾಧಾನಕ್ಕಾಗಿ ಕಳಿಸಿದನು ಅವರು ಅಲ್ಲಿಗೆ ಬಂದು ನಂದಗೋಪ ಯಶೋದಾದಿಗಳನ್ನು ಕಂಡು, ಅವರಿಂದ ಪೂಜಿತರಾಗಿ ಶ್ರೀಕೃಷ್ಣಪರಮಾತ್ಮನಬಗ್ಗೆ ಅವರು ಕೇಳಿದ್ದಕ್ಕೆ ಎಲ್ಲವಾರ್ತೆ ಯನ್ನು ತಿಳಿಸುತ್ತಾ ಎರಡು ತಿಂಗಳ ಪರ್ಯಂತ ಅಲ್ಲಿ ವಾಸಿಸಿದರು. ಆಗ ಒಮ್ಮೆ ಯಮುನಾ ತಟಕ್ಕೆ ಬಂದು ಗೋಪಿಕೆಯರಿಂದ ವಿಹರಿಸುತ್ತಾ, ಮಾದಕ ಪೇಯ ಪಾನದಿಂದ ಮತ್ತರಾಗಿ ಯಮುನೆಯನ್ನೂ ಕೂಡ ವಿಹಾರಕ್ಕಾಗಿ ಕರೆದರು. ಅವಳು ಬಾರದಿರುವಾಗ ತನ್ನ ಹಲಾಯುಧದಿಂದಲೇ ಎಳೆದರು. ಆಗ ಅವಳು ನಮಸ್ಕರಿಸಿ ಸ್ತುತಿಸಿ ದಾಗ ಬಿಟ್ಟುಕೊಟ್ಟರು. ಎರಡು ತಿಂಗಳ ವಾಸದ ನಂತರ ನಂದಗೋಪನನ್ನು ಕೇಳಿಕೊಂಡು ಅಲ್ಲಿಂದ ಹೊರಟು ದ್ವಾರಕೆಗೆ ಬಂದು ನಂದಗೋಪಾದಿಗಳು ಶ್ರೀಕೃಷ್ಣನ ಬಗ್ಗೆ ಮಾಡುತ್ತಿರುವ ವಿಶೇಷ ಭಕ್ತಿಯ ಬಗ್ಗೆ ತಿಳಿಸಿದರು. ಈ ಸಮಯದಲ್ಲಿಯೇ ವೈಂದವಿವಿದರು ಶ್ರೀಕೃಷ್ಣ ವಿರೋಧಿಗಳಾಗಿ (ಶ್ರೀಕೃಷ್ಣನು ತಮ್ಮ ಗೆಳೆಯ ನರಕಾಸುರನನ್ನು ಕೊಂದನು ಎಂಬ ಕಾರಣದಿಂದ ವಿರೋಧಿಗಳಾಗಿ), ದ್ವಾರಕೆಯನ್ನು ಹಾಳುಮಾಡಲಾರಂಭಿಸಿದರು. ಆಗ ಶ್ರೀಕೃಷ್ಣ ಪರಮಾತ್ಮನು ಬಲರಾಮದೇವರಿಗೆ 'ಯದ್ಯಪಿ ಈ ವೈಂದವಿವಿದರು ಬ್ರಹ್ಮವರವಿದ್ದುದ್ದರಿಂದ, ಅವ್ಯಕ್ತಪುರುಷ ಮಾಡಿದ್ದರಿಂದ, ಅವಧ್ಯರಾಗಿರುವರು; ಆದರೂ ನಿನಗೆ ವಧ್ಯರಾಗಲಿ' ಎಂದು ವರವನ್ನು ಕೊಟ್ಟು ಕಳಿಸಿದನು. ಅವರು ಬಂದುವೈಂದನನ್ನು ರೈವತ ಪರ್ವತದಲ್ಲಿ ಕೊಂದು ಮರುದಿನ ಕಲ್ಲುಗುಡ್ಡವನ್ನು ಸುರಿಸುತ್ತಾ ದ್ವಿಂದ ವಿವಿದನನ್ನು ಮುಸಲಾಯುಧದಿಂದ ಕೊಂದರು. ಆಗ ವೈಂದವಿವಿದರಲ್ಲಿ ಉಳಿದವರಾದ ಅಸುರರು ತಮಸ್ಸಿಗೆ ಹೋದರು; ಅಶ್ವಿನೀ ದೇವತೆಗಳು ತಮ್ಮ ಲೋಕಕ್ಕೆ ಹೋದರು.

ದುರ್ಯೋಧನಸ್ಯಾಸ ಪುತ್ರೀ ರತಿರ್ಯಾ ಪೂರ್ವಂ ನಾವ್ನಾ ಲಕ್ಷಣಾ ಕಾಂತರೂಪಾ ।
ಸ್ವಯಂವರಸ್ಥಾಂ ತಾಂ ಬಲಾದೇವ ಸಾಂಬೋ ಜಗ್ರಾಹ ಸಾ ಚೈನಮಾಸಾನುರಕ್ತಾ ॥೨೩೫॥

ದುರ್ಯೋಧನಸ್ಯ -- ದುರ್ಯೋಧನನಿಗೆ, ಯಾ – ಯಾವಳು, ಪೂರ್ವಂ—ಮೂಲರೂಪದಲ್ಲಿ ರತಿ:-ರತಿಯೋ ಸಾ – ಅವಳು, ಕಾಂತರೂಪಾ – ಸುಂದರರೂಪವುಳ್ಳ, ನಾವ್ನಾ ಲಕ್ಷಣಾ ಇತಿ – ಹೆಸರಿನಿಂದ ಲಕ್ಷಣಾ ಎಂಬ, ಪುತ್ರೀ— ಮಗಳು, ಆಸ—ಆಗಿದ್ದಳು, ಸ್ವಯಂವರಸ್ಥಾಂ ತಾಂ— ಸ್ವಯಂವರದಲ್ಲಿರುವ ಅವಳನ್ನು, ಸಾಂಬ: – ಸಾಂಬನು, ಬಲಾದೇವ – ಬಲಾತ್ಕಾರದಿಂದಲೇ, ಜಗ್ರಾಹ – ಸ್ವೀಕರಿಸಿದನು, ಸಾ ಚ – ಅವಳಾದರೂ, ಏನಂ ಅನುರಕ್ತಾ ಆಸ— ಈ ಸಾಂಬನಲ್ಲಿ ಆಸಕ್ತಳೇ ಆಗಿದ್ದಳು. ॥೨೩೫॥

ಬಲಾದ್ಗೃಹೀತಾಂ ವೀಕ್ಷ್ಯ ತಾಂ ಕರ್ಣಮುಖ್ಯಾ ದುರ್ಯೋಧನಾದ್ಯಾ ಯುಯುಧು: ಕೌರವೇಂದ್ರಾ: ।
ಕೃಚ್ಛ್ರೇಣ ತಂ ವೀರಥೀಕೃತ್ಯ ಚೈಕಂ ಸರ್ವೇ ಸಮೇತಾಜಗೃಹುರ್ಧಾರ್ತರಾಷ್ಟ್ರಾ: ॥೨೩೬॥

ಕರ್ಣೇನ ಭೂರಿಶ್ರವಸಾ ಚ ಸಾರ್ಧಂ ಬಾಹ್ವೋರ್ಬಲಾದೇವ ದುರ್ಯೋಧನಸ್ಯ ।
ಶ್ರುತ್ವೈವ ತದ್ವೃಷ್ಣಯುಸ್ಸರ್ವ ಏವ ಸಮುದ್ಯಮುಂ ಚಕ್ರೇ ಕೌರವೇಷು ॥೨೩೭॥

ಕರ್ಣಮುಖ್ಯಾಃ ದುರ್ಯೋಧನಾದ್ಯಾಃ—ಕರ್ಣನೇ ಮೊದಲಾಗಿರುವ ದುರ್ಯೋಧನಾದಿಗಳು, ಬಲಾತ್-ಗೃಹೀತಾಂ ತಾಂ – ಬಲಾತ್ಕಾರದಿಂದ ಒಯ್ಯಲ್ಪಟ್ಟ ಅವಳನ್ನು, ವೀಕ್ಷ್ಯ—ನೋಡಿ, ಕ್ರೋಧದೀಪ್ತಾಃಸಂತಃ—ಕ್ರೋಧದಿಂದ ಉರಿಯುವವರಾಗಿ, ಯುಯುಧುಃ—ಯುದ್ಧ ಮಾಡಿದರು, ತಂ ಏಕಂ – ಅವನೊಬ್ಬನನ್ನು, ಸರ್ವೇತಾಃ ಸರ್ವೇ-ಧಾರ್ತರಾಷ್ಟ್ರಾಃ—ಒಟ್ಟು ಸೇರಿದ ಎಲ್ಲ ಕೌರವರು, ಕರ್ಣೇನ ಚ ಭೂರಿಶ್ರವಸಾ ಸಾರ್ಧಂ – ಕರ್ಣನಿಂದ ಮತ್ತು ಭೂರಿ ಶ್ರವನಿಂದ ಕೂಡಿಕೊಂಡು, ದುರ್ಯೋಧನಸ್ಯ ಬಾಹ್ವೋಃ ಬಲಾತ್ ಏವ—ದುರ್ಯೋಧನನ ಬಾಹು ಬಲದಿಂದಲೇ ಕೃಚ್ಛ್ರೇಣ—ಕಷ್ಟದಿಂದ, ವಿರಥೀಕೃತ್ಯ – ರಥಹೀನನನ್ನಾಗಿಸಿ, ಜಗೃಹುಃ – ಹಿಡಿದರು, ತತ್ – ಆ ವಿಷಯವನ್ನು, ಶ್ರುತ್ವೈವ – ಕೇಳಿಯೇ. ಸರ್ವೇ ವೃಷ್ಣಯಃ ಎಲ್ಲ ಯಾದವರು, ಕೌರವೇಷು – ಕೌರವರ ಬಗೆಗೆ, ಸಮುದ್ಯಮಂ-ಚಕ್ರಿರೇ—ಯುದ್ಧೋದ್ಯೋಗವನ್ನು ಮಾಡಿದರು. ॥೨೩೬ – ೨೩೭॥

ನಿವಾರ್ಯ ತಾನ್ ಬಲಭದ್ರಃ ಸ್ವಯಂ ಯಯೌ ಸಹೋದ್ಧವಃ ಕೌರವೇಯಾಂಥವಾರ್ಥೀ।
ಪುರಸ್ಯ ಬಾಹ್ಯೋಪವನೇಸ್ಥಿತಸ್ಯ ಪ್ರಾಸ್ಥಾಪಯಚ್ಚೋದ್ಧವಂ ಕೌರವಾರ್ಥೇ ॥೨೩೮॥

ಬಲಭದ್ರಃ–ಬಲರಾಮದೇವರು, ತಾನ್ ನಿವಾರ್ಯ – ಅವರನ್ನೆಲ್ಲ ತಡೆದು, ಸಹೋದ್ಧವಃಸನ್–ಉದ್ಧವನಿಂದ ಸಹಿತರಾಗಿ, ಸಮಾರ್ಥೀಸನ್ — ಸಂಧಾನ ಮಾಡುವ ಇಚ್ಛೆಯುಳ್ಳವರಾಗಿ, ಸ್ವಯಂ-ಸ್ವತಃ, ಕೌರವೇಯಾನ್—ಕೌರವನ್ನು ಕುರಿತು, ಯಯೌ – ಹೋದರು. ಪುರಸ್ಯ—ಊರಿನ, ಬಾಹ್ಯೋಪವನೇ – ಹೊರಗಿನ ಉಪವನದಲ್ಲಿ, ಸ್ಥಿತಃಸನ್ – ಇರುವಂಥವರಾಗಿ ಸಃ – ಆ ಬಲರಾಮದೇವರು, ಕೌರವಾರ್ಥೇ – ಕೌರವರನ್ನು, ಕರೆಯುವದಕ್ಕಾಗಿ, ಉದ್ಧವಂ—ಉದ್ಧವನನ್ನು, ಪ್ರಾಸ್ಥಾಪಯತ್ – ಕಳಿಸಿದರು. ॥೨೩೮॥

ಆಗತ್ಯ ಸರ್ವೇ ಕುರವೋsಸ್ಯ ಪೂಜಾಂ ಚಕ್ರುಸ್ಸ ಚಾಹೋಗ್ರಸೇನಸ್ಯ ಚಾಜ್ಞಾಮ್ ।
ಆಜ್ಞಾಪಯದ್ವೋ ನೃಪತಿಃ ಸ್ವಯನ್ನಃಕುಮಾರಕಃ ಪ್ರಗೃಹೀತೊ ಭವದ್ಭಿಃ ॥೨೩೯॥

ಏಕಸ್ಯನೇತೈರ್ಬಹುಭಿರ್ಬಾಂಧವಾರ್ಥಂ ಕ್ಷಾಂತಂ ತನ್ನೋsಮುಂಜತಾಶ್ವೇವ ಸಾಂಬಮ್ ।
ಆಜ್ಞಾಪಯಾಮಾಸ ವ ಉಗ್ರಸೇನ ಇತ್ಯುಕ್ತವೇವ ತು ನಿಶಮ್ಯ ಕುರುಪ್ರವೀರಾಃ ॥೨೪೦॥

ಸಂಶ್ರಾವ್ಯ ದುಷ್ಟವಚನಾನಿ ಬಲಂ ಪುರಂ ಸ್ವಂ ಕ್ರೋಧಾತ್ಸಮಾವಿವಿಶುರತ್ರ ಚುಕೋಪ ರಾಮಃ।
ಸಲಾಂಗಲೇನ ತತ್ಪುರಂ ವಿಕೃಷ್ಯ ಜಾಹ್ನವೀಜಲೇ । ನಿಪಾತಯನ್ನಿವಾರಿತಃ ಪ್ರಣಮ್ಯ
ಸರ್ವಕೌರವೈಃ ॥೨೪೧॥

ಸರ್ವೇ ಕುರವಃ – ಎಲ್ಲ ಕೌರವರು, ಆಗತ್ಯ—ಬಂದು, ಅಸ್ಯಪೂಜಾಂ – ಈ ಬಲರಾಮ ದೇವರ ಪೂಜೆ-ಯನ್ನು, ಚಕ್ರುಃ—ಮಾಡಿದರು, ಸಚ – ಆ ಬಲರಾಮದೇವರಾದರೂ, ಉಗ್ರಸೇನಸ್ಯ ಆಜ್ಞಾಂ – ಉಗ್ರಸೇನ ರಾಜನ ಆಪ್ಪಣೆಯನ್ನು, ಆಹ ಹೇಳಿದರು. (ಹೇಗೆ ಹೇಳಿದಂತೆ), ನೃಪತಿಃ –ನಮ್ಮ ರಾಜನು, ವಃ–ನಿಮಗೆ, ಆಜ್ಞಾಪಯತ್ – ಆಜ್ಞೆ ಮಾಡಿರುತ್ತಾನೆ. (ಅದೇನೆಂದರೆ) ನಃ ಏಕಃ ಕುಮಾರಕಃ– ನಮ್ಮ ಒಬ್ಬ ಕುಮಾರನಾದ ಸಾಂಬನು, ಸರ್ವೈತೈಃಬಹುಭಿಃ ಭವದ್ಭಿಃ – ಒಟ್ಟಾಗಿ ಸೇರಿದ ಬಹಳರಾದ ನಿಮ್ಮಿಂದ ಪ್ರಗೃಹೀತಃ – ಹಿಡಿಯಲ್ಪಟ್ಟಿರುವನು. ತತ್ – ಆ ನಿಮ್ಮ ಕಾರ್ಯವು, ಬಾಂಧವಾರ್ಥಂ – ಬಂಧುಸ್ನೇಹಕ್ಕಾಗಿ ನಃ ಕ್ಷಾಂತಂ – ನಮ್ಮಿಂದ ಕ್ಷಮಿಸಲ್ಪಟ್ಟಿದೆ ಸಾಂಬಂ – ಸಾಂಬನನ್ನು, ಅಶು – ಕೂಡಲೇ, ಮುಂಚತ ಬಿಡಿರಿ, ಇತಿ ಏವ – ಹೀಗೆಂದೇ, ಉಗ್ರಸೇನಃ – ಉಗ್ರಸೇನ

ರಾಜನಂ, ವಃ - ನಿಮಗೆ, ಆಜ್ಞಾಪಯತಾವಕಾಸ – ಆಜ್ಞಾಪಿಸಿರೇತ್ತಾನೆ ಇತಿ ಉಕ್ತರಿವವ — ಈ ರೀತಿ ಬಲರಾಮದೇವರಿಂದ ಹೇಳಲ್ಪಟ್ಟದ್ದನ್ನೇ, ನಿಶಮ್ಯ-ಕೇಳಿ, ಕುರುಶ್ರವೀರಃ ಕೌರವರಂ, ಕ್ರೋಧಾತ್ – ಸಿಟ್ಟಿನಿಂದ, ದರ್ಪವಚನಾನಿ-ನಿಂದಾವಾಕ್ಯಗಳನ್ನು, ಬಲಂ – ಬಲರಾಮನಿಗೆ, ಸಂಶ್ರಾವ್ಯ ಕೇಳಿಸಿ, ಸ್ವಂ ಪುರಂ-ತಮ್ಮ ಊರನ್ನು, ಸಮಾವಿವಿಶುಃ-ಪ್ರವೇಶಿಸಿದರು. ಅತ್ರ – ಈ ಸಂದರ್ಭದಲ್ಲಿ, ರಾಮಃ—ಬಲರಾಮದೇವನಂ, ಚುಕೋಪ – ಸಿಟ್ಟಾದನಂ, ಸಃ—ಆ ಬಲರಾಮನಂ. ಲಾಂಗಲೇನ – ರಂಟೆಯಿಂದ,ತತ್ಪುರಂ – ಆ ಹಸ್ತಿನಾವತಿ ಪುರವನ್ನೇ. ವಿಕೃಷ್ಯ – ಜಗ್ಗಿ. ಜಾಹ್ನವೀಜಲೇ—ಭಾಗೀರಥೀನದಿಯಲ್ಲಿ, ನಿಪಾತಯನ್ – ಕೆಡುವುವನಾಗಂತ್ತಿರುವಾಗ, ಸರ್ವಕೌರವೈಃ – ಎಲ್ಲ ಕೌರವರಿಂದ, ಪ್ರಣಮ್ಯ – ನಮಸ್ಕರಿಸಿ, ನಿವಾರಿತಃ—ತಡೆಯಲ್ಪಟ್ಟನಂ. ॥೨೩೯ – ೨೪೦—೨೪೧॥

ಸಭಾರ್ಯಮಾಶು ಪುತ್ರಕಂ ಸುಯೋಧನಾಭಿಪೂಜಿತಂ ।
ಸಪಾರಿಬರ್ಹಮಾಪ್ಯ ಚ ಪ್ರಜಗ್ಮಿವಾನ್ ಸ್ವಕಂ ಪುರಮ್ ॥೨೪೨॥

(ಬಲರಾಮದೇವರು), ಸುಯೋಧನಾಭಿಪೂಜಿತಂ – ದುರ್ಯೋಧನನಿಂದ ಆದರಿಸಲ್ಪಟ್ಟ,ಸಭಾರ್ಯಂ—ಪತ್ನೀ ಸಹಿತನಾದ (ಸಪಾರಿಬರ್ಹಂ—ಉಡುಗೊರೆ ಸಹಿತನಾದ), ಪುತ್ರಕಂ—ಪುತ್ರನಾದ ಸಾಂಬನನ್ನು, ಆಪ್ಯ - ಹೊಂದಿ, ಸ್ವಕಂ ಪುರಂ – ತಮ್ಮ ದ್ವಾರಕೆಗೆ, ಪ್ರಜಗ್ಮಿವಾನ್ – ಹೋದರು. ॥೨೪೨॥

ಇತ್ಯಾದಿ ಕರ್ಮಾಣಿ ಮಹಾಂತಿ ರಾಮಸ್ಯಾಸನ್ ಶೇಷಸ್ಯಾಚ್ಯುತಾವೇಶಿನೋಽಲಮ್ ।
ಯಸ್ಯಾಚ್ಯುತಾವೇಶವಿಶೇಷಕಾಲಂ ಜ್ಞಾತ್ವಾ ಭೀಮೋಽಪ್ಯಸ್ಯ ನೋದೇತಿಯುದ್ಧೇ ॥೨೪೩॥

ಯಂಸ್ಯ —ಯಾರ, ಅಚ್ಯುತಾವೇಶವಿಶೇಷ ಕಾಲಂ— ಶ್ರೀಹರಿಯಂ ವಿಶೇಷಾವೇಶವಿರುವ ಕಾಲವನ್ನು, ~~ಜ್ಞಾತ್ವಾ – ತಿಳಿದಂ, ಭೀಮಃ ಅಪಿ – ಭೀಮಸೇನದೇವರೂ ಕೂಡ, ಅಸ್ಯಯುದ್ಧೇ – ಇವರ ಜೊತೆಗಿನ ಯಾದ್ದದಲ್ಲಿ,~~ ನ ಉದೇತಿ—ಪ್ರವೃತ್ತರಾಗುವದಿಲ್ಲವೋ, ತಸ್ಯ—ಅಂಥ, ಅಲಂ ಅಚ್ಯುತಾವೇಶಿನಃ – ಅತ್ಯಂತವಾಗಿ ಭಗವಂತನ ಶ್ವೇತಕೇಶದ ಆವೇಶವುಳ್ಳ, ಶೇಷಸ್ಯ—ಶೇಷಾವತಾರಿಯಾದ, ರಾಮಸ್ಯ—ಬಲರಾಮದೇವರ, ಮಹಾಂತಿ ಶ್ರೇಷ್ಠವಾದ, ಇತ್ಯಾದಿ ಕರ್ಮಾಣಿ – ಇವೇ ಮೊದಲಾದ ಕರ್ಮಗಳಂ, ಆಸನ್ – ಆದವು. ॥೨೪೩॥

ಕ್ರೀಡಾಯುದ್ಧೇ ಬಹುಶೋ ರೌಹಿಣೇಯೇ ವ್ಯಕ್ತಂ ವಿಷ್ಣೋರ್ಭೀಮಸೇನೋ ವಿದಿತ್ವಾ ।
ತಾತ್ಕಾಲಿಕೀಂ ಕ್ರೀಡವಮಾನೋಽಪಿ ತೇನ ನೈವೋದ್ಯಮಮ್ ಕುರುತೇ ವಿಷ್ಣುಭಕ್ತ್ಯಾ ॥೨೪೪॥

ಭೀಮಸೇನಃ – ಶ್ರೀಭೀಮಸೇನದೇವರಂ, ತೇನ ಕ್ರೀಡವಮಾನಃ ಅಪಿ – ಆ ಬಲರಾಮದೇವರಿಂದ ಕೂಡಿ ಆಡುವವರಾದರೂ ಕೂಡ, ಕ್ರೀಡಾಯುದ್ಧೇ—ಕ್ರೀಡೆಗಾಗಿ ಮಾಡತಕ್ಕ ಯುದ್ಧದ ಸಮಯದಲ್ಲಿ, ರೌಹಿಣೇಯೇ—ಬಲರಾಮ ದೇವರಲ್ಲಿ ವಿಷ್ಣೋಃ—ಶ್ರೀಹರಿಯಂ, ಬಹುಶಃ – ಬಹುವಾದ, ತಾತ್ಕಾಲಿಕೀಂ ವ್ಯಕ್ತಿಂ - ತಾತ್ಕಾಲಿಕ ಅಭಿವ್ಯಕ್ತಿಯನ್ನು, ವಿದಿತ್ವಾ – ತಿಳಿದನಂತರ, ವಿಷ್ಣುಭಕ್ತ್ಯಾ – ಶ್ರೀಹರಿಭಕ್ತಿಯಿಂದಾಗಿ, ಉದ್ಯಮಮ್—ಅವರ ವಿರುದ್ಧ ಯುದ್ಧದ ಪ್ರಯತ್ನವನ್ನು, ನೈವ ಕುರುತೇ—ಮಾಡುತ್ತಿರಲಿಲ್ಲ. ॥೨೪೪॥

ತದಾ ಜಯೀಪ್ರಭವತ್ಯೇಷ ರಾಮೋ ನಾತಿವ್ಯಕ್ತಸ್ತತ್ರ ಯದಾ ಜನಾರ್ದನಃ ।
ತದಾ ಭೀಮೋ ವಿಜಯೀ ಸ್ಯಾತ್ಸದೈವ ವಿಷ್ಣೋಃ ಕೇಶಾವೇಶವಾನ್ಯತ್ಸರಾಮುಃ ॥೨೪೫॥

ತದಾ – ಆಗ(ಹೆಚ್ಚು ಅಭಿವ್ಯಕ್ತಿ ಇರುವಾಗ), ಏಷ: ರಾಮ: – ಈ ಬಲರಾಮದೇವರು, ಜಯಿನೋಪ್ರಭವತಿ– ಜಯಿಗಳಾಗುತ್ತಿದ್ದರು. ಯತ್ – ಯಾವಕಾರಣದಿಂದ, ಸ: ರಾಮ: – ಆ ಬಲರಾಮದೇವರು, ಸದಾ ಏವ— ಯಾವಾಗಲೂ, ವಿಷ್ಣೋ: ಕೇಶಾವೇಶವಾನ್—ಶ್ರೀಹರಿಯ ಶುಕ್ಲಕೇಶದ ಸಾವಶಾನ್ಯವಾದ ಆವೇಶವುಳ್ಳವರೋ, ತತ್ – ಆದ್ದರಿಂದ, ಯದಾ – ಯಾವಾಗ, ಜನಾರ್ದನ:—ಶ್ರೀಹರಿಯು, ತತ್ರ – ಆ ಬಲರಾಮ ದೇವರಲ್ಲಿ, ನ ಅತಿವ್ಯಕ್ತ: – ಅಷ್ಟು ವಿಶೇಷ ಅಭಿವ್ಯಕ್ತನಲ್ಲವೋ, ತದಾ – ಆಗ, ಭೀಮ: – ಶ್ರೀಭೀಮಸೇನದೇವರು, ವಿಜಯೀ ಸ್ಯಾತ್ – ವಿಜಯಿಗಳಾಗುತ್ತಿದ್ದರು, ॥೨೪೫॥

ಭಾವಾನುವಾದ ೨೩೫ – ೨೪೫

ದುರ್ಯೋಧನನಿಗೆ ಲಕ್ಷಣೆ ಎಂಬ ಮಗಳಿದ್ದಳು. ಅವಳು ಕಾಮಪತ್ನಿಯಾದ ರತಿಯು ಅವತಾರಳು; ಅವಳ ಸ್ವಯಂವರ ಸಮಯದಲ್ಲಿ ಸ್ಕಂದ (ಕಾಮನ) ಅವತಾರನಾದ, ಜಾಂಬವತೀ ಪುತ್ರನಾದ ಸಾಂಬನೂ ತನ್ನಲ್ಲಿ ಅನುರಕ್ತಳಾದ ಅವಳನ್ನು ಬಲಾತ್ಕಾರದಿಂದ ಕರೆದುಕೊಂಡು ಹೋದನು. ಅದನ್ನು ನೋಡಿದ ಕರ್ಣ ಹಾಗು ದುರ್ಯೋಧನಾದಿ ಕೌರವರು ಸಿಟ್ಟಿನಿಂದ ಒಟ್ಟಾಗಿ ಅವನೊಡನೆ ಯುದ್ಧವಾಡಿ ಅವನನ್ನು ವಿರಥನನ್ನಾಗಿ ಮಾಡಿ ಬಂಧಿಸಿ ತಂದರು. ಇದನ್ನು ಕೇಳಿದ ಎಲ್ಲ ಯಾದವರು ಕೌರವರ ವಿರುದ್ಧ ಯುದ್ಧಕ್ಕಾಗಿ ಉದ್ಯುಕ್ತರಾದಾಗ ಅವರನ್ನು ತಡೆದು ಬಲರಾಮದೇವರು ಉದ್ಧವನಿಂದಕೂಡಿಕೊಂಡು ಸಂಧಾನ ಮಾಡಿಸಲು ಹೊರಟು ಹಸ್ತಿನಾವತಿಯ ಹೊರಗೆ ಉಪವನದಲ್ಲಿ ನಿಂತು ಕೌರವರ ಹತ್ತಿರ ಉದ್ಧವನನ್ನು ಕಳಿಸಿದರು; ಕೌರವರು ಬಲರಾಮದೇವರು ಬಂದಾರೆಂದು ತಿಳಿದು ಅಲ್ಲಿಗೇ ಬಂದು ಅವರನ್ನು ಪೂಜಿಸಿದರು. ಆಗ ಬಲರಾಮದೇವರು ಅವರನ್ನು ಕುರಿತು 'ನಮ್ಮ ಉಗ್ರಸೇನರಾಜನು ನಮ್ಮ ಸಾಂಬನನ್ನು ಹಿಡಿದ ನಿಮ್ಮ ಅಪರಾಧವನ್ನು ಬಂಧುಗಳು ಎಂಬ ಕಾರಣದಿಂದ ಕ್ಷಮಿಸಿದ್ದೇವೆ; ಅವನನ್ನು ಕೂಡಲೇ ಬಿಟ್ಟು ಕೊಡಬೇಕು ಎಂದು ಆಜ್ಞಾಪಿಸಿದ್ದಾನೆ' ಎಂದು ಹೇಳಿದರು. ಆದರೆ ದುಷ್ಟ ಕೌರವರು ಆ ಮಾತನ್ನು ಲಕ್ಷಿಸದೇ, ದುಷ್ಟವಾತುಗಳನ್ನಾಡಿ ಹೊರಟು ಹೋದರು. ಆಗ ಸಿಟ್ಟಿಗೆದ್ದ ಬಲರಾಮದೇವರು ತನ್ನ ಹಲದಿಂದ ಹಸ್ತಿನಾವತಿಯನ್ನೇ ಸೆಳೆದು ಗಂಗೆಯಲ್ಲೇ ಕೆಡವಲು ಉದ್ಯುಕ್ತರಾದಾಗ ಗಾಬರಿಯಾದ ಕೌರವರು ಬಂದು ನಮಸ್ಕರಿಸಿ ಕ್ಷಮೆ ಕೇಳಿಕೊಂಡು, ಸಾಂಬನನ್ನು ಪೂಜಿಸಿ ಲಕ್ಷಣಾ ಸಹಿತವಾಗಿ ಬಿಟ್ಟುಕೊಟ್ಟರು. ಬಲರಾಮದೇವರು ಅವರನ್ನು ಹಾಗು ಉಡುಂಗೊರೆಧನವನ್ನು ತೆಗೆದುಕೊಂಡು ಊರಿಗೆ ಬಂದರು. ಈ ರೀತಿ ಅನೇಕ ಶ್ರೇಷ್ಠ ಬಲಕಾರ್ಯಗಳನ್ನು ಬಲರಾಮದೇವರು ಮಾಡಿದ್ದಾರೆ. ಶೇಷಾವತಾರಿಯಾದ ಅವರಲ್ಲಿ ಶ್ರೀಹರಿಯ ಶ್ವೇತಕೇಶದ ಆವೇಶವು ಇದೆ. ಯಾವ ಸಮಯದಲ್ಲಿ ಆ ಆವೇಶವು ವ್ಯಕ್ತವಾಗಿರುತ್ತಿತ್ತೋ ಆಗ ಭೀಮಸೇನದೇವರು ಶ್ರೀಹರಿಭಕ್ತಿಯಿಂದಾಗಿ ಅವರ ವಿರುದ್ಧ ಯುದ್ಧಕ್ಕೆ ನಿಲ್ಲುತ್ತಲೇ ಇರಲಿಲ್ಲ. ಅಷ್ಟೊಂದು ವ್ಯಕ್ತವಾಗಿರದಿದ್ದಾಗ ಮಾತ್ರ ಯುದ್ಧಕ್ಕೆ ಹೋಗುತ್ತಿದ್ದರು. ಆಗ ಶ್ರೀಭೀಮರೇ ಗೆಲ್ಲುತ್ತಿದ್ದರು.

ಏತಾದೃಶೇನೈವ ರಾಮೇಣ ಯುಕ್ತೇ ಕೃಷ್ಣೇ ದ್ವಾರ್ವತ್ಯಾಂ ನಿವಸತ್ಯಬ್ಜನಾಭೇ।
ಸ್ವಪ್ನೇಽನಿರುದ್ಧೇನ ರತಾ ಕದಾಚಿದ್ಬಾಣಾತ್ಮಜೋಷಾ ಚಿತ್ರಲೇಖಾಮುವಾಚ ॥೨೪೬॥

ಏತಾದೃಶೇನ ಏವ ರಾಮೇಣ ಯುಕ್ತೇ- ಈ ರೀತಿಮಹಿಮೆಯುಳ್ಳವನೇ ಆದ ಬಲರಾಮನಿಂದ ಕೂಡಿದ, ಅಬ್ಜನಾಭೇ- ಕಮಲನಾಭನಾದ ಶ್ರೀಹರಿಯು ಅವತಾರನಾದ, ಕೃಷ್ಣೇ ಶ್ರೀಕೃಷ್ಣನು, ದ್ವಾರ್ವತ್ಯಾಂ ದ್ವಾರಕೆಯಲ್ಲಿ, ನಿವಸತಿ ಸತಿ – ವಾಸಿಸಿರುತ್ತಿರಲು, ಕದಾಚಿತ್ ಸ್ವಪ್ನೇ—ಒಂದು ದಿನ ಸ್ವಪ್ನದಲ್ಲಿ, ಅನಿರುದ್ಧೇನ ರತಾ – ಅನಿರುದ್ಧನಿಂದ ಕೂಡಿ ವಿಹರಿಸಿದ, ಬಾಣಾತ್ಮಜಾ ಉಷಾ – ಬಾಣಾಸುರನ ಮಗಳಾದ ಉಷೆಯು, ಚಿತ್ರಲೇಖಾಂ – ಚಿತ್ರಲೇಖೆಯನ್ನು ಕುರಿತು, ಉವಾಚ – ಮಾತನಾಡಿದಳು, ॥೨೪೬॥

ತಮಾನಯೇತ್ಯಥ ಸಾ ಚಿತ್ರವಸ್ತ್ರೇ ಪ್ರದರ್ಶ್ಯಲೋಕಾನ್ಸನುದರ್ಶಯತ್ತವ್ ।
ಪೌತ್ರಂವಿದಿತ್ವಾ ವಚನಾಚ್ಚ ತಸ್ಯಾಃಕೃಷ್ಣಸ್ಯ ತಂ ಚಾನಯತ್ತತ್ರ ರಾತ್ರೌ ॥೨೪೭॥

ತಂ – ಆ ಅನಿರುದ್ಧನನ್ನು, ಆನಯಂಇತಿ–ಕರೆಸಿಕೊಂಡು ಬಾ ಎಂದು ಆ ಚಿತ್ರಲೇಖೆಯಂನ್ನು ಕುರಿತು ಮಾತನಾಡಿದಳು.) ತದಾ – ಆಗ, ಚಿತ್ರವಸ್ತ್ರೇ - ಬೇರೆ ಬೇರೆ ರಾಜರ ಚಿತ್ರ ಬರೆದ ವಸ್ತ್ರದಲ್ಲಿ, ಲೋಕಾನ್ – ಬೇರೆ ಬೇರೆ ರಾಜಕುಮಾರರನ್ನು, ಪ್ರದರ್ಶ್ಯ–ತೋರಿಸಿ, ತಂ – ಆ ಅನಿರುದ್ಧನನ್ನು, ಅದರ್ಶಯತ್ – ತೋರಿಸಿದಳು, ತಸ್ಯಾಃ—ಆ ಉಷೆಯ ವಚನಾತ್ – ವಾಕ್ಯದಿಂದ, ತಂ – ಅವನನ್ನು, ಕೃಷ್ಣಸ್ಯ ಪೌತ್ರಂ–ಶ್ರೀಕೃಷ್ಣನ ಮೊಮ್ಮಗನನ್ನಾಗಿ, ವಿದಿತ್ವಾ–ತಿಳಿದು, ರಾತ್ರೌ – ಆ ರಾತ್ರಿಯಲ್ಲಿಯೇ. ತತ್ರ – ಉಷೆಯ ಸಮೀಪಕ್ಕೆ ಆನಯತ್ – ತಂದಳು. ॥೨೪೭॥

ಅನಿರುದ್ಧಂ ಗುಣೋದಾರಮಾನೀತಂಚಿತ್ರಲೇಖಯಾ ।
ಪ್ರಾಪ್ಯರೇಮೇ ಬಾಣಸುತಾ ದಿವಸಾನ್ಸುಬಹೂನಪಿ ॥೨೪೮॥

ಚಿತ್ರಲೇಖಯಾ – ಚಿತ್ರಲೇಖೆಯಿಂದ, ಆನೀತಂ – ತರಲ್ಪಟ್ಟ, ಗುಣೋದಾರಂ – ಗುಣಗಳಿಂದ ಶ್ರೇಷ್ಠನಾದ, ಅನಿರುದ್ಧಂ – ಅನಿರುದ್ಧನನ್ನು, ಪ್ರಾಪ್ಯ – ಹೊಂದಿ, ಬಾಣಸುತಾ - ಬಾಣಾಸುರನ ಪುತ್ರಿಯಾದ ಉಷೆಯಳು, ಸುಬಹೂನ್ ದಿವಸಾನ್ ಅಪಿ –ಬಹಳ ದಿನಗಳವರೆಗೂ ಕೂಡ, ರೇಮೇ – ವಿಹರಿಸಿದಳು. ॥೨೪೮॥

ಗೂಢಂ ಕನ್ಯಾಗೃಹೇ ತಂ ತು ಜ್ಞಾತ್ವಾ ಕನ್ಯಾಭಿರಕ್ಷಿಣಃ ।
ಊಚುರ್ಬಾಣಾಯಾದಿಶಚ್ಚ ಕಿಂಕರಾನ್ಗ್ರಹಣೇಽಸ್ಯ ಸಃ ॥೨೪೯॥

ಕನ್ಯಾಭಿರಕ್ಷಿಣಃ—ಕನ್ಯೆ (ಉಷೆ) ಯ ರಕ್ಷಣೆಮಾಡುತ್ತಿದ್ದ ಜನರು, ಕನ್ಯಾಗೃಹೇ – ಕನ್ಯಕಾ ಗೃಹದಲ್ಲಿ, ಗೂಢಂ—ಗುಪ್ತವಾಗಿರುವ. ತಂ – ಆ ಅನಿರುದ್ಧನನ್ನು, ಜ್ಞಾತ್ವಾ – ತಿಳಿದರು, ಬಾಣಾಯ – ಬಾಣಸುರನಿಗೆ, ಊಚುಃ - ಹೇಳಿದರು, ಸ ಚ – ಆ ಬಾಣನಾದರೂ ಕೂಡ, ಅಸ್ಯ ಗ್ರಹಣೇ – ಈ ಅನಿರುದ್ಧನ ಬಂಧನಮಾಡುವದರ ಬಗ್ಗೆ, ಕಿಂಕರಾನ್ - ತನ್ನ ಸೇವಕರನ್ನು, ಅದಿಶತ್ – ಆಜ್ಞಾಪಿಸಿದನು. ॥೨೪೯॥

ಅಗತಾನನಿರುದ್ಧಸ್ತಾನ್ಪರಿಘೇಣ ಮಹಾಬಲಃ ॥
ನಿಹತ್ಯದ್ರಾವಯಾಮಾಸ ಸ್ವಯಮಾಯಾತ್ತತೋಽಸುರಃ ॥೨೫೦॥

ಮಹಾಬಲಃ – ಮಹಾಬಲಿಷ್ಠನಾದ, ಅನಿರುದ್ಧಃ—ಅನಿರುದ್ಧನು, ಆಗತಾನ್—ಬಂದಿರುವ, ತಾನ್ – ಅವರನ್ನು, ಪರಿಘೇಣ – ಪರಿಘಾಯುಧದಿಂದ, ನಿಹತ್ಯ – ಕೊಂದು, (ಕೆಲವರನ್ನು ಕೊಂದು), ದ್ರಾವಯಾಮಾಸ–(ಉಳಿದವರನ್ನು) ಓಡಿಸಿದನು. ತತಃ – ಅನಂತರ, ಅಸುರಃ ಸ್ವಯಂ ಆಯಾತ್ – ಬಾಣಾಸುರನು ಸ್ವತಃ – ಬಂದನು. ॥೨೫೦॥

ಸ ತು ಯುಧ್ವಾಽತಿಕೃಚ್ಛ್ರೇಣ ನಾಗಾಸ್ತ್ರೇಣ ಬಬಂಧ ತಮ್ ।
ಅಥ ಕೃಷ್ಣಸ್ಸಮಾರುಹ್ಯ ಗರುಡಂ ರಾಮಸಂಯುತಃ ॥೨೫೧॥

ಪ್ರದ್ಯುಮ್ನೇನ ಚ ತತ್ರಾಗಾತ್ ಪ್ರಥಮಂ ತತ್ರ ವಹ್ನಿಭಿಃ ।
ಯುಧ್ವೈವಾಂಗಿರಸಾ ಚೈನ ಕ್ಷಣಾದ್ವಿದ್ರಾವ್ಯ ತಾನ್ಹರಿಃ ॥೨೫೨॥

ವಿದ್ರಾವ್ಯ ಶರ್ವಪ್ರಮಥಾನಾಸಸಾದ ಜ್ವರಂ ತತಃ ।
ತೇನ ಭಸ್ಮಪ್ರಹಾರೇಣ ಜ್ವರಿತಂ ರೋಹಿಣೀಸುತಂ ॥೨೫೩॥

ಆಶ್ಲಿಷ್ಯ ವಿಜ್ವರಂ ಚಕ್ರೇ ವಾಸುದೇವೋ ಜಗತ್ಪ್ರಭುಃ ।
ಸ್ವಯಂ ವಿಕ್ರೀಡ್ಯ ತೇನಾಥ ಕಂಚಿತ್ಕಾಲಂ ಜನಾರ್ದನಃ ॥೨೫೪॥

ನಿಷ್ಪೀಡ್ಯ ಮುಷ್ಟಿಭಿಶ್ಚಾನ್ಯಂ ಸಸರ್ಜ ಜ್ವರಮಚ್ಯುತಃ ।
ಸ್ವಯಂ ಜಿತ್ವಾಽಪಿ ಗಿರಿಶಭೃತ್ಯಂ ನಾಲಮಿತಿ ಪ್ರಭುಃ ॥೨೫೫॥

ಸ್ವಭೃತ್ಯೇನೈವ ಜೇತವ್ಯ ಇತ್ಯನ್ಯಂ ಸಸೃಜೇ ತದಾ ।
ಜ್ವರೇಣ ವೈಷ್ಣವೇನಾಸೌ ಸುಭೃಶಂ ಪೀಡಿತಸ್ತದಾ ॥೨೫೬॥

ಸಃತಂ — ಆ ಬಾಣಾಸುರನಾದರೂ, ಅತಿಕೃಚ್ಛ್ರೇಣ — ಅತಿ ಕಷ್ಟದಿಂದ, ಯುದ್ಧ್ವಾ — (ಅನಿರುದ್ಧನ ಜೊತೆಗೆ) ಯುದ್ಧವಾಡಿ, ನಾಗಾಸ್ತ್ರೇಣ—ನಾಗಾಸ್ತ್ರದಿಂದ, ತಂ — ಆ ಅನಿರುದ್ಧನನ್ನು, ಬಬಂಧ — ಬಂಧಿಸಿದನು. ಅಥ — ಇದರ ನಂತರ ಕೃಷ್ಣಃ — ಶ್ರೀಕೃಷ್ಣಪರಮಾತ್ಮನು, ಗರುಡಂ — ಗರುಡನನ್ನು, ಸಮಹಾರಾಹ್ವ — ಏರಿ, ರಾಮಸಂಯುತಃ ಸನ್ — ಬಲರಾಮದೇವನಿಂದ ಕೂಡಿದವನಾಗಿ, ಪ್ರದ್ಯುಮ್ನೇನ ಚ — ಪ್ರದ್ಯುಮ್ನನಿಂದಲೂ ಕೂಡ ಕೂಡಿಕೊಂಡು ತತ್ರ—ಅಲ್ಲಿಗೆ, ಅಗಾತ್ — ಹೋದನು. ಪ್ರಥಮಂ — ಮೊದಲು, ತತ್ರ—ಅಲ್ಲಿ, ವಹ್ನಿಭಿಃ—ಅಗ್ನಿಗಳಿಂದ, ಚ—ಹಾಗು, ಅಂಗಿರಸಾ ಚ - ಅಂಗಿರಸಎಂಬ ವಿಶೇಷಅಗ್ನಿಯಿಂದಲೂ ಕೂಡ. ಯುಧ್ವಾ — ಯುದ್ಧವಾಡಿ, ಹರಿಃ—ಶ್ರೀಕೃಷ್ಣನು, ತಾನ್ — ಅವರೆಲ್ಲರನ್ನೂ, ಕ್ಷಣಾತ್ — ಅಲ್ಪಸಮಯದಲ್ಲಿಯೇ, ವಿದ್ರಾವ್ಯ—ಓಡಿಸಿ ಶರ್ವಪ್ರಮಥಾನ್ ರುದ್ರದೇವರ ಭೂತಗಣಗಳನ್ನು. ವಿದ್ರಾವ್ಯ—ಓಡಿಸಿ, ತತಃ—ನಂತರದಲ್ಲಿ, ಜ್ವರಂ—(ಯುದ್ಧಕ್ಕೆ ಬಂದಿರುವ) ಶೈವಜ್ವರವನ್ನು-ಆಸಸಾದ—ಹೊಂದಿದನು. ತೇನ-ಆ ಜ್ವರದಿಂದ ಆದ, ಭಸ್ಮಪ್ರಹರೇಣ-ಭಸ್ಮದ ಹೊಡೆತದಿಂದ, ಜ್ವರಿತಂ ಜ್ವರದಿಂದ ಕೂಡಿದ, ರೋಹಿಣೀಸುತಂ - ರೋಹಿಣೀಸುತನಾದ ಬಲರಾಮನನ್ನು, ಆಶ್ಲಿಷ್ಯ-ಆಲಿಂಗಿಸಿ ವಿಜ್ವರಂ-ಜ್ವರರಹಿತನನ್ನಾಗಿ, ಚಕ್ರೇ — ಮಾಡಿದನು, ಅಥ ನಂತರ, ಜಗತ್ಪ್ರಭುಃ ವಾಸುದೇವಃ—ಜಗದೊಡೆಯನಾದ ಶ್ರೀಕೃಷ್ಣಪರಮಾತ್ಮನು, ಸ್ವಯಂ—ತಾನೇ, ಕಂಚಿತ್ಕಾಲಂ ಕೆಲವು ಸಮಯದತನಕ ತೇನ=ಆ ಶೈವ ಜ್ವರದಿಂದೊಡಗೂಡಿ, ವಿಕ್ರೀಡ್ಯ — ಯುದ್ಧಕ್ರೀಡೆಯನ್ನು ಮಾಡಿ. ಮುಷ್ಟಿಭಿಃ— ತನ್ನ ಮುಷ್ಟಿಯ ಹೊಡೆತಗಳಿಂದ, ನಿಷ್ಪೀಡ್ಯ — (ಹಣ್ಣು ಮಾಡಿ), ಪೀಡಿಸಿ ಅನ್ಯಂ ಜ್ವರಂ— ಶೈವ ಜ್ವರಕ್ಕೆ ಪ್ರತಿಯಾಗಿ ಇನ್ನೊಂದು ವೈಷ್ಣವ ಜ್ವರವನ್ನು, ಸಸರ್ಜ — ಸೃಷ್ಟಿಸಿದನು, ಅಚ್ಯುತಃ — ಶ್ರೀಕೃಷ್ಣನು, ಗಿರಿಶಭೃತ್ಯಂ — ಶ್ರೀರುದ್ರದೇವರ ಸೇವಕನಾದ ಜ್ವರನನ್ನು, ಜಿತ್ವಾ ಅಪಿ — ತಾನು ಗೆದ್ದರೂ ಕೂಡ, ನ ಅಲಂ — ಇಷ್ಟೇ ಸಾಲದು (ನನ್ನ ಸೇವಕನು ಗೆಲ್ಲಬೇಕು) ಸ್ವಭೃತ್ಯೇನ ಏವ ಜೇತವ್ಯಃ — ತನ್ನ ಸೇವಕನಿಂದ ಗೆಲ್ಲಲ್ಪಡಬೇಕು, ಇತಿ - ಎಂಬ ಕಾರಣದಿಂದ, ಪ್ರಭುಃ — ಸರ್ವಸಮರ್ಥನಾದ ಶ್ರೀಕೃಷ್ಣನು, ತದಾ - ಆಗಲೇ, ಅನ್ಯಂ — ಇನ್ನೊಂದು (ವೈಷ್ಣವ) ಜ್ವರನನ್ನು: ಸಸರ್ಜ—ಸೃಷ್ಟಿಸಿದನು, ತದಾ—ಆಗ, ಅಸೌ—ಆ ಶೈವ ಜ್ವರವು ವೈಷ್ಣವೇನ ಜ್ವರೇಣ — ಆ ವೈಷ್ಣವ ಜ್ವರದಿಂದ, ಸುಭೃಶಂ ಪೀಡಿತಃ—ಅತ್ಯಂತವಾಗಿ ಪೀಡಿಸಲ್ಪಟ್ಟನು: ॥೨೫೧॥೨೫೨॥೨೫೩॥೨೫೪॥೨೫೫॥೨೫೬॥

ಗ್ರಾಸಾರ್ಥಮುಪನೀತಶ್ಚ ಜಗಾಮ ಶರಣಂ ಹರಿಮ್ ।
ತೇನ ಸ್ತುತಸ್ಸ ಭಗವಾನ್ಮೋಚಯಾಮಾಸ ತಂ ವಿಭುಃ ॥೨೫೭॥

ಚ—ಹಾಗೂ, ಗ್ರಾಸಾರ್ಥಂ—ಭಕ್ಷಣಗಾಗಿ, ಉಪನೀತ:—ವೈಷ್ಣವ ಜ್ವರದಿಂದ ಸನಿಹಕ್ಕೆ ತೆಗೆದುಕೊಳ್ಳಲ್ಪಟ್ಟ ಆ ಶೈವಜ್ವರವು, ಹರಿಮ್ ಶರಣಂ ಜಗಾಮ—ಶ್ರೀಕೃಷ್ಣನನ್ನೇ ಮೊರೆ ಹೋದನು, ತೇನ ಸ್ತುತಃ—ಆ ಜ್ವರದಿಂದ ಸ್ತುತಿಸಲ್ಪಟ್ಟ, ವಿಭು: ಸ: ಭಗವಾನ್—ಸರ್ವವ್ಯಾಪ್ತನಾದ ಭಗವಂತನು, ತಂ—ಆ ಶೈವಜ್ವರವನ್ನು, ಮೋಚಯಾಮಾಸ—ಬಿಡಿಸಿದನು. ॥೨೫೭॥

ಕ್ರೀಡಾರ್ಥಮತ್ಯಲ್ಪಜನೇಷ್ವಪಿ ಪ್ರಭುಃ ಕಥಂಚಿದೇವ ವ್ಯಜಯದ್ವ್ಯಥಾಂ ವಿನಾ ।
ಇತ್ಯಾದಿ ಮೋಹಾಯ ಸದರ್ಶಯತ್ಯಜೋ ನಿತ್ಯಸ್ವತಂತ್ರಸ್ಯ ಕುತೋವ್ಯಥಾದಯಃ ॥೨೫೮॥

ಅಜ: ಸಃ—ಜನನ ರಹಿತನಾದ ಶ್ರೀಕೃಷ್ಣಪರಮಾತ್ಮನು, ಪ್ರಭು: ಅಪಿ—ಅಂಗೀರಸವಹ್ನಿ, ಶೈವಜ್ವರ ಇತ್ಯಾದಿಗಳನ್ನು ಗೆಲ್ಲಲು ಸ್ವಯಂ ಸಮರ್ಥನೇ ಆಗಿದ್ದರೂ ಕೂಡ, ಅತ್ಯಲ್ಪಜನೇಷು—ಅತ್ಯಲ್ಪರಾದ ಆ ವ್ಯಕ್ತಿಗಳ ಜೊತೆಗೆ, (ಯುದ್ಧಾಯ ಪ್ರವೃತ್ತ: ಸನ್—ಯುದ್ಧಕ್ಕೆ ತೊಡಗಿದವನಾಗಿ,) ಕಥಂಚಿತ್ ಏವ—ಹೇಗೊ, ವೈಷ್ಣವ ಜ್ವರ ಸೃಷ್ಟಿ ಇತ್ಯಾದಿ ಪ್ರಯತ್ನವನ್ನು ಮಾಡಿಯೇ) ವ್ಯಥಾಂ ವಿನಾ—ವ್ಯಥೆ ಇಲ್ಲದಂತೆ, ವ್ಯಜಯತ್—ಗೆದ್ದನು, ಇತ್ಯಾದಿ—ಇದೇ ಮೊದಲಾದ ವಿಷಯವನ್ನು, ಮೋಹಾಯ—ದಟ್ಟ ಜನ ಮೋಹನಕ್ಕಾಗಿ, ದರ್ಶಯತಿ—ತೋರಿಸುವನು, (ಏಕೆಂದರೆ), ನಿತ್ಯಸ್ವತಂತ್ರಸ್ಯ—ನಿತ್ಯ ಸ್ವತಂತ್ರನಾದ ಭಗವಂತನಿಗೆ, ವ್ಯಥಾದಯಃ—ವ್ಯಥೆ ಮೊದಲಾದ ದೋಷಗಳು, ಕುತ: —ವೈಷ್ಣವ ಜ್ವರ ಸೃಷ್ಟಿ ಮಾಡದಿದ್ದರೂ ಕೂಡ ಹೇಗೆ ಆಗಲು ಶಕ್ಯ ? (ಆಗಲಾರವು). ॥೨೫೮॥

ಯದಾ ಜ್ವರಾದ್ಯಾಅಖಿಲಾಃಪ್ರವಿದ್ರುತಾಸ್ತದಾ ಸ್ವಯಂ ಪ್ರಾಪ ಹರಿಂ ಗಿರೀಶಃ।
ತಯೋರಭೂದ್ಯದ್ಧಮಥೈನ ಮಚ್ಯುತೋ ವಿಜೃಂಭಯಾಮಾಸ ವಿಜೃಂಭಣಾಸ್ತ್ರತಃ ॥೨೫೯॥

ಯದಾ—ಯಾವಾಗ, ಜ್ವರಾದ್ಯಾ: ಅಖಿಲಾ:—ಜ್ವರವೇ ಮೊದಲಾದ ಎಲ್ಲವುಗಳು, ಪ್ರವಿದ್ರುತಾಃ—ಶ್ರೀಕೃಷ್ಣನಿಂದ, ವೈಷ್ಣವ ಜ್ವರದಿಂದ ಓಡಿಸಲ್ಪಟ್ಟವೋ, ತದಾ—ಆಗ, ಗಿರೀಶಃ—ರುದ್ರದೇವರು, ಸ್ವಯಂ—ತಾನೇ, ಹರಿಂ—ಶ್ರೀ ಹರಿಯನ್ನು, ಪ್ರಾಪ—ಹೊಂದಿದರು, ಅಥ—ನಂತರ, ತಯೋ: ಶ್ರೀಕೃಷ್ಣರುದ್ರರಿಬ್ಬರಿಗೆ, ಯುದ್ಧಂ—ಯುದ್ಧವು, ಅಭೂತ್—ನಡೆಯಿತು, ಅಥ—ನಂತರ, ಅಚ್ಯುತಃ—ಶ್ರೀಕೃಷ್ಣನು, ವಿಜೃಂಭಣಾಸ್ತ್ರತ:—ಸ್ತಂಭನಾಸ್ತ್ರದಿಂದ, ಏನಂ—ಈ ರುದ್ರದೇವರನ್ನು, ವಿಜೃಂಭಯಾಮಾಸ—ಸ್ತಂಭೀಭೂತರನ್ನಾಗಿ ಮಾಡಿದರು. ॥೨೫೯॥

ವಿಜೃಂಭಿತೇ ಶಂಕರೇ ನಿಷ್ಪ್ರಯತ್ನೇ ಸ್ಥಾಣೂಪಮೇ ಸಂಸ್ಥಿತೇ ಕಂಜಜಾತಃ ।
ದೈತ್ಯಾವೇಶಾದ್ವಾಸುದೇವಾನಭಿಜ್ಞಂ ಸಂಬೋಧಯಾಮಾಸ ಸದುಕ್ತಿಭಿಃ ಪ್ರಭುಃ ॥೨೬೦॥

ವಿಜೃಂಭಿತೇ ಶಂಕರೇ—ಸ್ತಂಭೀಭೂತರಾದ ರುದ್ರದೇವರು ಸ್ಥಾಣೂಪಮೇ ನಿಷ್ಪ್ರಯತ್ನೇ ಸಂಸ್ಥಿತೇ ಸತಿ—ಸ್ಥಾಣುವಿಗೆ (ಮೋಟುಮರಕ್ಕೆ) ಸದೃಶರಾಗಿ ಪ್ರಯತ್ನರಹಿತರಾಗಿ ನಿಂತಿರುತ್ತಿರಲು, ಪ್ರಭು: ಕಂಜಜಾತಃ—ಸರ್ವಜ್ಞರಾದ, ಕಮಲದಲ್ಲಿ ಜನ್ಮವುಳ್ಳ ಶ್ರೀ ಬ್ರಹ್ಮದೇವರು, ದೈತ್ಯಾವೇಶಾತ್—ದೈತ್ಯರ ಆವೇಶದಿಂದ, ವಾಸುದೇವಾನಭಿಜ್ಞಂ—ಶ್ರೀಕೃಷ್ಣನನ್ನು ತಿಳಿಯದಿರುವ ಇವರನ್ನು (ರುದ್ರದೇವರನ್ನು) ಸದುಕ್ತಿಭಿ: —ಪ್ರಾಮಾಣಿಕವಾದ, ಹಿತವಾದ ಮಾತುಗಳಿಂದ, ಸಂಬೋಧಯಾಮಾಸ—ತಿಳಿಹೇಳಿದರು ॥೨೬೦॥

ಪ್ರಗೃಹ್ಯ ಶರ್ವಂ ಚ ವಿವೇಶ ವಿಷ್ಣೋಃ ಸ ತೂದರಂ ದರ್ಶಯಾಮಾಸ ತತ್ರ ।
ಶಿವಸ್ವರೂಪಂ ಸ್ತಂಭಿತಂ ಬಿಲ್ವನಾಮ್ನಿ ವನೇ ಗಿರೀಶೇನ ಚ ಯತ್ತಪಃ ಕೃತಮ್ ।
ಶೈವಂ ಪದಂ ಪ್ರಾಪ್ತುಮೇವಾಚ್ಯುತಾಚ್ಚ ತಚ್ಚಾವದತ್ಕಂಜಜಶ್ಶಂಕರಸ್ಯ । ॥೨೬೦॥

ಅಪೇತಮೋಹೋಽಥ ವೃಷಧ್ವಜೋ ಹರಿಂ ತುಷ್ಟಾವಬಾಣೋಽಭಿಸಸಾರ ಕೇಶವಮ್ ।
ತಸ್ಮಾಚ್ಯುತೋ ಬಾಹುಸಹಸ್ರಮುಚ್ಚಿನತ್ಪುನಶ್ಚಾರಿಂ ಜಗೃಹೇ ತಚ್ಛಿರೋಽರ್ಧೇ ॥೨೬೨॥

ಚ – ಮತ್ತು, ಸ – ಆ ಬ್ರಹ್ಮದೇವರು, ಶರ್ವಂ ಪ್ರಗೃಹ್ಯ – ರುದ್ರದೇವರನ್ನು ಹಿಡಿದುಕೊಂಡು, ವಿಷ್ಣೋಃ ಉದರಂ – ಶ್ರೀಹರಿಯ ಹೊಟ್ಟೆಯನ್ನು ವಿವೇಶ – ಪ್ರವೇಶಿಸಿದರು. ತತ್ರ – ಅಲ್ಲಿ, ಸ್ತಂಭಿತಂ – ಸ್ತಭ-ನಾಸ್ತ್ರದಿಂದ ಸ್ತಂಭೀಭೂತವಾದ, ಶಿವಸ್ವರೂಪಂ – ಇನ್ನೊಂದು ರುದ್ರ ರೂಪವನ್ನು, ದರ್ಶಯಾಮಾಸ – ತೋರಿಸಿದರು, ಚ – ಮತ್ತು, ಪೂರ್ವಂ – ಹಿಂದೆ, ಶೈವಂ ಪದಂ ರುದ್ರಪದವನ್ನು, ಅಚ್ಯುತಾತ್ – ಶ್ರೀಹರಿಯಾದೆಯಿಂದ, ಪ್ರಾಪ್ತುಂ—ಹೊಂದಲು, ಗಿರೀಶೇನ ಏವ - ಆ ರುದ್ರದೇವರಿಂದಲೇ, ಯತ್ ತಪಃ ಕೃತಂ – ಯಾವ ತಪಸ್ಸು ಮಾಡಲ್ಪಟ್ಟಿತೋ, ತಚ್ಚ—ಅದನ್ನೂ ಕೂಡ, ಕಂಜಜಃ ಬ್ರಹ್ಮಹ್ಮದೇವರು, ಶಂಕರಸ್ಯ – ರುದ್ರದೇವರಿಗೆ, ಅವದತ್ – ಹೇಳಿದರು. ಅಥ – ನಂತರ, ಅಪೇತಮೋಹಃ – ಮೋಹದಿಂದ ದೂರರಾದ, ವೃಷಧ್ವಜಃ – ವೃಷಭವಾಹನರಾದ ರುದ್ರದೇವರು, ಹರಿಂ – ಶ್ರೀಕೃಷ್ಣನನ್ನು, ತುಷ್ಟಾವ—ಸ್ತುತಿಸಿದರು, ಬಾಣಃ—ಬಾಣಾಸುರನು, ಕೇಶವಂ – ಶ್ರೀಕೃಷ್ಣಪರಮಾತ್ಮನನ್ನು ಕುರಿತು, ಅಭಿಸಸಾರ—ಏರಿಬಂದನು, ಅಚ್ಯುತಃ – ಶ್ರೀಕೃಷ್ಣಪರಮಾತ್ಮನು, ತಸ್ಯ—ಯುದ್ಧಕ್ಕೆ ಬಂದ ಬಾಣನ, ಬಾಹುಸಹಸ್ರಂ – ಸಾವಿರ ಬಾಹುಗಳನ್ನು, ಅಚ್ಛಿನತ್ – ಕತ್ತರಿಸಿದನು, ಪುನಃ – ಮತ್ತೆ, ತಚ್ಛಿರೋಽರ್ಧೇ ಚ – ಅವನ ತಲೆಯಲ್ಲಿಗ್ಗೂ ಕೂಡ ಕತ್ತರಿಸುವದಕ್ಕಾಗಿ, ಅರಿಂ ಜಗೃಹೇ—ಚಕ್ರವನ್ನು ಹಿಡಿದನು, ॥೨೬೧ – ೨೬೨॥

ತದಾ ಶಿವೇನ ಪ್ರಣತೋ ಬಾಣರಕ್ಷಣಕಾಮ್ಯಯಾ ।
ಕೃತ್ವಾ ಸ್ವಭಕ್ತಂ ಬಾಣಂ ತಂ ರರಕ್ಷ ದ್ವಿಭುಜೀಕೃತಂ ।
ಮೋಚಯಿತ್ವಾಽನಿರುದ್ಧಂ ಚ ಯಯೌ ಬಾಣೇನ ಪೂಜಿತಃ ॥೨೬೩॥

ತದಾ – ಆಗ, ಬಾಣರಕ್ಷಣಕಾಮ್ಯಯಾ – ಬಾಣಾಸುರನ ರಕ್ಷಣೆಯ ಇಚ್ಛೆಯಿಂದ, ಶಿವೇನ ಪ್ರಣತಃ ಸನ್ – ರುದ್ರದೇವರಿಂದ ನಮಿಸಲ್ಪಟ್ಟವನಾಗಿ, ಸಃ—ಆಕೃಷ್ಣಪರಮಾತ್ಮನು, ಸ್ವಭಕ್ತಂ ತಂ ಬಾಣಂ – ತನ್ನ ಭಕ್ತನೇ ಆದ ಆ ಬಾಣಾಸುರನನ್ನು, ದ್ವಿಭುಜೀಕೃತಂ ಕೃತ್ವಾ...ಎರಡು ಬಾಹುವಳ್ಳವನನ್ನಾಗಿ ಮಾಡಿ. ರರಕ್ಷ – ರಕ್ಷಿಸಿದನು, ಜೀವಿತನನ್ನಾಗಿ ಉಳಿಸಿದನು, ಚ—ಹಾಗು, ಅನಿರುದ್ಧಂ – ಅನಿರುದ್ಧನನ್ನು, ಮೋಚಯಿತ್ವಾ – ಬಿಡಿಸಿ, ಬಾಣೇನ ಪೂಜಿತಃ ಸನ್ – ಬಾಣಾಸುರನಿಂದ ಪೂಜಿತನಾಗಿ, ಯಯೌ – ಹೊರಟನು. ॥೨೬೩॥

ಏವಮುಗ್ರೇಣಂಗಿರಸಂ ಜ್ವರಂ ಸ್ಕಂದಮುಮಾಪತಿಮ್ ।
ಬಾಣಂ ಚಾಯುತ್ನತೋ ಜಿತ್ವಾ ಪ್ರಾಯಾದ್ದ್ವಾರವತೀಂ ಪುನಃ ॥೨೬೪॥

ಯೇನಾಯುತ್ನೇನ ವಿಜಿತಸ್ಸರ್ವಲೋಕಹರೋಽಹರಃ ।
ಕಂ ಜ್ವರಾದಿಜಯೋ ವಿಷ್ಣೋಸ್ತಸ್ಯಾನಂತಸ್ಯ ಕಥ್ಯತೇ ॥೨೬೫॥

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ॥೨೬೬॥

ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಾಲಿತುಂ ಬಲಮ್ ॥೨೬೭॥

ನ ಚ ಜ್ಞಾನಾದಯೋ ಭಾವಾ ನ ಚಾಸ್ತಿತ್ವಮಪಿ ಕ್ವಚಿತ್ ।
ಅನಂತಶಕ್ತೇಃಕೃಷ್ಣಸ್ಯ ನ ಚಿತ್ರಂ ಶೂಲಿನೋ ಜಯಃ ॥೨೬೮॥

ಏವಂ—ಈ ರೀತಿ, ಅಗ್ನೀನ್—ಅಗ್ನಿಗಳನ್ನು, ಅಂಗಿರಸಂ—ಅಂಗಿರಸ ನಾಮಕವಹ್ನಿಯನ್ನು, ಜ್ವರಂ—ಶೈವ ಜ್ವರವನ್ನು ಸ್ಕಂದಂ—ಸ್ಕಂದನನ್ನು, ಉಮಾಪತಿಂ—ರುದ್ರದೇವರನ್ನು, ಬಾಣಂ ಚ—ಬಾಣಾಸುರನನ್ನೂ ಕೂಡ, ಅಯತ್ನತಃ—ಶ್ರಮವಿಲ್ಲದೆಯೇ, ಜಿತ್ವಾ—ಗೆದ್ದು, ಪುನಃ—ಮತ್ತೆ, ದ್ವಾರವತೀಂ—ದ್ವಾರಕೆಯನ್ನು ಕುರಿತು, ಪ್ರಾಯಾತ್—ಬಂದನು. ಸರ್ವಲೋಕಹರಃ ಹರಃ—ಸರ್ವಲೋಕ ಸಂಹಾರಕನಾದ ರುದ್ರದೇವನೇ. ಯೇನ—ಯಾವನಿಂದ, ಅಯತ್ನೇನ—ಪ್ರಯತ್ನವಿಲ್ಲದೆಯೇ, ವಿಜಿತಃ—ಗೆಲ್ಲಲ್ಪಟ್ಟನೋ, ತಸ್ಯ ಅನಂತಸ್ಯ ವಿಷ್ಣೋಃ—ಅಂಥ ಅಪರಿಮಿತ ಶಕ್ತಿಯುಳ್ಳ, ಶ್ರೀಹರಿಯ ಅವತಾರನಾದ ಶ್ರೀಕೃಷ್ಣನಿಗೆ, ಜ್ವರಾದಿಜಯಃ—ಜ್ವರಮೊದಲಾದವುಗಳ ಮೇಲೆ ಜಯವು; ಕಿಂ ಕಥ್ಯತೇ—ಏನು ಆಶ್ಚರ್ಯಕರವೆಂದು ಹೇಳಲ್ಪಡಬೇಕು; ಈದೃಶಾನಂತಸಂಖ್ಯಾನಾಂ ಶಿವಾನಾಂ—ಇಂಥ ಅನಂತರುದ್ರರಿಗೆ, ಅಪಿ—ಹಾಗು, ಬ್ರಹ್ಮಣಾಂ—ಚತುರ್ಮುಖಿ ಬ್ರಹ್ಮರಿಗೆ, ರಮಾಯಾಃ ಅಪಿ—ಶ್ರೀಲಕ್ಷ್ಮೀದೇವಿಗೂಕೂಡ, ಯದ್ವೀಕ್ಷಾಂವಿನಾ—ಯಾರ ಕೃಪಾದೃಷ್ಟಿ ಇಲ್ಲದೇ, ಚಾಲಿತುಂ ಅಪಿ ಬಲಂ ನ—ಅಲುಗಾಡಲೂಕೂಡ ಬಲವು ಇಲ್ಲವೋ, ಅಷ್ಟು ಮಾತ್ರವಲ್ಲ, ಜ್ಞಾನಾದಯಃ ಭಾವಾಃ - ಜ್ಞಾನವೇ ಮೊದಲಾದ ಗುಣಧರ್ಮಗಳು, ನಚ—ಇಲ್ಲವೋ, ಅಸ್ತಿತ್ವಂ ಅಪಿ—ಇರುವಿಕೆಯೂ ಕೂಡ, ಕ್ವಚಿತ್—ಎಂದೂ, ನಚ—ಇಲ್ಲವೋ, ತಸ್ಯ ಅನಂತ ಶಕ್ತೇಃ ಕೃಷ್ಣಸ್ಯ—ಅಂಥ ಅಪರಿಮಿತ ಶಕ್ತಿಯುಳ್ಳ ಶ್ರೀಕೃಷ್ಣಪರಮಾತ್ಮನಿಗೆ, ಶೂಲಿನಃ ಜಯಃ—ರುದ್ರದೇವರ ಮೇಲಿನ ಜಯವು ನ ಚಿತ್ರಂ—ಆಶ್ಚರ್ಯಕರವಲ್ಲ. ॥೨೬೪॥೨೬೫॥೨೬೬॥೨೬೭॥೨೬೮॥

ಚಿತ್ರಲೇಖಾಸಮೇತೋಷಾನ್ವಿತಪೌತ್ರಸಮನ್ವಿತಃ ।
ಸರಾಮಸ್ಸಸುತೋ ವೀಂದ್ರಮಾರುಹ್ಯ ದ್ವಾರಕಾಂ ಗತಃ ॥೨೬೯॥

ರೇಮೇ ತತ್ರ ಚಿರಂ ಕೃಷ್ಣೋ ನಿತ್ಯಾನಂದೋ ನಿಜೇಚ್ಛಯಾ ॥೨೭೦॥

ಕೃಷ್ಣಃ—ಶ್ರೀಕೃಷ್ಣನು, ಚಿತ್ರಲೇಖಾಸಮೇತೋಷಾನ್ವಿತಪೌತ್ರಸಮನ್ವಿತಃ ಸನ್ — ಚಿತ್ರಲೇಖೆಯಿಂದ ಸಹಿತಳಾದ ಉಷೆಯಿಂದ ಕೂಡಿದ ಮೊಮ್ಮಗ ಅನಿರುದ್ಧನಿಂದ ಕೂಡಿದವನಾಗಿ, ಸರಾಮಃಸಸುತಃಸನ್ — ಬಲರಾಮನಿಂದ, ಮಗನಾದ ಪ್ರದ್ಯುಮ್ನನಿಂದ ಕೂಡಿದವನಾಗಿ, ವೀಂದ್ರಂ ಆರುಹ್ಯ—ಗರುಡನನ್ನೇರಿ, ದ್ವಾರಕಾಂ ಗತಃ—ದ್ವಾರಕೆಗೆ ಹೋದನು. ನಿತ್ಯಾನಂದಃ ಅಪಿ—ನಿತ್ಯದಲ್ಲಿ ಆನಂದಪೂರ್ಣನೇ ಆದ ಶ್ರೀಕೃಷ್ಣನು, ತತ್ರ—ಅಲ್ಲಿ, ನಿಜೇಚ್ಛಯಾ—ತನ್ನ ಇಚ್ಛೆಯಿಂದಲೇ, ಚಿರಂ ರೇಮೇ,—ಬಹುದಿನ ಸಂತೋಷದಿಂದ ಕ್ರೀಡಿಸಿದನು. ॥೨೬೯॥೨೭೦॥

ಏವಂವಿಧಾನ್ಯಗಣಿತಾನಿ ಯದೂತ್ತಮಸ್ಯ ಕರ್ಮಾಣ್ಯಗಣ್ಯಮಹಿಮಸ್ಯ ಮಹೋತ್ಸವಸ್ಯ ।
ನಿತ್ಯಂರಮಾ ಕಮಲಜನ್ಮಗಿರೀಶಶಕ್ರ ಸೂರ್ಯಾದಿಭಿಃ ಪರಿನುತಾನಿ ವಿಮುಕ್ತದಾನಿ ॥೨೭೧॥

ಏವಂ ವಿಧಾನಿ—ಈ ತರಹದ, ಅಗಣಿತಾನಿ—ಅಸಂಖ್ಯವಾದ, ನಿತ್ಯಂ—ಯಾವಾಗಲೂ, ರಮಾಕಮಲ ಜನ್ಮಗಿರೀಶಶಕ್ರಸೂರ್ಯಾದಿಭಿಃ = ಶ್ರೀಲಕ್ಷ್ಮೀದೇವಿ, ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು, ಸೂರ್ಯ

ಮೊದಲಾದ ಎಲ್ಲ ದೇವತೆಗಳಿಂದ, ಪರಿನುತಾನಿ—ಭಕ್ತಿಪೂರ್ವಕವಾಗಿ ಸ್ತುತಿಸಲ್ಪಟ್ಟಂಥ, ಅಗಣ್ಯಮಹಿಮಸ್ಯ ಮಹೋತ್ಸವಸ್ಯ ಯದೂತ್ತಮಸ್ಯ ಕರ್ಮಾಣಿ—ಎಣಿಸಲಸಾಧ್ಯವಾದ ಮಹಿಮೆಗಳುಳ್ಳ, ಉತ್ಕೃಷ್ಟ ಉತ್ಸವ (ಆನಂದ)ವುಳ್ಳ ಯದುಕುಲತಿಲನಾದ ಶ್ರೀಕೃಷ್ಣಪರಮಾತ್ಮನ ಚರಿತಗಳು, ವಿಮುಕ್ತಿದಾನಿ—ಮುಕ್ತಿಯೋಗ್ಯರಿಗೆ ಮೊಕ್ಷದಾಯಕಗಳಾಗಿವೆ. ॥೨೭೧॥

ಭಾವಾನುವಾದ ೨೪೬—೨೭೧

ಇಂಥ ಶ್ರೀಬಲರಾಮದೇವರಿಂದ ಕೂಡಿಕೊಂಡು ಶ್ರೀಕೃಷ್ಣನು ದ್ವಾರಕೆಯಲ್ಲಿರತ್ತಿರಲು ಒಮ್ಮೆ ಬಾಣಾಸುರನ ಮಗಳಾದ ಉಷಾದೇವಿಯು ಸ್ವಪ್ನದಲ್ಲಿ ಅನಿರುದ್ಧನ ಜೊತೆಗೆ ವಿಹರಿಸಿದವಳಾಗಿ ಅವನನ್ನು ತಂದುಕೊಡ ಬೇಕೆಂದು ತನ್ನ ಸಖಿ ಚಿತ್ರಲೇಖೆಗೆ ಹೇಳಿದಳು. ಅವಳು ಒಂದು ವಸ್ತ್ರದಲ್ಲಿ ಎಲ್ಲ ರಾಜಕುಮಾರರ ಚಿತ್ರಗಳನ್ನು ತೆಗೆದು ತೋರಿಸುತ್ತಾ ಇವನೋ? ಇವನೋ? ಎಂದು ಕೇಳಿದಳು. ಅನಿರುದ್ಧನ ಚಿತ್ರ ಬಂದಾಗ ಇವನೇ ನನ್ನ ಸ್ವಪ್ನದಲ್ಲಿ ಬಂದವನು ಎಂದು ಉಷೆಯು ಹೇಳಿದಾಗ ಇವನು ಶ್ರೀಕೃಷ್ಣನ ಪೌತ್ರನೆಂದು ತಿಳಿದು ಚಿತ್ರಲೇಖೆಯು ತನ್ನ ಮಾಯಾ ಶಕ್ತಿಯಿಂದ ಅವನನ್ನು ಉಷಾಳ ಹತ್ತಿರಕ್ಕೆ ರಾತ್ರಿಯಲ್ಲಿ ಕರೆತಂದಳು. ಉಷೆಯು ಅವನನ್ನು ಪಡೆದು ಬಹಳ ಸಂತೋಷಪಟ್ಟು ವಿಹರಿಸುತ್ತಿದ್ದಳು. ಹೀಗೆ ಕನ್ಯಾಗೃಹದಲ್ಲಿ ಇವನು ಇದ್ದದ್ದನ್ನು ತಿಳಿದ ಕನ್ಯಾರಕ್ಷಕರಾದ ಸೇವಕರು ಬಾಣಾಸುರನಿಗೆ ತಿಳಿಸಿದರು, ಅವನು ಅನಿರುದ್ಧನನ್ನು ಬಂಧಿಸಲು ಹೇಳಿದನು. ಆ ಪ್ರಕಾರ ಅವರು ಬಂದಾಗ ಅನಿರುದ್ಧನು ಅವರಲ್ಲಿ ಎಷ್ಟೋ ಜನರನ್ನು ಪರಿಘಾಯುಧದಿಂದ ಸಂಹರಿಸಿ ಉಳಿದವರನ್ನು ಓಡಿಸಿದನು; ಆಗ ಬಾಣಾಸುರನೇ ಸ್ವತ: ಬಂದನು. ಆಗ ಅವನು ಬಹುಕಷ್ಟದಿಂದ ಯುದ್ಧಮಾಡಿ ನಾಗಾಸ್ತ್ರವನ್ನು ಪ್ರಯೋಗಿಸಿ ಅನಿರುದ್ಧನನ್ನು ಬಂಧಿಸಿದನು. ಇದನ್ನು ತಿಳಿದ ಶ್ರೀಕೃಷ್ಣಪರಮಾತ್ಮನು ಬಲರಾಮನಿಂದ, ಪ್ರದ್ಯುಮ್ನನಿಂದ ಸಹಿತನಾಗಿ ಬಂದು ಅಗ್ನಿರೂಪರಾದ ರುದ್ರಗಣಗಳಿಂದ, ಆಂಗೀರಸ ವಹ್ನಿಯಿಂದ ಯುದ್ಧಮಾಡಿ ಓಡಿಸಿ ಹಾಗೆ ಯುದ್ಧಕ್ಕೆ ಬಂದ ಮೇತಾಲ ಮೊದಲಾದ ಭೂತಗಣಗಳನ್ನು ಓಡಿಓಡಾಗ ಶೈವಜ್ವರಾಭಿಮಾನಿಯು ಬಂದನು. ಅವನು ಭಸ್ಮಾಯುಧವನ್ನು ಪ್ರಯೋಗಿಸಿದಾಗ ಅವನಿಂದ ಬಲರಾಮದೇವರು ಜ್ವರವುಳ್ಳವರಾದರು. ಅವರನ್ನು ಶ್ರೀಕೃಷ್ಣನು ಆಲಿಂಗಿಸಿ ಜ್ವರದೂರರನ್ನಾಗಿ ಮಾಡಿದನು. ಆ ಜ್ವರನ ಜೊತೆಗೆ ತಾನು ಸ್ವತ: ಸ್ವಲ್ಪ ಹೊತ್ತು ಯುದ್ಧ (ಕ್ರೀಡೆರೂಪವಾಗಿ) ಮಾಡಿ, ಮುಷ್ಟಿಪ್ರಹಾರದಿಂದ ಹಣ್ಣಾಗಿ ಅವನ ಮೇಲೆ ಜಯ ಸಂಪಾದಿಸಲು ತಾನು ಇನ್ನೊಂದು ಜ್ವರ (ವೈಷ್ಣವ ಜ್ವರ) ವನ್ನು ಸೃಷ್ಟಿಸಿದನು. ಇಂಥ ಕ್ಷುಲ್ಲಕನಾದ ಜ್ವರನನ್ನು ಸರ್ವೋತ್ತಮನಾದ, ಸರ್ವಸಮರ್ಥನಾದ ನಾನು ಗೆಲ್ಲುವದು ಭೂಷಣವಲ್ಲ; ತನ್ನ ಸೇವಕನಿಂದ ಗೆಲ್ಲಿಸಿ ಅವನೇ ಅಷ್ಟು ಸಮರ್ಥನಾಗಿರುವಾಗ ನನ್ನ ಶಕ್ತಿ ಹೇಗಿರಬೇಕು ಎಂದು ಜನರು ಊಹಿಸಿ ತನ್ನ ಉತ್ತಮತ್ವವನ್ನು ತಿಳಿಯಲಿ ಎಂದು ವೈಷ್ಣವಜ್ವರಸೃಷ್ಟಿಮಾಡಿದನು; ಹೊರತಾಗಿ ತಾನು ಶೈವಜ್ವರದಿಂದ ಪೀಡಿತನಾಗಿದ್ದರಿಂದ ಸೃಷ್ಟಿಸಿದನು ಎಂದು ಅಲ್ಲ. ಅವನಿಗೆ ವ್ಯಥೆಯುಂಟೇ? ಆ ವೈಷ್ಣವ ಜ್ವರದಿಂದ ತುಂಬಾ ಪೀಡಿತನಾದ ಆ ಶೈವಜ್ವರವು ಇನ್ನು ತಾನು ಸತ್ತೇ ಹೋಗುವೆನು ಎಂದು ಅಂದುಕೊಂಡು ಶ್ರೀಕೃಷ್ಣನನ್ನು ಮೊರೆಹೊಕ್ಕಿತು. ಆಗ ಶ್ರೀಹರಿಯು ಶೈವಜ್ವರವನ್ನು ಬಿಡಿಸಿದನು. ಎಲ್ಲ ಜ್ವರಗಳೂ ಓಡಿದವು. ಆಗ ಶ್ರೀರುದ್ರದೇವರೇ ಶ್ರೀಕೃಷ್ಣನ ಸಂಗಡ ಯುದ್ಧಕ್ಕೆ ಬಂದರು. ಯುದ್ಧವೂ ಪ್ರಾರಂಭವಾಯಿತು. ಅದರಲ್ಲಿ ಶ್ರೀಹರಿಯು ಸ್ತಂಭನಾಸ್ತ್ರವನ್ನು ಪ್ರಯೋಗಿಸಿದನು. ರುದ್ರದೇವರು ಸ್ತಂಭೀಭೂತರಾಗಿ ಏನು ಮಾಡಲೂ ಅಸಮರ್ಥರಾದರು. ಆಗ ರುದ್ರದೇವರಲ್ಲಿ ದೈತ್ಯಾವೇಶವಿದ್ದದ್ದರಿಂದ ಶ್ರೀಕೃಷ್ಣಭಗವಂತನ ಬಗ್ಗೆ ತಿಳಿಯದವರಾಗಿದ್ದರು. ಆಗ ಬ್ರಹ್ಮದೇವರು ಬಂದು ರುದ್ರದೇವರಿಗೆ ಬೋಧನಮಾಡಿ, ಅವರನ್ನು ಕರೆದುಕೊಂಡು ಭಗವಂತನ ಉದರದೊಳಗೆ ಪ್ರವೇಶ ಮಾಡಿ ಅಲ್ಲಿ ಭಗವಂತನಿಂದ ಸ್ತಂಭೀಭೂತವಾದ ಇನ್ನೊಂದು ರುದ್ರರೂಪವನ್ನು ತೋರಿಸಿ, "ನೀನು ಹಿಂದೆ ಬಿಲ್ವವನದಲ್ಲಿ ಈ ಭಗವಂತನ ಉದ್ದೇಶ್ಯವಾಗಿ ತಪಸ್ಸನ್ನು ಮಾಡಿ ಈ ರುದ್ರ ಪದವಿಯನ್ನು ಪಡೆದಿರುವಿ, ಈ ಅಸುರಭಾವವನ್ನು ಬಿಡು. ಭಗವಂತನ ಬಗ್ಗೆ ಈ ರೀತಿ ವಿರೋಧಮಾಡುವದು ಸರಿಯಲ್ಲ"

ಎಂದು ಉಪದೇಶಿಸಿದಾಗ ಅದರಿಂದ ಮೋಹವಿದೂರರಾದ ರುದ್ರದೇವರು ಭಗವಂತನನ್ನು ಸ್ತುತಿಸಿ ಕ್ಷಮೆಯಿಕೋರಿದರು. ಆಗ ಬಾಣಾಸುರನೇ ಯುದ್ಧಕ್ಕೆ ಬಂದನು. ಅವನ ಜೊತೆಗೆ ಯುದ್ಧವಾಡಿ ಅವನ ಸುವಿರ ಕೈಗಳಲ್ಲಿ ಎರಡನ್ನು ಮಾತ್ರ ಉಳಿಸಿ ಉಳಿದೆಲ್ಲವನ್ನು ಕತ್ತರಿಸಿ ಅವನಲ್ಲಿಯು ಅಸುರಾವೇಶವನ್ನು ಕಳೆದು ತನ್ನ ಭಕ್ತನನ್ನಾಗಿ ಮಾಡಿ ರಕ್ಷಿಸಿದನು. ಆಗ ಬಾಣನು ಅನಿರುದ್ಧನನ್ನು ಬಿಟ್ಟುಕೊಟ್ಟು ಉಷಾಳನ್ನು ಸಮರ್ಪಿಸಿದನು. ರಮಾಬಹ್ಮಾದಿ ದೇವತೆಗಳೂ ಯಾವ ಭಗವಂತನ ಕೃಪಾಕಟಾಕ್ಷವಿಲ್ಲದೆ ಏನೂ ಮಾಡಲಾರರೋ, ರಮಾ ಹಾಗು ಅಸಂಖ್ಯ ಬ್ರಹ್ಮ ರುದ್ರಾದಿಗಳು ಎಲ್ಲರಿಗೂ ಯಾವ ಭಗವಂತನ ಕೃಪೆಯಿಲ್ಲದೇ ಅಸ್ತಿತ್ವವೂ ಕೂಡ ಇಲ್ಲವೋ; ಜ್ಞಾನಾದಿಗುಣಗಳು ಅಳತೂ ಇನ್ನೂದೂರವೋ ಅಂಥ ಅಪರಿಮಿತ ಶಕ್ತಿಯುಳ್ಳ ಈ ಭಗವಂತನು ರುದ್ರ, ಸ್ಕಂದ ಇವರನ್ನು ಗೆದ್ದದ್ದೇ ಆಶ್ಚರ್ಯವಲ್ಲ; ಹಾಗಿರುವಾಗ ಜ್ವರಾದಿಗಳ ಮೇಲೆ ಜಯಸಂಪಾದಿಸಿದ್ದು ಏನು ದೊಡ್ಡವಿಷಯವು ? ಹೀಗೆ ಎಲ್ಲರನ್ನು ಗೆದ್ದು ಚಿತ್ರಲೇಖಾಸಹಿತಳಾದ ಉಷಾಳಿಂದ ಹಾಗು ಅನಿರುದ್ಧನಿಂದ ಕೂಡಿಕೊಂಡು ಅಣ್ಣ ಬಲರಾಮ ಮಂಗ ಪ್ರದ್ಯುಮ್ನ ಇವರಿಂದ ಸಹಿತನಾಗಿ ಗರುಡನನ್ನೇರಿ ದ್ವಾರಕೆಗೆ ಬಂದು ನಿತ್ಯಾನಂದಪೂರ್ಣನಾದ ಶ್ರೀಕೃಷ್ಣನು ಆನಂದ ವ್ಯಕ್ತಿಯನ್ನು ಮಾಡುತ್ತಾ ವಾಸಿಸಿದನು. ಈ ರೀತಿ ಭಗವಚ್ಚರಿತಗಳು ಕೇಳಿದವರಿಗೆ ಮೋಕ್ಷ ದಾಯಕಗಳೇ ಆಗಿವೆ.

ಏವಂ ವಸತ್ಯಮಿತ ಪೌರುಷವೀರ್ಯಸಾರೇ ನಾರಾಯಣೇ ಸ್ವಪುರಿ ಶಕ್ರಧನಂಜಯೋಕ್ತ: ।
ಸಂಪ್ರಾಪ್ಯ ಲೋಮಶಮುನಿಸ್ಸಕಲಾನಿ ತೀರ್ಥಾನ್ಯಾಪ್ತುಂ ಸಪಾಂಡುತನಯೈಶ್ಚ ಸಹಾಯ ಆಸೀತ್ ॥೨೭೨॥

ಏವಂ — ಈ ರೀತಿ, ಅಮಿತಪೌರುಷವೀರ್ಯಸಾರೇ ನಾರಾಯಣೇ — ಅಪರಿಮಿತವಾದ ಪರಾಕ್ರಮವೀರ್ಯಗಳಿಂದ ಕೂಡಿದ ಸರ್ವೋತ್ತಮನಾದ ಶ್ರೀಕೃಷ್ಣಪರಮಾತ್ಮನು ಸ್ವಪುರಿ — ತನ್ನ ದ್ವಾರಕೆಯಲ್ಲಿ, ವಸತಿ ಸತಿ — ವಾಸಮಾಡುತ್ತಿರಲು, ಶಕ್ರಧನಂಜಯೋಕ್ತ: — ಸ್ವರ್ಗದಲ್ಲಿ ಇಂದ್ರಾರ್ಜುನರಿಂದ ಹೇಳಲ್ಪಟ್ಟ, ಸ: ಲೋಮಶಮುನಿ: — ~~ಲೋಮಶ ಋಷಿಗಳು,~~ ಸಂಪ್ರಾಪ್ಯ — (ಪಾಂಡವರ ಹತ್ತಿರಕ್ಕೆ) ಬಂದು, ಸಕಲಾನಿ ತೀರ್ಥಾನಿ ಆಪ್ತುಂ — ಎಲ್ಲ ತೀರ್ಥಗಳನ್ನು ಸಂಚರಿಸಲು, ಪಾಂಡುತನಯೈಶ್ಚ — ಪಾಂಡವರಿಗೆ, ಸಹಾಯ: ಆಸೀತ್ - ಸಹಾಯಕರಾಗಿದ್ದರು. ॥೨೭೨॥

ಪೃಥ್ವೀಂ ಪ್ರದಕ್ಷಿಣತಯಿತ್ವ ಸಮಸ್ತತೀರ್ಥಸ್ನಾನಂ ಯಥಾಕ್ರಮತ ಏವ ವಿಧಾಯ ಪಾರ್ಥಾ: ।
ಸಂಪೂಜ್ಯ ತೇಷು ನಿಖಿಲೇಷು ಹರಿಂ ಸ್ವಭಕ್ತ್ಯಾ ಕೃಷ್ಣೇ ಸಮರ್ಪಯಿತುಮಾಪುರಥ ಪ್ರಭಾಸಮ್ ।
ಸಂಭಾವನಾಯ ಸಕಲೈರ್ಯದುಭಿಸ್ಸಮೇತಸ್ತೇಷಾಂ ಚ ರಾಮಸಹಿತೋ ಹರಿರಾಜಗಾಮ ॥೨೭೩॥

ಪಾರ್ಥೈಃ ಸಂಪೂಜಿತಸ್ತತ್ರ ಕೃಷ್ಣೋ ಯದುಗಣೈಃ ಸಹ ।
ಪಾರ್ಥಾನ್ ಸಂಪೂಜಯಾಮಾಸುರ್ಮೃಷ್ಟಯಶಾಜ್ಞಯಾ ಹರೇಃ ॥೨೭೪॥

ಪಾರ್ಥಾಃ — ಪಾಂಡವರು, ಪೃಥ್ವೀಂ — ಇಡೀ ಭಾರತ ಭೂಮಿಯನ್ನು, ಪ್ರದಕ್ಷಿಣತ: ಏತ್ಯ — ಪ್ರದಕ್ಷಿಣೆ ಮಾಡಿ (ಪ್ರದಕ್ಷಿಣೆ ಆಕಾರವಾಗಿ ಸಂಚರಿಸಿ), ಯಥಾಕ್ರಮತಃ ಏವ — ಶಾಸ್ತ್ರದಲ್ಲಿ ಹೇಳಿದ ಕ್ರಮಾನುಸಾರವಾಗಿಯೇ, ಸಮಸ್ತತೀರ್ಥಸ್ನಾನಂ ವಿಧಾಯ — ಎಲ್ಲ ತೀರ್ಥಸ್ನಾನವನ್ನು ಮಾಡಿ, ನಿಖಿಲೇಷು ತೇಷು — ಆ ಎಲ್ಲ ತೀರ್ಥಕ್ಷೇತ್ರಗಳಲ್ಲಿ, ಹರಿಂ — (ಸನ್ನಿಹಿತನಾದ) ಶ್ರೀಹರಿಯನ್ನು, ಸ್ವಭಕ್ತ್ಯಾ — ತಮ್ಮ ಭಕ್ತಿಯಿಂದ, ಸಂಪೂಜ್ಯ — ಪೂಜಿಸಿ, ಅಥ — ನಂತರ, ಕೃಷ್ಣೇ ಸಮರ್ಪಯಿತುಂ — ಶ್ರೀಕೃಷ್ಣನಿಗೆ ಸಮರ್ಪಿಸಲು, ಪ್ರಭಾಸಂ ಆಪುಃ — ಪ್ರಭಾಸಕ್ಷೇತ್ರಕ್ಕೆ ಬಂದರು, ತೇಷಾಂ ಸಂಭಾವನಾಯ — ಅಲ್ಲಿಗೆ ಬಂದಿರುವ ಪಾಂಡವರ ಸತ್ಕಾರ ಮಾಡುವದಕ್ಕಾಗಿ, ಸಕಲೈ: ಯಾದವೈಃ ಸಮೇತ: — ಎಲ್ಲ ಯಾದವರಿಂದ ಕೂಡಿದ, ರಾಮಸಹಿತ: — ಬಲರಾಮದೇವರಿಂದ ಕೂಡಿದ,

ಹರಿಃ – ಶ್ರೀಕೃಷ್ಣನಂ, ಆಜಗಾಮಂ – ಪ್ರಭಾಸಕ್ಕೆ ಬಂದನಂ. ತತ್ರ – ಅಲ್ಲಿ, ಕೃಷ್ಣಃ – ಶ್ರೀಕೃಷ್ಣಪರವಾತ್ಮನಂ, ಪಾರ್ಥೈಃ – ಪಾಂಡವರಿಂದ. ಸಂಪೂಜಿತಃ – ಪೂಜಿಸಲ್ಪಟ್ಟನಂ, ವೃಷ್ಣಯಃ ಚ – ವೃಷ್ಣಿಕುಲದ ಯಾದವರೂ ಕೂಡ, ಯದುಗಣೈಃ ಸಹ – ಉಳಿದ ಯಾದವರಿಂದ ಕೂಡಿಕೊಂಡು, ಹರೇಃ ಆಜ್ಞಯಾ = ಶ್ರೀ ಕೃಷ್ಣನ ಆಜ್ಞಾ ಪ್ರಕಾರ, ಪಾರ್ಥಾನ್ ಸಂಪೂಜಯಾಮಾಸುಃ – ಪಾಂಡವರನ್ನು ಪೂಜಿಸಿದರಂ. ॥೨೭೩–೨೭೪॥

ತತ, ಭೀಮಂ ತಪೋವೇಷಂ ದೃಷ್ಟ್ವಾSತಿಸ್ನೇಹಕಾರಣಾತ್ ।
ದುರ್ಯೋಧನಂ ನಿಂದಯತಿ ರಾಮೇ ಸಾತ್ಯಕಿರಬ್ರವೀತ್ ॥೨೭೫॥

ಸರ್ವೇ ವಯಂ ನಿಹತ್ಯಾದ್ಯ ಸಕರ್ಣಾನ್ ಧೃತರಾಷ್ಟ್ರಜಾನ್ ।
ಅಭಿಮನ್ಯುಂ ಸ್ಥಾಪಯಾನೋ ರಾಜ್ಯೇ ಯಾವತ್ತ್ರಯೋದಶಂ ॥೨೭೬॥

ಸಂವತ್ಸರಂ ಸಮಾಪ್ಯೈವ ಪುರಂ ಯಾಸ್ಯಂತಿ ಪಾಂಡವಾಃ ॥೨೭೭॥

ತತೋ ಯುಧಿಷ್ಠಿರೋ ರಾಜಾ ರಾಜ್ಯಂ ಶಾಸತು ಪೂರ್ವವತ್ ॥೨೭೮॥

ತತ್ರ – ಆ ಸಂದರ್ಭದಲ್ಲಿ, ರಾಮೇ – ಬಲರಾಮದೇವರಂ ತಪೋವೇಷಂ – ತಪೋವೇಷದಲ್ಲಿರುವ (ಜಟಾ ವಲ್ಕಲ ಧಾರಣ ಮಾಡಿದ್ದರಿಂದ), ಭೀಮಂ – ಭೀಮಸೇನದೇವರನ್ನು, ದೃಷ್ಟ್ವಾ – ನೋಡಿ, ಅತಿಸ್ನೇಹಕಾರಣಾತ್ – ಶ್ರೀಭೀಮರಲ್ಲಿ ಅತ್ಯಂತ ಸ್ನೇಹದ ಕಾರಣದಿಂದ, ದುರ್ಯೋಧನಂ – ದುರ್ಯೋಧನನನ್ನು, ನಿಂದಯಂತಿ ಸತಿ – ಬೈಯುತ್ತಿರಲಂ, ಸಾತ್ಯಕಿಃ – ಸಾತ್ಯಕಿಯಃ, ವಯಂ ಸರ್ವೇ ನಾವೆಲ್ಲರೂ, ಅದ್ಯ – ಇಂದಂ, ಸಕರ್ಣಾನ್ – ಕರ್ಣ ಸಹಿತರಾದ, ಧೃತರಾಷ್ಟ್ರಜಾನ್ - ಧೃತರಾಷ್ಟ್ರಪುತ್ರರಾದ ಕೌರವರನ್ನು, ನಿಹತ್ಯ - ಕೊಂದು, ರಾಜ್ಯೇ – ರಾಜ್ಯ ಸಿಂಹಾಸನದಲ್ಲಿ, ಅಭಿಮನ್ಯುಂ – ಅಭಿಮನ್ಯುವಿನನ್ನು, ಯಾವತ್ ತ್ರಯೋದಶಂ – ೧೩ ವರ್ಷ ಪರ್ಯಂತವಾಗಿ ಸ್ಥಾಪಯಾವಃ – ಇಡೋಣ, ಪಾಂಡವಾಃ – ಪಾಂಡವರು, ತ್ರಯೋದಶಂ ಸಂವತ್ಸರಂ – ಹದಿಮೂರನೆಯ ವರ್ಷವನ್ನು, (ಹನ್ನೆರಡುವರ್ಷ ವನವಾಸದ ನಂತರ ಒಂದು ವರ್ಷದ ಅಜ್ಞಾತವಾಸವನ್ನು), ಸಮಾಪ್ಯ ಏವ – ಸಮಾಪ್ತಿ ಮಾಡಿ ಕೊಂಡು, ಪುರಂ – ಪಟ್ಟಣವನ್ನು, ಯಾಸ್ಯಂತಿ – ಹೋದಾವರಂ, ತತಃ – ಅನಂತರ, ಯುಧಿಷ್ಠಿರಃ ರಾಜಾ – ಧರ್ಮರಾಜನಂ, ಪೂರ್ವವತ್ – ಈ ಮೊದಲಿನಂತೆಯೇ, ರಾಜ್ಯಂ ಶಾಸತು – ರಾಜ್ಯವನ್ನು ಆಳಲಿ, ಇತಿ – ಎಂದು, ಅಬ್ರವೀತ್ – ಹೇಳಿದನಂ. ॥೨೭೫–೨೭೬–೨೭೭–೨೭೮॥

ಏವಂ ವದತ್ಯೇವ ಶಿನಿಪ್ರವೀರೇ ಜನಾರ್ದನಃ ಪಾರ್ಥಮುಖಾನ್ಯುದೀಕ್ಷ್ಯ ।
ಉವಾಚ ಶೈನೇಯ ನ ಪಾಂಡುಪುತ್ರಾಃ ಪರೇಣ ಸಂಸಾಧಿತರಾಜ್ಯಕಾಮಾ : ॥೨೭೯॥

ಸ್ವಬಾಹುವೀರ್ಯೇಣ ನಿಹತ್ಯ ಶತ್ರೂನಾಪ್ನುವಂತಿ ರಾಜ್ಯಂ ತ ಇತೀರಿತೇSಮುನಾ ।
ತಥೇತಿ ಪಾರ್ಥಾ ಅವದಂಸ್ತತಸ್ತೇ ಕೃಷ್ಣಂ ಪುರಸ್ಕೃತ್ಯ ಯಯುರ್ದಶಾರ್ಹಾಃ ॥೨೮೦॥

ಏವಂ – ಈ ರೀತಿ, ಶಿನಿಪ್ರವೀರೇ ವದತಿ ಸತಿ ಏವ – ಸಾತ್ಯಕಿಯಂ ಹೇಳುತ್ತಿರುವಂತೆಯೇ, ಜನಾರ್ದನಃ – ಶ್ರೀಕೃಷ್ಣಪರವಾತ್ಮನು, ಪಾರ್ಥವದನಾನಿ – ಪಾಂಡವರ ಮುಖಗಳನ್ನು ಉದೀಕ್ಷ್ಯ – ನೋಡಿ, ಶೈನೇಯಂ – ಸಾತ್ಯಕಿಯೇ, ಪಾಂಡುಪುತ್ರಾಃ – ಪಾಂಡವರಂ, ಪರೇಣ (ಪರಕೀಯರಿಂದ) ಇನ್ನೊಬ್ಬರಿಂದ: ಸಂಸಾಧಿತ ರಾಜ್ಯಕಾಮಾಃ

ನ—ಸಂಪಾದಿಸಲ್ಪಟ್ಟ ರಾಜ್ಯವನ್ನಾಳುವ ಇಚ್ಛೆಯುಳ್ಳವರಲ್ಲ. ತೇ—ಅವರು. ಸ್ವಬಾಹುವೀರ್ಯೇಣ—ತಮ್ಮ ಬಾಹು ಪರಾಕ್ರಮದಿಂದ, ಶತ್ರೂನ್—ವೈರಿಗಳನ್ನು, ನಿಹತ್ಯ – ಕೊಂದು, ರಾಜ್ಯಂ ಆಪ್ಸ್ಯಂತಿ—ರಾಜ್ಯವನ್ನು ಹೊಂದುವರು, ಇತಿ ಉವಾಚ – ಎಂದು ಹೇಳಿದನು. ಏವಂ ತಾ—ಆ ಶ್ರೀಕೃಷ್ಣನಿಂದ, ಇತಿ—ಹೀಗೆ, ಈರಿತೇ ಸತಿ—ಹೇಳಲ್ಪಡಲು, ತ್ತಿರಲು, ಪಾರ್ಥಾಃ – ಪಾಂಡವರು, ತಥಾ ಇತಿ—ಶ್ರೀಕೃಷ್ಣಪರಮಾತ್ಮನು ಹೇಳಿದಂತೆಯೇ ನಮ್ಮ ಇಷ್ಟವು, ಹಾಗೆಯೆ ಆಗುವದು ಎಂದು, ಏವದನ್ – ಹೇಳಿದರು. ತತಃ—ಅನಂತರ, ತೇ ದಶಾರ್ಹಾಃ—ಆ ಯಾದವರು, ಕೃಷ್ಣಂ ಪುರಸ್ಕೃತ್ಯ ಯಾಯುಃ:—ಶ್ರೀಕೃಷ್ಣಪರಮಾತ್ಮನನ್ನು ಮುಂದೆಮಾಡಿಕೊಂಡು ಹೋದರು. ॥೨೭೯॥೨೮೦॥

ಭಾವಾನುವಾದ ೨೭೨—೨೮೦

ಹೀಗೆ ಶ್ರೀಕೃಷ್ಣನು ಇರುವಾಗ ಅರ್ಜುನ ಹಾಗು ಇಂದ್ರದೇವರಿಂದ ಪಾಂಡವರ ಸಹಾಯಕ್ಕಾಗಿ ಕಳಿಸಲ್ಪಟ್ಟ ಲೋಮಶಮಹರ್ಷಿಗಳು ಪಾಂಡವರ ಹತ್ತಿರ ಬಂದು ಅವರ ತೀರ್ಥಸಂಚಾರ ಕಾರ್ಯದಲ್ಲಿ ಸಹಾಯಕರಾಗಿದ್ದರು. ಭಾರತ ಭೂಮಿಯನ್ನು ಪ್ರದಕ್ಷಿಣೆ ಮಾಡುತ್ತಾ ಎಲ್ಲ ತೀರ್ಥಗಳಲ್ಲಿ ವಿಧ್ಯುಕ್ತವಾಗಿ ಎಲ್ಲ ಕರ್ಮಗಳನ್ನು ಮಾಡಿ ಎಲ್ಲ ತೀರ್ಥಗಳಲ್ಲಿ ಸನ್ನಿಹಿತನಾದ ಭಗವಂತನನ್ನು ಅರ್ಚಿಸಿ, ತಾವು ಇಲ್ಲಿಯವರೆಗೆ ಸಂಪಾದಿಸಿದ, ಮಾಡಿದ ಎಲ್ಲ ಪುಣ್ಯಕರ್ಮಗಳನ್ನು ದೇವರಿಗೆ ಸಮರ್ಪಿಸುವದಕ್ಕಾಗಿ ಪ್ರಭಾಸಕ್ಷೇತ್ರಕ್ಕೆ ಬಂದರು. ಆಗ ಅವರ ಆದರ ಸತ್ಕಾರ ಮಾಡುವದಕ್ಕಾಗಿ ಶ್ರೀಕೃಷ್ಣಪರಮಾತ್ಮನು ಎಲ್ಲ ಯಾದವರು ಶ್ರೀಬಲರಾಮದೇವರು ಇವರಿಂದ ಸಹಿತನಾಗಿ ಬಂದನು. ಶ್ರೀಕೃಷ್ಣನನ್ನು ಪಾಂಡವರು ಪೂಜಿಸಿದರು ಪಾಂಡವರ ಪೂಜೆಯನ್ನು ಯಾದವರು ಮಾಡಿದರು. ಪಾಂಡವರ ಮಧ್ಯದಲ್ಲಿ ತಪಸ್ಸುಮಾಡುತ್ತಿರುವ ಮುನಿಯಂತೆ ಜಟೆವಲ್ಕಲಗಳನ್ನು ಧರಿಸಿದ ಶ್ರೀಭೀಮಸೇನರನ್ನು ನೋಡಿದ ಬಲರಾಮದೇವರು ಅವರ ಮೇಲಿನ ಸ್ನೇಹದಿಂದ ಯಾವ ಭೀಮ ರಾಜಪ್ರಾಸಾದಗಳಲ್ಲಿ ಇರಬೇಕಿತ್ತೋ ಅಂಥ ಈ ಭೀಮನು ಈಗ ಈ ತಪಸ್ವಿ ಮುನಿವೇಷದಲ್ಲಿರ ಮಂತಾಯಿತಲ್ಲಾ! ಇದಕ್ಕೆಲ್ಲ ಮೂಲಕಾರಣ ದುರ್ಯೋಧನ; ಎಂದು ತಿಳಿದು ಅವನನ್ನು ಚೆನ್ನಾಗಿ ಬಯ್ಯುತ್ತಿದ್ದಾಗ ಅದನ್ನು ಕೇಳಿದ ಸಾತ್ಯಕಿಯು 'ನಾವೆಲ್ಲ ಹೋಗಿ ಇಂದು ಕರ್ಣಸಮೇತವಾಗಿ ಕೌರವರೆಲ್ಲರನ್ನು ಸಂಹರಿಸಿ ರಾಜ್ಯವನ್ನು ಸಂಪಾದಿಸಿ ಅಲ್ಲಿ ಅಭಿಮನ್ಯುವನ್ನು ಕೂಡಿಸಿ, "ಪಾಂಡವರು ತಮ್ಮ ವಚನದಂತೆ 13 ವರ್ಷ (12 ವರ್ಷವನವಾಸ 1 ವರ್ಷ ಅಜ್ಞಾತವಾಸ) ಮುಗಿಸಿ ಬಂದ ಮೇಲೆ ಧರ್ಮರಾಜನು ರಾಜ್ಯವನ್ನಾಳಲಿ" ಎಂದು ಹೇಳಿದನು. ಆಗ ಈ ಮಾತನ್ನು ಕೇಳಿದ ಶ್ರೀಕೃಷ್ಣಪರಮಾತ್ಮನು ಪಾಂಡವರ ಮುಂಖವನ್ನು ನೋಡುತ್ತಾ ಸಾತ್ಯಕಿಯನ್ನು ಕುರಿತು ನೋಡು ಸಾತ್ಯಕಿ, ಪಾಂಡವರು ತಾವು ಸ್ವಂತ ಬಾಹುಬಲದಿಂದ ರಾಜ್ಯ ಸಾಧನೆಮಾಡುವವರು ಹೊರತಾಗಿ, ಇನ್ನೊಬ್ಬರ ಸಂಪಾದಿಸಿಕೊಟ್ಟ ರಾಜ್ಯವನ್ನು ಆಳುವ ಮನಸ್ಸಿನವರಲ್ಲ' ಎಂದು ಹೇಳಿದನು. ಆಗ ಪಾಂಡವರು ಹೌದು, ನಾವು ಶ್ರೀಕೃಷ್ಣಪರಮಾತ್ಮನು ಹೇಳಿದಂತೆ ನಾವು ನಮ್ಮ ರಾಜ್ಯವನ್ನು ಸ್ವಂತ ಸಂಪಾದಿಸುವರು ಎಂದು ಹೇಳಿದರು. ಯಾದವರು ಶ್ರೀಕೃಷ್ಣಪರಮಾತ್ಮನನ್ನು ಅನುಸರಿಸಿ ದ್ವಾರಕೆಗೆ ಹೋದರು.

ಕ್ರಮೇಣ ಪಾರ್ಥಾ ಅಪಿ ಶೈಶಿರಂ ಗಿರಿಂ ಸಮಾಸದಂಸ್ತತ್ರ ಕೃಷ್ಣಾಂ ಸುದುರ್ಗೇ।
ವಿಷಜ್ಜಂತೀಂವೀಕ್ಷ್ಯ ತೈಃ ಸಂಸ್ಮೃತೋಽಥ ಜೈಡಿಂಬ ಆಯಾತ್ ಸಹಿತೋನಿಶಾಚರೈಃ॥೨೮೧॥

ಪಾರ್ಥಾಃ:ಅಪಿ – ಪಾಂಡವರಾದರೂ ಕೂಡ, ಕ್ರಮೇಣ – ಕ್ರಮದಿಂದ, ಶೈಶಿರಂ ಗಿರಿಂ—ಹಿಮವತ್ಪರ್ವತಕ್ಕೆ, ಸಮಾಸದನ್ - ಬಂದರು, ತತ್ರ+ಅಲ್ಲಿ, ಸುದುರ್ಗೇ—ಅತಿ ಕಠಿಣವಾದ ಸ್ಥಳದಲ್ಲಿ, ವಿಷಜ್ಜಂತೀಂ ನಡೆಯಲಾರದೆ ಕಷ್ಟಪಡುತಿರುವ, ಕೃಷ್ಣಾಂ—ದ್ರೌಪದೀದೇವಿಯನ್ನು, ವೀಕ್ಷ್ಯ – ನೋಡಿ, ಅಥ – ನಂತರ ತೈಃ ಸಂಸ್ಮೃತಃ – ಅವರಿಂದ

ಸ್ಮರಿಸಲ್ಪಟ್ಟ, ಹೈಡಿಂಬಃ—ಹಿಡಿಂಬಾ ಪುತ್ರನಾದ ಘಟೋತ್ಕಚನು, ನಿಶಾಚರೈಃ ಸಹಿತಃ ಸನ್ – ರಾಕ್ಷಸರಿಂದ ಸಹಿತನಾಗಿ, ಆಯಾತ್ – ಬಂದನು. ॥೨೮೧॥

ಉವಾಹ ಕೃಷ್ಣಾಂ ಸ ತು ತಸ್ಯ ಭೃತ್ಯಾ ಊಹುಃ ಪಾರ್ಥಾಂಸ್ತೇ ಬದರ್ಯಾಶ್ರಮಂ ಚ।
ಪ್ರಾಪ್ಯಾತ್ರ ನಾರಾಯಣಪೂಜಯಾ ಕೃತಸ್ವಕೀಯಕಾರ್ಯಾ ಯಯುರುತ್ತರಾಂ ದಿಶಮ್ ॥೨೮೨॥

ಸಃ ತು – ಆ ಘಟೋತ್ಕಚನಾದರೂ, ಕೃಷ್ಣಾಂ – ದ್ರೌಪದೀದೇವಿಯನ್ನು, ಉವಾಹ – ಹೊತ್ತು ಕೊಂಡನು, ತಸ್ಯ ಭೃತ್ಯಾಃ—ಅವನ ಸೇವಕರಾದ ರಾಕ್ಷಸರು. ಪಾರ್ಥಾನ್ ಊಹುಃ—ಪಾಂಡವರನ್ನು ಹೊತ್ತರು, ತೇ—(ಅವರು) ಪಾಂಡವರು, ಬದರ್ಯಾಶ್ರಮಂ – ಬದರೀಕ್ಷೇತ್ರವನ್ನು, ಪ್ರಾಪ್ಯ—ಹೊಂದಿ, ಅತ್ರ—ಇಲ್ಲಿ, ನಾರಾಯಣಪೂಜಯಾ – ನಾರಾಯಣಪೂಜಾರೂಪವಾಗಿ, ಕೃತಸ್ವಕೀಯಕಾರ್ಯಾಃ ಸಂತಃ – ತಮ್ಮ ಕರ್ತವ್ಯಕರ್ಮಗಳನ್ನು (ಶ್ರಾದ್ಧಾದಿಗಳನ್ನು) ಮಾಡಿದವರಾಗಿ, ಉತ್ತರಾಂ ದಿಶಂ—ಉತ್ತರ ದಿಕ್ಕಿಗೆ, ಯಯುಃ – ಹೋದರು. ॥೨೮೨॥

ಅತೀತ್ಯ ಶರ್ವಶ್ವಶುರಂ ಗಿರಿಂ ತೇ ಸುವರ್ಣಕೂಟಂ ನಿಷಧಂ ಗಿರಿಂ ಚ ।
ಮೇರೋಃ ಪ್ರಾಚ್ಯಾಂ ಗಂಧಮಾದೇ ಗಿರೌ ಚ ಪ್ರಾಪುರ್ಬದರ್ಯಾಶ್ರಮಮುತ್ತಮಂ ಭುವಿ ॥೨೮೩॥

ತೇ—ಆ ಪಾಂಡವರು, ಶರ್ವಶ್ವಶುರಂ ಗಿರಿಂ—ಶ್ರೀರುದ್ರದೇವರ ಮಾವನಾದ ಪರ್ವತರಾಜನಿಂದ ಅಭಿಮಾನ್ಯವಾನವಾದ ಹಿಮಾಲಯಪರ್ವತವನ್ನು, ಅತೀತ್ಯ—ದಾಟಿ, ಉತ್ತರಾಂ ದಿಶಂ ಗತ್ವಾ – ಉತ್ತರ ದಿಕ್ಕಿಗೆ ಹೋಗಿ, ಸುವರ್ಣಕೂಟಂ ಗಿರಿಂ ನಿಷಧಂ ಗಿರಿಂ ಚ—ಹೇಮಕೂಟಪರ್ವತವನ್ನು ಮತ್ತು ನಿಷಧ ಪರ್ವತವನ್ನೂ ಕೂಡ, ಅತೀತ್ಯ—ದಾಟಿ, ಮೇರೋಃ ಪ್ರಾಚ್ಯಾಂ - ಮೇರು ಪರ್ವತದ ಪೂರ್ವದಲ್ಲಿ, ಗಂಧಮಾದೇ ಗಿರೌ (ಸ್ಥಿತಂ) – ಗಂಧಮಾದನಪರ್ವತದಲ್ಲಿರುವ, ಭುವಿ ಉತ್ತಮಂ – ಭೂಮಿಯಲ್ಲಿ ಅತಿಶ್ರೇಷ್ಠವಾದ, ಬದರ್ಯಾಶ್ರಮಮ್ – ಬದರಿಕಾಶ್ರಮವನ್ನು, ಪ್ರಾಪುಃ – ಹೊಂದಿದರು. ॥೨೮೩॥

ತಸ್ಮಿನ್ಮುನೀಂದ್ರೈರಭಿಪೂಜ್ಯಮಾನಾ ನಾರಾಯಣಂ ಪೂಜಯಂತಸ್ತಥೈವ ।
ಚಕ್ರುಸ್ತಪೋ ಜ್ಞಾನಸಮಾಧಿಯುಕ್ತಂ ಸತ್ತತ್ವವಿದ್ಯಾಂ ಶ್ರುತಿಪಾದಯಂತಃ ॥೨೮೪॥

ತಸ್ಮಿನ್ – ಆ ಬದರಿಕಾಶ್ರಮದಲ್ಲಿ, ಮುನೀಂದ್ರೈಃ ಅಭಿಪೂಜ್ಯಮಾನಾಃ ಸಂತಃ—ಋಷಿಶ್ರೇಷ್ಠರಿಂದ, ಪೂಜಿಸಲ್ಪಟ್ಟವರಾಗಿ, ತಥಾ ಏವ – ಹಾಗೆಯೇ, ನಾರಾಯಣಂ ಪೂಜಯಂತಃ ಸಂತಃ – ನಾರಾಯಣದೇವರನ್ನು ಪೂಜಿಸುವವರಾಗಿಯೇ, ಸತ್ತತ್ವವಿದ್ಯಾಂ ಪ್ರತಿಪಾದಯಂತಃ ಸಂತಃ—ಶ್ರೇಷ್ಠ ತತ್ವವಿದ್ಯೆಯನ್ನು ಋಷಿಗಳಿಗೆ ಉಪದೇಶಿಸುವವರಾಗಿ, ಜ್ಞಾನಸಮಾಧಿಯುಕ್ತಂ—ಜ್ಞಾನಕಾರ್ಯ ಧ್ಯಾನ ಕಾರ್ಯಗಳಿಂದ ಕೂಡಿದ, ತಪಃ - ತಪಸ್ಸನ್ನು, ಚಕ್ರುಃ—ಮಾಡಿದರು. ॥೨೮೪॥

ಏವಂ ಬದರ್ಯಾಂ ವಿಹರತ್ಸು ತೇಷು ಕ್ವಚಿದ್ರಹಃ ಕೃಷ್ಣಯಾ ವಾಯುಸೂನೌ ।
ಸ್ಥಿತೇ ಗರುತ್ಮಾನುರಗಂ ಜಹಾರ ಮಹಾಹ್ರದಾದ್ವಾಸುದೇವಾಸನಾಗ್ರ್ಯಃ ॥೨೮೫॥

ಏವಂ – ಹೀಗೆ, ತೇಷು—ಪಾಂಡವರು, ಬದರ್ಯಾಂ – ಬದರಿಯಲ್ಲಿ, ವಿಹರತ್ಸು ಸತ್ಸು—ವಿಹರಿಸುತ್ತಿರಲು, ಕ್ವಚಿತ್ – ಒಮ್ಮೆ, ವಾಯುಸೂನೌ—ವಾಯುಪುತ್ರರಾದ ಶ್ರೀಭೀಮರು, ರಹಃ—ಏಕಾಂತದಲ್ಲಿ,

ಕೃಷ್ಣಯಾ ಸಹ ಸ್ಥಿತೇ ಸತಿ- ದ್ರೌಪದೀ ದೇವಿಯಿಂದ ಕೂಡಿಕೊಂಡು ಇರುತ್ತಿರಲು, ವಾಸುದೇವಸನಾಗ್ರ್ಯಃ- ಶ್ರೀ(ಕೃಷ್ಣ) ಹರಿಯು ವಾಹನನಾದ ಹಾಗು ಪಕ್ಷಿ ಶ್ರೇಷ್ಠನಾದ, ಗರುತ್ಮಾನ್ – ಗರುಡದೇವನು, ಮಹಾಹ್ರದಾತ್ – ದೊಡ್ಡದಾದ ಆಳವಾದ ಒಂದು ಸರೋವರದಿಂದ, ಉರಗಂ – ಸರ್ಪವನ್ನು, ಜಹಾರ – (ಅಪಹರಿಸಿಕೊಂಡು) ಸೆಳೆದುಕೊಂಡು ಹೋದನು. ॥೨೮೫॥

ತತ್ಪಕ್ಷವಾತೇನ ವಿಚಾಲಿತೇ ತು ತಸ್ಮಿನ್ಗಿರೌ ಕಮಲಂ ಹೈಮವಾಗ್ರ್ಯಮ್ ।
ಪಪಾತ ಕೃಷ್ಣಾಭೀಮಯೋಸ್ಸನ್ನಿಧಾನೇ ಉದ್ಯದ್ಭಾನೋರ್ಮಂಡಲಾಭಂ ಸುಗಂಧಂ ॥೨೮೬॥

ತತ್ಪಕ್ಷವಾತೇನ—ಆ ಗರುಡನ ರೆಕ್ಕೆಯ ಗಾಳಿಯಿಂದ, ತಸ್ಮಿನ್ ಗಿರೌ—ಆ ಪರ್ವತವು, ವಿಚಾಲಿತೇ-ಸತಿ – ಅಲುಗಾಡಿಸಲ್ಪಡುತ್ತಿರಲು, ಕೃಷ್ಣಾಭೀಮಯೋಃ ಸನ್ನಿಧಾನೇ—ದ್ರೌಪದೀ ಭೀಮರ ಸನಿಹದಲ್ಲಿ, ಸುಗಂಧಂ – ಸುಗಂಧಭರಿತವಾದ. ಉದ್ಯದ್ಭಾನೋಃ ಮಂಡಲಾಭಂ – ಉದೇ ಉದಿತವಾದ ಸೂರ್ಯನ ಮಂಡಲಕ್ಕೆ ಸದೃಶವಾದ, ಹೈಮಂ – ಭಂಗಾರ ವರ್ಣದಿಂದ ಕೂಡಿದ, ಅಗ್ರ್ಯಂ—ಶ್ರೇಷ್ಠವಾದ, ಕಮಲಂ – ಕಮಲ ಪುಷ್ಪವು, ಪಪಾತ—ಬಿದ್ದಿತು, ॥೨೮೬॥

ದೃಷ್ಟ್ವಾತಿಗಂಧಂ ವರಹೇಮಕಂಜಂಕುತೂಹಲಾತ್ ದ್ರೌಪದೀ ಭೀಮಸೇನಮ್ ।
ಬಹೂನ್ಯಯಾಚತ್ತಾದೃಶಾನ್ಯನುಭಾವಮಸ್ಯಾವಿಷಹ್ಯಂ ಜಾನತೀ ದೇವದೈತ್ಯೈಃ ॥೨೮೭॥

ದೇವದೈತ್ಯೈಃಅವಿಷ್ಯಹ್ಯಂ—ದೇವದೈತ್ಯರಿಂದಲೂ ಸಹಿಸಲಶಕ್ಯವಾದ, ಅಸ್ಯ ಅನುಭಾವಂ— ಈ ಭೀಮ ಸೇನದೇವರ ಮಹಾಸಾಮರ್ಥ್ಯವನ್ನು, ಜಾನತೀ – ತಿಳಿದ, ದ್ರೌಪದೀ—ದ್ರೌಪದೀದೇವಿಯು, ಅತಿಗಂಧಂ ವರ ಹೇಮಕಂಜಂ ಅತಿಸುಗಂಧಯುಕ್ತವಾದ ಶ್ರೇಷ್ಠವಾದ ಹೇಮವರ್ಣದ ಕಮಲವನ್ನು, ದೃಷ್ಟ್ವ – ನೋಡಿ, ಕುತೂಹಲಾತ್ – ಆಶ್ಚರ್ಯದಿಂದ, ತಾದೃಶಾನಿ ಬಹೂನಿ – ಅಂತಹ ಬಹುಕಮಲಗಳನ್ನು, ಅಯಾಚತ್ – ಬೇಡಿದಳು. ॥೨೮೭॥

ತಯಾऽರ್ಥಿತಸ್ಸಗದಸ್ತ್ವಂಗಮೇನಂ ಗಿರಿಂ ವೇಗಾದರುಹದ್ವಾಯುಸೂನುಃ ।
ಪ್ರಶಸ್ಯಮಾನಸ್ಸುರಸಿದ್ಧಸಂಘೈರ್ಮೃತ್ಸ್ನನ್ದೈತ್ಯಾನ್ಸಿಂಹಶಾರ್ದೂಲರೂಪಾನ್ ॥೨೮೮॥

ಆಸೇದಿವಾಂಸ್ತತ್ರ ಹನೂಮದಾಖ್ಯಂ ನಿಜಂ ರೂಪಂ ಪ್ರೋದ್ಯದಾದಿತ್ಯಭಾಸಮ್ ।
ಜಾನನ್ನಪ್ಯೇನಂ ಸ್ವೀಯರೂಪಂ ಸಭೀಮಶ್ಚಿಕ್ರೀಡ ಏತೇನ ಯಥಾ ಪರೇಣ ॥೨೮೯॥

ತಯಾ – ಆ ದ್ರೌಪದೀದೇವಿಯಿಂದ, ಅರ್ಥಿತಃ – ಪ್ರಾರ್ಥಿಸಲ್ಪಟ್ಟ, ವಾಯುಸೂನುಃ – ವಾಯುಪುತ್ರರಾದ, ಶ್ರೀಭೀಮಸೇನದೇವರು, ಸಗದಃ ಸನ್ – ಗದಾಯುಧದಿಂದ ಸಹಿತರಾಗಿ, ತುಂಗಂ ಏನಂ ಗಿರಿಂ— ಎತ್ತರವಾದ ಈ ಪರ್ವತವನ್ನು, ವೇಗಾತ್ – ವೇಗದಿಂದ, ಆರುಹ್ಯ – ಏರಿ, ಸುರಸಿದ್ಧಸಂಘೈಃ – ದೇವತೆಗಳು ಋಷಿಗಳು ಇವರ ಸಮೂಹಗಳಿಂದ, ಪ್ರಶಸ್ಯಮಾನಃ ಸನ್—ಸ್ತುತಿಸಲ್ಪಟ್ಟವರಾಗಿ, ಸಿಂಹಶಾರ್ದೂಲರೂಪಾನ್ – ಸಿಂಹ ಹುಲಿಗಳ ರೂಪದಲ್ಲಿರುವ, ದೈತ್ಯಾನ್—ದೈತ್ಯರನ್ನು, ಮೃತ್ಸ್ನನ್ ಸನ್ – ಮರ್ದಿಸು (ಸಂಹರಿಸು)ವವರಾಗಿ, ಆಸೇದಿವಾನ್– ಹೊರಟವರಾಗಿ, ತತ್ರ—ಅಲ್ಲಿ, ಪ್ರೋದ್ಯದಾದಿತ್ಯ ಭಾಸಮ್—ಉದಿಸುತಕ್ಕ ಸೂರ್ಯನಂತೆ ಕಾಂತಿಯುಳ್ಳ, ಹನೂಮದಾಖ್ಯಂ ನಿಜಂ ರೂಪಂ—ಹನುಮಂತನೆಂಬ ಹೆಸರುಳ್ಳ ತನ್ನ ರೂಪವನ್ನೇ, ಆಸೇದಿವಾನ್— ಹೊಂದಿದರು, ಸಃ ಭೀಮಃ - ಆ ಭೀಮಸೇನದೇವರು, ಏನಂ ಈ ಹನುಮಂತನನ್ನು, ಸ್ವೀಯರೂಪಂ— ತನ್ನ ರೂಪವನ್ನಾಗಿ, ಜಾನನ್ ಅಪಿ—ತಿಳಿದವರಾದರೂ ಕೂಡ, ಪರೇಣ ಯಥಾ – ಇನ್ನೊಬ್ಬರ ಜೊತೆಗೆ ಹೇಗೆ ಮಾತುಕತೆ ವ್ಯವಹಾರ

ಮಾಡಬೇಕೋ ಹಾಗೆ, ಏತೇನ—ತನ್ನ ರೂಪವೇ ಆದ ಹನುಮಂತನಿಂದ ಕೂಡಿಕೊಂಡು, ಚಿಕ್ಕೀಡೇ—ವ್ಯವಹರಿಸಿದರು. ॥೨೮೮←೨೮೯॥

ಅವತಾರಿಕೆ : ಆ ರೀತಿ ತದ್ಮ ರೂಪದ ಜೊತೆಗೇನೆ ವ್ಯವಹರಿಸಲು ಕಾರಣವನ್ನು ಹೇಳುತ್ತಾರೆ—

ಧರ್ಮೋದೇವಾನಾಂ ಪರಮೋ ಮಾನುಷತ್ವೇ ಸ್ವೀಯೇ ರೂಪೇಽಪ್ಯನ್ಯವದೇವ ವೃತ್ತಿ: ।
ಅನಾದಾನಂ ದಿವ್ಯಶಕ್ತೇರ್ವಿಶೇಷಾನ್ನರಸ್ವಭಾವೇ ಸರ್ವದಾ ಚೈವ ವೃತ್ತಿ: ।
ತಸ್ಮಾದ್ಭೀಮೋ ಹನುಮಾಂಶ್ಚೈಕ ಏವಜ್ಯಾಯ:ಕನೀಯೋ ವೃತ್ತಿಮತ್ರಾಭಿಪೇದೇ ॥೨೯೦॥

ದೇವಾನಾಂ ಮಾನುಷತ್ವೇ ಸತಿ—ದೇವತೆಗಳಿಗೆ ಮಾನುಷರೂಪ ಬಂದಿರುವಾಗ, ಸ್ವೀಯೇ ರೂಪೇ ಅಪಿ—ತನ್ನ ರೂಪದ ಬಗ್ಗೆ ಕೂಡ, ಅನ್ಯವತ್ ಏವ—ಬೇರೆಯವರಂತೆಯೇ ವೃತ್ತಿ:—ನಡತೆಯು, ದೇವಾನಾಂ ಪರಮ: ಧರ್ಮ:—ದೇವತೆಗಳಿಗೆ ಮುಂಖ್ಯಧರ್ಮವು, ನರಸ್ವಭಾವೇ ಸತಿ—ಮನುಷ್ಯನಾಗಿ ಅವತರಿಸಿದಾಗ, ವಿಶೇಷಾತ್... ಮೂಲರೂಪದಿಂದ, ದಿವ್ಯಶಕ್ತೇ:—ತಮ್ಮ ದಿವ್ಯಶಕ್ತಿಯನ್ನು ಜ್ಞಾನವನ್ನು, ಅನಾದಾನಂ—ಅವತಾರ ರೂಪದಲ್ಲಿ, ಸ್ವೀಕರಿಸದಿರುವದು, ಸರ್ವದಾ—ಎಲ್ಲ ಕಾಲದಲ್ಲಿಯೂ, ವೃತ್ತಿ:—ಧರ್ಮವು ತಸ್ಮಾತ್—ಆ ರೀತಿ ಧರ್ಮಗಳಿದ್ದ ದ್ದರಿಂದ, ಭೀಮ: ಹನೂಮಾನ್ ಚ ಏಕ ಏವ ಸನ್ ಅಪಿ—ಭೀಮರು ಹನುಮಂತರೂ ಅಭಿನ್ನರೇ ಆಗಿದ್ದರೂ ಕೂಡ, ಅತ್ರ—ಈ ಸಂದರ್ಭದಲ್ಲಿ, ಜ್ಯಾಯ: ಕನೀಯೋ ವೃತ್ತಿಂ—ಹನುಮಂತನು ಜ್ಯೇಷ್ಠನು, ಭೀಮನು ಕನಿಷ್ಠನು, ಎಂಬ ನಡತೆಯನ್ನು, ಅಭಿಪೇದೇ—ಹೊಂದಿದರು, ॥೨೯೦॥

ಭಾವಾನುವಾದ ೨೯೦—೨೯೦

ಪಾಂಡವರು ವನಗಳಲ್ಲಿ ಸಂಚರಿಸುತ್ತಾ ಕ್ರಮವಾಗಿ ಹಿಮಾಲಯ ಪರ್ವತಕ್ಕೆ ಬಂದರು. ಅಲ್ಲಿ ದುರ್ಗಮ ಪ್ರದೇಶದಲ್ಲಿ ನಡೆಯಲು ಕಷ್ಟಪಡುತ್ತಿರುವ ದ್ರೌಪದಿದೇವಿಯನ್ನು ನೋಡಿ ಘಟೋತ್ಕಚನನ್ನು ನೆನಿಸಿದರು. ಆಗ ಘಟೋತ್ಕಚನು ತನ್ನ ಭೃತ್ಯರಾದ ರಾಕ್ಷಸರಿಂದ ಸಹಿತನಾಗಿ ಬಂದನು. ಘಟೋತ್ಕಚನು ದ್ರೌಪದೀದೇವಿಯನ್ನು ಉಳಿದವರು ಪಾಂಡವರನ್ನು ಎತ್ತಿಕೊಂಡರು. ಹೀಗೆ ಮುನ್ನಡೆದು ಶ್ರೀ ಬದರೀಕ್ಷೇತ್ರಕ್ಕೆ ಬಂದು ತಮ್ಮ ಕರ್ತವ್ಯಕರ್ಮಗಳನ್ನು ಶ್ರೀಭಗವಂತನ ಪೂಜಾರೂಪವಾಗಿ ಮಾಡಿ ಅಲ್ಲಿಂದ ಮುಂದೆ ಉತ್ತರ ದಿಕ್ಕಿಗೆ ನಡೆದರು. ಹಿಮಾಲಯವನ್ನು ದಾಟಿ ಉತ್ತರದಲ್ಲಿ ಹೇಮಕೂಟ ಪರ್ವತ ಹಾಗು ನಿಷಧ ಪರ್ವತವನ್ನು ದಾಟಿ, ಮೇರು ಪರ್ವತದ ಪೂರ್ವದಿಕ್ಕಿನಲ್ಲಿರುವ ಗಂಧಮಾದನ ಪರ್ವತದಲ್ಲಿರುವ, ಭೂವಿಯಲ್ಲಿ ಅತಿ ಶ್ರೇಷ್ಠ ಭೂಮಿಯಾದ ಬದರಿಕಾಶ್ರಮಕ್ಕೆ ಬಂದರು. ಅಲ್ಲಿರುವ ಮುನೀಂದ್ರರಿಂದ ಪೂಜಿತರಾಗಿ ಶ್ರೀನಾರಾಯಣದೇವರನ್ನು ಪೂಜಿಸುತ್ತಾ ಜ್ಞಾನಧ್ಯಾನಕಾರ್ಯಗಳಿಂದ ಕೂಡಿದ ತಪಸ್ಸನ್ನು ಮಾಡುತ್ತಿದ್ದರು. ಋಷಿಗಳಿಗೆ ತತ್ತ್ವೋಪದೇಶವನ್ನು ಮಾಡುತ್ತಿದ್ದರು. ಹೀಗಿರುವಾಗ ಒಮ್ಮೆ ಭೀಮ ಸೇನದೇವರು ದ್ರೌಪದೀದೇವಿಯ ಜೊತೆಗೆ ಏಕಾಂತದಲ್ಲಿರುವ ಸಮಯದಲ್ಲಿ ಶ್ರೀವಿಷ್ಣುವಾಹನನಾದ ಗರುಡನು ಆ ಪರ್ವತದಲ್ಲಿರುವ ದೊಡ್ಡ ಸರೋವರದಿಂದ ಹಾವನ್ನು ತೆಗೆದುಕೊಳ್ಳುವದಕ್ಕಾಗಿ ಪರ್ವತದ ಸಮೀಪಕ್ಕೆ ಬಂದಾಗ, ಅವನ ರೆಕ್ಕೆಗಳ ಗಾಳಿಯಿಂದ ಅಲುಗಾಡಿದ ಪರ್ವತದಿಂದ ಭಂಗಾರವರ್ಣದ ಸುಗಂಧಭರಿತವಾದ, ಸುಂದರವಾದ ಕಮಲ ಪುಷ್ಪವೊಂದು ಅವರ ಸಮೀಪದಲ್ಲಿ ಬಿದ್ದಿತು. ಅದನ್ನು ಕಂಡ ದ್ರೌಪದೀದೇವಿಯು 'ಅದನ್ನು ನಾನು ಅಪೇಕ್ಷಿಸಿದಾಗ ಅದನ್ನು ತರುವ ಸಮಯದಲ್ಲಿ ದುಷ್ಟರ ಸಂಹಾರಾದಿ ಕಾರ್ಯಗಳಾಗುವವು; ಅವುಗಳನ್ನು ಮಾಡಲು ಶ್ರೀಭೀಮರೇ ಸಮರ್ಥರು' ಎಂದು ತಿಳಿದವಳಾಗಿ ಅಂಥ ಇನ್ನೂ ಅನೇಕ ಪುಷ್ಪಗಳು ಬೇಕೆಂದು ಅಪೇಕ್ಷಿಸಿದಳು. ಆಗ ಶ್ರೀಭೀಮಸೇನ

ದೇವರು ಅವುಗಳನ್ನು ತರಲೆಂದು ಗದಾಯುಧವನ್ನು ಹಿಡಿದುಕೊಂಡು ಪರ್ವತವನ್ನು ಏರುತ್ತ ಹೊರಟರು. ಆಗ ದೇವಾದಿಗಳೆಲ್ಲರೂ ಸಂತೋಷದಿಂದ ಸ್ತೋತ್ರ ಮಾಡುತ್ತಿದ್ದರು. ದೈತ್ಯರು ಇವರಿಗೆ ವಿಘ್ನ ಮಾಡಲೆಂದು ಹುಲಿ, ಸಿಂಹ ಇತ್ಯಾದಿ ರೂಪದಲ್ಲಿ ಬಂದಾಗ ಅವರೆಲ್ಲರನ್ನು ಸಂಹರಿಸಿ ಮುನ್ನಡೆದರು. ದಾರಿಯಲ್ಲಿ ಶ್ರೀಹನುಮಂತದೇವರು ಸಿಕ್ಕರು. ಇವರು ತನ್ನವೇ ಪೂರ್ವರೂಪ ಎಂದು ತಿಳಿದಿದ್ದರೂಕೂಡ ಶ್ರೀ ಭೀಮರು ದೇವತೆಗಳು ಮನುಷ್ಯಾದಿರೂಪರಾಗಿ ಅವತರಿಸಿದಾಗ ಆಯಾ ಯೋನಿ, ಯುಗಗಳಿಗೆ ಅನುಸಾರವಾಗಿ ನಡೆಯಬೇಕಾದುದು ಧರ್ಮವಾದ್ದರಿಂದ ಆ ಧರ್ಮವನ್ನು ಆಚರಿಸುವದಕ್ಕಾಗಿ ದ್ವಾಪರಯುಗದವರಾದ ತಾವು ತ್ರೇತಾಯುಗಸಂಭೂತನಾದ ಆ ಹನುಮಂತರಿಗಿಂತ ಕಡಿಮೆ ಒಲಾದಿಗಳುಳ್ಳವರೆಂದು ತೋರಿಸಿಕೊಳ್ಳುವದಕ್ಕಾಗಿ ಮತ್ತೊಬ್ಬರ ಜೊತೆಗೆ ವ್ಯವಹರಿಸಿದಂತೆ ವ್ಯವಹರಿಸಿದರು.

ಸರ್ವೇಗುಣಾ ಆವೃತಾ ಮಾನುಷತ್ವೇ ಯುಗಾನುರೂಪಾನ್ಮೂಲರೂಪಾನುಸುರಾತ್॥೨೯೧॥

ಸರ್ವೇಗುಣಾಃ—ಸಾವಶಾನ್ಯವಾಗಿ ದೇವತೆಗಳ ಎಲ್ಲ ಗುಣಗಳು, ಮಾನುಷತ್ವೇ—ಮನುಷ್ಯ ಅವತಾರದಲ್ಲಿ, ಯುಗಾನುರೂಪಾತ್ — ಯುಗಗಳಿಗನುಸಾರವಾಗಿ, ಮೂಲರೂಪಾನುಸಾರಾತ್ — ಮೂಲರೂಪಾನುಸಾರವಾಗಿ, ಆವೃತಾಃ – ಆವರಿಸಲ್ಪಟ್ಟಿರುತ್ತವೆ. ॥೨೯೧॥

ಕ್ರಮಾತ್ಸುರಾಣಾಂ ಭಾಗತೋ ವ್ಯಕ್ತರೂಪಾ ಆದಾನತೋವ್ಯಕ್ತಿಮಾಯಾನ್ತ್ಯರೂಣಾವಮ್।
ನೈವಾವ್ಯಕ್ತಿಃ ಕಾಚಿದಸ್ತೀಹ ವಿಷ್ಣೋಃಪ್ರಾದುರ್ಭಾವೇಽಪ್ಯತಿಸುವ್ಯಕ್ತಶಕ್ತೇಃ ॥೨೯೨॥

(ಗುಣಾಃ–ಗುಣಗಳು) ಉರೂಣಾಂ ಸುರಾಣಾಂ ಕ್ರಮಾತ್–ಉತ್ತಮ ದೇವತೆಗಳಿಗೆ ತಾರತಮ್ಯಕ್ಕನುಸಾರವಾಗಿ, ಭಾಗತಃ–ಭಾಗಭಾಗವಾಗಿ, ಅವ್ಯಕ್ತರೂಪಾಃ ಅಪಿ–ಅವ್ಯಕ್ತವಾದವುಗಳಾದರೂ ಕೂಡ, ಆದಾನತಃ–ಸ್ವೀಕಾರದಿಂದ, ವ್ಯಕ್ತಿಂ ಆಯಾಂತಿ – ಪ್ರಕಟತೆಯನ್ನು ಹೊಂದುವವು, ಪ್ರಾದುರ್ಭಾವೇ ಅಪಿ – ಅವತಾರರೂಪದಲ್ಲಿಯೂ ಕೂಡ, ಅತಿಸುವ್ಯಕ್ತಶಕ್ತೇಃ—ಅತಿವ್ಯಕ್ತವಾದ ಶಕ್ತಿಯುಳ್ಳ, ವಿಷ್ಣೋಃ – ಶ್ರೀಹರಿಗೆ, ಕಾಚಿತ್ ಅವ್ಯಕ್ತಿಃ—ಯಾವದೇ ತರಹದ ಅಪ್ರಕಟತೆಯು ನೈವ ಅಸ್ತಿ – ಇರುವದಿಲ್ಲ, ॥೨೯೨॥

ಇಚ್ಛಾವ್ಯಕ್ತಿಃಪ್ರಾಯಶೋ ಮಾರುತಸ್ಯ ತದನ್ಯೇಷಾಂವ್ಯಕ್ತತಾ ಕಾರಣೇನ।
ತಸ್ಮಾದ್ಭೀಮೋಧರ್ಮವೃಧ್ಯರ್ಥಮೇವಸ್ವೀಯೇರೂಪೇಽಪ್ಯನ್ಯವದ್ವ್ಯತ್ತಿಮೇವ ॥೨೯೩॥

ಪ್ರದರ್ಶಯಾಮಾಸ ತಥಾಽಸುರಾಣಾಂ ಮೋಹಾಯೈವಾಶಕ್ತವಚ್ಛಕ್ತರೂಪಃ।
ತದ್ರೂಪವೃದ್ಧಿಂ ಭೀಮಸೇನೋಽಥ ದೃಷ್ಟ್ವಾ ಶ್ರುತ್ವಾ ಹನೂಮನ್ಮುಖತಃಕಥಾಶ್ಚ ॥೨೯೪॥

ರಾಮಸ್ಯ ತಚ್ಚಾತುರಾತ್ಮ್ಯಂ ಚ ದಿವ್ಯಂ ಜಾತುರ್ಯುಗಂ ಧರ್ಮಮುಖ್ಯಗ್ರಹಮೇವ।
ಧ್ವಜಾದ್ಭೀಭತ್ಸೋರ್ಗರ್ಜನೇನೈವ ಶತ್ರುಪರಾಭವೇ ತೇನ ದತ್ತೇಽರ್ಜುನಸ್ಯ ॥೨೯೫॥

ಯಯೌ ಪ್ರಣಮ್ಯೈನಮಾಶ್ವೇವ ಭೀಮಃ ಸ್ವಾಗಂಧಿಕಂ ವನಮುತ್ಯಗ್ರರೂಪಮ್।
ನರಾಗಮ್ಯಾಂ ನಳಿನೀಮೇತ್ಯ ತತ್ರ ದೃಷ್ಟ್ವಾಪದಾನ್ಯದ್ಭುತಾಕಾರವಂತಿ ॥೨೯೬॥

ಹೈಮಾನಿ ದಿವ್ಯಾನ್ಯತಿಗಂಧವಂತಿ ಸವಾಸದದ್ವಾರ್ಯಮಾಣೋ ನರಾಶೈ : ॥೨೯೭॥

ಮಾರುತಸ್ಯ–ವಾಯು ಪ್ರಾಣದೇವರಿಗೆ, ಪ್ರಾಯಶಃ–ಬಹುಶಃ, ಇಚ್ಛಾವ್ಯಕ್ತಿಃ – ಅವರ ಇಚ್ಛೆಗನುಸಾರವಾಗಿ ಮೂಲ ರೂಪದ ಜ್ಞಾನಬಲಾದಿಗಳ ಪ್ರಕಟತೆಯು ಆಗುವದು, ತದನ್ಯೇಷಾಂ—ಅವರಿಂದ ಬೇರೆಯಾದ ಶೇಷಾದಿಗಳಿಗೆ, ಕಾರಣೇನ – ಏನಾದರೂ ವಿಶೇಷ ಸಂದರ್ಭರೂಪ ಕಾರಣದಿಂದ,

ವ್ಯಕ್ತತಾ – ಮೂಲರೂಪದ ಜ್ಞಾನಾದಿಗುಣಗಳ ಪ್ರಕಟತೆಯಂತೆ ಆಗುವದು, ತಸ್ಮಾತ್– ಗುಣಗಳನ್ನು ಪ್ರಕಟಮಾಡಿಕೊಳ್ಳದಿರುವಿಕೆಯಂತೆ ಧರ್ಮವಾದ್ದರಿಂದ, ಭೀಮಃ – ಭೀಮಸೇನದೇವರು, ಧರ್ಮವೃಧ್ಯರ್ಥಂ ಏವ— ಧರ್ಮವೃದ್ಧಿಗಾಗಿಯೇ, ಅಸುರಾಣಾಂ – ಅಸುರರ ಮೋಹಾಯ ಏವ—ಮೋಹನಕ್ಕಾಗಿಯೇ, ಸ್ವೀಯೇ ರೂಪೇ ಅಪಿ—ತನ್ನದೇ ರೂಪದಲ್ಲಿಯೂ ಕೂಡ, ಅನ್ಯವತ್ ವೃತ್ತಿಂ ಏವ—ಬೇರೆಯವರ ಜೊತೆಗೆ ನಡೆಯುವಂತೆ ವರ್ತನೆಯನ್ನೇ, ಪ್ರದರ್ಶಯಾಮಾಸ – ತೋರಿಸಿದರು, ತಥಾ—ಹಾಗೂ, ಶಕ್ತರೂಪಃ ಅಪಿ – ಸಮರ್ಥರೂಪರಾದರೂ ಕೂಡ, ಅಶಕ್ತವತ್ – ಅಸಮರ್ಥರಂತೆ, ಪ್ರದರ್ಶಯಾಮಾಸ – ತೋರಿಸಿದರು, ಅಥ – ನಂತರ, ಭೀಮಸೇನಃ – ಭೀಮಸೇನದೇವರು, ತದ್ರೂಪವೃದ್ಧಿಂ – ಆ ಹನೂಮಂದ್ರೂಪದ ಶರೀರ ವೃದ್ಧಿಯನ್ನು ದೃಷ್ಟ್ವಾ – ನೋಡಿ, ಹನೂಮನ್ಮುಖತಃ – ಹನುಮಂತದೇವರ ಮುಖದಿಂದ, ರಾಮಸ್ಯ ಕಥಾಃ ಚ – ರಾಮದೇವರ ಕಥಾಗಳನ್ನೂ ಕೂಡ, ಶ್ರುತ್ವಾ—ಕೇಳಿ, ರಾಮಸ್ಯ—ರಾಮದೇವರ. ತತ್–ವೇದ ಪ್ರಸಿದ್ಧವಾದ, ದಿವ್ಯಂ – ಲೋಕವಿಲಕ್ಷಣವಾದ, ಜಾತಂ ರಾತ್ಮಕಂ – ವಾಸುದೇವಾದಿ ಸ್ವರೂಪತ್ವವನ್ನು. (ಶ್ರೀರಾಮನು ಸಾಕ್ಷಾತ್ ವಾಸುದೇವನು, ಲಕ್ಷ್ಮಣ ಭರತ ಶತ್ರುಘ್ನರು ಕ್ರಮವಾಗಿ ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧ ಭಗವದ್ರೂಪಗಳಿಂದ ಆವಿಷ್ಕರಿಸಿದರು ಎಂಬುದನ್ನು), ಚ – ಮತ್ತು, ಚಾತುರ್ಯುಗಂ ನಾಲ್ಕು ಯುಗಗಳಲ್ಲಿಯೂ, ಅಗ್ರ್ಯಂ ಧರ್ಮಂ—ಶ್ರೇಷ್ಠಧರ್ಮವನ್ನೂ ಕೂಡ, ಶ್ರುತ್ವಾ – ಕೇಳಿ, ಬೀಭತ್ಸೋಃ ಧ್ವಜಾತ್—ಅರ್ಜುನನ ಹನೂಮಂದಂಕ ಧ್ವಜದಿಂದಲೇ, ಗರ್ಜನಾದೇವ – ಗರ್ಜನಮಾಡುವದರಿಂದಲೇ, ಅರ್ಜುನಸ್ಯ – ಅರ್ಜುನನಿಗೆ, ಶತ್ರುಪರಾಭವೇ – ಶತ್ರುಗಳ ಸೋಲಲು, ತೇನ— ಆ ಹನುಮಂತದೇವರಿಂದ, ದತ್ತೇ ಸತಿ – ಕೊಡಲ್ಪಡುತ್ತಿರಲು, ಭೀಮಃ– ಭೀಮಸೇನದೇವರು, ಏನಂ – ಈ ಹನುಮಂತನನ್ನು, ಪ್ರಣಮ್ಯ— ನಮಸ್ಕರಿಸಿ, ಅಶು ಏವ—ಕೂಡಲೇ ಅಗ್ರ್ಯರೂಪಂ ಅತಿಸುಂದರವಾದ, ಸೌಗಂಧಿಕಂ ವನಂ ಅಪಿ - ಸೌಗಂಧಿಕ ವನಕ್ಕೆ ಕೂಡ, ಯಯೌ – ಹೋದರು, ತತ್ರ – ಆ ವನದಲ್ಲಿ, ನರಾಗಮ್ಯಾಂ—ಮನುಷ್ಯರಿಂದ ಹೊಂದಲು ಅಶಕ್ಯವಾದ, ನಳಿನೀಂ—ಸರೋವರವನ್ನು, ಏತ್ಯ—ಹೊಂದಿ, ತತ್ರ – ಅಲ್ಲಿ, ಅದ್ಭುತಾಕಾರವಂತಿ – ಆದ್ಭುತ ಆಕಾರವುಳ್ಳ, ದಿವ್ಯಾನಿ ಅತಿಗಂಧವಂತಿ ಹೈಮಾನಿ ಪದ್ಮಾನಿ – ಲೋಕವಿಲಕ್ಷಣವಾದ ಅತಿ ಸುಗಂಧವುಳ್ಳ, ಹೇಮವರ್ಣದಿಂದ ಕೂಡಿದ ಕಮಲಗಳನ್ನು, ನರಾಶೈಃ ಮಾರ್ತ್ಯಮಾನಃ ಅಪಿ—ನರಭಕ್ಷಕ ರಾಕ್ಷಸರಿಂದ ತಡೆಯಲ್ಪಟ್ಟರೂ ಕೂಡ, ಸಮಾಸದನ್ – ಹೊಂದಿದರು ॥೨೯೩-೨೯೪-೨೯೫-೨೯೬-೨೯೭॥

ತೇ ಭೀಮಮಾತ್ತಾಯುಧಮುಗ್ರರೂಪಂ ಮಹಾಬಲಂ ರೂಪನವಾವತಾರವಮ್ ।
ನ್ಯವಾರಯನ್ ಕ್ರೋಧವಶಾಸ್ಸಮೇತಾಶ್ಶತಂ ಸಹಸ್ರಾಣ್ಯಯುತಾನಿ ಸಂಖ್ಯೇ ।
ವರಾಚ್ಛಿವಸ್ಯೈವ ಪರೈರಜೇಯಾಶ್ಶಸ್ತ್ರಾಸ್ತ್ರವೃಷ್ಟಿಂಮುಮುಚುಸ್ಸುಭೀಮಾಮ್ ॥೨೯೮॥

ಭೀಮೋಽಖಿಲಜ್ಞೋ ತಪಸಾಂ ನಿಧಾನೇಬಲೋದಧೌ ಶೈವಶಾಸ್ತ್ರಂವದಂತಃ ।
ತಾನ್ಪೃಷ್ಣಿವೈರೇವ ಶಾಸ್ತ್ರೈಸ್ಸಭೀಮೋ ವಿಜಿತ್ಯಪೂರ್ವಂವಾಜ್ಞಯೇ ಸಂಗರೇತು ॥೨೯೯॥

ಶಸ್ತ್ರಾಸ್ತ್ರ ವರ್ಷಸ್ಯ ಕುರ್ವನ್ಪ್ರತೀಪಂ ಜಘ್ನೇಽಖಿಲಾನ್ಗದಯಾ ತೇಷು ವೀರಾನ್॥೩೦೦॥

ತೇ—ಆ ವನದಲ್ಲಿರುವ, ಅಯುತಾನಿ ಶತಂ ಸಹಸ್ರಾಣಿ – 'ಒಹಂ ಸಹಸ್ರ' ಸಂಖ್ಯಾಕರಾದ, ಶಿವಸ್ಯ ವರಾತ್ – ರುದ್ರದೇವರ ವರದಿಂದ, ಪರೈಃಅಜೇಯಾಃ—ಬೇರೆಯವರಿಂದ ಅಜೇಯರಾದ, ಕ್ರೋಧವಶಾಃ—ಕ್ರೋಧವಶ ಎಂಬ ಗಣದಲ್ಲಿ ಹುಟ್ಟಿದಂಥ ಆ ದೈತ್ಯರು, ಸಮೇತಾಃ ಸಂತಃ—ಒಟ್ಟಿಗೆ ಸೇರಿದವರಾಗಿ, ಶೈವಶಾಸ್ತ್ರಂ ವದಂತಃ ಸಂತಃ— ಶೈವಶಾಸ್ತ್ರವನ್ನು ಹೇಳುವವರಾಗಿ, ಆತತ್ತಾಯುಧಂ– ದಾಯುಧವನ್ನು ಎತ್ತಿಕೊಂಡು ಬಂದಿರುವ, ಉಗ್ರರೂಪಂ – ಭಯಂಕರ

ರೂಪವುಳ್ಳ, ಮಹಾಬಲಂ –ಮಹಾಬಲಿಷ್ಠರಾದ, ರೂಪನವಾವತಾರಂ—ಅಸದೃಶರೂಪವುಳ್ಳ ಭೀಮರನ್ನು, ಸಂಖ್ಯೇ–ಯಂದ್ದದಲ್ಲಿ, ನ್ಯವಾರಯನ್ –ತಡೆದರು. ಸಂಭೀಮಾಂ ಶಸ್ತ್ರಾಸ್ತ್ರವೃಷ್ಟಿಂ –ಭಯಂಕರವಾದ ಶಸ್ತ್ರಾಸ್ತ್ರವೃಷ್ಟಿಯನ್ನು ತಪಸಾಂ ನಿಧಾನೇ – ತಪಸ್ಸುಗಳ ಆಶ್ರಯರಾದ, ಬಲೋದಧೌ—ಬಲಸಮುದ್ರರಾದ, ಅಖಿಲಜ್ಞೇ ಸರ್ವಜ್ಞರಾದ, ಭೀಮೇ – ಭೀಮಸೇನದೇವರಲ್ಲಿ, ಮುಮುಂಚುಃ –ಮಾಡಿದರು, ಸ: ಭೀಮಃ—ಆ ಭೀಮರು, ತಾನ್ – ಆ ದೈತ್ಯರನ್ನು, ಪೂರ್ವಂ – ಮೊದಲು ವಾಙ್ಮಯೇ ಸಂಗರೇ—ವಾಗ್ಯುದ್ಧ (ವಾದ)ದಲ್ಲಿ) ವೈಷ್ಣವೈಃ ಶಾಸ್ತ್ರೈಃ—ವೈಷ್ಣವ ಶಾಸ್ತ್ರಗಳಿಂದ, ವಿಜಿತ್ಯ— ಗೆದ್ದು. ಶಸ್ತ್ರಾಸ್ತ್ರವರ್ಷಸ್ಯ —ಅವರು ಮಾಡಿದ ಶಸ್ತ್ರಾಸ್ತ್ರವೃಷ್ಟಿಗೆ, ಪ್ರತೀಪಂ – ಪ್ರತೀಕಾರವನ್ನು, ಕುರ್ವನ್ –ಮಾಡುವವರಾಗಿ, ತೇಷು—ಆ ದೈತ್ಯರಲ್ಲಿ, ಅಖಿಲಾನ್—ಎಲ್ಲ, ವೀರಾನ್ – ವೀರರನ್ನು, ಗದಯಾ ಜಘ್ನೇ—ಗದೆಯಿಂದ ಸಂಹರಿಸಿದರು ॥೨೯೮॥೨೯೯॥೩೦೦॥

ಭಾವಾನುವಾದ ೨೯೧—೩೦೦

ದೇವತೆಗಳು ಅವತಾರ ಮಾಡಿದಾಗ ಅವರಿಗಿರುವ ಧರ್ಮಗಳನ್ನು ಸಂಕ್ಷೇಪವಾಗಿ ತಿಳಿಸುತ್ತಾ ಇದ್ದಾರೆ— ದೇವತೆಗಳು ತಾವು ಮನುಷ್ಯಾದಿಯೋನಿಗಳಲ್ಲಿ ಅವತರಿಸಿದಾಗ ಮೂಲರೂಪದಲ್ಲಿಯು ಬಲಜ್ಞಾನ ಮೊದಲಾದ ಗುಣಗಳನ್ನು ಅವತಾರ ರೂಪದಲ್ಲಿ ಹೊಂದದಿರುವದು, ಅವರಿಗೆ ಧರ್ಮವು. ಈ ಗುಣಾಚ್ಛಾದನವು ದೇವತಾತಾರತಮ್ಯ ಹಾಗು ಯುಗತಾರತಮ್ಯಾನುಸಾರ ನಡೆಯುವದು. ಆ ಪ್ರಕಾರ ಒಬ್ಬ ಉತ್ತಮ ದೇವತೆಯು ಅವತಾರ ರೂಪದಲ್ಲಿ ಅವನ ಮೂಲ ರೂಪದ ಬಲಾದಿಗುಣಗಳು ಎಷ್ಟು ಆವೃತ ಆಚ್ಛಾದಿತವಾಗುವವೋ ಅದಕ್ಕಿಂತ ಹೆಚ್ಚು ಆ ದೇವತೆಗಿಂತ ಸಣ್ಣ ದೇವತೆಯು ಅವತರಿಸಿದಾಗ ಅವನ ಮೂಲರೂಪದ ಗುಣಗಳು ಆಚ್ಛಾದಿತವಾಗುವವು ಅದರಂತೆ ಒಬ್ಬ ದೇವತೆಯು ಎರಡು ಯುಗಗಳಲ್ಲಿ ಅವತರಿಸಿದ್ದರೆ ಪೂರ್ವಯುಗದ ಅವತಾರಕ್ಕಿಂತ ನಂತರ ಯುಗದ ಅವತಾರದಲ್ಲಿ ಹೆಚ್ಚು ಆವೃತವಾಗಿರುವವು. ಇದು ಸಾಮಾನ್ಯವಾಗಿ ಶ್ರೀವಾಯು ದೇವರನ್ನು ಬಿಟ್ಟು ಉಳಿದೆಲ್ಲ ಕೆಳಗಿನ ದೇವತೆಗಳಿಗೆ ಅನ್ವಯಿಸುವ ನಿಯಮವು. ವಾಯುದೇವರಿಗಮಾತ್ರ ಅವರ ಇಚ್ಛೆಯು ಪ್ರಕಾರ ಯಾವದೇ ಯುಗದಲ್ಲಿಯು ಅವತಾರ ರೂಪದಲ್ಲಿಯೂ ಮೂಲ ವಾಯು ರೂಪದ ಗುಣಗಳು ವ್ಯಕ್ತವಾಗುವವು. ಉಳಿದ ದೇವತೆಗಳಿಗೆ ವಿಶೇಷ ಕಾರಣಗಳಿರುವಾಗ ವ್ಯಕ್ತವಾಗುವವು. ಉದಾಹರಣೆಗಾಗಿ ರಾಮಾಯಣದಲ್ಲಿ ಶೇಷಾವತಾರಿಯಾದ ಲಕ್ಷ್ಮಣನನ್ನು ಯುದ್ಧದಲ್ಲಿ ಮೂರ್ಛಿತನನ್ನಾಗಿ ಮಾಡಿದ ರಾವಣನು ಎಳಿದೊಯ್ಯಬೇಕೆಂದು ಮಾಡಿದಾಗ ಆ ಸಂದರ್ಭದಲ್ಲಿ ಎಚ್ಚೆತ್ತ ಲಕ್ಷ್ಮಣನು ತನ್ನ ಮೂಲರೂಪದ ಸ್ಮರಣೆಯನ್ನು ಮಾಡಿದನು. ಆಗ ಆ ರೂಪದ ಶಕ್ತಿಯು ಈ ಲಕ್ಷ್ಮಣರೂಪದಲ್ಲಿ ಬಂದಿತು. ಹೀಗಾಗಿ ರಾವಣನಿಗೆ ಈ ಲಕ್ಷ್ಮಣನನ್ನು ಅಲುಗಾಡಿಸಲೂ ಕೂಡ ಆಗಲಿಲ್ಲ ಎಂದು ಕಂಡು ಬಂದಿದೆ. ಈ ರೀತಿ ದೇವತಾಧರ್ಮವಿದ್ದ್ದರಿಂದ ಭೀಮ ದೇವರು ಧರ್ಮವೃಧ್ಯರ್ಥವಾಗಿ ತನ್ನದೇ ರೂಪದಲ್ಲಿಯೂ ಪರಕೀಯರಂತೆಯೂ ಹನುಮದಂತರೂಪವು ತನಗೆ ಹಿರಿಯನೆಂಬಂತೆಯೂ ತಾನು ಅಶಕ್ತನೆಂಬಂತೆ, ಸಣ್ಣವನೆಂಬಂತೆಯೂ ನಡೆದುಕೊಂಡರು. ಅಸುರ ಮೋಹನವೂ ಕೂಡ ಈ ನಡತೆಯು ಉದ್ದೇಶವಾಗಿತ್ತು. ಶ್ರೀಭೀಮದೇವರು ಶ್ರೀಹನುಮಂತದೇವರ ರೂಪದ ಬೃಹದಾಕಾರವನ್ನು ನೋಡಿ ಆಶ್ಚರ್ಯಪಟ್ಟು ಅವರಿಂದ ಅನೇಕ ಶ್ರೀರಾಮಕಥಾಗಳನ್ನು, ಶ್ರೀರಾಮದೇವರು ಶ್ರೀವಾಸುದೇವ ಸ್ವರೂಪನು. ಲಕ್ಷ್ಮಣಾದಿಗಳು ಕ್ರಮವಾಗಿ ಸಂಕರ್ಷಣಾದಿ ರೂಪತ್ರಯಾವಿಷ್ಟರೆಂದೂ ಹಾಗು ಚತುರ್ವ್ಯೂಹ ಧರ್ಮಗಳನ್ನೂ ಕೇಳಿ ತಿಳಿದುಕೊಂಡು, ತನ್ನ ತಮ್ಮ ಅರ್ಜುನನಿಗೆ ಅವನ ಧ್ವಜದಲ್ಲಿರುವ ಹನುಮಂತನ ಗರ್ಜನ ಮಾತ್ರದಿಂದ ಶತ್ರುಗಳ ಮೇಲೆ ವಿಜಯ ಸಿಗುವಂತೆ ವರವನ್ನು ಹನುಮಂತದೇವರು ಕೊಟ್ಟಮೇಲೆ ಅವರಿಗೆ ನಮಸ್ಕರಿಸಿ ಹೊರಟು ಬೇಗನೇ ಸೌಗಂಧಿಕವನಕ್ಕೆ ಬಂದರು. ಆ ಸುಂದರವಾದ ವನದಲ್ಲಿ ಮನುಷ್ಯರಿಗೆ ಬರಲು ಅಸಾಧ್ಯವೇ ಆದ ಸರೋವರಕ್ಕೆ ಬಂದು ಅಲ್ಲಿರುವ ಅದ್ಭುತ, ರೂಪವುಳ್ಳ, ಬಹುಶ್ರೇಷ್ಠವಾದ ಕಮಲಪುಷ್ಪಗಳನ್ನು

ನೋಡಿ ತೆಗೆದುಕೊಳ್ಳುವ ಪ್ರವೃತ್ತಿಯಲ್ಲಿರುವಾಗ ಒಹಂ ಸಹಸ್ರ ಸಂಖ್ಯಾಕರಾದ ಕ್ರೋಧವಶ ಎಂಬ ಹೆಸರಿನ ದೈತ್ಯರು ಬಂದರು. ರುದ್ರದೇವರ ವರದಿಂದ ಯಾರಿಗೂ ಅಜೇಯರಾದ, ಅವರು ಶಿವಸರ್ವೋತ್ತಮತ್ವವನ್ನು ಹೇಳುತ್ತಾ ವಾದಯುದ್ಧವನ್ನಾರಂಭಿಸಿದಾಗ ವೈಷ್ಣವ ಶಾಸ್ತ್ರಗಳಿಂದ ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸಿ ಅವರನ್ನು ಗೆದ್ದರು. ಆಗ ಅವರು ಶ್ರೀಭೀಮರ ಮೇಲೆ ಶಸ್ತ್ರಾಸ್ತ್ರವೃಷ್ಟಿಯನ್ನು ಮಾಡುತ್ತಾ ಬಾಹುಯುದ್ಧವನ್ನು ಆರಂಭಿಸಿದರು; ಆಗ ಅವರನ್ನು ತಮ್ಮ ಗದೆಯಿಂದ ಸಂಹರಿಸಿದರು;

ವಾತೇನ ಕುಂತ್ಯಾಂಬಲವಾನ್‌ಪ್ರಜಾತಶ್ಶೂರಸ್ತಪಸ್ವೀ ದ್ವಿಷತಾಂ ನಿಹಂತಾ ।
ಸತ್ಯೇಚ ಧರ್ಮೇಚ ರತಸ್ಸದೈವ ಪರಾಕ್ರಮೇ ಶತ್ರುಭಿರಪ್ರಧೃಷ್ಯ: ।
ತತ್ರಾಪರಾಂಶ್ಚೈವ ಬಹೂನಸತ್ಯಂ ನಿರೀಶ್ವರಂ ಚಾಪ್ರತಿಷ್ಠಂ ಚ ಲೋಕಮ್ ॥೩೦೧॥

ಸಿದ್ಧೋಽಹಮೀಶೋಽಹಮಿತಿ ಬ್ರುವಾಣಾನ್ ಗುಣಾನ್ ವಿಷ್ಣೋಃ ಖ್ಯಾಪಯನ್ವಾದತೋಽಜೈಃ।
ಭಿನ್ನಂ ವಿಷ್ಣುಮಧಿಕಂ ಸರ್ವತಶ್ಚ ಬ್ರುವನ್ ಪ್ರವೀರಾನ್ ಲಕ್ಷಮೇಷಾಂ ನಿಜಘ್ನೇ ॥೩೦೨॥

ವಾತೇನ – ವಾಯುದೇವರಿಂದ, ಕುಂತ್ಯಾಂ— ಕುಂತೀದೇವಿಯಲ್ಲಿ, ಪ್ರಜಾತಃ – ಅವತರಿಸಿದ, ಶೂರಃ— ಶೂರರಾದ, ತಪಸ್ವೀ – ತಪಸ್ವಿಗಳಾದ, ದ್ವಿಷತಾಂ ನಿಹಂತಾ – ಭಗವದ್ದ್ವೇಷಿಗಳ ಸಂಹಾರಕರಾದ, ಸತ್ಯೇ ಧರ್ಮೇ ಚ—ಸತ್ಯವಚನದಲ್ಲಿ ಧರ್ಮದಲ್ಲಿಯೂ ಕೂಡ, ಸದಾ ರತ. – ಯಾವಾಗಲೂ ಆಸಕ್ತರಾದ, ಪರಾಕ್ರಮೇ – ಪರಾಕ್ರಮ ಗುಣದ ಬಗ್ಗೆ, ಶತ್ರುಭಿಃ ಅಪ್ರಧೃಷ್ಯಃ – ವೈರಿಗಳಿಂದ ತಡೆಯಲಶಕ್ಯರಾದ, ಭೀಮಸೇನದೇವರು, ತತ್ರ – ಆ ಸೌಗಂಧಿಕವನದಲ್ಲಿ, ಅಪರಾನ್ – ಈ ಮೊದಲು ಸಂಹರಿಸಿದವರಿಗಿಂತ ಬೇರೆಯವರಾದ, ಲೋಕಮ್ – ಜಗತ್ತನ್ನು, ಅಸತ್ಯಂ – ಸತ್ಯವಲ್ಲದ್ದನ್ನಾಗಿ ಚ – ಮತ್ತು ನಿರೀಶ್ವರಂ – ದೇವ (ಈಶ್ವರ) ಸೃಷ್ಟವಲ್ಲದ್ದನ್ನಾಗಿ, ಅಪ್ರತಿಷ್ಠಂ ಚ – ದೇವರಿಂದ ಪಾಲಿತವಲ್ಲದ್ದನ್ನಾಗಿಯೂ ಬ್ರುವಾಣಾನ್ – ಹೇಳತಕ್ಕ. ಚ— ಹಾಗೂ, ಅಹಂ ಸಿದ್ಧಃ ಅಹಂ ಈಶಃ – ನಾನು ಸಿದ್ಧನು, ನಾನೆ ದೇವರು. ಇತಿ ಬ್ರುವಾಣಾನ್—ಎಂದು ಹೇಳತಕ್ಕ. ಒಹೂನ್—ಬಹುರಾಕ್ಷಸರನ್ನು, ವಿಷ್ಣೋಃ ಗುಣಾನ್ – ಶ್ರೀಹರಿಯ ಗುಣಗಳನ್ನು, ಖ್ಯಾಪಯನ್ ಸನ್ – ಸ್ಥಾಪಿಸುವ(ಸಿದ್ಧಮಾಡುವ)ವರಾಗಿ, ವಿಷ್ಣುಂ – ಶ್ರೀಹರಿ ಎಂಬ ದೇವರನ್ನು, ಸರ್ವತಃ – ಎಲ್ಲರಿಗಿಂತ, ಭಿನ್ನಂ ಅಧಿಕಂ ಚ – ಭಿನ್ನನನ್ನಾಗಿ ಮತ್ತು ಉತ್ಕೃಷ್ಟನನ್ನಾಗಿ, ಬ್ರುವನ್ – ಪ್ರಮಾಣ ಪೂರ್ವಕವಾಗಿ ಸಿದ್ಧಪಡಿಸುವವರಾಗಿ, ವಾದತಃ – ವಾದದಿಂದ ವಾದದಲ್ಲಿ, ಅಜೈತ್ ಗೆದ್ದರು. ಚ – ಹಾಗು. ಪ್ರವೀರಾನ್ - ಪರಾಕ್ರಮಿಗಳಾದ, ಏಷಾಂ ಲಕ್ಷಂ – ಈ ಲಕ್ಷಸಂಖ್ಯಾಕ ಕ್ರೋಧವಶ ದೈತ್ಯರನ್ನು, ನಿಜಘ್ನೇ – ಕೊಂದರು. ॥೩೦೧॥೩೦೨॥

ತೇ ತಸ್ಯವೀರ್ಯಂ ಚ ಬಲಂ ಚ ದೃಷ್ಟ್ವಾ ವಿದ್ಯಾ ಬಲಂ ಬಾಹುಬಲಂ ತಥೈವ ।
ಅಶಕ್ನುವಂತಸ್ಸಹಿತಾಸ್ಸಮುಸ್ತಾ ಹತಪ್ರವೀರಾಸ್ಸಹಸಾ ನಿವೃತ್ತಾಃ ॥೩೦೩॥

ಹತಪ್ರವೀರಾಃತೇ – ವೀರರಾದ ತಮ್ಮ ಪರಿವಾರದವರನ್ನು ಕಳಕೊಂಡಂಥ. ತೇ – ಆ ಉಳಿದ ದೈತ್ಯರು, ತಸ್ಯ – ಆ ಶ್ರೀಭೀಮರ, ವೀರ್ಯಂ—ಪರಾಕ್ರಮವನ್ನು ವಿದ್ಯಾಬಲಂ ತಥಾ ಬಾಹುಬಲಂ (ಇತಿ ದ್ವಿವಿಧಂ) ಬಲಂ ಚ – ವಿದ್ಯಾಬಲ ಹಾಗೂ ಬಾಹುಬಲ ಎಂಬ ದ್ವಿವಿಧ ಬಲವನ್ನೂ ಕೂಡ, ದೃಷ್ಟ್ವಾ – ನೋಡಿ. ಸಮುಸ್ತಾಃ ಸಹಿತಾಃ ಅಪಿ – ಎಲ್ಲರೂ ಒಟ್ಟಾಗಿಯೂ ಕೂಡ. (ವೀರರು ಇರುವಾಗ ಅವರಿಂದ ಸಹಿತರಾಗಿ ಎಲ್ಲರೂ ಒಟ್ಟಾಗಿಯೂ ಕೂಡ.)

ಅಶಕ್ನುವಂತಃ ಸಂತ – ಭೀಮಸೇನದೇವರ ಜೊತೆಗೆ ಯುದ್ಧವನ್ನೇ ಯುದ್ಧಮಾಡಲೂ ಅಸಮರ್ಥರಾಗಿ, ಸಹಸಾ ನಿವೃತ್ತಾಃ – ಒಮ್ಮೆಲೆ ಯುದ್ಧಬಿಟ್ಟು ಹಿಂದಿರುಗಿದರು. ॥೩೦೩॥

ವಿಕ್ರಮ್ಯ ತಾನ್ಗದಯಾऽಸೌ ನಿಹತ್ಯ ವಿದ್ರಾವ್ಯ ಸರ್ವಾನ್ ನಳಿನೀಂ ಪ್ರವಿಶ್ಯ ।
ಪೀತ್ವಾऽಮೃತಾಂಭಶ್ಚ ತತೋऽಂಬುಜಾನಿ ದಿವ್ಯಾನಿ ಜಗ್ರಾಹ ಕುರುಪ್ರವೀರಃ ॥೩೦೪॥

ತಾನ್ – ಹಿಂದಿರುಗಿದ ಅವರನ್ನು. ವಿಕ್ರಮ್ಯ – ಬೆನ್ನು ಹತ್ತಿ ಹೊಗಿ, ಕುರುಪ್ರವೀರಃ ಅಸೌ – ಕುರು ಕುಲದಲ್ಲಿ ಅತಿವೀರರಾದ ಆ ಭೀಮಸೇನದೇವರು, ಗದಯಾ – ತಮ್ಮ ಗದೆಯಿಂದ, ನಿಹತ್ಯ – ಹೊಡೆದು, ಸರ್ವಾನ್ – ಎಲ್ಲರನ್ನು, ವಿದ್ರಾವ್ಯ – ಓಡಿಸಿ, ನಳಿನೀಂ – ಸರೋವರವನ್ನು, ಪ್ರವಿಶ್ಯ – ಪ್ರವೇಶಮಾಡಿ, ಚ – ಹಾಗು, ಅಮೃತಾಂಬುಃ – ಅಮೃತಸದೃಶವಾದ ನೀರನ್ನು, ಪೀತ್ವಾ – ಪಾನಮಾಡಿ, ತತಃ – ಆ ಸರೋವರದ ದೆಸೆಯಿಂದ, ದಿವ್ಯಾನಿ ಅಂಬುಜಾನಿ – ಲೋಕವಿಲಕ್ಷಣವಾದ ಕಮಲಪುಷ್ಪಗಳನ್ನು, ಜಗ್ರಾಹ – ತೆಗೆದುಕೊಂಡರು. ॥೩೦೪॥

ಅಥೋಕಲಹಶಂಸೀನಿ ನಿಮಿತ್ತಾನಿ ಯುಧಿಷ್ಠಿರಃ ।
ದೃಷ್ಟ್ವೈಕೃಷ್ಣಾಮಪೃಚ್ಛಚ್ಚ ಕ್ವ ಭೀಮ ಇತಿ ದೀನಧೀಃ ॥೩೦೫॥

ಅಥೋ – ನಂತರ, (ಈಕಡೆಗೆ) ಯುಧಿಷ್ಠಿರಃ – ಧರ್ಮರಾಜನು, ಕಲಹಶಂಸೀನಿ – ಕಲಹಸೂಚಕವಾದ, ನಿಮಿತ್ತಾನಿ – ಶಕುನಗಳನ್ನು, ದೃಷ್ಟ್ವಾ – ಕಂಡು, ದಿನಧೀಃ ಸನ್ – ದುಃಖದಿಂದ, ವ್ಯಥೆಯಿಂದಕೂಡಿದ ಮನಸ್ಸುಳ್ಳವನಾಗಿ, ಕೃಷ್ಣಾಂ – ದ್ರೌಪದೀದೇವಿಯನ್ನು ಕುರಿತು, ಭೀಮಃ ಕ್ವ ಇತಿ – ಭೀಮಸೇನನು ಎಲ್ಲಿದ್ದಾನೆ ಎಂದು, ಅಪೃಚ್ಛತ್ ಪ್ರಶ್ನಿಸಿದನು. ॥೩೦೫॥

ಸೌಗಂಧಿಕಾರ್ಥಂ ಯಾತಂ ತಂ ಶ್ರುತ್ವಾ ಕೃಷ್ಣಾಮುಖಾನ್ನೃಪಃ ।
ಆರುಹ್ಯ ರಾಕ್ಷಸಶ್ರೇಷ್ಠಾನ್ ಕೃಷ್ಣಯಾ ಭ್ರಾತೃಭಿಸ್ಸಹ ॥೩೦೬॥

ಯಯೌ ವೃಕೋದರೋ ಯತ್ರ ದೃಷ್ಟ್ವಾ ಚೈನಮುವಸ್ಥಿತಂ ।
ಉವಾಚ ಮೈವಮಿತ್ಯೇನಂ ಭೀತೋಗಿರಿಶಕೋಪತಃ ॥೩೦೭॥

ನೃಪಃ – ಧರ್ಮರಾಜನು, ಕೃಷ್ಣಾಮುಖಾತ್ – ದ್ರೌಪದೀದೇವಿಯಮುಖದಿಂದ, ತಂ – ಆ ಭೀಮಸೇನರನ್ನು, ಸೌಗಂಧಿಕಾರ್ಥಂ – ಸೌಗಂಧಿಕ ಪುಷ್ಪದ ಸಲುವಾಗಿ, ಯಾತಂ – ಹೋದವರನ್ನಾಗಿ, ಶ್ರುತ್ವಾ – ಕೇಳಿ, ರಾಕ್ಷಸ ಶ್ರೇಷ್ಠಾನ್ – ಶ್ರೇಷ್ಠ ರಾಕ್ಷಸರನ್ನು, ಆರುಹ್ಯ – ಏರಿ, ಕೃಷ್ಣಯಾ ಭ್ರಾತೃಭಿಃ ಸಹ – ದ್ರೌಪದೀದೇವಿಯಿಂದ ಮತ್ತು ಸಹೋದರರಾದ ನಕುಲಸಹದೇವರಿಂದ ಹಾಗು ಭ್ರಾತೃಸದೃಶರಾದ ಮಂತ್ರಿಗಳಿಂದ ಕೂಡಿಕೊಂಡು, ವೃಕೋದರಃ – ಶ್ರೀ ಭೀಮರು, ಯತ್ರ – ಎಲ್ಲಿದ್ದಾರೋ, ತತ್ರ – ಅಲ್ಲಿಗೆ, ಯಯೌ – ಹೋದನು, ಚ – ಮತ್ತು, ಅವಸ್ಥಿತಂ – ಅಲ್ಲಿರುವ ಏನಂ – ಈ ಭೀಮರನ್ನು, ದೃಷ್ಟ್ವಾ – ನೋಡಿ, ಗಿರಿಶಕೋಪತಃ – ರುದ್ರದೇವರ ಸಿಟ್ಟು ಆಗುವ ಕಾರಣದ ದೆಸೆಯಿಂದ, ಭೀತಃ ಸನ್ – ಹೆದರಿದವನಾಗಿ, ಮಾ ಏವಂ (ಕುರು) ಇತಿ – ಹೀಗೆ ಮಾಡಬೇಡ ಎಂದು, ಏನಂ – ಶ್ರೀಭೀಮರನ್ನು ಕುರಿತು, ಉವಾಚ – ಹೇಳಿದನು. ॥೩೦೬।೩೦೭॥

ಭಾವಾನುವಾದ ೩೦೧—೩೦೭

ವಾಯುದೇವರಿಂದ ಕುಂತೀದೇವಿಯಲ್ಲಿ ಅವತರಿಸಿದ, ಬಲಿಷ್ಠರಾದ, ಸತ್ಯಧರ್ಮಗಳಲ್ಲಿ ಯಾವಾಗಲೂ ಆಸಕ್ತರಾದ, ಯಾವ ಶತ್ರುಗಳಿಂದಲೂ ಕೂಡ ತಡೆಯಲು ಅಶಕ್ಯರಾದ ಭೀಮಸೇನದೇವರು ಗಂಧಮಾದನ ಪರ್ವತದಲ್ಲಿ ಇವರನ್ನು ಎದುರಿಸಲು ಬಂದಂಥ, ಕ್ರೂಧವಶ ಎಂಬ ವಂಶದಲ್ಲಿ ಬಂದಂಥ, ಜಗತ್ತು ಅಸತ್ಯವು ದೇವರಿಂದ ಸೃಷ್ಟವಲ್ಲ, ರಕ್ಷಿತವಲ್ಲ, ದೇವರು ನಿರ್ಗುಣನು ನಿರಾಕಾರನು ಎರಡು ಮುಂತಾಗಿ ದುಷ್ಟವಾದ ಗಳನ್ನು ಮಾಡತಕ್ಕಂತಹ ದ್ವೈತ್ಯದನ್ನು ಶ್ರೀಹರಿಯು ಸರ್ವೋತ್ತಮನು ಅನಂತ ಕಲ್ಯಾಣಗುಣ ಪೂರ್ಣನು, ಜಗತ್ತು ಸತ್ಯಭೂತವಾದದ್ದು, ದೇವರಿಂದಲೇ ಸೃಷ್ಟವೂ ರಕ್ಷಿತವೂ ಎಂಬ ಮೊದಲಾದ ನಿರ್ದುಷ್ಟವಾದ ವಾದಗಳಿಂದ ಖಂಡಿಸಿ, ಸೊಕ್ಕಿನಿಂದ ಆ ರಾಕ್ಷಸರು ಬಾಹುಯುದ್ಧಕ್ಕೆ ಬಂದಾಗ ಅವರಲ್ಲಿ ಲಕ್ಷ ಸಂಖ್ಯಾಕರಾದ ವೀರರಾಕ್ಷಸರನ್ನು ಸಂಹರಿಸಿದರು. ಆಗ ಈ ಶ್ರೀ ಭೀಮಸೇನದೇವರ ಪರಾಕ್ರಮವನ್ನು ನೋಡಿ ಉಳಿದ ರಾಕ್ಷಸರು ಓಡಿದಾಗ ಅವರ ಬೆನ್ನು ಹತ್ತಿ ಹೋದ ಶ್ರೀ ಭೀಮಸೇನದೇವರು ತಮ್ಮ ಗದೆಯಿಂದ ಅವರನ್ನು ಹೊಡೆದು ಓಡಿಸಿ ಶ್ರೇಷ್ಠವಾದ ಸರೋವರವನ್ನು ಪ್ರವೇಶಿಸಿ ತಿಳಿನೀರನ್ನು ಪಾನಮಾಡಿ ಶ್ರೇಷ್ಠವಾದ ಭಂಗಾರವರ್ಣದ ಕಮಲಗಳನ್ನು ತೆಗೆದುಕೊಂಡರು. ಈ ಕಡೆಗೆ ಧರ್ಮರಾಜನಿಗೆ ಯುದ್ಧದ ಸೂಚಕವಾದ ಅಪಶಕುನಗಳು ಆಗುತ್ತಿರುವಾಗ ಗಾಬರಿಗೊಂಡು ದ್ರೌಪದಿದೇವಿಯ ಹತ್ತಿರ ಬಂದು ಭೀಮನೆಲ್ಲಿ ಎಂದು ಕೇಳಿದನು. ? ಆಗ ಸೌಗಂಧಿಕ ಪುಷ್ಪವನ್ನು ತರುವ ದಕ್ಕಾಗಿ ಸೌಗಂಧಿಕ ವನಕ್ಕೆ ಹೋದದ್ದನ್ನು ತಿಳಿದು ಘಟೋತ್ಕಚನನ್ನು ಹಾಗೂ ಇನ್ನುಳಿದ ರಾಕ್ಷಸರನ್ನು ಏರಿಕೊಂಡು ನಕುಲಸಹದೇವರಿಂದ ಹಾಗೂ ಮುನಿಗಳಿಂದ ಸಹಿತನಾಗಿ ಹೊರಟನು. ಭೀಮಸೇನದೇವರು ಇದ್ದಲ್ಲಿಗೆ ಬಂದು ಕುಬೇರನ ವನದಲ್ಲಿ ಭೀಮಸೇನದೇವರು ಇದ್ದದ್ದನ್ನು ನೋಡಿ ರುದ್ರದೇವರು ಎಲ್ಲಿ ಕುಪಿತರಾಗುವರೋ ಎಂದು ಹೆದರಿ ಹೀಗೆಲ್ಲ ಮಾಡಬಾರದು ಎಂದು ಭೀಮಸೇನದೇವರಿಗೆ ಹೇಳಿದನು.

ಅವತಾರಿಕೆ :— ರುದ್ರದೇವರ ಸಿಟ್ಟು ಆದೀತು ಎಂದು ಶಂಕಿಸಿಕೊಳ್ಳಲು ಕಾರಣವನ್ನು ತಿಳಿಸುತ್ತಾರೆ—

ದೇವೇಭ್ಯೋ ಮರಣಾದ್ಭೀತಾ ರಾಕ್ಷಸಾ ವಿತ್ತಪಾಜ್ಞಯಾ ॥
ತದೀಯಾಂ ನಳಿನೀಂ ತೇ ಹಿ ರಕ್ಷನ್ತ್ಯಸ್ಯಾಶ್ರಯೋಹರಃ ॥೩೦೮॥

ದೇವೇಭ್ಯಃ—ದೇವತೆಗಳದೆಶೆಯಿಂದ, ಮರಣಾತ್ ಭೀತಾಃ – ಮರಣದ ದೆಶೆಯಿಂದ ಹೆದರಿದಂಥ, ರಾಕ್ಷಸಾಃ—ರಾಕ್ಷಸರು, ವಿತ್ತಪಾಜ್ಞಯಾ ಕುಬೇರನ ಆಪ್ಪಣೆಯ ಪ್ರಕಾರ, ತದೀಯಾಂ—ಆ ಕುಬೇರನದಾದ, ನಳಿನೀಂ—ಸರೋವರವನ್ನು, ತೇ ಹಿ—ಆ ರಾಕ್ಷಸರೇ, ರಕ್ಷಂತಿ—ರಕ್ಷಿಸುತ್ತಿದ್ದಾರೆ, ಅಸ್ಯ - ಆ ಕುಬೇರನಿಗೆ, ಆಶ್ರಯಃ—ಆಶ್ರಯರಾದವರು, ಹರಃ—ರುದ್ರದೇವರು, (ಹೀಗಾಗಿ ರುದ್ರದೇವರು ಎಲ್ಲಿ ಕೋಪಿಸಿಕೊಳ್ಳುವರೋ ಎಂದು ಧರ್ಮರಾಜನು ಹೆದರಿಕೊಂಡನು.) ॥೩೦೮॥

ಜಾನನ್ವಿತ್ತೇಶ್ವರೋ ಭೀಮಮಾಹಾತ್ಮ್ಯಂ ನ ಚುಕೋಪ ಹ ।
ವಸತ್ಸು ತತ್ರ ಪಾರ್ಥೇಷು ಪುನಃ ಕತಿಪಯೈರ್ದಿನೈಃ ॥೩೦೯॥

ಉವಾಚ ಭೀಮಸೇನಸ್ಯ ಯುಶೋಧನಾರ್ಥಾಭಿವೃದ್ಧಯೇ ।
ಪಂಚವರ್ಣಾನಿ ಪುಷ್ಪಾಣಿ ಕೃಷ್ಣಾ ವೀಕ್ಷ್ಯಾಹೃತಾನಿ ತು ॥೩೧೦॥

ಮಾರುತೇನ ಕುಬೇರಸ್ಯ ಗೃಹಾನ್ನೃಭಿರಗಮ್ಯತಃ ।
ಅಗಮ್ಯೋಯಂ ಗಿರಿಸ್ಸರ್ವೈಃ ಕುಬೇರೇಣಾಭಿಪಾಲಿತಃ ॥೩೧೦॥

ಅದ್ಯ ತ್ವಯೈವ ಗಂತವ್ಯೋ ನಿಧೂಯಾಖಿಲ ರಾಕ್ಷಸಾನ್ ॥೩೧೨॥

ಭೀಮಬಲಾಹಾತ್ಮ್ಯಂ ಜಾನನ್ – ಶ್ರೀ ಭೀಮರ ಸಾಮರ್ಥ್ಯದ ಬಲಾಹಾತ್ಮ್ಯವನ್ನು ತಿಳಿದ, ವಿತ್ತೇಶ್ವರಃ – ಕುಬೇರನು, ನ ಚುಕೋಪ ಹ – ಸಿಟ್ಟಾಗಲಿಲ್ಲ, ತತ್ರ – ಅಲ್ಲಿಯೇ, ಪಾರ್ಥೇಷು ವಸತ್ಸು ಸತ್ಸು – ಪಾಂಡವರು ವಾಸಿಸುತ್ತಿರಲು, ಕತಿಪಯೈಃ ದಿನೈಃ – ಕೆಲದಿನಗಳ ನಂತರ, ಕೃಷ್ಣಾ – ದ್ರೌಪದೀದೇವಿಯು, ನೃಭಿಃ – ಅಗಮ್ಯತಃ – ಮನುಷ್ಯರಿಂದ ಹೊಂದಲು ಅಶಕ್ಯವಾದ, ಕುಬೇರಸ್ಯ ಗೃಹಾತ್ – ಕುಬೇರನ ಮನೆಯಿಂದ, ಮಾರುತೇನ ಆಹೃತಾನಿ – ಗಾಳಿಯಿಂದ ತರಲ್ಪಟ್ಟ, ಪಂಚವರ್ಣಾನಿ – ಐದುಬಣ್ಣಗಳುಳ್ಳ, ಪುಷ್ಪಾಣಿ – ಪುಷ್ಪಗಳನ್ನು, ವೀಕ್ಷ್ಯ – ನೋಡಿ, ಭೀಮಸೇನಸ್ಯ ಯಶೋಧರ್ಮಾಭಿವೃದ್ಧಯೇ – ಭೀಮಸೇನದೇವರಿಗೆ ಯಶಸ್ಸು ಧರ್ಮಗಳ ಅಭಿವೃದ್ಧಿಯಾಗುವದಕ್ಕಾಗಿ, ಕುಬೇರೇಣ ಅಭಿಪಾಲಿತಃ – ಕುಬೇರನಿಂದ ರಕ್ಷಿಸಲ್ಪಡುತ್ತಿರುವ, ಅಯಂ ಗಿರಿಃ – ಈ ಪರ್ವತವು, ಸರ್ವೈಃ – ಎಲ್ಲರಿಂದ, ಅಗಮ್ಯಃ – ಹೊಂದಲು ಅಶಕ್ಯವು, ಅದ್ಯ – ಇಂದು, ತ್ವಯಾ ಏವ – ನಿನ್ನಿಂದಲೇ, ಅಖಿಲ ರಾಕ್ಷಸಾನ್ ವಿಧೂಯ – ಎಲ್ಲ ರಾಕ್ಷಸರನ್ನು ಸಂಹರಿಸಿ, ಓಡಿಸಿ, ಗಂತವ್ಯಃ – ಹೊಂದಲ್ಪಡಬೇಕು, ಇತಿ – ಎಂದು, ಉವಾಚ – ಹೇಳಿದಳು. ॥೩೦೯-೩೧೦-೩೧೧-೩೧೨॥

ಇತ್ಯುಕ್ತ ಆಶು ಸಗದಸ್ಸಧನುಸ್ಸಬಾಣೋ ಭೀಮೋ ಗಿರೀಂದ್ರಮಜಿತೋರುಬಲೋ ವಿಗಾಹೇ ।
ಪಾಪ್ತಂ ನಿಶಾಮ್ಯ ಬಲದೈವತಸೂನುಮತ್ರ ಪದ್ಮತ್ರಯಂ ನ್ಯರುಣದುದ್ಧತರಾಕ್ಷಸಾನಾಮ್ ॥೩೧೩॥

ಅಗ್ರೇನಿಧಾಯ ಮಣಿಮಂತಮಜೇಯಮುಗ್ರಂ ಶಂಭೋರ್ವರಾದ್ವಿವಿಧಶಸ್ತ್ರಮಹಾಸ್ತ್ರ ವೃಷ್ಟ್ಯಾ ।
ತಾನ್ಸರ್ವರಾಕ್ಷಸಗಣಾನ್ಮಣಿಮತ್ಸಮೇತಾನ್ ಭೀಮೋ ಜಘಾನ ಸಪದಿ ಪ್ರವರೈಃಶರೌಘೈಃ ॥೩೧೪॥

ಇತಿ ಉಕ್ತಃ – ಈ ರೀತಿ ಹೇಳಲ್ಪಟ್ಟ, ಅಜಿತೋರುಬಲಃ ಭೀಮಃ – ಯಾರಿಗೂ ಸೋಲದಂಥ, ಉತ್ಕೃಷ್ಟ ಸಾಮರ್ಥ್ಯವುಳ್ಳ ಭೀಮಸೇನದೇವರು, ಅಶು – ಕೂಡಲೇ, ಸಗದಃ ಸಧನುಃ ಸಬಾಣಃ ಸನ್ – ಗದೆ, ಧನುರ್ಬಾಣಗಳಿಂದ ಸಹಿತರಾಗಿ, ಗಿರೀಂದ್ರಂ – ಶ್ರೇಷ್ಠವಾದ ಆ ಗಂಧಮಾದನ ಗಿರಿಯನ್ನು, ವಿಗಾಹೇ – ಏರಿದರು, ಉದ್ಧತರಾಕ್ಷಸಾನಾಂ ಪದ್ಮತ್ರಯಂ – ಉದ್ಧಟರಾದ, ಪದ್ಮತ್ರಯ ಸಂಖ್ಯಾಕರಾದ ರಾಕ್ಷಸರ ಸಮೂಹವು ಅತ್ರ – ಇಲ್ಲಿಗೆ, ಓಲದೈವತಸೂನುಂ ಪ್ರಾಪ್ತಂ ನಿಶಾಮ್ಯ – ವಾಯುದೇವರ ಅವತಾರ ರೂಪ ಶ್ರೀ ಭೀಮರನ್ನು ನೋಡಿ, ಶಂಭೋಃ ವರಾತ್ – ರುದ್ರದೇವರ ವರದಿಂದ, ಅಜೇಯಂ – ಜಯಿಸಲ್ಪಡಲಾಗದ, ಉಗ್ರಂ – ಭಯಂಕರನಾದ, ಮಣಿಮಂತಂ – ಮಣಿಮಂತದೈತ್ಯನನ್ನು, ಅಗ್ರೇ ನಿಧಾಯ – ಮುಂದಿಟ್ಟುಕೊಂಡು ಬಂದು, ವಿವಿಧಶಸ್ತ್ರ ಮಹಾಸ್ತ್ರವೃಷ್ಟ್ಯಾ – ಅನೇಕ ಶಸ್ತ್ರ ಮಹಾ ಅಸ್ತ್ರಗಳ ವೃಷ್ಟಿಯಿಂದ, ನ್ಯರುಣತ್ – ಭೀಮದೇವರನ್ನು ತಡೆಯಿತು. ಭೀಮಃ ಭೀಮಸೇನದೇವರು, ಸಪದಿ – ಕೂಡಲೇ, ಪ್ರವರೈಃ ಶರೌಘೈಃ – ಶ್ರೇಷ್ಠವಾದ ಬಾಣಗಳ ಸಮೂಹಗಳಿಂದ, ಮಣಿಮತ್ಸಮೇತಾನ್ – ಮಣಿಮಂತನಿಂದ ಸಹಿತರಾದ ತಾನ್ ಸರ್ವರಾಕ್ಷಸಗಣಾನ್ ಆ ಎಲ್ಲ ರಾಕ್ಷಸರ ಸಮೂಹಗಳನ್ನು ಜಘಾನ – ಕೊಂದರು. ॥೩೧೩-೩೧೪॥

ಅವಧ್ಯಾಂಸ್ತಾನ್ ಕ್ಷಣೇನೈವ ಹತ್ವಾ ಭೀಮೋ ಮಹಾಬಲಃ ।
ರಣೇಕ್ರೋಧವಶಾನ್ ಸರ್ವಾನತಿಷ್ಠದ್ಗಿರಿಮೂರ್ಧನಿ ॥೩೧೫॥

ಮಹಾಬಲ: – ಮಹಾಬಲಿಷ್ಠರಾದ, ಭೀಮಃ—ಭೀಮಸೇನದೇವರು, ಅವಧ್ಯಾನ್ ತಾನ್ ಸರ್ವಾನ್ ಕ್ರೂಧವಶಾನ್ – ರುದ್ರವರದಿಂದ ಅವಧ್ಯರಾದ ಆ ಎಲ್ಲ ಕ್ರೋಧವಶ ದೈತ್ಯರನ್ನು ಕ್ಷಣೇನೈವ – ಕ್ಷಣ ಸಮಯ ದಲ್ಲಿಯೇ, ರಣೇಹತ್ವಾ – ಯುದ್ಧದಲ್ಲಿಕೊಂದು, ಗಿರಿಮೂರ್ಧನಿ – ಆ ಪರ್ವತಶಿಖರದಲ್ಲಿ, ಅತಿಷ್ಠತ್ – ನಿಂತರು; ॥೩೧೫॥

ತೇ ಹತಾ ಭೀಮಸೇನೇನ ಪ್ರಾಪುರಧಂತಮೋಽಖಿಲಾಃ ।
ಹತಾಸ್ತೌಗಂಧಿಕವನೇ ಮಣಿಮಾಂಶ್ಚ ಪುನಃ ಕಲೌ ।
ಜಾತೋ ಮಿಥ್ಯಾಮತಿಂ ಸಮ್ಯಗಾಸ್ತೀರ್ಯೂಪ ತಮೋಽಧಿಕಮ್ ॥೩೧೬॥

ಸೌಗಂಧಿಕವನೇ – ಸೌಗಂಧಿಕವನದಲ್ಲಿ. ಭೀಮಸೇನೇನ ಹತಾಃ ತೇ ಅಖಿಲಾ:—ಭೀಮಸೇನರಿಂದ ಸಂಹೃತರಾದ ಅವರೆಲ್ಲರೂ (ಮಣಿಮಂತನೊಬ್ಬನನ್ನು ಬಿಟ್ಟು) ಅಂಧಂ ತಮಃ ಪ್ರಾಪುಃ – ಅಂಧತಮಸ್ಸನ್ನು ಹೊಂದಿದರು, ಮಣಿಮಾನ್ ಚ – ಮಣಿಮಂತನಾದರೂ, ಕಲೌ – ಕಲಿಯುಗದಲ್ಲಿ. ಪುನಃಜಾತಃಸನ್—ಮತ್ತೆ (ಸಂಕರನಾಗಿ) ಹುಟ್ಟಿದವನಾಗಿ, ಮಿಥ್ಯಾಮತಿಂ—ಜೀವಬ್ರಹ್ಮೈಕ್ಯ, ಜಗನ್ಮಿಥ್ಯಾತ್ವ ಇತ್ಯಾದಿ ದುಷ್ಟತತ್ವಗಳ ಜ್ಞಾನವನ್ನು, ಸಮ್ಯಕ್ ಅಧಿಕಮ್ – ತನ್ನಯೋಗ್ಯತೆಗನುಸಾರವಾಗಿ, ಹೆಚ್ಚು ಪ್ರಚಾರವಾಡಿ, ಅಧಿಕಮ್ ಯಥಾಸ್ಯಾತ್ ತಥಾ – ಹೆಚ್ಚು ದು:ಖ ಪ್ರಾಪ್ತಿಯು ಹೇಗೆ ಆಗಬೇಕೋ ಹಾಗೆ, ತಮಃ ಅಪ – ತಮಸ್ಸನ್ನು ಹೊಂದಿದನು. ॥೩೧೬॥

ತತೋ ವೈಶ್ರವಣೋ ರಾಜಾ ಮಹಾಪದ್ಮತ್ರಯೇ ಹತೇ ।
ರಾಕ್ಷಸಾನಾಮವಧ್ಯಾನಾಂ ಸಖಾಯೇ ಮಣಿಮತ್ಯಪಿ ॥೩೧೭॥

ಆರುರೋಹ ರಥಂದಿವ್ಯಂ ಯೋದ್ಧುಕಾಮೋ ವೃಕೋದರಂ ।
ಅಸುರಾವೇಶತಸ್ತಸ್ಯ ಭೀಮೇ ಕ್ರೋಧೋ ಮಹಾನಭೂತ್ ॥೩೧೮॥

ತತ: – ಅನಂತರ, ವೈಶ್ರವಣಃ ರಾಜಾ—ಕುಬೇರನು ಅವಧ್ಯಾನಾಂ ರಾಕ್ಷಸಾನಾಂ ಮಹಾಪದ್ಮತ್ರಯೇ – ಅವಧ್ಯರಾದಮೂರುಪದ್ಮಸಂಖ್ಯಾಕರಾದ ರಾಕ್ಷಸರು, ಹತೇ ಸತಿ – ಸಾಯಿಸಿರಲು, ತಥಾ – ಹಾಗು ಸಖಾಯೇ ತನ್ನ ಗೆಳೆಯನಾದ, ಮಣಿಮತಿ ಅಪಿ ಹತೇಸತಿ – ಮಣಿಮಂತನೂ ಕೂಡ ಸಂಹೃತನಾಗಿರಲು, ವೃಕೋದರಂ ಯೋದ್ಧುಕಾಮಃ ಸನ್— ಭೀಮನ ಸಂಗಡ ಯುದ್ಧಮಾಡುವ ಇಚ್ಛೆಯುಳ್ಳವನಾಗಿ, ದಿವ್ಯಂ ರಥಂ – ಶ್ರೇಷ್ಠವಾದ ರಥವನ್ನು, ಆರುರೋಹ - ಏರಿದನು, ತಸ್ಯ – (ಆಗ) ಆ ಕುಬೇರನಲ್ಲಿ, ಅಸುರಾವೇಶತಃ – ಅಸುರಾವೇಶವಿದ್ದುದರಿಂದ, ಭೀಮೇ – ಭೀಮಸೇನದೇವರಮಗ್ಗೆ, ಮಹಾನ್ ಕ್ರೋಧಃ—ಬಹಳ ಸಿಟ್ಟು, ಅಭೂತ್ – ಉಂಟಾಗಿತ್ತು, ॥೩೧೭॥೩೧೮॥

ಸ ಆಜಗಾಮ ಭೀಮೇನ ಯೋದ್ಧುಂವಿತ್ತಪತಿಃ ಸ್ವಯಮ್ ॥೩೧೯॥

ಸ ವಿತ್ತಪತಿ: -ಧನಾಧ್ಯಕ್ಷನಾದ ಅಂಥ ಕುಬೇರನು, ಭೀಮೇನ ಯೋದ್ಧುಂ-ಭೀಮನ ಜೊತೆ ಯುದ್ಧ ಮಾಡಲು, ಸ್ವಯಂ ಆಜಗಾಮ—ಸ್ವಯಂ ಬಂದನು ॥೩೧೯॥

ತಸ್ಮಿನ್‌ಕಾಲೇ ಭೀಮಸೇನಸ್ಯ ಘೋಷಂ ಶ್ರುತ್ವಾ ರಾಜಾಽಪೃಚ್ಛದಾಶು ಸ್ಮ ಕೃಷ್ಣಾಮ್ ।
ಕೃಭೀಮ ಇತ್ಯೇವ ತಯೋದಿತಂ ಚ ಶ್ರುತ್ವಾ ಜಗಾಮಾಶು ರಕ್ಷೋಽಸಸಂಸ್ಥ: ॥೩೨೦॥

ತಸ್ಮಿನ್ಕಾಲೇ—ಅದೇ ಸಮಯದಲ್ಲಿ, ಭೀಮಸೇನಸ್ಯ ಘೋಷಂ-ಭೀಮಸೇನದೇವರ ಗರ್ಜನನಾದವನ್ನು ಶ್ರುತ್ವಾ—ಕೇಳಿ, ರಾಜಾ—ಧರ್ಮರಾಜನು, ಆಶು—ಕೂಡಲೇ, ಕೃಷ್ಣಾಂ- ದ್ರೌಪದೀದೇವಿಯನ್ನು, ಕ್ವ ಭೀಮಃ ಇತಿ ಭೀಮನು ಎಲ್ಲಿ ? ಎಂದು, ಅಪೃಚ್ಛತ್ಸ್ಮ—ಕೇಳಿದನು. ಚ—ಹಾಗೂ ತಯಾ ಉದಿತಂ ಶ್ರುತ್ವಾ— ಅವಳಿಂದ ಹೇಳಲ್ಪಟ್ಟದ್ದನ್ನು ಕೇಳಿ, ಆಶು—ಕೂಡಲೇ, ರಕ್ಷೋಽಸಸಂಭ್ರಃಸನ್ - ಘಟೋತ್ಕಚನ ಹೆಗಲಲ್ಲಿ ಕುಳಿತವನಾಗಿ, ಜಗಾಮ — ಹೊರಟನು ॥೩೨೦॥

ಸಭ್ರಾತೃಕೇಮುನಿಭಿಃಕೃಷ್ಣಯಾ ಚ ಗತೇ ರಾಜನ್ಯತ್ರ ಭೀಮಂ ಕುಬೇರಃ ।
ದೃಷ್ಟ್ವಾSಸುರಾವೇಶತೋ ಧರ್ಮಜಂ ಚ ಕಿಂಚಿನ್ಮುಕ್ತಃ ಸ್ನೇಹಯುಕ್ತಸ್ತಥಾSಸ ॥೩೨೧॥

ರಾಜನಿ - ಧರ್ಮರಾಜನು, ಸಭ್ರಾತೃಕೇ – ನಕುಲ ಸಹದೇವರಿಂದ ಸಹಿತನಾಗಿ, ಕೃಷ್ಣಯಾಚ ಸಹಿತೇ ದ್ರೌಪದೀದೇವಿಯಿಂದಲೂ ಸಹಿತನಾಗಿ, ಗತೇಸತಿ – ಹೋಗುತ್ತಿರಲು, ಕುಬೇರಃ— ಕುಬೇರನು, ಧರ್ಮಜಂ— ಧರ್ಮ ರಾಜನನ್ನು, ದೃಷ್ಟ್ವಾ – ನೋಡಿ, ಅಸುರಾವೇಶತಃ –ಅಸುರಾವೇಶದಿಂದ, ಕಿಂಚಿತ್ ಮುಕ್ತಃ – ಸ್ವಲ್ಪ ದೂರನಾದವನು, (ಸ್ವಲ್ಪ ಅಸುರಾವೇಶವುಳ್ಳವನಾಗುವಂತೆ ಅಸುರಾವೇಶದಿಂದ ದೂರನು) ತಥಾ ಕಿಂಚಿತ್ ಸ್ನೇಹ ಯುಕ್ತಃ – ಸ್ವಲ್ಪ ಸ್ನೇಹವುಳ್ಳವನು, ಆಸ – ಆಗಿದ್ದನು. ॥೩೨೧॥

ಧೃತಾಯುಧಂ ಭೀಮಮೀಕ್ಷ್ಯಾಪಿಕಿಂಚಿದ್ದೈತ್ಯಾವೇಶಾದ್ಬಹು ಮೇನೇನ ಭೀಮಮ್ ।
ಅಗಸ್ತ್ಯಶಾಪಂ ಚಾವದತ್ತಸ್ಯ ಪೂರ್ವಂ ಸಖಾಯನಾಶೇ ಕಾರಣಂ ರಾಜರಾಜಃ ॥೩೨೨॥

ರಾಜರಾಜಃ – ಕುಬೇರನು, ಧೃತಾಯುಧಂ—ಗದಾಯುಧವನ್ನು ಹಿಡಿದೇ ನಿಂತಿರುವ, ಭೀಮಂ— ಶ್ರೀಭೀಮರನ್ನು, ಈಕ್ಷ್ಯ ಅಪಿ—ನೋಡಿಯೂ ಕೂಡ, ಕಿಂಚಿತ್ ದೈತ್ಯಾವೇಶಾತ್— ಸ್ವಲ್ಪ ದೈತ್ಯಾವೇಶದಿಂದ, ಭೀಮಂ- ಭೀಮಸೇನದೇವರನ್ನು, ಬಹು ನ ಮೇನೇ – ಬಹುಬಲಾಧಿಕರೆನ್ನಾಗಿ ಆದರಿಸಲಿಲ್ಲ, ಸ್ವಸ್ಯ ಸಖಾಯನಾಶೇ – ತನ್ನ ಗೆಳೆಯಂ ಮಣಿಭದ್ರನ ನಾಶಕ್ಕೆ, ಸ್ವಸ್ಯ – ತನಗೆ, ಪೂರ್ವಂ— ಈ ಮೊದಲು, (ಅಗತಂ) ಅಗಸ್ತ್ಯಶಾಪಂ – ಬಂದಿರುವ ಅಗಸ್ತ್ಯಶಾಪವನ್ನು, ಕಾರಣಂ—ಕಾರಣವನ್ನಾಗಿ, ಅವದತ್—ಹೇಳಿದನು. ॥೩೨೨॥

ದೈತ್ಯಾವೇಶಾದುಜ್ಝಿತಶ್ಯಾಂತಭಾವೋದದೌ ನಿಜಂ ಸ್ಥಾನಮೇಷಾಂ ಸುತುಷ್ಟಃ ।
ಆವಾಸಾರ್ಥಂ ತೇSವಸಂಸ್ತತ್ರ ಪಾರ್ಥಾಸ್ತಥಾSನ್ಯೇಷಾಂ ದೈವತಾನಾಂ ಗೃಹೇಷು ॥೩೨೩॥

ದೈತ್ಯಾವೇಶಾತ್ – ದೈತ್ಯಾವೇಶದಿಂದ, ಉಜ್ಝಿತಃಸನ್ – ದೂರನಾದವನಾಗಿ, ಶಾಂತಭಾವಃಸನ್— ಪ್ರಸನ್ನವಾದ (ಶುದ್ಧವಾದ) ಮನಸ್ಸುಳ್ಳವನಾಗಿ, ಸಂತುಷ್ಟಃ ಸನ್ – ಭೀಮಸೇನದೇವರ ಒಲಕಾರ್ಯದಿಂದ ಅತ್ಯಂತ ಸಂತುಷ್ಟನಾದವನಾಗಿ, ಏಷಾಂ – ಈ ಪಾಂಡವರಿಗೆ, ಆವಾಸಾರ್ಥಂ – ಆವಾಸಕ್ಕಾಗಿ, ನಿಜಂ ಸ್ಥಾನಂ—ತನ್ನ ಸ್ಥಾನ ವನ್ನು, ದದೌ—ಕೊಟ್ಟನು. ತೇ ಪಾರ್ಥಾಃ—ಆ ಪಾಂಡವರು, ತತ್ರ ಆ ಗೃಹದಲ್ಲಿ, ತಥಾ—ಹಾಗೂ, ಅನ್ಯೇಷಾಂ ದೈವತಾನಾಂ ಗೃಹೇಷು – ಇತರ ದೇವತೆಗಳ ಗೃಹಗಳಲ್ಲಿ, ಅವಸನ್—ವಾಸಿಸಿದರು. ॥೩೨೩॥

ಭಾವಾನುವಾದ ೩೦೮_೩೨೩

ಧರ್ಮರಾಜನು ರುದ್ರದೇವರ ಸಿಟ್ಟು ಆದೀತೆಂದು ಶಂಕಿಸಿ ಹೆದರಿಕೊಳ್ಳಲು ಕಾರಣವೇನೆಂದರೆ – ಅನೇಕ ಅಸುರರು ದೇವತೆಗಳಿಂದ ತಮಗೆ ಮರಣ ಬರಬಹುದೆಂದು ಹೆದರಿ ಕುಬೇರನ ಆಶ್ರಯ ಪಡೆದು ಅವನ ಅಪ್ಪಣೆ

ಯಿಂತೆ ಅವನ ಸೌಗಂಧಿಕವನವನ್ನು ಕಾಯಂತ್ತಾ ಇದ್ದರು. ದೇವತೆಯು ವನದಲ್ಲಿರುವಾಗ ತವುಗೆ ದೇವತೆಗಳಿಂದ ಮರಣ ಬರಲಾರದು ಎಂದು ಅವರ ಭಾವವಾಗಿತ್ತು. ಈ ಕುಬೇರನ ಆಶ್ರಯರು ಶ್ರೀರುದ್ರದೇವರು. ಈ ಕುಬೇರನ ವನರಕ್ಷಕರ ಸಂಹಾರಾದಿವಃಡಿ ಅವರ ವನವನ್ನು ಆಕ್ರಮಿಸಿದರೆ ಕುಬೇರ ಸಿಟ್ಟಾಗಿ ತತ್ಕಯಃಕ್ತ ಅವನ ಆಶ್ರಯರಾದ ಶ್ರೀರ.ದ್ರದೇವರು ಸಿಟ್ಟಾಗಬಹುದೆಂದು ಧರ್ಮರಾಜನ ವಿಚಾರ ಆದರೆ ಭೀಮಸೇನರ ಮಾಹಾತ್ಮ್ಯವನ್ನು ತಿಳಿದ ಕುಬೇರ ಮಾತ್ರ ಸಿಟ್ಟಾಗಲಿಲ್ಲ. ಪಾಂಡವರು ಕೆಲ ದಿನ ಅಲ್ಲಿಯೇ ವಾಸಿಸಿದರು. ಭಗವಂತನ ಭೂಭಾರ ಹರಣ ಕಾರ್ಯದಲ್ಲಿ ಶ್ರೀಭೀಮರ ನಂತರ ಪ್ರಧಾನ ಪಾತ್ರಧಾರಿಯಾದ ಶ್ರೀದ್ರೌಪದೀದೇವಿಯರು ಗಾಳಿಯಿಂದ ಕ ಬೇರನ ಗೃಹದಿಂದ ಹಾರಿ ಒಂದು ಬಿದ್ದಿರುವ ಐದು ಬಣ್ಣಗಳಿಂದ ಕೂಡಿರುವ ಪುಷ್ಪಗಳನ್ನು ನೋಡಿ ಇವು ಯಾವ ವನುಷ್ಯನಿಗೂ ಹೋಗ ಲಾಗದ ಕುಬೇರ ಗೃಹದಲ್ಲಿರುವವುಗಳು ಎಂದು ತಿಳಿದೂ ಕೂಡ ಅಲ್ಲಿಗೆ ಹೋಗಲು ಹೇಳುವದರಿಂದ ಅನೇಕ ದುಷ್ಟರ ಸಂಹಾರಕಾರ್ಯವು ಆಗುವದೆಂಬ ಭಾವದಿಂದ 'ನೀವೇ ಅಲ್ಲಿಗೆ ಹೋಗಬೇಕು. ರಾಕ್ಷಸರ ಸಂಹಾರವನ್ನು ಮಾಡಬೇಕು' ಎಂದು ಶ್ರೀಭೀಮರ ಧರ್ಮಯಂಶಸ್ಸ್ಯಗಳ ಅಭಿವೃದ್ಧಿಗಾಗಿ ಹೇಳಿದರು. ಆಗ ಭೀಮಸೇನದೇವರು ಕೂಡಲೇ ಆಯುಂಧಧಾರಿಗಳಾಗಿ ಕುಬೇರನ ಗೃಹದ ಕಡೆಗೆ ಹೋಗಲು ಆ ಪರ್ವತವನ್ನು ಏರಿದರು. ಆ ವನಿಗೆ ಶ್ರೀಭೀಮರು ಬಂದದ್ದನ್ನು ತಿಳಿದ ಮೂರುಪದ್ಮ ಸಂಖ್ಯಾಕರಾದ, ಅವಧ್ಯರಾದ ಆ ಅಸುರರು ರುದ್ರವರದಿಂದ ಅಜೇಯನಾದ ವಣಿವಂತ ದೈತ್ಯನನ್ನು ಮುಂದೆ ಮಾಡಿಕೊಂಡು, ಬಂದು, ಅನೇಕ ಶಸ್ತ್ರಾಸ್ತ್ರ ವೃಷ್ಟಿಯನ್ನು ಮಾಡುತ್ತಾ ಯುದ್ಧ ಮಾಡಿದರು. ಆಗ ಅವರನ್ನೆಲ್ಲ ಬಲಿಷ್ಠರಾದ ಶ್ರೀಭೀವಸೇನದೇವರು ಕ್ಷಣಸಮಯದಲ್ಲಿಯೇ ಸಂಹರಿಸಿದರು: ಪರ್ವತ ವನ್ನು ಏರಿ ಪೂರ್ಣ ತುದಿಯಲ್ಲಿ ನಿಂತರು.

ಭೀಮರಿಂದ ಇಲ್ಲಿ ಹತರಾದ ಇವರು ಹಾಗು ಸೌಗಂಧಿಕವನದಲ್ಲಿ ಹತರಾದವರು ಪ್ರಾಯಃ ಎಲ್ಲರೂ ಅಂಧತವುಸ್ರಿಗೆ ಹೋದರು. ವಣಿವಂತನು ಹಾಗು ಕೀವರು ಪುನಃ ಕಲಿಯುಗದಲ್ಲಿ ಹುಟ್ಟಿ ಬಂದು ಮಿಥ್ಯಾ ಜ್ಞಾನ (ಭ್ರಾಂತಿರೂಪವಾದ ಜ್ಞಾನ ವನ್ನು ಪ್ರಚಾರವಾಡಿ ವೇದಶಾಸ್ತ್ರ, ಭಗವಂತ ಇತ್ಯಾದಿ ಸತ್ತತ್ವಗಳ ಬಗ್ಗೆ ತಪ್ಪು ಜ್ಞಾನವುಂಟಾಗುವಂತೆ ವಾಡಿ ಅಂಧತವುಸ್ರಿಗೆ ಹೋದನು. ಈ ಕಡೆಗೆ ಕುಬೇರನು ತನ್ನ ವನರಕ್ಷಕರಾದ ಮೂರು ಪದ್ಮ ಸಂಖ್ಯಾಕರಾದ ಅಸುರರ ಸಂಹಾರವಾದದ್ದನ್ನು ತಿಳಿದು, ಅಸುರಾವೇಶ ಪ್ರಯುಕ್ತ ಅವರ ಮೇಲಿನ ಕೋಪದಿಂದ ಭೀಮಸೇನರ ಜೊತೆಗೆ ತಾನೇ ಯುದ್ಧ ವಾಡಲು ಬಂದನು. ಅದೇ ಸವಯದಲ್ಲಿ ಸೌಗಂಧಿಕವನದಲ್ಲಿದ್ದ ಧರ್ಮರಾಜನು ಭೀಮರ ಗರ್ಜನಧ್ವನಿಯನ್ನು ಕೇಳಿ, ಶ್ರೀದ್ರೌಪದೀದೇವಿಯನ್ನು ಭೀಮನೆಲ್ಲಿ ? ಎಂದು ಕೇಳಿದನು. ಆಗ ಶ್ರೀ ದ್ರೌಪದೀದೇವಿಯು ಇದ್ದ ವಿಷಯವನ್ನು ತಿಳಿಸಿದಾಗ, ಭೀಮರಿರುವಲ್ಲಿಗೇ ಹೋಗಲು ರಾಕ್ಷಸರ ಹೆಗಲ ಮೇಲಿ ಕುಳಿತು ನಕುಲಸಹದೇವರಿಂಪಕ್ಷ ದ್ರೌಪದೀದೇವಿಯಿಂದ ಸಹಿತನಾಗಿ ಹೋದನು. ಕುಬೇರನು ಧರ್ಮರಾಜ ನನ್ನು ನೋಡಿ ಆ ಹೊತ್ತಿಗೆ ಸ್ವಲ್ಪ ಅಸುರಾವೇಶದಿಂದ ದೂರನಾಗಿ, ಸ್ನೇಹದಿಂದ ಕೂಡಿದವನಾಗಿದ್ದನು ಹೀಗೆ ಸ್ವಲ್ಪ ಪ್ರೀತಿಯೂ ಸ್ವಲ್ಪ ರೋಷವೂ, ಸ್ವಲ್ಪ ಜ್ಞಾನವೂ, ಸ್ವಲ್ಪ ತಪ್ಪು ಜ್ಞಾನವೂ ಇದ್ದವು. ಇದರಿಂದಾಗಿ ಕೈಯಲ್ಲಿ ಗದೆಯನ್ನು ಹಿಡಿದು ನಿಂತಿರುವ ಶ್ರೀಭೀಮರನ್ನು ನೋಡಿಯೂ ಕೂಡ ಅದರಿಂದಲೇ ಇವರೇ ವಣಿವಂತ ಮೊದಲಾದ ಅಸುರರ ಸಂಹಾರ ಮಾಡಿದವರು ಎಂದು ತಿಳಿಯುತ್ತಿದ್ದರೂ ಕೂಡ, ಭೀಮಸೇನದೇವರ ಬಲವನ್ನು ಗೌರವಿಸದೆ ತನ್ನ ಗೆಳೆಯ ವಣಿವಂತನ ಸಂಹಾರಕ್ಕೆ ಕಾರಣವು ಭೀಮನ ಬಲವಲ್ಲ, ಕಿಂತು 'ಗೆಳೆಯನ ನಾಶವಾಗಲಿ' ಎಂಬ ಅಗಸ್ತ್ಯ ಋಷಿಗಳ ಶಾಪವು ಕಾರಣ ಎಂದು ಹೇಳಿದನು. ದೈತ್ಯಾವೇಶದಿಂದ ದೂರನಾದ ಮೇಲೆ ಶುದ್ಧವನಸ್ಕನಾಗಿ, ಭೀಮರ ಸಾಮರ್ಥ್ಯವನ್ನು ಪ್ರಶಂಸಿಸಿ ತನ್ನ ಸ್ಥಾನವನ್ನೇ ಪಾಂಡವರ ವಾಸ ಕ್ಕಾಗಿ ಕೊಟ್ಟನು. ಆ ಪ್ರಕಾರ ಪಾಂಡವರು ಕುಬೇರನ ಗೃಹದಲ್ಲಿಯೂ ಹಾಗೂ ಉಳಿದ ದೇವತೆಗಳ ಗೃಹಗಳ ಲ್ಲಿಯೂ ವಾಸಿಸಿದರು.

ತತ್ರೈವ ತೇಷಾಂ ವಸತಾಂ ಮಹಾತ್ಮನಾಮಾನಂದಿನಾಮಬ್ದಚತುಷ್ಕಯೇ ಗತೇ ।
ಪಂಚಾಬ್ದಮುಧ್ಯಾಪ್ಯ ಮಹಾಂತಿ ಶಸ್ತ್ರಾಣೀಂದ್ರೋ ಗುರ್ವರ್ಥಂ ಫಲ್ಗುನೇನಾರ್ಥಿತೋಽಭೂತ್ ॥೩೨೪॥

ತತ್ರ ಏವ – ಅಲ್ಲಿಯೇ. ವಸತಾಂ—ವಾಸವಾಡಿದ, ಆನಂದಿನಾಂ – ಆನಂದದಿಂದ ಇರುವ, ತೇಷಾಂ ಮಹಾತ್ಮನಾಂ – ಮಹಾತ್ಮರಾದ ಪಾಂಡವರಿಗೆ, ಅಬ್ದಚತುಷ್ಟಯೇ ಗತೇ ಸತಿ – ನಾಲ್ಕು ವರ್ಷಗಳ ಸಮಯವು ಕಳೆಯುತ್ತಿರಲು, ಮಹಾಂತಿ ಅಸ್ತ್ರಾಣಿ – ಶ್ರೇಷ್ಠ ಅಸ್ತ್ರಗಳನ್ನು, ಪಂಚಾಬ್ದಂ— ಐದು ವರ್ಷಗಳಸಮಯದವರ್ಯಂತ, ಅಧ್ಯಾಪ್ಯ – (ಅರ್ಜುನನಿಗೆ)ಅಧ್ಯಯನವಾಡಿಸಿ, ಇಂದ್ರಃ – ದೇವೇಂದ್ರನು, ಫಲ್ಗುನೇನ—ಅರ್ಜುನನಿಂದ, ಗುರ್ವರ್ಥಂ– ಗುರುದಕ್ಷಿಣೆಯ ಬಗ್ಗೆ (ಏನು ಗುರುದಕ್ಷಿಣೆ ಕೊಡಬೇಕೆಂದು) ಅರ್ಥಿತಃ ಅಭೂತ್ – ಪ್ರಾರ್ಥಿಸಲ್ಪಟ್ಟನು. ॥೩೨೪॥

ವಧಂ ವವ್ರೇ ಸ್ವಶತ್ರೂಣಾಮಿಂದ್ರಃ ಪಾರ್ಥಾತ್ಸ್ವರೂಪತಃ ।
ನಿವಾತಕವಚಾಖ್ಯಾನಾಮೇಷಾಂ ಬ್ರಹ್ಮಾದದೌ ವರಮ್ ॥೩೨೫॥

ಆವಧ್ಯತ್ವಂ ಸುರೈರ್ದೈತ್ಯೈರ್ಗಂಧರ್ವೈಃಪಕ್ಷಿರಾಕ್ಷಸೈಃ ।
ಪುನರಿಂದ್ರೇಣಾರ್ಥಿತೋಽದಾತ್ ಜಹೀಮಾನ್ನರದೇಹವಾನ್ ॥೩೨೬॥

ಇತಿ ತೇನಾರ್ಜುನಂ ಶಕ್ರಃ ಸ್ವಾತ್ಮಾನಂ ನರದೇಹಗಂ ।
ಜಗಾದ ತಾನ್ ಜಹೀತ್ಯೇವ ಕಿರೀಟಂ ಸ್ವಂ ನಿಬಧ್ಯ ಚ ॥೩೨೭॥

ಇಂದ್ರಃ – ದೇವೇಂದ್ರನು, ಸ್ವರೂಪತಃ ಪಾರ್ಥಾತ್ – ತನ್ನ ರೂಪನೇ ಆದ ಅರ್ಜುನನ ದೆಸೆಯಿಂದ, ಸ್ವ ಶತ್ರೂಣಾಂ ನಿವಾತಕವಚಾವಚಾಖ್ಯಾನಾಂ ತನ್ನ ಶತ್ರುಗಳಾದ ನಿವಾತಕವಚ ಎಂಬ ರಾಕ್ಷಸರ, ವಧಂ – ಸಂಹಾರವನ್ನು, ವವ್ರೇ – ಅಪೇಕ್ಷಿಸಿದನು. ಅವತಾರಿಕೆಃ— ಅರ್ಜುನನಿಂದ ನಿವಾತಕವಚರ ಸಂಹಾರವನ್ನು ಇಂದ್ರದೇವನು ಅಪೇಕ್ಷಿಸಿದ್ದರ ಕಾರಣವನ್ನು ಹೇಳುವರು – ಬ್ರಹ್ಮಾ – ಚತುರ್ಮುಖಿ ಬ್ರಹ್ಮದೇವರು, ಏಷಾಂ— ಈ ನಿವಾತಕವಚರಿಗೆ ಸುರೈ: ದೈತ್ಯೈ: ಗಂಧರ್ವೈಃ ಪಕ್ಷಿರಾಕ್ಷಸೈಃ ಅವಧ್ಯತ್ವಂ – ದೇವತೆಗಳಿಂದ ದೈತ್ಯರಿಂದ, ಗಂಧರ್ವರಿಂದ ಪಕ್ಷಿರಾಕ್ಷಸರಿಂದ ಅವಧ್ಯತ್ವವನ್ನು (ನಾಶವಾಗದಿರುವಿಕೆಯನ್ನು) ವರಂ – ವರವನ್ನಾಗಿ, ದದೌ – ಕೊಟ್ಟರು. ಪುನಃ – ನಂತರ ಇಂದ್ರೇಣ ಅರ್ಥಿತಃ ಸನ್—ನನ್ನಿಂದ ಸಂಹೃತರಾಗುವಂತಾಗಲಿ ಎಂದು ಇಂದ್ರದೇವರಿಂದ ಪ್ರಾರ್ಥಿತರಾಗಿ, ನರದೇಹವಾನ್—ಮನುಷ್ಯದೇಹವುಳ್ಳ ನೀನು, ಇಮಾನ್ – ಈ ನಿವಾತಕವಚರನ್ನು, ಜಹಿ—ಸಂಹರಿಸು, ಇತಿ— ಎಂದು, ವರಂ ದದೌ—ವರವನ್ನು ಕೊಟ್ಟರು. ತೇನ—ಆ ಕಾರಣದಿಂದ, ಶಕ್ರಃ – ದೇವೇಂದ್ರನು, ನರದೇಹಗಂ – ಮನುಷ್ಯದೇಹದಲ್ಲಿರುವ. ಸ್ವಾತ್ಮಾನಂ – ತನ್ನ ರೂಪನಾದ, ಅರ್ಜುನಂ – ಅರ್ಜುನನನ್ನು ಕುರಿತು, ಸ್ವಂ ಕಿರೀಟಂ- ತನ್ನ ಕಿರೀಟವನ್ನು, ನಿಬಧ್ಯ – (ಅರ್ಜುನನ ತಲೆಯಲ್ಲಿ) ಕಟ್ಟಿ. ತಾನ್—ಆ ನಿವಾತಕವಚರನ್ನು, ಜಹಿ – ಸಂಹರಿಸು, ಇತಿ – ಎಂದು, ಜಗಾದ - ಹೇಳಿದನು. ॥೩೨೫॥೩೨೬॥೩೨೭॥

ಐಂದ್ರಂ ಸ್ಕಂದನಮಾರುಹ್ಯ ಪಾರ್ಥೋ ಮಾತಲಿಸಂಯುತಃ ।
ಗಾಂಡೀವಂ ಧನುರಾದಾಯ ಯಯೌ ಹಂತುಂ ಮಹಾಸುರಾನ್ ॥೩೨೮॥

ಪಾರ್ಥ:—ಅರ್ಜುನನು, ಐಂದ್ರಂ ಸ್ಕಂದನಂ ಆರುಹ್ಯ—ಇಂದ್ರದೇವನ ರಥವನ್ನು ಏರಿ, ಮಾತಲಿ ಸಂಯುತಃ ಸನ್ – ಮಾತಲಿ ಎಂಬ ಸಾರಥಿಯಿಂದ ಕೂಡಿದವನಾಗಿ, ಗಾಂಡೀವಂ ಧನುಃ ಆದಾಯ – ಗಾಂಡೀವ

ಧನುಸ್ಸನ್ನು ತೆಗೆದುಕೊಂಡನು, ಮಹಾಸುರಾನ್ ಹಂತುಂ ಯಯೌ - ನಿವಾತಕವಚರೆಂಬ ಪ್ರಬಲರಾಕ್ಷಸರನ್ನು ಸಂಹರಿಸಲು ಹೊರಟನು. ॥೩೨೮॥

ಶಂಖಂ ದದುಸ್ತಸ್ಯ ದೇವಾ ದೇವದತ್ತಸ್ಯ ಶಂಖರಾಟ್ ।
ನಾದಯನ್‌ಶಂಖಘೋಷೇಣ ಧನುರ್ವಿಷ್ಫಾರಯನ್ ಮಹತ್ ॥೩೨೯॥

ದಧಾನಃ ಕುಂಡಲೇ ದಿವ್ಯೇ ಶಕ್ರದತ್ತೇ ಸುಭಾಸ್ವರೇ ।
ಆಸಸಾದ ಪುರಂ ದಿವ್ಯಂ ದೈತ್ಯಾನಾಮಿಂದ್ರನಂದನಃ ॥೩೩೦॥

ದೇವಾಃ— ದೇವತೆಗಳು, ತಸ್ಯ—ಆ ಅರ್ಜುನನಿಗೆ, ಶಂಖಂ ದದುಃ - ಶಂಖವನ್ನು ಕೊಟ್ಟರು. ತೇನ ಆ ಕಾರಣದಿಂದ, ಸಃ ಶಂಖರಾಟ್ - ಶ್ರೇಷ್ಠವಾದ ಆ ಶಂಖವು, ದೇವದತ್ತಃ;—ದೇವದತ್ತ ಎಂಬ ಹೆಸರುಳ್ಳದ್ದು, ಇಂದ್ರನಂದನಃ—ಇಂದ್ರಪುತ್ರನಾದ ಅರ್ಜುನನು, ಶಂಖಘೋಷೇಣ—ಶಂಖದ ಧ್ವನಿಯಿಂದ, (ದಿಶಃ) ನಾದಯನ್—ದಿಕ್ಕುಗಳನ್ನು ಪ್ರತಿಧ್ವನಿತವನ್ನಾಗಿ ಮಾಡುವವನಾಗಿ, ಮಹತ್ ಧನುಃ ವಿಷ್ಫಾರಯನ್ - ಶ್ರೇಷ್ಠ ಧನುಸ್ಸನ್ನು ಟೇಂಕಾರ ಮಾಡುವವನಾಗಿ ಶಕ್ರದತ್ತೇ ಸುಭಾಸ್ವರೇ ಕುಂಡಲೇ—ಇಂದ್ರನಿಂದ ಕೊಡಲ್ಪಟ್ಟ ಹೊಳೆಯುವ ಕರ್ಣಕುಂಡಲಗಳನ್ನು, ದಧಾನಃ ಸನ್—ಧರಿಸಿದವನಾಗಿ, ದೈತ್ಯಾನಾಂ - ಆ ನಿವಾತಕವಚ ದೈತ್ಯರ, ದಿವ್ಯಂಪುರಂ - ಶ್ರೇಷ್ಠವಾದ ಪಟ್ಟಣಕ್ಕೆ ಆಸಸಾದ—ಒಂದನು. ॥೩೨೯॥೩೩೦॥

ತಸ್ಯ ಶಂಖಧ್ವನಿಂ ಶ್ರುತ್ವಾ ಗಾಂಡೀವಸ್ಯ ಚ ನಿಸ್ವನಮ್ ।
ಅಭಿಸಸ್ರುರ್ಮಹಾವೀರ್ಯಾ ನಿವಾತಕವಚಾಸುರಾಃ ॥೩೩೧॥

ಮಹಾವೀರ್ಯಾಃ — ಮಹಾಪರಾಕ್ರಮಿಗಳಾದ, ನಿವಾತಕವಚಾಸುರಾಃ - ನಿವಾತಕವಚ ಎಂಬ ಅಸುರರು, ತಸ್ಯ ಶಂಖಧ್ವನಿಂ - ಆ ಅರ್ಜುನನ ಶಂಖದ ಧ್ವನಿಯನ್ನು, ಚ - ಮತ್ತು, ಗಾಂಡೀವಸ್ಯನಿಸ್ವನಂ—ಗಾಂಡೀವಧನುಸ್ಸಿನ ಟೇಂಕಾರವನ್ನು, ಶ್ರುತ್ವಾ— ಕೇಳಿ ಅಭಿಸಸ್ರುಃ - ಏರಿ ಬಂದರು. ॥೩೩೧॥

ತಿಸ್ರಃ ಕೋಟ್ಯೋ ದಾನವಾನಾಂ ಸ್ವಯಂಭೂವರಗರ್ವಿತಾಃ ।
ನಾನಾಯುಧೈ ರಣೇ ಪಾರ್ಥಮಭ್ಯವರ್ಷನ್ ಸುಸಂಹತಾಃ ॥೩೩೨॥

ಸ್ವಯಂಭೂವರ ಗರ್ವಿತಾಃ ಬ್ರಹ್ಮದೇವರ ವರದಿಂದ ದರ್ಪವುಳ್ಳವರಾದ, ದಾನವಾನಾಂ ತಿಸ್ರಃ ಕೋಟ್ಯಃ — ಮೂರುಕೋಟಿಸಂಖ್ಯಾಕರಾದ ದಾನವರು, ಸುಸಂಹತಾಃ ಸಂತಃ — ಒಟ್ಟಾದವರಾಗಿ, ರಣೇ — ಯುದ್ಧದಲ್ಲಿ ನಾನಾಯುಧೈಃ; - ಅನೇಕ ಆಯುಧಗಳಿಂದ, ಪಾರ್ಥಂ ಅಭ್ಯವರ್ಷನ್ — ಅರ್ಜುನನ ಮೇಲೆ ಸುರಿಮಳೆ ಮಾಡಿದರು. ॥೩೩೨॥

ತೇಷಾಂ ಸ ಶಸ್ತ್ರಾಣಿ ಕಿರೀಟಮಾಲೀನಿವಾರ್ಯ ಗಾಂಡೀವಧನುಃಪ್ರಮುಕ್ತೈಃ ।
ಶರೈಶ್ಶಿರಾಂಸಿ ಪ್ರಚಕರ್ತ ವೀರೋ ಮಹಾಸ್ತ್ರಶಿಕ್ಷಾಬಲಸಂಪ್ರಯುಕ್ತೈಃ ॥೩೩೩॥

ಕಿರೀಟಮಾಲೀ ಸಃ ವೀರಃ - ಕಿರೀಟಮಾಲೆಗಳನ್ನು ಧರಿಸಿದ ವೀರನಾದ ಆ ಅರ್ಜುನನು, ಮಹಾಸ್ತ್ರ ಶಿಕ್ಷಾಬಲಸಂಪ್ರಯುಕ್ತೈಃ — ಶ್ರೇಷ್ಠವಾದ ತನ್ನ ಅಸ್ತ್ರನೈಪುಣ್ಯ ಹಾಗು ಶಕ್ತಿ ಇವುಗಳಿಂದ, ಪ್ರಯೋಗಿಸಿದ, ಗಾಂಡೀವ ಧನುಃ

ಪ್ರಮುಕ್ತೈ: – ಗಾಂಡೀವಧನುಸ್ಸಿನಿಂದ ಬಿಡಲ್ಪಟ್ಟ ಶರೈ: – ಬಾಣಗಳಿಂದ, ತೇಷಾಂ ಶಸ್ತ್ರಾಣಿ—ಅವರ ಆಯುಧ ಗಳನ್ನು, ನಿವಾರ್ಯ ತಡೆದು, ನಾಶವಾಡಿ, ಶಿರಾಂಸಿ–ಆ ದಾನವರ ತಲೆಗಳನ್ನು, ಪ್ರಚಕರ್ತ–ಕತ್ತರಿಸಿದನು. ॥೩೩೩॥

ಸರ್ವೇ ಹತಾಸ್ತೇನ ಮಹಾರಥೇನ ತೇ ದಾನವಾಸ್ಸೋಽಪಿಯಯೌ ತಥಾಽನ್ಯಾನ್ ।
ಪೌಲೋಮಕಾಲೇಯ ಗಣಾಭಿಧಾನಾನ್‌ಷಷ್ಟಿಂ ಸಹಸ್ರಾಣಿ ಮಹಾರಥಾನಾಮ್ ॥೩೩೪॥

ಮಹಾರಥೇ ನ ತೇನ—ಮಹಾರಥಿಯಾದ ಆ ಅರ್ಜುನನೀಂದ, ತೇ ಸರ್ವೇದಾನವಾ:—ಆ ಎಲ್ಲ ದಾನವರೂ, ಹತಾ: – ಸಂಹರಿಸಲ್ಪಟ್ಟರು. ಸಃ ಅಪಿ – ಆ ಅರ್ಜುನನಾದರೂ ಕೂಡ, ತಥಾ – ನಿವಾತಕವಚರ ಹತ್ತಿರ ಬಂದಂತೆ, ಅನ್ಯಾನ್ – ಬೇರೆಯಾದಂಥ, ಪೌಲೋಮಕಾಲೇಯಗಣಾಭಿಧಾನಾನ್ ಪೌಲೋಮಕಾಲೇಯಗಣ ಎಂಬ ಹೆಸರುಳ್ಳ, ಮಹಾರಥಾನಾಂ ಸಹಸ್ರಾಣಿ ಷಷ್ಟಿಂ—ಮಹಾರಥರಾದ ಅರವತ್ತು ಸಾವಿರ ರಾಕ್ಷಸರಸಮೂಹವನ್ನು ಕರಿತರು, ಯಯೌ—ಹೋದನು ॥೩೩೪॥

ತಾನಸ್ತ್ರಶಸ್ತ್ರಾಣ್ಯಭಿವರ್ಷಮಾಣಾನ್ ಧನಂಜಯಃಪಾಶುಪತಾಸ್ತ್ರತೋದ್ರಾಕ್ ।
ದಗ್ಧ್ವಾಯಯೌ ಪುನರೇವೇಂದ್ರಸದ್ಮತಂ ಸಸ್ವಜೇಪ್ರೀತಿಯುಕ್ತಶ್ಚ ಶಕ್ರಃ ॥೩೩೫॥

ಧನಂಜಯಃ – ಅರ್ಜುನನು, ಅಸ್ತ್ರಶಸ್ತ್ರಾಣಿ ಅಭಿವರ್ಷಮಾಣಾನ್—ಅಸ್ತ್ರಶಸ್ತ್ರಗಳನ್ನು ಬಹಳ ಸುರಿಮಳೆಗರೆಯುವ, ತಾನ್ – ಅವರನ್ನು, ದ್ರಾಕ್ – ಬೇಗನೇ, ಪಾಶುಪತಾಸ್ತ್ರತಃ - ಪಾಶುಪತಾಸ್ತ್ರದಿಂದ, ದಗ್ಧ್ವಾ ಸುಟ್ಟು, ಪುನಃ – ಮತ್ತೆ, ಇಂದ್ರಸದ್ಮ ಏವ – ಇಂದ್ರನ ಲೋಕಕ್ಕೆಯೇ, ಯಯೌ—ಹೋದನು. ಶಕ್ರಃ ಚ – ದೇವೇಂದ್ರನೂ ಕೂಡ, ಪ್ರೀತಿಯುಕ್ತಃ ಸನ್ – ಅರ್ಜುನನ ಕಾರ್ಯದಿಂದ ಸಂತೋಷಪಟ್ಟವನಾಗಿ, ತಂ—ಆ ಅರ್ಜುನನನ್ನು, ಸಸ್ವಜೇ—ಆಲಿಂಗಿಸಿಕೊಂಡನು. ॥೩೩೫॥

ಭಾವಾನುವಾದ ೩೨೪—೩೩೫

ಪಾಂಡವರು ಹೀಗೆ ಆ ದೇವತೆಗಳ ಗೃಹಗಳಲ್ಲಿ ವಾಸಿಸುತ್ತಾ ನಾಲ್ಕು ವರ್ಷಗಳನ್ನು ಕಳೆದರು. ಆ ಕಡೆಗೆ ಸ್ವರ್ಗದಲ್ಲಿ ಅರ್ಜುನನು ಐದುವರ್ಷಗಳವರೆಗೆ ಮಹಾ ಅಸ್ತ್ರಗಳನ್ನು ಇಂದ್ರದೇವರಿಂದ ಅಭ್ಯಸಿಸಿ ಗುರುದಕ್ಷಿಣೆ ಏನಾದರೂ ಕೊಡಬೇಕು ಎಂಬ ಭಾವದಿಂದ ಏನು ಕೊಡಬೇಕೆಂದು ಕೇಳಿದನು. ಆಗ ಇಂದ್ರದೇವರು ತನ್ನ ವೈರಿ ಗಳ ದ, ಬ್ರಹ್ಮದೇವರ ವರದಿಂದ ದೇವತೆಗಳು ಈ ಮೊದಲಾಗಿ ಯಾರಿಂದಲೂ ಅವಧ್ಯರಾದ, ಆದರೆ ತಾನು ಬ್ರಹ್ಮದೇವರನ್ನು ಪ್ರಾರ್ಥಿಸಿದಾಗ ಅವರ ವರದಂತೆ ಮನುಷ್ಯರೂಪದಲ್ಲಿರುವ ಇಂದ್ರನಿಂದ(ಅರ್ಜುನನಿಂದ) ವಧೆ ಹೊಂದಲು ಶಕ್ಯರಾದ ನಿವಾತಕವಚ ಎಂಬ ದಾನವರನ್ನು ಸಂಹರಿಸು ಎಂದು ಹೇಳಿದರು. ತನ್ನ ಕಿರೀಟವನ್ನು ಅರ್ಜುನನಿಗೆ ಕಟ್ಟಿದನು. ಅರ್ಜುನನು ಇಂದ್ರದೇವರ ರಥವನ್ನೇರಿ ಅವರ ಸಾರಥಿ ಮಾತಲಿಯನ್ನು ಕರೆದು ಕೊಂಡು ಗಾಂಡೀವಧನುರ್ಧಾರಿಯಾಗಿ ಯುದ್ಧಕ್ಕೆ ಹೊರಟಾಗ ದೇವತೆಗಳು ಅರ್ಜುನನಿಗೆ ಶ್ರೇಷ್ಠವಾದ ಶಂಖ ವನ್ನು ಇತ್ತರು. ದೇವತೆಗಳಿಂದ ದತ್ತವಾದ್ದರಿಂದ ಆ ಶಂಖಕ್ಕೆ ದೇವದತ್ತ ಎಂಬ ಹೆಸರು ಬಂದಿದೆ. ಆ ಶಂಖ ವನ್ನು ಊದುತ್ತಾ ಇಂದ್ರದೇವರು ಕೊಟ್ಟ ಕರ್ಣಕಠೋರಗಳನ್ನು ಧರಿಸಿ ಧನುಷ್ಟೇಂಕಾರ ಮಾಡುತ್ತಾ ಆ ನಿವಾತ

ಕವಚರ ಊರಿಗೆ ಬಂದನು. ಅವನ ಶಂಖಧ್ವನಿಯನ್ನು ಕೇಳಿದ ಅವರು ಒಟ್ಟಾಗಿ ಯುದ್ಧಕ್ಕೆ ಬಂದರು. ಅಸ್ತ್ರ ಶಸ್ತ್ರಗಳ ವೃಷ್ಟಿಯನ್ನು ಮಾಡಿದರು. ಅವನ್ನೆಲ್ಲ ಪ್ರತಿಪ್ರಬಲಅಸ್ತ್ರಪೂರ್ವಕ ಶರಗಳಿಂದ ನಾಶಪಡಿಸಿ ಅವರೆಲ್ಲರ ಶಿರಶ್ಛೇದನ ಮಾಡಿದರು. ಆ ಮೂರುಕೋಟಿ ಸಂಖ್ಯಾಕ ದಾನವರೆಲ್ಲರೂ ಸತ್ತರು. ನಂತರ ಅರ್ಜುನನು ಇದರಂತೆ ಪೌಲೋಮ ಕಾಲಕೇಯಗಣದ ಅರವತ್ತು ಸಹಸ್ರ ರಾಕ್ಷಸರ ಹತ್ತಿರ ಯುದ್ಧಕ್ಕೆ ಹೋಗಿ ಅವರನ್ನೂ ಸಂಹರಿಸಿ ಮತ್ತೆ ಸ್ವರ್ಗಕ್ಕೆ ವಾಪಸ್ ಬಂದನು. ಎಲ್ಲ ವಾರ್ತೆಯನ್ನು ಕೇಳಿದ ಇಂದ್ರನು ಸಂತೋಷದಿಂದ ಅರ್ಜುನನನ್ನು ಆಲಿಂಗಿಸಿದನು.

ಯುಯುರಂಧಂತವಸ್ತೇಽಪಿ ಸರ್ವೇ ದೇವದ್ವಿಷೋಽಸುರಾಃ ।
ಅಥಾನುಜ್ಞಾಪ್ಯ ಪಿತರಂ ರಥೇನೈಂದ್ರೇಣ ಭಾಸ್ವತಾ ॥೩೩೬॥

ಸೋದರ್ಯಾಣಾಂ ಸಕಾಶಂ ಸ ಯಯೌ ವಜ್ರಧರಾತ್ಮಜಃ ॥೩೩೭॥

ತೇ ಸರ್ವೇ ಅಪಿ ದೇವದ್ವಿಷಃ ಅಸುರಾಃ—ಅರ್ಜುನನಿಂದ ಸಂಹೃತರಾದ, ದೇವದ್ವೇಷಿಗಳಾದ ಆ ಎಲ್ಲ ಅಸುರರೂ, ಅಂಧಂತವ : ಯಯುಃ – ಅಂಧಂತಮಸ್ಸಿಗೆ ಹೋದರು, ಸ: ವಜ್ರಧರಾತ್ಮಜಃ – ವಜ್ರಾಯುಧಧಾರಿ ಇಂದ್ರನ ಅವತಾರನಾದ ಆ ಅರ್ಜುನನು, ಅಥ – ಆಮೇಲೆ, ಪಿತರಂ—ತಂದೆಯಾದ ಇಂದ್ರದೇವನನ್ನು, ಅನುಜ್ಞಾಪ್ಯ – ತಾನು ಸ್ವರ್ಗದಿಂದ ಹೊರಡಲು ಅನುಜ್ಞೆಗಾಗಿ ಪ್ರಾರ್ಥಿಸಿ, ಭಾಸ್ವತಾ ಐಂದ್ರೇಣ ರಥೇನ – ಹೊಳೆಯುತಕ್ಕಂಥ ಇಂದ್ರದೇವನ ರಥದಿಂದ, ಸೋದರ್ಯಾಣಾಂ ಸಕಾಶಂ—ಸಹೋದರರ ಸಮೀಪಕ್ಕೆ, ಯಯೌ – ಹೋದನು. ॥೩೩೬-೩೩೭॥

ಅಯಾಂತಮೀಕ್ಷ್ಯ ಬೀಭತ್ಸುಂ ಮುಮುದುರ್ಭ್ರಾತರೋಽಧಿಕಮ್ ।
ಊಷುಶ್ಚ ಚತುರೋಽಬ್ದಾಂಸ್ತೇ ಪುನರ್ಮೇರೌ ಪ್ರಮೋದಿನಃ ॥೩೩೮॥

ಅಯಾಂತಂ ಬೀಭತ್ಸುಂ ಈಕ್ಷ್ಯ – ಬಂದಂಥ ಅರ್ಜುನನನ್ನು ನೋಡಿ, ಭ್ರಾತರಃ – ಸಹೋದರರು, ಅಧಿಕಂ ಮುಮುದುಃ – ಬಹಳ ಸಂತೋಷಪಟ್ಟರು, ತೇ – ಅವರೆಲ್ಲ, ಪುನಃ ಚ ಅರ್ಜುನನು ಬಂದನಂತರವೂ ಕೂಡ, ಚತುರಃ ಅಬ್ದಾನ್ – ನಾಲ್ಕು ವರ್ಷಗಳ ಪರ್ಯಂತವಾಗಿ, ಮೇರೌ – ಮೇರುಪರ್ವತದಲ್ಲಿ, ಪ್ರಮೋದಿನಃ ಸಂತಃ – ಸಂತೋಷವುಳ್ಳವರಾಗಿ, ಊಷುಃ: ವಾಸಮಾಡಿದರು. ॥೩೩೮॥

ಕಥಾಭಿರ್ವಾಸುದೇವಸ್ಯ ಧ್ಯಾನೇನಾಭ್ಯರ್ಚನೇನ ಚ ।
ಯಯೌ ಕಾಲಸ್ತ್ವಖೇನೈವ ತೇಷಾಂ ವಿಷ್ಣ್ವರತಾತ್ಮನಾಮ್ ॥೩೩೯॥

ವಿಷ್ಣ್ವರತಾತ್ಮನಾಂ – ವಿಷ್ಣುವಿನಲ್ಲಿ ಆಸಕ್ತಮನಸ್ಕರಾದ, ತೇಷಾಂ – ಆ ಪಾಂಡವರಿಗೆ, ಕಾಲಃ – ಸಮಯವು ವಾಸುದೇವಸ್ಯ ಕಥಾಭಿಃ—ಶ್ರೀಹರಿಯ ಗುಣಗಾನಗಳಿಂದ, ವಾಸುದೇವಸ್ಯ ಧ್ಯಾನೇನ ಅರ್ಚನೇನ ಚ—ಶ್ರೀಹರಿಯ ಧ್ಯಾನದಿಂದ ಪೂಜೆಯಿಂದ, ಸುಖೇನ ಏವ – ಸುಖದಿಂದಲೇ (ಸುಖವಾಗಿಯೇ), ಯಯೌ – ಕಳೆಯಿತು. ॥೩೩೯॥

ಅವತಾರಿಕೆ :— ೧೩ ವರ್ಷಗಳ ನಂತರ ಯಂದ್ದ ಕರ್ತವ್ಯವನ್ನು ಮಾಡಲೇಬೇಕೆಂದೂ ಧರ್ಮರಾಜನಿಗೆ ಸ್ಮರಣೆಗೆ ತಂದುಕೊಡುವದಕ್ಕಾಗಿ ಶ್ರೀ ಭೀಮರು ಹೇಳುತ್ತಿದ್ದಾರೆ.

ನೈವಶತ್ರೂನನುತ್ಸಾದ್ಯ ನಾನಾದಾಯ ಮಹದ್ಯಶ: ।
ನಾಕೃತ್ವಾ ವಾಸುದೇವಾಜ್ಞಾಂ ರಾಜ್ಞಾಂ ಮುಖ್ಯಾಗತಿರ್ಭವೇತ್ ॥೩೪೦॥

ಶತ್ರೂನ್ ಅನುತ್ಸಾದ್ಯ – ಶತ್ರುಗಳ ಸಂಹಾರ ಮಾಡದೆಯೇ, ಮಹತ್ ಯಶ:—ಶ್ರೇಷ್ಠವಾದ ಸಾತ್ವಿಕ ಕೀರ್ತಿಯನ್ನು, (ದೇವತೆಗಳ ವರವಿರುವಂಥ ದುಷ್ಟರ ಸಂಹಾರಾದಿಗಳಿಂದ ಬರುವ ಕೀರ್ತಿಯನ್ನು) ಅನಾದಾಯ – ಸಂಪಾದಿಸದೇ, ವಾಸುದೇವಾಜ್ಞಾಂ—ಶ್ರೀಹರಿಯ ಆಜ್ಞೆಯನ್ನು, (ಆಜ್ಞಾರೂಪವಾದ ಶ್ರುತಿಸ್ಮೃತಿಗಳಲ್ಲಿ ಹೇಳಿದ ಕರ್ತವ್ಯಗಳನ್ನು,) ಅಕೃತ್ವಾ – ನಡೆಸದೆಯೇ (ಮಾಡದೇ), ರಾಜ್ಞಾಂ—ಕ್ಷತ್ರಿಯರಿಗೆ, ಮುಖ್ಯಾ ಗತಿ:—ಮುಖ್ಯ ಗತಿಯಾದ ಮೋಕ್ಷವು, ನೈವಭವೇತ್, ನಭವೇತ್, ನಭವೇತ್ – ಆಗಲಾರದು, ಆಗಲಾರದು, ಆಗಲಾರದು (ಇದು ನಿಶ್ಚಯವು) ॥೩೪೦॥

ತದನ್ಯೇಷಾಂ ತು ವರ್ಣಾನಾಂ ಕ್ಷಮಾ ಬಾಹ್ಯೇಷು ಶತ್ರುಷು ।
ಪ್ರಾಯೋ ಧರ್ಮ ಇತಿಪ್ರೋಕ್ತೋ ಹರೇರಾಜ್ಞಾsಖಿಲಸ್ಯ ಚ ॥೩೪೧॥

ತದನ್ಯೇಷಾಂ ವರ್ಣಾನಾಂ—ಕ್ಷತ್ರಿಯರಿಂದ ಬೇರೆಯವರಾದ ಬ್ರಾಹ್ಮಣ ವೈಶ್ಯಾದಿಗಳಿಗೆ, ತು – ಕ್ಷತ್ರಿಯರಿಗಿಂತ ಬೇರೆಯಾಗಿ ಕ್ಷಮಾ ಎಂಬುದು ಧರ್ಮವೆಂದು ಇದ್ದರೂ ಕೂಡ, ಬಾಹ್ಯೇಷು ಶತ್ರುಷು—ಹೊರಗಿನ ಶತ್ರುಗಳ ಬಗ್ಗೆ, ಪ್ರಾಯೋಧರ್ಮ:—ಪ್ರಾಯ: ಧರ್ಮವಾಗುವದು. (ಅಂದರೆ ಆಂತರಿಕ ಶತ್ರುಗಳಾದ ಕಾಮ ಕ್ರೋಧಾದಿಗಳನ್ನು ~~ಸರ್ವಥಾ ಕ್ಷಮಿಸಕೂಡದು, ಅವುಗಳ~~ ನಿಗ್ರಹ ಮಾಡಲೇಬೇಕು ಎಂದು ಭಾವ.) ಹೊರಗಿನ ಶತ್ರುಗಳ ಬಗ್ಗೆಯೂ ಕೂಡ ಒಮ್ಮೊಮ್ಮೆ ಕ್ಷಮಾ ಬಿಡುವದು, (ಧರ್ಮಾಚರಣೆಗೆ ವಿರುದ್ಧರಾದ ಬಾಹ್ಯವೈರಿಗಳ ಬಗ್ಗೆ ಕ್ಷಮೆ ಮಾಡದಿರುವದೂ ಕೂಡ ಧರ್ಮವೇ ಎಂದು ಭಾವ.) ಹರೇ: ಆಜ್ಞಾ—ಶ್ರೀಹರಿಯ ಆಜ್ಞೆಯನ್ನು ನಡೆಸುವದು, ಅಖಿಲಸ್ಯ—ಎಲ್ಲ ವರ್ಣಾಶ್ರಮದವರಿಗೂ, ಧರ್ಮ: ಇತಿ ಪ್ರೋಕ್ತ:—ಧರ್ಮವೆಂದು ಹೇಳಲ್ಪಟ್ಟಿದೆ. ॥೩೪೧॥

ಇತಿಭೀಮವಚ: ಶ್ರುತ್ವಾ ಸಸೋದರ್ಯೋ ಯುಧಿಷ್ಠಿರ: ।
ರಾಕ್ಷಸಸ್ಕಂಧಮಾರೂಢ: ಕೃಷ್ಣಯಾ ಚಾಯಯೌ ಪುನ: ॥೩೪೨॥

ಯುಧಿಷ್ಠಿರ:—ಧರ್ಮರಾಜನು, ಇತಿ – ಈ ರೀತಿಯಾದ, ಭೀಮವಚ:—ಭೀಮಸೇನದೇವರ ಮಾತನ್ನು, ಶ್ರುತ್ವಾ—ಕೇಳಿ, ಸಸೋದರ್ಯ:—ಸಹೋದರರಿಂದ ಸಹಿತನಾಗಿ, ಕೃಷ್ಣಯಾ ಚ—ದ್ರೌಪದೀದೇವಿಯಿಂದಲೂ ಸಹಿತನಾಗಿ, ರಾಕ್ಷಸಸ್ಕಂಧಂ ಆರೂಢ: ಸನ್ – ಘಟೋತ್ಕಚಾದಿಗಳ ಹೆಗಲನ್ನೇರಿ, ಪುನ: ಆಯಯೌ—ಹೋದ ದಾರಿಯನ್ನು ಅನುಸರಿಸಿ ಹಿಂತಿರುಗಿ ಬಂದನು. ॥೩೪೨॥

ಪಾದೇಷು ತೇಷು ನಿವಸತ್ಸು ಹಿಮಾಚಲಸ್ಯ ಯಾಮ್ಯಾಶ್ರಿತೇಷು ಪವಮಾನಸುತ: ಕದಾಚಿತ್।
ಧನ್ವೀ ಮೃಗಾನನುಚರನ್ಸಹಸಾssಸಸಾದ ಹಾssಯೋಸ್ಸುತಂ ನಹುಷಮಾಜಗರೋರುರೂಪಮ್ ॥೩೪೩॥

ತೇಷಂ — ಆ ಪಾಂಡವರಂ. ಹಿಮವಾಚಲಸ್ಯ ಯಾವತ್ಯಾಶ್ರೀತೇಷಂ ಪಾದೇಷಂ – ಹಿಮವಾಲಯದ ದಕ್ಷಿಣ ದಿಕ್ಕಿನ (ಪ್ರಾಂತ ಭಾಗಗಳಲ್ಲಿ) ಅಡಿಯಂಲ್ಲಿರುವ ಪ್ರದೇಶಗಳಲ್ಲಿ, ನಿವಸತ್ಸು – ಸತ್ಸು — ವಾಸಿಸಿರುತ್ತಿರಲು, ಕದಾಚಿತ್-ಒಮ್ಮೆ, ಪವಮಾನಸುತಃ — ವಾಯುಪುತ್ರರಾದ ಶ್ರೀಭೀಮಸೇನದೇವರು, ಧನ್ವಿಸನ್ ಧನರ್ಧಾರಿಗಳಾಗಿ, ಮೃಗಾನ್ ಅನುಚರನ್ಸನ್ - ಬೇಟೆಗಾಗಿ ಮೃಗಗಳನ್ನು ಬೆನ್ನಹತ್ತುವವರಾಗಿ, ಆಜಗರೋರುರೂಪಂ – ದೊಡ್ಡ ಹಬ್ಬಾವಿನ ರೂಪದಲ್ಲಿರುವ, ಆಯೋಃ ಸುತಂ—ಆಯುರಾಜನ ಮಗನಾದ. ನಹುಷಂ—ನಹುಷರಾಜನನ್ನು, ಸಹಸಾ — ಒಮ್ಮೆಲೆ, ದೈವೇಚ್ಛೆಯಂತೆ, ಆಸಸಾದ – ಹೊಂದಿದರು. ॥೩೪೩॥

ಪೂರ್ವಂಹಿ ವೃತ್ರವಧತೋಽಂಬುಜನಾಲತಂತು ಸಂಸ್ಥೇ ಶಚೀ ಪ್ರಣಯಿನಿ ಪ್ರವಿಚಿಂತ್ಯ ದೇವಾಃ ।
ಚಕ್ರುಸ್ತ್ರಿಲೋಕಪತಿ ಮಾಯುಸುತಂ ವರಂ ಚ ದತ್ವಾಽಕ್ಷಿಗೋಚರ ತಪೋಽಸ್ಯ ಬಲಂ ಚ ಸರ್ವಂ ॥೩೪೪॥

ಪೂರ್ವಂ—ಹಿಂದೆ, ವೃತ್ರವಧತಃ—ವೃತ್ರಾಸುರನ ವಧವಾಡಿದ್ದರಿಂದ, ಶಚೀಪ್ರಣಯಿನಿ – ಶಚೀಪತಿಯಾದ ಇಂದ್ರನು, ಅಂಬುಜನಾಲತಂತುಸಂಸ್ಥೇ ಸತಿ—ಕಮಲದನಾಳದ ತಂತುವಿನಲ್ಲಿರುತ್ತಿರಲು, (ವೃತ್ರವಧದಿಂದ ದೋಷವು ಬಾರದ್ದಿದ್ದರೂ ಬ್ರಾಹ್ಮಣಹತ್ಯೆಯಂ ದೋಷವು: ಅದನ್ನು ಮಾಡಬಾರದು ಎಂದು ಲೋಕಕ್ಕೆ ತಿಳಿಸುವದಕ್ಕಾಗಿ, ಹೆದರಿದಂತೆ ನಟಿಸಿ ಕಮಲ ನಾಳದಲ್ಲಿ ಅಡಗಿರುತ್ತಿರಲು), ಹೀಗಾಗಿ ಸ್ವರ್ಗ ಸಿಂಹಾಸನವು ಖಾಲಿಯಾಗುತ್ತಿರಲು, ದೇವಾಃ – ದೇವತೆಗಳು, ಪ್ರವಿಚಿಂತ್ಯ—ಈಗ ಈ ಸ್ಥಾನಕ್ಕೆ ಬರಲು ಅರ್ಹನಾರು ಎಂದು ವಿಚಾರಿಸಿ, ಆ ಯಂಸುತಂ (ಬಹುಯಾಗಗಳನ್ನು ಮಾಡಿ ಭೂಮಿಯಲ್ಲಿರುವ) ಆಯುಸುತನಾದ ನಹುಷನನ್ನು (ಅರ್ಹನನ್ನಾಗಿ ತಿಳಿದು) ಚ-ಮತ್ತು, ಆ ಪದವಿಯ ವಿಶೇಷ ಅರ್ಹತೆಯಂ ಇರುವದಕ್ಕಾಗಿ ಸರ್ವಂ ಅಕ್ಷಿಗೋಚರಂ ತಪಃ - ಬಲಂ ಚ-ದೃಷ್ಟಿ ಬಿಳುವ ವರ ಎಲ್ಲ ತಪಸ್ಸು ಹಾಗ ಬಲಗಳನ್ನು, ಅಸ್ಯ ವರಂ – ಈ ನಹುಷನಿಗೆ, ವರವಾಗಿ ದತ್ವಾ—ಕೊಟ್ಟು ತ್ರಿಲೋಕಪತಿಂ – ಮೂರುಲೋಕಗಳ ಪತಿಯನ್ನಾಗಿ ಸ್ವರ್ಗಾಧಿಪತಿಯನ್ನಾಗಿ, ಚಕ್ರುಃ – ಮಾಡಿದರು, ॥೩೪೪॥

ಅವತಾರಿಕೆ – ನಹುಷನು ಅಜಗರನಾಗಿ ಬಿಳಲು ಪೂರ್ವ ಕಾರಣವನ್ನು ತಿಳಿಸುತ್ತಾರೆ.

ಸ ಸರ್ವಸುರ ವಿಪ್ರೇಂದ್ರತಪಶ್ಚ ಬಲಮುಕ್ಷಯಮ್ ।
ಅವಾಪ್ಯ ವವೃಧೇ ನಿತ್ಯಂ ದರ್ಪಾದೈಚ್ಛಚ್ಛಚೀಮಪಿ ॥೩೪೫॥

ಸಃ – ಆ ನಹುಷರಾಜನು, ಸರ್ವಸುರವಿಪ್ರೇಂದ್ರತಪಃ—ಎಲ್ಲ ದೇವತಾಬ್ರಾಹ್ಮಣರ ತಪಸ್ಸನ್ನು ಅಕ್ಷಯಂ ಬಲಂ ಚ ಅಕ್ಷಯವಾದ ಬಲವನ್ನೂ ಕೂಡ, ನಿತ್ಯಂ ಅವಾಪ್ಯ—ನಿತ್ಯವೂ ಹೊಂದಿ, ವವೃಧೇ – ತಪಸ್ಸು ಬಲಗಳಿಂದ ಬೆಳೆದನು. ದರ್ಪಾತ್—ಅಹಂಕಾರದಿಂದ ಶಚೀಂ ಅಪಿ—ಶಚೀದೇವಿಯನ್ನೂ ಕೂಡ, ಐಚ್ಛತ್ – ಇಚ್ಛಿಸಿದನು. ॥೩೪೫॥

ಸ ಇಂದ್ರವಚನಾಚ್ಛಚ್ಯಾ ಮಹರ್ಷಿಗಣವಾಹನೇ ।
ನಿಯುಕ್ತೋ ವಂಚನಾಯೈವ ವಾಹಯಾಮಾಸ ತಾನ್ಋಷೀನ್ ॥೩೪೬॥

ಸಃ – ಆ ನಹುಷರಾಜನು, ಇಂದ್ರವಚನಾತ್ – ಇಂದ್ರದೇವರು ಹೇಳಿಕೊಟ್ಟ ಮಾತಿನಪ್ರಕಾರ, ಶಚ್ಯಾ-ಶಚೀದೇವಿಯಿಂದ, ವಂಚನಾಯ ಏವ – ವಂಚನೆಗಾಗಿಯೇ. ಮಹರ್ಷಿ ಗಣವಾಹನೇ— ಮಹರ್ಷಿಗಳ ಸಮೂಹದಿಂದ ತನ್ನ ಮೋಣೆಯನ್ನು ಹೊರಿಸಿಕೊಳ್ಳುವ ಕಾರ್ಯದಲ್ಲಿ, ನಿಯುಕ್ತಃಸನ್ ತೊಡಗಿಸಲ್ಪಟ್ಟವನಾಗಿ, ತಾನ್ ಋಷೀನ್— ಅಗಸ್ತ್ಯಾದಿ ಮಹರ್ಷಿಗಳನ್ನು, (ಬ್ರಹರ್ಷಿಗಳ ಕಡೆಯಿಂದ), (ತನ್ನ ಶಿಬಿಕಾವನ್ನು) ವಾಹಯಾಮಾಸ— ಹೊರಿಸಿದನು. (ಹೊರಲುಹೇಳಿದನು) ॥೩೪೬॥

ಸ ಶಚೀಪ್ರತಿಷೇಧಾರ್ಥಮಗಸ್ತ್ಯೇನ ಮಹಾತ್ಮನಾ ।
ವೇದಪ್ರಾಮಾಣ್ಯವಿಷಯೇ ಪೃಷ್ಟೋ ನೇತ್ಯಾಹ ಮೂಢಧೀಃ।
ಪ್ರಮಾಣಮಿತಿ ತೇನೋಕ್ತೇ ಶಿರಸ್ಯೇನಂಪದಾSಹನತ್ ॥೩೪೭॥

ಸಃ – ಆ ನಹುಷನು, ಶಚೀಪ್ರತಿಷೇಧಾರ್ಥಂ – ಶಚೀದೇವಿಯ ರಮಣ ನಿಷೇಧಕ್ಕಾಗಿ, ಮಹಾತ್ಮನಾ ಅಗಸ್ತ್ಯೇನ—ಮಹಾತ್ಮರಾದ ಅಗಸ್ತ್ಯಮಹರ್ಷಿಗಳಿಂದ, ವೇದಪ್ರಾಮಾಣ್ಯವಿಷಯೇ – ವೇದಪ್ರಾಮಾಣ್ಯದ ವಿಷಯದಲ್ಲಿ, ಪೃಷ್ಟಃ ಸನ್ – ಕೇಳಲ್ಪಟ್ಟವನಾಗಿ, ನ ಇತಿ – ಪ್ರಮಾಣವಲ್ಲ ಎಂದು ಅಹ – ಹೇಳಿದನು. ಪ್ರಮಾಣಂ ಇತಿ ವೇದಗಳು ಪ್ರಮಾಣಗಳೇ ಎಂದು, ತೇನ – ಅಗಸ್ತ್ಯಋಷಿಗಳಿಂದ ಉಕ್ತೇ ಸತಿ – ಹೇಳಲ್ಪಡುತ್ತಿರಲು, ಮೂಢಧೀಃ– ಮೂರ್ಖನಾದ (ಕಾಮುಪ್ರಯುಕ್ತವಾಗಿ ಶಾಸ್ತ್ರ ಸಮ್ಮೋಹಕ್ಕೊಳಗಾದ.) ಆ ನಹುಷನು, ಏನಂ – ಈ ಅಗಸ್ತ್ಯರನ್ನು, ಶಿರಸಿ – ತಲೆಯಲ್ಲಿ, ಪದಾ–ಕಾಲಿನಿಂದ ಅಹನತ್ – ಒದ್ದನು. ॥೩೪೭॥

ತದಾ ಭೃಗುಂ ತಸ್ಯ ಜಟಾಸು ಲೀನಂ ಕದಾSಪಿ ತಸ್ಯಾಕ್ಷಿಪಥಂ ನ ಯಾತಮ್ ।
ಆವಿಶ್ಯ ಕಂಜಪ್ರಭವಶ್ಯಶಾಪ ವ್ರಜಾSSಶು ಪಾಪಾಜಗರತ್ವ ಮೇವ ॥೩೪೮॥

ತದಾ – ಆ ರೀತಿ ಒದ್ದಾಗ, ತಸ್ಯ ಅಕ್ಷಿಪಥಮ್ ನ ಯಾತಂ—ಆ ನಹುಷನ ಕಣ್ಣಿಗೆ ನೋಟಕ್ಕೆ, ಸಿಗದಿದ್ದ (ನಹುಷನಿಗೆ ಕಾಣದಿದ್ದ), ತಸ್ಯ – ಆ ಅಗಸ್ತ್ಯರ, ಜಟಾಸು – ಜಟಾಗಳಲ್ಲಿ, ಲೀನಂ—ಅಡಗಿಕೊಂಡಿದ್ದ, ಭೃಗುಂ ಭೃಗುಋಷಿಗಳನ್ನು, ಕಂಜಪ್ರಭವಃ—ಭಗವಂತನ ನಾಭಿಕಮಲದಿಂದ ಹುಟ್ಟಿದ ಬ್ರಹ್ಮದೇವರು, ಆವಿಶ್ಯ – ಪ್ರವೇಶಿಸಿ ಹೇ ಪಾಪ – ಎಲೋ ಪಾಪಿಯಾದ ನಹುಷನೇ, ಆಶು – ಕೂಡಲೇ, ಅಜಗರತ್ವಂ ಏವ – ಹೆಬ್ಬಾವಿನ ಶರೀರವನ್ನೇ, ವ್ರಜ – ಹೊಂದು, ಇತಿ – ಎಂದು, ಶಶಾಪ – ಶಪಿಸಿದರು. ॥೩೪೮॥

ಷಷ್ಠೇಕಾಲೇ ಯುಸ್ತ್ವಯಾSSಸಾದಿತ ಸ್ಯಾತ್ಸ ತೇ ವಶಂ ಯಾತು ಬಲಾಧಿಕೋಪಿ।
ಯದಾಗೃಹೀತಂ ಪುರುಷಂ ನಿಹಂತುಂ ನ ಶಕ್ಷ್ಯಸೇ ಯದಿ ಸ ತ್ವದ್ಗೃಹೀತಃ ।
ಶಕ್ತೋSಪಿ ನಾತ್ಮಾನಮಭಿಪ್ರಮೋಚಯೇತ್ತದಾSಸ್ಯ ಸ್ಯಾತ್ತವತ್ತಪೋSಗ್ರ್ಯಂ ಬಲಂ ಚ॥೩೪೯॥

ಯಃ—ಯಾವನು, ಷಷ್ಠೇ ಕಾಲೇ—ಸಾಯಂಕಾಲದಲ್ಲಿ (ಪ್ರಾತಃಕಾಲ ಸಂಗವಕಾಲ ಇತ್ಯಾದಿ ಪ್ರಭೇದಗಳ ಪ್ರಕಾರ ಸಾಯಂಕಾಲವು ದಿನದ ಷಷ್ಠಕಾಲವಾಗುವದು) ಅಥವಾ ಪ್ರತಿ ಮೂರನೆಯ ದಿನದ ರಾತ್ರಿಯಲ್ಲಿ, (ದಿನಕ್ಕೆ ಎರಡು ಊಟಗಳಾದ್ದರಿಂದ ಮೂರನೆಯ ದಿನದ ಮಧ್ಯಾಹ್ನ ಸಮಯವು ಐದನೆಯ ಅನ್ನದ ಕಾಲವು, ಅಂದಿನ ರಾತ್ರಿಯು ಆರನೆಯ ಅನ್ನದ ಕಾಲವು), ತ್ವಯಾ – ನಿನ್ನಿಂದ, ಆಸಾದಿತಃ – ಹೊಂದಲ್ಪಡುವನೋ, ಸಃ—ಅವನು, ಬಲಾಧಿಕಃ ಅಪಿ—ಮಹಾಬಲಿಷ್ಠನಾದರೂ ಕೂಡ, ತೇ ವಶಂ – ನಿನ್ನ ಆಧೀನತೆಯನ್ನು, ಯಾತು– ಹೊಂದಲಿ. ಯದಾ – ಯಾವಾಗ, ಗೃಹೀತಂ ಪುರುಷಂ – ನಿನ್ನಿಂದ ಹಿಡಿಯಲ್ಪಟ್ಟ ಪುರುಷನನ್ನು, ನಿಹಂತುಂ– ಕೊಲ್ಲಲು, ನ ಶಕ್ಷ್ಯಸೇ—ಸಮರ್ಥನಾಗುವದಿಲ್ಲವೋ, ಯದಿ – ಹಿಂದು ವೇಳೆ, ತ್ವದ್ಗೃಹೀತಃ ಸಃ—ನಿನ್ನಿಂದ ಹಿಡಿಯಲ್ಪಟ್ಟ ಪುರುಷನು, ಶಕ್ತಃ ಅಪಿ – ಸಮರ್ಥನಾದರೂ ಕೂಡ, ಆತ್ಮಾನಂ ತನ್ನನ್ನು, ನ ಅಭಿಪ್ರಮೋಚಯೇತ್ – ಬಿಡಿಸಿ ಕೊಳ್ಳುವದಿಲ್ಲವಾದರೆ, ತದಾ – ಆಗ, ಅಗ್ರ್ಯಂ–ಶ್ರೇಷ್ಠವಾದ, ತ್ವತ್ತಪಃ—ನಿನ್ನ ತಪಸ್ಸು, ಬಲಂ ಚ—ಶಕ್ತಿಯೂ ಕೂಡ, ಅಸ್ಯ—ಈ ಪುರುಷನಿಗೆ, ಸ್ಯಾತ್—ಬರುವವು. ॥೩೪೯॥

ಸರ್ವದೇವ ಮುನೀನಾಂ ಯತ್ತಪಸ್ತ್ವಾಂ ಸಮುಪಾಶ್ರಿತಮ್ ।
ತಚ್ಚ ಸರ್ವಂ ತನೋವೈತಿ ನಾತ್ರಕಾರ್ಯಾ ವಿಚಾರಣಾ ॥೩೫೦॥

ಅಷ್ಟೇ ಅಲ್ಲ, ಯತ್ – ಸರ್ವದೇವಮುನೀನಾಂ ತಪಃ–ಯಾವ ಸರ್ವದೇವತೆಗಳ ಋಷಿಗಳ ತಪಸ್ಸು, ತ್ವಾಂ ನಿನ್ನನ್ನು, ಸಮುಪಾಶ್ರಿತಮ್ —ಆಶ್ರಯಿಸಿರುವದೋ, ತತ್ ಸರ್ವಂಚ – ಅದೆಲ್ಲವೂ ಕೂಡ, ತಂ ಏವ ಅವನನ್ನೇ ಹೊಂದುವದ ; ಅತ್ರ— ಈ ಬಗ್ಗೆ, ವಿಚಾರಣಾ ನ ಕಾರ್ಯಾ — ಸಂಶಯವು ಮಾಡಲ್ಪಡಬಾರದು ॥೩೫೦॥

ಯದಾ ಪ್ರಶ್ನಾಂಸ್ತ್ವದೀಯಾಂಶ್ಚ ಕಶ್ಚಿತ್ ಪರಿಹರಿಷ್ಯತಿ ।
ದಿವಂ ಗಂತಾಽಸಿ ಚ ತದಾ ವಿಸೃಜ್ಯಾಜಗರೀಂ ತನುಮ್ ॥೩೫೧॥

ಚ – ಹಾಗು, ಯದಾ—ಯಾವಾಗ, ಕಶ್ಚಿತ್ – ಯಾವನಾದರೂ, ತ್ವದೀಯಾನ್ ಪ್ರಶ್ನಾನ್ - ನಿನ್ನ ಪ್ರಶ್ನೆಗಳನ್ನು ಪರಿಹರಿಷ್ಯತಿ— ಉತ್ತರಿಸಂತಾನಾದರೆ, ತದಾ– ಆಗ, ಅಜಗರೀಂತನುಂ– ಹೆಬ್ಬಾವಿನ ಶರೀರವನ್ನು, ವಿಸೃಜ್ಯ – ಬಿಟ್ಟು, ದಿವಂಗಂತಾಽಸಿ—ಸ್ವರ್ಗಕ್ಕೆ ಹೋಗುವಿ ॥೩೫೧॥

ಸ್ಮೃತಿಶ್ಚ ಮತ್ಪ್ರಸಾದೇನ ಸರ್ವದಾ ತೇ ಭವಿಷ್ಯತಿ ।
ಭೃಗುದೇಹಗತೇನೈವಂ ಶಪ್ತಃ ಕಮಲಯೋನಿನಾ ॥೩೫೨॥

ಪಪಾತಾಜಗರೋ ಭೂತ್ವಾ ನಹುಷಃ ಕ್ಷಣಮಾತ್ರತಃ ।
ಇಂದ್ರೋಽಪ್ಯವಾಪ ಸ್ವಂ ಸ್ಥಾನಮಿಷ್ಟ್ವಾ ವಿಷ್ಣುಂ ವಿಪಾಪಕಃ ॥೩೫೩॥

ಚ – ಹಾಗು, ತೇ— ನಿನಗೆ, ಸ್ಮೃತಿಃ – ಪೂರ್ವದ ಸ್ಮರಣೆ ಎಲ್ಲವೂ, ಮತ್ಪ್ರಸಾದೇನ – ನನ್ನ ಅನುಗ್ರಹದಿಂದ, ಸರ್ವದಾ—ಯಾವಾಗಲೂ, ಭವಿಷ್ಯತಿ – ಇರುತ್ತದೆ. ಏವಂ – ಈ ರೀತಿ, ಭೃಗುದೇಹಗತೇನ – ಭೃಗು ಋಷಿಗಳ ದೇಹದಲ್ಲಿರುವ, ಕಮಲಯೋನಿನಾ – ಚತುರ್ಮುಖಿ ಬ್ರಹ್ಮದೇವರಿಂದ, ಶಪ್ತಃ – ಶಪಿಸಲ್ಪಟ್ಟ, ನಹುಷಃ – ನಹುಷನು, ಕ್ಷಣಮಾತ್ರತಃ – ಕ್ಷಣದಲ್ಲಿಯೇ, ಅಜಗರಃಭೂತ್ವಾ- ಅಜಗರದೇಹವುಳ್ಳವನಾಗಿ, ಪಪಾತ – ಬಿದ್ದನು, ಇಂದ್ರಃ ವಿಪಾಪಕ ಅಪಿ: – ಇಂದ್ರದೇವರು ಪಾಪರಹಿತರಾದರೂ ಕೂಡ, ವಿಷ್ಣುಂ ಇಷ್ಟ್ವಾ – ಶ್ರೀ ವಿಷ್ಣುಪ್ರೀತಿಗಾಗಿ ಯಜ್ಞಧ್ಯಾನಗಳಿಂದ ಶ್ರೀಹರಿಯನ್ನು ಆರಾಧಿಸಿ, ಸ್ವಂ ಸ್ಥಾನಂ — ತನ್ನ ಸ್ಥಾನವನ್ನು, ಅವಾಪ— ಹೊಂದಿದನು ॥೩೫೨-೩೫೩॥

ಧರ್ಮವೃಧ್ಯರ್ಥಮೇವೈತತ್ಪಾಪಮಾಸೀಚ್ಛಚೀಪತೇಃ ।
ನ ಹಿ ಲೋಕಾವನಂ ಪಾಪಂ ತ್ರೈಲೋಕ್ಯೇಶಸ್ಯ ವಜ್ರಿಣಃ ॥೩೫೪॥

ಏತತ್ ಪಾಪಂ – ಪಾಪದಂತೆ ಅನ್ಯರಿಗೆ ತೋರುವ, ವೃತ್ರಹನನರೂಪವಾದ ಕಾರ್ಯವು, ಶಚೀಪತೇ: — ಇಂದ್ರನಿಗೆ, ಧರ್ಮವೃಧ್ಯರ್ಥಂ ಏವ -- ಧರ್ಮ ಧ್ಯಾನಕಾರ್ಯ ವೃದ್ಧಿಗೆ ಕಾರಣವೇ, ಆಸೀತ್ – ಆಯಿತು, (ಅಪರೋಕ್ಷಜ್ಞಾನಿಗಳಿಗೆ ಪಾಪಲೇಪವಿಲ್ಲವಾದ್ದರಿಂದ, ಅಪರೋಕ್ಷಜ್ಞಾನಿಯಾದ ಇಂದ್ರನಿಗೆ ಇದೊಂದು ನಿಮಿತ್ತದಿಂದ ಒಂದು ಸಾವಿರವರ್ಷ ಪರ್ಯಂತ ನೃಸಿಂಹರೂಪ ಭಗವಂತನ ಧ್ಯಾನರೂಪಿ ಪುಣ್ಯ ಕಾರ್ಯದಿಂದಪುಣ್ಯದ ಅಭಿವೃದ್ಧಿಯೇ ಆಗಲು ಕಾರಣವಾಯಿತ, ಪಾಪವಲ್ಲ ಎಂಬುದನ್ನು ಇನ್ನೊಂದು ರೀತಿ ತಿಳಿಸುತ್ತಿದ್ದಾರೆ,— ತ್ರೈಲೋಕ್ಯೇಶಸ್ಯ – ಮೂರು

ಲೋಕಗಳ ರಾಜನಾದ. ವಜ್ರಿಣಃ—ವಜ್ರಾಯುಧಧಾರಿಯಾದ ಇಂದ್ರನಿಗೆ, ಲೋಕಾವನಂ—ಲೋಕರಕ್ಷಣೆಯು ಅದಕ್ಕಾಗಿ ಮಾಡಿದ ದುಷ್ಟರ ಸಂಹಾರವು. ನಹಿ ಪಾಪಂ – ಪಾಪವಲ್ಲ. ॥೩೫೪॥

ವೃತ್ರಂ ಹತ್ವಾ ಮಹಾನಾಸೇತ್ಯಾದಿ ವೇದಪದಂ ಚ ಯತ್ ।
ಕ್ವಚಿತ್ಪಾಪಂ ಚ ಪುಣ್ಯಾನಾಂ ವೃದ್ಧಯೇ ಭವತಿ ಸ್ಫುಟಮ್ ॥೩೫೫॥

ವೃತ್ರಹತ್ಯಾ ಯಥೇಂದ್ರಸ್ಯ ಜಾತಾ ಧರ್ಮಸ್ಯ ವೃದ್ಧಯೇ ।
ದೇವಾನಾಂ ವಾ ಮುನೀನಾಂ ವಾ ಭವೇದೇವಂ ನವೈ ನೃಣಾಮ್ ॥೩೫೬॥

ಪಾಪಂ ಯತ್ಪುಣ್ಯ ಮೇ ವೈತದಸುರಾಣಾಂ ವಿಲೋಮತಃ ।
ಏವಂ ಸ್ಕಾಂದೇ ಹಿ ವಚನಂ ನ ಪಾಪಂ ತಚ್ಛಚೀಪತೇಃ ॥೩೫೭॥

ಚ—ಅಪ್ಪೇ ಅಲ್ಲದೇ ಯತ್—ಯಾವ ಕಾರಣದಿಂದ. ವೃತ್ರಂ ಹತ್ವಾ ಮಹಾನ್ ಅಸ ಇತಿ—'ಇಂದ್ರೋ ವೈ ವೃತ್ರಂಹತ್ವಾ ಮಹಾನ್ ಅಭವತ್' ಎಂಬ ಶ್ರುತಿಯು ಇರುವದೋ ಆದ್ದರಿಂದಲೂ ಧರ್ಮವೃದ್ಧಿಗ ಕಾರಣ ವಾಯಿತು,

ಅವತಾರಿಕೆ — ಇದೇ ವಿಷಯದಲ್ಲಿ ಸ್ಮೃತಿವಾಕ್ಯವನ್ನು ಉದಾಹರಿಸುತ್ತಿದ್ದಾರೆ—ಕ್ವಚಿತ್ ಪಾಪಂ ಚ... .....ವಿಲೋಮತಃ ಇದು ಸ್ಕಾಂದ ಪುರಾಣದ ವಾಕ್ಯ. ಇದರ ಅರ್ಥ—

ಕ್ವಚಿತ್ — ಒಂದೊಂದು ಸಂದರ್ಭದಲ್ಲಿ, ಪಾಪಂ ಚ–ಪಾಪವೆಂದು ತೋರುವಂಥದ್ದೂ ಕೂಡ, ಸ್ಫುಟಂ-ಸ್ಪಷ್ಟವಾಗಿ, ಅವಶ್ಯವಾಗಿ. ಪುಣ್ಯಾನಾಂ ವೃದ್ಧಯೇ – ಪುಣ್ಯದ ವೃದ್ಧಿಗೆ, ಭವತಿ – ಕಾರಣವಾಗುತ್ತದೆ, ಯಥಾ – ಹೇಗೆ, ಇಂದ್ರಸ್ಯ—ಇಂದ್ರದೇವರಿಗೆ, ವೃತ್ರ ಹತ್ಯಾ— ವೃತ್ರಾಸುರ ಸಂಹಾರವು, ಧರ್ಮಸ್ಯ ವೃದ್ಧಯೇ ಜಾತಾ – ಧರ್ಮದ ಅಭಿವೃದ್ಧಿಗೆ ಕಾರಣವಾಯಿತೋ, ಏವಂ – ಇದೆ ರೀತಿಯಾಗಿ, ದೇವಾನಾಂ ಮುನೀನಾಂ ವಾ ಭವೇತ್ – ದೇವತೆಗಳಿಗೆ ಅಥವಾ ಮುನಿಗಳಿಗೆ ಆಗಲೀ ಆಗುವದು, ನೃಣಾಂ—ಮನುಷ್ಯರಿಗೆ ಪಾತ್ರ, ನವೈ – ಆಗುವದಿಲ್ಲ, ಪಾಪಂ—ಪಾಪವು, ಪುಣ್ಯಂ—ಪುಣ್ಯಕ್ಕೆ ಕಾರಣವಾಗುವದು, ಇತಿ ಯತ್ – ಎಂಬ ಯಾವ ಸಂಗತಿಯೋ, ತತ್—ಅದು, ದೇವಾನಾಂ ಏವ – ದೇವತೆಗಳಿಗೇ ಅನ್ವಯಿಸುವದು, ನವೈ ನೃಣಾಂ – ಮನುಷ್ಯರಿಗೆ ಅನ್ವಯಿಸುವದಿಲ್ಲ, ಮನುಷ್ಯರಿಗೆ ಪಾಪವು ಪಾಪಕ್ಕೆ ಕಾರಣವು, ಪುಣ್ಯವು ಪುಣ್ಯಕ್ಕೆ ಕಾರಣವು. ಅಸುರಾಣಾಂ – ಅಸುರರಿಗೆ. ವಿಲೋಮತ. – ವಿರುದ್ಧವಾಗಿ ಅನ್ವಯಿಸುವದು, ಅಂದರೆ ಅವರ ಪುಣ್ಯವೂ ಪಾಪಕ್ಕೆ ಕಾರಣವಾಗುವದು, ಹಿ – ಯಾವಕಾರಣದಿಂದ, ಏವಂ – ಈ ರೀತಿಯಾಗಿ, ಸ್ಕಾಂದೇ—ಸ್ಕಾಂದ ಪುರಾಣದಲ್ಲಿ, ವಚನಂ—ವಾಕ್ಯವಿರುವದೋ, ತತ್ – ಆ ಕಾರಣದಿಂದ, ಶಚೀಪತೇ: – ಇಂದ್ರದೇವರಿಗೆ, ಪಾಪಂ ನ—ಪಾಪವಿಲ್ಲ. ॥೩೫೫-೩೫೬-೩೫೭॥

ಅವತಾರಿಕೆ – ದೇವತೆಗಳು ನಹುಷನನ್ನು ಇಂದ್ರಪದವಿಯಲ್ಲಿಡಲು ಮತ್ತು ತಾವು ಯಾರೂ ಇಂದ್ರಪದವಿಗೆ ಬಾರದಿರಲು ಕಾರಣವನ್ನು ಹೇಳುವರು –

ನಾನ್ಯಸ್ಯ ಪದಮಾಪ್ನ್ಯಂತಿ ತದ್ದೇವಾನಾಂ ವ್ರತಂ ಪರಮ್ ।
ತಸ್ಮಾತ್ತ್ವೇ ನಹುಷಂ ಶಕ್ರಪದೇ ನಿದಧುರೀಶ್ವರಾ: ॥೩೫೮॥

ತೇ—ಆ ದೇವತೆಗಳು, ಅನ್ಯಸ್ಯ—ಬೇರೆದೇವತೆಯ, ಪದಂ ಸ್ಥಾನವನ್ನು, ನ ಆಪ್ಸ್ಯಂತಿ—ಹೊಂದುವದಿಲ್ಲ, ತತ್—ಅದು (ಇನ್ನೊಂದು ದೇವಪದವನ್ನು ಹೊಂದದಿರುವದು)ದೇವಾನಾಂ—ದೇವತೆಗಳ, ಪರಂ ವ್ರತಂ—ಶ್ರೇಷ್ಠವಾದ ವ್ರತವು, ತಸ್ಮಾತ್—ಆದ್ದರಿಂದ, ತೇ—ಆ ದೇವತೆಗಳು, ಶಕ್ರಪದೇ ಈ ಶ್ವರಾಃ ಅಪಿ—ಇಂದ್ರಪದವಿಯನ್ನು ಆಳಲು ಸಮರ್ಥರಾದರೂ ಕೂಡ, ನಹುಷಂ—ನಹುಷ ರಾಜನನ್ನು, ಶಕ್ರಪದೇ—ಇಂದ್ರಪದವಿಯಲ್ಲಿ ನಿದಧುಃ—ಇಟ್ಟರು, ॥೩೫॥

ಭಾವಾನುವಾದ ೩೩—೩೫

ಅರ್ಜುನನಿಂದ ಸಂಹೃತರಾದ ದೈತ್ಯರೆಲ್ಲ ಅಂಧತಮಸ್ಸಿಗೆ ಹೋದರು ಇಂದ್ರದೇವರ ಅನುಜ್ಞೆಯನ್ನು ಪಡೆದು ಅರ್ಜುನನು ಅವರದೇ ರಥದಲ್ಲಿ ಹೊರಟು ಸಹೋದರರ ಸಮೀಪಕ್ಕೆ ಬಂದನು. ಅವನು ಬಂದದ್ದನ್ನು ನೋಡಿಯೇ ಬಹಳ ಸಂತೋಷಪಟ್ಟರು. ಐವರೂ ಪಾಂಡವರು ಪುನಃ ನಾಲ್ಕು ವರ್ಷ ಪರ್ಯಂತ ಮೇರುಪರ್ವತ ಪ್ರದೇಶದಲ್ಲಿ ಆನಂದದಿಂದ ವಾಸಿಸಿದರು. ಶ್ರೀಕೃಷ್ಣಭಕ್ತಾಗ್ರೇಸರರಾದ ಅವರಿಗೆ ಆ ಶ್ರೀಹರಿಯ ಕಥಾ, ಧ್ಯಾನ ಅರ್ಚನೆಗಳಿಂದಲೇ ಆನಂದವಾಗುತ್ತಿತ್ತು

ವಿಶೇಷಾಂಶ:— ಇದರಿಂದ ತಿಳಿಯುವದು ಏನೆಂದರೆ ನಾವು ನಿಜವಾದ ಶ್ರೀಕೃಷ್ಣಭಕ್ತರಾಗಿದ್ದರೆ ಶ್ರೀಕೃಷ್ಣ ಕಥಾದಿಗಳನ್ನು ಬಿಟ್ಟು ಇತರ ಅಶುದ್ಧ ವಿಷಯಂಗಳ ಬಗ್ಗೆ ಆಸಕ್ತಿಯು ನಮಗೆ ಬರಬಾರದು. ಬೇರೆಯ ವಿಷಯುಗಳಿಂದಲೇ ಆನಂದಪಡುತ್ತಿರುವ ನಾವು ಶ್ರೀ ಕೃಷ್ಣಭಕ್ತರಾಗುವದೆಂತು ಎಂದು ವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ.

ಧರ್ಮರಾಜನು 13 ನೆಯ ವರ್ಷದ ನಂತರ ಯುದ್ಧ ಮಾಡುತ್ತೇನೆಂದು ಮಾಡಿದ ಪ್ರತಿಜ್ಞೆಯನ್ನು ಅವನ ಸ್ಮರಣೆಗೆ ತಂದು ಕೊಡುವದಕ್ಕಾಗಿ ಭೀಮಸೇನದೇವರು ಅಣ್ಣನನ್ನು ಕುರಿತು. ಕ್ಷತ್ರಿಯರಿಗೆ ಮುಂಖ್ಯಗತಿಯಾಗ ಬೇಕಾದರೆ ಶತ್ರುಸಂಹಾರ, ಸಾತ್ವಿಕಕೀರ್ತಿಸಂಪಾದನೆ ಶ್ರೀಹರಿಯ ಆಜ್ಞೆಯ ಪರಿಪಾಲನೆ ಇವುಗಳನ್ನು ಮಾಡಲೇ ಬೇಕು. ಇವುಗಳಲ್ಲಿ ಯಾವದೊಂದನ್ನು ಮಾಡದಿದ್ದರೂ ಮುಂಖ್ಯಗತಿಯಾಗಲಾರದು. ಶತ್ರುಗಳು ಎರಡು ಪ್ರಕಾರ ಆಂತರಿಕ ಶತ್ರುಗಳು ಬಾಹ್ಯಶತ್ರುಗಳು ಎಂದು, ಆಂತರಿಕ ಶತ್ರುಗಳು ಕಾಮಕ್ರೋಧಾದಿಗಳು. ಇವುಗಳ ಸಂಹಾರ ನಿಗ್ರಹ ಎಲ್ಲ ವರ್ಣಾಶ್ರಮದವರಿಗೂ ಕಡ್ಡಾಯ. ಬಾಹ್ಯಶತ್ರುಗಳಾದ ದುಷ್ಟಚೇತನರ ಸಂಹಾರವು ಕ್ಷತ್ರಿಯರಿಗೆ ಅವಶ್ಯ ಕರ್ತವ್ಯವೇ. ಉಳಿದವರಿಗೆ ಅಂಥ ಅವಶ್ಯವಲ್ಲದಿದ್ದರೂ ಧರ್ಮಕಾರ್ಯಗಳಿಗೆ ವಿರೋಧಿಗಳಾದವರಿದ್ದಾಗ ಅವರ ಸಂಹಾರ ಕಾರ್ಯವನ್ನು ಕ್ವಚಿತ್ ಇತರರೂ ಕೂಡ ಮಾಡಬೇಕಾಗುವದು. ಅದು ಆಗ ಧರ್ಮವೇ ಆಗುವದು. ವೇನನ ಸಂಹಾರವನ್ನು ಮುನಿಗಳು ಮಾಡಿದ್ದು ಇದಕ್ಕೆ ಉದಾಹರಣೆ. ಈ ರೀತಿಯಾದ ಭೀಮದೇವನ ಮಾತನ್ನು ಕೇಳಿದ ಧರ್ಮರಾಜನು ಸಹೋದರರಿಂದ ದ್ರೌಪದೀದೇವಿಯಿಂದ ಸಹಿತನಾಗಿ ಘಟೋತ್ಕಚಾದಿ ರಾಕ್ಷಸರ ಮೇಲೇರಿ ಪುನಃ ಹಿಮಾಲಯ ಪ್ರದೇಶಗಳಿಗೆ ಬಂದನು. ಅಲ್ಲಿ ವಾಸವಾಗಿರುವಾಗ ಒಮ್ಮೆ ಭೀಮಸೇನದೇವರು ದುಷ್ಟರ ಸಂಹಾರಕ್ಕಾಗಿ ಬೇಟೆಗೆ ಹೋಗಿರುವಾಗ ಒಂದು ಹೆಬ್ಬಾವನ್ನು ಹೊಂದಿದರು ನಹುಷರಾಜನು ಶಾಪದಿಂದ ಆ ರೂಪದಲ್ಲಿದ್ದನು. ಶಾಪವಾಗಲು ಕಾರಣವೇನೆಂದರೆ—ವೃತ್ರಾಸುರನ ಸಂಹಾರ ಮಾಡಿದ ಇಂದ್ರದೇವರು ಜಾತಾಪರೋಕ್ಷಜ್ಞಾನಿಗಳು. ಅಪರೋಕ್ಷಜ್ಞಾನಿಗಳಿಗೆ ಪೂರ್ವೋತ್ತರ ಪಾಪಗಳ ಸಂಸರ್ಗವಿಲ್ಲ ಎಂಬುದು ಶಾಸ್ತ್ರನಿರ್ಣಯ. ಆದ್ದರಿಂದ ಅವರಿಗೂ ಇದು ದೋಷವಲ್ಲ. ಆದರೂ, ಬ್ರಾಹ್ಮಣಹಿಂಸೆಯನ್ನು ಮಾಡಬಾರದು ಎಂಬ ಧರ್ಮವನ್ನು ಲೋಕಕ್ಕೆ ತಿಳಿಸಲು, ನಹುಷನಿಗೆ ಶಾಪಬರುವಂತೆ ಆಗಲು ಅವಕಾಶಕೊಡಲು, ತಾವು ಬ್ರಹ್ಮಹತ್ಯಾಕ್ಕೆ ಹೆದರಿದಂತೆ ಮಾಡಿ ಕಮಲ ನಾಳದಲ್ಲಿ ಅಡಗಿದರು. ಆಗ ಇಂದ್ರಪದವಿಯು ಖಾಲಿಯಾಗಿರುವಾಗ ದೇವತೆಗಳು ಅಲ್ಲಿ ಯಾರನ್ನು ಕೂಡಿಸುವದು ಎಂದು ವಿಚಾರಿಸಿ ಅನೇಕ ಯಾಗಗಳನ್ನು ಮಾಡಿದ ಭೂವಿುಯಲ್ಲಿ ರಾಜನಾದ, ಆಯುರಾಜನ ಮಗನಾದ ನಹುಷ

ನನ್ನು ಯೋಗ್ಯನೆಂದು ನಿರ್ಣಯಿಸಿ ಸ್ವರ್ಗಸಿಂಹಾಸನದಲ್ಲಿ ಕೂಡಿಸಿದರು. ಅವನಿಗೆ ಅಲ್ಲಿರುವ ಸಾಮರ್ಥ್ಯ ಬರಲು ಅವನು ಯಾರನ್ನು ನೋಡುವನೋ ಅವರ ತಪಸ್ಸು ಜ್ಞಾನ, ಶಕ್ತಿ ಎಲ್ಲವೂ ಅವನಿಗೆ ಬರುವಂತೆ ವರವನ್ನೂ ಕೊಟ್ಟರು. ಅದರಿಂದ ತಪೋಜ್ಞಾನಬಲಗಳಿಂದ ಬೆಳೆದ ಅವನಿಗೆ ಅಹಂಕಾರವು ಬಂದಿತು. ತನಗೆ ಅಯೋಗ್ಯಳಾದ, ಪರಸ್ತ್ರೀಯಾದ ಶಚೀದೇವಿಯನ್ನೇ ಅಪೇಕ್ಷಿಸಿದನು. ಇಂಥ ಸಂದರ್ಭ ಬರುವದೆಂದು ಮೊದಲೇ ತಿಳಿದಿದ್ದ ಇಂದ್ರದೇವರು ಶಚೀದೇವಿಗೆ ಒಂದು ಉಪಾಯವನ್ನು ಹೇಳಿಕೊಟ್ಟಿದ್ದರು. ಅಗಸ್ತ್ಯಾದಿ ಋಷಿಗಳು ಹೊತ್ತು ಕೊಂಡ ಮೇಣೆಯಲ್ಲಿ ಹತ್ತಿಕೊಂಡು ಬಂದರೆ ಸ್ವೀಕರಿಸುವದಾಗಿ ಹೇಳಿಕಳಿಸಿದಳು ತಾಮಸಕ್ಕೆ ಒಳಗಾದ ಅವನು ಅಂಥ ಕಾರ್ಯವನ್ನು ಮಾಡಲೂ ಸಿದ್ಧನಾದ. ಅಗಸ್ತ್ಯಾದಿ ಋಷಿಗಳಿಗೆ ತನ್ನ ಮೇಣೆಯನ್ನು ಹೊರಲು ಹೇಳಿದನು. ಅವರೂ ಮುಂದಿನ ಕಾರ್ಯಕ್ಕಾದಿ ಹೊತ್ತುಕೊಂಡು ಹೊರಟಾಗ ದಾರಿಯಲ್ಲಿ ನಹುಷನಿಗೆ ವೇದಗಳು ಪ್ರಮಾಣವೋ ಅಲ್ಲವೋ ಎಂದು ಪ್ರಶ್ನಿಸಿದರು. ಅವನು ಪ್ರಮಾಣವೆಂದು ಹೇಳಿದರೆ ಆಗ ಪರಸ್ತ್ರೀಸಂಗವನ್ನು ಮಾಡಕೂಡದೆಂದು ವೇದವೇ ಹೇಳುತ್ತಿದೆಯಾದ್ದರಿಂದ ಶಚೀಸಂಗವು ಯೋಗ್ಯವಲ್ಲ ಎಂದು ಹೇಳಲು ಬರುವದು. ಒಂದುವೇಳೆ ಪ್ರಮಾಣವಲ್ಲವೆಂದರೆ ನಾನು ಪ್ರಮಾಣವೇ ಎಂದು ಹೇಳುವೆನು ಆಗ ಸಿಟ್ಟಿನಿಂದ ನನ್ನ ದ್ರೋಹವನ್ನು ಮಾಡುವನು. ಆಗ ಶಾಪಕೊಟ್ಟು ಶಚೀಸಂಗವನ್ನು ಬಿಡಿಸುವೆನು ಎಂದು ಅವರ ಉದ್ದೇಶವಾಗಿತ್ತು. ಆ ಪ್ರಕಾರ ಪ್ರಶ್ನಿಸಿದಾಗ ನಹುಷನು ನಾನು ವೇದಗಳು ಪ್ರಮಾಣ ಎಂದು ಒಪ್ಪಿದರೆ ನನಗೆ ಶಚೀಸಂಗವನ್ನು ಬಿಡಿಸುವರು ಎಂದು ತಿಳಿದು ಪ್ರಮಾಣವಲ್ಲ ಎಂದು ಹೇಳಿದನು. ಆಗಸ್ತ್ಯರು ಪ್ರಮಾಣವೇ ಎಂದು ಹೇಳಿದಾಗ ಸಿಟ್ಟಾದ ನಹುಷನು ಅವರ ತಲೆಗೆ ತನ್ನ ಕಾಲಿನಿಂದ ಒದ್ದನು. ಆ ಅಗಸ್ತ್ಯರ ತಲೆಯ ಜಟೆಯಲ್ಲಿ ಭೃಗ್ವಂಗಿರ್ಷಿಗಳು ಅಡಗಿ ಇದ್ದರು. ಅವರು ನಹುಷನಿಗೆ ಅಲ್ಲಿಯವರೆಗೆ ಕಂಡಿರಲೇ ಇಲ್ಲ. ಆ ಭೃಗ್ವಂಗಿರ್ಷಿಗಳ ಒಳಗೆ ಸನ್ನಿಹಿತರಾದ ಬೃಹ್ಮದೇವರು ಈ ನಹುಷನಿಗೆ ನೀನು ಅಜಗರನಾಗಿ (ಹೆಬ್ಬಾವಾಗಿ) ಬೀಳು. ನೀನು ಭೂಮಿಯಲ್ಲಿರುವ ಸಂದರ್ಭದಲ್ಲಿ ಸಾಯಂಕಾಲ ನೀನು ಒಬ್ಬ ಬಲಿಷ್ಠನಾದ ವ್ಯಕ್ತಿಯನ್ನು ಹಿಡಿಯುವಿ; ಅವನು ನಿನಗೆ ಸಿಗಲಿ, ಅವನು ತನ್ನನ್ನು ಬಿಡಿಸಿಕೊಳ್ಳಲು ಸಮರ್ಥನಾದರೂ, ಬಿಡಿಸಿಕೊಳ್ಳುವದಿಲ್ಲ; ಅವನನ್ನು ಸಂಹರಿಸಲು ನಿನಗೆ ಶಕ್ಯವಾಗುವದಿಲ್ಲ. ನಿನ್ನ ಹಾಗು ನಿನ್ನಲ್ಲಿ ಬಂದು ಸೇರಿದ ಇತರ ಎಲ್ಲ ದೇವಋಷಿಗಳ ತಪಸ್ಸು ಬಲಗಳೆಲ್ಲವೂ ಅವನಿಗೆ ಸೇರುವವು. ಸಂಶಯವಿಲ್ಲ. ಒಂದು ವೇಳೆ ನಿನ್ನ ಪ್ರಶ್ನೆಗಳನ್ನು ಯಾವನಾದರೂ ಉತ್ತರಿಸಿದರೆ ಆಗ ನೀನು ಆ ಅಜಗರ ದೇಹವನ್ನು ಬಿಟ್ಟು ಸ್ವರ್ಗಕ್ಕೆ ಸೇರುವಿ ಎಂದು ಇಷ್ಟೆಲ್ಲ ಶಾಪವಾಗಿತ್ತು. ಆ ಪ್ರಕಾರ ಅಜಗರನಾಗಿ ಬಿದ್ದನು. ಇಂದ್ರನಾದರೂ ಮೊದಲೇ ಪಾಪಲೇಪವಿಲ್ಲದವನಾದರೂ ಇಲ್ಲಿಯವರೆಗೆ ಶ್ರೀಹರಿಯ ಧ್ಯಾನಕಾರ್ಯವನ್ನು ಶ್ರೀಹರಿಪ್ರೀತ್ಯರ್ಥವಾಗಿ ಮಾಡಿ ಶ್ರೀಹರಿಯ ಅನುಗ್ರಹವನ್ನು ಸಂಪಾದಿಸಿ ತನ್ನ ಸ್ಥಾನವನ್ನು ಹೊಂದಿದನು. ವೃತ್ರಾಸುರನ ಸಂಹಾರವು ಇಂದ್ರನಿಗೆ ದೋಷಕರವಾಗಿಲ್ಲ ಎಂಬುದನ್ನು ಶ್ರೀಮದಾಚಾರ್ಯರು ಅನೇಕ ರೀತಿಯಿಂದ ಶ್ರುತಿಸ್ಮೃತಿ ಯುಕ್ತಿಗಳಿಂದ ಸಮರ್ಥಿಸಿದ್ದಾರೆ. ಶ್ರುತಿಸ್ಮೃತಿಗಳು ವೃತ್ರ ಸಂಹಾರದಿಂದ ಮುತ್ತಿಪ್ಪ ಶ್ರೇಷ್ಠನಾದನು ಎಂದು ಹೇಳುತ್ತಿವೆ. ಆದ್ದರಿಂದ ಅದು ಪಾಪವಾಗಿಲ್ಲವೆಂದಾಯಿತು. ದೇವತೆಗಳು ಮಾಡಿದ ಒಂದು ಕಾರ್ಯವು ಇತರರ ದೃಷ್ಟಿಯಲ್ಲಿ ಪಾಪದಂತೆ ತೋರುತ್ತಿದ್ದರೂ ಅದು ಪುಣ್ಯವೇ ಆಗಿರುತ್ತದೆ. ದೈತ್ಯರು ಮಾಡಿದ್ದು ಪುಣ್ಯದಂತೆ ತೋರುತ್ತಿದ್ದರೂ ಅದು ಪಾಪಕರವೇ ಆಗುತ್ತದೆ. ಮನುಷ್ಯರಿಗೆ ಪುಣ್ಯಕಾರ್ಯವು ಪುಣ್ಯಪ್ರದವೇ; ಪಾಪಕಾರ್ಯವು ಪಾಪಪ್ರದವೇ ಆಗುವದು ಈ ರೀತಿ ಹೇಳುತ್ತಿದ್ದದ್ದರಿಂದ, ವೃತ್ರಹತ್ಯೆಯು ಪಾಪವಾಗಲಿಲ್ಲ. ಅದರಂತೆ ರಾಜನಾದವನು ತನ್ನ ಪ್ರಜೆಗಳಿಗೆ ಕಂಟಕರಾದ ಚೋರಾದಿಗಳ ಸಂಹಾರಮಾಡುವದು ಹೇಗೆ ದೋಷಕರವಲ್ಲವೋ ಧರ್ಮವೇ ಆಗುವದೋ ಹಾಗೆ ತ್ರೈಲೋಕ್ಯ ರಾಜನಾದ ಇಂದ್ರದೇವನು ತ್ರಿಲೋಕದ ಸಜ್ಜನರಿಗೆ ಉಪದ್ರವಕರನಾದ ವೃತ್ರನ ಸಂಹಾರವು ಅಧರ್ಮವಾಗಲಿಲ್ಲ; ಕಿಂತು ಧರ್ಮವೇ ಆಗಿದೆ. ಒಬ್ಬ ದೇವತೆಯು ಪ್ರಾಯಃ ಇನ್ನೊಬ್ಬ ದೇವತಾ ಸ್ಥಾನದಲ್ಲಿ ಕೂಡಲು ಸಮರ್ಥನಿದ್ದರೂ ಇಚ್ಛಿಸುವದಿಲ್ಲ. ಏಕೆಂದರೆ ಇನ್ನೊಂದು ದೇವತಾಪದವನ್ನು ಹೊಂದದಿರುವದು ದೇವತೆಗಳಿಗೆ ಮುಖ್ಯವೃತವು. ಆದ್ದರಿಂದ ದೇವತೆಗಳು ತಾವು ಯಾರೂ ಇಂದ್ರಪದದಲ್ಲಿ ಕೂಡದೆ ನಹುಷನನ್ನು ಇಟ್ಟರು;

ತಸ್ಮಿನ್ನೇವಂ ನಿಪತಿತೇ ಬ್ರಹ್ಮಣಃ ಶಾಪಕಾರಣಾತ್ ।
ಅಷ್ಟಾವಿಂಶತಿಮೇ ಪ್ರಾಪಯುಗೇ ಭೀಮಸ್ತಮುಲ್ಬಣಮ್।
ಜಾನನ್ನೇವ ತದೀಯಂ ತತ್ತಪ ಆದಾತುಮೀಪ್ಸಯಾ ॥೩೫॥

ಏವಂ – ಈ ರೀತಿಯಲಾಗಿ, ಬ್ರಹ್ಮಣಃ ಶಾಪಕಾರಣಾತ್—ಬ್ರಹ್ಮದೇವರ ಶಾಪವೆಂಬ ಕಾರಣದಿಂದಾಗಿ, ತಸ್ಮಿನ್ – ಆ ನಹುಷನು, ನಿಪತಿತೇ ಸತಿ – ಅಜಗರನಾಗಿ ಬಿದ್ದಿರುತ್ತಿರಲು, ಅಷ್ಟಾವಿಂಶತಿಮೇ ಯುಗೇ—ಇಪ್ಪತ್ತೆಂಟನೆಯ ದ್ವಾಪರ ಯುಗದಲ್ಲಿ, ಭೀಮಃ – ಭೀಮಸೇನದೇವರು, ಜಾನನ್ ಏವ—ಅಜಗರವು ತನ್ನನ್ನು ಹಿಡಿಯುತ್ತದೆ ಎಂದು ತಿಳಿದಿದ್ದರೂ ಕೂಡ, ತದೀಯಂ – ಅವನದಾದ, ತತ್ ತಪಃ—ಆ ತಪಸ್ಸನ್ನು, ಪುಣ್ಯವನ್ನೆಲ್ಲ, ಆದಾತುಂ—ತೆಗೆದುಕೊಳ್ಳಲು, ಈಪ್ಸಯಾ - ತನ್ನ ಇಚ್ಛಾಪ್ರಕಾರವಾಗಿ, ಉಲ್ಬಣಂ ತಂ—ಉಗ್ರನಾದ ಅವನನ್ನು, ಪ್ರಾಪ—ಹೊಂದಿದರು. ॥೩೫॥

ಯತ್ತತ್ಸುರಾಣಾಂ ಸರ್ವೇಷಾಂ ಮುನೀನಾಂ ಚ ತಪಸ್ವಿನಾಮ್ ।
ತದ್ಗೃಹೀತಂ ವಶಗವದಿಚ್ಛಯೈವಾSಸ ಮಾರುತಿಃ ॥೩೬॥

ಸರ್ವೇಷಾಂ ಸುರಾಣಾಂ ತಪಸ್ವಿನಾಂ ಮುನೀನಾಂ ಯತ್ ತಪಃ—ಎಲ್ಲ ದೇವತೆಗಳ ಮತ್ತು ತಪಸ್ವಿಗಳಾದ ಮುನಿಗಳ ಯಾವ ತಪಶ್ಶಕ್ತಿಯು ಆ ನಹುಷನಲ್ಲಿತ್ತೋ, ತತ್—ಅದನ್ನು, ಗೃಹೀತಂ ಏವ – ತೆಗೆದುಕೊಳ್ಳುವದಕ್ಕಾಗಿಯೇ, ಮಾರುತಿಃ—ಶ್ರೀಭೀಮಸೇನದೇವರು, ಇಚ್ಛಯಾ ಏವ – ತನ್ನ ಇಚ್ಛೆಯಿಂದಲೇ, ವಶಗವತ್ – ಆ ಅಜಗರನ ಬಂಧನದಲ್ಲಿದ್ದಂತೆ, ಆಸ—ಆಗಿದ್ದರು. ॥೩೬॥

ದೇವಾನಾಂ ಹಿ ನೃಜಾತಾನಾಮಲ್ಪಂ ವ್ಯಕ್ತಂ ಭವೇದ್ಬಲಮ್ ॥೩೭॥
ಇಚ್ಛಯಾ ವ್ಯಕ್ತತಾಂ ಯಾತಿ ವಾಯೋರನ್ಯೇಷು ತಚ್ಚ ನ ।
ನಿತ್ಯವ್ಯಕ್ತಾಗುಣಾ ವಿಷ್ಣೋರಿತಿ ಶಾಸ್ತ್ರಸ್ಯ ನಿರ್ಣಯಃ ॥೩೭॥

ನೃಜಾತಾನಾಂ ದೇವಾನಾಂ—ಮನುಷ್ಯರಾಗಿ ಅವತರಿಸಿದ ದೇವತೆಗಳಿಗೆ, ಅಲ್ಪಂ ಬಲಂ— ಸ್ವಲ್ಪ ಬಲವು ವ್ಯಕ್ತಂ ಭವೇತ್ —ವ್ಯಕ್ತವಾಗಿರುತ್ತದೆ, ವಾಯೋಃ—ವಾಯುದೇವರಿಗೆ, ಇಚ್ಛಯಾ—ತಮ್ಮ ಇಚ್ಛೆಯಂತೆ, ವ್ಯಕ್ತತಾಂ ಯಾತಿ– ಪ್ರಕಟತೆಯನ್ನು ಹೊಂದುವದು, ಅನ್ಯೇಷಾಂ—ಇತರದೇವತೆಗಳಲ್ಲಿ, ತತ್ - ಅದು ಅಂದರೆ ಇಚ್ಛೆಯಂತೆ ಪ್ರಕಟವಾಗುವ ವಿಷಯು, ನಚ—ಇಲ್ಲ, ವಿಷ್ಣೋಃ ಗುಣಾಃ – ಶ್ರೀಹರಿಯ ಗುಣಗಳು, ನಿತ್ಯವ್ಯಕ್ತಾಃ – ನಿತ್ಯದಲ್ಲಿ ಪ್ರಕಟವಾಗಿಯೇ ಇರುತ್ತವೆ, ಇತಿ—ಎಂದು, ಶಾಸ್ತ್ರಸ್ಯ ನಿರ್ಣಯಃ ಶಾಸ್ತ್ರದ ನಿರ್ಣಯವು. ॥೩೭-೩೭॥

ಏವ ಮನ್ಯೇಽಪಿ ಹಿ ಗುಣಾ ಮಾನುಷಾದಿಷು ಜನ್ಮಸು ।
ದೇವಾನಾಂ ಮಾನುಷಾದೌ ತು ಶಕ್ತೇಽಪ್ಯವ್ಯಕ್ತತಾ ಕೃತೇಃ ॥೩೮॥

ಧರ್ಮವೃದ್ಧಿ ರ್ಭವೇತ್ತೇಷಾಂ ಪ್ರೀತೋ ಭವತಿ ಕೇಶವಃ ।
ತನ್ಮಾನುಷೇಬಲೇ ತಸ್ಯ ವರಾದ್ಧಾರಿತವತ್ಸ್ಥಿತೇ ॥೩೯॥

ದೈವಂ ಬಲಂ ನ ಶಕ್ತೋಽಪಿ ವ್ಯಕ್ತಂ ಚಕ್ರೇ ಸ ಮಾರುತಿ :।
ಆತ್ಮಮೋಕ್ಷಾಯ ನ ಪ್ರಶ್ನಾನ್ ವ್ಯಾಜಹಾರ ಸ ಚಾಭಿಭೂ : ॥೩೬೫॥

ಮಾನುಷಾದಿಷು ಜನ್ಮಸು – ಮನುಷ್ಯನೇ ಮೊದಲಾದ ಜನ್ಮಗಳಲ್ಲಿ, ದೇವಾನಾಂ—ದೇವತೆಗಳಿಗೆ.ಅನ್ಯೇ ಗುಣಾ: ಅಪಿ – ಉಳಿದಗುಣಗಳೂ ಕೂಡ, ಏವಂ – ಬಲದಂತೆ, ತಿಳಿಯಲ್ಪಡಬೇಕು. ದೇವಾನಾಂ – ದೇವತೆಗಳಿಗೆ, ಮಾನುಷಾದೌ – ಮನುಷ್ಯಾದಿ ಅವತಾರಗಳಲ್ಲಿ, ಶಕ್ತೇಽಪಿ – ಗುಣ ವ್ಯಕ್ತಿ ಮಾಡಿಕೊಳ್ಳಲು ಶಕ್ಯವಿರುವಾಗಲೂ ಕೂಡ, ಅವ್ಯಕ್ತತಾಕೃತೇ: – ಅವ್ಯಕ್ತಮಾಡಿಕೊಳ್ಳುವದರಿಂದ, ತೇಷಾಂ – ಆ ದೇವತೆಗಳಿಗೆ, ಧರ್ಮವೃದ್ಧಿಃ ಭವೇತ್ ಧರ್ಮವೃದ್ಧಿಗೆ ಕಾರಣವಾಗುವದು, ಕೇಶವ: – ಶ್ರೀಹರಿಯೂ ಪ್ರೀತ:—ಭವತಿ – ಸಂತುಷ್ಟನಾಗುವನು. ತತ್- ಆ ಕಾರಣದಿಂದ, ತಸ್ಯ – ಸರ್ವಸಂಹಾರ ಸಮರ್ಥರಾದ ಆ ಭೀಮಸೇನರ, ಮಾನುಷೇ ಬಲೇ – ಮನುಷ್ಯ ಅವತಾರಕ್ಕೆ ಸಂಬಂದ್ಧ (ಯೋಗ್ಯವಾ)ದ ಬಲವು, ವರಾತ್—ಬ್ರಹ್ಮದೇವರು ನಹುಷನಿಗೆ ಕೊಟ್ಟವರದಿಂದ, ವಾರಿತವತ್ ಸ್ಥಿತೇ– ತಡೆಯಲ್ಪಟ್ಟಂತೆ ಇರುತ್ತಿರಲು, ದೈವಂ ಬಲಂ – ಮೂಲ ರೂಪದ ಬಲವನ್ನು, ವ್ಯಕ್ತಂ ಕರ್ತುಂ—ವ್ಯಕ್ತ ಮಾಡಲು, ಶಕ್ತಃ ಅಪಿ = ಸಮರ್ಥರಾದರೂ ಕೂಡ, ಸಃ ಮಾರುತಿಃ – ಆ ಭೀಮಸೇನದೇವರು, ವ್ಯಕ್ತಂ ನ ಚಕ್ರೇ = ವ್ಯಕ್ತ ಮಾಡಲಿಲ್ಲ. ಚ – ಅಷ್ಟೇ ಅಲ್ಲ ಅಭಿಭೂಃ ಅಪಿ ಸಃ – ನಹುಷನ (ಮನಂದಿನ) ಪ್ರಶ್ನೆಗಳಿಗೆ ಉತ್ತರ ಕೊಡಲು ಸಮರ್ಥರಾದರೂ ಕೂಡ ಆ ಭೀಮರು, ಆತ್ಮ ಮೋಕ್ಷಾಯ – ತಮ್ಮ ಬಿಡುಗಡೆಗಾಗಿ, ಪ್ರಶ್ನಾನ್ – ನಹುಷನ ಪ್ರಶ್ನೆಗಳನ್ನು, ನ ವ್ಯಾಜಹಾರ – ಉತ್ತರಿಸಲಿಲ್ಲ, ॥೩೬೫—೩೬೪—೬೬೫॥

ಅವತಾರಿಕೆ – ಉತ್ತರಿಸದಿರಲು ಕಾರಣವನ್ನು ಹೇಳುವರು –

ವಿದ್ಯೋಪಜೀವನಂ ಧರ್ಮೋ ವಿಪ್ರಾಣಾಮಪಿ ನೋ ಯತ : ।
ಕಿಮುತ ಕ್ಷತ್ರಿಯಸ್ಯೇತಿ ಜಾನನ್ನಪಿ ವೃಕೋದರ ।।
ತತ್ಪ್ರಶ್ನಪರಿಹಾರೇಣ ನಾತ್ಮಮೋಕ್ಷಂ ಸಮೈಚ್ಛತ ॥೩೬೬॥

ಯತಃ – ಯಾವ ಕಾರಣದಿಂದ, ವಿದ್ಯೋಪಜೀವನಂ – ವಿದ್ಯೆಯಿಂದ ಜೀವಿಸುವದು, ವಿಪ್ರಾಣಾಂ ಅಪಿ—ಬ್ರಾಹ್ಮಣರಿಗೂ ಕೂಡ, ನೋ ಧರ್ಮ: – ಧರ್ಮವಲ್ಲವೋ, ಕಿಮುತ-ಕ್ಷತ್ರಿಯಸ್ಯ – ಕ್ಷತ್ರಿಯನಿಗೆ ಅಲ್ಲವೆಂದು ಏನು ಹೇಳುವದು, ಇತಿ – ಈ ಕಾರಣದಿಂದ, ವೃಕೋದರ: – ಶ್ರೀಭೀಮರು, ಜಾನನ್ ಅಪಿ – ಉತ್ತರವನ್ನು ತಿಳಿದಿದ್ದರೂ ಕೂಡ, ತತ್ಪ್ರಶ್ನಪರಿಹಾರೇಣ—ಅವನ ಪ್ರಶ್ನೆಗಳಿಗೆ ಉತ್ತರಿಸುವದರಿಂದ, ಆತ್ಮಮೋಕ್ಷಂ– ತನ್ನ ಬಿಡುಗಡೆಯನ್ನು(ಕರ್ತುಂ – ಮಾಡಿಕೊಳ್ಳಲು), ನ ಸಮೈಚ್ಛತ – ಇಚ್ಛಿಸಲಿಲ್ಲ, ॥೩೬೬॥

ಅಯತಂತಮಪಿ ಹ್ಯೇನಂ ಚಾಲನಾಯಾಪಿ ನಾಶಕತ್ ॥೩೬೭॥
ಪೂರ್ಣೋಽಪಿ ಸರ್ವಲೋಕಾನಾಂ ಬಲೇನ ನಹುಷಸ್ತದಾ।
ವೇಷ್ಟಯಿತ್ವೈವ ತಂ ಭೀಮಂ ಸ್ಥಿತೋಽಸೌ ನಾಶಕತ್ ಪರಮ್ ॥೩೬೭॥

ತದಾ – ಆ ರೀತಿ ತಮ್ಮ ಇಚ್ಛೆಯಿಂದಲೇ ಶ್ರೀಭೀಮರು ನಹುಷನ ಬಂಧನದಲ್ಲಿ ಇರುವಾಗ ನಹುಷಃ – ಆ ನಹುಷನು, ಸರ್ವಲೋಕಾನಾಂ ಬಲೇನ ಪೂರ್ಣಃ ಅಪಿ – ಎಲ್ಲ ದೇವಮನುಷ್ಯ ಇತ್ಯಾದಿಗಳ ಶಕ್ತಿಯಿಂದ ಪೂರ್ಣನಾದರೂ ಕೂಡ, ಅಯತಂತಂ ಅಪಿ ಏನಂ – ಬಿಡಿಸಿಕೊಳ್ಳಲು ಪ್ರಯತ್ನವಾಡದಿದ್ದರೂ ಕೂಡ, ಈ – ಭೀಮರನ್ನು,

ಚಾಲನಾಯಂ ಅಪಿ—ಅಲುಗಾಡಿಸಲೂ ಕೂಡ–ನ ಅಶಕತ್ – ಸಮರ್ಥನಾಗಲಿಲ್ಲ, ತಂ ಭೀಮಂ—ಆ ಭೀಮಂರನ್ನು, ವೇಷ್ಟಯಿತ್ವಾ ಏವ – ಕೇವಲ ಸುತ್ತಿಕೊಂಡೇ, ಅಸೌ ಸ್ಥಿತಃ – ಆ ನಹುಷನಿದ್ದನು ಹೊರತು, ಪರಂ - ಅದಕ್ಕಿಂತ ಹೆಚ್ಚು ಏನು: ಮಾಡಲೂ, ನ ಅಶಕತ್ – ಸಮರ್ಥನಾಗಲಿಲ್ಲ. ॥೩೬೨॥೩೬೫॥

ಭ್ರಾತೃಮಾತ್ರಾದಿಷು ಸ್ನೇಹಾತ್ ಕ್ಷಿಪ್ರಮಾತ್ಮವಿಮೋಕ್ಷಣಂ ।
ಇಚ್ಛನ್ನಪಿ ನ ಮೋಕ್ಷಾಯ ಯತ್ನಂ ಚಕ್ರೇ ವೃಕೋದರ: ।
ಸರ್ವದೇವಮುನೀಂದ್ರಾಣಾಂ ತಪ ಆದಾತುಮುತ್ರಗಮ್ ॥೩೬೯॥

ವೃಕೋದರ: – ಭೀಮರು ಭ್ರಾತೃಮಾತ್ರಾದಿಷು ಸ್ನೇಹಾತ್—ಸಹೋದರ, ತಾಯಿ ಇವರಲ್ಲಿಯ ಪ್ರೀತಿಯಿಂದ (ತಾನು ಈ ರೀತಿ ಬಂಧನದಲ್ಲಿದ್ದದ್ದನ್ನು ನೋಡಿ ನನ್ನ ತಾಯಿ ಹಾಗೂ ಸಹೋದರರು ಕಷ್ಟಪಡುವರು; ಆ ರೀತಿ ಅವರಿಗೆ ಕಷ್ಟವಾಗುವಂತಾಗಬಾರದು ಎಂಬ ಇಚ್ಛೆಯಿಂದ) ಕ್ಷಿಪ್ರಂ ಆತ್ಮವಿಮೋಕ್ಷಣಂ – ಬೇಗ ತನ್ನ ಬಿಡುಗಡೆಯನ್ನು, ಇಚ್ಛನ್-ಅಪಿ ಇಚ್ಛಿಸುವವರಾದರೂ ಕೂಡ, ಅತ್ರಗಂ – ಈ ನಹುಷನಲ್ಲಿರುವ, ಸರ್ವದೇವಮುನೀಂದ್ರಾಣಾಂ– ಎಲ್ಲ ದೇವಋಷಿಗಳ, ತಪ:—ತಪಶ್ಶಕ್ತಿಯನ್ನು, ಆದಾತುಂ— ತೆಗೆದುಕೊಳ್ಳುವದಕ್ಕಾಗಿ, ಮೋಕ್ಷಾಯ – ತನ್ನ ಬಿಡುಗಡೆಗಾಗಿ, ಯತ್ನಂ—ಪ್ರಯತ್ನವನ್ನು, ನ ಚಕ್ರೇ – ಮಾಡಲಿಲ್ಲ. ॥೩೬೯॥

ಭ್ರಾತ್ರಾದಿಷು ಸ್ನೇಹವಶಾನ್ನ ಸ್ಥಾತವ್ಯಮಿಹೇತ್ಯಪಿ ॥೩೭೦॥
ಮನ್ವಾನ: ಕಾಲತೋ ಭಂಗಂ ಸ್ವಯಮೇವೈಷ ಯಾಸ್ಯತಿ ।
ಆಜ್ಞಯಾ ವಾಸುದೇವಸ್ಯ ದಾಢ್ರ್ಯಾದ್ದೇಹಸ್ಯ ಮೇ ತಥಾ ॥೩೭೧॥

v

ಸ್ರಸ್ತಾಂಗೇ ಪತಿತೇ ಸರ್ಪೇ ಯಾಸ್ಯಾಮೀತಿ ವಿಚಿಂತಯನ್ ।
ತಸ್ಥೌ ಭೀಮೋ ಹರಿಂ ಧ್ಯಾಯನ್ ಸ್ವಭಾವಾನ್ನ ತದಿಚ್ಛಯಾ ॥೩೭೨॥

ಭ್ರಾತ್ರಾದಿಷು – ಸಹೋದರ ತಾಯಿ ಇವರಲ್ಲಿ, ಸ್ನೇಹವಶಾತ್ – ಸ್ನೇಹದಿಂದ, ಇಹ—ಈ ರೀತಿ ಬಂಧನದಲ್ಲಿ, ನಸ್ಥಾತವ್ಯಂ – ನನ್ನಿಂದ ಇರಲ್ಪಡಬಾರದು (ನಾನು ಇರಬಾರದು) ಇತಿ ಅಪಿ —ಎಂದೂ ಕೂಡ, ಮನ್ವಾನ: – ವಿಚಾರಿಸಿದವನಾಗಿ, ಕಾಲತಃ – ಕಾಲಕ್ರಮಕ್ಕೆ ಅನುಸಾರವಾಗಿ ತಥಾ – ಹಾಗೂ, ಮೇ ದೇಹಸ್ಯ—ನನ್ನ ದೇಹಕ್ಕೆ, ವಾಸುದೇವಸ್ಯ ಆಜ್ಞಯಾ – ಭಗವಂತನ ಅನುಗ್ರಹದಿಂದ, ದಾಢ್ರ್ಯಾತ್ – ದೃಢತೆ ಇರುವದರಿಂದ ಏಷ:—ಈ ನಹುಷನು ಸ್ವಯಂ ಏವ – ತಾನೇ, ಭಂಗಂ—ಶ್ರಮವನ್ನು, ಯಾಸ್ಯತಿ–ಹೊಂದುತ್ತಾನೆ (ಅದರಿಂದ ತಾನಾಗಿಯೇ ಬಿಡುತ್ತಾನೆ)ಸರ್ಪೇ–ಸರ್ಪವು, ಸ್ರಸ್ತಾಂಗೇ ಪತಿತೇಸತಿ–ದೇಹಸಡಿಲಾಗಿ ಬೀಳುತ್ತಿರಲು, ಯಾಸ್ಯಾಮೀ–ನಾನು ಹೋಗುತ್ತೇನೆ. ಇತಿ–ಎಂದು, ವಿಚಿಂತಯನ್ – ವಿಚಾರಿಸಿದವರಾಗಿ, ಭೀಮಃ—ಶ್ರೀಭವಸೇನದೇವರು, ಸ್ವಭಾವಾತ್–ತಮ್ಮ ಸ್ವಾಭಾವಿಕ ಭಕ್ತಿಯಿಂದ, ನ ತದಿಚ್ಛಯಾ–ಬಿಡುಗಡೆಯ ಇಚ್ಛೆಯಿಂದ ಅಲ್ಲದಂತೆ, ಹರಿಂ ಧ್ಯಾಯನ್–ಶ್ರೀಹರಿಯ ಧ್ಯಾನವಮಾಡುವವರಾಗಿ, ತಸ್ಥೌ—ಇದ್ದರು. ॥೩೭೦-೩೭೧-೩೭೨॥

ತದ್ಯೈವ ಬ್ರಹ್ಮವಚನಾತ್ಪೂರ್ವೋಕ್ತಾತ್ ಕೇಶವಾಜ್ಞಯಾ ।
ಬಲಂ ತಪಶ್ಚ ಸರ್ವಸ್ಯ ತತ್ಸ್ಥಂ ಮಾಯಾದ್ವ್ಯಕೋದರನ್ ॥೩೭೩॥

ತದಾ – ಅದೇ ಸಮಯದಲ್ಲಿ, ಕೇಶವಾಜ್ಞಯಾ ಪ್ರವೃತ್ತಾತ್ ಪೂರ್ವೋಕ್ತಾತ್ ಬ್ರಹ್ಮವಚನಾತ್ ಏವ— ಶ್ರೀಹರಿಯ ಅಪ್ಪಣೆಯಂತೆ ಇರುವ ಈ ಮೊದಲು ಹೇಳಿದ. ಬ್ರಹ್ಮದೇವರ ವರಮಾತಿನಂತೆ ತತ್ಸ್ಥಂ-ಆ ನಹುಷನಲ್ಲಿರುವ ಸರ್ವಸ್ಯ ಬಲಂ ತಪಃ ಚ—ಎಲ್ಲರ ಸಾಮರ್ಥ್ಯವು, ತಪಸ್ಸೂ ಕೂಡ, ವೃಕೋದರಂ—ಭೀಮಸೇನರನ್ನು ಕುರಿತು, ಆಯಾತ್—ಬಂದಿತು; ॥೩೭೩॥

ಪೂರಿತೇ ನಹುಷಸ್ತೇನ ತಪಸಾ ಚ ಬಲೇನ ಚ ।
ಭೀಮೇ ಸ ನಹುಷೋಽಪ್ಯಾಸೀತ್ಸ್ರಸ್ತ ಭೋಗಶ್ಶನೈಃಶನೈಃ ॥೩೭೪॥

ನಹುಷಸ್ತೇನ-ನಹುಷಲ್ಲಿದ್ದ, ತಪಸಾ—ತಪಸ್ಸಿನಿಂದ ಚ ಮತ್ತು, ಬಲೇನ ಚ—ಶಕ್ತಿಯಿಂದಲೂ ಕೂಡ, ಭೀಮೇ – ಶ್ರೀಭೀಮರು, ಪೂರಿತೇ ಸತಿ – ಪೂರ್ಣರಾಗಿರುತ್ತಿರಲು, ನಹುಷ ಅಪಿ—ನಹುಷನೂ ಕೂಡ, ಶನೈಃಶನೈಃ—ಮೆಲ್ಲ ಮೆಲ್ಲನೇ, ಸ್ರಸ್ತಭೋಗಃ – ಸಡಿಲಾದ ದೇಹವುಳ್ಳವನು, ಆಸೀತ್ – ಆದನು. ॥೩೭೪॥

ಭಾವಾನುವಾದ ೩೫೯-೩೭೪

ಈ ರೀತಿ ಪೂರ್ವ ಇತಿಹಾಸದಂತೆ ನಹುಷನು ಅಜಗರನಾಗಿ ಬಿದ್ದಿರುವಾಗ ಇಪ್ಪತ್ತೆಂಟನೆಯ ದ್ವಾಪರ ಯುಗದಲ್ಲಿ ಭೀಮರು ಆ ನಹುಷನನ್ನು ಹೊಂದಿದರು. ಅವನಲ್ಲಿರುವ ಸರ್ವದೇವಮುನಿಗಳ ತಪಃ ಪ್ರಭಾವವನ್ನು ತೆಗೆದುಕೊಳ್ಳುವ ಇಚ್ಛೆಯಿಂದ ಅವನ ಹಿಡಿತದಲ್ಲಿದ್ದವರಂತೆ ಆಗಿದ್ದರು ಹೊರತು; ಬಿಡಿಸಿಕೊಳ್ಳಲು ಅಶಕ್ತಿಯಿಂದಾಗಿ ಅಲ್ಲ. ಏಕೆಂದರೆ ಈ ಹಿಂದೆ ಹೇಳಿದಂತೆ ಸಾಮಾನ್ಯವಾಗಿ ದೇವತೆಗಳಿಗೆ ಮೂಲರೂಪದ ಶಕ್ತಿ ಅವತಾರರೂಪದಲ್ಲಿಲ್ಲದಿದ್ದರೂ ಕೂಡ, ವಾಯುದೇವರಿಗೆ ಮಾತ್ರ ತಮ್ಮ ಇಚ್ಛೆಯಂತೆ ಅವತಾರರೂಪದಲ್ಲಿಯೂ ಮೂಲರೂಪದ ಶಕ್ತಿಯು ಬರುವದರಿಂದ ಅಶಕ್ತಿಯಿಂದ ಎಂದು ಅಲ್ಲ. ಅವತಾರ ರೂಪದಲ್ಲಿ ಮೂಲರೂಪದ ಶಕ್ತಿಯನ್ನು ಪ್ರಕಟ ಮಾಡಿಕೊಳ್ಳದಿದ್ದರೆ ಅದು ಒಂದು ಧರ್ಮವು ಹಾಗೂ ಅದರಿಂದ ಶ್ರೀಹರಿಯು ಪ್ರೀತಿಯೂ ಆಗುವದರಿಂದ ಆ ರೀತಿ ತಮ್ಮ ಮೂಲರೂಪದ ಶಕ್ತಿಯನ್ನುಂತೂ ಪ್ರಕಟಮಾಡಿಕೊಳ್ಳಲೇ ಇಲ್ಲ. ಈ ಮನುಷ್ಯ ಭೀಮರೂಪರಲ್ಲಿ ಎಷ್ಟು ಶಕ್ತ್ಯಾದಿಗಳು ಬರಲು ಯೋಗ್ಯವೋ ಅಷ್ಟು ಶಕ್ತಿಯಿಂದಲೂ ಸರ್ವ ಸಂಹಾರ ಮಾಡುವ ಅರ್ಹತೆಯುಳ್ಳ ಶ್ರೀಭೀಮರು ಅಶಕ್ತಿಯಿಂದ ಬಂಧನದಲ್ಲಿದ್ದದ್ದಲ್ಲ; ಕಿಂತು ಅವನ ಶಕ್ತಿ ಹಾಗೂ ಎಲ್ಲರ ಶಕ್ತಿಯನ್ನು ಕಸಿಯಲು ಇದ್ದದ್ದು. ಅದಕ್ಕಾಗಿಯೇ ತಮ್ಮ ಬಿಡುಗಡೆಗಾಗಿ ನಹುಷನ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಿಲ್ಲ. ಉತ್ತರಕೊಟ್ಟು ಬಿಡುಗಡೆ ಮಾಡಿಕೊಂಡರೆ ವಿದ್ಯೆಯಿಂದ ಉಪಜೀವನವನ್ನು ಮಾಡಿದಂತಾಗುವದು. ವಿದ್ಯೋಪಜೀವನವನ್ನು ಬ್ರಾಹ್ಮಣರೂ ಕೂಡ ಬಾರದು; ಹಾಗಿರುವಾಗ ಕ್ಷತ್ರಿಯರು ಮಾಡಬಾರದೆಂದು ಏನು ಹೇಳಬೇಕು. ಶುದ್ಧಧರ್ಮರತರಾದ ಶ್ರೀಭೀಮರು ಅದಕ್ಕಾಗಿ ಉತ್ತರಿಸಲೂ ಇಲ್ಲ. ಅವನ ಬಂಧನದಲ್ಲಿದ್ದು ಬಿಡಿಸಿಕೊಳ್ಳುವ ಪ್ರಯತ್ನವನ್ನೂ ಮಾಡಲಿಲ್ಲ. ಹಾಗಿದ್ದರೂ ಎಲ್ಲ ದೇವಋಷಿಗಳ ಬಲದಿಂದ ಪೂರ್ಣನಾಗಿದ್ದರೂ ಕೂಡ ಆ ನಹುಷನಿಗೆ ಆ ಭೀಮರನ್ನು ಅಲುಗಾಡಿಸಲೂ ಆಗಲಿಲ್ಲ. ಕೇವಲ ಸುತ್ತಿಕೊಂಡು ಕುಳಿತಿದ್ದನಷ್ಟೇ ವಿನಃ ಅದಕ್ಕಿಂತ ಹೆಚ್ಚು ಏನು ಮಾಡಲೂ ಸಮರ್ಥನಾಗಲಿಲ್ಲ. ಭೀಮಸೇನದೇವರಿಗೆ ತಾನು ಈ ರೀತಿ ಬಂಧನದಲ್ಲಿದ್ದದ್ದನ್ನು ನೋಡಿದ ನನ್ನ ತಾಯಿ, ಸಹೋದರರು ದುಃಖಪಡುವರು; ಅವರಿಗೆ ದುಃಖವಾಗುವಂತಾಗಬಾರದು; ಅದಕ್ಕಾಗಿ ನಾನು ಹೆಚ್ಚು ಹೊತ್ತು ಬಂಧನದಲ್ಲಿರಬಾರದು ಎಂದು ವಿಚಾರವೇನೋ ಇತ್ತಾದರೂ ತನ್ನ ಬಿಡುಗಡೆಗಾಗಿ ಪ್ರಯತ್ನಿಸಲಿಲ್ಲ. ಇಷ್ಟು ಮಹಾ ಭಾಗವತಧರ್ಮಾನುಷ್ಠಾನದ ದಾರ್ಢ್ಯವು ಶ್ರೀಭೀಮರಲ್ಲಿದ್ದದ್ದನ್ನು ಗಮನಿಸಬೇಕು ಮತ್ತು ಇವನಲ್ಲಿಯ ಶಕ್ತ್ಯಾದಿಗಳನ್ನು ತೆಗೆದುಕೊಳ್ಳಲು ಶ್ರೀಭೀಮರ ಉದ್ದೇಶವಿತ್ತು ಅವನ ಅಹಂಕಾರ ಹಾಗೂ ಸರ್ಪ ಜನ್ಮಹೋಗುವ ಕರುಣೆಯೂ ಇತ್ತು. ನಾನು ಹಾಗೆ ಬಂಧನದಲ್ಲಿದ್ದರೂ ಕೂಡ ನನ್ನ ಮೇಲಿನ ಶ್ರೀಹರಿಯ ಕೃಪೆಯಿಂದ ಇರುವ

ನನ್ನ ದೇಹದ ಸ್ವಾಭಾವಿಕ ದಾರ್ಢ್ಯದಿಂದ ಇವನ ದೇಹವೇ ಹಣ್ಣಾಗಿ ಜರ್ಜರಿತವಾಗಿ ಕಾಲಕ್ರಮೇಣ ತಾನೇ ಬಂಧನವನ್ನು ಸಡಿಲಗೊಳಿಸುವನು. ಆಗ ನಾನು ಹೊರಡುವೆನು ಎಂದು ವಿಚಾರಿಸಿದರು. ಇಷ್ಟು ವಿಚಾರಿಸಿ ಸ್ವಾಭಾವಿಕವಾಗಿ ಸದಾ ಶ್ರೀಹರಿಯು ಧ್ಯಾನಮಾಡುವಂತೆ ಅದೇ ರೀತಿ ಧ್ಯಾನವನ್ನು ಮಾಡುತ್ತಾ ಇದ್ದರು. ಶ್ರೀಹರಿಯು ಧ್ಯಾನದಲ್ಲಿ ತಮ್ಮ ಬಿಡುಗಡೆಯು ಉದ್ದೇಶವೇನೂ ಇರಲೇ ಇಲ್ಲ. ಹೀಗೆ ಬಂಧನದಲ್ಲಿರುವಾಗ ನಹುಷನಿಗೆ ಈ ಭೀಮರನ್ನು ಏನು ಮಾಡಲೂ ಆಗದಿದ್ದಾಗ ಶ್ರೀಹರಿಯು ಆಜ್ಞೆಯಂತೆ ಬಂದ ಬ್ರಹ್ಮದೇವರ ವಚನದಂತೆ ಇವನಲ್ಲಿರುವ ಎಲ್ಲ ದೇವಋಷಿಗಳ ತಪಸ್ಸಿನ ಪ್ರಭಾವವು, ಬಲವು ಶ್ರೀಭೀಮರನ್ನು ಬಂದು ಸೇರಿದವು. ಆ ಹೆಬ್ಬಾವೂ ಕೂಡ ಕ್ರಮೇಣ ತನ್ನ ಬಂಧನವನ್ನು ಸಡಿಲಿಸಿತು.

ಗತೇ ಭೀಮೇ ನಿಮಿತ್ತಾನಿ ದೃಷ್ಟ್ವಾ ರಾಜಾ ಯುಧಿಷ್ಠಿರಃ ।
ಪಪ್ರಚ್ಛ ಕ್ವ ಗತೋ ಭೀಮ ಇತಿಕೃಷ್ಣಾಂ ಚಲನ್ಮನಾಃ ॥೩೭॥

ಭೀಮೇ ಗತೇಸತಿ – ಭೀಮಸೇನರು ಹೋಗಿರುತ್ತಿರಲು ರಾಜಾಯುಧಿಷ್ಠಿರಃ – ಧರ್ಮರಾಜನು, ನಿಮಿತ್ತಾನಿ ದೃಷ್ಟ್ವಾ – ಅನೇಕ ಅಪಶಕುನಗಳನ್ನು ಕಂಡು, ಚಲನ್ಮನಾಃ ಸನ್ – ಅಳುಕುವ ಮನಸ್ಸುಳ್ಳವನಾಗಿ, ಕೃಷ್ಣಾಂ– ದ್ರೌಪದೀದೇವಿಯನ್ನು, ಭೀಮಃ ಕ್ವಗತಃಇತಿ—ಭೀಮನೆಲ್ಲಿ ಹೋಗಿರುವನು? ಎಂದು, ಪಪ್ರಚ್ಛ – ಪ್ರಶ್ನಿಸಿದನು. ॥೩೭॥

ಯಾತಂ ಮೃಗಾರ್ಥಂ ಸ ನಿಶಮ್ಯ ತಸ್ಯಾಸ್ತದೂರುವೇಗಾತ್ಪತಿತಾನ್ನಗೇಂದ್ರಾನ್ ।
ದೃಷ್ಟ್ವಾ ಪಥಾ ತೇನ ಯಯೌ ಸ ತತ್ರ ದೃಷ್ಟ್ವಾ ಚ ಸಪರ್ವಾವೃತಮುನ್ಮಪೃಚ್ಛತ್ ॥೩೮॥

ಸಃ – ಆ ಧರ್ಮರಾಜನು. ತಸ್ಯಾಃ - (ಮುಖಾತ್)—ಆ ದ್ರೌಪದೀದೇವಿಯ ಮುಖದಿಂದ, ಮೃಗಾರ್ಥಂ ಯಾತಂ – ಬೇಟೆಗಾಗಿ ಹೋದವನನ್ನಾಗಿ, ನಿಶಮ್ಯ—ಕೇಳಿ, (ಹೊರಟು) ತದೂರುವೇಗಾತ್ – ಆ ಭೀಮರ ತೊಡೆಯ ಸ್ಪರ್ಶಮಾತ್ರದ ಸಾಮರ್ಥ್ಯದಿಂದ, ಪತಿತಾನ್—ಬಿದ್ದಿರುವ, ನಗೇಂದ್ರಾನ್ - ಗಿಡಗಳನ್ನು, ದೃಷ್ಟ್ವಾ—ನೋಡಿ, ತೇನ ಪಥಾ—ಆ ಮಾರ್ಗದಿಂದ, ಯಯೌ—ಹೋದನು. ಚ – ಮತ್ತು, ತತ್ರ—ಅಲ್ಲಿ ಸಪರ್ವಾವೃತಂ ದೃಷ್ಟ್ವಾ – ಸರ್ಪದಿಂದ ಸುತ್ತಲ್ಪಟ್ಟ ಭೀಮರನ್ನು ನೋಡಿ, ಉನ್ಮಪೃಚ್ಛತ್ - (ನಹುಷನನ್ನು) ಪ್ರಶ್ನಿಸಿದನು. ॥೩೮॥

ಸಕಾರಣಂ ನಹುಷಾತ್ಸರ್ವಮೇವ ಶುಶ್ರಾವ ತತ್ಪ್ರಶ್ನಮಶೇಷತಶ್ಚ ।
ಭ್ರಾತೃಸ್ನೇಹಾತ್ ವ್ಯಾಕರೋದ್ಧರ್ಮಸೂನುಸ್ತದೈವ ಸೋಽಪ್ಯಾರುಹತ್ಸ್ವರ್ಗಲೋಕಮ್ ॥೩೯॥

ಸಃ ಧರ್ಮಸೂನುಃ—ಆ ಧರ್ಮರಾಜನು, ನಹುಷಾತ್—ನಹುಷನ ಮುಖದಿಂದ; ಸರ್ವಂ ಕಾರಣಂ—ತನಗೆ ಈ ಅಜಗರರೂಪ ಬರಲು ಕಾರಣವನ್ನು, ತಾನು ಭೀಮರನ್ನು ಹಿಡಿದಿರಲು ಕಾರಣವನ್ನು, ಆ ಜನ್ಮದಿಂದ ಬಿಡುಗಡೆ ಹೊಂದಲು ಕಾರಣವನ್ನು, ಶುಶ್ರಾವ = ಕೇಳಿಕೊಂಡನು, ಚ—ಹಾಗು, ಅಶೇಷತಃ—ಎಲ್ಲ, ತತ್ಪ್ರಶ್ನಂ ಚ – ಅವನ ಪ್ರಶ್ನೆಗಳನ್ನೂ ಕೂಡ. ಭ್ರಾತೃಸ್ನೇಹಾತ್ – ಸಹೋದರರಾದ ಶ್ರೀಭೀಮರ ಮೇಲಿನ ಸ್ನೇಹದಿಂದ, ವ್ಯಾಕರೋತ್– ಉತ್ತರಿಸಿದನು. ತದಾ ಏವ ತಕ್ಷಣವೇ, ಸಃಅಪಿ—ಆ ನಹುಷನೂ ಕೂಡ, ಸ್ವರ್ಗಲೋಕಂ – ಸ್ವರ್ಗವನ್ನು, ಆರುಹತ್- ಏರಿದನು. ॥೩೯॥

ದಿವ್ಯಾಂಬರೇ ಕುಂಡಲಿನಿ ಸ್ವಪೂರ್ವೇ ಗತೇ ವಿಮಾನೇನ ಸ ಧರ್ಮರಾಜ: ।
ಭೀಮುಶ್ಚಾಯಾತಾಸ್ವಾಶ್ರಮಾಯೈವ ಸರ್ವಂ ಯುಧಿಷ್ಠಿರಃ ಕಥಯಾಮಾಸ ತತ್ರ ॥೩೭೫॥

ಸ್ವಪೂರ್ವೇ – ತನ್ನ ಕುಲದ ಪ್ರಾಚೀನರಾಜನಾದ ಆ ನಹುಷರಾಜನು, ದಿವ್ಯಾಂಬರೇ–ಶ್ರೇಷ್ಠ ಪೀತಾಂಬರ ಧಾರಿಯಾಗಿ, ಕುಂಡಲಿನಿ – ಕರ್ಣಕುಂಡಲ ಸಹಿತನಾಗಿ, ವಿಮಾನೇನ ವಿಮಾನದಿಂದ. ಗತೇ ಸತಿ — ಹೋಗುತ್ತಿರಲು ಸಃಧರ್ಮರಾಜಃ – ಆ ಧರ್ಮರಾಜನು, ಸ್ವಾಶ್ರಮಾಯ ಏವ—ತನ್ನ ಆಶ್ರಮಕ್ಕೇ, ಆಯಾತ್—ಬಂದನು. ಭೀಮಃಚ ಆಯಾತ್—ಭೀಮರೂ ಬಂದರು. ಯುಧಿಷ್ಠಿರಃ – ಧರ್ಮರಾಜನು, ತತ್ರ—ಆ ಆಶ್ರಮದಲ್ಲಿದ್ದವರ ಮುಂದೆ, (ದ್ರೌಪದೀ ಅರ್ಜುನಾದಿಗಳಿದ್ದರು), ಸರ್ವಂ – ಎಲ್ಲವನ್ನು, ಕಥಯಾಮಾಸ—ಹೇಳಿದನು. ॥೩೭೫॥

ಶ್ರುತ್ವಾ ಕೃಷ್ಣಾ ಭ್ರಾತರಶ್ಚಾಸ್ಯ ಸರ್ವೆ ಸರ್ವೇ ಮುನೀಂದ್ರಾ ಭೀಮಸೇನೇsತಿ ಭಕ್ತ್ಯಾ।
ವ್ರೀಳಾಂಯುಯುರ್ಭೀಮಸೇನಗ್ರಹೇಣ ತಥಾsಬ್ರುವನ್ ಸ್ನೇಹತೋ ಭೀಮಸೇನಮ್॥೩೭೬॥

ಕೃಷ್ಣಾ – ದ್ರೌಪದೀದೇವಿಯು, ಅಸ್ಯ ಸರ್ವೇ ಭ್ರಾತರ:— ಈ ಭೀಮರ ಎಲ್ಲ ಸಹೋದರರು ಭೀಮಸೇನೇ ಅತಿ ಭಕ್ತ್ಯಾ: – ಭೀಮರಲ್ಲಿ ಅತಿ ಪ್ರೀತಿಯುಳ್ಳ, ಸರ್ವೇ ಮುನೀಂದ್ರಾ:—ಎಲ್ಲ ಶ್ರೇಷ್ಠ ಮುನಿಗಳು, ಶ್ರುತ್ವಾ ಎಲ್ಲ ವಾರ್ತೆಯನ್ನು ಕೇಳಿ, ಭೀಮಸೇನಗ್ರಹೇಣ—ಭೀಮಸೇನರನ್ನ ಹೆಬ್ಬಾವು ಹಿಡಿದಿತ್ತು ಎಂಬ—ಸುದ್ದಿಯಿಂದ ವ್ರೀಳಾಂಯುಯು:—ನಾಚಿಕೆಯನ್ನು ಹೊಂದಿದರು. ತಥಾ–ಹಾಗೂ, ಸ್ನೇಹತ: – ಸ್ನೇಹದಿಂದ, ಭೀಮಸೇನಂ – ಭೀಮಸೇನರನ್ನು ಕುರಿತು, ಅಬ್ರುವನ್–ಮಾತನಾಡಿದರು. ॥೩೭೬॥

ನೈತಾದೃಶಂ ಸಾಹಸಂ ತೇsನುರೂಪಂ ಶಕ್ತೋsಪಿ ಯತ್ತ್ವಾಮತ್ಮನೋ ಮೋಕ್ಷಣಾಯ।
ನೈವಾಚರೋ ಯತ್ನಮತೋ ನಿಜಾನಾಂ ಮಹದ್ದು:ಖಂ ಹೃದಯೇಪ್ರ್ಯಾರ್ಪಯಸ್ತ್ವಂ ॥೩೭೭॥

ಏತಾದೃಶಂ ಸಾಹಸಂ – ಈ ರೀತಿಯಾದ ಸಾಹಸಕಾರ್ಯವು (ಬೇರೆಯವರಿಗೆ ನಮಗೆ ದು:ಖವನ್ನುಂಟು ಮಾಡುವ, ಆಪತ್ತು ಬರಬಹುದಾದ ಕಾರ್ಯವು) ತೇ – ಬಲಿಷ್ಠನಾದ ನಿನಗೆ, ನ ಅನುರೂಪಂ - ಯೋಗ್ಯವಲ್ಲ. ಯತ್ – ಏಕ್ಯವದೆಂದರೆ, ತ್ವಂ -ನೀನು, ಆತ್ಮನಃ ಮೋಕ್ಷಣಾಯ–ನಿನ್ನ ಬಿಡುಗಡೆಗಾಗಿ, ಶಕ್ತ: ಅಪಿ – ಸಮರ್ಥನಾದರೂ ಕೂಡ, ಯತ್ನಂ – ಪ್ರಯತ್ನವನ್ನು, ನೈವ ಆಚರ:—ಮಾಡಲೇ ಇಲ್ಲ, ಅತ: – ಇದರಿಂದ, ನಿಜಾನಾಂ – ನಿನ್ನ ಅಭಿಮಾನಿಗಳ, ಹೃದಯೇ—ಮನಸ್ಸಿನಲ್ಲಿ, ಮಹತ್ ದು:ಖಂ – ಬಹಳೇ ದು:ಖವನ್ನು, ಪ್ರ್ಯಾರ್ಪಯ:- ಉಂಟು:ಮಾಡಿದಿ. ॥೩೭೦॥

ಮೈವಂ ಪುನ:ಕಾರ್ಯಮಿತಿ ಬ್ರುವಂತಸ್ತಮಾಶ್ಲಿಷನ್ ಸರ್ವ ಏವೈತ್ಯಭೀಮಂ ।
ತತೋsಹೋಭಿ:ಕೈಶ್ಚಿದಾಪುಃಕುರೂಣಾಂ ರಾಷ್ಟ್ರಂಪಾರ್ಥಾಮುನಿಮುಖ್ಯೈಸ್ಸಮೇತಃ॥೩೭೯॥

ಏವಂ – ಈ ರೀತಿ, ಪುನಃ ಮಾ ಕಾರ್ಯಂ – ಮತ್ತೊಮ್ಮೆ ಮಾಡಲ್ಪಡಬಾರದು. ಇತಿ ಬ್ರುವಂತ:ಸಂತ.- ಎಂದು ಹೇಳಿದವರಾಗಿ, ಸರ್ವೇ ಏವ – ಎಲ್ಲರೂ ಕೂಡ, ಭೀಮಂ–ಭೀಮರ ಹತ್ತಿರ. ಏತ್ಯ – ಬಂದು ಸಮಾಶ್ಲಿಷನ್ ಆಲಿಂಗಿಸಿಕೊಂಡರು, ತತ: – ಅನಂತರ, ಕೈಶ್ಚಿತ್ ಅಹೋಭಿ:—ಕೆಲವು ದಿನಗಳಲ್ಲಿ, ಮುನಿಮುಖ್ಯೈ: ಸಮೇತಾ:–ಶ್ರೇಷ್ಠ ಮುನಿಗಳಿಂದ ಕೂಡಿದ, ಪಾರ್ಥಾ: – ಪಾಂಡವರು, ಕುರೂಣಾಂ ರಾಷ್ಟ್ರಂ - ಕುರುರಾಜರ ರಾಷ್ಟ್ರದಲ್ಲಿರುವ ವನಕ್ಕೆ, ಆಪು: - ಬಂದರು. ॥೩೮೧॥

ತತೋಽವಿತೌ ಜಾ ಭಗವಾನುಪಾಗಮಂನಾ ನಾರಾಯಣಸ್ಸತ್ಯಭಾಮಾಸಹಾಯಃ ।
ಸಂಪೂಜಿತಃ ಪಾಂಡವೈಸ್ತೈಸ್ಸಮೇತಶ್ಚಕ್ರೇಽಥ ಸೌಹಾರ್ದನಿಮಿತ್ತಸತ್ಕಥಾಃ ॥೩೮೨॥

ತತಃ – ಆ ಪ್ರದೇಶದಲ್ಲಿರುವಾಗ, ಸತ್ಯಭಾಮಾಸಹಾಯಃ ಅವಿಭಕ್ತೌ ಜಾಃ ಭಗವಾನ್ ನಾರಾಯಣಃ—ಸತ್ಯಭಾಮಾ ಸಹಿತನಾದ, ಅಪರಿಮಿತ ಪರಾಕ್ರಮವುಳ್ಳ ಶ್ರೀಕೃಷ್ಣಪರಮಾತ್ಮನು ಉಪಾಗಮಂತ್– ಬಂದನು. ಅಥ—ನಂತರ; ತೈಃ ಪಾಂಡವೈಃ – ಆ ಪಾಂಡವರಿಂದ ಸಂ ಪೂಜಿತಃ ಸನ್—ಪೂಜಿಸಲ್ಪಟ್ಟವನಾಗಿ, ತೈಃ ಸಮೇತಃ ಸನ್–ಅವರಿಂದ ಕೂಡಿದವನಾಗಿ, ಸೌಹಾರ್ದನಿಮಿತ್ತಸತ್ಕಥಾಃ – ಸ್ನೇಹನಿಮಿತ್ತಕವಾದ ಸತ್ಕಥಾಲಾಪಗಳನ್ನೂ ಚಕ್ರೇ – ಮಾಡಿದನು. ॥೩೮೨॥

ಕೃಷ್ಣಾ ಚ ಸತ್ಯಾ ಚ ಪರಸ್ಪರಂ ಮುದಾ ಸಂಭಾಷಣಂ ಚಕ್ರತುರ್ಯೋಷಿದಗ್ರ್ಯೇ ।
ಪರೀಕ್ಷಣ್ಯಾ ಸತ್ಯಯಾ ಸರ್ವವೇತ್ರ್ಯಾ ನಿರ್ದೋಷಯಾ ಚೋದಿತಾ ಪ್ರಾಹ ಕೃಷ್ಣಾ ॥೩೮೩॥

ಯೋಷಿದಗ್ರ್ಯೇ—ಸ್ತ್ರೀಯರಲ್ಲಿ ಶ್ರೇಷ್ಠರಾದ, ಕೃಷ್ಣಾ ಚ ಸತ್ಯಾ ಚ – ದ್ರೌಪದೀದೇವಿ ಮತ್ತು ಸತ್ಯಭಾಮಾದೇವಿ ಇಬ್ಬರೂ ಕೂಡ, ಮುದಾ – ಸಂತೋಷದಿಂದ, ಪರಸ್ಪರಂ ಸಂಭಾಷಣಂ ಚಕ್ರತುಃ – ಪರಸ್ಪರವಾಗಿ ಸಂಭಾಷಣೆಯನ್ನು ಮಾಡಿದರು. ಸರ್ವವೇತ್ರ್ಯಾ—ಸರ್ವಜ್ಞಳಾದ ನಿರ್ದೋಷಯಾ – ಯಾವದೇ ದೋಷರಹಿತಳಾದ, ಪರೀಕ್ಷಣ್ಯಾ ದ್ರೌಪದೀದೇವಿಯು ಧರ್ಮಚಾತುರ್ಯವನ್ನು ನಿರೀಕ್ಷಿಸತಕ್ಕ, ಸತ್ಯಯಾ—ಸತ್ಯಭಾಮಾದೇವಿಯಿಂದ, ಚೋದಿತಾ—ಆಜ್ಞಾಪ್ತಳಾದ, ಕೃಷ್ಣಾ - ದ್ರೌಪದೀದೇವಿಯು, ಪ್ರಾಹ—ಹೇಳಿದಳು. ॥೩೮೩॥

ಸ್ತ್ರೀಧರ್ಮಾನಖಿಲಾಂಸ್ತತ್ರ ಸತ್ಯಾಂ ನಿರ್ದೋಷಸಂವಿದಮ್ ।
ಜ್ಞಾತ್ವಾಽಪಿ ಕೃಷ್ಣಾ ಪ್ರೋವಾಚ ಲೋಕಶಿಕ್ಷಾರ್ಥಮೇವ ತು ॥೩೮೪॥

ಕೃಷ್ಣಾ – ದ್ರೌಪದೀದೇವಿಯು, ಸತ್ಯಾಂ— ಸತ್ಯಭಾಮೆಯನ್ನು, ನಿರ್ದೋಷಸಂವಿದಂ – ನಿರ್ದಿಷ್ಟ ಜ್ಞಾನವುಳ್ಳವಳನ್ನಾಗಿ, ಜ್ಞಾತ್ವಾ ಅಪಿ - ತಿಳಿದೂಕೂಡ. ಲೋಕಶಿಕ್ಷಾರ್ಥಂ ಏವ – ಲೋಕದ ಜನರಿಗೆ ತಿಳಿಸುವದಕ್ಕಾಗಿಯೇ ಹೊರತು ಸತ್ಯಭಾಮಾಳಿಗೆ ತಿಳಿಸುವದಕ್ಕಾಗಿ ಎಂದು ಅಲ್ಲ), ಅಖಿಲಾನ್ ಸ್ತ್ರೀ ಧರ್ಮಾನ್ – ಎಲ್ಲ ಸ್ತ್ರೀ ಧರ್ಮಗಳ ಬಗ್ಗೆ ತತ್ರ – ಆ ಸಂದರ್ಭದಲ್ಲಿ, ಪ್ರೋವಾಚ – ಹೇಳಿದಳು. ॥೩೮೪॥

ಕ್ರೀಡಾರ್ಥಮೇವ ವಚನಂ ಜ್ಞಾತ್ವಾ ಸತ್ಯಾಸಮೀರಿತಂ ।
ತಸ್ಯಾನುಸಾರವಾಕ್ಯಾನಿ ತತ್ಪ್ರೀತ್ಯಾ ಏವ ಸಾಽಬ್ರವೀತ್ ॥೩೮೫॥

ಸಾ – ಆ ದ್ರೌಪದೀದೇವಿಯು, ಸತ್ಯಾಸಮೀರಿತಂ – ಸತ್ಯಭಾಮಾದೇವಿಯು ಹೇಳಿದಂತೆ, ವಚನಂ–ಮಾತನ್ನು, ಕ್ರೀಡಾರ್ಥಂ ಏವ – ಕೇವಲ ಕ್ರೀಡೆಗಾಗಿಯೇ ಇರುವದನ್ನಾಗಿ, ಜ್ಞಾತ್ವಾ – ತಿಳಿದು, ತಸ್ಯ—ಆ ಕ್ರೀಡಾರ್ಥಕ್ಕಾಗಿ ಇರುವ ಆ ಮಾತಿಗೆ, ಅನುಸಾರವಾಕ್ಯಾನಿ – ಅನುಸರಿಸಿರುವ ಮಾತುಗಳನ್ನು, ಅಬ್ರವೀತ್ – ಹೇಳಿದಳು. ॥೩೮೫॥

ತತಃ ಕತಿಪಯಾಹಾನಿ ನಿರುಷ್ಯಾತ್ರ ಜನಾರ್ದನಃ ।
ಯಯೌ ಸಧಾರ್ಯೈಃ ಸ್ವಪುರೀಂ ಪಾಂಡವಾನನುಮಾನ್ಯ ಚ ॥೩೮೬॥

ಜನಾರ್ದನಃ – ಶ್ರೀಕೃಷ್ಣಪರಮಾತ್ಮನಂ, ತತಃ ನಂತರ, ಕತಿಪಯಾಹಾನಿ - ಕೆಲವುದಿನಗಳವರಗೆ, ಅತ್ರ – ಇಲ್ಲಿ, ನಿರೂಪ್ಯ – ವಾಸಮಾಡಿ, ಆವೇಲೆ, ಪಾಂಡವಾನ್ ಅನುಮಾನ್ಯ – ಪಾಂಡವರನ್ನು ಆದರಿಸಿ, ತಾನು ಹೋಗಿ ಬರುವದಾಗಿ ತಿಳಿಹೇಳಿ, ಸಭಾರ್ಯಃಸನ್ – ಪತ್ನಿಯಾದ ಸತ್ಯಭಾಮೆಯಿಂದೊಡಗೂಡಿ, ಸ್ವಪುರೀಂ – ತನ್ನ ದ್ವಾರಕಾವನ್ನು ಕುರಿತು, ಯಃಯೌ – ಹೋದನು. ॥೩೮೬॥

ಭಾವಾನುವಾದ ೩೭೫ – ೩೮೬

ಈ ಕಡೆಗೆ ಅಪಶಕುನಗಳನ್ನು ಕಂಡ ಧರ್ಮರಾಜನು ಭೀಮಸೇನರು ಮನೆಯಲ್ಲಿಲ್ಲದ್ದನ್ನು ತಿಳಿದು ಎಲ್ಲಿಗೆ ಹೋಗಿದ್ದಾನೆ ಎಂಬುದಾಗಿ ದ್ರೌಪದೀದೇವಿಯನ್ನೇ ಯಥಾ ಪ್ರಕಾರ ಕೇಳಿದನು ಆಗ ಅವರು ಬೇಟೆಗೆ ಹೋಗಿದ್ದಾರೆಂಬುದಾಗಿ ತಿಳಿದು ಆ ಕಡೆಗೆ ಹೊರಟು, ಕಾಡಿನಲ್ಲಿ ದೊಡ್ಡ ದೊಡ್ಡ ಗಿಡಗಳು ಬಿದ್ದಿದ್ದನ್ನು ನೋಡಿ, ಇದೇ ಮಾರ್ಗದಿಂದ ಭೀಮನು ಹೋಗಿದ್ದಾನೆ ಎಂದು ತಿಳಿದು ಮುಂದೆ ಹೋದನು. (ಭೀಮನ ತೊಡೆಯ ಸ್ಪರ್ಶಮಾತ್ರದಿಂದಲೇ ಗಿಡಗಳೆಲ್ಲ ಉರುಳಿ ಬಿದ್ದಿದ್ದವು.) ಮುಂದೆ ಬಂದು ಭೀಮಸೇನರು ಸರ್ಪಬಂಧನಲ್ಲಿದ್ದದ್ದನ್ನು ನೋಡಿ ಸರ್ಪನಿಗೆ ಪ್ರಶ್ನೆಯನ್ನು ಮಾಡಿ ಸರ್ಪನಾಥನು? ಆ ರೀತಿ ಆಗಲು ಕಾರಣವೇನು ? ಬಂಧಿಸಲು ಕಾರಣ ಈ ರೂಪಹೋಗಲು ಕಾರಣ ಇವನ್ನೆಲ್ಲವನ್ನೂ ತಿಳಿದುಕೊಂಡು, ನಹುಷನು ಕೆಲವು ಪ್ರಶ್ನೆಗಳನ್ನು ಕೇಳಿದಾಗ ಅವುಗಳಿಗೆ ಉತ್ತರವನ್ನು ಸಹೋದರ ಸ್ನೇಹದಿಂದ ಕೊಟ್ಟನು. ಆಗ ನಹುಷನು ಆ ಹೆಬ್ಬಾವಿನ ರೂಪವನ್ನು ಬಿಟ್ಟು ಪೀತಾಂಬರ ಕರ್ಣಕುಂಡಲ ಧಾರಿಯಾದ ತನ್ನ ಮೂಲರೂಪವನ್ನು ಧರಿಸಿ ವಿಮಾನದಿಂದ ಸ್ವರ್ಗಲೋಕಕ್ಕೆ ಹೋದನು. ಧರ್ಮರಾಜ ಭೀಮಸೇನರೂ ತಮ್ಮ ಸ್ಥಾನಕ್ಕೆ ಬಂದರು. ಎಲ್ಲ ವಿಷಯವನ್ನು ಧರ್ಮರಾಜನು ಹೇಳಿದನು ಅದನ್ನು ಕೇಳಿದ ಋಷಿಗಳು ಸಹೋದರರು ಎಲ್ಲರೂ ಭೀಮನು ಬಂಧನದಲ್ಲಿದ್ದ ಎಂದು ತಿಳಿದೇ ತಾವೇ ನಾಚಿಕೆಪಟ್ಟುಕೊಂಡರು; ಮತ್ತು ಅವರ ಮೇಲಿನ ಸ್ನೇಹದಿಂದ ಈ ರೀತಿಯಾದ ಸಾಹಸಕಾರ್ಯವನ್ನು (ನೋಡುವವರಿಗೆ ಭಯಪ್ರದವಾದದ್ದನ್ನು) ಮಾಡಬಾರದು ಎಂದು ಹೇಳಿದರು; ಶ್ರೀಭೀಮರನ್ನು ಆಲಿಂಗಿಸಿದರು. ಹೀಗೆ ಪಾಂಡವರು ಅಲ್ಲಿರುವಾಗ ಒಮ್ಮೆ ಶ್ರೀಕೃಷ್ಣಪರಮಾತ್ಮನು ಸತ್ಯಭಾಮಾಸಹಿತನಾಗಿ ಬಂದನು. ಪಾಂಡವರು ಅವರನ್ನು ಪೂಜಿಸಿದರು ಪ್ರೀತಿ ಸ್ನೇಹಪ್ರಯುಕ್ತವಾಗಿ ವಿಶೇಷ ತತ್ವ ವಿಚಾರಗಳನ್ನು ಸತ್ಕಥಾಗಳನ್ನು ನಡೆಸಿದನು ದ್ರೌಪದೀದೇವಿ ಹಾಗು ಸತ್ಯಭಾಮಾದೇವಿಯರು ಪರಸ್ಪರವಾಗಿ ಸಂತೋಷದಿಂದ ಸಂಭಾಷಣೆಗಳನ್ನು ಮಾಡಿದರು. ದ್ರೌಪದೀದೇವಿಯು ಆಚರಿಸುವ ಸ್ತ್ರೀಧರ್ಮಗಳನ್ನು ಚೆನ್ನಾಗಿ ನಿರೀಕ್ಷಿಸಿ ಸಂತೋಷಪಟ್ಟ ಸತ್ಯಭಾವದೇವಿಯು ತಾನು ಕೇಳಿದಂತೆ ಮಾಡಿ ದ್ರೌಪದೀದೇವಿಯು ಮುಖದಿಂದ ಹೇಳಿದಾಗ ಲೋಕದ ಜನರಿಗೂ ಸ್ತ್ರೀ ಧರ್ಮಗಳು ತಿಳಿಯುವವು ಎಂಬ ಉದ್ದೇಶದಿಂದ ಕೇಳಿದಳು. ಅಜ್ಞಾನದಿಂದ ಕೇಳಿದ್ದಲ್ಲ. ಈ ರೀತಿ ಕೇಳಿದ್ದನ್ನು ತಿಳಿದ ದ್ರೌಪದೀದೇವಿಯೂ ಕೂಡ, ನಟಿಸಿ ಎಲ್ಲ ಸ್ತ್ರೀಧರ್ಮಗಳನ್ನು ಸತ್ಯಭಾಮಾದೇವಿಯರ ಪ್ರೀತಿಗಾಗಿಯೇ ಅವರ ಎದುರು ಹೇಳಿದರು ಆವೇಲೆ ಕೆಲವು ದಿನಗಳ ಪರ್ಯಂತ ಅಲ್ಲಿದ್ದು ಶ್ರೀಕೃಷ್ಣನು ಪಾಂಡವರನ್ನು ಸತ್ಕರಿಸಿ ಹೋಗಿಬರುವದಾಗಿ ಹೇಳಿ ಹೊರಟು ದ್ವಾರಕೆಗೆ ಬಂದನು

ತತಃಕದಾಚಿನ್ಮೃಗಯಾಂ ಗತೇಷುಪಾರ್ಥೇಷು ರಾಜಾಸ್ಯೈಂಧವೋ ಹ್ಯಾಸಸಾದ ।
ಸಕೋಟಿಕಾಶ್ಯಸ್ಯಬಲಶ್ಚ ತೇಷಾಂ ವರಾಶ್ರಮಂ ಸೋಽತ್ರ ದದರ್ಶಕೃಷ್ಣಾಮ್ ॥೩೮೭॥

ತತಃ – ಅನಂತರ, ಕದಾಚಿತ್ – ಒಮ್ಮೆ, ಪಾರ್ಥೇಷು – ಪಾಂಡವರು ಮೃಗಯಾರ್ಥಂಗತೇಷು ಸತ್ಸು – ಬೇಟೆಗೆಹೋಗಿರುತ್ತಿರಲು, ತೇಷಾಂ ಆಶ್ರಮಂ – ಅವರ ವಾಸಸ್ಥಾನಕ್ಕೆ, ಸಕೋಟಿಕಾಶ್ಯಃ - ಕಾಶೀದೇಶದಲ್ಲಿ ಹುಟ್ಟಿದ

ಕೋಟಿ ಎಂಬವನಿಂದ ಸಹಿತನಾದ ಚ – ಮತ್ತು, ಸಬಲಃ – ಸೈನ್ಯಸಮೇತನಾದ, ಸೈಂಧವಃ ರಾಜಾ – ಸಿಂಧುದೇಶದ ರಾಜನಾದ ಜಯದ್ರಥನು, ಆಸಸಾದ ಹಿ – ಬಂದನು. ಸಃ – ಅವನು, ಅತ್ರ – ಇಲ್ಲಿ, ಕೃಷ್ಣಾಂ – ದ್ರೌಪದೀಯನ್ನು ದದರ್ಶ – ಕಂಡನು. ॥೩೮॥

ವ್ರಜನ್ವಿವಾಹಾರ್ಥಮಸೌ ನಿಶಾಮ್ಯ ಕೃಷ್ಣಾಂ ಕೋಟಿಂ ಪ್ರೇಷಯಿತ್ವೈವಕಾಶ್ಯಮ್।
ಆಯಾಹಿ ಮಾಮಿತ್ಯವದತ್ಸುಪಾಪಸ್ತಯಾ ನಿರಸ್ತೋ ಜಗೃಹೇ ಕರೇ ಚ ॥೩೯॥

ವಿವಾಹಾರ್ಥಂ ವಿವಾಹಕ್ಕಾಗಿ, ವ್ರಜನ್ – ಹೊರಟಿದ್ದ ಸುಪಾಪಃ ಅಸೌ – ಪರಮಪಾಪಿಯಾದ ಆ ಜಯದ್ರಥನು, ಕೃಷ್ಣಾಂ – ದ್ರೌಪದೀದೇವಿಯನ್ನು, ನಿಶಾಮ್ಯ – ನೋಡಿ, ಕಾಶ್ಯಂ – ಕಾಶೀಯಲ್ಲಿ ಹುಟ್ಟಿದ, ಕೋಟಿಂ – ಕೋಟಿ ಎಂಬವನನ್ನು, ಪ್ರೇಷಯಿತ್ವಾ – ದ್ರೌಪದೀದೇವಿಯ ಹತ್ತಿರ ಕಳಿಸಿ, ಮಾಂ – ನನ್ನನ್ನು ಕುರಿತು, ಆಯಾಹಿ ಬಾ ಇತಿ – ಎಂದೂ, ಅವದತ್ – ಹೇಳಿದನು. (ಕೋಟಿಯನ್ನು ಮೊದಲು ಅವಳ ಹತ್ತಿರ ಕಳಿಸಿ ಯಾರವಳು ಎಂಬುದನ್ನು ವಿಚಾರಿಸಿಕೊಂಡು ಬರಲು ಹೇಳಿ, ಅವಳು ದ್ರೌಪದೀದೇವಿ ಎಂದೂ ಗೊತ್ತಾದ ಮೇಲೆ ತಾನೇ ಅವಳ ಹತ್ತಿರ ಬಂದು ನನ್ನ ಹತ್ತಿರ ಬಾ ಎಂದು ಹೇಳಿದನು ಎಂದೂ ಭಾವ.) ಚ – ಮತ್ತು ತಯಾ ನಿರಸ್ತಃ – ಅವಳಿಂದ ನಿಷೇಧಿಸಲ್ಪಟ್ಟ ಜಯದ್ರಥನು, ಕರೇ – ಅವಳ ಕೈಯನ್ನು, ಜಗ್ರಾಹ – ಹಿಡಿದನು. ॥೩೮॥

ತಯಾ ಧೂತೋ ನಿಪಪಾತಾಶು ಭೂಮೌ ಪುನಸ್ಸಸಂಜ್ಞೋಽಭ್ಯಗತದ್ವಿಲಜ್ಜಃ।
ತತೋಽಸಹಾಯತ್ವತ ಏವ ಕೃಷ್ಣಾ ಧೌಮ್ಯಾಯೋಕ್ತ್ವಾಸಾಗ್ನಿರನ್ವೇಹಿ ಮೇತಿ ॥೩೯॥

ಸಮಾರುಹತ್ಸ್ವಂ ಧವಸ್ಯೈವ ಯಾನಂ ಸುಖಂ ನ ಯಾಸೀತಿ ತಮೀರಯಿತ್ವಾ।
ತದಾ ನಿಮಿತ್ತಾನಿ ನಿಶಾಮ್ಯ ಪಾರ್ಥಾಸ್ಸಮಾಯಯುಸ್ತ್ವರಯೈವಾಶ್ರಮಾಯ ॥೪೦॥

ತಯಾ – ಅವಳಿಂದ, ಧೂತಃ – ಕೈಕೊಸರಿಕೊಂಡು ದೂಡಲ್ಪಟ್ಟ ಆ ಜಯದ್ರಥನು, ಆಶು – ಕೂಡಲೇ, ಭೂಮೌ ನಿಪಪಾತ – ಭೂಮಿಯಲ್ಲಿ ಬಿದ್ದನು, ಪುನಃ – ಮತ್ತೆ, ಸಸಂಜ್ಞಃ ಸನ್ – ಎಚ್ಚೆತ್ತವನಾಗಿ, ವಿಲಜ್ಜಃ – ಸನ್ನಾಚಿಕೆಯಿಲ್ಲದವನಾಗಿ, ಅಭ್ಯಗತ್ (ಅಭ್ಯಗಮತ್) – ಬೆನ್ನ ಹತ್ತಿ ಏರಿಬಂದನು. ತತಃ – ಆಗ, ಕೃಷ್ಣಾ – ದ್ರೌಪದೀದೇವಿಯು, ಅಸಹಾಯತ್ವತಃ ಏವ – ಸಹಾಯಕರು ಯಾರೂ ಇಲ್ಲದ್ದರಿಂದಲೇ, ಧೌಮ್ಯಾಯ – ಧೌಮ್ಯಾಚಾರ್ಯರಿಗೆ ಇತಿ – ನನ್ನನ್ನು, ಸಾಗ್ನಿಃ ಅನ್ವೇಹಿ – ಅಗ್ನಿಸಹಿತರಾಗಿ ಬೆನ್ನ ಹತ್ತಿ ಬನ್ನಿರಿ, ಇತಿ – ಎಂದೂ, ಉಕ್ತ್ವಾ – ಹೇಳಿ, ಸೈಂಧವಸ್ಯ ಯಾನಂ ಏವ – ಜಯದ್ರಥನ ರಥವನ್ನೇ, ಸುಖಂ ನ ಯಾಸಿ ಇತಿ – ನೀನು ಸುಖವಾಗಿ ಮನೆಗೆ ಹೋಗಲಿವದಿಲ್ಲ ಎಂದೂ, ತಂ ಈರಯಿತ್ವಾ ಏವ – ಆ ಜಯದ್ರಥನನ್ನು ಕುರಿತು ಹೇಳಿಯೇ, ಸಮಾರುಹತ್ – ಏರಿದಳು. ತದಾ – ಆ ಸಮಯದಲ್ಲಿ, ಪಾರ್ಥಾಃ – ಪಾಂಡವರು, ನಿಮಿತ್ತಾನಿ – ಅಪಶಕುನಗಳನ್ನು, ನಿಶಾಮ್ಯ – ನೋಡಿ, ತ್ವರಯಾ ಏವ – ಅತಿ ಬೇಗನೇ, ಆಶ್ರಮಾಯ – ಆಶ್ರಮಕ್ಕೆ, ಸಮಾಯಯುಃ – ಬಂದರು. ॥೩೯॥೪೦॥

ಶುತ್ವಾ ದಾಸೀವಚನಾತ್ ಸರ್ವಮೇವ ಚಕ್ರುಃ ಕ್ಷಿಪ್ರಂ ಸೈಂಧವಸ್ಯಾನುಯಾನಮ್ ।
ಆಕ್ರೋಶಮಾನಂ ಭೀಮಸೇನೇತಿ ಧೌಮ್ಯಂ ದೃಷ್ಟ್ವಾ ತಸ್ಯಾಗ್ರೇಸೈಂಧವಂಚಾತಿ ಪಾಪಮ್।೪೧॥

ಚಕ್ರುರ್ನಾದಂ ಸಿಂಹವತ್ಪಾಂಡುಪುತ್ರಾ :ದೃಷ್ಟ್ವಾ ಕೃಷ್ಣಾ ಚಾವತರದ್ರಥಾತ್ತದಾ।
ಧೌಮ್ಯೇನ ಸಾರ್ಧಂ ಸಾ ಯಯೌ ಚಾಶ್ರಮಾಯ ಸೈನ್ಯಂಪಾರ್ಥಾಸ್ತಸ್ಯ ನಿಜಘ್ನು ರೋಜಸಾ॥೪೨॥

(ಪಾಂಡವರು). ದಾಸೀವಚನಾತ್ — ದಾಸೀಸ್ತ್ರೀಯ ವಚಾತಿನಿಂದ, ಸರ್ವಂ— ಅಲ್ಲಿ ನಡೆದ ಎಲ್ಲ ಘಟನೆಯನ್ನೂ, ಶ್ರುತ್ವಾ — ಕೇಳಿ, ಕ್ಷಿಪ್ರಂ — ಕೂಡಲೇ, ಸೈಂಧವಸ್ಯ ಅನುಯಾನಂ — ಜಯದ್ರಥನನ್ನು ಬೆನ್ನು ಹತ್ತುವ ಕಾರ್ಯವನ್ನು, ಚಕ್ರುಃ—ಮಾಡಿದರು. ಭೀಮಸೇನ ಇತಿ — ಭೀಮಸೇನನೇ ಎಂದು, ಆಕ್ರೋಶವಾನಂ — ಕರೆಯುತಕ್ಕ (ಕೂಗುತ್ತಾ ಅಳತಕ್ಕ). ಧೌಮ್ಯಂ—ಧೌಮ್ಯಾಚಾರ್ಯರನ್ನು, ದೃಷ್ಟ್ವಾ — ನೋಡಿ, ತಸ್ಯ ಅಗ್ರೇ — ಅವರ ಎದುರಿಗೆ, ಅತಿಪಾಪಂ—ಅತಿಪಾಪಿಷ್ಠನಾದ, ಸೈಂಧವಂ ಚ — ಜಯದ್ರಥನನ್ನೂ ಕೂಡ, ದೃಷ್ಟ್ವಾ—ನೋಡಿ, ಪಾಂಡವಪುತ್ರಾಃ- ಪಾಂಡವರು, ಸಿಂಹವತ್ — ಸಿಂಹದಂತೆ, ನಾದಂ ಚಕ್ರುಃ — ಗರ್ಜನವನ್ನು ಮಾಡಿದರು. ಕೃಷ್ಣಾ ಚ - ದ್ರೌಪದೀದೇವಿಯಾದರೂ, ತದಾ — ಆಗ, ರಥಾತ್ - ರಥದಿಂದ, ಅವತರತ್ ಕೆಳಗಿಳಿದಳು ಸಾ — ಅವಳು, ಧೌಮ್ಯೇನ ಸಾರ್ಧಂ— ಧೌಮ್ಯಾಚಾರ್ಯರಿಂದ ಕೂಡಿಕೊಂಡು, ಆಶ್ರಮಾಯ ಯಯೌ — ಆಶ್ರಮಕ್ಕೆ ಹೋದಳು. ಪಾರ್ಥಾಃ:— ಪಾಂಡವರು, ತಸ್ಯ — ಆ ಜಯದ್ರಥನ, ಸೈನ್ಯಂ—ಸೈನ್ಯವನ್ನು, ಓಜಸಾ — ಪರಾಕ್ರಮದಿಂದ, ನಿಜಘ್ನುಃ—ಸಂಹರಿಸಿದರು, ॥೫೯೦-೫೯೨॥

ಅಗ್ರೇ ಕೃಷ್ಣಾಂಯೊಽವದತ್ಸಿಂಧುರಾಜಂ ಯಾಹೀತಿ ತಂ ಕೋಟಿಕಾಶ್ಯಂಸುಪಾಪಮ್ ।
ಛಿತ್ವಾ ಶಿರೋಮೃತ್ಯವೇ ಭೀಮಸೇನೋ ನಿವೇದಯಾಮಾಸ ತಮುಸ್ಸಚಾಗಾತ್ ॥೫೯೩॥

ಅಗ್ರೇ — ಮೊದಲು, (ಜಯದ್ರಥನಿಂದ ಕಳಿಸಲ್ಪಟ್ಟ ಮೊದಲಾ ದ್ರೌಪದಿಯಂ ಹತ್ತಿರ ಬಂದಾ ನೋಡಿ ಜಯದ್ರಥನ ಹತ್ತಿರ ಬಂದಾ ಆಗ) ಸಿಂಧುರಾಜಂ—ಜಯದ್ರಥನನ್ನು ಕುರಿತು, ಕೃಷ್ಣಾಂ ಗೃಹೀತ್ವಾ— ದ್ರೌಪದೀದೇವಿಯನ್ನು ಕರೆದುಕೊಂಡು, ಯಾಹಿ — ನಿನ್ನ ಸಿಂಧುದೇಶಕ್ಕೆ ಹೋಗು, ಇತಿ—ಎಂದು, ಯಃ — ಯಾವ ಕೋಟಿಕಾಶ್ಯನು, ಅವದತ್ — ಹೇಳಿದ್ದನೋ, ತಂ ಅಂಥ, ಸುಪಾಪಂ ಕೋಟಿಕಾಶ್ಯಂ — ಅತಿಪಾಪಿಷ್ಠನಾದ ಕೋಟಿಯನ್ನು, ಭೀಮಸೇನಃ — ಭೀಮಸೇನದೇವರು, ಶಿರಃ—ಅವನ ತಲೆಯನ್ನು, ಛಿತ್ವಾ — ಕತ್ತರಿಸಿ, ಮೃತ್ಯವೇ ನಿವೇದಯಾಮಾಸ — ಮೃತ್ಯುದೇವತೆಗೆ ಸಮರ್ಪಿಸಿದರು. (ಸಂಹರಿಸಿದರು). ಸಃಚ — ಆ ಕೋಟಿಯೂ ಕೂಡ, ತಮಃ — ತಮಸ್ಸನ್ನು ಅಗಾತ್ — ಹೊಂದಿದನು. ॥೫೯೩॥

ಹತ್ವಾ ಸೇನಾಮಖಿಲಾಂ ಸೈಂಧವಸ್ಯ ಭೀಮಾರ್ಜುನೌ ಸಯುವಾಂ ಧರ್ಮರಾಜಮ್ ।
ವಿಸೃಜ್ಯ ಧಾವಂತಮಥಾನುಜಗ್ಮತುರ್ಜಯದ್ರಥಂ ವಿರಥಂ ಫಲ್ಗುನೋಽಕಃ ॥೫೯೪॥

ಭೀಮಾರ್ಜುನೌ — ಭೀಮಾರ್ಜುನರಿಬ್ಬರು, ಸೈಂಧವಸ್ಯ ಅಖಿಲಾಂ ಸೇನಾಂ ಹತ್ವಾ— ಜಯದ್ರಥನ ಎಲ್ಲ ಸೈನ್ಯವನ್ನು ಕೊಂದು, ಧಾವಂತಂ ಜಯದ್ರಥಂ — ಓಡಹತ್ತಿದ ಜಯದ್ರಥನನ್ನು, ಸಯುವಾಂ ಧರ್ಮರಾಜಂ — ಯುವಾಳರಾದ ನಕುಲ ಸಹದೇವರಿಂದ ಸಹಿತನಾದ ಧರ್ಮರಾಜನನ್ನು, ವಿಸೃಜ್ಯ — ಬಿಟ್ಟುಕೊಟ್ಟು (ಅಲ್ಲಿಯೇ ನಿಲ್ಲಲು ಆ ಮೂವರಿಗೂ ಹೇಳಿ). ಅನುಜಗ್ಮತುಃ—ಬೆನ್ನುಹತ್ತಿ ಹೋದರು. ಫಲ್ಗುನಃ — ಅರ್ಜುನನು, ಜಯದ್ರಥಂ — ಜಯದ್ರಥನನ್ನು, ವಿರಥಂ—ರಥರಹಿತನನ್ನಾಗಿ, ಅಕಃ — ಮಾಡಿದನು. ॥೫೯೪॥

ಪದ್ಭ್ಯಾಂ ಧಾವಂತಂ ಭೀಮಸೇನೋ ನಿಗೃಹ್ಯ ದತ್ವಾ ಪ್ರಹಾರಂ ಚ ಭೃಶಂ ತಮಾರ್ತಮ್ ।
ಆದಾಯಾಧಾದ್ ದ್ರೌಪದೀಪಾದಯೋಶ್ಚ ತಂ ನೋಚಯಾಮಾಸ ಚ ಧರ್ಮಸೂನುಃ॥೫೯೫॥

ಪದ್ಭ್ಯಾಂ ಧಾವಂತಂ ಪಾದಗಳಿಂದ ಓಡಲಾರಂಭಿಸಿದ ಜಯದ್ರಥನನ್ನು, ಭೀಮಸೇನಃ— ಭೀಮಸೇನದೇವರು, ನಿಗೃಹ್ಯ — ಹಿಡಿದು, ಪ್ರಹಾರಂಚ ದತ್ವಾ - ಪೆಟ್ಟನ್ನೂ ಕೂಡ ಕೊಟ್ಟು, ಭೃಶಂ ತಮಾರ್ತಂ ತಂ—ಬಹಳ ನೋವಿನಿಂದ ಬಳಲುತ್ತಿದ್ದ ಆ ಜಯದ್ರಥನನ್ನು, ಆದಾಯ — ತಂದು, ದ್ರೌಪದೀಪಾದಯೋಃ—ದ್ರೌಪದೀದೇವಿಯಂ

ಪಾದಗಳಲ್ಲಿ, ಅಧಾತ್ - ಹಾಕಿದನು. ಧರ್ಮಸೂನುಃ—ಧರ್ಮರಾಜನು, ತಂ—ಜಯದ್ರಥನನ್ನು, ಮೋಚಯಾಮಾಸ – ಬಿಡಿಸಿದನು. ॥೩೯೫॥

ದಾಸೋ ದ್ರೌಪದ್ಯಾ ಅಹಮಿತ್ಯೇವ ವಾಕ್ಯೇ ತೇನೈವೋಕ್ತೇ ಭೀಮಸೇನೋಽಪ್ಯಮುಂಚತ್।
ಸವ್ರೀಡಿತೋಽವಾಗ್ವದನೋ ಯಯೌ ವನಂ ಪಾರ್ಥಾಶ್ಚ ತತ್ರೋಷುರತಿಪ್ರಮೋದಿನಃ॥೩೯೬॥

ಅಹಂ ನಾನು, ದ್ರೌಪದ್ಯಾಃ ದಾಸಃ ಏವ - ದ್ರೌಪದೀದೇವಿಯ ಸೇವಕನೇ ಇರುತ್ತೇನೆ, ಇತಿ – ಎಂದು ವಾಕ್ಯೇ – ಮಾತು, ತೇನ ಉಕ್ತೇ ಸತಿಏವ – ಅವನಿಂದ ಹೇಳಲ್ಪಟ್ಟ ನಂತರವೇ, ಭೀಮಸೇನಃ ಅಪಿ – ಭೀಮಸೇನದೇವರೂ ಕೂಡ, ಅಮುಂಚತ್ - ಬಿಟ್ಟರು. ವ್ರೀಡಿತಃ—ಲಜ್ಜಿತನಾದ, ಸಃ—ಆ ಜಯದ್ರಥನು, ಅವಾಗ್ವದನಃ ಸನ್–ಕೆಳ ಮುಖವುಳ್ಳವನಾಗಿ, ವನಂ ಯಯೌ –ವನಕ್ಕೆ ಹೋದನು. ಪಾರ್ಥಾಃ; ಚ – ಪಾಂಡವರು ಕೂಡ, ಅತಿ ಪ್ರಮೋದಿನಃ ಸಂತಃ —ಅತ್ಯಂತ ಸಂತೋಷವುಳ್ಳವರಾಗಿ, ತತ್ರ – ಆ ವನದಲ್ಲಿ, ಊಷುಃ – ವಾಸಿಸಿದರು. ॥೩೯೬॥

ಮಾರ್ಕಂಡೇಯಸ್ತದಾಗತ್ಯ ತೇಷಾಮುಕಥಯತ್ಕಥಾಃ।
ಬಹ್ವ್ಯಶ್ಚೈವ ವಿಚಿತ್ರಾಶ್ಚ ಭಾಷಾತ್ರಯ ಸಮನ್ವಿತಾಃ ॥೩೯೭॥

ಮಾರ್ಕಂಡೇಯಃ—ಮಾರ್ಕಂಡೇಯ ಋಷಿಗಳು, ತದಾ – (ಪಾಂಡವರು) ಈ ವನದಲ್ಲಿರುವಾಗ, ಆಗತ್ಯ— ಬಂದು, ತೆಷಂ – ಆ ಪಾಂಡವರಿಗೆ, ವಿಚಿತ್ರಾಃ – ಆಶ್ಚರ್ಯಕರವಾದ, ಭಾಷಾತ್ರಯಸಮನ್ವಿತಾಃ – ಸಮಾಧಿಭಾಷೆ ಗುಹ್ಯಭಾಷೆ, ದರ್ಶನಭಾಷೆಗಳಿಂದ ಕೂಡಿದ, ಬಹ್ವ್ಯಃ—ರಾವಣವಧೆಯೇ ಮೊದಲಾದ ಬಹುಕಥೆಗಳನ್ನು ಅಕಥಯತ್ – ಹೇಳಿದರು. ॥೩೯೭॥

ಭಾವಾನುವಾದ ೩೯೭ – ೩೯೭

ಪಾಂಡವರೆಲ್ಲರೂ ಬೇಟೆಗೆ ಹೋಗಿರುವಾಗ, ವಿವಾಹಕ್ಕಾಗಿ ಸೈನ್ಯಸಹಿತನಾಗಿ ತನ್ನ ಮಿತ್ರನಾದ, ಕಾಶೀ ದೇಶದವನಾದ ಕೋಟಿಎಂಬವನಿಂದ ಕೂಡಿಕೊಂಡು, ಹೊರಟಿದ್ದ ಜಯದ್ರಥನು ಪಾಂಡವರು ವಾಸಿಸಿದ ವನಕ್ಕೆ ಬಂದು ಅಲ್ಲಿ ಒಬ್ಬಳೇ ಇದ್ದ ಹೆಣ್ಣುವಾಗಳನ್ನು ನೋಡಿ, ಇಂಥ ಸುಂದರಿ ಸ್ತ್ರೀಯೊಬ್ಬಳೇ ಈ ಅರಣ್ಯದಲ್ಲಿ ಏಕಿದ್ದಾಳೆ. ಯಾರಿವಳು ಎಂದು ತಿಳಿಯಲು ಕೋಟಿಯನ್ನು ಕಳಿಸಿದನು. ಅವನು ಬಂದು ವಿಚಾರಿಸಿ ಅವಳು ದ್ರೌಪದೀ ಎಂದು ತಿಳಿದು ಜಯದ್ರಥನ ಹತ್ತಿರ ಬಂದು ಹೇಳಿ ಅವಳನ್ನು ಕರೆದುಕೊಂಡು ನಿನ್ನ ಊರಿಗೆ ಹೋಗು ಎಂದು ಹೇಳಿದನು. ಅದನ್ನು ಕೇಳಿ ಜಯದ್ರಥನು ತಾನೇ ದ್ರೌಪದಿಯ ಹತ್ತಿರ ಬಂದು, ನನ್ನ ಹತ್ತಿರ ಬಾ ಎಂದು ಕರೆದನು, ದ್ರೌಪದೀ ದೇವಿಯು ತಿರಸ್ಕರಿಸಿದಳು; ಆಗ ಅವಳ ಕೈಯನ್ನೇ ಹಿಡಿದು ಎಳೆದನು. ಕೈ ಕೊಸರಿಕೊಂಡಳು. ಅಷ್ಟಕ್ಕೆ ಬಿದ್ದು ಮೂರ್ಛಿತನಾದನು. ಪುನಃಎದ್ದು ವಿಲಜ್ಜನಾಗಿ ಬೆನ್ನುಹತ್ತಿದಾಗ ಆಗ ದ್ರೌಪದೀದೇವಿಯು ಇಂಥ ಆಪತ್ತಿನಲ್ಲಿ ಏನು ಉಪಾಯವಾಡಬೇಕು, ಎಂಬುದನ್ನು ಲೋಕಸ್ತ್ರೀಯರಿಗೆ ತಿಳಿಸಲು ಅವನ ರಥವನ್ನು ಏರುತ್ತಾ ಪುರೋಹಿತರಾದ ಧೌಮ್ಯಾಚಾರ್ಯರಿಗೆ ನೀವು ನಿಮ್ಮ ನಿತ್ಯ ಅಗ್ನಿಹೋತ್ರದ ಅಗ್ನಿ ಸಹಿತವಾಗಿ ನನ್ನ ಜೊತೆಗೆ ಬನ್ನಿರಿ ಎಂದು ಹೇಳಿದಳು ಆ ಪ್ರಕಾರ ಧೌಮ್ಯಾಚಾರ್ಯರು ಬಂದರು. ದ್ರೌಪದೀದೇವಿಯು 'ಜಯದ್ರಥನಿಗೆ' ನೀನು ಸುಖವಾಗಿ ಮನೆಸೇರುವದಿಲ್ಲ' ಎಂದು ಹೇಳಿ ರಥವನ್ನು ಏರಿದಳು. ಈ ಕಡೆಗೆ ಪಾಂಡವರಿಗೆ ಅಪಶಕುನಗಳಾಗುತ್ತಿದ್ದದ್ದರಿಂದ ಬೇಗನೇ ತಮ್ಮ ಆಶ್ರಮಕ್ಕೆ ಬಂದರು. ಅಲ್ಲಿ ದಾಸೀಮುಖದಿಂದ ನಡೆದ ವೃತ್ತಾಂತವನ್ನೆಲ್ಲ ತಿಳಿದು, ಜಯದ್ರಥನನ್ನು ಬೆನ್ನು

ಹತ್ತಿದರು. ಹೋಗುತ್ತಾ ಇರುವಾಗ, ಭೀಮಸೇನರ ಹೆಸರನ್ನು ತೆಗೆದುಕೊಂಡು ಕರೆಯುತ್ತಿರುವಂಥ ಧೌಮ್ಯಾಚಾರ್ಯರನ್ನು, ಅವರ ಮುಂದೆ ಇರುವ ಪಾಪಿಯಾದ ಜಯದ್ರಥನನ್ನು ನೋಡಿ ಪಾಂಡವರು ಸಿಂಹನಾದವನ್ನು ಮಾಡಿದರು, ಆಗ ದ್ರೌಪದೀದೇವಿಯು ಬಂದ ಪಾಂಡವರನ್ನು ನೋಡಿ ಇನ್ನು ಹೆದರಿಕೆಯಿಲ್ಲ ಎಂದು ತಿಳಿದು ತಾನು ರಥದಿಂದ ಇಳಿದು ಧೌಮ್ಯರಿಂದ ಕೂಡಿಕೊಂಡು ಆಶ್ರಮಕ್ಕೆ ಹೋದಳು. ಪಾಂಡವರು ಜಯದ್ರಥನೊಟ್ಟಿಗೆ ಯುದ್ಧ ಮಾಡುತ್ತಾ ಅವನ ಸೈನ್ಯವನ್ನು ನಾಶಪಡಿಸಿದರು. ಭೀಮರು ನೀಚನಾದ ಕೋಟಿಯನ್ನು ಅವನ ತಲೆ ಕತ್ತರಿಸಿ ಸಂಹರಿಸಿದರು. ಭೀಮಾರ್ಜುನರು ಎಲ್ಲ ಸೈನ್ಯವನ್ನು ನಾಶಪಡಿಸಿ, ಅರ್ಜುನನು ಅವನ ರಥವನ್ನು ನಾಶಪಡಿಸಿದಾಗ ಜಯದ್ರಥನು ಓಡಲಾರಂಭಿಸಿದನು ಆಗ ಭೀಮಸೇನರು ಬೆನ್ನುಹತ್ತಿ ಅವನ ಹತ್ತಿರ ಹೋಗಿ ಹಿಡಿದು ಹೊಡೆದರು. ಆಗ ತುಂಬಾ ದುಃಖಿನನ್ನು ನೋವನ್ನು ಹೊಂದಿದನು. ಅವನನ್ನು ಕಟ್ಟಿ ಎಳೆದು ತಂದು ದ್ರೌಪದೀದೇವಿಯ ಪಾದಕ್ಕೆ ಹಾಕಿದರು. ಧರ್ಮರಾಜನು ಬಿಡು ಬಿಡು ಅವನನ್ನು ಎಂದನು. ಆದರೆ ಭೀಮರು ಒಮ್ಮೆಲೇ ಬಿಡದೇ, ನಾನು ದ್ರೌಪದಿಯ ದಾಸನು ಎಂದು ಆ ನೀಚ ಜಯದ್ರಥನ ಕಡೆಯಿಂದ ಅನ್ನಿಸಿ ಪಂಚಚೂಡಾಗ್ರನನ್ನು ಅವನ ತಲೆಯಲ್ಲಿ ಅವನ ಅವಮಾನ ಸೂಚಕವಾಗಿರುವಾಡಿ ಬಂಧನದಿಂದ ಬಿಡಿಸಿ ಕಳಿಸಿದರು. ಈ ರೀತಿ ಅವಮಾನಿತನಾದ ಜಯದ್ರಥನು ಲಜ್ಜೆಯಿಂದ, ಕಿಬ್ಬವಂಖಿವಾಡಿಕೊಂಡು ತಪಸ್ಸಿಗಾಗಿ ವನಕ್ಕೆ ಹೋದನು. ಪಾಂಡವರು ಸಂತೋಷದಿಂದ ಅಶ್ರಮವನ್ನು ವಾಸಿಸಿದರು. ಆಗಲೇ ಮಾರ್ಕಂಡೇಯರು ಬಂದು ಪಾಂಡವರಿಗೆ ಅನೇಕ ಅರ್ಥಗರ್ಭಿತ ಶ್ರೀರಾಮ ಕಥೆಯೇ ಮೊದಲಾದ ಕಥೆಗಳನ್ನು ಹೇಳಿದರು.

ಲೋಕದರ್ಶನ ಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ ।
ಬ್ರೂಯುಃ ಕಥಾಸ್ತತ್ರ ಶಿಕ್ಷಾಗ್ರಾಹ್ಯಾನಾರ್ಥಃ ಕಥಂಚನ ॥೩೯॥

ದೇವಾಃ – ದೇವತೆಗಳು, ತಥಾ – ಹಾಗೂ, ಮುನಯಃ ಚ – ಋಷಿಗಳೂ ಕೂಡ, ಲೋಕದರ್ಶನಂ ಆಶ್ರಿತ್ಯ – ಲೋಕದರ್ಶನ ಭಾಷೆಯನ್ನು ಅನುಸರಿಸಿ, ಕಥಾಃ – ಅಂತಹ ಕಥೆಗಳನ್ನು, ಬ್ರೂಯುಃ – ಹೇಳುವರು. ತತ್ರ – ಅವುಗಳಲ್ಲಿ, ಶಿಕ್ಷಾಗ್ರಾಹ್ಯಾ – ತಿಳಿಯಬೇಕಾದ ತತ್ವವು ಏತಾತ್ರ ಸ್ವೀಕರಿಸಲ್ಪಡಬೇಕು. ಅರ್ಥಾಃ – ಮೇಲೆ ಮೇಲೆ ತೋರುವ ಅರ್ಥಗಳೇ, ಕಥಂಚನ – ಸರ್ವಥಾ, ನ ಗ್ರಾಹ್ಯಾಃ – ಸ್ವೀಕರಿಸಲ್ಪಡಬಾರದು. ಉದಾಃ – ೧) ಕೃಷ್ಣನು ತಂದೆಯನ್ನು ನಮಸ್ಕರಿಸಿದನು ಎಂದು ಕಥೆಯನ್ನು ಹೇಳುವಾಗ ಕೃಷ್ಣನಿಗೆ ತಂದೆಯಿದ್ದಾನೆ ಎಂದು ಅರ್ಥವನ್ನು ತಿಳಿಯಬಾರದು: ಆದರೆ ಈ ಕಥೆಯಿಂದ ನಮಸ್ಕಳು ತಂದೆಯನ್ನು ಗೌರವಿಸಬೇಕು ನಮಸ್ಕರಿಸಬೇಕು; ಎಂದು ತತ್ವವನ್ನು ನೀತಿಯನ್ನು ತಿಳಿಯಬೇಕು. ೨) ಶ್ರೀಕೃಷ್ಣನದೇಹವನ್ನು ಅರ್ಜುನನು ದಹನ ಮಾಡಿದನು ಎಂದು ಕಥಾವನ್ನು ಕೇಳಿದಾಗ ಅಂಥ ಪ್ರಾಕೃತದೇಹವಿತ್ತು ಎಂದು ತಿಳಿಯದೇ, ಲೋಕದಲ್ಲಿ ಮೃತದೇಹದ ಸಂಸ್ಕಾರವನ್ನು ಮಾಡಬೇಕು ಎಂಬ ನೀತಿಯನ್ನು ತಿಳಿಯಬೇಕು. ॥೩೯॥

ಅರ್ಥಸ್ಸರ್ವೋಽಧಿಭಾಷಾಸು ಗ್ರಾಹ್ಯಸ್ಸರ್ವೋಽಪ್ಯಸಂಶಯಮ್ ।
ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ॥೩೯॥

ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಚ।
ಅನ್ಯಾರ್ಥೋ ಗುಹ್ಯಭಾಷಾಸು ಗ್ರಾಹ್ಯ ಏವಂ ವಿನಿರ್ಣಯಃ ॥೪೦॥

ಸಮಾಧಿಭಾಷಾಸು—ಸಮಾಧಿ ಭಾಷಾದಿಂದ ಪ್ರತಿಪಾದಿತವಾದ ಕಥಾಗಳಲ್ಲಿ, ಸರ್ವಃ ಅಪಿ ಅರ್ಥಃ – ಎಲ್ಲ ಅರ್ಥವೂ ಕೂಡ, ಅಸಂಶಯಂ ಗ್ರಾಹ್ಯಃ – ನಿಸ್ಸಂಶಯವಾಗಿ ಸ್ವೀಕರಿಸಲ್ಪಡಬೇಕು. ಪರದರ್ಶನಭಾಷಾಸು – ಪರ

ದರ್ಶನಭಾಷಾದಿಂದ ಹೇಳಿದ ಕಥಾಗಳಲ್ಲಿ, ತತ್‌ದರ್ಶನಂ ತಥಾ ಇತಿ ಜ್ಞೇಯಂ – ಆ ಮಂತವು ಹಾಗೆ ಹೇಳುತ್ತದೆ ಎಂದು ತಿಳಿಯಬೇಕು; (ಹೊರತು ಆ ಅರ್ಥವನ್ನು ತಾವು ತಮ್ಮ ಜ್ಞಾನಕ್ಕಾಗಿ ಸ್ವೀಕರಿಸಬಾರದು) ಅರ್ಥ: ನ ಗ್ರಾಹ್ಯಃ—ಅದರ ಅರ್ಥವು ಸ್ವೀಕರಿಸಲ್ಪಡಬಾರದು. ವೈದಿಕಂ ದರ್ಶನಂ ತು – ವೇದಾನುಸಾರಿಯಾದ, ದರ್ಶನಭಾಷಾದಿಂದ ಪ್ರತಿಪಾದಿತವಾದದ್ದೂ ಕೂಡ, ಗ್ರಾಹ್ಯಂ ಏವ – ಸ್ವೀಕರಿಸಲ್ಪಡಲೇಬೇಕು. ಗುಹ್ಯಭಾಷಾಸು – ಗುಹ್ಯಭಾಷಾದಿಂದ ಪ್ರವೃತ್ತವಾದ ಕಥಾಗಳಲ್ಲಿ, ಅನ್ಯಾರ್ಥ;—ಮೇಲೆ ತೋರುವ ಅರ್ಥಕ್ಕಿಂತ ಬೇರೆಯಾದ, ಯಾವದೇ ಮಂತಾನುಸಾರಿಯಲ್ಲದ ಅರ್ಥವು, ಗ್ರಾಹ್ಯಃ – ಸ್ವೀಕರಿಸಲ್ಪಡಬೇಕು, (ಇತಿ) ಏವಂ – ಎಂದು ಈ ರೀತಿ, ವಿನಿರ್ಣಯಃ: – ಶಾಸ್ತ್ರದ ನಿರ್ಣಯವು. ॥೩೯॥೪೦೮॥

ಭಾವಾನುವಾದ ೩೯೮—೪೦೦

ಮಾರ್ಕಾಂಡೇಯರು ಬಂದು ಪಾಂಡವರಿಗೆ ರಾಮ ಕಥೆಯೇ ಮೊದಲಾದ ಅನೇಕ ಕಥಾಗಳನ್ನು ಹೇಳಿದರು. ಆವರು ಹೇಳಿದ್ದು ಅನೇಕ ಭಾಷೆಗಳಿಂದ (ರೀತಿಗಳಿಂದ) ಹೇಳಿದ್ದಾರೆ. ಭಾಷೆಗಳು ಪ್ರಧಾನವಾಗಿ ಸವಾಧಿ ಭಾಷೆ, ಗುಹ್ಯಭಾಷೆ, ಹಾಗು ದರ್ಶನ ಭಾಷೆ ಎಂದು ಮೂರುವಿಧ. ಅದರಲ್ಲಿ ದರ್ಶನ ಭಾಷೆಯು ಪುನಃ ಲೋಕ ದರ್ಶನ ಭಾಷೆ, ಪರದರ್ಶನ ಭಾಷೆ ಎಂದು ಎರಡು ವಿಧ. ಪರದರ್ಶನ ಭಾಷೆಯೂ ಮತ್ತೆ ಎರಡುವಿಧ–ಲೌಕಿಕ ಪರ ದರ್ಶನ ಭಾಷೆ ವೈದಿಕ ಪರದರ್ಶನಭಾಷೆ ಎಂದು. ಲೋಕದರ್ಶನಭಾಷೆಯಿಂದ ಹೇಳಿದ ಕಥೆಗಳಲ್ಲಿ ಅವುಗಳಿಂದ ತಿಳಿಯುವ ನೀತಿ ಆಚಾರಗಳನ್ನು ತಿಳಿಯಬೇಕು; ಸ್ವೀಕರಿಸಬೇಕು ಹೊರತು ಯಥಾವತ್ ಅರ್ಥವನ್ನಲ್ಲ. ಉದಾಹರಣೆಗೆ ಶ್ರೀಹರಿಯು ಅವತಾರಗಳಲ್ಲಿ ಪಿತೃವಾತೃಗುರುವಂದನ, ತನ್ನನ್ನು ಕುರಿತು ತಪಸ್ಸು ಆಚರಣೆ ಇತ್ಯಾದಿಗಳನ್ನು ಮಾಡಿದನು ಎಂದು ಕಥೆ ಹೇಳಿದಾಗ ಆ ಕಾರ್ಯಗಳನ್ನು ನಾವು ಮಾಡಬೇಕು ಎಂಬ ನೀತಿಯನ್ನು ತಿಳಿಯಬೇಕು ವಿನ: ಶ್ರೀಹರಿಯೂ ಕೂಡ ಕರ್ತವ್ಯಬದ್ಧನು; ಅವನು ನಮಸ್ಕರಿಸಿದ. ತಂದೆ ತಾಯಿಗಳು ಅವನಿಗಿಂತ ಶ್ರೇಷ್ಠರು ಹೀಗೆಲ್ಲ ತಿಳಿಯಬಾರದು; ಲೌಕಿಕಪರದರ್ಶನ ಭಾಷೆಯಲ್ಲಿ ಹೇಳಿದ ಕಥಾಗಳಲ್ಲಿ ವೇದವ್ಯಾಸರು ಋಷಿಮುನಿಗಳು ಆ ಮಂತವು ಹಾಗೆ ಹೇಳುತ್ತದೆ ಎಂದು ಹೇಳಿದ್ದಾರೆ ಎಂದು ತಿಳಿಯಬೇಕು ವಿನ: ಆ ವಿಷಯದ ಬಗ್ಗೆ ವೇದವ್ಯಾಸರಿಗೆ ದೇವ ಮುನಿಗಳಿಗೆ ತಾತ್ಪರ್ಯ ವುಂಟೆಂದು ತಿಳಿಯಬಾರದು, ತಾವೂ ಕೂಡ ಆ ವಿಷಯಗಳನ್ನು ಯಥಾರ್ಥಜ್ಞಾನದ ಉದ್ದೇಶದಿಂದ ಗ್ರಹಿಸಬಾರದು. ಉದಾಹರಣೆಗೆ—ಶ್ರೀಕೃಷ್ಣನು ರುದ್ರನನ್ನು ಕುರಿತು ತಪಸ್ಸನ್ನು ಮಾಡಲು ಹೋದಿದ್ದನು ಎಂದು ಕಥಾ ಹೇಳಿದಾಗ ಪಾಶುಪತಾದಿ ಮತದವರು ಹಾಗೆ ಹೇಳುತ್ತಾರೆ ಎಂದು ತಿಳಿಯಬೇಕು. ವೈದಿಕ ಪರದರ್ಶನ ಭಾಷಾದಿಂದ ವಿಷಯ ಪ್ರತಿಪಾದನೆಮಾಡಿದಾಗ ವಿಚಾರ ಮಾಡದಿದ್ದಾಗ ಶಿವಾದಿಗಳಲ್ಲಿಲ್ಲದ ಉತ್ತಮತ್ವವನ್ನು ರುದ್ರಸೂಕ್ತಾದಿಗಳು ಹೇಳಿದಂತೆ ತೋರಿದರೂ ಅವು ಅಪೌರುಷೇಯ ಪ್ರಮಾಣವಾದ್ದರಿಂದ ಅವುಗಳನ್ನು ಅಪ್ರಮಾಣ ಎಂದು ಬಿಡಲು ಬರುವದಿಲ್ಲ. ಆದರೆ ಆ ವಾಕ್ಯಗಳಿರುವ ನಿಜವಾದ ಅರ್ಥವನ್ನು ಉಪಕ್ರಮಾದಿಗಳಿಂದ ತಿಳಿಯಬೇಕು. ರುದ್ರ ಎಂಬ ಶಬ್ದವು ವಿಷ್ಣುವನ್ನೇ ಹೇಳುತ್ತದೆ. ಹೀಗಾಗಿ ರುದ್ರಸೂಕ್ತವೂ ವಿಷ್ಣುಸರ್ವೋತ್ತಮತ್ವವನ್ನೇ ತಿಳಿಸುತ್ತದೆ ಎಂದು ತಿಳಿಯಬೇಕು, ಗುಹ್ಯಭಾಷಾದಿಂದ ಹೇಳಿದ ಕಥಾಗಳಲ್ಲಿ ಯಾವದೇ ಮಂತದ ಅನುಸರಣೆ ಇರದೇ, ಮೇಲೆ ತೋರುವ ಅರ್ಥ ಅದಕ್ಕೆ ಇರದೇ ಬೇರೆ ಅರ್ಥವೇ ಇರುವದು. ಅವುಗಳನ್ನು ಜ್ಞಾನಿಗಳಿಂದಲೇ ತಿಳಿಯಬೇಕಾಗುವದು. ಸವಾಧಿಭಾಷೆಯಿಂದ ಹೇಳಿದ ಕಥೆಗಳಲ್ಲಿ ಯಾವದೇದರ್ಶನ ಭಾಷಾವನ್ನೂ ಆಶ್ರಯಿಸದೇ ಕೇವಲ ತಮ್ಮದೇ ಸಿದ್ಧಾಂತವನ್ನು ಸ್ಪಷ್ಟವಾದ ವಚನಗಳಿಂದ ತಿಳಿಸುತ್ತಾರೆ. ಅಲ್ಲಿ ಹೇಳಿದ ಎಲ್ಲ ವಿಷಯಗಳೂ ಕೂಡ ಗ್ರಾಹ್ಯವೇ ಆಗಿವೆ. ಇದೆಲ್ಲ ಶಾಸ್ತ್ರದ ನಿರ್ಣಯವು.

ಅವತಾರಿಕೆ : ಪ್ರಸಂಗವಶಾತ್ ಭಾಷಾವಿಚಾರವನ್ನು ತಿಳಿಸಿ ಈಗ ಪ್ರಸಕ್ತ ಕಥಾವನ್ನು ಮುಂದುವರಿಸುತ್ತಿದ್ದಾರೆ—

ಜಯದ್ರಥಸ್ತು ಭೀಮೇನ ತದಾ ಪಂಚಶಿಖೀಕೃತಃ ।
ತಪಸಾ ಶಿವಮಾರಾಧ್ಯ ವವ್ರೇ ಪಾಂಡವರೋಧನಮ್।
ಋತೇऽರ್ಜುನಾದರ್ಜುನಸ್ಯ ತುಷ್ಟೋ ಹಿ ತಪಸಾ ಶಿವಃ ॥೪೦೧॥

ತದಾ—ಯುದ್ಧದ ಸಮಯದಲ್ಲಿ, ಭೀಮೇನ – ಭೀಮಸೇನರಿಂದ, ಪಂಚಶಿಖೀಕೃತಃ – ಐದಂಕಡೆ ಶಿಖಾ ವುಳ್ಳವನಾಗಿ ಮಾಡಲ್ಪಟ್ಟ, ಜಯದ್ರಥಃತು – ಜಯದ್ರಥನಾದರೂ, ತಪಸಾ—ತಪಸ್ಸಿನಿಂದ, ಶಿವಂ ಆರಾಧ್ಯ – ರುದ್ರದೇವರನ್ನು ಆರಾಧಿಸಿ, ಪಾಂಡವರೋಧನಂ—ಪಾಂಡವರನ್ನು ತಡೆಯಬಲ್ಲಂತಹ ಶಕ್ತಿಯನ್ನು, ವವ್ರೇ – ವರವನ್ನಾಗಿ ಕೇಳಿದನು. ಹಿ – ಯಾವ ಕಾರಣದಿಂದ, ಶಿವಃ—ರುದ್ರದೇವರು, ಅರ್ಜುನಸ್ಯ ತಪಸಾ ತುಷ್ಟಃ – ಅರ್ಜುನನ ತಪಸ್ಸಿನಿಂದ ಪ್ರಸನ್ನರಾಗಿದ್ದರೋ, ತಸ್ಮಾತ್ – ಆದ್ದರಿಂದ, ಅರ್ಜುನಾತ್ಋತೇ – ಅರ್ಜುನನ್ನು ಬಿಟ್ಟು ಪಾಂಡವರೋಧನಂ - ಉಳಿದ ಪಾಂಡವರ ತಡೆಯುವಿಕೆಯನ್ನು, ವರಂ ದದೌ—ಜಯದ್ರಥನಿಗೆ ವರವನ್ನಾಗಿ ಕೊಟ್ಟರು. ।೪೦೧॥

ವನೇ ವಸತ್ಸ್ವೇವ ಚ ಪಾಂಡವೇಷು ಚಕ್ರೇ ಯಜ್ಞಂ ಪೌಂಡ-ೀಕಾಖ್ಯಮೇವ ।
ಸಂಸ್ಪರ್ಧಯಾ ರಾಜಸೂಯಸ್ಯ ರಾಜಾದುರ್ಯೋಧನೋ ನಾಪ್ಯಸೌ ತತ್ಕಲಾರ್ಹಃ ॥೪೦೨॥

ಪಾಂಡವೇಷು—ಪಾಂಡವರು, ವನೇ ವಸತ್ಸು ಸತ್ಸು ಏವ—ವನದಲ್ಲಿ ವಾಸಿಸುತ್ತಿರುವಂತೆಯೇ, ರಾಜಾ ದುರ್ಯೋಧನಃ - ದುಷ್ಟ ರಾಜನಾದ ದುರ್ಯೋಧನನು, ರಾಜಸೂಯಸ್ಯ ಸಂಸ್ಪರ್ಧಯಾ—ರಾಜಸೂಯ ಯಾಗದ ಮೇಲಿನ ಮಾತ್ಸರ್ಯದಿಂದ, ಪೌಂಡರೀಕಾಖ್ಯಂ ಯಜ್ಞಂ ಏವ—ಪೌಂಡರೀಕ ಎಂಬ ಹೆಸರಿನ ಯಾಗವನ್ನೇ, ಚಕ್ರೇ – ಮಾಡಿದನು. ಅಪಿ – ಹಾಗೆ ಸ್ಪರ್ಧೆಯಿಂದ ಮಾಡಿದರೂಕೂಡ, ಅಸೌ —ಆ ಯಾಗವು, ತತ್ಕಲಾರ್ಹಃ ನ—ಆ ರಾಜಸೂಯಯಾಗದ ೧೬ ನೆಯ ಅಂಶಕ್ಕೂ ಕೂಡ ಸರಿಯಲ್ಲ. ॥೪೦೨॥

ದುರ್ಯೋಧನಸ್ಯಾಜ್ಞಯಾ ಪಾಂಡವಾನಾಂ ದುಶ್ಶಾಸನಃ ಪ್ರೇಷಯಾಮಾಸ ತತ್ರ ।
ಆಗಚ್ಛತೇತ್ಯವಮಾನಾಯ ತಂ ತು ಭೀಮೋऽವಾದೀದ್ರಣಯಜ್ಞಂ ಸ್ವಗಮ್ಯಮ್ ॥೪೦೩॥

ದುಶ್ಶಾಸನಃ — ದುಶ್ಶಾಸನನು, ಪಾಂಡವಾನಾಂ ಅವಮಾನಾಯ— ಪಾಂಡವರ ಮಾನಭಂಗಕ್ಕಾಗಿ, ದುರ್ಯೋಧನಸ್ಯ ಆಜ್ಞಯಾ—ದುರ್ಯೋಧನನ ಅಪ್ಪಣೆಯ ಪ್ರಕಾರ, ತತ್ರ—ಪಾಂಡವರ ಹತ್ತಿರಕ್ಕೆ, ದೂತಂ ದೂತನನ್ನು, ಆಗಚ್ಛತ ಇತಿ—ಯಜ್ಞಕ್ಕೆ ಬನ್ನಿರಿ, (ಎಂದು ಹೇಳಲು), ಪ್ರೇಷಯಾಮಾಸ – ಕಳಿಸಿದನು. ತು – ಆದರೆ ತಂ – ಆ ಪ್ರಕಾರ ಬಂದಂಥ ಆ ದೂತನನ್ನು ಕುರಿತು, ಭೀಮಃ—ಭೀಮಸೇನದೇವರು, ರಣಯಜ್ಞಂ ಸ್ವಗಮ್ಯಂ— ಯುದ್ಧವೆಂಬ ಯಜ್ಞವನ್ನು ತಮ್ಮಿಂದ ಬರಲ್ಪಡುವಂಥದ್ದನ್ನಾಗಿ. (ನಾವು ಈ ಯಜ್ಞಕ್ಕೆ ಬರುವದಿಲ್ಲ ಯುದ್ಧ ಯಜ್ಞಕ್ಕೆ ಬರುತ್ತೇವೆ ಎಂದು) ಅವಾದೀತ್ - ಹೇಳಿದರು. ॥೪೦೩॥

ತತೋ ದಿನೈಃಕೈಶ್ಚನ ಧಾರ್ತರಾಷ್ಟ್ರೈಃ ಸಕರ್ಣಗಾಂಧಾರನೃಪಾ.ಕುಮುಂತ್ರತಃ ।
ಸಭಾರ್ಯಕಾಃ ಪಾಂಡವಾನ್ದ್ರೌಪದೀಂ ಚ ಮಹೈಶ್ವರ್ಯಂ ದರ್ಶಯಿತ್ವಾऽವಮಂತುಮ್। ೪೦೪॥

ತೇ ಸ್ಯಂದನೈಃ ಕಾಂಚನರತ್ನಚಿತ್ರೈರ್ಮಹಾಗಜೈಸ್ತುರಗೈಃ ಪತ್ತಿಭಿಶ್ಚ ।
ಸ್ವಲಂಕೃತಾಶ್ಚಿತ್ರನಾಲ್ಯಾಂಬರಾಶ್ಚ ವಿನಿರ್ಯಯುರ್ದ್ವೈತವನಾಯ ಶೀಘ್ರಮ್ ॥೪೦೫॥

ತತಃ—ಅನಂತರ, ಕೈಶ್ಚನ ದಿನೈಃ—ಕೆಲವು ದಿನ (ಕಳೆಯುತ್ತಿರಲು,) ಗಳಿಂದ, ಸಕರ್ಣಗಾಂಧಾರ ನೃಪಾಃ—ಕರ್ಣಶಕುನಿ ಇವರಿಂದ ಸಹಿತರಾದ, ಧಾರ್ತರಾಷ್ಟ್ರಾಃ—ದುರ್ಯೋಧನಾದಿಗಳು, ಕೃಷ್ಣಾಂತ್ರತಃ—ದುರಾ ಲೋಚನೆಯಿಂದ, ಮಾಹೈಶ್ವರ್ಯಂ—ತಮ್ಮ ಮಾಹೈಶ್ವರ್ಯವನ್ನು, ದರ್ಶಯಿತ್ವಾ—ತೋರಿಸಿ, ಪಾಂಡವಾನ್ ದ್ರೌಪದೀಂ ಚ—ಪಾಂಡವರನ್ನು, ಮತ್ತು ದ್ರೌಪದೀದೇವಿಯನ್ನು, ಅವಮಂತುಂ—ಅವಮಾನಿಸಲು, ಸಭಾರ್ಯಕಾಃ ಸಂತಃ—ಹೆಂಡಂದಿರಿಂದ ಸಹಿತರಾಗಿ, ಕಾಂಚನರತ್ನ ಚಿತ್ರೈಃ—ಭಂಗಾರ ರತ್ನಗಳಿಂದ ನಿರ್ಮಿತವಾದ್ದರಿಂದ ಆಶ್ಚರ್ಯಕರ ವಾದ, ಸ್ಯಂದನೈಃ ರಥಗಳಿಂದ, ಮಹಾಗಜೈಃ—ಶ್ರೇಷ್ಠ ಆನೆಗಳಿಂದ, ತುಂಗೈಃ—ಕುದುರೆಗಳಿಂದ. ಚ—ಮತ್ತು, ಪತ್ತಿಭಿಃ—ಕಾಲಾಳುಗಳಿಂದ, ಸಹಿತಾಃ ಸಂತಃ—ಕೂಡಿದವರಾಗಿ, ಚ—ಹಾಗು, ಸ್ವಲಂಕೃತಾಃ ಚಿತ್ರವಾಲ್ಯಾಂಬರಾಃ ಸಂತಃ—ಚೆನ್ನಾಗಿ ಅಲಂಕಾರ ಮಾಡಿಕೊಂಡವರಾಗಿ, ವಿಚಿತ್ರವಾದ ಮಾಲೆಪಸ್ತ್ರಗಳನ್ನು ಧರಿಸಿದವರಾಗಿ, ತೇ—ಅವರೆಲ್ಲ ಶೀಘ್ರಂ—ಬೇಗನೇ, ದ್ವೈತವನಾಯ—ಪಾಂಡವರಿರುವ ದ್ವೈತವೆನಕ್ಕೆ, ನಿರ್ಯಯೌಃ—ಹೊರಟರು. ॥೪೮॥೪೦॥

ಗವಾಂ ದೃಷ್ಟಿಭಧ್ಮನಾ ನಿರ್ಗತಾಂಸ್ತಾನ್ ಜ್ಞಾತ್ವಾ ಶಕ್ರಸ್ತೇಜಸೋ ಭಂಗಕಾಮುಃ ।
ತತ್ರಾನರ್ಥ್ಯಂ ನರಮಸ್ಮೈಪ್ರದಾಯ ತದ್ಬಂಧನಾಯಾದಿಶಚ್ಚಿತ್ರಸೇನಮ್ ॥೪೦॥

ಗವಾಂ ದೃಷ್ಟಿಭಧ್ಮನಾ—ಆಕಳುಗಳನ್ನು ನೋಡುವ ನೆಪದಿಂದ (ವನದಲ್ಲಿ ತೃಣ ಜಲಗಳು ಸಮೃದ್ಧ ವಾಗಿರುವದರಿಂದ, ರಕ್ಷಣೆಗಾಗಿ ಅಲ್ಲಿ ಕಟ್ಟಿದ ಆಕಳುಗಳನ್ನು ನೋಡುವ ನೆಪದಿಂದ), ನಿರ್ಗತಾನ್—(ನಿಜವಾಗಿಯೂ ಪಾಂಡವರ ಅವಮಾನವಾಡಬೇಕೆಂಬ ಉದ್ದೇಶದಿಂದ) ಹೊರಟಂಥ, ತಾನ್—ಕೌರವರನ್ನು, ಜ್ಞಾತ್ವಾ—ತಿಳಿದು (ಅವರ ಉದ್ದೇಶವನ್ನು ತಿಳಿದ), ಶಕ್ರಃ—ದೇವೇಂದ್ರನು, (ತೇಷಾಂ—ಆ ದುರ್ಯೋಧನಾದಿಗಳ), ತೇಜಸಃ—ಸಾಮರ್ಥ್ಯ ಹಂಕಾರಗಳ, ಭಂಗಕಾಮುಃ ಸನ್—ನಾಶಮಾಡುವ ಇಚ್ಛೆಯುಳ್ಳವನಾಗಿ, ಚಿತ್ರಸೇನಂ:—ಚಿತ್ರಸೇನ ಎಂಬ ಗಂಧರ್ವನನ್ನು ಕುರಿತು, ತತ್ರಾನರ್ಥ್ಯಂ—ಆ ಕಾರ್ಯವಾಡುವ ಶಕ್ತಿಯನ್ನು, ನರಂ—ವರವನ್ನಾಗಿ, ಅಸ್ಮೈ—ಈ ಚಿತ್ರಸೇನನಿಗೆ, ಪ್ರದಾಯ—ಕೊಟ್ಟು, ತದ್ಬಂಧನಾಯ—ಕೌರವರ ಬಂಧನ ಮಾಡಲು, ಅದಿಶತ್—ಆಜ್ಞಾಪಿಸಿ ಕಳಿಸಿದನು. ॥೪೦॥

ಸ ಷಷ್ಟಿಸಾಹಸ್ರಕಕೋಟಿ ಯೂಥಪೈಃ ಗಂಧರ್ವಮುಖ್ಯೈಸ್ಸಂವೃತೋಽಗಾತ್ಸರಸ್ತತ್ ।
ಯಸ್ಮಿನ್ಸ್ನಾತುಂ ವಾಂಛತಿ ಧಾರ್ತರಾಷ್ಟ್ರಸ್ತದಾಜ್ಞಯಾ ಪುರುಷಾಸ್ತಾನಥೋಚುಃ ॥೪೦೭॥

ಸಃ—ಆ ಚಿತ್ರಸೇನ ಗಂಧರ್ವನು, ಷಷ್ಟಿಸಾಹಸ್ರಕಕೋಟಿಯೂಥಪೈಃ—ಅರವತ್ತು ಸಾವಿರ ಕೋಟಿ ಸೇನಾ ಪತಿಗಳಿಂದ, ಗಂಧರ್ವಮುಖ್ಯೈಃ—ಶ್ರೇಷ್ಠಗಂಧರ್ವರಿಂದ, ಸಂವೃತಃ ಸನ್—ಕೂಡಿದವನಾಗಿ, ಯಸ್ಮಿನ್—ಯಾವ ಸರೋವರದಲ್ಲಿ, ಧಾರ್ತರಾಷ್ಟ್ರಃ—ದುರ್ಯೋಧನನು, ಸ್ನಾತುಂ—ಸ್ನಾನಮಾಡಲು, ವಾಂಛತಿ—ಇಚ್ಛಿಸುತ್ತಾನೋ ತತ್ಸರಃ—ಆ ಸರೋವರಕ್ಕೆ, ಅಗಾತ್—(ಬಂದನು) ಹೋದನು. ಪುರುಷಾಃ—ದುರ್ಯೋಧನನ ಸೇವಕರು, ತದಾಜ್ಞಯಾ—ದುರ್ಯೋಧನನ ಅಪ್ಪಣೆಯ ಪ್ರಕಾರ, ತಾನ್—ಆ ಗಂಧರ್ವರನ್ನು ಕುರಿತು, ಊಚುಃ—ಮಾತನಾಡಿದರು. ॥೪೦೭॥

ಸ್ನಾತುಂ ಸರೋಯಾಸ್ಯತಿ ಧಾರ್ತರಾಷ್ಟ್ರೋ ರಾಜೇಶ್ವರೋ ನಿಸ್ಸರಧ್ವಂತದಸ್ಮಾತ್ ।
ತೀರ್ಥಾದಾಜ್ಞಾಂ ಧಾರಯುಂತಶ್ಚ ತಸ್ಯೇತ್ಯುಕ್ತಾ ಗಂಧರ್ವಾ ಜಹಸುಸ್ತಾನಥೋಚುಃ ॥೪೦೮॥

ಊಚುರ್ವಯಂ ಮಾನಯಾಮುಸ್ತದಾಜ್ಞಾಂ ತ್ರಿಲೋಕಾನಾಂ ಯಃ ಪತಿಶ್ಯಕ್ರದೇವಃ ।
ನ ಮಾನುಷಾಣಾಮಪಿ ಚಕ್ರವರ್ತಿನಾಂ ಕಿಮ್ವಲ್ಪಸಾರಸ್ಯ ಸುಯೋಧನಸ್ಯ ॥೪೦೯॥

ರಾಜೇಶ್ವರ: ಧಾರ್ತರಾಷ್ಟ್ರ:--ರಾಜರಿಗೆ ರಾಜನಾದ ನಮ್ಮದುರ್ಯೋಧನನು, ಸ್ನಾತುಂ – ಸ್ನಾನಮಾಡಲು, ಸಮಾಯಾಸ್ಯತಿ—ಈ ಸರೋವರಕ್ಕೆ ಬರುವನು. ತತ್—ಆದ್ದರಿಂದ, ತಸ್ಯ ಆಜ್ಞಾಂ ಧಾರಯಂತಃ ಸಂತ; —ಆ ದುರ್ಯೋಧನನ ಆಜ್ಞೆಯನ್ನು ಪಾಲಿಸುವವನಾಗಿ, ತೀರ್ಥಾತ್ ಅಸ್ಮಾತ್ – ತೀರ್ಥರೂಪವಾದ ಈ ಸರೋವರದಿಂದ ನಿಸ್ಸರಧ್ವಂ—ಹೊರಟು ಹೋಗಿರಿ, ಎಂದು ಪ್ರಾತನಾಡಿದರು (ಹಿಂದಿನ ಶ್ಲೋಕಕ್ಕೆ ಅನ್ವಯ) ಇತಿ ಉಕ್ತ್ವಾ:-ಈ ರೀತಿ ಹೇಳಲ್ಪಟ್ಟ ಆ ಗಂಧರ್ವರು, ತಾನ್—ಆ ಕೌರವ ದೂತರನ್ನು, ಉಚ್ಚೈ: ಜಹಸುಃ – ಗಟ್ಟಿಯಾಗಿ ಅಪಹಾಸಮಾಡಿದರು. ಅಥ – ಹಾಗೂ ವಯಂ – ನಾವು, ಯಃ – ಯಾವ ತ್ರಿಲೋಕಾನಾಂ ಪತಿಃ—ಮೂರುಲೋಕಗಳ ಪತಿಯಾದ, ಶಕ್ರದೇವ: – ಇಂದ್ರದೇವನೋ, ತದಾಜ್ಞಾಂ—ಅವನ ಅಪ್ಪಣೆಯನ್ನು, ಮಾನಯಾವಂ: – ಮನ್ನಿಸುತ್ತೇವೆ. ನ ಚಕ್ರವರ್ತಿನಾಂ ಅಪಿ ಮಾನುಷಾಣಾಂ – ಚಕ್ರವರ್ತಿಯೇ ಆಗಿದ್ದರೂ ಕೂಡ, ಮನುಷ್ಯರ ಆಜ್ಞೆಯನ್ನು ಮನ್ನಿಸುವದಿಲ್ಲ ಹಾಗಿರುವಾಗ, ಕಿಮು ಅಲ್ಪಸಾರಸ್ಯ ಸೂಯೋಧನಸ್ಯ - ಅಲ್ಪವಾದ ಶಕ್ತ್ಯಾದಿಗಳುಳ್ಳ ದುರ್ಯೋಧನನ ಮಾತನ್ನು ಕೇಳುವದಿಲ್ಲ ಎಂದು ಏನು ಹೇಳುವದು ॥೪೦೮॥೪೦೯॥

ಇತೀರಿತೇ ಕುಪಿತೋ ಧಾರ್ತರಾಷ್ಟ್ರೋ ಜಘಾನ ಗಂಧರ್ವವರಾನ್ಶರೌಘೈಃ ।
ಜಘ್ನುಶ್ಚಕರ್ಣಾ ಅಪಿತಸ್ಯ ಸೋದರಾ ಜಘ್ನುಶ್ಚ ತೇ ಧಾರ್ತರಾಷ್ಟ್ರಸ್ಯಸೇನಾಮ್ ॥೪೧೦॥

ಇತಿ – ಈ ರೀತಿ, ಈರಿತೇ ಸತಿ – ಗಂಧರ್ವರಿಂದ ಹೇಳಲ್ಪಡುತ್ತಿರಲು, ಕುಪಿತ: – ಸಿಟ್ಟಿಗೆದ್ದ ಧಾರ್ತರಾಷ್ಟ್ರಃ – ದುರ್ಯೋಧನನು, ಗಂಧರ್ವವರಾನ್ – ಗಂಧರ್ವಶ್ರೇಷ್ಠರನ್ನು, ಶರೌಘೈಃ – ಬಾಣ ಸಮೂಹಗಳಿಂದ, ಜಘಾನ—ಸಂಹರಿಸಿದನು. ಸಕರ್ಣಾಃ – ಕರ್ಣನಿಂದ ಸಹಿತರಾದ ತಸ್ಯ ಸೋದರಾ; ಅಪಿ – ಅವನ (ದುರ್ಯೋಧನನ) ತಮ್ಮಂದಿರೂ ಕೂಡ.(ಅನೇಕ ಗಂಧರ್ವವರನ್ನು ಹೊಡೆದರು) ತೇ – ಆ ಗಂಧರ್ವರು, ಧಾರ್ತರಾಷ್ಟ್ರಸ್ಯ—ದುರ್ಯೋಧನನ ಸೇನಾಂ—ಸೈನ್ಯವನ್ನು, ಸಂಹರಿಸಿದರು. ॥೪೧೦॥

~~ಮುಹೂರ್ತಮಾಸೀತ್ಸಮಮೇವ ಯುದ್ಧಂ ತೇಷಾಂತಥಾಧಾರ್ತರಾಷ್ಟ್ರಸ್ಯಚೈವ ।~~
ಪುರಾಂಭಿದೋರ್ವರತೋ ಮಾಯಯಾ ಚ ಗಂಧರ್ವವೀರಾ ವವೃಧುಸ್ತತಶ್ಚ ॥೪೧೧॥

ತೇಷಾಂ – ಆ ಗಂಧರ್ವರಿಗೆ, ಚ - ಹಾಗೂ, ಧಾರ್ತರಾಷ್ಟ್ರಸ್ಯ - ದುರ್ಯೋಧನನಿಗೆ, ಮುಹೂರ್ತಂ—ಒಂದು ಮುಹೂರ್ತ ಸಮಯ ಪರ್ಯಂತ, ಯುದ್ಧಂ—ಯುದ್ಧವು, ಸಮಂ ಏವ - ಆಸೀತ್—ಸಮವೇ ಆಯಿತು, ಪುರಾಂಭಿದೋಃ—ಶತ್ರುಪುರಗಳನ್ನು ನಾಶಮಾಡತಕ್ಕ ಇಂದ್ರದೇವನ, ವರತಃ—ವರದಿಂದ, ಮಾಯಯಾಚ ಭಗವದಿಚ್ಛೆಯಿಂದಲೂ, ಗಂಧರ್ವವೀರಾ: – ಗಂಧರ್ವವೀರರು, ತತಃ ಚ – ಕೌರವರಿಗಿಂತಲೂ, ವವೃಧುಃ – ಸಾಮರ್ಥ್ಯಾದಿಗಳಿಂದ, ವವೃಧುಃ ಅಭಿವೃದ್ಧರಾದರು. ಮಾಯಯಾ ಚ - ಮಾಯಾಶಕ್ತಿಯಿಂದಲೂ ಕೂಡ ಅಭಿವೃದ್ಧರಾದರು. ॥೪೧೧॥

ಅವತಾರಿಕೆ – ಗಂಧರ್ವರಿಗೆ ಬಲಾಭಿವೃದ್ಧಿಯಾಗಲು ಇನ್ನೊಂದು ಕಾರಣವನ್ನು ಹೇಳುತ್ತಾರೆ. –

ತೇಜೋಭಂಗಂ ತತ್ರ ಸುಯೋಧನಸ್ಯ ಪಾರ್ಥಾರ್ಥಮತ್ರ ಪ್ರವಿಧಾತುಮೇವ ।
ಬಲಂ ದದಾವಬ್ಜಜಃ ಕೇಶವಶ್ಚ ಗಂಧರ್ವಾಣಾಂ ತೇಽಭ್ಯಯುರ್ಧಾರ್ತರಾಷ್ಟ್ರಾನ್ ॥೪೧೨॥

ತತ್ರ – ಆ ಯುದ್ಧಕಾಲದಲ್ಲಿ, ಪಾರ್ಥಾರ್ಥಂ – ಪಾಂಡವರ (ಹೆಚ್ಚಳದ) ಸಲುವಾಗಿ, ಸುಯೋಧನಸ್ಯ-ದುರ್ಯೋಧನನಿಗೆ, ತೇಜೋಭಂಗಂ – ತೇಜೋಭಂಗ (ಪರಾಜಯ) ವನ್ನು ಪ್ರವಿಧಾತುಂ – ಮಾಡಿಸಲಿಕ್ಕಾಗಿ ಮಾಡಲು, ಅಬ್ಜಜಃ – ಬ್ರಹ್ಮದೇವರು, ಗಂಧರ್ವಾಣಾಂ—ಆ ಗಂಧರ್ವರಿಗೆ, ಅತ್ರ ಏವ – ಈ ಯುದ್ಧದಲ್ಲಿಯೇ ಬಲಂ-ವಿಶೇಷ

ಸಾಮರ್ಥ್ಯವನ್ನು, ದದೌ—ಕೊಟ್ಟನು. ಕೇಶವಃ ಚ—ಶ್ರೀಕೃಷ್ಣನೂ, ದದೌ – ಕೊಟ್ಟಿದ್ದನು; ತೇ—ಅವರು, ಧಾರ್ತರಾಷ್ಟ್ರಾನ್ – ಕೌರವರ ಮೇಲೆ, ಅಭ್ಯಯುಃ – ಏರಿ ಹೋದರು, ॥೪೧೨॥

ಭಾವಾನುವಾದ ೪೦೧—೪೧೨

ಪಾಂಡವರಿಂದ ಅವಮಾನಿತನಾದ ಜಯದ್ರಥನು ಅವರನ್ನು ಸೋಲಿಸುವಂತೆ ಆಗಲು ರುದ್ರದೇವರನ್ನು ತಪಸ್ಸಿನಿಂದ ಆರಾಧಿಸಿ ಪ್ರತ್ಯಕ್ಷೀಕರಿಸಿಕೊಂಡು ಅವರನ್ನು ಕೇಳಿದಾಗ ರುದ್ರದೇವರು ಈ ಮೊದಲೇ (ಪಾಶುಪತಾಸ್ತ್ರ ಸಂಪಾದನ ಕಾಲದಲ್ಲಿ) ಅರ್ಜುನನ ತಪಸ್ಸಿನಿಂದ ಪ್ರೀತರಾಗಿ ಅವನಿಗೆ ಅಸ್ತ್ರವರಗಳನ್ನು ಕೊಟ್ಟಿದ್ದರಿಂದ ಈಗ ಅರ್ಜುನನನ್ನು ಬಿಟ್ಟು ಉಳಿದ ಪಾಂಡವರನ್ನು ತಡೆಯುವಂತಾಗಲಿ ಎಂದು ವರವನ್ನು ಕೊಟ್ಟರು. ಪಾಂಡವರು ವನದಲ್ಲಿರುವಾಗ ಮಹಾವುತ್ಸರಿಯಾದ 'ದುರ್ಯೋಧನನು ಪಾಂಡವರು ರಾಜಸೂಯ ಮಾಡಿದ್ದಾರೆ; ತಾನೂ ಅದಕ್ಕಿಂತ ಹೆಚ್ಚಿನ ವೈಭವದ ಯಾಗ ಮಾಡಿದೆ ಎಂದು ಆನಿಸಿಕೊಳ್ಳುವದಕ್ಕಾಗಿ ಪೌಂಡರೀಕ ಯಾಗವನ್ನು ಮಾಡಲುದ್ಯುಕ್ತನಾಗಿ ಆಗ ಪಾಂಡವರಿಗೆ ತನ್ನ ಸಂಪತ್ತನ್ನೆಲ್ಲ ತೋರಿಸಿ ಅವಮಾನ ಮಾಡಬೇಕೆಂಬ ಉದ್ದೇಶದಿಂದಲೇ ಅವರಿಗೆ ಆಮಂತ್ರಣ ಕಳಿಸಲು ದುಶ್ಶಾಸನನಿಗೆ ಹೇಳಿದ. ಅವನು ದೂತನನ್ನು ಕಳಿಸಿದನು. ದೂತನು ಪಾಂಡವರಿಗೆ ಬಂದು ಹೇಳಿದಾಗ ಭೀಮರು ನಾವು ಈ ಯಾಗಕ್ಕೆ ಬರುವದಿಲ್ಲ; ಯುದ್ಧವೆಂಬ ಯಜ್ಞಕ್ಕೆ ಬರುತ್ತೇವೆಂದು ಹೋಗಿ ಹೇಳು ಎಂದು ಹೇಳಿದರು. ದುರುಳ ದುರ್ಯೋಧನನು ಆ ಯಾಗವನ್ನೇನೋ ಮಾಡಿದನು. ಆದರೆ ಅದು ಶ್ರೀಕೃಷ್ಣಭಕ್ತರಾದ ಪಾಂಡವರು ಮಾಡಿದ ರಾಜಸೂಯ ಯಾಗದ ಹದಿನಾರನೆಯ ಅಂಶಕ್ಕೂ ಕೂಡ ಸಮವಲ್ಲ. ಹದಿನಾರನೆಯ ಅಂಶಕ್ಕೆ ಸಮವಲ್ಲ ಅಷ್ಟೇಕಿಲ್ಲ ಎಷ್ಟನೆಯ ಅಂಶಕ್ಕೂ ಸಮವಲ್ಲವೇ ಅಲ್ಲ ಎಂಬುದನ್ನು ತಿಳಿಯಬೇಕು. ಎಲ್ಲಿ ಶ್ರೀಹರಿಭಕ್ತರ ದ್ವೇಷದಿಂದ ತನ್ನ ವೈಭವ ಪ್ರದರ್ಶನದ ಉದ್ದೇಶದಿಂದ ಕಾರ್ಯನಡೀತಾ ಇದೆಯೋ ಅದು ಕೇವಲ ಶ್ರೀಹರಿಯು ಶ್ರೀಹರಿಭಕ್ತರ ಪ್ರೀತಿಗಾಗಿ ನಡೆಯುವ ಕಾರ್ಯಕ್ಕೆ ಸದೃಶವಾಗಲು ಹೇಗೆ ಶಕ್ಯ? ಶಕ್ಯವೇ ಇಲ್ಲ. ಈ ಯಾಗಕ್ಕೆ ಪಾಂಡವರು ಬರಲಿಲ್ಲವಾದ್ದರಿಂದ ತಮ್ಮ ಸಂಪತ್ತ್ಪದರ್ಶನ ಅವರಿಗೆ ಮಾಡಲಾಗಲಿಲ್ಲವಲ್ಲ ಎಂದು ಅದನ್ನು ಮಾಡಲು ವಿಚಾರಿಸಿ ಶಕುನಿ ಕರ್ಣ ಮೊದಲಾದವರು ಸೇರಿ ತಮ್ಮ ಪತ್ನೀಸಹಿತರಾಗಿ, ಚತುರಂಗಸೈನ್ಯಸಹಿತರಾಗಿ ಭಂಗಾರ ರತ್ನನಿರ್ಮಿತವಾದ ರಥಗಳಿಂದ ವನದಲ್ಲಿ ರಕ್ಷಣೆಗಾಗಿ ಬಿಟ್ಟ ಗೋವುಗಳನ್ನು ನೋಡಿಕೊಂಡು ಬರುವ ನೆಪಮಾಡಿ ಹೊರಟರು.ಅದನ್ನು ತಿಳಿದ ದೇವೇಂದ್ರನು ಪಾಂಡವರಿಗೆ ಸರ್ವಥಾ ಅವಮಾನವಾಗದೇ ಈ ದುರುಳನಿಗೆ ಮಾನಭಂಗವಾಗಲಿ ಎಂದು ಆ ಕಾರ್ಯಮಾಡಲು ತನ್ನ ಚಿತ್ರಸೇನ ಗಂಧರ್ವನಿಗೆ ಆಜ್ಞಾಪಿಸಿ ಆ ಶಕ್ತಿಯನ್ನು ವರವನ್ನಾಗಿ ಅವನಿಗೆ ಕೊಟ್ಟು ಕಳುಹಿಸಿದನು. ಅವನು ಅನೇಕ ಕೋಟಿ ಗಂಧರ್ವ ಸೈನ್ಯಸಹಿತನಾಗಿ ಭೂಮಿಗೆ ಬಂದು, ದುರ್ಯೋಧನನು ಈಗ ಆ ವನಕ್ಕೆ ಬಂದಾಗ ಎಲ್ಲಿ ಸ್ನಾನ ಮಾಡಲು ಇಚ್ಛಿಸಿದ್ದನೋ ಅಲ್ಲಿಗೆ ಬಂದನು. ಆಗ ದುರ್ಯೋಧನನ ದೂತರು ನಮ್ಮ ರಾಜರು ಇಲ್ಲಿಗೆ ಸ್ನಾನಕ್ಕೆ ಬರುವರು: ನೀವೆಲ್ಲ ಇಲ್ಲಿಂದ ದೂರಕ್ಕೆ ನಡೆಯಿರಿ ಎಂದು ಹೇಳಿದರು. ಆಗ ಆ ಗಂಧರ್ವರು ನಾವು ತ್ರಿಲೋಕಾಧಿಪತಿ ಇಂದ್ರನ ಆಪ್ತಣೆಯನ್ನು ಮಾತ್ರ ನಡೆಸುವವರು; ಮನುಷ್ಯನಾದ ಚಕ್ರವರ್ತಿಯ ಆಪ್ತಣೆಯನ್ನೂ ನಡೆಸುವವರಲ್ಲ; ಹಾಗಿರುವಾಗ ಅಲ್ಪಬಲನಾದ ನಿಮ್ಮ ದುರ್ಯೋಧನನ ಆಜ್ಞೆ ನಮಗೇನುಲೆಕ್ಕ ಅದನ್ನು ನಡೆಸುವದೇ ಇಲ್ಲ' ಎಂದು ಹೇಳಿದರು. ಇದನ್ನು ಕೇಳಿದ ಕ್ರುದ್ಧನಾದ ಆ ದುಷ್ಟದುರ್ಯೋಧನನು ಅವನ ಸೈನ್ಯವು ಇವರ ಜೊತೆಗೆ ಯುದ್ಧಕ್ಕಿಳಿದರು. ಪರಸ್ಪರ ಹೊಡೆದಾಡಿದರು ಕೆಲವು ಸಮಯ ಸಮಾನ ಯುದ್ಧವಾಯಿತು. ಇಂದ್ರದೇವರು ಕೊಟ್ಟ ವರದಿಂದ,ಬ್ರಹ್ಮದೇವರು ಹಾಗು ಶ್ರೀಹರಿಯುಪಾಂಡವರ ಮಾನವೃದ್ಧಿಗಾಗಿ ದುರ್ಯೋಧನಾದಿಗಳ ಮಾನಭಂಗಕ್ಕಾಗಿ ಈ ಯುದ್ಧದಲ್ಲಿ ಮಾತ್ರ ವಿಶೇಷ ಶಕ್ತಿಯು ಗಂಧರ್ವರಿಗೆ ಬರುವಂತ ವರ ಕೊಟ್ಟದ್ದರಿಂದ ಬಲಾಭಿವೃದ್ಧರಾದ ಗಂಧರ್ವರು ಕೌರವರ ಮೇಲೆ ಏರಿ ಬಂದರು.

ವಿಶೇಷಾಂಶ – ಆಸುರಸ್ವಭಾವದ ಜನರು ಮಾಡಿದ ಪುಣ್ಯ ಕಾರ್ಯವೂ ಪಾಪಕ್ಕೆ ಕಾರಣವಾಗುವದು ಎಂದು ಹಿಂದೆ ಬಂದಿಹೆಯಷ್ಟೇ! ಅದಕ್ಕೆ ದೃಷ್ಟಾಂತವಾಗಿ ಈ ದುರ್ಯೋಧನನು ಮಾಡಿದ ಪೌಂಡರೀಕಯಾಗವನ್ನು ಇಟ್ಟುಕೊಳ್ಳಬಹುದು. ಇಂಥವರು ಪುಣ್ಯಕಾರ್ಯವನ್ನು ಮಾಡುವ ಉದ್ದೇಶ, ವಿಧಾನಗಳು ಇಲ್ಲಿ ಸ್ಪಷ್ಟವಾಗಿವೆ. ಯಾಗದ ಉದ್ದೇಶ ಅಹಂಕಾರ ಶ್ರೀಮಂತಿಕೆಯ ಪ್ರದರ್ಶನ. ಪಾಂಡವರ ಅಂದರೆ ಧರ್ಮಜ್ಞಾನಭಕ್ತ್ಯಾದಿ ಗುಣಗಳು ಶ್ರವಣಮನನಾದಿಗಳ, ಅವಮಾನ ಮಾಡುವದು ಇವೇ ಆಗಿದ್ದವು/ಆಗಿರುತ್ತವೆ ಎಂದರ್ಥ.

ಸಚಿತ್ರಸೇನಃ ಪ್ರಥಮಂಕರ್ಣಮೇವ ಯುಯೋಧ ಪಾರ್ಥಸ್ಪರ್ಧಯಾ ತೇನ ಯುಧ್ಯನ್ ।
ಕರ್ಣೋನಾಶಕ್ನೋದ್ವಚನಾದ್ಭಾರ್ಗವಸ್ಯ ರಾಮಸ್ಯ ನಿತ್ಯಾವಿತಸದ್ಗುಣಸ್ಯ ॥೪೧೩॥

ಸಃ ಚಿತ್ರಸೇನಃ—ಆ ಚಿತ್ರಸೇನ ಗಂಧರ್ವನು, ಪ್ರಥಮಂ – ಮೊದಲು, ಕರ್ಣಂ—ಕರ್ಣನ ಜೊತೆಗೆ, ಯುಯೋಧ – ಯುದ್ಧಮಾಡಿದನು. ಪಾರ್ಥಸ್ಪರ್ಧಯಾ—ಪಾಂಡವರಿಗೆ ಸಂಪತ್ತನ್ನು ತೋರಿಸುವ ಸ್ಪರ್ಧೆಯಿಂದ, ತೇನ—ಆ ಚಿತ್ರಸೇನ ಗಂಧರ್ವನ ಜೊತೆಗೆ, ಯುಧ್ಯನ್—ಯುದ್ಧ ಮಾಡುತ್ತಿದ್ದ. ಕರ್ಣಃ – ಕರ್ಣನು, ನಿತ್ಯಾವಿತ ಸದ್ಗುಣಸ್ಯ ಭಾರ್ಗವಸ್ಯರಾಮಸ್ಯ – ಯಾವಾಗಲೂ ಅಸಂಖ್ಯ ಗುಣ ಪೂರ್ಣನಾದ, ಭೃಗುವಂಶದಲ್ಲಿ ಅವತರಿಸಿದ ಪರಶುರಾಮದೇವರ, ವಚನಾತ್ – ಶಾಪವಚನದ ಪ್ರಕಾರ, (ಯೋದ್ಧುಂ – ಯುದ್ಧ ಮಾಡಲು), ನ ಅಶಕ್ನೋತ್– ಸಮರ್ಥನಾಗಲಿಲ್ಲ. ॥೪೧೩॥

ಸಭಗ್ನಯಾನಶ್ಚ ವಿಕರ್ಣಯಾನಮಾಸ್ಥಾಯ ತಸ್ಯೈವ ನಿಯಮ್ಯ ವಾಜಿನಃ ।
ಪರಾದ್ರವತ್ತೇನ ಸಹೈವ ಶೀಘ್ರಂ ದುರ್ಯೋಧನಶ್ಚಿತ್ರಸೇನಂ ಯುಯೋಧ ॥೪೧೪॥

ಭಗ್ನಯಾನಃಸ:– ಚಿತ್ರಸೇನನಿಂದ ನಷ್ಟವಾದ ರಥವುಳ್ಳ (ರಥವನ್ನು ಕಳಕೊಂಡ) ಆ ಕರ್ಣನು. ವಿಕರ್ಣ ಯಾನಂ ಏವ – ವಿಕರ್ಣನ ರಥವನ್ನೇ, ಆಸ್ಥಾಯ—ಹೊಂದಿ, ಏರಿ, ತಸ್ಯ ವಾಜಿನ: – ಆ ರಥದ ಕುದುರೆಗಳನ್ನು, ನಿಯಮ್ಯ – ಹೂರಡುವಂತೆ ಪ್ರೇರೇಪಿಸಿ (ಡಾಬ್ಬವನ್ನು ಬಡಿದು ಹೊರಡುವ ಸಂಜ್ಞೆಯನ್ನು ಕೊಟ್ಟು), ತೇನ ಸಹ ಏವ ಆ ವಿಕರ್ಣನಿಂದ ಕೂಡಿಕೊಂಡೇ, ಶೀಘ್ರಂ ಪರಾದ್ರವತ್— ಬೇಗನೇ ಓಡಿದನು. ದುರ್ಯೋಧನ: – ದುರ್ಯೋಧನನು, ಚಿತ್ರಸೇನಂ ಯುಯೋಧ – ಚಿತ್ರಸೇನನ ಜೊತೆಗೆ ಯುದ್ಧಮಾಡಿದನು. ॥೪೧೪॥

~~ಮುಹೂರ್ತಮೇನೇನ ಸಮಂ ಸ ಯುಧ್ಯನ್ನನ್ಯೈರ್ಗಂಧರ್ವೈಃ ಬಹುಭಿರ್ಮಾಯಯೈವ ।~~
ಭಗ್ನೇ ರಥೇ ಭೂವಿತಲೇ ಸ್ಥಿತಸ್ತನ್ ಗೃಹೀತ ಆಸೀಚ್ಚಿತ್ರಸೇನೇನ ಸಂಖ್ಯೇ ॥೪೧೫॥

ಏನೇನ ಸಮಂ – ಈ ಚಿತ್ರಸೇನನ ಜೊತೆಗೆ, ಮುಹೂರ್ತಂ— ಮುಹೂರ್ತ ಸಮಯದತನಕ, ಯುಧ್ಯನ್ ಯುದ್ಧಮಾಡಿದ, ಸ: – ಆ ದುರ್ಯೋಧನನು. ಅನ್ಯೈ: ಬಹುಭಿ:—ಗಂಧರ್ವೈ: – ಬೇರೆ ಬಹುಸಂಖ್ಯೆ ಗಂಧರ್ವರಿಂದ ಮಾಯಯಾ ಏವ-ಮಾಯಾಶಕ್ತಿಯಿಂದಲೇ, ರಥೇ:-ತನ್ನ ರಥವು,ಭಗ್ನೇಸತಿ-ನಾಶವಾಡಲ್ಪಡುತ್ತಿರಲು, ಭೂವಿತಲೇ ಸ್ಥಿತ:- ಭೂವಿಯಲ್ಲಿ ನಿಂತನು. ಚಿತ್ರಸೇನೇನಸಂಖ್ಯೆ ಗೃಹೀತಃ ಆಸೀತ್–ಯುದ್ಧದಲ್ಲಿ ಚಿತ್ರಸೇನನಿಂದ ಹಿಡಿಯಲ್ಪಟ್ಟನು. ॥೪೧೫॥

ಮಹಾಬಲೋ ಧಾರ್ತರಾಷ್ಟ್ರೋsಪಿ ಶಕ್ರವರಾದ್ವಿಷ್ಣೋರಾಜ್ಞಯಾ ಚಾಭಿವೃದ್ಧೇ ।
ಸಚಿತ್ರಸೇನೇನ ಧೃತಸ್ತದಾss ಸೀದ್ಬದ್ಧಃ ಪಾಶೈರ್ವೈದ್ಯುತೈರಿಂದ್ರದತ್ತೈಃ ॥೪೧೬॥

ಶಕ್ರವರಾತ್ —ಇಂದ್ರದೇವರ ವರದಿಂದ, ವಿಷ್ಣೋಃ ಆಜ್ಞಯಾ ಚ—ಶ್ರೀಹರಿಯ ಆಜ್ಞೆಯಿಂದಲೂ, (ಚಿತ್ರಸೇನಸ್ಯ ಓಲೇ— ಚಿತ್ರಸೇನನ ಬಲವ) ಅಭಿವೃದ್ಧೇ ಸತಿ – ಹೆಚ್ಚಿದಾಗ, ಸ: ಧಾರ್ತರಾಷ್ಟ್ರ: - ಆ ದುರ್ಯೋಧನನು, ಮಹಾಬಲ: ಅಪಿ – ಮಹಾಬಲಿಷ್ಠನಾಗಿದ್ದರೂ ಕೂಡ, ಚಿತ್ರಸೇನೇನ – ಚಿತ್ರಸೇನನಿಂದ, ಧೃತ. – ಹಿಡಿಯಲ್ಪಟ್ಟನು. ಇಂದ್ರದತ್ತೈ: – ಇಂದ್ರದೇವರಿಂದ ಕೊಡಲ್ಪಟ್ಟ, ವೈದ್ಯುತೈ:—ವಿದ್ಯುದ್ದೇವತೆಯಿಂದ ಅಭಿಮಾನ್ಯವಾನವಾದ, ಪಾಶೈ:– ಹಗ್ಗಗಳಿಂದ, ಬದ್ಧ: — ಕಟ್ಟಲ್ಪಟ್ಟನು. ॥೪೧೬॥

ತಸ್ಯಾನುಜಾಃ ಶಕುನೀ ರಾಜಭಾರ್ಯಾಸ್ಸರ್ವೇ ಬದ್ಧಾಶ್ಶಕ್ರಭೃತ್ಯೈಃ ಪ್ರಣೇತಾ ।
ಆದಾಯ ತಾನಂಬರಂ ಸಂಪ್ರಯಾತೇಷ್ವರೂರೂವನ್ ಪಾಂಡವಾನ್ಮಂತ್ರಿಣೋಽಸ್ಯ ॥೪೧೭॥

ತಸ್ಯ – ಆ ದುರ್ಯೋಧನನ ಸರ್ವೇ ಅನುಜಾಃ—ಎಲ್ಲ ಸಹೋದರರೂ, ಶಕುನಿಃ – ಶಕುನಿಯೂ, ರಾಜ ಭಾರ್ಯಾಃ – ಅವರೆಲ್ಲರ ಹೆಂಡಂದಿರೂ, ಶಕ್ರಭೃತ್ಯೈಃ – ದೇವೇಂದ್ರನ ಸೇವಕರಿಂದ, ಬದ್ಧಾಃ – ಕಟ್ಟಲ್ಪಟ್ಟರೂ; ಪ್ರಣೇತಾಃ—ಸ್ವರ್ಗಲೋಕದ ಕಡೆಗೆ ಎಳೆದೂ ಒಯ್ಯಲ್ಪಡಹತ್ತಿದ್ದರೂ. ತಾನ್ – ಅವರೆಲ್ಲರನ್ನೂ, ಆದಾಯ ಎಳೆದೂ ಕೊಂಡೂ, (ಗಂಧರ್ವೇಷೂ—ಗಂಧರ್ವರೂ) ಅಂಬರಂ – ಆಕಾಶಕ್ಕೆ, ಸಂಪ್ರಯಾತೇಷು ಸತ್ಸು – ಹೋಗುತ್ತಿರಲೂ, ಅಸ್ಯ ಮಂತ್ರಿಣಃ – ಈ ದುರ್ಯೋಧನನ ಮಂತ್ರಿಗಳು, ಪಾಂಡವಾನ್ ಅರೂರುವನ್—ಪಾಂಡವರನ್ನೂ—ಅಳುತ್ತಾ ಕೂಗಿ ಕೊಂಡರು. ॥೪೧೭॥

ಸಮೀಪಮಾಗತ್ಯ ಪೃಥಾಸುತಾನಾಂ ಪರಿಭೂತಂ ವಃ ಕುಲಂ ಶಕ್ರಭೃತ್ಯೈಃ ।
ಹೃತಸ್ಸಭಾರ್ಯಸ್ಸಾನುಜೋಧಾರ್ತರಾಷ್ಟ್ರಸ್ತಂ ಮೋಚಯಧ್ವಂ ಭ್ರಾತರಂ ಭ್ರಾತರೋಽಗ್ರ್ಯಾಃ ॥೪೧೮॥

ಪೃಥಾಸುತಾನಾಂ ಸಮೀಪಂ—ಪಾಂಡವರ ಸಮೀಪಕ್ಕೆ, ಆಗತ್ಯ—ಬಂದೂ, ಹೇ ಅಗ್ರ್ಯಾಃ ಭ್ರಾತರಃ – ಶ್ರೇಷ್ಠ ಸಹೋದರರಾದ ಪಾಂಡವರೇ, ವಃ ಕುಲಂ – ನಿಮ್ಮ ಕುಲವೇ, ಶಕ್ರಭೃತ್ಯೈಃ – ಇಂದ್ರಸೇವಕರಿಂದ, ಪರಿಭೂತಂ—ಸೋಲಿಸಲ್ಪಟ್ಟಿದೆ, ಸಭಾರ್ಯಃ ಸಾನುಜಃ ಧಾರ್ತರಾಷ್ಟ್ರಃ—ಪತ್ನಿಯಿಂದ ಸಹಿತನಾದ, ಸೋದರರಿಂದ ಸಹಿತನಾದ ದುರ್ಯೋಧನನೂ, ಹೃತಃ – ಬಂಧಿಸಿ ಅಪಹರಿಸಲ್ಪಟ್ಟಿದ್ದಾನೆ. ತಂ ಭ್ರಾತರಂ—ಆ ನಿಮ್ಮ ಸೋದರನನ್ನು, ಮೋಚಯಧ್ವಂ – ಬಿಡಿಸಿ ಎಂದೂ ಕೂಗಿಕೊಂಡರೂ ಎಂದೂ ಹಿಂದಿನ ಶ್ಲೋಕಕ್ಕೆ ಅನ್ವಯ. ॥೪೧೮॥

ಇತ್ಯುಕ್ತ ಊಚೇ ಭೀಮಸೇನೋಽಗ್ರಜಂ ಸ್ವಂ ಜಾನೇ ರಾಜನ್ಯಾದೃಶೋಽಯಂ ವಿಮರ್ದಃ ।
ಐಶ್ವರ್ಯಂ ಸ್ವಂ ದರ್ಶಯನ್ನಸ್ಸಮಾಗಾದ್ದುರ್ಯೋಧನಸ್ತೇಜಸೋ ಭಂಗಮಿಚ್ಛನ್ ॥೪೧೯॥

ಇತಿ-ಈ ರೀತಿ, ಉಕ್ತೇಸತಿ—ಅವರಿಂದ ಹೇಳಲ್ಪಡುತ್ತಿರಲೂ, ಭೀಮಸೇನಃ - ಭೀಮಸೇನದೇವರೂ, ಸ್ವಂ ಅಗ್ರಜಂ—ತಮ್ಮ ಅಣ್ಣ ಧರ್ಮರಾಜನನ್ನು ಕುರಿತೂ, ರಾಜನ್—ಎಲೋ ಧರ್ಮರಾಜನೇ, ಅಯಂ ವಿಮರ್ದಃ- ಈ ಜಗಳವು, ಯಾದೃಶಃ = ಯಾವ ನಿಮಿತ್ತದಿಂದ ಸುರು ಆದದ್ದು ಎಂಬುದನ್ನು, (ಅಹಂ-ನಾನು) ಜಾನೇ – ತಿಳಿದಿರುವೆನೂ. ಅದೇನೆಂದರೆ – ನಃ ತೇಜಸಃಭಂಗಂ ಇಚ್ಛನ್ – ನಮ್ಮ ಮಾನದ ಭಂಗವನ್ನು ಇಚ್ಛಿಸುವವನಾಗಿ—ದುರ್ಯೋಧನಃ—ದುರ್ಯೋಧನನೂ, ಸ್ವಂ ಐಶ್ವರ್ಯಂ ದರ್ಶಯನ್ – ತನ್ನ ಐಶ್ವರ್ಯವನ್ನು ತೊರಿಸುವವನಾಗಿ ಸಮಾಗಾತ್–ಬಂದನೂ. ॥೪೧೯॥

ವಿಜ್ಞಾಯ ತೇಷಾಂ ಮಂತ್ರಿತಂ ವಜ್ರಬಾಹುರೇತಚ್ಚಕ್ರೇ ನಾತ್ರ ನಃ ಕಾರ್ಯಹಾನಿಃ ।
ದಿವ್ಯಜ್ಞಾನಂ ಸ್ವಾತ್ಮನೋ ದರ್ಶಯನ್ನ ಏತಾವದುಕ್ತ್ವಾ ವಿರರಾಮ ಭೀಮಃ ॥೪೨೦॥

ತೇಷಾಂ ಮಂತ್ರಿತಂ—ಅವರ ದುರಾಲೋಚನೆಯನ್ನು, ವಿಜ್ಞಾಯ—ತಿಳಿದೂ, ವಜ್ರಬಾಹುಃ – ವಜ್ರಾಯುಧವನ್ನು ಕೈಯಲ್ಲಿ ಹಿಡಿದಿರುವ ಇಂದ್ರದೇವನೂ, ಏತತ್ – ಈ ಕೌರವರ ಬಂಧನಾದಿ ಕಾರ್ಯವನ್ನು, ಚಕ್ರೇ—ಮಾಡಿದನೂ, ಅತ್ರ – ಕೌರವರಿಗೆ ಪರಾಜಯ ಬಂದದ್ದರಲ್ಲಿ, ನಃ ಕಾರ್ಯಹಾನಿಃ – ನಮ್ಮ ಯಾವದೇ

(ಕಾರ್ಯಹಾನಿಯಂ) ನಪ್ಪವು, ನ—ಇಲ್ಲ, ಇತಿ ಏತಾವತ್ - ಎಂಬ ಇಷ್ಟ ವಿಷಯಂವನ್ನು, ಉಕ್ತ್ವಾ – ಹೇಳಿ, ಸಃ ಭೀಮಃ – ಆ ಭೀಮಸೇನದೇವರಂ, ಸ್ವಾತ್ಮನಃ – ತನ್ನ, ದಿವ್ಯಜ್ಞಾನಂ – ದಿವ್ಯಜ್ಞಾನವನ್ನು, ದರ್ಶಯನ್ – ತೋರಿಸಿದವರಾದಿ, ಏರರಾಮು—ಸುಮ್ಮನಾದರಂ. ॥೪೨೧॥

ಏಕಾಹಯಜ್ಞೇ ದೀಕ್ಷಿತೇನೈವ ರಾಜ್ಞಾ ಸಂಪ್ರೇಷಿತೋ ಭೀಮಸೇನೋಽರ್ಜುನಶ್ಚ ।
ಸಮಾದ್ರೇಯೌ ಚಿತ್ರಸೇನಂ ರಣೇ ತೌ ವಿಜಿತ್ಯ ದುರ್ಯೋಧನಮಾಶ್ವಮುಂಚತಾಮ್॥೪೨೧॥

ಏಕಾಹಯಂಜ್ಞೇ – ಒಂದಂ ದಿನದ ಯಾಗಡಲ್ಲಿ, ದೀಕ್ಷಿತೇನ ರಾಜ್ಞಾಏವ – ದೀಕ್ಷಾಯಂಕ್ತನಾದ ಧರ್ಮರಾಜನಿಂದಲೆ, ಭೀಮಸೇನಃ ಸಂಪ್ರೇಷಿತಃ ಅರ್ಜುನಃ ಚ – ಭೀಮಸೇನನಂ ಕಳಿಸಲ್ಪಟ್ಟನು; ಅರ್ಜುನನೂ ಕೂಡ ಕಳಿಸಲ್ಪಟ್ಟನು, ತೌ – ಅವರಿಬ್ಬರು, ಸಮಾದ್ರೇಯೌ—ನಕುಲಸಹದೇವರಿಂದ ಕೂಡಿದವರಾಗಿ, ರಣೇ—ಯುದ್ಧದಲ್ಲಿ, ಚಿತ್ರಸೇನಂ – ಚಿತ್ರಸೇನ ಗಂದರ್ವನನ್ನು, ವಿಜಿತ್ಯ – ಗೆದ್ದು, ದುರ್ಯೋಧನಂ—ದುರ್ಯೋಧನನನ್ನು, ಆಶು ಅಮುಂಚತಾಂ – ಕೂಡಲೇ ಬಿಡಿಸಿದರು. ॥೪೨೧॥

ಸ ಚಿತ್ರಸೇನೋ ವಾಸವೋಕ್ತಂ ಚ ಸರ್ವಂ ಕುಮುಂತ್ರಿತಂ ಧಾರ್ತರಾಷ್ಟ್ರಸ್ಯ ಚಾಹ ।
ಪಾರ್ಥಸ್ಯ ಭೀಮಸ್ಯ ಚ ತನ್ನಿಶಮ್ಯ ಸುವ್ರೀಳಿತೋ ಧಾರ್ತರಾಷ್ಟ್ರಸ್ತ್ವಜೋಽಭೂತ್ ॥೪೨೨॥

ಸಃ ಚಿತ್ರಸೇನಃ—ಆ ಚಿತ್ರಸೇನ ಗಂಧರ್ವನಂ, ವಾಸವೋಕ್ತಂ – ಇಂದ್ರನಿಂದ ತನ್ನ ಎದುರಿಗೆ ಹೇಳಲ್ಪಟ್ಟ, ಧಾರ್ತರಾಷ್ಟ್ರಸ್ಯ ಸರ್ವಂ ಕುಮುಂತ್ರಿತಂ-ದುರ್ಯೋಧನನ ಎಲ್ಲ ದುರಾಲೋಚನೆಯಂನ್ನು, ಅದಕ್ಕಾಗಿ ತನ್ನನ್ನು ಕಳಿಸಿದ್ದನ್ನು ಪಾರ್ಥಸ್ಯ ಭೀಮಸ್ಯ ಚ – ಅರ್ಜುನನಿಗೆ ಹಾಗೂ ಭೀಮಸೇನರಿಗೆ. (ದುರ್ಯೋಧನನ ಎದುರಿನಲ್ಲಿಯೇ), ಆಹ – ಹೇಳಿದನು, ತತ್ ನಿಶಮ್ಯ – ಅದನ್ನು ಕೇಳಿ, ಧೃತರಾಷ್ಟ್ರತ್ವಜಃ – ದುರ್ಯೋಧನನು, ಸುವ್ರೀಳಿತಃ ಅಭೂತ್ – ಅತ್ಯಂತ ಲಜ್ಜಾಯುಕ್ತನಂ ಆದನು. ॥೪೨೨॥

ಸಮಾಪ್ಯ ಯಜ್ಞಂ ಚ ತದಾಽಭಿಯಾತಂ ಸರ್ವೇ ಪಾಪುರ್ಧರ್ಮರಾಜಂ ಸ ಚಾಶು ।
ಸಂಪೂಜ್ಯತೂತ್ಸೃಜ್ಯ ಚ ಚಿತ್ರಸೇನಮೂಚೇ ಗಾಂಧಾರೇನ ಪುನಃ ಕಾರ್ಯಮೀದೃಕ್॥೪೨೩॥

ತದಾ – ಆಗ, ಯಜ್ಞಂ ಸಮಾಪ್ಯ – ಯಜ್ಞವನ್ನು ಮುಗಿಸಿ, ಅಭಿಯಾತಂ – ತಮ್ಮ ಕಡೆಗೆ ಬರುತ್ತಿದ್ದ, ಧರ್ಮರಾಜಂ – ಧರ್ಮರಾಜನನ್ನು, ಸರ್ವೇ – ಎಲ್ಲರೂ, ಪ್ರಾಪುಃ – ಹೊಂದಿದರು ಸಃ ಚ – ಅವನು, ಚಿತ್ರಸೇನಂ ಸಂಪೂಜ್ಯ ಚ ಉತ್ಸೃಜ್ಯ – ಚಿತ್ರಸೇನನನ್ನು ಸತ್ಕರಿಸಿ ಮತ್ತು ಬೀಳ್ಕೊಟ್ಟ, (ದುರ್ಯೋಧನಂ—ದುರ್ಯೋಧನನನ್ನು ಕುರಿತು) ಗಾಂಧಾರೇ = ದುರ್ಯೋಧನನೇ, ಈದೃಕ್ – ಈ ರೀತಿ ದುಷ್ಟ, ಅಶಕ್ಯ ಕಾರ್ಯವನ್ನು, ಪುನಃ ನ ಕಾರ್ಯಂ – ಮತ್ತೆ ಮಾಡಲ್ಪಡಬಾರದು (ಹೀಗೆ ಪುನಃ ಮಾಡಬೇಡ), ಇತಿ ಊಚೇ – ಎಂದು ಹೇಳಿದನು. ॥೪೨೩॥

ಸಂಪಾಡವೈರ್ಮೋಚಿತಸ್ಸಾನುಜಶ್ಚ ಸಭಾರ್ಯಕಃ ಕಿಂಚಿದತೋಽಪಗಮ್ಯ ।
ಸಮ್ಮೋಲನಾಯೋಪವಿಷ್ಟಶ್ಚ ತತ್ರ ಸುವ್ರೀಳಿತಸ್ಸೂತಪುತ್ರಂ ದದರ್ಶ ॥೪೨೪॥

ಸುವ್ರೀಳಿತಃ ಸಃ—ಅತ್ಯಂತ ನಾಚಿಕೆಗೊಳಗಾದ ದುರ್ಯೋಧನನು, ಏವಂ— ಈ ರೀತಿ, ಪಾಂಡವೈಃ—ಪಾಂಡವರಿಂದ, ಸಾನುಜಃ ಸಭಾರ್ಯಕಃ ಚ ಮೋಚಿತಃ ಸನ್ – ಸೋದರರಿಂದ, ಭಾರ್ಯಾರಿಂದ ಸಹಿತವಾಗಿ ಬಿಡಿಸ

ಲ್ಪಟ್ಟವನಾಗಿ, ಅತಃ – ಈ ದ್ವೈತ ವನದಿಂದ, ಕಿಂಚಿತ್ ಅಪಗಮ್ಯ – ಸ್ವಲ್ಪ ದೂರಕ್ಕೆ ಹೋಗಿ, ಸಮ್ಮೋಲನಾಯ – ಚದುರಿಹೋದ ಸೈನ್ಯವು ಒಂದು ಕಡೆ ಸೇರುವದಕ್ಕಾಗಿ, ಉಪವಿಷ್ಟ: ಸನ್—ಕುಳಿತವನಾಗಿ, ಸೂತಪುತ್ರಂ - ಕರ್ಣನನ್ನು, ದದರ್ಶ – ಕಂಡನು. ॥೪೨೪॥

ಸ ಚಾಹ ದಿಷ್ಟ್ಯಾ ಜಯಸಿ ರಾಜನ್ನಿತಿ ಸುಯೋಧನವ್ ।
ವ್ರೀಳಿತೋ ನೇತಿ ತಂ ಚೋಕ್ತ್ವಾ ಯಥಾವೃತ್ತಂ ಸುಯೋಧನ: ॥೪೨೫॥

ಉಕ್ತ್ವಾ ಪ್ರಾಯೋಪವೇಶಂ ಚ ಚಕ್ರೇ ತತ್ರ ಸುದು:ಖಿತ: ॥೪೨೬॥

ಸ:—ಆ ಕರ್ಣನು, ಸುಯೋಧನಂ – ದುರ್ಯೋಧನನನ್ನು ಕುರಿತು. ರಾಜನ್ – ರಾಜನೇ, ದಿಷ್ಟ್ಯಾ—ದೈವಾನುಗ್ರಹದಿಂದ, ಜಯಸಿ—ಗೆದ್ದಿರುತ್ತೀದಿ, ಇತಿ—ಎಂದು, ಆಹ—ಹೇಳಿದನು, ವ್ರೀಳಿತ: – ನಾಚಿಕೆಗೆ ಒಳಗಾದ. ಸುಯೋಧನ:—ದುರ್ಯೋಧನು, ನ ಇತಿ –ಇಲ್ಲ, ಗೆದ್ದಿಲ್ಲವೆಂದು, ಉಕ್ತ್ವಾ—ಹೇಳಿ, ಯಥಾವೃತ್ತಂ – ಹೇಗೆ ನಡೆದಿದೆಯೋ ಹಾಗೆ ಎಲ್ಲ ವಿಷಯವನ್ನು, ಉಕ್ತ್ವಾ – ಹೇಳಿ, ಸುದು:ಖಿತ: ಸನ್—ಅತ್ಯಂತ ದು:ಖಿಯಾಗಿ ತತ್ರ –ಅಲ್ಲಿಯೇ. ಪ್ರಾಯೋಪವೇಶಂ ಚ ಚಕ್ರೇ – ಆಮರಣ ಉಪವಾಸದ ನಿಶ್ಚಯವನ್ನು ಮಾಡಿದನು.॥೪೨೫-೪೨೬॥

ಕರ್ಣದುಶ್ಶಾಸನಾಭ್ಯಾಂ ಚ ಸೌಬಲೇನ ಚ ದೇವಿನಾ ।
ಅನ್ಯೈಶ್ಚ ಯಾಚ್ಯಮಾನೋ�ऽ ಪಿ ನೈವೋತ್ತ ಸ್ಥೌ ಸುಯೋಧನ: ।
ತತೋ ನಿಶಾಯಾಂ ಪ್ರಾಪ್ತಯಾಂ ಸ್ವಪಕ್ಷೇ ಪ್ರವಿಷೀದತಿ ॥೪೨೭॥

ಮುಂತ್ರಯಿತ್ವಾऽ ಸುರೈ: ಕೃತ್ಯಾ ನಿರ್ಮಿತಾ ಹೋಮಕರ್ಮಣಾ ।
ಶುಕ್ರೇಣೋತ್ಪಾದಿತಾ ಕೃತ್ಯಾ ಸಾ ಸುಷುಪ್ತೇಷು ಮುಂತ್ರಿಷು ॥೪೨೮॥

ಧಾರ್ತರಾಷ್ಟ್ರಂ ಸಮಾದಾಯ ಯಯೌ ಪಾತಾಲಮಾಶು ಚ ।
ಅಥ ಸಂಬೋಧಯಾಮಾಸುರ್ದೈತ್ಯಾ ದುರ್ಯೋಧನಂ ನೃಪಮ್ ॥೪೨೯॥

ಕರ್ಣದುಶ್ಶಾಸನರಿಂದ ಚ – ಮಂತ್ರಿ, ದೇವಿನಾ ಸೌಬಲೇನ – ಕಪಟದ್ಯೂತವಾಡುವ, ಶಕುನಿಯಿಂದ, ಚ—ಮಂತ್ರಿ, ಅನ್ಯೈ: ಚ – ಬೇರೆಯಂವರಿಂದಲೂ ಕೂಡ, ಯಾಚ್ಯಮಾನ: ಅಪಿ – ಪ್ರಾರ್ಥಿಸಲ್ಪಟ್ಟರೂ ಕೂಡ, ಸುಯೋಧನ: – ದುರ್ಯೋಧನನು, ನೈವ ಉತ್ತಸ್ಥೌ —ಉಪವಾಸವನ್ನು ಬಿಟ್ಟು ಮೇಲೇಳಲಿಲ್ಲ, ತತ: – ಅನಂತರ, ನಿಶಾಯಾಂ ಪ್ರಾಪ್ತಾಯಾಂ – ರಾತ್ರಿಯಂ ಬರುತ್ತಿರಲು, ಸ್ವಪಕ್ಷೇ – ತನ್ನ ಅಸುರ ಪಕ್ಷವು ವಿಷಾದಪಡುತ್ತಿರಲು, ಅಸುರೈ: ರಾಕ್ಷಸರಿಂದ, ಮುಂತ್ರಯಿತ್ವಾ— ವಿಚಾರಮಾಡಿ, ಹೋಮಕರ್ಮಣಾ – ಹೋಮಕಾರ್ಯದಿಂದ, ಕೃತ್ಯಾ— ಭೂತಶೇಷವು, ಶುಕ್ರೇಣ – ಶುಕ್ರಾಚಾರ್ಯರಿಂದ, ಉತ್ಪಾದಿತಾ— ಹುಟ್ಟಿಸಲ್ಪಟ್ಟಿತು, ಸಾ—ಆ ಕೃತ್ಯಾವು, ಮುಂತ್ರಿಷು-ದುರ್ಯೋಧನನ ಮಂತ್ರಿಗಳೆಲ್ಲರು, ಸುಷುಪ್ತೇಷು-ಮಲಗಿರುತ್ತಿರಲು, ಧಾರ್ತರಾಷ್ಟ್ರಂ—ದುರ್ಯೋಧನನನ್ನು, ಸಮಾದಾಯ—ಕರೆದುಕೊಂಡು, ಆಶು – ಕೂಡಲೇ, ಪಾತಾಲಂ - ಪಾತಾಲಲೋಕಕ್ಕೆ, ಯಯೌ —ಹೋಯಿತು, ಅಥ—ಅಲ್ಲಿಗೆ ಹೋದ ನಂತರ, ದೈತ್ಯಾ:—ದೈತ್ಯರು, ನೃಪಂ ದುರ್ಯೋಧನಂ—ದುರ್ಯೋಧನನ್ನು, ಸಂಬೋಧಯಾಮಾಸು: – ಸಂಬೋಧಿಸಿ ಮಾತನಾಡಿದರು. ॥೪೨೭-೪೨೮-೪೨೯॥

ಅವತಾರಿಕೆ:— ಅಸುರರು ಮಾತನಾಡಿದ ವಿಷಯವನ್ನು ತಿಳಿಸುತ್ತಾರೆ.

ತ್ವಂ ದಿವ್ಯಃಪುರುಷೋ ವೀರಃ ಸೃಷ್ಟೋಽಸ್ಮಾಭಿಃಪ್ರತೋಷಿತಾತ್ ।
ತಪಸಾ ಶಂಕರಾದ್ವಜ್ರಕಾಯೋಽವಧ್ಯಶ್ಚ ಸರ್ವದಾ ॥೪೩೦॥

ತ್ವಂ – ನೀನು, ದಿವ್ಯಃಪುರುಷಃ–ಲೋಕವಿಕ್ಷಣ ಪುರುಷನು ಆಗುವಿ, ವೀರಃ – ಪರಾಕ್ರಮಿಯಾಗುವಿ (ಹಿಡಿದ ಕಾರ್ಯವನ್ನು ಕೊನೆಯಂತನಕ ನಡೆಸುವವನಾಗುವಿ), ಅಸ್ಮಾಭಿಃ—ನಮ್ಮಿಂದ, ತಪಸಾ – ತಪಸ್ಸಿನಿಂದ, ಪ್ರತೋಷಿತಾತ್—ಸಂತೋಷಪಡಿಸಲ್ಪಟ್ಟ, ಶಂಕರಾತ್– ರುದ್ರದೇವರಿಂದ, ಸೃಷ್ಟಃ ಅಸಿ —ಸೃಷ್ಟಿಸಲ್ಪಟ್ಟಿರುವಿ, ವಜ್ರಕಾಯಃ – ವಜ್ರದಂತೆ ದೃಢಕಾಯನಾಗಿರುವಿ, ಸರ್ವದಾ ಅವಧ್ಯಃ – ಎಂದೂ ಯಾವಾಗಲೂ ಅವಧ್ಯನಾಗಿರುವಿ. ॥೪೩೦॥

ಅಸ್ಮಾಕಂ ಪಕ್ಷಭೂತಸ್ತ್ವಂ ದೇವಾನಾಂ ಚೈವ ಪಾಂಡವಾಃ ।
ಇದಾನೀಂ ಸರ್ವದೇವಾನಾಂ ವರಾತ್ತ್ವಂ ವಿಜಿತೋ ರಣೇ ॥೪೩೧॥

ಅಸ್ಮಾಕಂ ಪಕ್ಷಭೂತಃ – ನಮ್ಮ ಪಕ್ಷದ ಪ್ರತಿನಿಧಿಯಾಗಿ, ತ್ವಂ—ನೀನು, ಚ – ಹಾಗೂ, ದೇವಾನಾಂ – ದೇವತೆಗಳ ಪಕ್ಷದ ಪ್ರತಿನಿಧಿಗಳು, ಪಾಂಡವಾಃ—ಪಾಂಡವರು, ಇದಾನೀಂ – ಈಗ (ನಡೆದ ಯುದ್ಧದಲ್ಲಿ), ಸರ್ವದೇವಾನಾಂ ವರಾತ್—(ಗಂಧರ್ವರಿಗೆ) ಎಲ್ಲ ದೇವತೆಗಳ ವರವಿದ್ದದ್ದರಿಂದ, ತ್ವಂ – ನೀನು, ರಣೇ – ಯುದ್ಧದಲ್ಲಿ, ವಿಜಿತಃ– ಗೆಲ್ಲಲ್ಪಟ್ಟಿರುವಿ. ॥೪೩೧॥

ವಯಂ ತಥಾ ಕರಿಷ್ಯಾಮೋ ಯಥಾ ಜೇಷ್ಯಸಿ ಪಾಂಡವಾನ್ ।
ಕೃಷ್ಣೇನ ನಿಹತಶ್ಚೈವ ನರಕಃ ಕರ್ಣ ಆಸ್ಥಿತಃ ॥೪೩೨॥

ಸ ಚ ಕೃಷ್ಣಾರ್ಜುನಾಭಾವಂ ಕರಿಷ್ಯತಿ ನ ಸಂಶಯಃ ।
ಭೀಷ್ಮಾದೀಂಶ್ಚ ವಯಂ ಸರ್ವಾನಾವಿಶಾಮೋ ಜಯಾಯ ತೇ ॥೪೩೩॥

ಯಥಾ – ಹೇಗೆ ಮಾಡಿದರೆ, ತ್ವಂ—ನೀನು, ಪಾಂಡವಾನ್ — ಪಾಂಡವರನ್ನು ಜೇಷ್ಯಸಿ – ಗೆಲ್ಲುವಿಯೋ ತಥಾ – ಹಾಗೆ, ವಯಂ—ನಾವು, ಕರಿಷ್ಯಾಮಃ— ಮಾಡುವೆವು. ಕೃಷ್ಣೇನ ನಿಹತಃ—ಶ್ರೀಕೃಷ್ಣನಿಂದ ಸಂಹರಿಸಲ್ಪಟ್ಟ, ನರಕಃ – ನರಕಾಸುರನು, ಕರ್ಣೇ – ಕರ್ಣನಲ್ಲಿ, ಆಸ್ಥಿತಃ - ಸೇರಿರುವನು. ಸಃ ಚ— ನರಕನಿಂದ ಆವಿಷ್ಟನಾದ ಕರ್ಣನೂ, ಕೃಷ್ಣಾರ್ಜುನಾಭಾವಂ – ಕೃಷ್ಣಾರ್ಜುನರನಾಶವನ್ನು, ಕರಿಷ್ಯತಿ—ಮಾಡುತ್ತಾನೆ. ನ ಸಂಶಯಃ ಸಂಶಯವಿಲ್ಲ. । ತೇ ಜಯಾಯ — ನಿನಗೆ ಜಯಸಿಗುವದಕ್ಕಾಗಿ, ವಯಂ – ನಾವು, ಭೀಷ್ಮಾದೀನ್ ಸರ್ವಾನ್— ಭೀಷ್ಮರೇ ಮೊದಲಾದ ಎಲ್ಲರನ್ನು, ಆವಿಶಾಮಃ – ಪ್ರವೇಶಿಸುತ್ತೇವೆ. ।೪೩೨॥೪೩೩॥

ತಪಸಾ ವರ್ಧಯಿಷ್ಯಾಮಸ್ತ್ವಾಂ ಕರ್ಣಾದೀಂಶ್ಚ ಸರ್ವಶಃ ।
ತಸ್ಮಾದ್ಗತ್ವಾ ಪಾಲಯಸ್ವ ರಾಜ್ಯಂ ರಾಜನ್ನಪೇತಭೀಃ ॥೪೩೪॥

ವಯಂ – ನಾವು, ತಪಸಾ – ತಪಶ್ಚರಣೆಯಿಂದ, ತ್ವಾಂ – ನಿನ್ನನ್ನು; ಕರ್ಣಾದೀನ್ ಚ – ಕರ್ಣನೇ ಮೊದಲಾದವರನ್ನೂ ಕೂಡ, ಸರ್ವಶಃ— ಎಲ್ಲ ರೀತಿಯಿಂದ, ವರ್ಧಯಿಷ್ಯಾಮಃ - ಅಭಿವೃದ್ಧರನ್ನಾಗಿ ಮಾಡುತ್ತೇವೆ.

ತಸ್ಮಾತ್ —ಆದ್ದರಿಂದ ರಾಜನ್—ರಾಜನೇ, ತ್ವಂ—ನೀನು, ಅಪೇತಭೀಃ ಸನ್ – ಭಯದಿಂದ ದೂರನಾಗಿ, ಗತ್ವಾ-ತಾಜ್ಯಕ್ಕೆ ಹೋಗಿ, ರಾಜ್ಯಂ ಪಾಲಯಸ್ವ – ರಾಜ್ಯವನ್ನು ಆಳು. ॥೪೩೪॥

ಇದಂ ಕಸ್ಯಾಪಿ ನಾಖ್ಯೇಯಂ ಸುಗುಪ್ತಂ ಭೂತಿವರ್ಧನಮ್ ।
ಇತ್ಯುಕ್ತ್ವಾ ಕೃತ್ಯಯಾ ಭೂಯಃ ಸ್ವಸ್ಥಾನೇಸ್ಥಾಪಿತೋ ನೃಪಃ ॥೪೩೫॥

ಇದಂ—ಈ ವಿಷಯವು, ಕಸ್ಯ ಅಪಿ – ಯಾರಿಗೂ ಕೂಡ, ನ ಆಖ್ಯೇಯಂ—ಹೇಳಲ್ಪಡಬಾರದು, ಸುಗುಪ್ತಂ—ಗುಪ್ತವಾಗಿ ಇಡುವಂಥದ್ದು, ಭೂತಿವರ್ಧನಂ—ನಿನ್ನ ಶ್ರೇಯೋಭಿವೃದ್ಧಿಗೆ ಕಾರಣವು. ಇತಿ ಉಕ್ತ್ವಾ ಈ ರೀತಿ ಹೇಳಿ, ಭೂಯಃ—ಮತ್ತೆ, ಕೃತ್ಯಯಾ—ಆ ಕೃತ್ಯಾದಿಂದ, ನೃಪಃ—ದುರ್ಯೋಧನನು, ಸ್ವಸ್ಥಾನೇ – ತನ್ನ ಸ್ಥಳದಲ್ಲಿಯೇ, ಸ್ಥಾಪಿತಃ—ಇಡಲ್ಪಟ್ಟನು. ॥೪೩೫॥

ಉಮಯಾ ನಿರ್ಮಿತಾತ್ಮಾರ್ಧಮುತ್ತರಂ ಹರನಿರ್ಮಿತಮ್ ।
ಜ್ಞಾತ್ವೈವಾವಧ್ಯತಾಂ ಚೈವ ರಾಜ್ಯೇ ಬುದ್ಧಿಂ ಚಕಾರ ಸಃ ॥೪೩೬॥

ಸಃ— ಆ ದುರ್ಯೋಧನನು, ಉಮಯಾ—ಪಾರ್ವತಿದೇವಿಯಿಂದ, ನಿರ್ಮಿತಾತ್ಮಾರ್ಧಂ – ನಿರ್ಮಿಸಲ್ಪಟ್ಟ ತನ್ನ ಅರ್ಧದೇಹವನ್ನು, ಉತ್ತರಂ – ಉಳಿದ ಅರ್ಧವನ್ನು, ಹರನಿರ್ಮಿತಂ – ರುದ್ರದೇವರಿಂದ ನಿರ್ಮಿತವನ್ನಾಗಿ, ಜ್ಞಾತ್ವಾ – ತಿಳಿದು, ಚ – ಹಾಗು, ಅವಧ್ಯತಾಂ -ಅವಧ್ಯತ್ವವನ್ನು, ಜ್ಞಾತ್ವಾ—ತಿಳಿದು, ರಾಜ್ಯೇ – ಪುನಃ ರಾಜ್ಯವನ್ನು ಆಳುವ ವಿಷಯದಲ್ಲಿ, ಬುದ್ಧಿಂ ಚಕಾರ - ಮನಸ್ಸನ್ನು ಮಾಡಿದನು. ॥೪೩೬॥

~~ನೋವಾಚ ಕಸ್ಮಚಿತ್ತೇಷು ಸ್ವಾನುಭೂತಂ ಸುಯೋಧನಃ ।~~
ಪ್ರಭಾತಾಯಾಂ ತು ಶರ್ವರ್ಯಾಂ ಪುನಃ ಕರ್ಣೋವಚೋಽಬ್ರವೀತ್ ॥೪೩೭॥

ಸುಯೋಧನಃ – ದುರ್ಯೋಧನನು, ತೇಷು – ತನ್ನವರಲ್ಲಿಯೂ, ಕಸ್ಮಚಿತ್ - ಯಾವನಿಗೂ ಸ್ವಾನುಭೂತಂ—ತನ್ನ ಅನುಭವಕ್ಕೆ ಬಂದ ವಿಷಯವನ್ನು, ನ ಉವಾಚ ಹೇಳಲಿಲ್ಲ. ಶರ್ವರ್ಯಾಂ ಪ್ರಭಾತಾಯಾಂ – ರಾತ್ರಿಯು ಕಳೆಯುತ್ತಿರಲು, ಕರ್ಣಃ—ಕರ್ಣನು, ಪುನಃ—ಮತ್ತೆ, ವಚಃ - ವಚನವನ್ನು, ಅಬ್ರವೀತ್—ಹೇಳಿದನು. ॥೪೩೭॥

ಭೃತ್ಯೈಸ್ತವೈವ ಪಾರ್ಥೈರ್ಯನ್ಮೋಚಿತೋಽಸಿ ಪರಂತಪ ।
ತೇನ ಮಾನ್ಯೋಽಧಿಕಂ ಲೋಕೇ ಯದ್ಭೃತ್ಯಾ ಏವ ತಾದೃಶಾಃ ॥೪೩೮॥

ಕಿಮು ತ್ವಂ ರಾಜಶಾರ್ದೂಲ ತದುತ್ತಿಷ್ಠಸ್ಥಿರೋಭವ ।
ಯಥಾ ಚ ತೇಽರ್ಜುನಮೂಹಾತ್ಮ್ಯೇ ಶಂಕಾ ಸಾ ವ್ಯೇತು ಮೇ ಶೃಣು ॥೪೩೯॥

ಪರಂತಪ – ಶತ್ರುತಾಪಕನಾದ ದುರ್ಯೋಧನನೇ, ಯತ್ - ಯಾವಕಾರಣದಿಂದ, ತವ ಭೃತ್ಯೈಃ – ನಿನ್ನ ಸೇವಕರೇ ಆಗಿರುವ, ಪಾರ್ಥೈಃ – ಪಾಂಡವರಿಂದ, ಮೋಚಿತಃ ಅಸಿ – ಬಿಡಿಸಲ್ಪಟ್ಟಿರುವಿಯೋ, ತೇನ - ಆ ಕಾರಣದಿಂದ, ಲೋಕೇ – ಲೋಕದಲ್ಲಿ ಅಧಿಕಂ ಮಾನ್ಯಃ ಅಸಿ – ಹೆಚ್ಚು ಮಾನ್ಯನಾಗಿರುವಿ; ಯದ್ಭೃತ್ಯಾಃ ಏವ – ಯಾವ ನಿನ್ನ ಸೇವಕರೇ, ತಾದೃಶಾಃ - ಅಂಥಬಲಿಷ್ಠರೋ, ತ್ವಾ ಕಿಮು – ನೀನು ಬಲಿಷ್ಠನೆಂದು ಹೇಳಬೇಕೇನು? ರಾಜಶಾರ್ದೂಲ—

ರಾಜನೇ, ತತ್—ಆದ್ದರಿಂದ, ಉತ್ತಿಷ್ಠ—ಮೇಲೇಳು, ಸ್ಥಿರೇ ಭವ—ರಾಜ್ಯವನ್ನು ಆಳಲು ದೃಢ ಮನಸ್ಕನಾಗು. ತೇ—ನಿನಗೆ, ಅರ್ಜುನಮಾಹಾತ್ಮ್ಯೇ—ಅರ್ಜುನನ ಶಸ್ತ್ರಾಸ್ತ್ರ ಸಾಮರ್ಥ್ಯಮಾಹಾತ್ಮ್ಯದ ಬಗ್ಗೆ. ಯಾ ಶಂಕಾ—ಯಾವ ಹೆದರಿಕೆ ಇದೆಯೋ, ಸಾ—ಅದು ವ್ಯೇತು—ಹೋಗಲಿ, ಮೇ—ನನ್ನ ದೆಶೆಯಿಂದ, ಶೃಣು—(ಈ ಮುಂದಿನ ಮಾತನ್ನು) ಕೇಳು. ॥೪೩೮॥೪೩೯॥

ಯಾವನ್ನೈವಾರ್ಜುನಂ ಹನ್ಯಾಂ ಪಾದೌ ಪ್ರಕ್ಷಾಲಯೇ ಸ್ವಯಂ।
ಇತ್ಯುಕ್ತ್ವೋವರಜೈಶ್ಚೈವ ಸರ್ವೈಶ್ಶಕುನಿನಾ ತಥಾ ॥೪೪೦॥

ಯಾಚಿತೋ ರಥಮಾರುಹ್ಯ ಯಯೌ ನಾಗಪುರಂ ದ್ರುತಮ್ ॥೪೪೧॥

ಯಾವತ್—ಎಲ್ಲಿಯವರೆಗೆ, ಅರ್ಜುನಂ ನೈವಹನ್ಯಾಂ—ಅರ್ಜುನನನ್ನು ಕೊಲ್ಲುವದಿಲ್ಲವೋ, ತಾವತ್—ಅಲ್ಲಿಯವರೆಗೆ, ಪಾದೌ—ಕಾಲುಗಳನ್ನು, ಸ್ವಯಂ ಪ್ರಕ್ಷಾಲಯೇ—ನಾನೇ ಸ್ವತಃ—ತೊಳೆದುಕೊಳ್ಳುತ್ತೇನೆ. ಬೇರೆ ಯಾರಿಂದ ತೊಳೆಯಿಸಿಕೊಳ್ಳುವದಿಲ್ಲ. (ಇತಿ—ಎಂಬ, ವಚಃ—ಮಾತನ್ನು, ಅಬ್ರವೀತ್—ಹೇಳಿದನು. ಹೀಗೆ ೪೩೭ನೆಯ ಶ್ಲೋಕಕ್ಕೆ ಅನ್ವಯ) ಇತಿ—ಈ ರೀತಿ, ಸರ್ವೈಃ ಅವರಜೈಃ ಏವ—ಎಲ್ಲ ತಮ್ಮಂದಿರಿಂದಲೂ, ತಥಾ—ಹಾಗು, ಶಕುನಿನಾ—ಶಕುನಿಯಿಂದಲೂ ಕೂಡ, ಯಾಚಿತಃ ಸನ್—ಪ್ರಾರ್ಥಿತನಾಗಿ, ರಥಂ ಆರುಹ್ಯ—ರಥವನ್ನು ಏರಿ, ದ್ರುತಂ—ಬೇಗನೇ, ನಾಗಪುರಂ—ಹಸ್ತಿನಾವತಿಗೆ ಯಯೌ—ಹೋದನು. ॥೪೪೦॥೪೪೧॥

ಭಾವಾನುವಾದ ೪೧೩–೪೪೧

ಆ ಚಿತ್ರಸೇನ ಗಂಧರ್ವನು ಮೊದಲು ಕರ್ಣನ ಜೊತೆಗೆ ಯುದ್ಧ ಮಾಡಿದನು. ಕರ್ಣನು ಪಾಂಡವರಿಗೆ ಸಂಪತ್ತನ್ನು ತೋರಿಸುವ ಸ್ಪರ್ಧೆಯಿಂದ ಯುದ್ಧ ಮಾಡುತ್ತಿದ್ದದ್ದರಿಂದ ಪರಶುರಾಮದೇವರ ಶಾಪದಂತೆ ಕರ್ಣನಿಗೆ ಚಿತ್ರಸೇನನನ್ನು ಗೆಲ್ಲಲಾಗದೇ ರಥವನ್ನು ಕಳೆದುಕೊಂಡು, ವಿಕರ್ಣ (ದುರ್ಯೋಧನನ ತಮ್ಮ)ನ ರಥವನ್ನೇರಿ ಓಡಿಹೋದನು. ಆಗ ದುರ್ಯೋಧನನು ಚಿತ್ರಸೇನನ ಜೊತೆಗೆ ಯುದ್ಧಮಾಡುತ್ತ ಬೇರೆ ಗಂಧರ್ವರು ಅವನ ರಥವನ್ನೂ ನಾಶಮಾಡಿದಾಗ ಭೂಮಿಯಲ್ಲೇ ನಿಂತಾಗ ಚಿತ್ರಸೇನನು ದುರ್ಯೋಧನನನ್ನು ಹಿಡಿದು ಬಂಧಿಸಿದನು. ಚಿತ್ರಸೇನನಿಗೆ ಇಂದ್ರದೇವರ ವರದಿಂದ ಹಾಗು ಶ್ರೀಹರಿಯ ಅಜ್ಞೆಯಿಂದಲೂ ವಿಶೇಷ ಬಲಾಭಿವೃದ್ಧಿಯು ಬಂದದ್ದರಿಂದ, ದುರ್ಯೋಧನನು ಬಲಿಷ್ಠನಾದರೂ ಅವನ ಬಂಧನವು ಶಕ್ಯವಾಯಿತು. ದುರ್ಯೋಧನನ ತಮ್ಮಂದಿರು, ಅವರೆಲ್ಲರ ಹೆಂಡಂದಿರು, ಶಕುನಿ ಇವರೆಲ್ಲರನ್ನು ಬಂಧಿಸಿ ತಮ್ಮ ಲೋಕಕ್ಕೆ ಎಳೆದೊಯ್ಯುತ್ತಿದ್ದರು. ಆಗ ಕೌರವರ ಮಂತ್ರಿಗಳು ಪಾಂಡವರ ಸಮೀಪಕ್ಕೆ ಬಂದು ಅಳುತ್ತಾ ಎಲ್ಲ ಸುದ್ದಿಯನ್ನು ಹೇಳಿ, ನಿಮ್ಮ ಕುಲಕ್ಕೇ ಅಪಕೀರ್ತಿಯು ಬಂದಂತೆ, ಅವರನ್ನು ಬಿಡಿಸಿಕೊಡಿ ಎಂದು ಹೇಳಿದರು, ಆಗ ಭೀಮಸೇನದೇವರು ತಮ್ಮ ದಿವ್ಯಜ್ಞಾನದಿಂದ ಈ ಕೌರವರ ಕುವಿಚಾರ, ಕುತಂತ್ರಗಳನ್ನೆಲ್ಲ ತಿಳಿಸಿ, ಅದನ್ನೆಲ್ಲ ತಿಳಿದ ಇಂದ್ರದೇವನು, ಆ ದುಷ್ಟರ ಅವಮಾನಕ್ಕಾಗಿ ಮಾಡಿದ ಕಾರ್ಯವಿದು; ನಮಗೇನೂ ನಷ್ಟವಿಲ್ಲ. ನಾವು ಮಾಡಬೇಕಾದ್ದೇನೂ ಇಲ್ಲ, ಎಂದು ಹೇಳಿದರು ಆದರೂ ದಯಾಳುವಾದ ಧರ್ಮರಾಜನು ತಾನು ಆಗ ಒಂದು ದಿನದಲ್ಲಿ ಮಾಡಿ ಮುಗಿಸುವ ಯಜ್ಞನಲ್ಲಿ ದೀಕ್ಷಿತನಾಗಿದ್ದರಿಂದ ತಮ್ಮಂದಿರಿಗೆ ಆ ದುರ್ಯೋಧನಾದಿಗಳನ್ನು ಬಿಡಿಸಲು ಹೇಳಿದನು. ಆ ಪ್ರಕಾರ ಎಲ್ಲ ನಾಲ್ವರು ಪಾಂಡವರು ಬಂದು ಯುದ್ಧಮಾಡಿ ಚಿತ್ರಸೇನನನ್ನು ಗೆದ್ದು ದುರ್ಯೋಧನಾದಿಗಳನ್ನು ಬಿಡಿಸಿದರು. ಆಗ ಚಿತ್ರಸೇನ ಗಂಧರ್ವನು ಆ ದುರುಳ ದುರ್ಯೋಧನನ ಎದುರಲ್ಲೇಯೇ ಅವನ ದುರ್ವಿಚಾರವನ್ನು, ಅದಕ್ಕಾಗಿ ತಮ್ಮ ಸ್ವಾಮಿಯಾದ ಇಂದ್ರದೇವನು ಮಾಡಿಸಿದ ಈ ಎಲ್ಲ ಕಾರ್ಯವನ್ನೂ ಭೀಮಾರ್ಜುನರಿಗೆ ತಿಳಿಸಿದನು. ಆಗ ದುರ್ಯೋಧನನು ತನ್ನ ದುಷ್ಟಕಾರ್ಯದ ಗುಟ್ಟು ಬಯಲಾಯಿತಲ್ಲಾ ಎಂದು ಲಜ್ಜಿತನಾದನು. ಆ ಸಮಯಕ್ಕೆ ಧರ್ಮರಾಜನು ಯಜ್ಞ

ವನ್ನು ಮಂಗಿಸಿಕೊಂಡು ಬಂದು ಎಲ್ಲ ವಿಷಯವನ್ನು ತಿಳಿದು, ಚಿತ್ರಸೇನ ಗಂಧರ್ವನನ್ನೂ ಪ್ರಶಂಸಿಸಿ, ಪೂಜಿಸಿ ಬೀಳ್ಕೊಟ್ಟು, ದುರ್ಯೋಧನನನ್ನು ಕುರಿತು ಇಂಥ ಕೆಟ್ಟ ಕಾರ್ಯವನ್ನು ಹೀಗೆಲ್ಲ ಪುನಃ ಮಾಡಬೇಡ ಮಹಾರಾಯಾ ಎಂದು ಹೇಳಿದನು. ಆಗ ಮತ್ತಿಷ್ಟು ಲಜ್ಜಿತನಾಗಿ ಆ ದುರುಳನು ಎಲ್ಲರ ಬಿಡುಗಡೆಯನ್ನು ಪಾಂಡವರಿಂದಲೇ ಹೊಂದಿ ಅಲ್ಲಿಂದ ಹೊರಟು ಸ್ವಲ್ಪ ದೂರಕ್ಕೆ ಬಂದು, ಜದುರಿಹೋದ ಎಲ್ಲರೂ ಸೇರುವಂತಾಗಲಿ ಎಂದು ನಿರೀಕ್ಷಿಸುತ್ತಾ ಕುಳಿತನು, ಅಲ್ಲಿ ಕರ್ಣನನ್ನು ನೋಡಿದನು, ಕರ್ಣನು ದುರ್ಯೋಧನನನ್ನು, ಗಂಧರ್ವರನ್ನು ಗೆದ್ದು ಬಂದಿರುವನೆಂದು ತಿಳಿದು ದೈವಾನು ಗ್ರಹದಿಂದ ಗೆದ್ದಿರುವಿ ಎಂದು ಹೇಳಿದನು, ಆಗ ದುರ್ಯೋಧನನು ಇಲ್ಲ; ನಾನು ಗೆದ್ದಿಲ್ಲ ಎಂದು ತನಗಾದ ಲಜ್ಜಾಸ್ಪದ ಘಟನೆಯನ್ನೆಲ್ಲ ತಿಳಿಸಿ ತುಂಬಾದುಃಖಿತನಾಗಿ ಆಮರಣ ಉಪವಾಸವಾಡುವದಾಗಿಯೂ, ತಾನು ರಾಜ್ಯಕ್ಕೆ ಬರುವದೇ ಇಲ್ಲವಾಗಿಯೂ ಹೇಳಿ ಕುಳಿತನು. ಎಲ್ಲರೂ ಎಷ್ಟು ಪ್ರಾರ್ಥಿಸಿದರೂ ನಿರ್ಣಯವನ್ನು ಬದಲಿಸದೇ ಹಾಗೆ ಕುಳಿತಿರುವಾಗ, ಅವನ ಎಲ್ಲ ಅಸುರ ಸ್ವಭಾವದ ಜನರು ದುಃಖಿತರಾದಾಗ, ಮಂಲಗಿದಾಗ, ಅಸುರರು ಶುಕ್ರಾಚಾರ್ಯರಿಂದ ಯಾಗದಲ್ಲಿ ಪಡೆದ ಒಂದು ಭೂತ ವಿಶೇಷ (ಕೃತ್ಯಾ)ವನ್ನು ದುರ್ಯೋಧನನ ಹತ್ತಿರ ಕಳಿಸಿದರು. ಅದು ಒಂದು ರಾತ್ರಿಯಲ್ಲಿ ದುರ್ಯೋಧನನನ್ನು ಎತ್ತಿ ಪಾತಾಳಕ್ಕೆ ಒಯ್ದಿತು. ಅಲ್ಲಿ ಎಲ್ಲ ಅಸುರರು ನೀನು ಲೋಕ ವಿಲಕ್ಷಣ ಪುರುಷನು. ನಾವು ರುದ್ರ ದೇವರನ್ನು ತಪಸ್ಸಿನಿಂದ ಆರಾಧಿಸಿ ನಿನ್ನನ್ನು ವಜ್ರಕಾಯ, ಅವಧ್ಯನನ್ನಾಗಿ ಪಡೆದಿರುವೆವು. ಈಗ ಏನೋ ಆ ಗಂಧರ್ವರಿಗೆ ದೇವತೆಗಳ ವಿಶೇಷವರವಿದ್ದದ್ದರಿಂದ ನೀನು ಯುದ್ಧದಲ್ಲಿ ಸೋತಿರುವಿ. ಇನ್ನು ಮುಂದೆ ನೀನು ಪಾಂಡವರನ್ನು ಗೆಲ್ಲುವಂತೆ ವ್ಯವಸ್ಥೆಯನ್ನು ಮಾಡುವೆವು. ಅಷ್ಟೇ ಅಲ್ಲ ಶ್ರೀಕೃಷ್ಣನಿಂದ ಸತ್ತ ನರಕಾಸುರನು ಶ್ರೀಕೃಷ್ಣನ ಮೇಲಿನ ಸಿಟ್ಟಿನಿಂದ ಕರ್ಣನ ಒಳಗೆ ಸೇರಿಕೊಂಡಿದ್ದಾನೆ. ಅಂಥ ಕರ್ಣನು ಶ್ರೀಕೃಷ್ಣ ಹಾಗು ಅರ್ಜುನರನ್ನು ಸಂಹರಿಸುವನು. ನಾವೆಲ್ಲ ಭೀಷ್ಮಾದಿಗಳಲ್ಲಿ ಪ್ರವೇಶಮಾಡಿ ನಿನಗೆ ಜಯ ಸಿಗುವಂತೆ ಮಾಡುವೆವು. ಆದ್ದರಿಂದ ನೀನು ಹೆದರಬೇಡ, ಹೊರಡು ಊರಿಗೆ; ಆಳು ರಾಜ್ಯವನ್ನು ಎಂದು ಹೇಳಿದರು. ಈ ವಿಷಯವನ್ನು ಯಾರಿಗೂ ತಿಳಿಸಬೇಡ, ನಿನ್ನ ಕಲ್ಯಾಣವಾಗುವದು ಎಂದೂ ಹೇಳಿದರು. ಕೃತ್ಯಾವು ಮತ್ತೆ ಯಥಾಪೂರ್ವ ದುರ್ಯೋಧನನನ್ನು ತಂದಿಟ್ಟಿತು. ಇದನ್ನೆಲ್ಲ ಅನುಭವಿಸಿದ ದುರುಳನು ಪುನಃ ರಾಜ್ಯದಲ್ಲಿ ಮನಸ್ಸನ್ನು ಮಾಡಿದನು. ಯಾರಿಗೂ ಈ ಎಲ್ಲ ವಿಷಯವನ್ನು ತಿಳಿಸಲಿಲ್ಲ. ಬೆಳಗಾಗುವಾಗ ಕರ್ಣನು ದುರ್ಯೋಧನನಿಗೆ, ನೀನು ಇಷ್ಟು ದುಃಖಿಸುವ ಕಾರಣವಿಲ್ಲ; ಗಂಧರ್ವರನ್ನು ಸೋಲಿಸಿದ ಪಾಂಡವರು ನಿನ್ನ ಸೇವಕರಂತೆಯೇ ನಿನಗೆ ಸೇವಕರೇ ಹೀಗೆ ಬಲಿಷ್ಠರಿರಬೇಕಾದರೆ ಒಡೆಯನು ಹೇಗಿರಬೇಕು ಎಂದು ಕೀರ್ತಿಯೇ ಬಂದಿದೆ. ಆದ್ದರಿಂದ ಚಂಚಲನಾಗಬೇಡ; ಸ್ಥಿರವಾನಸ್ಕನಾಗು, ಹೊರಡು ಎಂದು ಹೇಳಿ ಅರ್ಜುನನ ಶೌರ್ಯದ ಬಗ್ಗೆ ನಿನಗೆ ಹೆದರಿಕೆ ಬೇಡ. ಅವನನ್ನು ಕೊಲ್ಲುವತನಕ ನಾನು ಮತ್ತೊಬ್ಬರಿಂದ ಕಾಲನ್ನು ತೊಳೆಯಿಸಿಕೊಳ್ಳುವದಿಲ್ಲ; ನಾನೇ ತೊಳೆದುಕೊಳ್ಳುತ್ತೇನೆ ಎಂದು ಪ್ರತಿಜ್ಞೆಮಾಡಿದನು, ಶಕುನಿ ಹಾಗು ತನ್ನ ತಮ್ಮಂದಿರಿಂದಲೂ ಪ್ರಾರ್ಥಿತನಾಗಿ ಎದ್ದು ರಥವನ್ನೇರಿ ಬೇಗನೇ ಹಸ್ತಿನಾವತಿಗೆ ಬಂದನು,

ಸಕುಂಡಲಂ ಸಕವಚಮುವಧ್ಯಂ ಸೂರ್ಯನಂದನಮ್ ।
ಜ್ಞಾತ್ವೈಂದ್ರ ಉಭಯಂ ತಸ್ಮಾದ್ವೈಚ್ಛದಾದಾತುಮುತ್ತಮಮ್ ।
ತದ್ವಿಜ್ಞಾಯ ರವಿಃ ಕರ್ಣಂ ಸ್ವಪ್ನ ಉಕ್ತ್ವಾ ನ್ಯವಾರಯತ್ ॥೪೪೨॥

ಸರ್ವಥಾ ದಾಸ್ಯ ಇತ್ಯುಕ್ತೇಪ್ರಾಹಾss ದೇಯಂ ವರಾಯುಧಮ್ ॥೪೪೩॥

ಇಂದ್ರಃ—ಇಂದ್ರದೇವನು, ಸಕುಂಡಲಂ ಸಕವಚಂ ಸೂರ್ಯನಂದನಂ–ಕರ್ಣಕುಂಡಲ ಕವಚಗಳಿಂದ ಸಹಿತನಾದ ಕರ್ಣನನ್ನು, ಅವಧ್ಯಂ—ಅವಧ್ಯನನ್ನಾಗಿ, ಜ್ಞಾತ್ವಾ—ತಿಳಿದು, ತಸ್ಮಾತ್—ಆ ಕರ್ಣನಿಂದ, ಉತ್ತಮಂ ತತ್ ಉಭಯಂ – ಹುಟ್ಟಿನಿಂದಲೇ ಬಂದಿರುವ ಆದ್ದರಿಂದಲೇ ಶ್ರೇಷ್ಠವಾದ ಅವೆರಡನ್ನೂ, ಆದಾತುಂ – ತೆಗೆದುಕೊಳ್ಳಿ

ವದಕ್ಕಾಗಿ ಐಚ್ಛತ್ – ಇಚ್ಛಿಸಿದನು. ತತ್ – ಆ ವಿಷಯವನ್ನು, ರವಿಃ – ಸೂರ್ಯನು, ವಿಜ್ಞಾಯ—ತಿಳಿದು, ಸ್ವಪ್ನೇ – ಸ್ವಪ್ನದಲ್ಲಿ, ಕರ್ಣಂ – ಕರ್ಣನಿಗೆ, ಉಕ್ತ್ವಾ—ಹೇಳಿ, ನ್ಯವಾರಯತ್ - ಕರ್ಣಕುಂಡಲ ಕವಚಗಳನ್ನು ಕೊಡುವ ದನ್ನು ನಿಷೇಧಿಸಿದನು, ಸರ್ವಥಾ ದಾಸ್ಯೇ - ಅವಶ್ಯವಾಗಿ ಕೊಟ್ಟೇಕೊಡುತ್ತೇನೆ, ಇತಿ – ಎಂದು, ಉಕ್ತೇ ಸತಿ—ಕರ್ಣನಿಂದ ಹೇಳಲ್ಪಡುತ್ತಿರಲು, ವರಾಯುಧಮ್—ಶ್ರೇಷ್ಠವಾದ ಆಯುಧವಾದರೂ, ಆದೇಯಂ – ಇಂದ್ರನ ದೆಶೆಯಿಂದ ತೆಗೆದುಕೊಳ್ಳಲ್ಪಡಬೇಕು, ಇತಿ - ಎಂದು, ಪ್ರಾಹ – ಸೂರ್ಯನು ಹೇಳಿದನು. ॥೪೪೨-೪೪೩॥

ದದೌ ಚೋತ್ಕೃತ್ಯ ಕವಚಂ ಕುಂಡಲೇ ಚ ಶಚೀಪತೇಃ ।
ಅಮೋಘಾಂ ಶಕ್ತಿಮಾದಾಯ ಜ್ಞಾತ್ವೈಂದ್ರಂ ದ್ವಿಜರೂಪಿಣಮ್ ॥೪೪೪॥

ಕರ್ಣಃ – ಕರ್ಣನು, ದ್ವಿಜರೂಪಿಣಂ ಇಂದ್ರಂ ಜ್ಞಾತ್ವಾ – ಬ್ರಾಹ್ಮಣರೂಪನಾಗಿ ಬಂದವನನ್ನು ಇಂದ್ರನನ್ನಾಗಿ ತಿಳಿದು, ಅಮೋಘಾಂ ಶಕ್ತಿಂ ಆದಾಯ – ವ್ಯರ್ಥವಾಗದ ಶಕ್ತಿ ಎಂಬ ಆಯುಧವನ್ನು ತೆಗೆದುಕೊಂಡು, ಕವಚಂ ಕುಂಡಲೇ ಚ – ಕವಚ ಹಾಗೂ ಕರ್ಣಕುಂಡಲಗಳನ್ನು, ಉತ್ಕೃತ್ಯ – ತನ್ನ ದೇಹದಿಂದ ಕತ್ತಿ, ದದೌ – ಕೊಟ್ಟನು. ॥೪೪೪॥

ಋತೇऽರ್ಜುನಾದೇಕಮೇವ ವಧಿಷ್ಯಷ್ಯನಯೇತಿ ಸಃ ।
ದತ್ವಾ ಶಕ್ತಿಂ ಯಯೌ ಶಕ್ರಸ್ತಾರ್ಧಂ ಕವಚಕುಂಡಲೈಃ ॥೪೪೫॥

ಸಃ ಶಕ್ರಃ – ಆ ಇಂದ್ರದೇವನು, ಅನಯಾ – ಈ ಶಕ್ತ್ಯಾಯುಧದಿಂದ, ಅರ್ಜುನಾತ್ ಋತೇ—ಅರ್ಜುನನನ್ನು ಬಿಟ್ಟು, ಏಕಂ ಏವ – ಒಬ್ಬನನ್ನೇ ವಧಿಷ್ಯಸಿ ಸಂಹರಿಸುವಿ, ಇತಿ—ಎಂದು, ಉಕ್ತ್ವಾ – ಹೇಳಿ, ಶಕ್ತಿಂ ದತ್ವಾ – ಶಕ್ತಿ ಎಂಬ ಆಯುಧವನ್ನು ಕೊಟ್ಟು, ಕವಚಕುಂಡಲೈಃ ಸಾರ್ಧಂ – ಕವಚ ಕರ್ಣಕುಂಡಲಗಳಿಂದ ಕೂಡಿ ಕೊಂಡು (ಅವುಗಳನ್ನು ತೆಗೆದುಕೊಂಡು) ಯಯೌ – ಹೋದನು. ॥೪೪೫॥

ಭಾವಾನುವಾದ ೪೪೨_೪೪೫

ಇಂದ್ರದೇವನು ಕರ್ಣನಿಗೆ ಹುಟ್ಟಿನಿಂದಲೂ ಇರುವ ಕರ್ಣಕುಂಡಲ ಕವಚಗಳಿರುವವರೆಗೂ ಈ ಕರ್ಣನ ಸಂಹಾರವಾಗದು ಎಂದು ತಿಳಿದು ಅವನ ಸಂಹಾರವಾಗುವಂತೆ ಮಾಡಲು ಆ ಕುಂಡಲಕವಚಗಳನ್ನೇ ಅವನಿಂದ ತೆಗೆದುಕೊಳ್ಳಲು ವಿಚಾರಿಸಿದನು. ಅದನ್ನು ತಿಳಿದ ಸೂರ್ಯನು ಕರ್ಣನ ಸ್ವಪ್ನದಲ್ಲಿ ಈ ವಿಷಯವನ್ನು ತಿಳಿಸಿ ಅವನು ಬಂದಾಗ ಕೊಡಬೇಡ ಎಂದು ಹೇಳಿದರೂ ಕರ್ಣನು ಕೊಟ್ಟೇಕೊಡುವನು ಎಂದು ಹೇಳಿದಾಗ, ಹಾಗಾದರೆ ಆ ಇಂದ್ರನಿಂದ ಉತ್ತಮವಾದ ಒಂದು ಆಯುಧವನ್ನಾದರೂ ತೆಗೆದುಕೊಂಡು ಕೊಡು ಎಂದು ಹೇಳಿದನು. ಆ ಪ್ರಕಾರ ಇಂದ್ರನು ಬ್ರಾಹ್ಮಣವೇಷದಲ್ಲಿ ಬಂದು ಕುಂಡಲಕವಚಗಳನ್ನು ಕೇಳಿದಾಗ ಅವನನ್ನು ಇಂದ್ರನೆಂದು ತಿಳಿದು ಶ್ರೇಷ್ಠವಾದ ಒಂದು ಆಯುಧವನ್ನು ಕೇಳಿದಾಗ, ಇಂದ್ರದೇವನು ಅಮೋಘವಾದ ಶಕ್ತ್ಯಾಯುಧವನ್ನು ಕೊಡುತ್ತಾ ಇದರಿಂದ ಅರ್ಜುನನನ್ನು ಬಿಟ್ಟು ಬೇರೆ ಯಾರಾದರೊಬ್ಬರನ್ನು ಮಾತ್ರ ಕೊಲ್ಲುವಿ ಎಂದು ಹೇಳಿ ಕೊಟ್ಟನು. ಕರ್ಣನು ಕವಚಕುಂಡಲಗಳನ್ನು ಕತ್ತರಿಸಿಕೊಟ್ಟನು. ಅವುಗಳನ್ನು ತೆಗೆದುಕೊಂಡು ಇಂದ್ರದೇವರು ಹೋದರು.

ಪಾರ್ಥಾ ವಿಮೋಚ್ಯೈವ ಸುಯೋಧನಂ ತಂ ವನೇ ವಸಂತೋ ಮುದಿತಾಸ್ತದೈವ ।
ಸಹಾರಣೇಭಾಂಡಮುಥೋ ಮೃಗೇಣ ಹೃತಂ ದ್ವಿಜಸ್ಯಾಶು ನಿಶಮ್ಯ ಚಾನ್ವಯುಃ

ತಸ್ಮಿನ್ನದೃಶ್ಯೇತೃಷಿತಾ ಏಕೈಕಮುದಕಾರ್ಥಿನಃ ।
ಯಯುರ್ಯುಧಿಷ್ಠಿರಮೃತೇ ಸುಪ್ತಾಸ್ತೇ ಧರ್ಮಮಾಯಯಾ ॥೪೪॥

ಪಾರ್ಥಾಃ – ಪಾಂಡವರು, ತಂ ಸುಯೋಧನಂ – ಆ ದುರ್ಯೋಧನನನ್ನು, ವಿಮೋಚ್ಯ – ಬಿಡಿಸಿ, ವನೇ ಏವ – ಅರಣ್ಯದಲ್ಲಿಯೇ ಸದಾ ಏವ – ಯಾವಾಗಲೂ, ಮುದಿತಾಃ ವಸಂತಃ ಸಂತಃ – ಸಂತೋಷದಿಂದ ವಾಸಿಸುವವರಾಗಿ, ದ್ವಿಜಸ್ಯ – ಒಬ್ಬ ಬ್ರಾಹ್ಮಣನ, ಸಹಾರಣೇಭಾಂಡಂ – ಅರಣೀ ಸಹಿತವಾದ ಪಾತ್ರವನ್ನು, ಮೃಗೇಣ – ಒಂದು ಮೃಗದಿಂದ, ಹೃತಂ – ಅಪಹರಿಸಲ್ಪಟ್ಟದ್ದನ್ನಾಗಿ; ನಿಶಮ್ಯ – ಕೇಳಿ, ಆಶು – ಕೂಡಲೇ, ಅನ್ವಯುಃ – ಬೆನ್ನಿ ಹತ್ತಿ ಹೋದರು, ತಸ್ಮಿನ್ – ಆ ಮೃಗವು, ಅದೃಶ್ಯೇ ಸತಿ - ಅದೃಶ್ಯವಾಗಿರಲು, ತೇ – ಆ ಪಾಂಡವರು, ಯುಧಿಷ್ಠಿರಂ ಋತೇ – ಧರ್ಮರಾಜನನ್ನು ಬಿಟ್ಟು, ಯದಾ—ಯಾವಾಗ, ಉದಕಾರ್ಥಿನಃ ಸಂತಃ – ನೀರಿನ ಅಪೇಕ್ಷೆಯುಳ್ಳವರಾಗಿ, ಏಕೈಕಂ- ಒಬ್ಬೊಬ್ಬರಾಗಿ, ಯಯುಃ – ಹೋದರೋ, ತದಾ - ಆಗ, ಧರ್ಮಮಾಯಯಾ – ಯಮ ಧರ್ಮನ ಮಾಯೆಯಿಂದ, ಸುಪ್ತಾಃ – ಮಲಗಿದರು, ॥೪೪॥

ಅವತಾರಿಕೆ : ಸುಪ್ತರಾದದ್ದು ಹೇಗೆ ಎಂಬುದನ್ನು ವಿವರಿಸುವರು—

ಅದೃಶ್ಯೇನೈವ ಧರ್ಮೇಣ ವಾರಿತಾ ವಾರಿಪಾಯಿನಃ ।
ಕ್ಷತ್ರಧರ್ಮಸ್ಯ ರಕ್ಷಾರ್ಥಂ ನ ತತ್ಪ್ರಶ್ನವಿದಾಂ ವರಾಃ ॥೪೪॥

ವ್ಯಾಚಕ್ರುಶಕ್ತಿಮಂತೋಽಪಿ ಪಾನೀಯಾರ್ಥಮುರಿಂದಮಾಃ ।
ನ ವಿಪ್ರಾಣಾಂ ಚ ಧರ್ಮೋಽಯಂ ವಿದ್ಯಾಯಾ ಉಪಜೀವನಮ್ ।
ಕ್ಷತ್ರಿಯಾಣಾಂ ತು ಕಿಮುತ ಪ್ರಸಭಂ ತೇನ ತೇ ಪಪುಃ ॥೪೫॥

ವಾರಿ ಪಾಯಿನಃ – ನೀರು ಕುಡಿಯುವ ಇಚ್ಛೆಯುಳ್ಳ ಅವರು, ಅದೃಶ್ಯೇನ ಧರ್ಮೇಣ – ಅದೃಶ್ಯನಾದಿನಿಂತ ಯಮಧರ್ಮನಿಂದ, ವಾರಿತಾಃ – ತಡೆಯಲ್ಪಟ್ಟರು (ನೀರಿನ ಸಮೀಪಕ್ಕೆ ಹೊದಾಗ, ನನ್ನ ಪ್ರಶ್ನೆಗಳಿಗೆ ಉತ್ತರಿಸದೇ ನೀರು ಕುಡಿಯಬಾರದು ಎಂದು ತಡೆಯುಲ್ಪಟ್ಟರು) ಕ್ಷತ್ರಧರ್ಮಸ್ಯ ರಕ್ಷಾರ್ಥಂ = ಕ್ಷತ್ರಿಯಧರ್ಮದ ರಕ್ಷಣೆಗಾಗಿ ತತ್ಪ್ರಶ್ನವಿದಾಂ ವರಾಃ ಅಪಿ – ಆ ಯಮಧರ್ಮನ ಪ್ರಶ್ನೆಗಳನ್ನು ತಿಳಿದವರಲ್ಲಿ ಶ್ರೇಷ್ಠರಾದರೂ ಕೂಡ, ಶಕ್ತಿಮಂತಃಅಪಿ ಪ್ರಶ್ನಪರಿಹಾರ ಮಾಡುವಲ್ಲಿ ಸಮರ್ಥರಾದರೂ ಕೂಡ, ನ ವ್ಯಾಚಕ್ರುಃ – ಉತ್ತರಿಸಲಿಲ್ಲ. ವಿದ್ಯಾಯಾಃ ಉಪಜೀವನಂ – ವಿದ್ಯೆಯಿಂದ ಬದುಕುವದು (ವಿಪ್ರಾಣಾಂ ಚ - ಬ್ರಾಹ್ಮಣರಿಗೂ ಕೂಡ), ನ ಧರ್ಮಃ—ಧರ್ಮವಲ್ಲವೋ, ಹಾಗಿರುವಾಗ, ಕ್ಷತ್ರಿಯಾಣಾಂ ತು ನ ಇತಿ ಕಿಮುತ – ಕ್ಷತ್ರಿಯರಿಗೆ ಧರ್ಮವಲ್ಲ ಎಂದು ಹೇಳುವದೇನು, ತೇನ – ಆ ಕಾರಣದಿಂದ, ತೇ – ಆ ನಾಲ್ವರೂ ಪಾಂಡವರು, ಪ್ರಸಭಂ – ಬಲಾತ್ಕಾರದಿಂದ, ಪಪುಃ – ಜಲಪಾನ ಮಾಡಿದರು ಆದರಿಂದಾಗಿ ಸುಪ್ತರಾದರು. ॥೪೪॥೪೪॥

ಅವತಾರಿಕೆ : ಯಮಧರ್ಮನಿಗಿಂತ ಉತ್ತಮರಾದ ವಾಯು, ಇಂದ್ರರ ಅವತಾರರಾದ ಭೀಮಾರ್ಜುನರಿಗೆ ಧರ್ಮನ ಮಾಯೆಯಿಂದ ಸುಪ್ತಿಯು ಹೇಗೆ ಬಂದಿತು ? ಎಂಬ ಪ್ರಶ್ನೆಗೆ ನಿರ್ಣಯವನ್ನು ಹೇಳುವರು,–

ದೇವಾ ಅಪಿ ಮನುಷ್ಯೇಷು ಜಾತಾಸ್ಸುಬಲಿನೊಽಪಿಹಿ ॥೪೪೯॥

ಮಾನುಷೇಣೈವ ಭಾವೇನ ಯುಕ್ತಾ: ಸ್ಯು: ಕೇಶವಾದೃತೇ ।
ಕಾರ್ಯೇಷ್ವೇಷಾಂ ಕ್ರಮೇಣೈವ ವ್ಯಕ್ತಿಮಾಯಾಂತಿ ಸದ್ಗುಣಾಃ ॥೪೫೦॥

ಹಿ –ಯಾವ ಕಾರಣದಿಂದ, ಕೇಶವಾತ್ ಋತೇ— ಶ್ರೀಹರಿಯನ್ನು ಬಿಟ್ಟು, ಮನುಷ್ಯೇಷು ಜಾತಾಃ — ಮನುಷ್ಯರಾಗಿ ಅವತರಿಸಿರುವ, ಸುಬಲಿನಃ ದೇವಾ ಅಪಿ–ಬಲಿಷ್ಠರಾದ ದೇವತೆಗಳೂ ಕೂಡ, ಮಾನುಷೇಣ ಭಾವೇನ ಏವ ಮನುಷ್ಯ ಸ್ವಭಾವದಿಂದಲೇ ಯುಕ್ತಾಃ ಸ್ಯುಃ — ಕೂಡಿದವರಾಗಿರುವರೋ. ಏಷಾಂ — ಈ ದೇವತೆಗಳ, ಸದ್ಗುಣಾಃ — ಬಲಾದಿ ಸದ್ಗುಣಗಳು, ಕಾರ್ಯೇಷು — ವಿಶೇಷಕಾರ್ಯಗಳಲ್ಲಿ, ಕ್ರಮೇಣ ಏವ–ತಾರತಮ್ಯಕ್ರಮಾನುಸಾರವಾಗಿಯೇ, ವ್ಯಕ್ತಿಂ ಆಯಾಂತಿ ಪ್ರಕಟತೆಯನ್ನು ಹೊಂದುವವು. ॥೪೪೯॥೪೫೦॥

ಅತೋ ಭೀಮಾರ್ಜುನೌ ಧರ್ಮಾದತ್ಯುತ್ತಮಬಲಾವಪಿ ।
ದೇವಮಾಯಾಂ ಸಮಾಶ್ರಿತ್ಯ ಧರ್ಮೇಣ ಸ್ಥಾಪಿತೌ ಕ್ಷಣಾತ್ ॥೪೫೧॥

ಅತಃ — ಈ ಕಾರಣದಿಂದ, ಭೀಮಾರ್ಜುನೌ — ಭೀಮಾರ್ಜುನರು, ಧರ್ಮಾತ್ - ಧರ್ಮನಿಗಿಂತ, ಅತ್ಯುತ್ತಮಬಲೌ ಅಪಿ — ಹೆಚ್ಚು ಬಲವುಳ್ಳವರಾದರೂ ಕೂಡ, ದೇವಮಾಯಾಂ — ಸಮಾಶ್ರಿತ್ಯ — ಮೂಲದೇವರೂಪದ ಶಕ್ತಿ (ಸಂಪ್ತಿಯನ್ನು ತಂದುಕೊಡುವ ಶಕ್ತಿ) ಯನ್ನು ಅನುಸರಿಸಿ, ಧರ್ಮೇಣ — ಯುಧಿಧರ್ಮನಿಂದ, ಕ್ಷಣಾತ್ — ಸ್ವಲ್ಪ ಸಮಯದವರೆಗೆ, ಸ್ಥಾಪಿತೌ — ಮಲಗಿಸಲ್ಪಟ್ಟರು. ॥೪೫೧॥

ಮುಹೂರ್ತಮೇವ ಸಾ ಮಾಯಾ ತಯೋರಾಚ್ಛಾದನ ಕ್ಷಮಾ ।
ತತಃ ಪ್ರಬುದ್ಧಯೋಃ ಧರ್ಮೋ ನೈವ ಶಕ್ತಿಶತಾಂಶಭಾಕ್ ॥೪೫೨॥

ಸಾ ಮಾಯಾ — ಆ ಶಕ್ತಿಯು ಮುಹೂರ್ತಂ ಏವ — ಅಲ್ಪ ಸಮಯಂ ಪರ್ಯಂತ ಮಾತ್ರವೇ, ತಯೋಃ — ಆವರಿಬ್ಬರಿಗೆ, ಆಚ್ಛಾದನಕ್ಷಮಾ — ಸಂಪ್ತಿಯನ್ನು ತಂದುಕೊಡುವಲ್ಲಿ ಸಮರ್ಥವಾಗಿದೆ, ಧರ್ಮಃ — ಯುಧಿಧರ್ಮನು, ತತಃ - ಆ ಸಮಯದ ನಂತರ, ಪ್ರಬುದ್ಧಯೋಃ — ಎಚ್ಚರಗೊಂಡ ಭೀಮಾರ್ಜುನರ, ಶಕ್ತಿಶತಾಂಶಭಾಕ್ ಅಪಿ — ಒಂದು ನೂರಾಂಶ ಶಕ್ತಿವುಳ್ಳವನೂ ಕೂಡ, ನೈವ — ಅಲ್ಲ. ॥೪೫೨॥

ಉಕ್ತಂ ಪಾದ್ಮಪುರಾಣೇ ಚ ತದೇತತ್ಸರ್ವಮಂಜಸಾ ।
ತಸ್ಮಾನ್ನಾಶಕ್ತರನಯೋಸ್ಸಂಭಾವ್ಯಾ ಭೀಮಪಾರ್ಥಯೋಃ ॥೪೫೩॥

ತದೇತತ್ ಸರ್ವಂ — ಈ ಈ ವಿಷಯವೆಲ್ಲವೂ, ಪಾದ್ಮಪುರಾಣೇ ಚ ಅಂಜಸಾ ಉಕ್ತಂ — ಪಾದ್ಮ ಪುರಾಣದಲ್ಲಿ ಚೆನ್ನಾಗಿ ಹೇಳಲ್ಪಟ್ಟಿದೆ ತಸ್ಮಾತ್ — ಆದ್ದರಿಂದ, ಅನಯೋಃ ಭೀಮಪಾರ್ಥಯೋಃ — ಈ ಭೀಮಾರ್ಜುನರಿಗೆ, ಅಶಕ್ತಿಃ — ಅಸಾಮರ್ಥ್ಯವು, ನ ಸಂಭಾವ್ಯಾ — ತಿಳಿಯಲ್ಪಡಬಾರದು. ॥೪೫೩॥

ಧರ್ಮಾತ್ತಜ್ಜೋಽಥಾಜಗಾಮೋದಕಾಂತಂ ದೃಷ್ಟ್ವಾ ಭ್ರಾತೃಂಸ್ತತ್ರ ದುಃಖಾಭಿತಪ್ತಃ ।
ಇಚ್ಛನ್ಪಾತುಂ ವಾರಿ ಸಂವಾರಿತಶ್ಚ ಪಿತ್ರಾ ಬಕಾಕಾರಮಿತೇನ ನಾಪಾತ್ ॥೪೫೪॥

ಅಥ—ಈ ಪ್ರಕಾರ ನಾಲ್ವರು ಮಲಗಿದ ನಂತರ, ಧರ್ಮಾತ್ಮಜಃ- ಧರ್ಮರಾಜನು, ಉದಕಾಂತಂ -ನೀರಿನ ಸಮೀಪಕ್ಕೆ, ಆಜಗಾಮ—ಬಂದನು. ತತ್ರ—ಅಲ್ಲಿ, ಭ್ರಾತೄನ್ — ಸಹೋದರರನ್ನು, ದೃಷ್ಟ್ವಾ — ನೋಡಿ, ದುಃಖಾಭಿತಪ್ತಃ ಸನ್ — ಬಹಳ ದುಃಖದಿಂದಕೂಡಿದವನಾಗಿ, ವಾರಿ ಪಾತುಂ ಇಚ್ಛನ್ — ನೀರನ್ನು ಕುಡಿಯಲು ಇಚ್ಛಿಸಿದವನಾಗಿ, ಬಕಾಕಾರಂ ಇತೇನ—ಬಕಪಕ್ಷಿರೂಪವನ್ನು ಹೊಂದಿದ. ಪಿತ್ರಾ—ತನ್ನ ತಂದೆಯಾದ ಯಮಧರ್ಮನಿಂದ, ಸಂವಾರಿತಃ ಸನ್ — ತಡೆಯುಲ್ಪಟ್ಟವನಾಗಿ, ನ ಅಪಾತ್—ಕುಡಿಯಲಿಲ್ಲ. ॥೪೫೪॥

ಅರ್ಥೇ ಭ್ರಾತೄಣಾಮೈಚ್ಛದಸೌ ತದೀಯ ಪ್ರಶ್ನಪ್ರತಿವ್ಯಾಹರಣಂ ದಯಾಲುಃ ।
ತತೋ ಧರ್ಮೋ ಯಕ್ಷತನುಸ್ಸ ಭೂತ್ವಾ ಪ್ರಶ್ನಾಂಶ್ಚಕ್ರೇ ವ್ಯಾಕರೋತ್ತಾನ್ ಸ ಪಾರ್ಥಃ ॥೪೫೫॥

ದಯಾಲುಃ – ಕರುಣಾಳುವಾದ, ಅಸೌ — ಆ ಧರ್ಮರಾಜನು, ಭ್ರಾತೄಣಾಂ ಅರ್ಥೇ — ಸಹೋದರರನ್ನು ಎಬ್ಬಿಸುವಂತಾಗಲು, ತದೀಯಪ್ರಶ್ನ ಪ್ರತಿವ್ಯಾಹರಣಂ — ಆ ಯುಮಧರ್ಮನ ಪ್ರಶ್ನೆಗಳಿಗೆ ಉತ್ತರಿಸುವದನ್ನು, ಐಚ್ಛತ್ — ಒಪ್ಪಿದನು. ತತಃ - ಅನಂತರ, ಸಃ ಧರ್ಮಃ—ಆ ಯುಮಧರ್ಮನು, ಯಕ್ಷತನುಃಭೂತ್ವಾ — ಯಕ್ಷರೂಪವುಳ್ಳವನಾಗಿ, ಪ್ರಶ್ನಾನ್ ಚಕ್ರೇ—ಪ್ರಶ್ನಗಳನ್ನು ಮಾಡಿದನು. ಸಃ ಪಾರ್ಥಃ – ಆ ಧರ್ಮರಾಜನು, ತಾನ್ – ಆ ಪ್ರಶ್ನೆಗಳನು, ವ್ಯಾಕರೋತ್ – ಉತ್ತರಿಸಿದನು. ॥೪೫೫॥

ತತಸ್ತುಷ್ಟೋ ವರಮುಸ್ಮೈ ದದೌ ಸ ಏಕೋತ್ಥಾನಂ ಭ್ರಾತೃಮಧ್ಯೇ ಸ ವವ್ರೇ ।
ಯದ್ಯೇಕಂ ಸ್ಯಾನ್ನಕುಲೋಽಸ್ತ್ವಿತ್ಯಥಾಽಹ ತುಷ್ಟೋಧರ್ಮಃ ಕಥಮೇತತ್ಕೃತಂತೇ ॥೪೫೬॥

ಅತಿಪ್ರೀತಿರ್ಭೀಮಸೇನೇ ತವಾಸ್ತಿ ಬಲೀಚಾಸೌ ರಾಜ್ಯಹೇತುಸ್ತವ ಸ್ಯಾತ್ ।
ಇತ್ಯುಕ್ತ ಊಚೇ ಮಾದ್ರಿಪುತ್ರಂ ವಿಹಾಯ ಕುಂತೀ ಪುತ್ರೋ ನ ಮಯೋತ್ಥಾಪನೀಯಃ॥೪೫೭॥

ತತಃ — ಧರ್ಮರಾಜನು ಕೊಟ್ಟ ಉತ್ತರದಿಂದ, ತುಷ್ಟಃ—ಸಂತುಷ್ಟನಾದ, ಸಃ – ಯಕ್ಷರೂಪೀ ಯಮ ಧರ್ಮನು, ಅಸ್ಮೈ — ಈ ಯುಧಿಷ್ಠಿರನಿಗೆ, ಭ್ರಾತೃಮಧ್ಯೇ — ಸಹೋದರರ ಮಧ್ಯದಲ್ಲಿ, ಏಕೋತ್ಥಾನಂ – ಒಬ್ಬನ ಎಚ್ಚರವನ್ನು, ವರಂ – ವರವನ್ನಾಗಿ, ದದೌ - ಕೊಟ್ಟನು. ಸಃ –ಆ ಯುಧಿಷ್ಠಿರನು, ಯದಿ ಏಕಂ ಸ್ಯಾತ್ – ಒಂದು ವೇಳೆ ಒಬ್ಬನೇ ಏಳುವದಾದರೆ, ತರ್ಹಿ ನಕುಲಃಅಸ್ತು – ನಕುಲನೇಳಲಿ, ಇತಿ – ಎಂದು, ವವ್ರೇ, ವರವನ್ನು ಕೇಳಿದನು, ಅಥ – ಈ ರೀತಿ ಕೇಳಿದ ನಂತರ, ತುಷ್ಟಃಧರ್ಮಃ – ಸಂತುಷ್ಟನಾದ ಯಕ್ಷರೂಪೀ ಯಮನು, ತೇ — ನಿನ್ನಿಂದ, ಏತತ್ — ಇದು, (ನಕುಲನು ಏಳಲಿ ಎಂದು ವರದ ಕೇಳುವಿಕೆಯು), ಕಥಂ ಕೃತಂ — ಹೇಗೆ ಮಾಡಲ್ಪಟ್ಟಿತು, ಚ-ಏಕೆಂದರೆ, ತವ–ನಿನಗೆ, ಭೀಮಸೇನೇ — ಭೀಮಸೇನನಲ್ಲಿ, ಅತಿಪ್ರೀತಿ: ಅಸ್ತಿ — ಅತ್ಯಂತ ಪ್ರೀತಿ ಯಿರುವದು. ಅಸೌ —ಆ ಭೀಮನು, ಬಲೀ — ಬಲಿಷ್ಠನು: ತವ — ನಿನಗೆ, ರಾಜ್ಯಹೇತು: ಸ್ಯಾತ್ – ರಾಜ್ಯಕ್ಕೆ ಕಾರಣನೂ ಆಗುವನು (ಹಾಗಿರುವಾಗ ಭೀಮನನ್ನು ಬಿಟ್ಟು ನಕುಲನು ಏಳಲಿ ಎಂದು ಕೇಳಿದ್ದು ಹೇಗೆ)ಇತಿ—ಎಂದು, ಆಹ—ಹೇಳಿದನು, ಇತಿ ಉಕ್ತ:–ಹೀಗೆ ಯಕ್ಷನಿಂದ ಹೇಳಲ್ಪಟ್ಟ ಯುಧಿಷ್ಠಿರನು, ಮಾದ್ರಿಪುತ್ರಂ ವಿಹಾಯ– ಒಬ್ಬ ಮಾದ್ರಿ ಪುತ್ರನನ್ನು ಎಬ್ಬಿಸದೇ, ಕುಂತೀಪುತ್ರ: – ಇನ್ನೊಬ್ಬ ಕುಂತಿಪುತ್ರನು, ಮಯಾ—ನನ್ನಿಂದ, ನ ಉತ್ಥಾಪನೀಯಃ— ಎಬ್ಬಿಸಲು ಅರ್ಹನಲ್ಲ ಇತಿ ಎಂದು, ಊಚೇ – ಹೇಳಿದನು. ॥೪೫೬॥೪೫೭॥

ಸ ಏವಮುಕ್ತೋ ನಿತರಾಂ ಪ್ರೀಯಮಾಣ ಉತ್ಥಾಪಯಾಮಾಸ ಚ ತಾನ್ ಸಮುಸ್ಥಾನ್ ।
ಯಥೇಷ್ಟರೂಪಪ್ರಾಪ್ತಿಮೇಷಾಂ ಪುನಶ್ಚಸ್ವಕಾಮತೋ ನಿಜರೂಪಾಪ್ತಿಮಾದಾತ್॥೪೫೮॥

ಏವಂ ಉಕ್ತಃ ಸಃ – ಹೀಗೆ ಯಂಧಿಷ್ಠಿರನಿಂದ ಹೇಳಲ್ಪಟ್ಟ ಆ ಯಕ್ಷನು, ನಿತರಾಂ ಪ್ರೀಯಮಾಣಃಸನ್– ಈ ಮೊದಲಿನ ಸಂತೋಷಕ್ಕಿಂತಲೂ ಹೆಚ್ಚು ಸಂತೋಷವನ್ನು ಹೊಂದಿದವನಾಗಿ, ತಾನ್ ಸಮಸ್ತಾನ್ – ಆ ಎಲ್ಲ ಸಹೋದರರನ್ನು ಉತ್ಥಾಪಯಾಮಾಸ – ಎಬ್ಬಿಸಿದನು. ಏಷಾಂ – ಈ ಎಲ್ಲ ಪಾಂಡವರಿಗೆ, ಯಥೇಷ್ಟರೂಪಪ್ರಾಪ್ತಿಂ– ತಮ್ಮ ಇಚ್ಛೆಗನುಸಾರವಾದ ರೂಪದ ಪ್ರಾಪ್ತಿಯನ್ನು, ಪುನಃಚ – ಮತ್ತೆ,—ಸ್ವಕಾಮತಃ – ತಮ್ಮ ಇಚ್ಛೆಯನುಸಾರ,ನಿಜ ರೂಪಾಪ್ತಿಂ - ತಮ್ಮ ಸ್ವಂತರೂಪದ ಪ್ರಾಪ್ತಿಯನ್ನು, ಆದಾತ್ - ವರವನ್ನಾಗಿ ಕೊಟ್ಟನು. ॥೪೫೮॥

ಅಜ್ಞಾತವಾಸೇಽಜ್ಞಾತತಾಂ ಸರ್ವದೈವ ದದೌ ತೇಷಾಂ ಪ್ರೀತ ಏವಾನೃಶಂಸ್ಯಾತ್ ।
ಏವಂ ಕ್ರೀಡನ್ ಪುತ್ರ ಇತ್ಯಾತ್ಮನೈವ ಯಶೋಧರ್ಮಾವಾತ್ಮನೋ ವರ್ಧಯನ್ನಃ ॥೪೫೯॥

ಅನೃಶಂಸ್ಯಾತ್ ಪ್ರೀತಃ—ಧರ್ಮರಾಜನ ದಯಾಗುಣದಿಂದ ಸಂತುಷ್ಟನಾದ ಯಕ್ಷನು, ಅಜ್ಞಾತ ವಾಸೇ – ಅಜ್ಞಾತ ವಾಸದಲ್ಲಿರುವಾಗ, ತೇಷಾಂ—ಅವರಿಗೆ, ಸರ್ವದಾ ಏವ – ಯಾವಾಗಲೂ, ಅಜ್ಞಾತತಾಂ ಚ– ಯಾರಿಂದಲೂ ಅಜ್ಞಾತತೆಯನ್ನೂ ಕೂಡ, ದದೌ–ವರವನ್ನಾಗಿ ಕೊಟ್ಟನು ಏವಂ-ಹೀಗೆ, ಸಃ– ಆ ಯಂಧರ್ಮನು, ಪುತ್ರಃಇತಿ - ಯಂಧಿಷ್ಠಿರನು ತನ್ನ ಮಗನು ಎಂಬ ರೀತಿಯಿಂದ, ಆತ್ಮನಾ ಏವ— ತನ್ನ ರೂಪದಿಂದ ಕೂಡಿಕೊಂಡೇ, ಕ್ರೀಡನ್–ಕ್ರೀಡಿಸುವವನಾದಿ, ಆತ್ಮನಃ – ತನ್ನ ರೂಪನಾದ ಯಂಧಿಷ್ಠಿರನಿಗೆ, ಯಶೋಧರ್ಮೌ—ಯಶಸ್ಸು ಹಾಗು ಧರ್ಮಗಳನ್ನು, ವರ್ಧಯನ್ – ಬೆಳೆಸುವವನಾಗಿ, ದದೌ – ವರಗಳನ್ನು ಕೊಟ್ಟನು. ॥ ೫೯॥

ಯುಧಿಷ್ಠಿರಾತ್ಮನಃ ಸ್ವಸ್ಯ ಯಶೋಧರ್ಮಾಭಿವೃದ್ಧಯೇ ।
ಕೃತ್ವಾಽರಣ್ಯಪಹಾರಾದಿ ಪುನರ್ದತ್ವಾ ಚ ತತ್ಸ್ವಯಮ್ ।
ದಾತುಂ ವಿಪ್ರಾಯ ತದ್ಧಸ್ತೇ ಯಯೌ ಧರ್ಮೋದಿವಂ ಪುನಃ ॥೪೬೦॥

ಧರ್ಮಃ – ಯಮಧರ್ಮನು, ಯಂಧಿಷ್ಠಿರಾತ್ಮನಃಸ್ವಸ್ಯ – ಯಂಧಿಷ್ಠಿರ ಸ್ವರೂಪನಾದ ತನಗೇ, ಯಶೋ ಧರ್ಮಾಭಿವೃದ್ಧಯೇ—ಕೀರ್ತಿಧರ್ಮಗಳ ಅಭಿವೃದ್ಧಿಯಾಗುವದಕ್ಕಾಗಿ, ಅರಣ್ಯಪಹಾರಾದಿ - ಅರಣಿ ಭಾಂಡಗಳ ಅಪ ಹಾರ, ಪ್ರಶ್ನ, ವರದಾನ ಇತ್ಯಾದಿಕಾರ್ಯಗಳನ್ನು, ಕೃತ್ವಾ— ಮಾಡಿ, ಪುನಃ – ಮತ್ತೆ, ಸ್ವಯಂ – ತಾನೇ, ವಿಪ್ರಾಯ ದಾತುಂ – ಬ್ರಾಹ್ಮಣನಿಗೆ ಕೊಡಲು, ತದ್ಧಸ್ತೇ – ಆ ಯಂಧಿಷ್ಠಿರನ ಕೈಯಲ್ಲಿ, ತತ್ – ಅರಣ್ಯಾದಿಯನ್ನು, ದತ್ವಾ- ಕೊಟ್ಟು, ಪುನಃ – ಮತ್ತೆ, ದಿವಂ ಯಯೌ —ತನ್ನ ಲೋಕಕ್ಕೆ ಹೋದನು. ॥೪೬೦॥

ತತೋ ರಾಜಾ ಭೀಮಸೇನಾರ್ಜುನೌ ಚ ಸಾರ್ಧಂ ಯಮಾಭ್ಯಾಮರಣೇಂ ಪ್ರದಾಯ ।
ಮುದಾಯುತಾಃ ಕೃಷ್ಣಯಾ ಸಾರ್ಧಮೇವ ಸಂತುಷ್ಟವುಃಕೃಷ್ಣಮನಂತಮಚ್ಯುತಂ ॥೪೬೧॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಅರಣೇ ಪ್ರಾಪ್ತಿರ್ನಾಮ ದ್ವಾವಿಂಶೋಽಧ್ಯಾಯಃ ॥ ೨೨॥

ತತ – ಇಷ್ಟ ಘಟನೆಗಳ ನಂತರ, ರಾಜಾ – ಧರ್ಮರಾಜನು, ಭೀಮಸೇನಾರ್ಜುನೌ – ಭೀಮಾರ್ಜು ನರು, ರಾಜಾ ಚ – ಧರ್ಮರಾಜನೂ ಕೂಡ, ಯಮಾಭ್ಯಾಂ ಸಾರ್ಧಂ – ನಕುಲಸಹದೇವರಿಂದ ಕೂಡಿಕೊಂಡು, ಅರಣೇಂ ಪ್ರದಾಯ-(ಬ್ರಾಹ್ಮಣರಿಗೆ)ಅರಣಿಯನ್ನು ಕೊಟ್ಟು, ಮುದಾ ಯುತಾಃ: ಸಂತಃ–ಸಂತೋಷದಿಂದ ಕೂಡಿದವರಾಗಿ

ಕೃಷ್ಣಯಾ ಸಾರ್ಧಂ ಏಷ – ದ್ರೌಪದೀದೇವಿಯಿಂದ ಕೂಡಿಕೊಂಡೇ, ಅನಂತಂ ಅಚ್ಯುತಂ ಕೃಷ್ಣಂ – ನಾಶರಹಿತನಾದ ಚ್ಯುತಿರಹಿತನಾದ ಶ್ರೀಕೃಷ್ಣನನ್ನು, ಸಂತುಷ್ಟುವುಃ – ಸ್ತುತಿಸಿದರು, ॥೪೬೧॥

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮಹಾಭಾರತತಾತ್ಪರ್ಯನಿರ್ಣಯದಲ್ಲಿ ಅರಣಿ ಪ್ರಾಪ್ತಿಕಥಾವನ್ನು ತಿಳಿಸುವ ಇಪ್ಪತ್ತೆರಡನೆಯ ಅಧ್ಯಾಯದ ಪ್ರತಿಪಾದಾನುವಾದವು ಮುಂದಿಯಿತು,

॥ ಶ್ರೀ ಕೃಷ್ಣಾರ್ಪಣಮಸ್ತು ॥

ಭಾವಾನುವಾದ ೪೪೬ – ೪೬೧

ಪಾಂಡವರು ಗಂಧರ್ವರನ್ನು ಗೆದ್ದು ಕೌರವರನ್ನು ಬಿಡಿಸಿ ಸಂತೋಷದಿಂದ ವನದಲ್ಲಿರುವಾಗಲೊಮ್ಮೆ ಒಬ್ಬ ಬ್ರಾಹ್ಮಣನ ಅರಣೀ ಹಾಗು ಭಾಂಡಗಳ ಅಪಹಾರವಾಗಿದ್ದನ್ನು ಕೇಳಿ, ಅಪಹರಿಸಿದ ವ್ಯಾಗವನ್ನು ಬೆನ್ನು ಹತ್ತಿದಾಗ ಅದು ಅದೃಶ್ಯವಾಯಿತು. ಆಗ ನೀರಡಿಸಿದ ಈ ಪಾಂಡವರು ಒಬ್ಬೊಬ್ಬರಾದಿ ಸವೀಪದಲ್ಲಿರುವ ಒಂದು ಜಲಾಶಯಕ್ಕೆ ಬಂದು ನೀರನ್ನು ಕುಡಿಯಲು ಪ್ರವೃತ್ತರಾದಾಗ ಬಕಪಕ್ಷಿರೂಪದಲ್ಲಿರುವ ಯುವಂದೇವನು ನನ್ನ ಪ್ರಶ್ನೆಗಳಿಗೆ ಉತ್ತರಿಸದೇ ನೀರು ಕುಡಿಯಂಬೇಡಿ ಎಂದು ಹೇಳಿದನು. ಆದರೆ ಉತ್ತರಿಸಿ ನೀರು ಕುಡಿಯುವದು ಎಂದರೆ ವಿದ್ಯೆಯಿಂದ ಉಪಜೀವನವಾಯಿತು. ಇದು ತಮಗೆ ಧರ್ಮವಲ್ಲ ಎಂದು ತಿಳಿದು ಉತ್ತರಿಸದೇ ನೀರು ಕುಡಿಯಲು ಉದ್ಯುಕ್ತರಾದಾಗ ಆ ಯಮನ ಮಾಯಾ ಶಕ್ತಿಯಿಂದ ಮಲಗಿದರು. ಹೀಗೆ ನಾಲ್ವರೂ ಪಾಂಡವರು ಮಲಗಿದರು. ಭೀಮಾರ್ಜುನರು ಹೇಗೆ ಮಲಗಿದರು? ಇವರು ಯುಧರ್ಮನಿಗಿಂತ ಉತ್ತಮರಾದ ವಾಯು, ಇಂದ್ರದೇವರ ಅಂಶರು? ಎಂದು ಸಂಶಯವು ಎಲ್ಲರನ್ನೂ ಕಾಡುವದು ಸಹಜ. ಎಲ್ಲ ಸಜ್ಜನರ ಪೀಡಾಪರಿಹಾರಕರಾದ ವಾಯುದೇವರ ಅವತಾರರಾದ ಶ್ರೀಮದಾಚಾರ್ಯರು ಈ ಸಂಶಯಪೀಡೆಯನ್ನೂ ತರ್ಕ ನಿರ್ಣಯದಿಂದ ಪರಿಹರಿಸಿದ್ದಾರೆ, ಯುಧರ್ಮನು ವಸ್ತುತಃ ಕಡಿಮೆಯವನು. ಆದರೆ ಅವನು ಮೂಲರೂಪದಿಂದಲೇ ಬಂದವನು. ಭೀಮಾರ್ಜುನರೇನೋ ಉತ್ತಮ ದೇವಾವತಾರಿಗಳು, ಆದರೆ ಮನುಷ್ಯರಾಗಿ ಅವತರಿಸಿ ಬಂದವರು. ಶ್ರೀಹರಿಯೊಬ್ಬನನ್ನು ಬಿಟ್ಟು ಉಳಿದೆಲ್ಲ ದೇವತೆಗಳಿಗೂ ಮನುಷ್ಯಅವತಾರದಲ್ಲಿ ಮನುಷ್ಯ ಸ್ವಭಾವವು ಬರುವದು; ಕಾರ್ಯವಿಶೇಷಗಳಲ್ಲಿ ಅವರವರ ಯೋಗ್ಯತಾ ತಾರತಮ್ಯಾನುಗುಣವಾಗಿ ಬಲಾದಿಗುಣಗಳು ಪ್ರಕಟವಾಗುವವು. ಇದೆಲ್ಲವೂ ಹಿಂದೆ ಕಥಿತವಾದಿದೆ. ಆ ಪ್ರಕಾರ ಮೂಲರೂಪೀ ಯುಮದೇವತೆಯು ವಾಯ್ವಾಶಕ್ತಿಯನ್ನು ಅನುಸರಿಸಿ ಇವರಿಬ್ಬರೂ ಸುಪ್ತರಾದರು. ಈ ಸ್ವಾಪ (ನಿದ್ರೆಯು) ಅತ್ಯಲ್ಪ ಸಮಯಕ್ಕೆ ಮಾತ್ರ ಸೀಮಿತ ಮೂಲರೂಪ ಯಮನಿಗೂ ಅಷ್ಟು ವಿಶಾತ್ರ ಮಾಡಲು ಶಕ್ಯ. ಆ ಅಲ್ಪ ಸಮಯದ ನಂತರ ಈ ಭೀಮಾರ್ಜುನರ ಒಂದು ನೂರನೆಯ ಅಂಶದ ಶಕ್ತಿಯೂ ಕೂಡ, ಯುಧರ್ಮನಲ್ಲಿಲ್ಲ. ಆದ್ದರಿಂದ ಭೀಮಾರ್ಜುನರಲ್ಲಿ ಅಶಕ್ತಿಯನ್ನು ತಿಳಿಯಬಾರದು. ಇದೆಲ್ಲ ವಿಷಯವು ಪದ್ಮ ಪುರಾಣದಲ್ಲಿಯೂ ಕಥಿತವಾಗಿದೆ,

ಹೀಗೆ ಎಲ್ಲ ಸಹೋದರರು ನೀರು ಕುಡಿಯಲು ಹಾಗು ತರಲು ಹೋದವರು ಬಾರದಿದ್ದಾಗ ಧರ್ಮರಾಜನೇ ಬಂದು ನೀರಿನ ಸವೀಪದಲ್ಲಿ ಮಲಗಿದವರನ್ನು ನೋಡಿ ದುಃಖಿತನಾಗಿ, ತಾನೂ ನೀರು ಕುಡಿಯಲು ಹೋದಾಗ ಮೊದಲಿನಂತೆಯೇ ಬಕಪಕ್ಷಿಯು ಹೇಳಿವಾಗ ಸಹೋದರರ ಮೇಲೆ ಇರುವ ದಯೆಯಿಂದ ಕ್ಷತ್ರಿಯಧರ್ಮವನ್ನು ಬಿಡಲು

ಸಿದ್ಧನಾಗಿ ಪ್ರಶ್ನೆಗಳಿಗೆ ಉತ್ತರಿಸಲು ಒಪ್ಪಿದನು. ಆಗ ಯಮಧರ್ಮನು ಬಕರೂಪವನ್ನು ಬಿಟ್ಟು ಯಕ್ಷರೂಪಿಯಾಗಿ ಪ್ರಶ್ನೆಮಾಡಿದನು. ಎಲ್ಲ ಪ್ರಶ್ನೆಗಳನ್ನು ಚೆನ್ನಾಗಿ ಉತ್ತರಿಸಿದನು ಯುಧಿಷ್ಠಿರನು. ಅದರಿಂದ ಸಂತೃಪ್ತನಾದ ಯಕ್ಷನು ನಿನ್ನ ಸಹೋದರರಲ್ಲಿ ಯಾರಾದರೊಬ್ಬರನ್ನು ಎಬ್ಬಿಸುವೆನು; ಯಾರನ್ನು ಎಬ್ಬಿಸಲಿ ಹೇಳು ಎಂದು ಹೇಳಿದನು. ಆಗ ಯುಧಿಷ್ಠಿರನು ನಕುಲನು ಏಳಲಿ ಎಂದನು. ಆಗ ಯಕ್ಷನು ನೀನು ಸ್ನೇಹದಿಂದ ಹೀಗೆ ಕೇಳಿದ್ದಿದ್ದರೆ ಭೀಮರಲ್ಲಿ ನಿನಗೆ ಅಧಿಕಸ್ನೇಹವಿದೆ; ಅವರು ಬಲಿಷ್ಠರು; ನಿನಗೆಲ್ಲ ರಾಜ್ಯವನ್ನು ತಂದುಕೊಡಲು ಕಾರಣರಾಗುವರು. ಅವರನ್ನು ಬಿಟ್ಟು ನಕುಲನನ್ನು ಎಬ್ಬಿಸಲು ಕೇಳಿದ ಕಾರಣವೇನು ? ಎಂದಾಗ ಧರ್ಮರಾಜನು ನಾನು ಕುಂತೀಪುತ್ರನೊಬ್ಬನು ಬದುಕಿರುವಾಗ ಒಬ್ಬ ಮಾದ್ರೀಪುತ್ರನನ್ನು ಬದುಕಿಸಿಕೊಳ್ಳದೇ ಇನ್ನೊಬ್ಬ ಕುಂತೀಪುತ್ರನನ್ನೇ ಬದುಕಿಸಿಕೊಳ್ಳುವದು ನನಗೆ ಧರ್ಮವಲ್ಲ; (ತಾಯಿಯಂರಲ್ಲಿ ವೈಷ್ಮವ್ಯ ಸಹೋದರರಲ್ಲಿ ವೈಷಮ್ಯ ಮಾಡಿದಂತಾಗುವದು) ಆದ್ದರಿಂದ ಈ ದಯಾಧರ್ಮದೃಷ್ಟಿಯಿಂದ ನಾನು ಕೇಳಿದ್ದು ಎಂದು ತಿಳಿಸಿದಾಗ ಧರ್ಮರಾಜನ ಈ ದಯಾಕಾರ್ಯದಿಂದ ಅತೀವ ಸಂತುಷ್ಟನಾದ ಯಕ್ಷರೂಪೀ ಯಮಧರ್ಮನು ಎಲ್ಲ ಸಹೋದರರು ಏಳಲಿ; ನಿಮಗೆ ಸಮೀಪದಲ್ಲಿರುವ ಅಜ್ಞಾತವಾಸದ ಸಮಯದಲ್ಲಿ ನಿಮಗೆ ಇಷ್ಟವಾದ ರೂಪವನ್ನು ತೆಗೆದುಕೊಳ್ಳುವ, ಮತ್ತೆ ಬೇಕಾದಾಗ ಅದನ್ನು ಬಿಟ್ಟು ನಿಮ್ಮ ನಿಜರೂಪವನ್ನು ಹೊಂದುವ ಶಕ್ತಿಬರಲಿ; ನೀವು ಪೂರ್ಣ ಒಂದು ವರ್ಷ ಯಾರಿಗೂ ತಿಳಿಯದಂತೆ ಅಜ್ಞಾತರಾಗೇ ಇರುವಿರಿ ಎಂದು ವರವನ್ನು ಕೊಟ್ಟು; ತನ್ನ ಅವತಾರನೇ ಆದ ಧರ್ಮರಾಜನಲ್ಲಿರುವ ದಯಾಗುಣವನ್ನು ಪ್ರಕಟಮಾಡಿ ಧರ್ಮಕೀರ್ತಿ ಅಭಿವೃದ್ಧಿಮಾಡಿಕೊಡುವದಕ್ಕಾಗಿಯೇ ಅರಣ್ಯಪಹಾರಾದಿ ಎಲ್ಲ ಕಾರ್ಯವನ್ನು ಮಾಡಿ, ಬ್ರಾಹ್ಮಣನಿಗೆ ಕೊಡಲು ಅರಣಿ ಹಾಗು ಭಾಂಡಗಳನ್ನು ಧರ್ಮರಾಜನಿಗೆಕೊಟ್ಟು ತನ್ನ ಲೋಕಕ್ಕೆ ಹೋದನು. ಪಾಂಡವರು ಆ ಅರಣಿಯನ್ನು ಬ್ರಾಹ್ಮಣನಿಗೆ ಕೊಟ್ಟು ದ್ರೌಪದೀಸಮೇತರಾಗಿ ಸಂತೋಷದಿಂದ ಶ್ರೀಕೃಷ್ಣನನ್ನು ಭಕ್ತಿಯಿಂದ ಸ್ತುತಿಸುತ್ತಾ ವಾಸಿಸಿದರು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯನಿರ್ಮಿತವಾದ ಶ್ರೀಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಅರಣ್ಯಪರ್ವದ ಅರಣಿಪ್ರಾಪ್ತಿಕಥಾನಿರೂಪಿಸುವಲ್ಲಿ ಇಪ್ಪತ್ತೆರಡನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು

॥ ಶ್ರೀ ಮಧ್ವೇಶಾರ್ಪಣಮಸ್ತು ॥

ವಿ. ಸೂ. ಹಿಂದೆ ನಮ್ಮ ಸಮಿತಿಯಿಂದ ಶ್ರೀಮಹಾಭಾರತತಾತ್ಪರ್ಯನಿರ್ಣಯದ ೨೦, ೨೧, ೨೨ನೆಯ ಅಧ್ಯಾಯಗಳನ್ನು ಬಿಟ್ಟು ೨೩ ರಿಂದ ೨೯ ರವರೆಗಿನ ಅಧ್ಯಾಯಗಳನ್ನು ಪ್ರಕಾಶಿಸಿದ್ದೆವು. ನಂತರ ೨೦ ನೆಯ ಅಧ್ಯಾಯವನ್ನು ಪ್ರಕಾಶಿಸಿದೆವು. ಈಗ ೨೧ ಹಾಗು ೨೨ನೆಯ ಅಧ್ಯಾಯಗಳನ್ನು ಈ ಸಂಪುಟದಲ್ಲಿ ಕೊಡುವದರೊಂದಿಗೆ ೧ ರಿಂದ ೨೯ ಅಧ್ಯಾಯಗಳು ಪೂರ್ಣವಾದಂತಾಯಿತು ಮುಂದಿನ ಸಂಪುಟವು ೩೦, ೩೧ ಹಾಗೂ ೩೨ ನೆಯ ಅಧ್ಯಾಯಗಳನ್ನೊಳಗೊಂಡು ಪ್ರಕಟವಾಗುವದು.

ಶ್ರೀ ಮಧ್ವ ಸಿದ್ಧಾಂತ ಪ್ರಕಾಶನ ಸಮಿತಿ, ಕೊರ್ಲಹಳ್ಳಿ.

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ
೨೧ ಹಾಗು ೨೨ ನೆಯ ಅಧ್ಯಾಯಗಳು

ತಿದ್ದುಪಡಿ

ಪುಟ	ಸಾಲು	ಅಶುದ್ಧ	ಶುದ್ಧ
೬	೩	ಕೃಷ್ಣನನಂ	ಕಪ್ಣನನ್ನಿ
೭	೨೧	ಕ್ಷಿಪ್ತಃ	ಕ್ಷಿಪ್ತ।
೯	೧೦	ಸಂವಾರಂಹ್ಯ	ಸಪಠಾರಂಹ್ಯ
೧೨	೫	ಅಯಂಃ	ಅಯಂ
೧೪	೩	ಅಧಿನ	ಅಧೀನ
೧೪	೨೬	ಕದಾಚ್ಚಿತವರೇ	ಕದಾಚಿತ್ಪವರೇ
೧೬	೮	ಪುರಂಷೊ	ಪುರಂಷೋ
೧೬	೧೧	ಸವಂಧಿ	ಸವಂಧಿ
೧೬	೧೨	ಕೇರ್ಣಂ	ಕೀರ್ಣಂ
೧೬	೧೪	ವದೇರಿಂವ	ದೇವರಿಂದ
೧೭	೧೧	ಸೆವಿ	ಸೇವಿ
೧೯	೧೨	ಕಂಡವಂ	ಕಂಡದ್ದು
೧೯	೨೨	ವ್ಯಾಪ್ತ	ವ್ಯಾಪ್ತ
೧೯	೨೩	ಅಂನತ	ಅನಂತ
೧೯	೩೬	ದರಲ್ಲಿ	ಅದರಲ್ಲಿ
೨೦	೧೩	ರೆಂವಂ	ರೆಂದಂ
೨೦	೧೮	ನೃರಸಿಂಹ	ನೃಸಿಂಹ
೨೨	೨೩	ದನ್ನಿ	ವನ್ನಿ
೨೪	೮	ನ್ನಿ	ನಿನ್ನ
೨೪	೨೦	ಜಗಾ	ಜಗಾದ
೨೪	೨೫	ಬರ್ಮ	ಧರ್ಮ
೨೪	೩೧	ಜಯೆತ್	ಜಯೇತ್
೨೫	೧೬	ಆದಿಕ್ಕ	ಆಧಿಕ್ಕ
೨೫	೨೬	ಸಾದ್ಯಂ	ಸಾಧ್ಯಂ
೨೬	೨೪	ವಾಗಧೋಃ	ವಾಗಧೋ
೨೭	೪	ಪಾರವೆಷ್ಯಕ್ಕ	ಪಾರವೇಷ್ಯಕ್ಕ

ಪುಟ	ಸಾಲು	ಅಶುದ್ಧ	ಶುದ್ಧ
೨೭	೨೩	ಹಂತಾ	ಹಂತು
೨೮	೨೬	ಹೆತುಃ	ಹೇತು:
೨೯	೨೩	ಹನಿಪ	ಹನಿಷ್ಯೇ
೩೩	೩೦	ನಿನನ್ನು	ನಿನ್ನನ್ನಿ
೩೪	೭	ಹೆ	ಹೇ
೩೭	೧೯	ಅರ್ಜುನ	ಅರ್ಜುನ
೩೮	೨೩	ರ್ದಶ	ದರ್ಶ
೪೦	೨೨	ವರ್ಜ	ವರ್ಜ್
೪೩	೧೧	ಭಕ್ಯಾ	ಭಕ್ತ್ಯಾ
೪೩	೧೪	ಭುವಂ	ಭೀವಂ
೪೫	೫	ದ್ವೆಷಿ	ದ್ವೇಷಿ
೪೭	೭	ನನಗ	ನನಗೆ
೪೭	೭	ಗಾನಡೀವ	ಗಾಂಡೀವ
೪೭	೧೭	ದಱಾ	ದರಾ
೫೦	೧೫	ರ್ಥಾರ್ಥೆ	ರಾರ್ಥೇ
೫೩	೧೬	ಸಂತೊಂಪ	ಸಂತೋಷ
~~೫೪~~	~~೨೯~~	~~ಹೊಂಡಲಿ?~~	~~ಹೊಂದಲಿ~~
೫೪	೨೯	ಶ್ರಿ	ಶ್ರೀ
೫೬	೯	ವೀರೊಧ	ವಿರೋಧ
೫೭	೧೩	ಪ್ರಸಸ್ಥ	ಪ್ರಸ್ಥ
೫೯	೨೬	ಗೆದನಂ	ಗೆದ್ದನಂ
೬೧	ಶಿರೋನಾಮದಲ್ಲಿ	ತಾತ್ಪಯ	ತಾತ್ಪರ್ಯ
೬೨	೭	ದ್ವಿಗ್ವಿ	ದಿಗ್ವಿ
೬೩	೧೧	ಬೆರೆ	ಬೇರೆ
೬೬	೧೨	ಶ್ರೀ ಷ್ಣ	ಶ್ರೀಕೃಷ್ಣ
೬೭	೬	ವನಂಷ್ಯ	ಮಾನಂಷ್ಯ
೬೮	೨೦	ಪುತಿ	ಪ್ರತಿ
೬೯	೧೩	ಕಂತ್ತರಿಸಲ್ಪಟ್ಟ	ಕತ್ತರಿಸಲ್ಪಟ್ಟ
೭೧	೨೬	ಆಸೀವ	ಆಸೀನ
೭೩	೧೭	ಆಸ್ವಾದಿರಂ	ಆಸ್ವಾದಿಸಂ

ಪುಟ	ಸಾಲು	ಅಶುದ್ಧ	ಶುದ್ಧ
೭೪	೨೪	ಗೀತಂ	ಗತಂ
೭೪	೨೬	ವರಾಂಬರಾಂಬದೀನ್	ವರಾಂಬರಾದೀನ್
೭೪	೨೬	ನ್ಯತ್ಕತ್ಯ	ನ್ಯಕ್ಕತ್ಯ
೭೫	೩	ಸ್ಥಟಿಕರ್ಮಿತ	ಸ್ಫಟಿಕನಿರ್ಮಿತ
೭೫	೮	ನೇಲಕ್ಕೆ	ನೆಲಕ್ಕೆ
೭೫	೧೧	ನೀಜ	ನಿಜ
೭೫	೧೪	ಪರವಶ್ಮಾ	ಪರಮಾತ್ಮ
೮೦	೫	ಇಲ	ಇಲ್ಲ
೮೩	ಶರೋನಾವ:ದಲ್ಲಿ	ಭಾರತತ್ವರ್ಯ	ಭಾರತತಾತ್ಪರ್ಯ
೮೫	೩೦	ದೋಡ್ಡಪ್ಪ	ದೊಡ್ಡಪ್ಪ
೮೫	೨೨	ದ್ರೊಣಾಚಾರ್ಕ	ದ್ರೋಣಾಚಾರ್ಯ
೮೮	೨೦	ತಾಂಃ	ತಾಃ
೯೩	೩	ಭೀಮರ	ಭೀಮರಂ
೯೯	೨೧	ಮಾಡಂವೇನಂ	ಮಾಡಂವೆನು
೯೯	೨೮	ನನ	ನನ್ನ
೧೦೨	೨೧	ಅರ್ಧಮಂತೋ	ಅಧರ್ಮತೋ
೧೦೩	೨	ವಂರಂ	ಮೂರಂ
~~೧೦೪~~	~~೧~~	~~ತ್ವೇಕ~~	~~ತ್ವೇಕ~~
೧೦೬	೭	ಹೆಳಿದ	ಹೇಳಿವರಂ
೧೦೭	೨೧	ದಂತೇಯೋ	ದಂತೆಯೇ
೧೦೭	೨೧	ಹೆಂಳಿದರಂ	ಹೇಳಿದರಂ.
೧೦೮	೨೧	ವಾನ್ಸವಾನ್ಸವರ್ಮ	ವಾನ್ಸವರ್ಮ
೧೦೯	೧	ಪ್ರಯಂಯೌ	ಪ್ರಯಂಯಶೌ
೧೦೯	೨೩	ವಶಾಯಶಾ	ಮಂಯಶಾ
೧೦೯	೨೮	ಸೂತ್ತಲೂ	ಸುತ್ತಲೂ
೧೧೦	೨೫	ಕ್ರೂಧ	ಕ್ರೋಧ
೧೧೧	೬	ಹೊದರಂ	ಹೋದರಂ
೧೧೧	೧೪	ವಿದ್ಮತೆ	ವಿದ್ಮತೇ
೧೧೧	೧೬	ಜ್ಞಾನ	ಜ್ಞಾನಾ
೧೧೨	೧೬	ನಾಮೋಧೆಯೋ	ನಾಮಧೇಯೇ
೧೧೩	೨೯	ಸತಂಗ	ಸತ್ಸಂಗ

ಪುಟ	ಸಾಲು	ಅಶುದ್ಧ	ಶುದ್ಧ
೧೧೪	೨	ಶೀ	ಶ್ರೀ
೧೧೪	೨೫	ಆಂಬಿಕೇಯಂ	ಅಬಿಕೇಯಂ:
೧೧೪	೨೮	ಪಾಂಡ	ಪಾಂಡು
೧೧೭	ಶರೋನಾವಂದಲ್ಲಿ	೨೧	೨೨
೧೧೯	,,	೨೧	೨೨
೧೨೦	೧೯	ವಿರೊಧಿ	ವಿರೋಧಿ
೧೨೨	೨೨	ವಂಪ್ಪ	ದಂಪ್ಪ
೧೨೩	೧೧	ವೃಧ್ಯರ್ಥಂ	ವೃಧ್ಯರ್ಥಂ
೧೨೩	೨೨	ಪೂಣ್ಯ	ಪುಣ್ಯ
೧೨೪	೪	ಧರ್ಮಿ	ಧರ್ಮ
೧೨೫	೨೫	ಹೃವಿ	ಹೃದಿ
೧೨೮	೨೯	ಕಾಲೀವ	ಕಃಲೀನ
೧೨೮	೩೧	ವಂಂಚ್ಚಟ್ಟಿ	ವಂಂಚ್ಚಲ್ಪಟ್ಟಿ
೧೨೮	೩೬	ದ್ರೊಹ	ದ್ರೋಹ
೧೩೫	೧	ವ್ಯಥ್ಯ	ವ್ಯರ್ಥ
೧೩೮	೧೫	ಅನುವಂನಾತ್	ಅನುವಾನಾತ್
೧೪೦	೮	ಗಚ್ಛೇತ್	ಗಚ್ಛೇತ್
೧೪೫	೬	ಸಾವರ್ಥ	ಸವರ್ಥ
೧೪೫	೧೬	ಬಾ	ಬಾಹಂ
೧೪೯	೧೮	ವಂಕ್ತೋ	ವಂಂಕ್ತೋ
೧೪೯	೨೭	ಯೊಗ್ಯ	ಯೋಗ್ಯ
೧೫೦	೧೬	ವೂಜ್ಯ	ಪೂಜ್ಯ
೧೫೦	೨೬	ಧೀ	ಧೀ:
೧೫೨	೬	ಫಲಾಧಿಕ್ಯಂ	ಫಲಾದಿಕ್ಯಂ ಭವೇತ್
೧೫೨	೧೮	ನಿಷೆಧ	ನಿಷೇಧ
೧೫೩	೨೯	ಗತೆ	ಗತೇ
೧೫೩	೩೦	ವಂವರ್	ವಂವರ್
೧೫೩	೩೧	ವಂತ್ರ	ವಂತ್ರಂ
೧೫೪	೭	ಪಡಂಣ	ಪಡ್ಗಣ
೧೫೪	೧೭	ಗತೆ	ಗತೇ
೧೫೫	೯	॥೧೩೩॥	ಇತಿ ಉಕ್ತ:—ಎಂದೂ ಹೇಳಲ್ಪಟ್ಟನು ॥೧೩೩॥

ಪುಟ	ಸಾಲು	ಅಶುದ್ಧ	ಶುದ್ಧ
೧೫೬	೧೦	ಧೀಶಾಯಂ೦	ಧೀಶಾಯ೦
೧೫೬	೧೧	ವೂರ್ವಂ೦	ಪೂರ್ವಂ೦
೧೫೭	೨	ಸಂಜ್ಞಾ೦	ಸಂಜ್ಞಾ
೧೫೭	೬	ಅಸ್ತ್ರಂ೦	ಅಸ್ತ್ರಂ೦
೧೫೭	೨೦	ಫಲ್ಗುನಃ ತಂ೦	ಫಲ್ಗುನಃ ತು೦
೧೫೮	೧	ಸವಜ್ಞಾ	ಸರ್ವಜ್ಞ
೧೫೮	೩	ರಿ೦	ರಿಸಿ
೧೫೮	೨೪	ನಿರ್ಣಯಂ೦	ನಿರ್ಣಯ೦
೧೫೮	೨೮	ಮಂತ್ರಗಳಲ	ಮಂತ್ರಗಳಲ್ಲ
೧೫೯	೨೨	ವೂಜಿತಃ	ಪೂಜಿತಃ
೧೫೯	೨೬	ಪ	ಪ್ರ
೧೬೧	೨	ಕಳಿತಂ೦	ಕಂಳಿತಂ೦
೧೬೧	೫	ದಿನ್ಮ	ದಿವ್ಮ
೧೬೧	೨೫	ಜಾಲಾ	ಜ್ವಾಲಾ
೧೬೨	೭	ಸರ್ವಂ೦	ಸರ್ವ೦
೧೬೨	೧೬	ಪನ:	ಪುನಃ
೧೬೪	೨೪	ಸವಶಾಧಾಯಂ೦	ಸವಶಾಧಾಯ೦
೧೬೬	೧೧	ದಾತಾಅಸ್ಮಿ –	ಆಜೌ – ಯಂದ್ಧದಲ್ಲಿ, ದಾತಾ ಅಸ್ಮಿ
೧೬೬	೧೨	ಪೌಂಡ್ರ	ಪೌ೦ಡ್ರ
೧೬೯	೧೭	ದೈತ್ಯಾ	ದೈತ್ಯಾ
೧೮೦	೬	ಸಂರರ್ಶನ	ಸಂದರ್ಶನ
೧೮೧	೧	ಬಂದಿದನಂ೦	ಬಂದಿದ್ದನಂ೦
೧೮೪	೨೮	ವೀರಥೀ	ವಿರಥೀ
೧೮೫	೨	ಕ್ರೊಧ	ಕ್ರೋಧ
೧೮೭	೧೨	ನಿಂದ	ನಿಂದ
೧೮೯	೨೮	ಇನ್ಮೊದಂ	ಇನ್ಮೊಂದು
೧೯೧	೭	ಸ್ತಭ	ಸ್ತಂಭ
೧೯೧	೧೧	ಬ್ರಹ್ಮಹ್ಮ	ಬ್ರಹ್ಮ
೧೯೧	೧೩	ಬೀಣ:	ಬಾಣ:
೧೯೨	೬	ಸ್ಕದಂ	ಸ್ಕಂದಂ
೧೯೩	೩	ಮೊಕ್ಷ	ಮೋಕ್ಷ

ಪುಟ	ಸಾಲು	ಅಶುದ್ಧ	ಶುದ್ಧ
೧೯೯	೩	ತದ್ಮಾ	ತಮ್ಮಾ
೨೧೧	೨೭	ಕಂರ್ಮನ್	ಕರ್ಮನ್
೨೦೪	೭	ಅಮೃತಾಂಬಃ	ಅಮೃತಾಂಭಃ
೨೧೩	೧೧	ಅಂಧಂತಮಃ	ಅಂಧಂತಪಃ
೨೧೪	೨೬	ಯಾವಶ್ಯಾಶ್ರೀತೇಪಂ	ಯಾವಶ್ಯಾಶ್ರಿತೇಪಂ
೨೧೫	೧	''	''
೨೧೫	೧೬	ದೃಷ್ಟಿಬಿಳಿವವರ	ದೃಷ್ಟಿಗೆಬೀಳ್ವವರ
೨೧೫	೧೮	ಬಿಳಲಂ	ಬೀಳಲಂ
೨೧೫	೨೫	ಚ್ಛಿಚ್ಯಾ	ಚ್ಛಿಚ್ಯಾ
೨೧೬	೧೧	ಸ್ಮತಿ	ಸ್ಮೃತಿ
೨೨೨	೧೬	ಯಃ	ಯತಃ
೨೨೩	೧೦	ಇಚ್ಛಿಸುವವರಾದರೂ	ಇಚ್ಛಿಸಿದಂತೆ ತೋರಿಸಿದವರಾದರೂ
೨೨೬	೨೫	ತತೋಽಹೋಭೀಃ	ತತೋಽಹೋಭಿಃ
೨೨೭	೧೩	ದ್ರೌಪದೀದೇವಿಯಂ	ದ್ರೌಪದೀದೇವಿಯಂ
೨೨೮	೨೧	ಸತ್ಯಭಾವ	ಸತ್ಯಭಾಮಾ
೨೨೯	೨೮	ಪುತಾಃ	ಪುತ್ರಾಃ
೨೩೬	೨	ಧಾಂಯಂತಃ	ಧಾರಯಂತಃ
೨೩೬	೧೬	ಒಪಾನ	ಜಘಾನ
೨೩೬	೨೦	ಧಾರ್ತರಾಷ್ಟ್ರಶ್ಯ	ಧಾರ್ತರಾಷ್ಟ್ರಸ್ಯ
೨೩೬	೨೯	ಚೇನ್ಮಾಗಿ	ಚೆನ್ಮಾಗಿ
೨೩೭	೪	ಪುತ್ಯಕ್ಷೀ	ಪ್ರತ್ಯಕ್ಷೀ
೨೩೯	೧೫	ಹಿಂದಿನಶ್ಲೋಕಕ್ಕೆ ಅನ್ವಯ	ಹಿಡಿಕೊಳ್ಳಬೇಕು
೨೪೩	೧೧	ಪಾರ್ವತೀದೇವಿಯಿಂದ	ಪಾರ್ವತೀದೇವಿಯಿಂದ
೨೪೫	೫	ದುರ್ಯೋಧನನನ್ನು	ದುರ್ಯೋಧನನು
೨೪೫	೨೬	ದೃಪ್ಟಪ	ದೃಪ್ಟಪ
೨೫೦	೨೩	ಕೃಷ್ಣಯಾ	ಕೃಷ್ಣಯಾ